ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ

ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ

★

ಚತುರ್ಥ ಸಂಪುಟ (ವ-ಹೋ)

4

K091.OK
MPVS
V.4

ಪ್ರಾಚ್ಯವಿದ್ಯಾ ಸಂಶೋಧನಾಲಯ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
ಗ್ರಂಥ ಭಂಡಾರ
ಕ್ರಮ ಸಂಖ್ಯೆ 1619
ವಿಗ
ವಿಗ ಸಂಖ್ಯೆ
ಬಂದ ತಾ
ಬೆಲೆ 5-50

A Descriptive Catalogue of
KANNADA MANUSCRIPTS

In the

Oriental Research Institute, Mysore

Vol. IV (Va–Hō)

General Editor:

H. DEVEERAPPA, M.A.

Director

Editor :

B. S. SANNAIAH, M.A.

Assistant Director

Assisted by :

HE RESEARCH ASSISTANTS

ORIENTAL RESEARCH INSTITUTE

UNIVERSITY OF MYSORE : : MYSORE

Published by
ORIENTAL RESEARCH INSTITUTE, MYSORE
1963

All Rights Reserved

Price : Rs. 5-50

PRINTED AT
SREE SHARADA PRESS, MYSORE

ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ

ಕನ್ನಡ ಹಸ್ತಪ್ರತಿಗಳ

ವರ್ಣನಾತ್ಮಕ ಸೂಚೀ

ಚತುರ್ಥ ಸಂಪುಟ (ವ-ಹೋ)

ಪ್ರಧಾನ ಸಂಪಾದಕರು :

ಹೆಚ್. ದೇವೀರಪ್ಪ, ಎಂ. ಎ.

ಡೈರೆಕ್ಟರ್

ಪ್ರಾಚ್ಯವಿದ್ಯಾ ಸಂಶೋಧನಾಲಯ

ಮೈಸೂರು ವಿಶ್ವವಿದ್ಯಾನಿಲಯ : : ಮೈಸೂರು

ಪ್ರಥಮ ಮುದ್ರಣ: ಜುಲೈ ೧೯೬೩

೧೦೦೦ ಪ್ರತಿಗಳು

ಎಲ್ಲ ಹಕ್ಕುಗಳನ್ನು ಕಾದಿರಿಸಿದೆ

K091.016
MPV.5
V.4 eg 2626

ಬೆಲೆ ರೂ. ೫-೫೦

ಮುದ್ರಕರು :
ಶ್ರೀ ಶಾರದಾ ಪ್ರೆಸ್, ಮೈಸೂರು

ಪೀಠಿಕೆ

ಮುದ್ರಣ ಸೌಕರ್ಯವಿಲ್ಲದಿದ್ದ ಕಾಲದಲ್ಲಿ ಜನರು ತಮಗೆ ಬೇಕಾದ ವಿಷಯಗಳನ್ನೂ ಗ್ರಂಥಗಳನ್ನೂ ಓಲೆಗರಿಗಳ ಮೇಲೂ ಕಾಗದವು ಬಳಕೆಗೆ ಬಂದಮೇಲೆ ಕಾಗದದ ಮೇಲೂ ಬರೆದು ಇಟ್ಟುಕೊಳ್ಳುತ್ತಿದ್ದರು. ಪ್ರಾಚೀನ ಗ್ರಂಥಗಳನ್ನು ತಾವು ಓದುವುದಕ್ಕಾಗಿ ಲಿಪಿಕಾರರಿಂದ ಪ್ರತಿಮಾಡಿಸಿ ಇಟ್ಟುಕೊಳ್ಳುತ್ತಿದ್ದುದೂ ಉಂಟು. ಇದರಿಂದಲೇ ಇಂದು ಒಂದೇ ಕೃತಿಯ ಹಲವಾರು ಕೈಬರಹದ ಪ್ರತಿಗಳು ನಮಗೆ ದೇಶದ ಬೇರೆ ಬೇರೆ ಮೂಲೆಗಳಲ್ಲಿ ದೊರೆಯುತ್ತಿವೆ. ಹೀಗೆ ದೇಶದಾದ್ಯಂತ ಇರುವ ಈ ವಿಧವಾದ ಹಸ್ತಲಿಖಿತ ಗ್ರಂಥಗಳಲ್ಲಿ ಮುಖ್ಯವಾದುವನ್ನು ಸಂಗ್ರಹಿಸಿ ನಮ್ಮ ಸಂಸ್ಥೆಯ ಗ್ರಂಥಾಲಯದಲ್ಲಿಟ್ಟಿದೆ. ಅವುಗಳಲ್ಲಿ ಕನ್ನಡ ಗ್ರಂಥಗಳ ಸ್ವರೂಪವನ್ನು ಈ ವರ್ಣನಾತ್ಮಕ ಸೂಚಿಯು ವಿವರವಾಗಿ ತಿಳಿಯಪಡಿಸುತ್ತದೆ. ಪ್ರತ್ಯಕ್ಷವಾಗಿ ಪುಸ್ತಕಗಳನ್ನು ನೋಡದೆಯೇ ಅವುಗಳ ಸ್ಥೂಲಪರಿಚಯವನ್ನು ಈ ವರ್ಣನಾತ್ಮಕ ಸೂಚಿಯು ಮಾಡಿಕೊಡುತ್ತದೆ

ಈ ವಿಧವಾದ ವರ್ಣನಾತ್ಮಕ ಸೂಚಿಯು ಕನ್ನಡ ವಿದ್ವಾಂಸರಿಗೆ ಅನೇಕ ದೃಷ್ಟಿಯಿಂದ ಉಪಯುಕ್ತವೆಂಬುದನ್ನು ಮನಗಂಡು ಸಂಸ್ಥೆಯು ಕ್ರಿ. ಶ. ೧೯೫೮ ರ ವರೆಗೆ ಸಂಗ್ರಹಿಸಿರುವ ಕೈಬರಹದ ಕನ್ನಡ ಗ್ರಂಥಗಳ ವರ್ಣನಾತ್ಮಕ ಸೂಚಿಯನ್ನು ಅತ್ಯಲ್ಪ ಕಾಲದಲ್ಲಿ ಸಿದ್ಧಪಡಿಸಿ ನಾಲ್ಕು ಸಂಪುಟಗಳನ್ನು ಪ್ರಕಟಿಸಲಾಗಿದೆ. ಈ ನಾಲ್ಕು ಸಂಪುಟಗಳಲ್ಲಿ ಇದು ನಾಲ್ಕನೆಯದು. ಇದರಲ್ಲಿ 'ವ' ಕಾರದಿಂದ 'ಹೋ' ಪೂರ್ತಿ ಒಟ್ಟು ೫೪೮ (೧೫೧೬–೨೦೬೩) ಕೃತಿಗಳ ವಿವರಣೆಯನ್ನು ಕೊಟ್ಟಿದೆ.

ಮೊದಲು ಆಂಗ್ಲ ಸಂಖ್ಯೆಯಲ್ಲಿ ಕೊಟ್ಟಿರುವುದು ಗ್ರಂಥಗಳ ಕ್ರಮಾಂಕ. ಇದಾದ ಬಳಿಕ ಗ್ರಂಥದ ಸಾಂಕೇತಿಕಾಂಕವನ್ನು ಕನ್ನಡ ಅಂಕಿಗಳಲ್ಲಿ ಕೊಟ್ಟಿದೆ. ಈ ಸಾಂಕೇತಿಕಾಂಕದ ಹಿಂದೆ 'ಕೆ' ಎಂದು ಮಾತ್ರ ಇದ್ದರೆ ಅದು ಓಲೆಯ ಪ್ರತಿಯೆಂದೂ, 'ಕೆ.ಎ' ಎಂದಿದ್ದರೆ ದೊಡ್ಡ ಅಳತೆಯ ಕಾಗದದ ಪ್ರತಿಯೆಂದೂ, 'ಕೆ. ಬಿ' ಎಂದಿದ್ದರೆ ಚಿಕ್ಕ ಅಳತೆಯ ಕಾಗದದ ಪ್ರತಿಯೆಂದೂ ಸೂಚನೆ. ಒಂದೇ ಪುಸ್ತಕದಲ್ಲಿ ಹೆಚ್ಚು ಗ್ರಂಥಗಳಿದ್ದಾಗ ಆ ಗ್ರಂಥವು ಆ ಕಟ್ಟಿನಲ್ಲಿ ಎಷ್ಟನೆಯದು ಎನ್ನುವುದನ್ನು ತಿಳಿಯುವುದಕ್ಕಾಗಿ ಸಾಂಕೇತಿಕಾಂಕದ ಮುಂದೆ ಒಂದು ಗೀಟನ್ನು ಹಾಕಿ ಅದರ ಮುಂದೆ ಗ್ರಂಥದ ಸಂಖ್ಯೆಯನ್ನು ಕೊಟ್ಟಿದೆ. ಅದೇ ಸಾಲಿನ ಮಧ್ಯದಲ್ಲಿ ದೊಡ್ಡ ಅಕ್ಷರಗಳಲ್ಲಿರುವುದು ಗ್ರಂಥದ ಹೆಸರು. ಕೊನೆಯಲ್ಲಿರುವುದು ಗದ್ಯ, ಪದ್ಯ, ವಚನ, ಷಟ್ಪದಿ ಮೊದಲಾದ ಗ್ರಂಥಪ್ರಭೇದ. ಎರಡನೆಯ ಸಾಲಿನ ಆರಂಭದಲ್ಲಿ ಪುಸ್ತಕದ ಅಳತೆಯನ್ನು ಅಂಗುಲಗಳಲ್ಲಿ ಕೊಟ್ಟಿದೆ. ಅಂಗುಲದ ವಿಭಾಗವನ್ನು ದಶಮಾಂಶದಿಂದ ಸೂಚಿಸಿದೆ. ಈ ಅಳತೆಯ ಅಂಕಿಗಳಲ್ಲಿ ಮೊದಲನೆಯದು ಉದ್ದ, ಎರಡನೆಯದು ಅಗಲ. ಇವೆರಡರ ಮಧ್ಯೆ ವಿಭಾಗಕ್ಕಾಗಿ '×' ಚಿಹ್ನೆಯನ್ನು ಉಪಯೋಗಿಸಿದೆ. ಗ್ರಂಥದ ಹೆಸರಿನ

ಕೆಳಗೆ ಕವಿಯು ತಿಳಿದಿದ್ದರೆ ಆತನ ಹೆಸರನ್ನೂ ಅದೇ ಸಾಲಿನ ಕೊನೆಯಲ್ಲಿ ಕವಿಯ ಕಾಲವನ್ನೂ ಈ ಎರಡೂ ತಿಳಿಯದಿದ್ದಾಗ ಆ ಸ್ಥಳಗಳಲ್ಲಿ ಪ್ರಶ್ನಚಿಹ್ನೆ (?) ಯನ್ನೂ ಕೊಟ್ಟಿದೆ. ಕವಿ ಮತ್ತು ಕಾಲವಿಚಾರಗಳಿಗೆ ಬಹುಮಟ್ಟಿಗೆ ಕರ್ಣಾಟಕ ಕವಿಚರಿತೆಯನ್ನು ಅವಲಂಬಿಸಿದೆ.

ಮೂರನೆಯ ಸಾಲಿನ ಆರಂಭದಲ್ಲಿ ಗ್ರಂಥ ಪ್ರಾರಂಭವಾಗುವ ಮತ್ತು ಮುಗಿಯುವ ಪತ್ರ ಸಂಖ್ಯೆಗಳನ್ನು ಹೇಳಿದೆ. ಪತ್ರಗಳಿಗೆ ಕ್ರಮಾಂಕವನ್ನು ಬರೆಯದಿರುವ ಪುಸ್ತಕಗಳಲ್ಲಿ ಒಟ್ಟು ಎಷ್ಟು ಪತ್ರಗಳಿವೆ ಎನ್ನುವುದನ್ನು ಲೆಕ್ಕಮಾಡಿ ಕೊಟ್ಟಿದೆ. ಕೆಲವು ಕಡೆಗಳಲ್ಲಿ ಪುಟಸಂಖ್ಯೆಯನ್ನು ಕೊಟ್ಟಿದೆ. ಪತ್ರ ಎಂದಿರುವ ಕಡೆ ಎರಡು ಪಾರ್ಶ್ವಗಳೂ ಸೇರಿ ಒಂದು ಎಂದೂ, ಪುಟ ಎಂದರೆ ಪ್ರತಿಪಾರ್ಶ್ವಕ್ಕೂ ಬೇರೆ ಬೇರೆ ಕ್ರಮಾಂಕ ಕೊಟ್ಟಿದೆ ಎಂದೂ ತಿಳಿಯಬೇಕು. ಒಂದೇ ಪಾರ್ಶ್ವದಲ್ಲಿ ಬರೆದಿರುವ ಕಡೆಗಳಲ್ಲೆಲ್ಲಾ ವಿಶೇಷ ವಿಭಾಗದಲ್ಲಿ, ಪತ್ರಗಳ ಒಂದೇ ಪಾರ್ಶ್ವದಲ್ಲಿ ಬರವಣಿಗೆ ಇದೆ ಎಂದು ತಿಳಿಸಿದೆ. ಇದೇ ಸಾಲಿನ ಮಧ್ಯದಲ್ಲಿ ಪ್ರತಿ ಪತ್ರದ ಒಂದೊಂದು ಪಾರ್ಶ್ವದಲ್ಲೂ ಇರುವ ಸಾಲಿನ ಸಂಖ್ಯೆಗಳನ್ನೂ, ಕೊನೆಯಲ್ಲಿ ಪ್ರತಿಸಾಲಿನಲ್ಲೂ ಇರುವ ಅಕ್ಷರ ಸಂಖ್ಯೆಗಳನ್ನೂ ಸರಾಸರಿ ಮಾನದಿಂದ ಕೊಟ್ಟಿದೆ. ಬಳಿಕ ಗ್ರಂಥದ ಆದಿಭಾಗವನ್ನು '**ಆದಿ :**' ಎನ್ನುವುದರ ಮುಂದೆಯೂ ಅಂತ್ಯಭಾಗವನ್ನು '**ಅಂತ್ಯ :**' ಎನ್ನುವುದರ ಮುಂದೆಯೂ ಕೊಟ್ಟಿದೆ. ಈ ಆದ್ಯಂತ ಗ್ರಂಥ ಭಾಗಗಳ ಕೆಲವು ಕಡೆಗಳಲ್ಲಿ .... ಈ ಗುರುತಿನ ಕಡೆ ಗ್ರಂಥ ತ್ರುಟಿತವಾಗಿದೆಯೆಂದೂ × × × × ಹೀಗಿರುವ ಕಡೆ ಪುಸ್ತಕದಲ್ಲಿ ಆ ಭಾಗದ ಗ್ರಂಥವಿದ್ದರೂ ಆ ಭಾಗವನ್ನು ಬಿಟ್ಟು ಮುಂದುವರಿಸಿದೆ ಎಂದೂ ತಿಳಿದುಕೊಳ್ಳಬೇಕು. ಆದಿ ಅಂತ್ಯಗಳಾದ ಬಳಿಕ ಇರುವ, '**ವಿಷಯ**' ಎಂಬ ವಿಭಾಗದಲ್ಲಿ ಪ್ರತಿಪಾದ್ಯ ವಿಷಯವನ್ನು ಒಂದೊಂದು ವಾಕ್ಯದಲ್ಲಿ ಸೂಚಿಸಲಾಗಿದೆ.

ಆ ಬಳಿಕ ಇರುವ '**ವಿಶೇಷ**' ಎಂಬ ವಿಭಾಗದಲ್ಲಿ ಆ ಪುಸ್ತಕಕ್ಕೆ ಸಂಬಂಧಪಟ್ಟಂತೆ ಲಿಪಿ, ಪುಸ್ತಕದ ಸ್ಥಿತಿ, ಶಕಟರೇಫದ ಬಳಕೆ, ಅಸಮಗ್ರ ಮತ್ತು ಲುಪ್ತ ಪತ್ರಗಳ ವಿವರಣೆ, ಅದೇ ಪುಸ್ತಕದಲ್ಲಿ ಇರುವ ಇತರ ಗ್ರಂಥಗಳ ಸಂಖ್ಯೆ ಇವುಗಳ ವಿವರವನ್ನು ಸಂಗ್ರಹವಾಗಿ ಕೊಟ್ಟಿದೆ. ಕೆಲವು ಕನ್ನಡ ಪುಸ್ತಕಗಳೊಡನೆ ಇರುವ ಸಂಸ್ಕೃತ ಮತ್ತು ತೆಲುಗು ಭಾಷೆಯ ಗ್ರಂಥಗಳನ್ನು ಪ್ರತ್ಯೇಕವಾಗಿ ಪಟ್ಟಿಮಾಡಿ ಈ ಸಂಪುಟದ ಪರಿಶಿಷ್ಟದಲ್ಲಿ ಕೊಟ್ಟಿದೆ.

ಪ್ರತಿಗ್ರಂಥದ ವರ್ಣನೆಯೂ 'ಕ್ರಮಾಂಕ' ಮೊದಲಾಗಿ 'ವಿಶೇಷ' ಕಡೆಯಾಗಿ ಹದಿನಾಲ್ಕು ವಿಭಾಗಗಳನ್ನೊಳಗೊಂಡಿದೆ.

ಸೂಚಿಯಲ್ಲಿ ಎತ್ತಿಕೊಟ್ಟಿರುವ ಭಾಗಗಳು ಪಾಠದೃಷ್ಟಿಯಲ್ಲಿ ಮೂಲಪ್ರತಿಯನ್ನೆ ಸಂಪೂರ್ಣವಾಗಿ ಹೋಲುತ್ತಿವೆ. ಆದರೆ ಪದ್ಯಭಾಗವನ್ನು ಆಯಾ ಛಂದಸ್ಸಿಗನು

ಗುಣವಾಗಿ ವಿಭಾಗಮಾಡಿ ಗೀಟುಗಳಿದ್ದರೆ ಅವನ್ನು ತೆಗೆದುಹಾಕಿದೆ. ಓದುಗರಿಗೆ ಸೌಲಭ್ಯವಾಗಲೆಂದು ಅಗತ್ಯವಿದ್ದ ಕಡೆಗಳಲ್ಲಿ ಆಧುನಿಕ ಚಿಹ್ನೆಗಳನ್ನು ಹಾಕಲಾಗಿದೆ. ಲಿಪಿಕಾರರು ಆದ್ಯಂತಗಳಲ್ಲಿ ಅನೇಕ ಇಷ್ಟದೇವತೆಗಳ ಹೆಸರುಗಳನ್ನು ಬರೆದಿದ್ದರೆ, ಮೊದಲನೆಯದನ್ನು ಮಾತ್ರ ಕೊಟ್ಟು ಉಳಿದವುಗಳನ್ನು ಬಹುಶಃ ಬಿಡಲಾಗಿದೆ. 'ಶ್ರೀ' ಕಾರದ ವಿಷಯದಲ್ಲಿಯೂ ಅಷ್ಟೆ, ಒಂದನ್ನೊ ಎರಡನ್ನೊ ಉದ್ಧರಿಸಿ ಉಳಿದ್ದ ವನ್ನು ಬಿಟ್ಟಿದೆ. ಅನೇಕ ಪ್ರತಿಕಾರರು ಗ್ರಂಥಾಂತ್ಯದಲ್ಲಿ, ತಪ್ಪಂ ಬರೆದಂ ಕಡುಜಡ। ನಪ್ಪಂ ಬರೆದಾತನೆಂದು ಬಯ್ಯಲು ಬೇಡಾ॥ ತಪ್ಪಕ್ಕು ಶುದ್ಧಮಕ್ಕು। ತಪ್ಪುಳ್ಳರೆ ತಿದ್ದಿಕೊಳ್ಳುವುದುತ್ತಮ ಪುರುಷರ್—ಎಂದಿರುವುದುಂಟು. ಇದನ್ನು ಗ್ರಂಥಸೂಚಿ ಯಲ್ಲಿ ಸೇರಿಸಿಲ್ಲ. ಹಸ್ತಪ್ರತಿಗಳ ಸ್ವರೂಪವು ಗೊತ್ತಾಗಲೆಂದು ಅದರಲ್ಲಿರುವ ತಪ್ಪು ಗಳನ್ನು ತಿದ್ದದೆ ಅವುಗಳಲ್ಲಿರುವಂತೆ ತಪ್ಪಾಗಿಯೇ ಕೊಟ್ಟಿದೆ. ಸಂಶೋಧಕರು ಇಂತಹ ಅಶುದ್ಧವೂ ಅಸಾಧುವೂ ಅದ ಬರವಣಿಗೆಯಿಂದ ಕೂಡಿದ ಹಸ್ತಪ್ರತಿಗಳ ಆಧಾರದ ಮೇಲೆ ಸರಿಯಾದ ಪಾಠವನ್ನು ಕಂಡುಹಿಡಿದು ಮೂಲಪ್ರತಿಯನ್ನು ಪುನರ್ನಿರ್ಮಿಸಿ ಸಂಪ್ರತಿಸಿ ಪ್ರಕಟಿಸುವಲ್ಲಿ ಎಷ್ಟು ಶ್ರಮ ವಹಿಸಬೇಕಾಗುತ್ತದೆ ಎಂಬುದನ್ನು ನಿಷ್ಪಕ್ಷಪಾತಿಗಳೂ ಗುಣಗ್ರಾಹಿಗಳೂ ಆದ ವಿದ್ವಜ್ಜನರು ಊಹಿಸಕೊಳ್ಳ ಬಲ್ಲರು.

ಈಗ ದೊರೆಯುತ್ತಿರುವ ಪ್ರಾಚೀನ ಗ್ರಂಥಗಳ ಹಸ್ತಪ್ರತಿಗಳು ಲಿಪಿಕಾರರಿಂದ ಪ್ರತಿಮಾಡಲ್ಪಟ್ಟವು. ಕವಿಯ ಸ್ವಹಸ್ತಾಕ್ಷರ ಪ್ರತಿಗಳಲ್ಲ. ಕವಿ ಗ್ರಂಥವನು ಸೃಷ್ಟಿಸಿದವ ಮಾತ್ರ, ಆತ ಒಬ್ಬನೇ. ಆದರೆ ಆ ಗ್ರಂಥಭಂಡಾರದ ರಕ್ಷಣೆಯ ಭಾರವನ್ನು ಬಹುಮಂದಿ ಲಿಪಿಕಾರರು ಹೊತ್ತಿದ್ದಾರೆ. ಗ್ರಂಥಕ್ಕೆ ಮರುಜೀವಣಿ ಎರೆಯುವವರು ಅವರು. ಒಂದು ಗ್ರಂಥದ ಹಲವಾರು ಪ್ರತಿಗಳನ್ನು ಬೇರೆ ಬೇರೆ ಲಿಪಿ ಕಾರರು ಬರೆದಿರುವುದರಿಂದಲೇ ಈಗಲೂ ಪ್ರಾಚೀನ ಗ್ರಂಥಗಳು ಜೀವಂತವಾಗಿವೆ.

ಅನೇಕ ಪ್ರತಿಗಳನ್ನು ಬರೆಯುವುದರ ಮೂಲಕ ಈ ಪ್ರತಿಕಾರರು ಪ್ರಾಚೀನ ಸಾಹಿತ್ಯದ ಒಂದು ಬೃಹದ್ರತ್ನಾಕರವನ್ನೇ ರಚಿಸಿದ್ದಾರೆ. ಇದಕ್ಕಾಗಿ ಪ್ರತಿಯೊಬ್ಬ ಸಾಹಿತ್ಯಾಭಿಮಾನಿಯೂ ಈ ಲಿಪಿಕಾರರನ್ನು ಅಭಿನಂದಿಸಬೇಕು.

ತಾನು ಬರೆದ ಬರವಣಿಗೆಯಲ್ಲಿ ತಪ್ಪು ಕಂಡುಬಂದರೆ ಅದನ್ನು ಸರಿಪಡಿಸಿಕೊಳ್ಳಿ ಎಂದು ಗ್ರಂಥಾಂತ್ಯದಲ್ಲಿ ಓದುಗರನ್ನು ಪ್ರಾರ್ಥಿಸದ ಲಿಪಿಕಾರನಿಲ್ಲ. ಇದು ಆತನ ವಿನಯವನ್ನು ಸೂಚಿಸುತ್ತದೆ. ಗ್ರಂಥಾರಂಭಕ್ಕೆ ಮೊದಲು ಪ್ರತಿಯೊಬ್ಬ ಲಿಪಿಕಾರನೂ ತನ್ನ ಇಷ್ಟದೈವ ಮತ್ತು ಗುರುಗಳನ್ನು ಸ್ತುತಿಸಿ ಬಳಿಕ ಗ್ರಂಥವನ್ನು ಬರೆಯಲು ಪ್ರಾರಂಭಿಸುತ್ತಾನೆ. (ಈ ವರ್ಣನಾತ್ಮಕ ಸೂಚಿಯಲ್ಲಿ ಅತ್ಯಧಿಕವಾಗಿ ಸ್ತುತಿಗಳು ಇರುವೆಡೆಗಳಲ್ಲಿ ಅವುಗಳನ್ನು ಬಿಟ್ಟು ಗ್ರಂಥವನ್ನು ಮುಂದುವರಿಸಿದೆ.) ಕೆಲವರು ತಾವು ಬರೆಯಲು ಪ್ರಾರಂಭಿಸಿದ ಮತ್ತು ಪ್ರತಿಮಾಡಿ ಮುಗಿಸಿದ ಕಾಲವಿವರವನ್ನು ಬರೆದಿದ್ದಾರೆ.

ವೀರಮಾಹೇಶ್ವರಾಚಾರ ಸಂಗ್ರಹವನ್ನು ಬರೆದ ಒಬ್ಬ ಲಿಪಿಕಾರನು ತಾನು ತಾಳೇಗರಿಯನ್ನು ಸಂಗ್ರಹಿಸಿ ಅದರಲ್ಲಿ ಬರವಣಿಗೆಯನ್ನು ಪೂರ್ತಿಮಾಡಿರುವವರೆಗಿನ ವಿವರವನ್ನು ಗ್ರಂಥಾಂತ್ಯದಲ್ಲಿ ಕೊಟ್ಟಿರುತ್ತಾನೆ. ಅದರ ಒಕ್ಕಣೆ ಈ ರೀತಿ ಇದೆ:—

"ಪಡುವಣ ದೆಸೆಯಿಂದೊಪ್ಪುತಿರ್ದ ಲವಣಾಂಬುಧಿಗೆ ಪುಟ್ಟಿದ ಹಾಂಗಿರ್ದ ಘಟ್ಟದ ಸರೋವರಂಗಳಲ್ಲೇಕಪಾದಚರ ಕೆದಱದ ಮುಂಡೆ ಮೌನವ್ರತ ದಿಂದೊಪ್ಪುತ್ತಿರ್ದ ದಿವ್ಯತಾಳಪತ್ರಮಂ ತಂದು ದ್ವಿತೀಯ ರಂಧ್ರವಂ ಮಾಡಿ ಬಿಂಗದ ಹೊರೆಯಂತೊಂದೊಂದಂ ಪೊಂದಿಸಿಕ್ಕೆಲದಲುಭಯಂ ಪಲಗೆಯಷ್ಟಲೋವೆಯಷ್ಟ ಮ ಲಿಗಳಿಂದತ್ಯಂತಲಂಕಾರವಾಗಿ ಕಣ್ಗೆ ಚೆಲ್ವಾಗೊಪ್ಪಲ್ಪಟ್ಟ ದಿವ್ಯ ಶಿವಾಲಯವಂ ನಿರ್ಮಿಸಿದಿಂತಿರಱಾರದೆಂದು ಬಿಂದು ವಿಸರ್ಗಂ ದಡ್ಡತೆ ಪೊಂದಿದಾವೃತೋರ್ಧ್ವರೇಫೆ ದೀರ್ಘ ಹ್ರಸ್ವದಿಂದೊಪ್ಪುತ್ತಿರ್ದ್ದ ಅಕ್ಷರಮೂರ್ತಿಗಳಂ ಲೇಖನವಂ ಮಾಡೆಂದು ಚಿಕ್ಕೈಯ್ಯನವರು ದಿವ್ಯ ಆಲೇಖಮಂ ಷಟ್ಸ್ಥಲಜ್ಞಾನ ಸಂಪನ್ನರಾದ ವಿರಕ್ತ ಅನ್ನ ದಾನ ದೇವರ ಹಸ್ತದಲ್ಲಿ ಪಾಲಿಸಲು ಯಿಂತೀ ಶಿವಂಗಣಂಗಳ ನಿರೂಪವಂ ಕೈಗೊಂಡು ಬರವುದಕ್ಕೆ ಯನ್ನ ಕಂಗಳು ಜಿಹ್ವೆ ಕರ ಕರ್ನಂಗಳು ಗತಿ ಮತಿ ಚೈತನ್ಯಕ್ಕೆ ಸಮಸ್ತ ಸದ್ಭಕ್ತ ವೀರಮಾಹೇಶ್ವರರುಗಳೇ ಕರ್ತ್ತರಾದ ಕಾರಣ ಯಿಂತಿವರ ಕರುಣ ಪ್ರಸಾದಮಂ ಕೈಕೊಂಡು ಈ ವೀರಮಾಹೇಶ್ವರಾಚಾರ ಸಂಗ್ರಹವ ಬರದೆನಲ್ಲದೆ ನನ್ನಿಚ್ಛೆಯೊಳಂ ನಾ ಬರದುದಿಲ್ಲ.

ಯಾದೃಶಂ ಪುಸ್ತಕಂ ದೃಷ್ಟ್ವಾ ತಾದೃಶಂ ಲಿಖಿತಂ ಮಯಾ |
ಅಬದ್ಧೋ ವಾ ಸುಬದ್ಧೋ ವಾ ಮಮ ದೋಷೋ ನ ವಿದ್ಯತೇ ||

ಇಂತೆಂದುದಾಗಿ ಈ ಪುಸ್ತಕವಂ ಬರದ ಸ್ಥಿತಿಯಂತೆಂದಡೆ—ಸ್ವಸ್ತಿಶ್ರೀ ಜಯಾಭ್ಯುದಯ ವಿಧಿಷ್ಟ ಶಕ ವಿಕ್ರಮ ಶಕಯೊ ದ್ವಿತೀಯಶಕ ಸಂದದು ೪೦೦೦ ವರುಷ | ಶಾಲಿವಾಹನಶಕ ಸಂದದು ೧೫೪೩ ವರುಷ ಸಂದು ವರ್ತಮಾನವಾದ ಶಾರ್ವರಿ ಸಂವತ್ಸರದ ಚೈತ್ರಮಾಸದ ಶುಕ್ಲಪಕ್ಷದ ರೇವತಿ ನಕ್ಷತ್ರದ ಶುದ್ಧ ದಶಮಿ ಶಶಿವಾರದಲ್ಲು ಬರದ ವಿರಕ್ತ ಅನ್ನದಾನದೇವರು ಆಚಾರ್ಯ ಚಿಕ್ಕೈಯದೇವಗೆ ನೀಲಕಂಠನಾಗನಾಥಾಚಾರ್ಯರು ವಿರಚಿಸಿದಂಥಾ ವೀರಮಾಹೇಶ್ವರಾಚಾರ ಸಂಗ್ರಹವೆಂಬ ಬಾಹುಲ್ಯವಾದ ವ್ಯಾಖ್ಯಾನಶಾಸ್ತ್ರವ ಬರದು ಸಂಪೂರ್ನವಾಯಿತ್ತು | ಯಿಂತೀ ಪುಸ್ತಕಕ್ಕೈಶ್ವರ್ಯಮಸ್ತು ಶುಭಮಸ್ತು ನಿರ್ವಿಘ್ನಮಸ್ತು ಅಜೀರ್ಣಮಸ್ತು | ಆಯುರಾರೋಗ್ಯಮಸ್ತು ಚಂದ್ರಾರ್ಕ ತಾರಾ ನಭವುಳ್ಳನಕಂ ಸ್ಥಾಯಿಯಸ್ತು ||

ಭಗ್ನಪೃಷ್ಠಕಟಿಗ್ರೀವ ಬದ್ಧದೃಷ್ಟಿರಧೋಮುಖಂ | ಕಷ್ಟೇನ ಲಿಖಿತಂ ಶಾಸ್ತ್ರಂ ಯತ್ನೇನ ಪರಿಪಾಲಯ || ಇಂತೆಂದುದಾಗಿ ಈ ಪುಸ್ತಕವಂ ಬರವರ್ಗಂ ಓದುವರ್ಗಂ ಶಿವಾನುಭಾವವಂ ನಿರೂಪಿಸುವರ್ಗಂ ಲಾಲಿಸುವರ್ಗಂ ಸಹಸ್ರಕೋಟಿನಮಸ್ಕಾರವಂ ಮಾಡುತ್ತಿದೇನೆ. ಎನ್ನ ಬಿಂನಪವನವಧರಿಸಿ ಯಿದಂ ಬರದ ನಿಂಮ ಕರುಣದ ಕಂದ

ನಿಗೆ ನಿಮ್ಮ ಕೃಪಾಮೃತರಸವನೆಱದು ನೋಡಿ ಸಲಹಿ ನಿಮ್ಮ ಶ್ರೀಪಾದ ಪದ್ಮಾರಾಧನೆಯ ಯೆಂದೆಂದು ಪಿಂಗದಂತೆ ಮಾಡಯ್ಯಾ ಲಿಂಗತಂದೆ ಶರಣು ಶರಣು ಶರಣಾರ್ತಿ ||

ಪುಸ್ತಕಂ ವನಿತಾ ವಿತ್ತಂ ಪರಹಸ್ತಗತಂ ಗತಂ |
† ಆಯಾಸಂ ಪುನರಾಯಾಸಂ ಭ್ರಷ್ಟಭ್ರಷ್ಟಾ ಚ ಭ್ರಷ್ಟಯೋ ||

ಜಲಾದ್ರಕ್ಷ ತೈಲಾದ್ರಕ್ಷ ದ್ರಕ್ಷಮುಸ್ಲಾಗ್ಯ ಬಂಧನಾತ್ |
ಅವಸ್ಯ ಯಾಚಕದ್ರಕ್ಷ ದ್ರಕ್ಷ ಮಮ ರಕ್ಷಂತು ಪುಸ್ತಕಂ ||

ನೀಲಕಂಠ ನಾಗನಾಥಾಚಾರ್ಯ ವಿರಚಿತಂ ವೀರಮಾಹೇಶ್ವರಾಚಾರ ಸಂಗ್ರಹಂ ಸಂಪೂರ್ಣಂ ಮಂಗಳಂ ಮಹಾಶ್ರೀ || "

ಈ ವಿಧವಾದ ಒಕ್ಕಣೆಯಿಂದ ಪ್ರತಿಕಾರನ ವಿಚಾರವೂ ಆತನು ಪ್ರತಿಮಾಡಲು ತೆಗೆದುಕೊಂಡ ಶ್ರಮವೂ ಸ್ಪಷ್ಟಪಡುತ್ತದೆ.

ಈ ಗ್ರಂಥಸೂಚಿಯನ್ನು ಸಂಸ್ಥೆಯ ಅಸಿಸ್ಟೆಂಟ್ ಡೈರೆಕ್ಟರ್ ಆಗಿರುವ ಶ್ರೀ ಬಿ. ಎಸ್. ಸಣ್ಣಯ್ಯನವರು ಮತ್ತು ರಿಸರ್ಚ್ ಅಸಿಸ್ಟೆಂಟರು ಅತ್ಯಲ್ಪಕಾಲದಲ್ಲಿ ಸಿದ್ಧಪಡಿಸಿರುವುದು ಸಂತೋಷಕರವಾದ ವಿಷಯ.

ಈ ವರ್ಣನಾತ್ಮಕ ಸೂಚಿಯ ನಾಲ್ಕನೆಯ ಸಂಪುಟವನ್ನು ಅತಿ ಶೀಘ್ರಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟಿರುವ ಮೈಸೂರಿನ ಶ್ರೀ ಶಾರದಾ ಪ್ರೆಸ್ ಮಾಲೀಕರಿಗೆ ಈ ಸಂಸ್ಥೆಯ ಕೃತಜ್ಞತಾಪೂರ್ವಕವಾದ ವಂದನೆಗಳು.

ಹೆಚ್. ದೇವೀರಪ್ಪ.

---

† ಈ ಶ್ಲೋಕಗಳ ಸರಿಯಾದ ಪಾಠ ಈ ರೀತಿ ಇದೆ.

ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾ ಚ ಖಂಡಶಃ ||
ತೈಲಾದ್ರಕ್ಷೇಜ್ಜಲಾದ್ರಕ್ಷೇದ್ರಕ್ಷೇಚ್ಛಿಥಿಲ ಬಂಧನಾತ್ |
ಮೂರ್ಖಹಸ್ತೇ ನ ದಾತವ್ಯಮೇವಂ ವದತಿ ಪುಸ್ತಕಂ ||

ಕನ್ನಡ ಹಸ್ತಪ್ರತಿಗಳ

ವರ್ಣನಾತ್ಮಕ ಸೂಚೀ

ಚತುರ್ಥ ಸಂಪುಟ (ವ-ಹೋ)

ಕೆ. ೪೯೯	**ವಚನಗಳು**	ವಚನ
೧೩.೬"×೨.೧"	ಪ್ರಭುದೇವರು ಇತ್ಯಾದಿ	೧೨ನೆಯ ಶತಕ
೩–೭೧ ಪತ್ರ	೧೨ ಪಂಕ್ತಿ	೮೪ ಅಕ್ಷರ

ಆದಿ : ಳಯು ಕರಸಿದವರಾರೊ । ದೇವ ದಾನವ ಮಾನವರೆಲ್ಲಾ ಯಿಾ ಬಾಣಕ್ಕೆ ಗುರಿಯಾಗಿ ಬಿದ್ದರು ಗುಹೇಶ್ವರಾ ಶೂನ್ಯ ನಿಃಶೂನ್ಯದೊಳಗೆ ॥ ೪ ॥ ಒಂದೆರಡಾದುದ ಬಲ್ಲವರಾರೊ । ಯರಡೊಂದಾಡರೊಳಗಣ ಮೂರ ಬಲ್ಲವರಾರೊ । ಮೂರರ ಮ....ದು ಕೂಡಿ ಮಾಡಬಲ್ಲವರಾರೊ । ಗುಹೇಶ್ವರ ಲಿಂಗದಲ್ಲಿ ಸಂಗನಬಸವಣ್ಣನೊಬ್ಬನೆ ॥ ೫ ॥

ಅಂತ್ಯ : ೫೪॥ ಜಗತ್ಪ್ರಪಂಚಮಾಡಿ ಆ ಜಗದಲ್ಲಿ ಜೀವರೂಪಿಂದ ಬಳಿಸಂದನೆಂ.... ತಿರಲಿ ಜೀವನೆ ಶಿವನಾದೊಡೆ ಶೋಕ ಮೋಹ ರುಣ ರೋಗ ಪುಣ್ಯ ಪಾಪ ಕಾಲಕಲ್ಪಿತ ಪ್ರಳಯ ಪ್ರಕೃತಿ ಸಂಸಾರಪಾಶಬದ್ಧವುಂಟೆ ಶಿವಂಗೆ । ಯಿವೆಲ್ಲವು ಜೀವಂಗಲ್ಲದೆ ಶಿವಂಗಿಲ್ಲವಾಗಿ । ತ್ರಿಗುಣರಹಿತ ಸೌರಾಷ್ಟ್ರ ಸೋಮೇ....ಯೆ ಯಂಬ ಕುಟ್ಟಿಮದ ಭಿತ್ತಿಯ ಮೊನೆ ಮುಚ್ಚಿದ ಅಂಡ ಕಟಾಹ × × × × ಬೀಜದೊಳಗಣ ವೃಕ್ಷ ಅಂಕುರಪಲ್ಲವ ಪತ್ರ ಕುಸುಮ ಫಲ ಮೈದೋರದಂತೆ ಕಾಷ್ಟದೊಳಗಣ ಗಿವುರಿ.

ವಿಷಯ : ವೀರಶೈವತತ್ತ್ವ.

ವಿಶೇಷ : ಶಿಥಿಲಪ್ರತಿ. ಕೆಲವು ಗರಿಗಳ ಅಂಚು ಮುರಿದಿದೆ. ಶಕಟರೇಫದ ಬಳಕೆ ಇದೆ. ಪ್ರಭುದೇವರ ವಚನಗಳಾದಮೇಲೆ ಮಹಾದೇವಿಯಕ್ಕ, ಮಡಿವಾಳಯ್ಯ, ಗೊಗ್ಗವ್ವೆ, ಗಾವುದಿ ಮಾಚಯ್ಯ, ವೈದ್ಯದ ಸಂಗಣ್ಣ, ಘಟ್ಟಿವಾಳಯ್ಯ, ಬೋರಿಲದೇವಿ, ಎಚ್ಚರಿಕೆ ಕಾಯಕದ ಮುಕ್ತನಾಥ, ತಳವಾರ ಕಾಮಿ ದೇವಯ್ಯ, ಗಾಣದ ಕಣ್ಣಪ್ಪ, ಉರುಲಿಂಗದೇವ, ಉರಿಲಿಂಗಪೆದ್ದಿ, ಮೇದರ ಕೇತಯ್ಯ, ರಾಯಸದ ಮಂಚ್ಯಣ್ಣ, ಬಹುರೂಪ ಚೌಡಯ್ಯ, ಬೊಕ್ಕಸದ ಚಿಕ್ಕಣ್ಣ, ದಸರಯ, ಗೋರಕ್ಷ, ಕಂಭದ ಮಾರಿತಂದೆ, ಕದಿರರೆಬ್ಬಲೆ, ಕಂನಧ ಮಾರಿತಂದೆ, ನಿಜಗುಣಯೋಗೀಶ್ವರ, ಏಕಾಂತರಾಮಿತಂದೆ, ಗಜೇಶ ಮಸಣಯ್ಯ, ಕಲಕೇತಯ್ಯ, ಬಾಲಬೊಮ್ಮಣ್ಣ, ಉಗ್ಘಣಿಸುವ ಗಬ್ಬಿ ದೇವಯ್ಯ, ವೀರಗೊಲ್ಲಾಳ, ಮಾದಾರ ದೂಳಯ್ಯ, ಅಘ್ಘಣಿಯ ಹಂಪಯ್ಯ, ಜೇಡರ ದಾಸಯ್ಯ, ಅಮುಗಿದೇವಯ್ಯ, ಅನಾಮಿಕ ನಾಗಯ್ಯ, ವಿಕೃತಿ ಸಂಗಯ್ಯ, ಜೋದರ ಮಾಯಂಣ, ತೆಲುಗೇಶ ಮಸಣಯ್ಯ, ನಾಚಯ್ಯ,

ಮೈದುನ ರಾಮಯ್ಯ, ಬಳ್ಳೇಶ್ವರ ಮಲ್ಲಯ್ಯ, ವರದ ಶಂಕಂಣ, ಪುರದ ನಾಗಯ್ಯ, ಸಿದ್ಧಾಂತಿ ವೀರಸಂಗಯ್ಯ, ಹೊಡೆಹುಲ್ಲ ಬಕ್ಕಣ್ಣ, ಕರುಳ ಕೇತಯ್ಯ, ಮಾದಾರ ಚೆನ್ನಯ್ಯ, ವಕ್ಕಲಿಗ ಮುದ್ದಣ್ಣ, ಕೀಲಾರದ ಭೀಮಣ್ಣ, ಉಪ್ಪರಗುಡಿಯ ಸೋಮಿದೇವಯ್ಯ, ಅಂಗಸೋಂಕಿನ ಲಿಂಗ ತಂದೆ, ಬಾಚಿಕಾಯಕದ ಬಸವಣ್ಣ, ಸೂಜಿಕಾಯಕದ ರಾಮಿತಂದೆ, ಕನ್ನಡಿ ಕಾಯಕದ ಅಮ್ಮಿದೇವಯ್ಯ, ಮಲಹರದ ಕಾಯಕದ ಚಿಕ್ಕಿದೇವಯ್ಯ, ಭರಿತಾರ್ಪಣದ ಚನ್ನಬಸವಣ್ಣ, ವೇದಮೂರ್ತಿ ಸಂಗಣ್ಣ. ಹಡಪದರೇಚಣ್ಣ, ಹಡಪದಪ್ಪಣ್ಣ, ಏಲೇಶ್ವರದ ಕೇತಯ್ಯ, ಮೋಳಿಗಯ್ಯ (ಟೀಕಿನ ವಚನ), ಹೆಂಡದ ಮಾರಯ್ಯ, ಕಾಯವಟ್ಟದ ಭೀಮಣ್ಣ, ಮರಳುಶಂಕರದೇವ, ಹಾವಿನಹಾಳ ಕಲ್ಲಯ್ಯ, ಅಂಬಿಗ ಚೌಡಯ್ಯ, ಸಕಳೇಶ ಮಾದರಸ, ಕೂಗಿನ ಮಾರಿತಂದೆ, ಸೊಡ್ಡಳ ಬಾಚರಸ, ಚಂದಿಮರಸ, ಸಿದ್ಧರಾಮಯ್ಯ, ಕಿಂನರ ಬ್ರಹ್ಮಯ್ಯ, ಅಮುಗಿದೇವಯ್ಯ, ಗುರುಬಸವೇಶ್ವರ— ಇವರ ವಚನಗಳಿವೆ. ೭, ೬೨, ೭೪ ನೆಯ ಪತ್ರಗಳು ಮುರಿದಿವೆ. ೧, ೨, ೨೯ ನೆಯ ಪತ್ರಗಳು ಲುಪ್ತ.

1517

ಕೆ. ಬಿ. ೫೦೮	**ವಚನಗಳು**	ವಚನ
೮.೪"×೬.೪"	ಚೆನ್ನಬಸವಣ್ಣ ಇತ್ಯಾದಿ	೧೨ನೆಯ ಶತಕ
೧–೫೫ ಪುಟ	೧೬ ಪಂಕ್ತಿ	೧೭ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ವಚನಗಳು.
ಸತ್ತುಚಿತ್ತಾನಂದ ನಿತ್ಯಪರಿಪೂರ್ಣವಸ್ತು ತನ್ನ ವಿನೋದಕ್ಕೆ ತಾನೇ ಕರ್ತೃ ಭೃತ್ಯನಾದ ಭೇದಮಂ ಪೇಳ್ವೆ ಅದೆಂತೆಂಪಡೆ ಒಂದು ಎರಡಾದ ಭೇದಮಂ ಹೇಳುವೆ. ಅದು ತಾನೆ ಸಂಗನಬಸವಯ್ಯನೆಂದು ಚೆನ್ನಬಸವಯ್ಯನೆಂದು ಎರಡು ನಾಮ ಅಂಗಪ್ರಾಣದ ಹಾಗೆ. ಚೆನ್ನಬಸವಣ್ಣನಿಂದ ಸಂಗನ ಬಸವಣ್ಣಸದಸ್ಯನಪ್ಪನು. ಈ ಎರಡು ವಸ್ತುವನೊಳಕೊಂಡು ಆಚರಿಸುವ ಜ್ಞಾನಜಂಗಮದ ನಿಲವೆಂತೆಂದಡೆ × × × ಭಾವ ಜಂಗಮ ಎರಡ ಮೀಱಿ ತ್ರಿವಿಧ ವಿರಹಿತವಾಗಿ ತೋರ್ಪುದು. ಗೋಣಿಯ ಮಱಿಯ ಕೇಟೇಶ್ವರ ಲಿಂಗವು ತ್ರಿವಿಧ ಜಂಗಮದ ನಿಲವಿನ ನಿರುಘೆಯ ನಿರೂಪಿಸಿದರು ॥ ೧ ॥

ಅಂತ್ಯ : ವಚನದ ರಚನೆಯ ಅನುಭಾವಕ್ಕೆ ಬಲ್ಲೆನೆಂಬರು, ವಚನವಾವುದು? ರಚನೆ ಯಾವುದು? ಅನುಭಾವವಾವುದು? ಬಲ್ಲರೆ ಹೇಳಿರಣ್ಣಾ! ವಚನ

ಆತ್ಮ ತುಟಿಯುನಱಿವುದು. ರಚನೆ ಸ್ಥಾವರ ಲಿಂಗ ಜಂಗಮ ತ್ರಿವಿಧದಲ್ಲಿ ಕಾಣಬಲ್ಲರೆ ರಚನೆ, ಅನುಭಾವ ಕಾಮದಿಚ್ಚೆಗೆ ಹರಿದು ಕಾಮಿಯಾಗದಿರಬೇಕು, ಕ್ರೋಧದಿಚ್ಚೆಗೆ ಹಱಿದು ಕ್ರೋಧಿಯಾಗದಿರಬೇಕು, ಮತ್ಸರದಿಚ್ಚೆಗೆ ಹರಿದು ಮತ್ಸರವಿಲ್ಲದಿರಬೇಕು, × × × ನಾಲ್ಕು ವೇದ ಶಾಸ್ತ್ರಂಗಳ ಬಲ್ಲೆನೆಂದು ನುಡಿವಾತನನುಭಾವಿಯೆ? ಅಲ್ಲ, ಅಱಿ ಬ್ರಹ್ಮನೆಂಜಲುಯಿವ ಬಲ್ಲೆನೆಂದು ನುಡಿವಾತನನುಭಾವಿಯೆ? ಅಲ್ಲ. ಆತನು ಇದಿರ ಬೋಧಿಸಿವುಂಬ ಭುಂಜಕನಯ್ಯ ಕೂಡಲ ಚೆನ್ನಸಂಗಮದೇವಾ ॥ ೧೦೨ ॥

ವಿಷಯ : ವೀರಶೈವತತ್ತ್ವ.

ವಿಶೇಷ : ಶಕಟರೇಫವಿದೆ. ಅಕ್ಷರ ವಿರಳ.

1518

ಕೆ. ಎ. ೨೩೫/೩	**ವಜ್ರಕುಮಾರ ಚರಿತ್ರೆ**	ಸಾಂಗತ್ಯ
೧೩"×೮"	ಬ್ರಹ್ಮಕವಿ	ಸು. ೧೬೦೦
೧–೧೨೫ ಪತ್ರ	೧೨ ಪಂಕ್ತಿ	೨೦ ಅಕ್ಷರ

ಆದಿ : ವಜ್ರಕುಮಾರ ಚರಿತ್ರೆ.

ಶ್ರೀಮದುಭಯ ಲಕ್ಷ್ಮೀರಮಣಾಯ ನಮಃ ॥

ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘಲಾಂಛನಂ ।
ಜೀಯಾತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥

ವಸಗೆವರೆ ಛತ್ರಚಾಮರ
ಶಶಿಮುಖಿಯರು ಪಾಡಿ ಕಳಶ ಕಂನಡಿ ಸಹಿತಂ
ಹೊಸಕೃತಿಯನೊಯ್ದು ಶ್ರೀ ಜಿನ
ವಸತಿಯೊಳೋದಲ್ಕೆ ಪುಣ್ಯಮದಕ್ಕುಂ ॥

ಯಂಟಂಗದೊಳಗೊಂ ವಾತ್ಸಲ್ಯವೆಂಬುದು
ಉಂಟಾದ ಕಥೆಗಳಿವರಂ
ಯಂಟಘನಾಶದಿಂ ತ್ರಿಭುವನದಗ್ರದೊ
ಳೆಂಟು ಗುಣದಿ ನೆರದಿಪರುಂ ॥ ೧ ॥

ಜಿನಮತ ಗಗನ ದಿವಾಕರ ವಾತ್ಸಲ್ಯ
ಅನುಪಮಗುಣರತ್ನಾಕರನೂ
ಅನುಮಿಷ ವಿಭವನು ವಜ್ರಕುಮಾರನ
ಜನಪನ ಕಥೆಯ ಬಂಣಿಪೆನೂ ॥ ೨ ॥

ಅಂತ್ಯ : ಮೊದಲು ಮೂವತ್ತೈದು ಹದಿನಾರು ಆರೈದು
ತುದಿಯಲ್ಲೆ ನಾಲ್ಕೆರದೊಂದೂ
ಹೃದಯಕಮಲದೊಳಗೆ ಪಂಚಪದಗಳ
ಸುದತಿ ಭಾವಿಸಲು ನಿರ್ವಿಘ್ನೆ ॥ ೩೭ ॥

ಕಂದ ॥ ಹರಿ ನುಂಗಲ್ಕರಿ ಸೀಳ
ಲ್ಕರಿಯಿರಿಯಲ್ಕಗ್ಗದಗ್ನಿಸುಡೆ....

ವಿಷಯ : ರಾಜಪುರೋಹಿತ ಸೋಮದತ್ತನ ಮಗನಾದ ವಜ್ರಕುಮಾರನ ಕಥೆ.

ವಿಶೇಷ : ಅಸಮಗ್ರ. ೩ ನೆಯ ಸಂಧಿಯಲ್ಲಿ ೧೩೭ ಪದ್ಯಗಳಿವೆ. ಆದಿಯಲ್ಲಿರುವ ನಾಲ್ಕು ಪ್ರತ್ಯೇಕ ಪತ್ರಗಳಲ್ಲಿ ಕಥಾಸಾರಾಂಶವಿದೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಇದೇ ಪುಸ್ತಕದಲ್ಲಿ ಮಾಣಿಕಸ್ವಾಮಿಚರಿತ್ರೆ ಹಾಗೂ ಜ್ಞಾನಭಾಸ್ಕರಚರಿತ್ರೆ ಎಂಬ ಗ್ರಂಥಗಳಿವೆ.

1519

ವತ್ಸರಾಜನ ಕಥೆ

ಕೆ. ಎ. ೯೮		ಗದ್ಯ
೧೩.೧"×೭.೪"	ಕೃಷ್ಣರಾಜ	೧೮೫೦
೧–೬೬೭ ಪತ್ರ	೨೦ ಪಂಕ್ತಿ	೧೯ ಅಕ್ಷರ

ಆದಿ : ವತ್ಸರಾಜನ ಕಥೆ ॥
ಶ್ರೀಮದ್ರಾಜಾಧಿರಾಜ ಶ್ರೀ ಚಾಮರಾಜೇಂದ್ರಪುತ್ರಾತ್ರೇಯ ಸಗೋತ್ರ ಪವಿತ್ರಚರಿತ್ರ ಶ್ರೀ ಕೆಂಪನಂಜಾಂಬಾ ಗರ್ಭಾಕ್ಷೀರ × × × × ಶ್ರೀ ಕೃಷ್ಣರಾಜಕಂಠೀರವರು ಸರಸಜನಾನಂದಕರಮಾಗಿ ಲೋಕೋಪಕಾರಾರ್ಥಮಾಗಿ ನವರಸಭರಿತಮಾಗಿ ಕರ್ಣಾಟಕ ಭಾಷೆಯಿಂ ಮಹಾರಾಜನಾದ ವತ್ಸರಾಜನು ರತ್ನಾವಳಿಯ ವಿವಾಹಂಗೈದು ವಿಹಾರವಂ ವಿರಚಿಸಿದ ವೃತ್ತಾಂತವನ್ನು ವರ್ಣಿಸುತ್ತಿರುವದೆಂತೆನೆ :—

ಸಮುದ್ರ ಮುದ್ರಿತಂಗಳಾದ ಜಂಬೂ ಪ್ಲಕ್ಷ ಕುಶ ಕ್ರೌಂಚ ಶಾಕ ಶಾಲ್ಮಲ ಪುಷ್ಕರಂಗಳೆಂಬ ಸಪ್ತ ದ್ವೀಪಗಳಲ್ಲಿ ರಮಣೀಯಮಾಗಿ

ಅಂತ್ಯ : ಅಂತರಿಕ್ಷಮಾರ್ಗವಾಗಿ ಹಿಮುವತ್ಪರ್ವತವನ್ನು ಕುರಿತು ಪೋಗಲು ವತ್ಸರಾಜನು ಸಮಸ್ತರಾದ ಪತ್ನೀಪುತ್ರರಿಂದೊಡಗೂಡಿ ಆನಂದದಿಂದ ರಾಜ್ಯ ಪರಿಪಾಲನೆಯಂ ಗೈಯುತಿದ್ದನೆಂಬಲ್ಲಿಗೆ ॥ ಗದ್ಯಾ ॥

× × × ×

ತಂಮ ತಂಮ ಸ್ಥಾನಕ್ಕೆ ಪೋದ ವೃತ್ತಾಂತವು ಸಹಾ ಐವದಿರು ಯಿರುವ ದೆಂಬ ಯಪ್ಪತ್ರನೆಯ ಗುಥಂ ಸಂಪೂರ್ನ ಮಂಗಳಂ ಮಂಗಳ ಮಹಾ ಶ್ರೀ—

ವಿಷಯ : ರತ್ನಾವಳಿಯನ್ನು ವತ್ಸರಾಜನು ವಿವಾಹವಾದ ಪ್ರಸಂಗ.

ವಿಶೇಷ : ಮೊದಲ ಪತ್ರ ಶಿಥಿಲ. ಅಲ್ಲಲ್ಲಿ ಹರಿದಿರುವುದನ್ನು ತುಂಡು ಕಾಗದಗಳಲ್ಲಿ ಅಂಟಿಸಿದೆ. ೫೭೮ ರ ಮುಂದೆ ಎರಡು ಪತ್ರಗಳಿಲ್ಲ. ಆ ಜಾಗದಲ್ಲಿ ಖಾಲಿ ಪತ್ರಗಳಿವೆ. ಇದೇ ರೀತಿ ೫೯೯–೬೨೩ ರ ವರೆಗೆ ಪತ್ರಗಳು ಲುಪ್ತ. ಅಷ್ಟು ಭಾಗವನ್ನು ಪುನಃ ಬರೆಯಲು ಅದೇ ಜಾಗದಲ್ಲಿ ಖಾಲಿ ಪತ್ರಗಳಿವೆ. ಸುಂದರ ಬರಹ.

1520

ಕೆ. ಎ. ೮೬/೨	**ವನಮಾಲೀ ವಿಲಾಸ**	ಯಕ್ಷಗಾನ
೧೬.೪" × ೧೦.೮"	ಶ್ರೀನಿವಾಸಯ್ಯಂಗಾರ್	೧೯ನೆಯ ಶತಕ
೮–೨೨ ಪತ್ರ	೩೮ ಪಂಕ್ತಿ	೨೯ ಅಕ್ಷರ

ಆದಿ : ವನಮಾಲೀ ವಿಲಾಸ ಕಥಾ ಪ್ರಾರಂಭ—

ವೃ ॥ ಶ್ರೀ ನೇತ್ರೋತ್ಪಲ ಚಾರುಚಂದ್ರಮನ ಮಂದಾನಂದ ಸಂದಾತನ
ಜ್ಞಾನಧ್ವಾಂತನಿವಾರಕಂ ಮುನಿಮನಶ್ಶುಭ್ರಾಬ್ಜ ಸಂಫುಲ್ಲಕಂ
ಸೇನಾಧಿಶ ವಿಹಂಗಭೋಗಿಯಮಿರಾಟ್ಸಂಸೇವ್ಯಪಾದಾಂಬುಜಂ
ತಾನೋಲ್ದಾವಗನೋವುದೆಮ್ಮನಹಿ ಭೂಭೃನ್ಮಂದಿರಂ ಸುಂದರಂ ॥ ೧ ॥

× × × ×

ವೃ ॥ ಧರೆಯೊಳು ಗಾದಿಸೂನುಕುಲಸಂಭವ ದೇವಶಿಖಾಮಣಿ ಕ್ಷಮಾ
ಸುರನುತ ಶ್ರೀನಿವಾಸನಭಿವಂದಿಸುತಾರ್ಯಪದಾಂಬುಜಂಗಳಂ
ಹರುಷದಿ ರುಕ್ಮಿಣೀ ಪರಿಣಯುಂ ಮಣಿಸಂಗ್ರಹ ಪಾರಿಜಾತ ಭಾ
ಸುರತರ ಕೃಷ್ಣದಾಸ ಕಥೆಯಂ ನುತಿಯಂ ಕೃತಿಗೈದು ಪೇಳ್ವಂ ॥ ೧ ॥

ಅಂತ್ಯ : ತುಂಬುರನುಂ ನಾರದನುಂ ಕುಣಿದಾಡೆ ಕಿನ್ನರರ್ಕಿನ್ನರಿಯಂ ಬಾಜಿಸೆ ರಂಭಾದ್ಯಪ್ಸರರ್ನರ್ತಿಸೆ ಗಂಧರ್ವರ್ಗಾನಿಸಲುಪನಿಷದ್ದೇವಿಯರ್ಪಾಡಿದ ರಾಗಳ್ ||

ರಾಗ || ಮಂಗಳವಿಂದಿರಾಕಾಂತೆಗೆ ನೆರೆ ಜಯ
ಮಂಗಳ ವಸುಮತಿರಮಣಗನಾರತ || ಪ ||

× × × ×

ಸೇವಕರಖಿಳರನು ಸುಖದೊಡು ಪೊರೆಯುವ
ದೇವಶಿಖಾಮಣಿ ದ್ವಿಜನುತಪದನಿಗೆ || ೩ ||
ಶ್ರೀಮತೇ ರಾಮಾನುಜಾಯ ನಮಃ ||
|| ಶ್ರೀ ಕೃಷ್ಣಾರ್ಪಣಮಸ್ತು ಸಂಪೂರ್ಣಂ ||

ವಿಷಯ : ಕೃಷ್ಣವಿಲಾಸ.

ವಿಶೇಷ : ಮೋಡಿ ಬರಹ. ಇದೇ ಪುಸ್ತಕದಲ್ಲಿ ಧ್ರುವೋಪಾಖ್ಯಾನವೆಂಬ ಗ್ರಂಥವೂ ಇದೆ. ಬರೆಯದ ಕೆಲವು ಪತ್ರಗಳಿವೆ.

1521

ಕೆ. ಬಿ. ೩೦೮	**ವನವಾಸ ರಾಮಾಯಣ**	ಯಕ್ಷಗಾನ
೭.೭"×೬.೩"	ಲಿಂಗರಾಜ	೧೮೫೦
೪೨ ಪತ್ರ	೧೭ ಪಂಕ್ತಿ	೨೩ ಅಕ್ಷರ

ಆದಿ : ಶ್ರೀ ರಾಮಾಯಣದೊಳಗಣ ವನವಾಸರಾಮಾಯಣ ಬರೆಯುವುದಕ್ಕೆ ನಿರ್ವಿಘ್ನಮಸ್ತು. ಶ್ರೀರಸ್ತು, ನಾಂದಿ, ಕಂದ ||
ಶ್ರೀ ಮತ್ತಾಮರಸೋತ್ಪಲ ಶ್ವಸನಮೈತ್ರೀಪಾತ್ರನೇತ್ರತ್ರಯಂ
ಭೀಮಭ್ರೂಕುಟಿಭಂಗತೇಶ ಭಟಕಲ್ಪಾನಲ್ಪ ನಾಕಾಲಯಂ
ವಾಮಾಂಕಸ್ಥಿತ ಶೈಲರಾಜತನಯಾ ಸಲ್ಲಾಪಲೋಲಾಶಯಂ
ಪ್ರೇಮಂಬೆತ್ತಮಗೀಗೆ ಭದ್ರತತಿಯಂ ಶ್ರೀ ಭದ್ರಕಾಳಿಪ್ರಿಯಂ || ೧ ||

× × × ×

ಕಂದ || ವರವಾಲ್ಮೀಕಿತಪೋಧನ
ವಿರಚಿತ ರಾಮಾಯಣಾಬ್ಧಿಮಥನೋದ್ಗತ ಬಂ
ಧುರ ರಾಮಕಥಾಮೃತವಂ
ನೊರೆವೆನು ವಿಬುಧರ್ಗೆ ಯಕ್ಷಗಾನದೊಳೊಲಿಯಂ || ೧೮ ||

ಅಂತ್ಯ : ವಾರ್ಧಖ ॥ ನಳ ಹರಿಶ್ಚಂದ್ರಾದಿ ನೃಪರ ಕಥೆ ಪೇಳುತಿಸ
ಕುಲನ ಬಗೆಯುಳಲ ಬಿಡಿಸುತ್ತ ಸಂತಸವಡಿಸು
ತ್ತೊಲವಿಂದ ಮುನಿ ಪೋಗಲಿತ್ತಲಾನಂದದಿಂ ಪಂಚವಟಿಯಾಶ್ರಮದೊಳು
ನೆಲನಣುಗಿವೆರಸಿ ರಘುರಾಮನನುಜಾತನೊಡ
ನಲಸದಾಡುತ್ತ ಪಲಬೇಂಟಿಯಂ ಸೊಗಮಿರ್ದ
ನೊಲವಿಂದಲೆನುತಲಾ ಕುಶಲವರಿಗುಸುರಿದಂ ನಲ್ಮೆಯಿಂ ವಾಲ್ಮೀಕಿಯು
॥ ೪೫೭ ॥

x x x x

ಪುಂಗವ ತುರಗನಿಗೆ ಗಂಗಾಜನಿಗೆ
ಲಿಂಗರಾಜ ಸೇವ್ಯನಿಗೆ ತುಂಗಮಹಲಿಂಗನಿಗೆ ॥ ೪೬೦ ॥
ವನವಾಸರಾಮಾಯಣ ಸಂಪೂರ್ಣ ಮಹಾಮಂಗಳ ಮಹಾಶ್ರೀ

ವಿಷಯ : ಸೀತಾ ವನವಾಸದ ಕಥೆ.

ವಿಶೇಷ : ಸಮಗ್ರ. ನೋಡಿ ಬರಹ. ಗ್ರಂಥದ ಆದಿಯ ೪ ಪತ್ರ ಮತ್ತು ಗ್ರಂಥದ ಕೊನೆಯ ೪ ಪತ್ರ ಖಾಲಿಯಿವೆ.

1522

ಕೆ. ಬಿ. ೪೯೭	**ವನವಾಸ ರಾಮಾಯಣ**	ಯಕ್ಷಗಾನ
೮"×೬.೩"	ಲಿಂಗರಾಜ	೧೮೫೦
೧–೬೮ ಪತ್ರ	೧೩ ಪಂಕ್ತಿ	೧೮ ಅಕ್ಷರ

ಆದಿ : ಶ್ರೀಗುರುವೇ ಗತಿ | ವನವಾಸರಾಮಾಯಣಕಥಾ.

ವಾರ್ಧಕ ॥ ಶ್ರೀರಾಮಚರಿತ ಸುಖಿತ ಪಿನಾಕಿ ವಾಲ್ಮೀಕಿ
ಚಾರುಸುಗುಣಾರಾಮ ನಾಮನಾ ಜಾನಕೀಯ
ಮಾರಾರಿಚಾಪದಾಟೋಪಮಂ ಭಂಗಿಸುತ ಕರವಿಡಿದು ಬರುವೆಡೆಯೊಳು
ದಾರಿಗಡಹಾಯ್ದು ತಡೆದಾ ಭಾರ್ಗವನ ಜೈಸಿ
ಸೇರಿ ಸಾಕೇತವಂ ಸೊಗಮಿರ್ದರೆಂದು ಮನ
ವಾರೆ ಕೇಳ್ದೆವು ಪೇಳ್ವುದೆಮಗೆ ಮುಂದಣ ಕಥೆಯನೆಂದು ಕುಶಲವರು
ಪೇಳೆ ॥ ೧ ॥

ಅಂತ್ಯ : ವಾರ್ಧಕ || ನಳ ಹರಿಶ್ಚಂದ್ರಾದಿ ನೃಪರ ಕಥೆ ಪೇಳುತಿನ
ಕುಲನ ನಂಬಿಸಿ ಚಿಂತೆ ಬಿಡಿಸಿ ಸಂತಸವಡಿಸು
ತೊಲವಿಂದ ಮುನಿ ಪೋಗಲಿತ್ತಲಾನಂದದಿಂ ಪಂಚವಟಿಯಾಶ್ರಮದೊಳು
ನೆಲನಣುಗಿವೆರಸಿ ರಘುರಾಮನಸುಜಾತನೊಡ
ನಲಸದಾಡುತ್ತ ಪಲಬೇಂಟೆಯಂ ಸೊಗಮಿರ್ದ
ನೊಲವಿಂದಲೆನುತಲಾ ಕುಶಲವರಿಗುಸುರಿದನು ನ್ಮ್ರಿಯಿಂ ವಾಲ್ಮೀಕಿಯು
|| ೪೩೯ ||

|| ಮಂಗಳಾರತಿ ||

ವಿಷಯ : ಸೀತಾವನವಾಸದ ಕಥೆ.

ವಿಶೇಷ : ಕ್ರಮಾಂಕ ಇಲ್ಲ. ಎರಡು ಬಗೆಯ ಬರವಣಿಗೆ ಇದೆ.

1523

ಕೆ. ೮೦/೧	**ವರನಂದೀ ಕಲ್ಯಾಣ**	ಸಾಂಗತ್ಯ
೭.೨"×೧.೭"	ಚೆಲುವಾಂಬೆ	ಸು. ೧೭೨೫
೧–೧೭೦ ಪತ್ರ	೬ ಪಂಕ್ತಿ	೨೫ ಅಕ್ಷರ

ಆದಿ : ಶ್ರೀಮತೇ ವೆಂಕಟೇಶಾಯ ನಮಃ || × × × ಅವಿಘ್ನಮಸ್ತು ||
ವರನಂದೀಕಲ್ಯಾಣ | ವರ್ನಕ ||
ಶ್ರೀ ವೆಂಕಟೇಶನ ಹೃದಯಕಮಲದೊಳು
ಭಾವಿಸಿ ಕವಿತೆಯ ಪೇಳ್ವೆ
ಕೋವಿದರಾಲಿಪುದೀ ವರನಂದೀ
ದೇವಿಯ ಕಲ್ಯಾಣವನು || ೧ ||
ಜನಪತಿಯೆನಿಸುವಪ್ರತಿಮ ಕೃಷ್ಣೇಂದ್ರನ
ವನಿತೆ ಚೆಲ್ವಾಂಬೆಯಿಾಕೃತಿಯ
ಅನುಗೊಳಿಸಿದಳೆಂದು ಬಿನದಗೈಯ್ಯದೆ ಸ
ಜ್ಜನರು ಸಂತಸದೊಳಾಲಿಪುದು || ೨ ||

ಅಂತ್ಯ : ಕೃತಿಗೆ ಕರ್ತನು ಚೆಲ್ವರಾಯನೆನಗೆ ಸಂ
ನ್ಮತಿಯಿತ್ತವನು ಶ್ರೀನಿವಾಸ
ಸತತಮಾಗೀರ್ವರು ದಯೆಯಿಂದ ಪೊರೆವುದೀ
ಕೃತಿಯ ಚಂದ್ರಾರ್ಕರುಳ್ಳನಕ || ೧೪೦ ||

× × × ×

ನೆಲದಾಣ್ಮದಳವಾಯ್ದೊಡ್ಡೇಂದ್ರನ ತನುಜ ಕ
ಳಿಲೇ ಕಾಂತ್ರನೃಪನವರನಣುಗಿ
ಚೆಲುವಾಂಬೆ ಪೇಳ್ದೀ ಕೃತಿಯೊಳಗೇಳನೆ ಸಂಧಿ
ಸುಲಲಿತ ಪದಸಂಬಂಧಿ ॥ ೧೪೪ ॥
ಅಂತು ಸಂಧಿ ೭ಕ್ಕಂ ಪದನು ೮೮೧ಕ್ಕಂ ಮಂಗಳ ಮಹಾ ಶ್ರೀ

× × × ×

ಚೆಲ್ವಾಜಂಮನು ಪೇಳ್ದ ಸರಸಗವಿತೆಗೇಳ್ದು ಸಲಹುವಗೆ ॥ ೫ ॥
ಮಂಗಳ ಶ್ರೀ ಚೆಲ್ವರಾಯಗೆ ॥

ವಿಷಯ : ಮೇಲುಕೋಟೆ ಚೆಲುವರಾಯಸ್ವಾಮಿಗೂ ಬಾದಶಹನ ಮಗಳಾದ ವರನಂದಿಗೂ ನಡೆದ ವಿವಾಹದ ಕಥೆ.

ವಿಶೇಷ : ಸುಂದರ ಬರಹ. ಇದೇ ಕಟ್ಟಿನಲ್ಲಿ ವೆಂಕಟಾಚಲಮಾಹಾತ್ಮ್ಯ (ಲಾಲಿಪದ) ಮತ್ತು ಅಮ್ಮನವರಮೇಲೆ ಲಾಲಿಪದಗಳಿವೆ.

1524

ಕೆ. ಬಿ. ೨೧೫	**ವರ್ಧಂತಿ ಶತಕಂ**	ಷಟ್ಪದಿ
೬"×೩.೫"	?	೧೯೦೦
೪೭ ಪುಟ	೧೮ ಪಂಕ್ತಿ	೧೪ ಅಕ್ಷರ

ಆದಿ : ಶ್ರೀಮದ್ರಾಜಾಧಿರಾಜ ಶ್ರೀ ಕೃಷ್ಣರಾಜ ಸಾರ್ವಭೌಮರ ವರ್ಷವರ್ಧಂತಿ ಶತಕವು.

ವಾರ್ಧಕಷಟ್ಪದಿ ॥ ಶ್ರೀ ಕಮಲವಾಸಿನಿಯ ನೀಲಕುಂತಲಗಳುಂ
ಶ್ರೀಕಮಲಲೋಚನೆಯ ಕಚ್ಛಪಾಂಘ್ರಿದ್ವಯಂ
ಶ್ರೀಕಮಲವದನೆಯ ಸುಕುಂದವರರದನಂಗಳುಂ ಮಹಾಪದ್ಮೆಯಂ
ಬ ಕೇಶವಪ್ರಿಯಳ ವರ ಶಂಖಸತ್ಕಂಠಮುಂ
ಶ್ರೀ ಕಾಮಿನೀ ಮ.....ರೇಖಾಕುಚಂಗಳುಂ
ಶ್ರೀಕರ ಮುಕುಂದ ರಮಣಿಯ ಕರವುಮೆಮಗಧಿಕ ಮೋದಮಂ ತಾ
ಮಾಡುಗೇ ॥ ೧ ॥

ಅಂತ್ಯ : ಜಯ ಸಕಲಗುಣಸಾಂದ್ರ ಜಯವದನ ಜಿತಚಂದ್ರ
ಜಯ ಯದುಕುಲೋತ್ತಂಸ ಜಯ ಹೃಷೀಕೇಶಾಂಶ
ಜಯ ಚಾಮರಾಜಸುತ ಜಯ ಭೂಷಣೋಲ್ಲಸಿತ ಜಯಸಕಲಶಾಸ್ತ್ರಲಲಿತಾ
ಜಯ ದೀನ ಕರುಣ ಜಯ ಸಮಾಖ್ಯಾಭರಣ
ಜಯ ಕಾಮಸಮರೂಪ ಜಯ ರಾಜಕುಲದೀಪ
ಜಯ ಕೆಂಪಮಾಂಬಾ ಸುಗರ್ಭಸಂಜಾತ ಜಯಜಯ ಕೃಷ್ಣರಾಜ
ನೃಪತೆ ॥ ೬೪ ॥

× × × ×

ಗ್ರೋಕರ್ನ ನಗರ ಹರಿಯ ಕೃಪೆಯಿಂದಾನು
ರಾಕೇಂದುವದನ ಕೃಷ್ಣೇಂದ್ರನೋರ್ಧಂತಿಯಂ
ನೇಕಾಗ್ರಚಿತ್ತದಿಂ ವಿರಚಿಸಿದೆನೀ ಕೃತಿಯ ನೆನ್ನೊಳತಿಕರುಣದಿಂದಾ
ಲೋಕದೊಳ್ಸುಜನರ್ಕಳೀಕ್ಷಿಸುತ ತಪ್ಪಿರ
ಲ್ಜೋಕೆ ಮಿಗೆ ತಿರ್ದಿ ಮೆರಸುವದೆಂದು ಬೇಡುವೆಂ
ಮಾಕಾಂತರುದಯದಿ ಮೆರೆಯಲೀ ಶತಕ ತಾನೀ ಭೂಮಿಯೊಳು
ಸಂತತಂ ॥ ೬೬ ॥

ವಿಷಯ : ಕೃಷ್ಣೇಂದ್ರ ಮಹಾರಾಜರ ವರ್ಧಂತಿ ವಿಚಾರ.

ವಿಶೇಷ : ಪ್ರತಿ ಶಿಥಿಲವಾಗಿದೆ. ಪುಟಗಳಿಗೆ ಕ್ರಮಸಂಖ್ಯೆಯಿಲ್ಲ.

1525

ಕೆ. ಬಿ. ೪೪೬ **ವರ್ಧಮಾನ ಚರಿತಂ** **ಸಾಂಗತ್ಯ**
೮.೩"×೬.೬" **ಪದ್ಮಕವಿ** **೧೫೨೦**
೧–೧೧೮ ಪತ್ರ **೨೦ ಪಂಕ್ತಿ** **೧೨ ಅಕ್ಷರ**

ಆದಿ : ವರ್ಧಮಾನಚರಿತ ಪ್ರಾರಂಭ :
ಶ್ರೀ ಸುರವಂದಿತ ಭಾಸುರಪದಪದ್ಮ
ವಾಸುಗಿನುತಗುನು........
........ಳೊಡೆಯ ಶ್ರೀ ವೀರ ಜಿ
ನೇಶರಡಿಗೆ ನಮಿಸುವೆನೂ ॥ ೧ ॥

ಅಂತ್ಯ : ಭೋಗಿವೆಣ್ಗಳ ಕಂಣಸಿರಿ ಕವಿಪದ್ಮನು
ನಾಗಯ್ಯತಂದೆಯ ಸೂನು
ಯಿಾಗುಣಕೃತಿಯ ಪೇಳಿದನು ಬಲ್ಲರು
ಪುರೆ ಜಾಗೆನೆ ಚದುರ ಮೇಲಡಿಗೆ ॥ ೧೪೯ ॥

× × × ×

ಶಾಲೀವಾಹನ ಸಕವರ್ಷ ಸಾಸಿರವೊಂದು
ಮೆ....ನಾಲ್ಕೂಱನುಯ್ವತ್ತೂ
ಆಲೋಕಿಸಲು ಸರ್ವಧಾರಿ ಸಂವತ್ಸರದಾ
ಲಕ್ಷದಾ ಮಾರ್ಗಶಿರದಾ ॥ ೧೫೨ ॥

ಮಾಸದ ಬಹುಳ ತದಿಗೆಯ ಕರ್ಕಟಕ
ಲಗ್ನ ಗುರುಹೊರೆ ವೇಳೆಯದಿ
ಈ ಸೇವ್ಯ ವರ್ಧಮಾನೇಶಚರಿತ್ರ ನಿ
ವಾಸಮುಂತ್ಕೃತಿ ನೆಲೆಯಾಯ್ತು ॥ ೧೫೩ ॥

× × × ×

ದಿವ್ಯನಿನಾದಕ್ಕೆ ಪಂನ್ನೆರಡಂಗದಿ
ಸೇವ್ಯಮಾದುದುವೆಂಬಂತೆ
ಕಾವ್ಯದೊಳ್ದ್ವಾದಶಸಂಧಿಗಳ್ತೋಱಿರೆ
ನವ್ಯಮದಾದುದೀ ಚರಿತೆ ॥ ೧೫೬ ॥

ಅಂತು ಸಂಧಿ ೧೨ಕ್ಕಂ ಪದನು ೧೩೧೨ಕ್ಕಂ ಮಂಗಳ. ಶ್ರೀ ವರ್ಧಮಾನ ಚರಿತ ಸಂಪೂರ್ಣಂ.

ವಿಷಯ : ವರ್ಧಮಾನ ತೀರ್ಥಂಕರನ ಚರಿತ್ರೆ.

ವಿಶೇಷ : ಪ್ರತಿ ಸಮಗ್ರವಾಗಿದೆಯಾದರೂ ಅಲ್ಲಲ್ಲಿ ಗ್ರಂಥ ಲೋಪವಿದೆ.

1526

ಕೆ. ಎ. ೫ **ವರ್ಧಮಾನ ಪುರಾಣ** ಚಂಪು
೧೨.೮"×೮.೩" ಆಚಣ್ಣ ಸು. ೧೮೯೫
೧-೧೦೨ ಪತ್ರ ೨೫ ಪಂಕ್ತಿ ೨೬ ಅಕ್ಷರ

ಆದಿ : ಶ್ರೀಮಚ್ಚಾಮರಸಿಂಹವಿಷ್ಟರ ವರಚ್ಛತ್ರತ್ರಯಾಶೋಕ ದಿ
ವ್ಯಾಮಯಧ್ವನಿ ಪುಷ್ಪವೃಷ್ಟಿ ಸುರಭೇರಿ ಭೂರಿ ಭಾಮಂಡಗ
ಸ್ತೋಮಂ ಭಾಸ್ವದನಂತಬೋಧಬಳದೃಸೌಖ್ಯತ್ವಲಕ್ಷಿಸಮು
ದ್ದಾಮಂ ಮಾಳ್ಕೆಮಗಳ್ಕರಿಂದೆ ಶುಭಮಂ ಶ್ರೀವರ್ಧಮಾನಂ ಜಿನಂ ॥

ಅಂತ್ಯ : ಶ್ರೀವಾಣೀವಲ್ಲಭಾಖ್ಯಾನಮನತಿಮುದದಿಂ ಪೆತ್ತು ವರ್ತ್ತಿಪ್ಪ ಧಾತ್ರೀ
ದೇವಂ ಸಂದಾಚಿರಾಜಂ ಪುರಿಕರನಗರಾಧೀಶ ಶಂಖ್ಯಾಗ್ರಜಾರ್ಹ
ತ್ಸೇವಾಸಕ್ತಾಶಯಂ ಬಿತ್ತರಿಸಿದ ವಿಬುಧಶ್ರವ್ಯಮಿಾ ವೀರಕಾವ್ಯಂ
ಭೂಮಿಖ್ಯಾತಾವಧಾತಂ ಸಕಳ ಸಭೆಗಳೊಳ್ವರ್ತ್ತಿಕಾಚಂದ್ರತಾರಂ ॥

× × × ×

ಗದ್ಯ ॥ ಇದು ನಿಖಿಳ ಭುವನಜನ × × × ಶ್ರೀ ನಂದಿಯೋಗೀಂದ್ರಪ್ರಸಾದ ವಾಚಾ
ಮಹಿತ ಕೇಶವರಾಜಾನಂದನಂದನ ವಾಣೀವಲ್ಲಭ ವಿಸ್ತಾರಿತಸುಪ್ಪ ವಸುದೈಕ
ಬಾಂದವ ಶ್ರೀ ವರ್ಧಮಾನಪುರಾಣದೊಳ್ ವೀರಸ್ವಾಮಿ ನಿರ್ವಾಣಭೂಮಿ
ಗಮನವರ್ನ್ನನಂ ಷೋಡಶಾಶ್ವಾಸಂ ಮಂಗಳಂ.

ವಿಷಯ : ವರ್ಧಮಾನ ತೀರ್ಥಂಕರನ ಚರಿತ್ರೆ.

ವಿಶೇಷ : ಗ್ರಂಥದ ಕೊನೆಯಲ್ಲಿ ಕೆಲವು ಶುದ್ಧಪತ್ರಗಳಿವೆ.

1527

ಕೆ. ಬಿ. ೧೩೪	**ವಸುಚರಿತ್ರೆ**	ನಾಟಕ
೭.೭"×೬.೨"	ಶ್ರೀನಿವಾಸಕವಿ	?
೧-೫೬ ಪತ್ರ	೧೭ ಪಂಕ್ತಿ	೧೮ ಅಕ್ಷರ

ಆದಿ : ವಸುಚರಿತ್ರೆ.

ಸೂತ್ರ ॥ ನಾಂದೀವೃತ್ತ ॥

ಶ್ರೀದೇವೀಹೃದಯಾಬ್ಜ ಭೃಂಗನ ವರವ್ರಾತಾರ್ಚಿತಾಂಘ್ರಿದ್ವಯಂ
ಯಾದೋರಾಶಿಗಭೀರನಾನತಜನಪ್ರೀತಂ ಕೃಪಾಸಾಗರಂ
ಶ್ರೀದಾಮೋದರನಂಬುಜಾತನಯನಂ ಗೋಪಾಲಬಾಲಂ ಗಿರೀ
ಶಾದಿಸ್ತುತ್ಯರಮಾಧವಂ ಕುಡುಗೆ ಭಕ್ತೌಘಕಾನಂದಮಂ ॥ ೧ ॥

ಹಾಡು ॥ ರಾಗ ॥ ಪಾಲಿಸೈ ರಮಾವರ ಬಾಲಸೂರ್ಯಭಾಸುರ ॥ ಪ ॥

ಅಂತ್ಯ : ಸೂತ್ರಧಾರ ||

ಕಂದ || ವರಸುಕವಿ ರಾಮಭೂಷಣ
ವಿರಚಿತ ಮಹಾ ಸುಚರಿತ್ರೆಯಂ ಕನ್ನಡದಿಂ
ಸುರುಚಿರ ನಾಟಕರೂಪದಿ
ವಿರಚಿಸಿದಂ ಶ್ರೀನಿವಾಸಕವಿ ಸಂತಸದಿಂ || ೨೪೯ ||

× × × ×

ಕಾಮಕೋಟಿ ಸುಂದರಾಂಗ ಭೀಮನುತಪದ
ಸಾಮಗಾನ ಪ್ರೇಮಶರಣ ಕಾಮಿತಾರ್ಥದ || ೨೫೩ ||
ಸಂಪೂರ್ಣಂ. ವಸುಚರಿತ್ರೆ ಸಂಪೂರ್ಣಂ.

ಕಂದ || ಶಕ್ತಿತ್ರಯಸಂಯುಕ್ತಂ
ಭಕ್ತಜನಾಭೀಷ್ಟಫಲಪ್ರದಂ ರಘುವೀರಂ
ಶಕ್ತಿಸಹೋದರ ಪದ್ಮಾ
ಸಕ್ತಂ ನಲವಿಂ ಸಲಹಲಿ ಮೂಜಗಜನಮಂ || ೨೫೪ ||

ಸಂಪೂರ್ಣಂ.

ವಿಷಯ : ವಸುನೃಪಾಲನ ಕಥೆ.

ವಿಶೇಷ : ಅಕ್ಷರ ಸ್ಫುಟವಾಗಿದೆ.

1528

ಕೆ. ೧೬೬	**ವಾತಾದಿ ಸಕಲ ರೋಗ ಚಿಕಿತ್ಸೆ**	ಶ್ಲೋಕ, ಟೀಕು
೧೪"×೧.೫"	?	?
೧–೧೩೬ ಪತ್ರ	೬ ಪಂಕ್ತಿ	೫೫ ಅಕ್ಷರ

ಆದಿ : ಸಂನಿಪಾತಕೆ | ತಾಂಧ್ರಿಕ ಸಂನಿ ಸ್ವರೂಪಂ ||
ಪುರ್ವವಚ್ಚುಲಂ ಸೊಬವತಂಚವೆದನ !
ಕಾವಸಂದ್ರನುತಾಂ ವಾಂಚ ತಾಂಧ್ರಿಕ ಸನ್ನಿಪಾತಕಃ ||

ಟೀಕು || ಸ್ವರೂಪ—ಯಂತ ಪ್ರಕಾರವಾಗಿ ಯಿರುವದು. ಹೊಟ್ಟೆನೋವು ಮೈಬವು ನೋವು ದಾಹ ಉಂಟಾಗಿರುವುದು ಕೆಂಮಲೂ ಆಕಳಿಕೆ ಯಿದು ಯೇಳುದಿನ ಕಳಿಯಬೇಕು.

| ೧ || ಅಂತಕಸಂನಿಲಕ್ಷಣ—

ಅಂತ್ಯ : ಸೂಳಿ ಹುಂಣಿಗೆ । ಮರಹಾಲೆಸ್ಪೊನರವ ಹೊಟೆಗೆ ಕೊಡುವದೂ. ಪತ್ಯ ಹೂ॥ ರ....ಸರು ಅನ್ನ ಉಂಬುದು. ಸೂಸ್ಯ ತಾಗದ ಹಾಗೆ ಆದಿತ್ಯವಾರ ಅಮಾವಾಸೆಯ ದಿನ ಹಂಸಪಾಬೇರು ಹೊತಿರುಗನಬೇರು ಬಿಳಿಗುರುಗಂಜಿ ಬೇರು ೩ರನು ತಂದು ಅಸ್ಟ....ಡಾರ್ಜನೆಯಂ ಮಾಡಿ ತಾಂಮ್ರದ ಬಂದಿ ಯಲ್ಲಿ ಯಿರಿಸಿಕೊಳುವದು. ಕಪು ಸಹ ತುಂಬಿಕೊಳುವದೂ. ಉತ್ರಣಿ ಕಪೂ ಯಿದರ ಕಪ್ಪು ಹದಿನಾರು ತೆರದ ಸೂಂಸ್ಯ ಪರಿ....ರಾವಾಗುವದೂ. ಸಿಧಿ ತಪದೂ. ಯಿದಕ್ಕೆ ಮಂತ್ರ॥ ವೋಂ ನಮೋ ನಾಸರಿ ರವಿ ಪಾತಾಳವಾಹಿನಿ ಪಾರ್ದಿನಿ ಅಂಜನಶ್ವತಾನಿ ಯೇಹಿ ಯೇಹಿ ವಿಜಯ ಹೂಂಪಟುಸ್ವಾಃ॥ ಯಿಾ ಮಂತ್ರದಿಂ ಮೂಲಿಕೆಯ ತಹುದು. ಸಭೆ ಬಾಯಕಟು ॥ ಓಂ ನಮೋ ಬಗವತೆ ಸಾರ್ವಕುಂಡಲಿ ಯಕ್ಷಿಣಿ ನಾಗಲೋಕವ ಶಂಕರಿ ಸಾಬು ಸ್ವಾಹಾ ॥

ವಿಷಯ : ರೋಗಗಳು ಮತ್ತು ಅವುಗಳಿಗೆ ಔಷಧ, ಮಂತ್ರ ಇತ್ಯಾದಿ.

ವಿಶೇಷ : ೪೧ ನೆಯ ಪತ್ರದಲ್ಲಿ ವೈದ್ಯಚಿಂತಾಮಣಿ ಬರೆಯುವುದಕ್ಕೆ ಶುಭಮಸ್ತು ಎಂದಿದೆ. ಮಧ್ಯೆ ಕೆಲವು ಪತ್ರಗಳು ಶಿಥಿಲವಾಗಿವೆ. ೧೨೪ ನೆಯ ಪತ್ರದಿಂದ ೧೩೫ ನೆಯ ಪತ್ರ ಪೂರ್ತಿ ಕೆಲವು ಯಂತ್ರಗಳ ಚಿತ್ರಗಳು ಮತ್ತು ಅವುಗಳ ಉಪಯೋಗಕ್ರಮವಿದೆ.

1529

ಕೆ. ೫೫೫	**ವಾಲಿ ಸುಗ್ರೀವರ ಕಾಳಗ**	ಯಕ್ಷಗಾನ
೧೧"×೧.೯	?	?
೧–೩೦ ಪತ್ರ	೮ ಪಂಕ್ತಿ	೪೦ ಅಕ್ಷರ

ಆದಿ : ರಾಮಾಯಣದೊಳಗಣ ವಾಲಿ ಸುಗ್ರೀವರಾ ಕಾಳಗಾ ಬರವುದಕ್ಕೆ ನಿರ್ವಿಘ್ನ ಮಸ್ತು ॥ ವೃತ್ತಾ ॥
ಮುನಿಪ ಕೇಳ್ಮೆ ಮುಂದೆ ರಾಮಲಕ್ಷುಮಣರುಗಳು ಬಳಿಕಾ
ವನ್ನು ಪಂಚವಟಿಯೊಳಂದೇನಮಾಡಿದರು ಶೂ
ರ್ಪನಖಿ ಮತ್ತೇನಾದಳೆಂಬ ವಿವರವನು ಮನ ತಿಳಿವಡುಸುರೆಂನ್ನುತ್ತಾ
ತನೆಯರೀರ್ವರು ಕರವ ಮುಗಿದು ಬೆಸಗೊಳಲು
ಮುನಿ ವಿನಯದಿಂ ಮಾನಿಸುತ್ತ ಬಾಲಕರ ತೆಗದಪ್ಪಿ
ಗುಣದಿಂದ ಪೇಳಿದನು ಮುಂದಣ ಕಥಾಪ್ರಸಂಗಗಳ ವನಜನಾಭನ
ಚರಿತವಾ ॥ ೧ ॥

ರಾ|| ಕೇ|| ಅಷ್ಟತಾಳ ||
ತನೆಯಾರು ಕೇಳ್ದ್ರಡದೊಳಗಂದೂ ಶೂರ್ಪನಖಿ ತಂನಂತ್ಥರಂಗದಿನೊಂದೂ
ಯಿನಿತ್ತಾದ ವೃತ್ತಾಂತಗಳನಿಂದೂ ರಾವಣನಿಗೆ ಹೋಗಿ ಹೇಳುವೆನೆಂದೂ
|| ೧ ||

ಅಂತ್ಯ : ತರಳ ಕೇಳಿಪ್ಪತ್ತೈದನೆಯ ದಿವಸಕ್ಕೆ ಕಿಷ್ಕಿಂದ ಪರ್ವತದಲ್ಲಿ
ನಿಲಲು ಮಳೆಗಾಲ ಬಂತೆಂದು ವಾನರಸೈನ್ಯಮಂ ಕಳುಹಿ
ನಾಲ್ಕುತಿಂಗಳ ಮೇಲೆ ಬರುವ ತಹಗಳ ಮಾಡಿ ತರಣಿನಂದನ
ಬೀಳ್ಕೊಂಡು ರಾಮನು ಸಹೋಥರಸಹಿತ ನಡೆತಂದು
ಶ್ರವಣಪರ್ವತದಲ್ಲಿ ಯಿರುವರೆಂಬಲ್ಲಿಗಾಯ್ತು ಸಂಧಿ
ಕಣ್ವಪುರ ಕೃಷ್ಣನ ಕಟಾಕ್ಷದಿಂದಾ || ೧ || ವಾ|ಕಾ|ವು|೧|ಪ ೨೭೧ ||

ವಿಷಯ : ರಾಮಾಯಣ ಕಿಷ್ಕಿಂಧಾಕಾಂಡದ ಕಥೆ.

ವಿಶೇಷ : ಇದೇ ಕಟ್ಟಿನ ಕೊನೆಯಲ್ಲಿ ಜ್ಯೋತಿಶ್ಯಾಸ್ತ್ರಕ್ಕೆ ಸಂಬಂಧಪಟ್ಟ ವರ್ಷಗಳ ಹೆಸರು, ಗ್ರಹಗಳಿಗೆ ಸಂಬಂಧಪಟ್ಟ ರತ್ನಗಳು ಇವೇ ಮೊದಲಾದ ವಿಷಯಗಳು ಮೂರು ಪತ್ರಗಳಲ್ಲಿ ಸಂಗೃಹೀತವಾಗಿವೆ.

1530

ಕೆ. ಬಿ. ೩೫೩/೪	**ವಾಲಿ ಸುಗ್ರೀವರ ಕಾಳಗ**	ಯಕ್ಷಗಾನ
೯"X೬.೫	?	?
೭೭–೯೪ ಪತ್ರ	೧೩ ಪಂಕ್ತಿ	೧೪ ಅಕ್ಷರ

ಆದಿ : ವಾಲಿ ಸುಗ್ರೀವರ ಕಾಳಗ ಬರೆಯುವುದಕ್ಕೆ ಶುಭಮಸ್ತು || ದ್ವಿಪದೆ ||
ಮುನಿಪಾ ಕೇಳೈ ಮುಂದೆ ನಾನು ರಾಮಾ ಲಕ್ಷಮಣರುಗಳೂ
ಬಳಿಕಾ....ಪಂಚಾವಟ್ಟಿಯೋಳವರಿದ್ದೈನ್ನು ಮಾಡಿದಾರು
ಶೂರ್ಪನಖಿ ಮತ್ತೇನಾದಳೆಂಬ ವಿವರವನ್ನು ಮನತಿಳಿವಗೆ ನಸುನಗುತ್ತೆ
....ತ್ರನೆಯರಿರ್ವರು ಕರವ ಮುಗಿದು ಬೆಸೆಗೊಳಲೂ ಮುನಿ
ವಿನಯದಿಂ. ನೀಸುತ್ತ ಬಾಲಕರ ತೆಗದಪ್ಪಿ ಗುಣದಿಂದಾ ಪೇಳಿದನು
ಮುಂದಣ ಪ್ರಸಂಗಗಳೂ ವನಜನಾಭನ ಚಾರಿತ್ರವಾ || ೧ ||

ಅಂತ್ಯ : ವಾರ್ಧಿಕ್ಯ || ತರಳರು ಕೇಳಿಪ್ಪತ್ತೈದು ದಿನ ಕಿಸ್ಕಿಂಥ
ಧರನಿಲ್ಲಾಲು ಮಾಳೆಗಾಲಾ ಭಂತ್ರೆಂದು
ನಾಲ್ಕುತಿಂಗಳ ಮೇಲೇ ಬರುವ ತಹಂಗಳ ಮಾಡೀ
ತರುಣಿ ನಂದನನ ಬೀಳ್ಕೊಟ್ಟು ರಾಮಾನ್ನು ಸಹೋ

ಧರ ಸಹಿತ ನಡೆತಂದು ಶ್ರವಣಪರ್ವತದಲ್ಲಿ
ಯಿರುವರೆಂಬಲ್ಲಿಗ್ಯಾತು ಸಂಧಿ ಕಂಣ್ವಪೂರದ
ಗೋಪಾಲಕ್ರಿಷ್ಣನಾ ಕಾಟಾಕ್ಷದಿಂಧಾ ॥ ೧ ॥
ಅಂತು ಸಂಧಿ ೩೪೫ಕಂ ಮಂಗಳ ಮಹಾಶ್ರೀ ॥

ವಿಷಯ : ರಾಮಾಯಣದ ಕಿಷ್ಕಿಂಧಾಕಾಂಡದ ಕಥೆ.

ವಿಶೇಷ : ಶಿಥಿಲಪ್ರತಿ, ಹುಳು ಹೊಡೆದಿದೆ, ತಪ್ಪು ಅಧಿಕ. ಇದೇ ಪುಸ್ತಕದಲ್ಲಿ ರಾವಣೋದ್ಭವಪ್ರಸಂಗ, ಪುತ್ರಕಾಮೇಷ್ಟಿ, ಚಿಕ್ಕ ಪಟ್ಟಾಭಿಷೇಕ, ಚೂಡಾ ಮಣಿಪ್ರಸಂಗ, ಸೇತುಬಂಧನಪ್ರಸಂಗ, ಅಂಗದ ಸಂಧಾನ, ರಾವಣನ ಕಥೆ, ವೆಂಕಟೇಶಶತಕ ಎಂಬ ಕೃತಿಗಳಿವೆ.

1531

ಕೆ. ಬಿ. ೩೬೭/೨	**ವಾಲಿ ಸುಗ್ರೀವರ ಕಾಳಗ**	ಯಕ್ಷಗಾನ
೮.೫″ × ೬.೮″	?	?
೭೯–೧೧೧ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಾಮಃ। ರ್‍ರಾಮಾಯಣದೊಳಗಣ ವಾಲಿ ಸುಗ್ರೀವರ ಕಾಳಗ ಬರೆಯುವದಕ್ಕೆ ನಿರ್ವಿಘ್ನಮಸ್ತೂ ॥

ವಾರ್ಧಿಕ್ಯ ॥ ಮುನಿಪ ಕೇಳ್ಮೈ ಮುಂದೆ ರಾಮಲಕ್ಷ್ಮಣರುಗಳು
ವನ ಪಂಚವಟಿಯೊಳಃದೇನ ಮಾಡಿದರು ಶೂ
ರ್ಪನಖಿ ಮತ್ತೇನಾದಳೆಂಬ ವಿವರವನು ಮನತ್ತಿಳಿವಡುಸುರೆಂನ್ನುತ್ತಾ
ತನೆಯರೀರ್ವರು ಕರವ ಮುಗಿದು ಬೇಸಗೊಳಲು
ಮುನಿ ವಿನೆಯದಿಂ ಬಾಲಕರ ತೆಗೆದಪ್ಪಿ ಮಂನಿಸುತ
ಗುಣದಿಂದ ಪೇಳಿದನು ಮುಂದಣ ಪ್ರಸಂಗಗ ವನಜನಾಭನ ಚರಿತವಾ ॥

ರಾಗ । ಸಾವೇರಿ । ಅಷ್ಟಾತಾಳಾ ॥
ತನೆಯರ ಕೇಳ್ದುಡದೊಳಗಂದೂ
ಶೂರ್ಪನಕಿಯು ತಂನಂತ್ತರಂಗದಿ ನೊಂದೂ
ಯಿನಿತಾದ ವೃತ್ತಾಂತಗಳಂದೂ
ರಾವಣನಿಗೆ ಹೋಗಿ ಪೇಳುವೆನೆಂದೂ ॥

ಅಂತ್ಯ : ವಾರ್ಧಿಕ್ಯ ॥ ಕುಶನೆ ಕೇಳಿಪ್ಪತ್ತೈದುದಿನ ಕಿಷ್ಕಿಂಧ ಪರ್ವ
ತದಿ ನಿಲಲು ಮಳೆಗಾಲ ಬಂತೆಂದು ವಾನರ
ಸೈಂನ್ಯಮಂ ಕಳುಹಂ ನಾಲ್ಕು ತಿಂಗಳಮೇಲೆ ಬರುವ ತಾಹಗಳ ಮಾಡೀ
ತರಣಿನಂದನನ ಬೀಳ್ಕೊಂಡು ರಾಮನು ಸಹೋ
ದರ ಸಹಿತ ನಡೆತಂದು ಶ್ರಾವಣ ಪರ್ವತದಲ್ಲಿ
ಯಿರುವರೆಂಬಲ್ಲಿಗಾಯ್ತು ಸಂದಿ ಕಣ್ವಪುರದ ಶ್ರೀ ಕೃಷ್ಣಾನ ಕಟಾಕ್ಷ
ದಿಂದಾ ॥೨೮॥

ವಿಷಯ : ರಾಮಾಯಣದ ಕಿಷ್ಕಿಂಧಾಕಾಂಡದ ಕಥೆ.

ವಿಶೇಷ : ಗ್ರಂಥವು ಶಿಥಿಲವಾಗಿದೆ. ಅಲ್ಲಲ್ಲಿ ಹುಳು ತಿಂದಿದೆ. ಬಭ್ರುವಾಹನನ ಕಾಳಗವೆಂಬ ಗ್ರಂಥದ ಒಂದೇ ಒಂದು ಪತ್ರ ಈ ಗ್ರಂಥಕ್ಕೆ ಮೊದಲಿನಲ್ಲಿದೆ. ಅಲ್ಲದೆ ರುಕ್ಮಿಣೀಸ್ವಯಂವರ ಮತ್ತು ಚೂಡಾಮಣಿಯೆಂಬ ಎರಡ ಗ್ರಂಥಗಳಿವೆ.

1532

ಕೆ. ಬಿ. ೩೯೧	**ವಾಲಿಸುಗ್ರೀವರ ಕಾಳಗ**	ಯಕ್ಷಗಾನ
೭.೭″×೬″	?	?
೨೮ ಪತ್ರ	೨೧ ಪಂಕ್ತಿ	೧೫ ಅಕ್ಷರ

ಆದಿ : ರಾಮಾಯಣದೊಳಗಣ ವಾಲಿಸುಗ್ರೀವರ ಕಾಳಗ ಬರಿಯುವುದಕ್ಕೆ ಶುಭಮಸ್ತು.

ವಾರ್ಧಿಕ ॥ ಮುನಿಪ ಕೇಳ್ಳೆ ಮುಂದೆ ರಾಮಲಕ್ಷ್ಮಣರುಗಳು
ವನ ಪಂಚವಟಿಯೊಳಂದೇನ ಮಾಡಿದರು ಶೂ
ರ್ಪನಖಿ ಮತ್ತೇನಾದಳೆಂಬ ವಿವರವನಂದು ಮನ ತಿಳಿವಡುಸುರೆಂನುತಾ
ತನೆಯರೀರ್ವರು ಕರವ ಮುಗಿದು ಬೆಸಗೊಳಲು ಮುನಿ
ವಿನೆಯದಿಂ ಬಾಲಕರ ತೆಗದಪ್ಪಿ ಮಂನಿಸುತ
ಗುಣದಿಂದ ಪೇಳಿದನು ಮುಂದಣ ಪ್ರಸಂಗಗಳ ವನಜನಾಭನ ಚರಿತವಾ
॥೧॥

ರಾಗ ಸಾವೇರಿ ಅಷ್ಟ.
ತನೆಯರು ಕೇಳ್ ದೃಢದೊಳಗಂದೂ
ಶೂರ್ಪಾನಖಿಯು ತಂನಂತರಂಗದಿನ್ನೊಂದೂ
ಯಿನಿತಾದ ವೃತ್ತಾಂತಗಳನಂದೂ
ರಾವಣನಿಗೆ ಹೋಗಿ ಹೇಳುವೆನೆಂದೂ ||೨||

ಅಂತ್ಯ : ವಾರ್ಧಿಕ || ತರಳ ಕೇಳಿಪತ್ತು ಐದುದಿನ ಕಿಷ್ಕಿಂಧ ಪರ್ವತದಿ
ನಿಲಲು ಮಳೆಗಾಲ ಬಂತೆಂದು ವಾನರ ಶೂಂನ್ಯಮಂ ಕಳುಹಿ
ನಾಲ್ಕು ತಿಂಗಳ ಮೇಲೆ ಬರುವ ತಾಹಗಳ ಮಾಡೀ
ತರಣಿನಂದನನ ಬೀಳ್ಕೊಂಡು ರಾಮನ ಸಹೋ
ಧರ ಸಹಿತ ನಡೆತಂದು ಶ್ರವಣ ಪರ್ವತದಲ್ಲಿ
ಯಿರುವರೆಂಬಲ್ಲಿಗಾಯಿತು ಸಂಧಿ ಕಣ್ವಪುರ ಕೃಷ್ಣನ ಕಟಾಕ್ಷದಿಂದಾ ||೩೦೩||
ವಾಲಿ ಸುಗ್ರೀವರ ಕಾಳಗ ಸಂಪೂರ್ಣ.

ವಿಷಯ : ರಾಮಾಯಣದ ಕಿಷ್ಕಿಂಧಾಕಾಂಡದ ಕಥೆ.

ವಿಶೇಷ : ಪತ್ರಗಳಿಗೆ ಕ್ರಮಾಂಕ ಹಾಕಿರುವುದಿಲ್ಲ. ಕಾಗದ ತೆಳುವು. ಅಕ್ಷರಗಳು ಸ್ಫುಟವಾಗಿವೆ. ಪುಸ್ತಕದ ಕೊನೆಯಲ್ಲಿರುವ ಮೂರು ಪತ್ರಗಳಲ್ಲಿ ಜೋಗುಳ ಮತ್ತು ಇತರ ಕೆಲವು ಹಾಡುಗಳಿವೆ.

1533

ಕೆ. ೫೩೮	**ವಾಲ್ಮೀಕಿ ರಾಮಾಯಣ**	ಭಾಮಿನೀಷಟ್ಪದಿ
೨೦"×೨.೩"	?	?
೧–೧೮೦ ಪತ್ರ	೧೧ ಪಂಕ್ತಿ	೪೦ ಅಕ್ಷರ

ಆದಿ : ವಾಲ್ಮೀಕಿ ರಾಮಾಯಣ ಬರವುದಕೆ ಶುಭಮಸ್ತು ||

ಪಲ್ಲಾ || ಕುಶಲ ಭೂಪನ ಮಗಳ ನಿಶಿಯೊಳು
ದಶಶಿರನು ಪರಿತಂದು ಉದಧಿಯ
ಬಸುರೊಳಿಡೆ ವಿಧಿವಶದೊಳಾದುದು ಮದುವೆ ದಶರಥಗೆ ||
ಪದಾ || ಸುರಪತಿಗೆ ಜನಿಶಿದನ ಕಂದನ
ಲರಶಿಯುವ್ವೆಯ ಬೆಂನ ಬಂದನ
ಹರಿಯ ಬಿಗಿದನ ತಾಯ ಸವತಿಯೊಳ್ಲನಿಶಿದನ ಸುತನಾ

ಹಿರಿದು ಸಲಹಿದಗುದಿಶಿದಾತನ
ಕರದಲವಚಿಯೆ ಯಿರಿದ್ದನಂಣನ
ಶಿರವನರಿದನ ಸಖನ ಹಿರಿಯ ಕುಮಾರಗೆರಗುವೆನು ||೧||

× × × ×

ಜೈಯಲಾಗದು ಬಲ್ಲ ಕವಿಗಳು
ಸಯಿಸಲೆಂದೆಂಬುದನು ನೋಡದೆ
ಹುಯ್ಯಲಿಕ್ಕುವ ಕಕ್ಕುಲಿಯ ನಾನರಿಯೆ ಪರಮೇಷ್ಠಿ
ಅಯ್ಯನಿಂದಾನೊರವೆ ನಿತರದ
ದೃವವನು ನಾ ಬಲ್ಲನೇ ಸ್ಮರ
ನ್ಯಯ ಸಾಕ್ಷಾದ್ವರದ ವಿಠಲ ಕರ್ತವೀ ಕೃತಿಗೆ ||೭||

ಅಂತ್ಯ : ಯಿದು ಸಕಲ ಪೌರಾಣ ವೇದದ
ಹೃದಯ ವರವಾಲ್ಮೀಕಿ ವಿರಚಿತ
ಯಿದರ ಮಹಿಮೆಯ ಬಲ್ಲನೀಶ್ವರನುಳಿದ ಮಾತೇನೂ
ಹಲವು ಕರ್ಮದ ಕೊರಳ ಕತ್ತಿಗೆ
ಕಲಿಮಲಾರ್ಣವ ಬಡಭ ಪುಂಣ್ಯದ
ಫಲವು ಸುಕೃತದ ಫರಿಜ ಭಾಗ್ಯದ ಬೆಳಸು ಕೋವಿದರಾ ||೬೫||

× × × ×

ಕೇಳಿದರೆ ಸಾಕಖಿಳ ದೋಶ ಕ
ರಾಳವಿಶ ಗಾರುಡವು ತಪವೀ
ತಾಳಿಸಿತೆ ಮನ ರಾಮನಾಮವ ಮರೆಯದಿರಿಯಂದಾ ||
ವಾಣಿ ಕೃಷ್ಣನ ರಾಣಿ ಸೌಭಾ
ಗ್ಯವನು ದ್ರುತಕಲ್ಯಾಣಿ ಮನು ಯಿಂ
ದ್ರಾಣಿ ಭೋಗವನೂ
ಕ್ಷೋಣಿಯಂ ಘನಥೈರ್ಯರ್ಯ ದಿವಿಜ
ಶ್ರೇಣಿ ದೀರ್ಘಾಯುವನು ಮುದದಿಂ
ಮಾಣದೀಯಲಿ ನಿಮಗೆ ನಮಗಾಚಂದ್ರಾರ್ಕಪರಿಯಂತ್ರಾ ||೬೩||

ಅಂತು ಸಂಧಿ ೫೦ಕಂ ಪದ ೩೨೯೯ಕ್ಕಂ ಮಂಗಳಮಹಾ ಶ್ರೀ || ಯಿಾ ರಾಮಾಯಣ ರಾಕ್ಷಸ ಸಂವತ್ಸರ ಜೇಷ್ಠ ಬ ೬ ಯೂ ಗುರುವಾರ ಪ್ರಾರಂಭಾ ನಳ ಸಂವತ್ಸರ ಶ್ರಾವಣ ಶು ೧೩ ಯು ಗುರುವಾರಕ್ಕೆ ಬರದು ಮುಗಿಶಿದ್ದು ರಾಮಾಯಣದ ಪುಸ್ತಕಕ್ಕೆ ಆಚಂದ್ರಾರ್ಕಮಸ್ತು.

ವಿಷಯ : ಶ್ರೀಮದ್ರಾಮಾಯಣದ ಕಥೆ.

ವಿಶೇಷ : ಪ್ರತಿ ಪತ್ರದಲ್ಲೂ ಪಂಕ್ತಿಗಳಿಗೆ ೧ ರಿಂದ ಕ್ರಮಾಂಕವಿದೆ.

1534

ಕೆ. ಬಿ. ೪೭೭ **ವಾಸವದತ್ತಾವೃತ್ತಂ** ನಾಕಟ

೮.೩"×೬.೫" ವೆಂಕಟರಾಯ ಆಧುನಿಕ

೧–೮೭ ಪತ್ರ ೧೫ ಪಂಕ್ತಿ ೧೫ ಅಕ್ಷರ

ಆದಿ : ವೇಂಕಟರಾಯಕವಿ ವಿರಚಿತಂ ವಾಸವದತ್ತಾವೃತ್ತಂ ಪ್ರತಿಜ್ಞಾ ಯೌಗಂಧರಾಯಣಂ(ಪೂರ್ವ ವೃತ್ತಂ)ಸ್ವಪ್ನವಾಸವದತ್ತಂ(ಉತ್ತರ ವೃತ್ತಂ)

ಮುನ್ನುಡಿ : ಭಾಸನ ರೂಪಕಂಗಳೊಳ್ ವಾಸವದತ್ತ ಪ್ರಕರಣಂಗಳೆ × × ×
ಇತಿ ಹನೂರ್ಮಾ ವೇಂಕಟರಾಯ ಕವಿ, ಬೆಳ್ಳಾವೆ ವಾಸವದತ್ತಾ ವೃತ್ತ
ದೊಳ್ ಪಾತ್ರಂಗಳ್ × × ×
(ನಾಂದ್ಯಂತದೊಳ್ ಸೂತ್ರದಾರಂ ಪ್ರವೇಶಿಪಂ)

ಸೂತ್ರಧಾರಂ—ಕಂ॥ ಪಾಲಿಕ್ಕೆಮ್ಮಂ ವಾಸವ
ದತ್ತಾಯಂ ವತ್ಸರಾಜನೊಲವಿಂದೆ ಮಹಾ
ಸೇನಂ ವಿಲಸದ್ವಿಕ್ರಮ
ಯೌಗಂಧರಾಯನಾತತಣಾದೃತವಿಭವಂ ॥೧॥
(ಮುಂದೆವಂದು ಪೂವಲಿಗೆದರಿ ತೆರೆಯತ್ತಲಭೀಕ್ಷಿಸುತ್ತೆ)
ಆರ್ಯೇ । ಇತ್ತಲೆಳ್ತರ್ಪುದು.

ಅಂತ್ಯ : ಕಂ॥ ಧರೆಯಯನಗತಿಯನರಿವಿಂ
ದರಿಗೆಮ ವಿಬುಧರ್ ವಿಶೇಷಮುರ್ವುಗೆ ಬೆಳಸಿಂ
ವಲಮುರ್ವಿರಾಜಸಿಂಹಂ
ಕ್ಷಿತಿತಲಮಂ ಸತ್ಯದಿಂದೆ ಸಲಪುಗೆ ಸತತಂ ॥೧೯॥
(ಎಂದೆಲ್ಲರುಂ ಪೋಪರ್) (ಷಷ್ಠಾಂಕಮಿದು) (ಇಂತುತ್ತರ ವೃತ್ತಂ)
(ಸ್ವಪ್ನವಾಸವದತ್ತಂ) (ಯವನಿಕಾ ಪತನಂ) (ಕವಿವಾಕ್ಯಂ)

ಕಂ ॥ ಭಾಸನ ದುಷ್ಕವಿಕುಲ ಸಂ
ತ್ರಾಸನ ಶೃಂಗಾರ ರೂಪಕಂ ವಲಮೆನಿಪಾ
ವಾಸವದತ್ತಾವೃತ್ತಮ
ನೋಸರಿಸದೆ ಮೂಲಕೃತಿಗೆ ಪಳಗನ್ನಡದೊಳ್ ॥೨೦॥

ಕಂ ॥ ನೆಗಳ್ದಂ ಭಾರದ್ವಾಜ
ಪ್ರಬುದ್ಧಗೋತ್ರಂ ಹನೂಮದಾತ್ಮಜನೊವಜಂ
ವರಶಾಶಾತ್ತ್ರಾದ ಶ್ರೀವೈ
ಷ್ಣವಕುಲಜಂ ವೇಂಕಟಾರ್ಯಕವಿ ಕವಿರಾಜಂ ॥ ೨೧ ॥
(ಸಮಾಪ್ತಂ ವಾಸವದತ್ತಾವೃತ್ತಂ)

ವಿಷಯ : ಸ್ವಪ್ನವಾಸವದತ್ತದ ಕಥೆ.

ವಿಶೇಷ : ಆಧುನಿಕ ನಾಟಕ. ಇಲ್ಲಿಯ ಪದ್ಯಗಳಲ್ಲಿ ಕೆಲವೆಡೆ ಪ್ರಾಸವಿಲ್ಲದಿರುವುದನ್ನು ಗಮನಿಸಬಹುದು.

1535

ಕೆ. ೪೩/೨	**ವಾಸುದೇವ ಪಾರಿಜಾತ**	ಯಕ್ಷಗಾನ
೧೦.೩"×೨.೧"	ಚಂದ್ರಸಾಗರವರ್ಣಿ	ಸು. ೧೮೦೦
೨೩–೫೯ ಪತ್ರ	೧೨ ಪಂಕ್ತಿ	೫೦ ಅಕ್ಷರ

ಆದಿ : ಶ್ರೀ × × ವಸದೇವ ಪಾರಿಜಾತಾ.

ವೃ ॥ ಶ್ರೀಮಚ್ಚ್ಛಾರುರವಾಮನೋಹರನಜಂ ತ್ರೈಲೋಕ್ಯಪೂಜ್ಯಾನಜಂ
ಕಾಮಾರ್ಥಂ ಕವಿಕಲ್ಪಭೂರುಹನಜಂ ಭವ್ಯೈಕಪ್ರಾಪ್ತಾನಂಜಂ
ಕಾಮಾಂಧಗ್ರಹರಾಜರಾಜಿತನಜಂ ಕರ್ಮಾಷ್ಟದಾಹಂನಜಂ
ಶ್ರೀಮಚ್ಚಂದ್ರ ಜಿನೇಂದ್ರ ಪಾವನನಜಂ ವಂದೇ ಸುಪದ್ಮಾನಜಂ ॥

× × × ×

ಕಂದ ॥ ವಂದಿಸಿ ಅರುಹನ ಶಾರದೆ
ದಿಂದಂ ಶಾರದೆಯ ಭಜಿಸಿ ನಿರ್ವಿಘ್ನಕೆ ಮುದ
ದಿಂದಂ ವಸುದೇವನ ಬಾ
ಲ್ಯಂದದ ಶ್ರೀಪಾರಿಜಾತ ವಿರಚನಗೈವೇಂ ॥ ೧ ॥
ಕಾಮುಖಿಯ ಭರವನಾಶ್ರೈ
ತಾ ಮನೋಹರನಂತೆ ಯಿಾಗಲೀ ಕೃತಿಯಲ್ಲಕೆ
ಪ್ರೇಮವನೀವೊಲ್ ರಚನೆಯ
ನೇಮಿಸೆ ಸರಸದಲಿ ಚಂದ್ರಸಾಗರವರ್ಣೀ ॥ ೨ ॥

ಅಂತ್ಯ : ನೊಸಲಭೂಷಣ ಕರ್ನಕೆಸೆದೆ ಶೃಂಗರ ಜ ಕೆ
ಗೆಸೆದ ಮಂಗಲ ಮಂಗಳಾಂಗಿಯರೂ
ವಸುದೇವ ರೋಹಿಣಿ ಬಿಸಜವದನೆಗತಿ
ಕುಶಲಗಾತಿಯರಾರತಿಯೆತ್ತಿರೆ ॥ ೩ ॥

ಗದ್ಯಾ ॥ ಯಿದು ವಿದಮರೇಂದ್ರ ಮುಗುಟ × × × ಶ್ರೀ:ಚಂದ್ರಸಾಗರವರ್ಣಿ ವಿರಚಿತಮಪ್ಪ ವಸುದೇವ ಪಾರಿಜಾತದೊಳು ರೋಹಿಣಿ ಸ್ವಯಂವರ ಸಂಪೂರ್ಣ ಮಂಗಳ ಮಹಾ. ಸರ್ವಜಿತು ಸಂವತ್ಸರದ ಮಾಘ ಶು. ೮ ಲ್ಲು ಚಂದ್ರಸಾಗರವರ್ಣಿಯು ನಮ್ಮ ಪುಟ್ಟತಿಮ್ಮಪ್ಪಗೆ ಬರಕೊಟ್ಟ ಚಂದನೆಯ ಕಥೆ.

ವಸುದೇವ ಪಾರಿಜಾತ ಮಂಗಳ ಮಹಾ

ವಿಷಯ : ಕೃಷ್ಣನು ಪಾರಿಜಾತವನ್ನು ತಂದ ಕಥೆ.

ವಿಶೇಷ : ಇದರೊಂದಿಗೆ ಚಂದನೆ ಕಥೆ ಎಂಬ ಗ್ರಂಥವೂ ಇದೆ.

1536

ಕೆ. ೫೮/೧	**ವಾಸುದೇವ ಪಾರಿಜಾತ**	ಯಕ್ಷಗಾನ
೭.೭"×೧.೮"	ಚಂದ್ರಸಾಗರವರ್ಣಿ	ಸು. ೧೮೦೦
೧–೫೧ ಪತ್ರ	೧೦ ಪಂಕ್ತಿ	೪೨ ಅಕ್ಷರ

ಆದಿ : ಶ್ರೀ × × ವಸುದೇವ ಪಾರಿಜಾತ ಬರೆವುದಕ್ಕೆ ಶುಭಮಸ್ತು.
ವೃ ॥ ಶ್ರೀಮಚ್ಚಾರುರಮಾಮನೋಹರನಜಂ ತ್ರೈಲೋಕ್ಯಪೂಜ್ಯಾನಜಂ
ಕಾಮಾರ್ಥಂ ಕವಿಕಲ್ಪಭೂರುಹನಜಂ ಭವ್ಯೈಕಪ್ರಾಪ್ತಾನಜಂ
ಕಾಮಾಂಧಗ್ರಹರಾಜರಾಜಿತನಜಂ ಕರ್ಮಾಷ್ಟದಾಹಂ ನಜಂ
ಶ್ರೀಮಚ್ಚಂದ್ರಜಿನೇಂದ್ರ ಪಾವನನಜಂ ವಂದೇ ಸುಪದ್ಮಾನಜಂ ॥

× × × ×

ಕಂ ॥ ವಂದಿಸಿ ಅರುಹನ ಶಾರದೆ
ಹಿಂದಂ ಗಣಧರರ ಭಜಿಸಿ ನಿರ್ವಿಘ್ನಕೆ ಮುದ
ದಿಂದಂ ವಸುದೇವನ ಬಾ
ಲ್ಯಂದದ ಶ್ರೀಪಾರಿಜಾತ ವಿರಚನೆಗೈವೇಂ ॥ ೧ ॥

ಕಾಮುಖಿಯ ಭರನನಾಶ್ರೈ
ತಾ ಮನೋಹರನಂತೆ ಯೊಗಲೀ ಕೃತಿ ಸರ್ವಕೆ
ಪ್ರೇಮುವನೀವೊಲ್ ರಚನೆಯ
ನೇಮಿಸೆ ಸರಸದಲಿ ಚಂದ್ರಸಾಗರವರ್ಣಿ ‖ ೨ ‖

ಅಂತ್ಯ : ನೊಸಲ ಭೂಷಣ ಕರ್ನಕೆಸೆವ ಶೃಂಗಾರ ಜಡೆ
ಗೆಸೆವ ಮಂಗಳ ಮಂಗಳಾಂಗಿಯರು
ವಸುದೇವ ರೋಹಿಣಿ ಬಿಸಜವದನೆಗತಿ
ಕುಶಲಗಾತಿಯರಾರತಿಯತ್ತರೆ ‖ ೩ ‖

ಗದ್ಯಾ ‖ ಯಿದುವಿದಮರೇಂದ್ರ ಮಗುಟತಟಘಟಿತ ಮಣಿಗಣಕಿರಣಮಾಲಾ ಪ್ರಬಂಧ × × × × ಶ್ರೀಮಚ್ಚಂದ್ರಸಾಗರವರ್ಣಿ ವಿರಚಿತಮಪ್ಪ ವಸುದೇವ ಪಾರಿಜಾತದೆಳ್ರೋಹಿಣಿ ಸ್ವಯಂವರಂ ಸಂಪೂರ್ಣಂ ಶ್ರೀ‖ ಸಂ‖ ನಿಜ ಶ್ರಾವಣ ಶು ೧೦ ವರೆಗೆ ಚಂದ್ರಸಾಗರವರ್ಣಿ ನರಸಿಂಹಪುರದ ಕುಮ್ಮಜ್ಜಗೆ ಬರಕೊಟ್ಟ ವಸುದೇವ ಪಾರಿಜಾತಂ ಸಂಪೂರ್ಣಃ.

ವಿಷಯ : ಕೃಷ್ಣನು ಪಾರಿಜಾತ ಪುಷ್ಪವನ್ನು ತಂದ ಕಥೆ.

ವಿಶೇಷ : ೩೪, ೩೮, ೪೩, ೪೫, ೪೬ ಪತ್ರಗಳು ಲುಪ್ತ. ಇದರೊಂದಿಗೆ ಚಂದನೆ ಕಥೆ ಎಂಬ ಗ್ರಂಥವೂ ಇದೆ.

1537

ಕೆ. ೩೪೦	**ವಾಸ್ತುಶಾಸ್ತ್ರ**	ಶ್ಲೋಕ, ಟೀಕು
೮.೭"×೧.೭"	?	?
೧–೬೬ ಪತ್ರ	೬ ಪಂಕ್ತಿ	೩೪ ಅಕ್ಷರ

ಆದಿ : ವಿಳಂಬಿನಾಮ ಸಂವತ್ಸರದ ಕಾರ್ತಿಕ ಬಹುಳ ಪಂಚಮಿ ಸೋಮುವಾರದಲ್ಲು ಪ್ರಾರಂಭ ಜಲವಾಸ್ತು ಬರೆಯುವದಕ್ಕೆ ಶುಭಮಸ್ತು. ವಿಶ್ವಕರ್ಮಶಾಸ್ತ್ರದಲ್ಲಿ ಜಲಪರೀಕ್ಷೆ ನಿರ್ನಯಾ.

ಶ್ಲೋಕ ‖ ಆಚಾರ್ಯೇಣ ನಮಸ್ಕೃತ್ವಾ ಜಲಾರ್ಥಂ ಕಲ್ಪಿತಂ ಬುಧೈ ।
ಕರ್ಕಿತಂ ತುಲವಾಪೀ ವೃಚ್ಚಿಕಂ ನಕ್ರಮೀನಕಂ ‖

ಟೀಕು ‖ ಜಲದಿಯ ಭಯಸುವರು । ಆಚಾರ್ಯಷ್ಟದೇವತೆಗಳಿಗೆ ನಮಸ್ಕರಿಶಿ ಕರ್ಕಾಟಕ ಕನ್ಯ ತುಲ ಮಖರ ವೃಶ್ಚಿಕ ಮೀನ । ಯಿ ರಾಶಿಯಲ್ಲು ಶುಭಯಂಬುವದು.

ಅಂತ್ಯ : ಶ್ಲೋ॥ ಹಿಕ್ಕಾ ಸೂತ್ರವಕೊ ಬಾಹುದೀರ್ಗಂ ಚ ದ್ವಿಂ ಚದಂಗುಲಂ ।

× × × ×

ಸಾರ್ಥಪಂಚಾಂಗುಲಾಯಾಮಂ ತರ್ಜನಾಮಿಕಾಯಾಂತ್ತು ।
ಕನಿಷ್ಠಾಂಗುಲ್ಯಾಯಂಚ ವೇದಮಾತ್ರಂ ಪ್ರಚಚ್ಯತೇ ॥

ಟೀ ॥ ಹಿಕ್ಕಾಸೂತ್ರದಿಂದ ಬುಜದ ನಿಡುಪು ಮೊಣಕೈಯ್ಯ ಪರಿಯಂತ್ತರಕ್ಕು । ೨೬ ಅಂಗುಲ । ಹಸ್ತದಿಂದ ಮೊಣಕೈಯ್ಯಪರಿಯಂತ್ತರಕ್ಕು । ೨೦ ಅಂಗುಲ ಹಸ್ತದ ನಿಡುಪು । ನಡುವಿನ ಬೆರಳಿನ ಕೊನೆತನಕ । ೧೩ ಅಂಗುಲ । ನಡುವಿನ ಬೆರಳಿನ ನಿಡುಪು ೬ ಅಂಗುಲ । ಅಂಗೈಯ್ಯ ನಿಡುಪು ೭ ಅಂಗುಲ । ಹೆಬ್ಬೆರಳಿನ ನಿಡುಪು ೭ ಅಂಗುಲ ॥ ಶ್ಲೋ ॥

ವಿಷಯ : ಮನೆಯನ್ನು ಕಟ್ಟಲು ಉಪಯುಕ್ತವಾದ ವಿಷಯಗಳನ್ನು ತಿಳಿಸುವ ಶಾಸ್ತ್ರ.

ವಿಶೇಷ : ಅಶುದ್ಧ ಮತ್ತು ಅಸಮಗ್ರ ಪ್ರತಿ. ಲಿಪಿದೋಷ ಅಧಿಕ. ಮಧ್ಯದಲ್ಲಿ ಕೆಲವು ಪದ್ಯಗಳಿವೆ. ವಿಶ್ವಕರ್ಮ ಮತ್ತು ಸನತ್ಕುಮಾರ ಇವರಿಬ್ಬರ ವಾಸ್ತುಗ್ರಂಥದ ಆಧಾರದಮೇಲೆ ಈ ಕೃತಿಯನ್ನು ರಚಿಸಿರುವಂತೆ ತಿಳಿದು ಬರುತ್ತದೆ. ಪ್ರತಿಪತ್ರದ ಸಾಲುಗಳಿಗೂ ಕ್ರಮಾಂಕವಿದೆ.

1538

ಕೆ. ಎ. ೧೨೨	**ವಿಕ್ರಮವಿಲಾಸ**	ಸಾಂಗತ್ಯ
೧೩.೧"×೪.೨"	ವೀರರಾಜ	ಸು. ೧೬೫೦
೧–೩೯ ಪತ್ರ	೩೨ ಪಂಕ್ತಿ	೩೨ ಅಕ್ಷರ

ಆದಿ : ವಿಕ್ರಮವಿಲಾಸ ಸೊಬಗಿನ ಸೋನೆ.
ಶ್ರೀ ನಗರಾಜನುತಾನನ ವಾರಿಜ
ಭಾನು ಭಜಕ ಸುರದೇನು
ಆನಂದಪೂರ್ಣ ಸುಖಾನುಸಂಪದವನು
ನೀನು ಕರುಣಿಸು ವಿರುಪಾಕ್ಷಾ ॥ ೧ ॥

× × × ×

ಬೆಳಗೊಡ ಹುಚ್ಚ ಭೂಪಾಲಚಂದ್ರನ
ತಿಲಕ ಹಾಲೇಂದ್ರನರ್ಧಾಂಗಿ
ಲಲನೆ ಮಲ್ಲಾಂಬಿಕೆಯ ವರಸುತ ವೀ೧ ಜನಪತಿ
ಯೊಲಿದು ರಚಿಪನೀ ಕೃತಿಯಾ ॥ ೨೧ ॥

ಅಂತ್ಯ : ಯಿಾ ಶಿವಶರಣನ ಕೃತಿಯ ಕೇಳ್ವರ ಕೈ
ಲಾಸ ನಿವಾಸ ಮಹೇಶಾ
ಲೇಸಿತ್ತು ಸಲಹೂವನೆಂದು ತ್ರೈವಿಂಶತಿ ವಿ
ಲಾಸದ ಸಂದಿ ಸಂಪೂರ್ನಾ ॥ ೧೦೫ ॥
ಅಂತು ಸಂದಿ ೨೩ಕಾಂ ಪದನೂ ೧೬೨೧ಕಂ ಮಂಗಳ ವಿಕ್ರಮವಿಲಾಸ ಸಂಪೂರ್ನ.

ವಿಷಯ : ವಿಕ್ರಮಾಂಕನ ಕಥೆ.

ವಿಶೇಷ : ಮೋಡಿ ಅಕ್ಷರ.

1539

ಕೆ. ಬಿ. ೨೫೯	**ವಿಘ್ನೇಶ್ವರ ವ್ರತಕಲ್ಪ**	ಗದ್ಯ
೭.೯"×೬.೬"	ಕಳಲೆ ನಂಜರಾಜ	೧೭೪೦
೧–೧೩ ಪತ್ರ	೨೫ ಪಂಕ್ತಿ	೩೨ ಅಕ್ಷರ

ಆದಿ : ವಿಘ್ನೇಶ್ವರವ್ರತಕಲ್ಪ ಕಳುಲೆ ನಂಜರಾಜ ವಿರಚಿತ ಟೀಕು ವಚನ. ಪೂರ್ವದಲ್ಲಿ ಕೈಲಾಸಪರ್ವತದಲ್ಲಿ ಪರಮೇಶ್ವರನ ದರುಶನಾರ್ಥವಾಗಿ ಬಂದು ಯಿರುವ ಸನತ್ಕುಮಾರ ಮಹಾಮುನೀಶ್ವರರು ನಂದಿಕೇಶ್ವರರಂ ಕಂಡು ಸಾಷ್ಟಾಂಗ ನಮಸ್ಕಾರಗಳಂ ಮಾಡಿ ಭಕ್ತಿಪೂರ್ವಕವಾಗಿ ಸ್ತೋತ್ರಗಳಂ ಮಾಡಿ ಸರ್ವಲೋಕೋಪಕಾರಾರ್ಥವಾಗಿ ಸರ್ವ ವಿಘ್ನವನ್ನು ಪರಿಹರಿಸುವಂತ್ಥಾ

ಅಂತ್ಯ : ಯಾವ ಕಾರ್ಯಗಳ ಕುರಿತಾಗ್ಯು ಕ್ಷಿಪ್ರದಲ್ಲಿ ಕೈಸೇರುವದೂ ನಾನಾ ವಿಧವಾದ ಅಪವಾದಗಳು ಬರುವದಿಲ್ಲ. ಯಿದರಿಂದ ಜ್ಞಾನವುಂಟಾಗುವದೂ ಮೋಕ್ಷವುಂಟಾಗುವದು । ಮೃತ್ತಿಕೆಯಿಂದಾ ಮಾಡಿಸಿದ ವಿನಾಯಕಗೆ ಯಾವ ಜಾತಿಯುವರಿಗಾದರು ಪ್ರಮಾಣಕೆ ಕೆಲಸವಿಲ್ಲ ಯಷ್ಟು ಪ್ರಮಾಣದಲ್ಲಿ ಮಾಡಿದ ವಿನಾಯಕನಾಗಲಿ ಪೂಜಿಸಬಹುದೂ ಶ್ಯಮಂತಕೋಪಖ್ಯಾನ ಸಂಪೂರ್ನ.

ವಿಷಯ : ಗಣೇಶವ್ರತ.

ವಿಶೇಷ : ಸಣ್ಣಕ್ಷರ.

1540

ಕೆ. ಬಿ. ೨೫೬	**ವಿಜಯೆಕುಮಾರನ ಕಥೆ**	ಯಕ್ಷಗಾನ
೭.೮″×೬.೫″	ಪದ್ಮರಾಜ ಪಂಡಿತ	೧೯ನೆಯ ಶತಕ
೧–೧೮ ಪತ್ರ	೨೫ ಪಂಕ್ತಿ	೩೨ ಅಕ್ಷರ

ಆದಿ : ವಿಜಯಕುಮಾರನ ಕಥೆ. ಯಕ್ಷಗಾನ × × ಶುಭಮಸ್ತು । ಕಂದಪದ್ಯ .
ಶ್ರೀ ಸುರಫಣಿವಂದಿತ ಪದ
ಪೂಸರಮುದಭಂಗ ಸರ್ವರಕ್ಷಾಕರ ಪದ
ವಾಸವ ವಿನಮಿತ ಜಿನಪದ
ಶ್ರೀಸುದತಿಯನಾಳ್ವ ಪದವು ಸಲಹುಗೆ ಯಂಮಂ ॥
ದ್ವಿಪದೇ ॥ ಶ್ರೀ ಪರಮೇಶ ಜಿನೇಶ ರವಿಕೋಟಿಸಂಕಾಶ
ಕಂದರ್ಪಮದದಹನ ಭವರೋಗಭಂಜನ
ಗಂಧರ್ವಾಧಿಪತಿವಂದಿತಪಾದ ದಿವ್ಯಭಾಷಾವಿನೋದ
ಮಂಗಲಾಕಾರ ಸಚ್ಚರಿತಹಾರ
ಸ್ರುಂಗಾರದೂರ ಸದ್ಭಕ್ತಮಂದಾರ
ಮೂಲೋಕಸುಗುಣ ಮುಕ್ತ್ಯಾಂಗನಾರಮಣಾ
ಲೀಲಾವಿಲಾಸ ಶ್ರೀಶಾಂತಿತೀರ್ಥೇಶ
ಸುಜ್ಞಾನಮಂ ಕೊಟ್ಟು ಪ್ರಿಯದಿಂದಲೆಂನ
ಅಜ್ಞಾನಮಂ ಕಳೆದು ಸಲಹೆಂದ ಮುಂನ
ಲೀಲೆಯಿಂ ಶಂಕರನ ಪದಪದ್ಮಗಳನೂ ಆನಂದದಿಂ ನೆನದು ಮನದಲ್ಲಿ ನಾನು
ವೋಲಾಡಿ ಸುಖವಡೆದು ಅರಹನಂ ಭಜಿಪೆ ॥
ಯೇಕತಾಳ ॥ ದೇವರದೇವನ । ದೇವೋತ್ತ್ರಮನ
ಭಾವಜಹರನ ಪಾದವ ನಾನು ನೆನವೆ ॥ ೧ ॥

ಅಂತ್ಯ : ಕಂದಪದ್ಯ ॥ ಶ್ರೀಮದಮರಪತಿ ನಮಿತಂ
ಕಾಮಮದಧ್ವಂಶಿ ಶಾಂತಿ ಜಿನಪತಿಯ ಮಗಂ
ಪ್ರೇಮದೊಳನಂತಸೌಖ್ಯಮ
ಕಾಮಿತಫಲಮಿಾಗೆ ಶುಭಮನೀ ಕೃತಿಗೊಲಿದುಂ ॥ ೧೧ ॥ ಶ್ರೀ ॥
ಅಂತು ವಿಜೆಯಕುಮಾರನ ಕಥೆ ಸಂಪೂರ್ನ ಮಂಗಳ ಮಹಾ ಜಯಮಂಗಳ
ಶುಭಮಂಗಳ ಶ್ರೀ.

ವಿಷಯ : ಜೈನ ಪಂಗಡಕ್ಕೆ ಸೇರಿದ ವಿಜಯಕುಮಾರನ ಕಥೆ.

ವಿಶೇಷ : ಮೋಡಿ ಅಕ್ಷರ. ಈ ಪುಸ್ತಕದಲ್ಲಿ ಕೆ. ಬಿ. ೨೫೭ ನೆಯ ಪರಮಭಕ್ತ ಕವಿಯ ಘೋರಾಸುರನ ಯುದ್ಧವೆಂಬ ಪದ್ಯಕಾವ್ಯವಿದೆ.

1541

ಕೆ. ೧೦ | **ವಿಜಯಕುಮಾರಿಯ ಚರಿತೆ** | ಸಾಂಗತ್ಯ

೬.೫"×೧.೭" | ಶ್ರುತಕೀರ್ತಿ | ೧೫೬೫

೨–೧೨೪ ಪತ್ರ | ೮ ಪಂಕ್ತಿ | ೪೦ ಅಕ್ಷರ

ಆದಿ : ....ತಿ ಬಿದಿಗೆಯ ಚಂದ್ರನಂದದಿ ಪೆಚ್ಚಲೆಂದೂ ॥ ೧೧ ॥
ವೀರಸೇನ ನಯಸೇನ ಶ್ರೀ ಜಿನಸೇನಾ
ರ್ಯರ..........................
........ಜದೊಳಗಿರಲೆಂದು ಸದ್ಭಕ್ತಿಯಿಂ
ಹಾರೈದು ನಾನೆರಗುವೆನೂ ॥

ಅಂತ್ಯ : ಸಂದ ಸಂಸಾರದೊಳಗೆ ರಾಮಚಂದ್ರನು
ಚಂದಣವರ್ಣ್ನ ಕಡೆಯೊಳು
ಸಂದುದು ಕಡೆಯೊಳು ಶ್ರುತಕೀರ್ತ್ತಿ ದೇವರಿಂ
ನೆಂದೆಂಬ ನಾಮ ಲೋಕದೊಳೂ ॥

× × × ×

ಯಿದು ಸಕವರ್ಷ ಸಾವಿರದ ನಾನೂರರಿಂ
ದಧಿಕವೆಂಭತೆಂಟು ಸಲಲೂ
ಆದರೊಳು ಪ್ರಭವದೊಳೀಕಥೆ ಜ್ಯೇಷ್ಟದ
ಬಿದಿಗೆಯ ದಿವಸ ಪ್ರಾರಂಭಾ ॥
ಯಿದು ವಿಭವದೊಳು ವೈಶಾಖ ಬಹುಳದೊಳು
ಪುದಿದ ಪಂಚಮಿಯಾದಿವಾರಾ
ವಿದಿತ ಶ್ರಾವಣದೊಳು ವಿಜಯಕುಮಾರಿಯ
ಸದಮಲ ಚರಿತ ಸಮಾಪ್ತಾ ॥ ೮೫೭ ॥
ಶ್ರೀ ವಿಜಯಕುಮಾರಿಚರಿತಕ್ಕೆ ಮಂಗಲ ಮಹಾ ಶ್ರೀ.

ವಿಷಯ : ವಿಜಯಕುಮಾರಿಯ ಕಥೆ.

ವಿಶೇಷ : ೧ ನೆಯ ಪತ್ರ ಇಲ್ಲ. ೨, ೩, ೫, ೮, ೧೮, ೪೯ ನೆಯ ಪತ್ರಗಳ ಸ್ವಲ್ಪ ಭಾಗಗಳು ಮುರಿದುಹೋಗಿವೆ.

1542

ಕೆ. ಬಿ. ೩೯೫/೨	**ವಿಠೋಬ ಚರಿತ್ರೆ**	ಯಕ್ಷಗಾನ
೭.೬" × ೫.೯"	?	?
೩೩೭–೩೪೧ ಪತ್ರ	೨೨ ಪಂಕ್ತಿ	೨೩ ಅಕ್ಷರ

ಆದಿ : ಸೌರಾಷ್ಟ್ರ–ರೂಪಕ ‖ ಕಮಲನೇತ್ರನಾ ಪದಕೆ ವಂದಿಶೀ
ಸುಮುಶರವ್ವೆಗೇ ಕರವ ಜೋಡಿಶೀ
ಉಮೆ ಸರಸ್ವತಿಗೆರಗಿ ಗಣಪಗೇ
ನಮಿಶಿ ಸಕಲದೇವತೆಗಳಂಘ್ರಿಗೆ ‖ ೧ ‖
ಯಿಷ್ಟದೇವತೆಗೆರಗಿ ಮತ್ತುಲಾ
ಸ್ರೇಷ್ಠರೊಡೆಯನಾ ಭಜಿಶಿ ಪೂಜಿಶೀ
ಕಷ್ಟ ಪರಿಹರೀಸುತ್ತ ಸಲಹುವಾ
ಶ್ರಿಷ್ಟಿಗೊಡೆಯನಾ ಮನದಿ ಧ್ಯಾನಿಶೀ ‖ ೨ ‖
ದುರುಳನೃಪ ಧನಾದಾಸೆಯಿಂದಲೀ
ತರಳ ವಿಪ್ರನಾ ಕಡಿವ ಸಮಯದೀ
ಹರಿಯು ಸಲಹಿದಾ ಚರಿತೆ ಪೇಳ್ವೆ ತಾ
ಫ್ಪಿರಲು ಶೀಲರೋ ತಿದ್ದಿಕೊಂಬುದು ‖ ೩ ‖

ಅಂತ್ಯ : ಕಂದ ‖ ಯಿಂತೀ ಹರಿಚರಿತೆಯೆ ಕೇ
ಳ್ವಂತಾ ಜನಕಾಯು ಶ್ರೀಯುರಾರೋಗ್ಯಗಳಂ
ಮುಂತಾದುದನಿತ್ತಪ ಶ್ರೀ
ಕಾಂತನುಮತಿಕರುಣದಿಂದಲ್ಲುಂ ಸತತದೊಳುಂ ‖ ೭೫ ‖
ನಾದನಾಮಕ್ರಿಯಂ ‖ ಅಷ್ಟ ‖ ಮಂಗಳಂ ‖
ಮಂದರಧರನಿಗೆ ಇಂದಿರೆ ರಮಣಗೆ
ಕಂದನ ಕಾಯ್ದು ಮುಕುಂದನಿಗೆ
ಯಿಂದುಸೇಕರನದಾರ್ಂಗಿ ಸಹೋಧರ
ಕಂದರ್ಪಜನಕ ಸರ್ವೋತ್ತ್ರಮಗೇ ‖
ಮಂಗಳ ಮಂಗಳ ಜಯಮಂಗಳ ‖ ೭೬ ‖

ಪುಂಡರಿಕಾಕ್ಷಗೆ ಪುಂಡಲಿಕ ವರದಗೆ
ಪುಂಡುರಕ್ಕಸರಂನೊಲಿದವಗೆ
ಮಂಡಲದೊಳಗುದ್ದಂಡನೆಂದೆನಿಸುವ
ಪಾಂಡುರಂಗ ಚತ್ತುರಾಕ್ಷಸಗೇ ॥ ೭೭ ॥
ಲೋಕಪಾಲಿಪ ಜಗದೊಡೆಯ ವಿಠಲನಿಗೆ
ಲೋಕನಾಯಕಿ ಶ್ರೀ ರುಕ್ಮಿಣಿಗೇ
ಲೋಕವೆಲ್ಲವ ತಂನುದರದಿ ಧರಿಶಿದ
ವೋಂಕಾರಮೂರ್ತಿಸ್ವರೂಪನಿಗೇ ॥ ೭೮ ॥
ವಿಠೋಬ ಚರಿತ್ರೆ ಸಂಪೂರ್ಣ ಶ್ರೀ.

ವಿಷಯ : ಪಾಂಡುರಂಗ ವಿಠಲನ ವೃತ್ತಾಂತ.

ವಿಶೇಷ : ಈ ಗ್ರಂಥದೊಂದಿಗೆ ಅನಂತನವ್ರತವೆಂಬ ಮತ್ತೊಂದು ಗ್ರಂಥವಿದೆ.

1543

ಕೆ. ೧೪೯	**ವಿದ್ಯಾಮಾಧವೀಯ (ಸಟೀಕು)**	ಶ್ಲೋಕ, ಟೀಕು
೧೭.೫"×೧.೫"	?	?
೧–೪೧ ಪತ್ರ	೭ ಪಂಕ್ತಿ	೬೭ ಅಕ್ಷರ

ಆದಿ : ಓಂ ॥ ಜಯತ್ಯಮೇಯಾಂಶುನಿಧಿರ್ಜಗತ್ರಯಿಾ ಪ್ರಬೋಧಹೇತುಸ್ಸವಿತಾ ತ್ರಯಾಮಯಾ ।
ನ ಸರ್ವದರ್ಶಿತ್ವಮಿತೋ ವಿನಾ ಭವೇದಿತೀವ ಯಂ ನೇತ್ರಮಧತ್ತ ಶಂಕರಃ ॥
ಸವಿತಾ ಜಯತಿ–ಆದಿತ್ಯನು ಯಲ್ಲರಿಂದ ಮೇಲೆ ವರ್ಚಿಸ್ತಾನೆ. ಯಲ್ಲರಿಂದ ವಿಶೇಷವಾವುದೂ ಯಂದರೆ ಹೇಳೀನು । ಜಗತ್ರಯಿಾ ಪ್ರಬೋಧಹೇತುಃ ಯೆಂದು ಭೂಮ್ಯಂತರಿಕ್ಷಗ ಸ್ವರ್ಗವಾಸಿಗಳಾಗುಳ್ಲ ಜಂತುಗಳ ಜ್ಞಾನಕ್ಕೆ ಕಾರಣವಾಗಿಹನು । ಅಮೇಯಾಂಶುನಿಧಿಃ ಯೆಂದು ಅವರಚ್ಛೇದ್ಯಗಳಾಗಿಹ × × × × ಆದಿತ್ಯನು ಕಂಣಾದಕಾರಣ ಯಲ್ಲವನು ಕಾರಣಬಹುದು ಯಂಬುದರಿಂದ ಆದಿತ್ಯನ ಕಣ್ಣಾಗಿ ಧರಿಸ್ತೆಯಂಬದರಿಂದವು ಇ ಮರಿಯಾದೆ ಇಹ ಆದಿತ್ಯನು ಯೆಲ್ಲರಿಂದವೂ ಪ್ರಧಾನವಾಗಿ ವರ್ಚಿಸಾನೆ । ಹೀಗೆ ಇಷ್ಟದೇವತೆಯ ಪ್ರಾರ್ಥನೆಯ ಮಾಡಿ ತನ್ನ ಉಪಕ್ರಮುವ ಹೇಳೀನೂ ॥

ಅಂತ್ಯ : ಋಕ್ಷಸ್ಯ ದಗ್ಧಸ್ಯ ಚರಾಹತಸ್ಯ ಗ್ರಹಸ್ಯ ಮಧ್ಯೆ ವಿಚರನ್ ಹಿಮಾಂಶುಃ ।
ವ್ಯಪೋಹ್ಯ ಪೀಡಾಮಭಿರಕ್ಷತೀದಂ ಬಲೀವ ಹೀನಂ ಬಲಿನೋಪಬುದ್ಧಂ ॥
ದಗ್ಧಸ್ಯ ಋಕ್ಷಸ್ಯ ದಾಹಕಸ್ಯ ಗ್ರಹಸ್ಯ ಮಧ್ಯೆ ವಿಚರನ್ ಹಿಮಾಂಶುಃ
ಪೀಡಾಂ ವ್ಯಪೋಹ್ಯ ಇದಂ ಅಭಿರಕ್ಷತಿ । ದಗ್ಧರಾಶಿಯ ಹಸ್ತಗ್ರಹದ ನಡುವೆ
ಇದ್ದ ಚಂದ್ರ ಪೀಡೆಯ ಕಳಿದು ದಗ್ಧರಾಶಿಯ ರಕ್ಷಿಸುವನೂ. ದಗ್ಧರಾಶಿಗೆ
ಚಂದ್ರ ಹೋದರೆ ಶುದ್ಧವಹುದೆಂಬೂದಿಗೆ ಅರ್ಥ ॥ ಬಲಿನಾ ಉಪಬುದ್ಧಂ
ಹೀನಂ ಬಲೀ ಇವ ಶಕ್ತಿವಾನಾಗಿದ್ದವ ಹೀನಶಕ್ತಿಯವನ ಉಪದ್ರಿಸ್ತರೆ
ಮತ್ತೊಬ್ಬ ಶಕ್ತನಾಗಿದ್ದವ ರಕ್ಷಿಸುವಹಾಗೆ ॥ ೩೦ ॥
ವೃಷಸಂವತ್ಸರೇ ಪೌಷೇ ಸಿತೇ ಮಂಗಳವಾಸರೆ ದ್ವಿತೀಯಸ್ಯಾಂ ತಿಥೌ
ವಿದ್ಯಾಮಾಧವೀಯ್ಯ ಮಲೇಖಿಷಂ ॥

ವಿಷಯ : ವಿದ್ಯಾಮಾಧವೀಯವೆಂಬ ಸಂಸ್ಕೃತದಲ್ಲಿರುವ ಮುಹೂರ್ತಶಾಸ್ತ್ರದ ಕನ್ನಡ ಟೀಕೆ.

ವಿಶೇಷ : ಅಸಮಗ್ರ ಪ್ರತಿ. ಮೊದಲಿನ ನಾಲ್ಕು ಅಧ್ಯಾಯಗಳಿಗೆ ಮಾತ್ರ ಟೀಕು ಇದೆ. ತೆಲುಗಕ್ಷರ. ಮಧ್ಯೆ ಕೆಲವು ಪತ್ರಗಳಿಗೆ ಹುಳು ಹಿಡಿದು ರಂಧ್ರ ಬಿದ್ದಿದೆ. ೭ನೆಯ ಪತ್ರದ ವಿಷಯವನ್ನೇ ಒಳಗೊಂಡ ಮತ್ತೊಂದು ೭ನೆಯ ಪತ್ರ ಗ್ರಂಥದ ಕೊನೆಯಲ್ಲಿದೆ.

1544

ಕೆ. ಎ. ೨೪೭/೪	**ವಿನಾಯಕಾಷ್ಟಕ**	ಹಾಡು
೧೨.೯" x ೮"	?	?
೧–೩ ಪತ್ರ	೧೪ ಪಂಕ್ತಿ	೨೦ ಅಕ್ಷರ

ಆದಿ : ವಿನಾಯಕಾಷ್ಟಕ
ಶ್ರೀವಿನಾಯಕ ಸುರಸದಾಯಕ ಶ್ರಿಷ್ಟಿಜನ ಪರಿಪಾಲಕಾ
ಪಾವಕಾಂಬಿಕ ಪರಮಕುಮಾರಕ ಪ್ರಮಥಗಣಸಂದೋಹಕ
ದೀನಜನಗತಿಹಿತದಿ ಬೇಡಿದ ಇಷ್ಟವನು ಫಲದಾಯಕಾ
ಸಾವಧಾನದಿ ಮಾಳ್ಪೆ ತತ್ವದ ಸೇವೆಯನು ಗಣನಾಯಕಾ ॥ ೧ ॥

ಅಂತ್ಯ : ಸಾಮಗಾನ ಸಮಾನಭೀಕರ ಸಕಲಗುಣರತ್ನಾಕರಾ
ಹೇಮಗರ್ಭ ಮುರಾರಿ ಶಂಕರ ಹರುಷಶರಧಿ ಸುಧಾಕರಾ
ಕಾಮಹರಸುತ ಹೇಮಜನನುತ ಸೋಮಸೂರ್ಯಪ್ರಭಾಕರಾ
ಕಾಮಿತಾರ್ಥವನಿತ್ತು ಸಲಹುವ ಕಣ್ವಪುರಿ ಗಣನಾಯಕಾ ॥ ೮ ॥ ಶ್ರೀ ॥

ವಿಷಯ : ವಿನಾಯಕಸ್ತುತಿ.

ವಿಶೇಷ : ಪತ್ರಗಳ ಒಂದೇ ಕಡೆಯಲ್ಲಿ ಬರೆದಿದೆ. ಇವರೊಂದಿಗೆ ಸೀತಾಕಲ್ಯಾಣ, ಕೃಷ್ಣಪಾರಿಜಾತ, ಚಂದ್ರಹಾಸನ ಕಥೆ, ಹಾಡುಗಳು, ಶಂಕರವಿಜಯಸಂಗ್ರಹ I, II, III ಭಾಗಗಳೂ ಇವೆ.

1545

ಕೆ. ೫೫೩/೨	**ವಿಭೀಷಣನ ನೀತಿ**	ಭಾಮಿನೀಷಟ್ಪದಿ
೧೪.೯"×೨.೨"	ಕುಮಾರವಾಲ್ಮೀಕಿ	ಸು. ೧೫೫೦
೧೩–೧೭ ಪತ್ರ	೯ ಪಂಕ್ತಿ	೬೦ ಅಕ್ಷರ

ಆದಿ : ರಾವಮಾಯಣದಲ್ಲು ವಿಭೀಷಣನ ನೀತಿ ಬರೆಯುವುದಕ್ಕೆ ಶುಭಮಸ್ತು.

ಹಲವು ನಯನೀತಿಯಲಿ ರಾಮನ
ಲಲನೆಯನು ಬಿಡಹೇಳಲನುಜನ
ಹೊಳಲಿ ಹೊರವಂಡಿಸಿದ ಕನಲಿದು ಕಲಿದಶಗ್ರೀವಾ ॥

ಪದನೂ ॥ ಕೇಳಿದ್ಯೆ ಕೋಶಲದರಿತ್ರೀ
ಪಾಲಸುತ ಸುರವಂಶಕುಲಹೃ
ತ್ಸೂಲನೆದೆಯಲಿ ಹುಣುಬುದೋರಿಥು ಹಗೆಯ ಹಂಪುುಗೆಯಾ
ಯೇಳುಲೊರಗುತ ಕುಳ್ಳಿರುತ ಚಿಂ
ತಾಲತಾಂಗಿಯ ರತಿಯ ಕ್ರುತ ಸಂ
ಮೇಳದಲಿ ನೂಕಿದನೂ ನಿಸಿಯನು ನಿಂದ ನಿದ್ರೆಯಲಿ ॥

ಅಂತ್ಯ : ಆ ವಿಭೀಷಣನಗಲಿಕೆಯ ಕೇ
ಳ್ದಾ ವಿಭಾಕರಕುಲಜ ಲಂಕಾ
ಶ್ರೀವನಿತೆ ಸಿಂಪಿಸಿದಳಗುರಿಲಿ ತೆಗದು ಕಂಬನಿಯಾ
ರಾವಣನ ಬಾಹುಪ್ರತಾಪದ
ದೀವಿಗೆಯ ಕಡೆವತ್ತಿ ನಿವಡಿಸಿದವೋ
ಲಾ ವಿದಿಗ್ಭಾಗದಲಿ ಮೆರದು ಬಿಂಬ ದಿನಮಣೀ ತೊರವೆಯಧಿನಾಥ
॥ ೫೭ ॥

ವಿಭೀಷನ ನೀತಿ ಸಮಾಪ್ತಂ ಮಂಗಳಂ ಮಹಾ ಶ್ರೀ ॥
ಯಾವಚ್ಚಂದ್ರಸ್ಯ ಸೂರ್ಯಸ್ಯ ಯಾವತ್ರಸ್ಥತಿ ಮೇಧಿನೀ ।
ಯಾವದ್ರಾಮಕಥಾ ಲೋಕೆ ತಾವದ್ರಾಜ್ಯಂ ವಿಭೀಷಣಂ ॥ ೧ ॥
ರಾಮವಾಖ್ಯಾ ॥ ಶ್ರೀ ॥

ವಿಷಯ : ರಾವಣನಿಗೆ ವಿಭೀಷಣನು ಹೇಳಿದ ಬುದ್ಧಿವಾದ.

ವಿಶೇಷ : ಇದು ತೊರವೆ ರಾಮಾಯಣದ ಭಾಗ. ಇದೇ ಕಟ್ಟಿನಲ್ಲಿ ತೊರವೆ ರಾಮಾಯಣದ ಅತಿಕಾಯನ ಕಾಳಗದ ಸಂಧಿ ಇದೆ.

1546

ಕೆ. ಎ. ೧೯೦/೫	**ವಿಭೀಷಣನ ಬುದ್ಧಿ**	ವಾರ್ಧಕಷಟ್ಪದಿ
೧೨.೬"×೮"	?	?
೯-೧೧ ಪತ್ರ.	೩೯ ಪಂಕ್ತಿ	೪೪ ಅಕ್ಷರ

ಆದಿ : ವಿಭೀಷಣನ ಬುದ್ಧಿಯೂ—
ಶ್ರೀರಾಮ ಚರಣಸೇವಕ ವಿಬೀಷಣನೆದ್ದು
ತಾ ರಾಮನಂಘ್ರಿಯುಗವಾ ನೆನದು ಯದ್ದು
ತೀರಿಸಿದ ನಿತ್ಯಕರ್ಮವನು ಹರಿಯನಾದರಿಸಿದ ವಿಬೀಷಣನು
ನಡದದಿರ ರಾವಣನೆಡೆಗೆ ತಾನು ಬರಲು ಕಂಡು ಸ
ಹೋದರನ ಸತ್ಕರಿಸಿ ಕುಳ್ಳಿರಿಸಿ
ಖಂಡು ರಾವಣ ತಂಮನಾ ನೋಡಿ ತಂದೆವಲ್ಲೆ ಶೀತೆಯಾ ॥ ೧ ॥

ಅಂತ್ಯ : ಬಂದ ವಿಬೀಷಣಗೆ ಅಬೆಯ ಹಸ್ತವನಿತ್ತು
ಮುಂದೆ ನಡದರು ಲೆಂಕೆಗೆ ರಾಮ ಬೇಗ
ದಿಂ ಶರದಿಯನು ಕಟ್ಟಿ ಕೋಪದೊಳು ರಾವಣನ ಧಶಸಿರವ
ಚಂಡಾಡಿ ಮೋಹದಿಂ ಮಡದಿಯನು ಕೂಡಿ
ಯಿಾ ಕಥೆಯ ಕೇಳ್ದ ಸುಜನರ್ಗೆ ಸಕಲ ಕಾ
ಮ್ಯಾರ್ತವನು ಆದಿಕೇಶವನೊಲಿದುಕೊಡುವ ರಾಮಾ ಕೂಡಿ ನಿಂದರು
ಶೀತೆಯಾ ॥ ೩೩ ॥
ವಿಭೀಷಣನ ಬುದ್ಧಿ ಸಂಪೂರ್ನ ಜಯಮಂಗಳ ಮಹಾಶ್ರೀ ॥

ವಿಷಯ : ರಾವಣನಿಗೆ ವಿಭೀಷಣನು ಹೇಳಿದ ಬುದ್ಧಿವಾದ.

ವಿಶೇಷ : ಇದೇ ಪುಸ್ತಕದಲ್ಲಿ ಸಂಕ್ಷೇಪ ರಾಮಾಯಣ, ಸಂಕ್ಷೇಪ ಭಾರತ, ಸೋಮೇಶ್ವರ ಶತಕ, ಧರ್ಮನೀತಿ, ಗೋವಿನ ಹಾಡು, ವಿಷ್ಣುಭಕ್ತಿಸಾರ, ಸುಭಾಷಿತ ಗ್ರಂಥ, ನಳಚರಿತ್ರೆ, ಹರಿಶ್ಚಂದ್ರೋಪಾಖ್ಯಾನ, ರುದ್ರಭಾರತ ಈ ಕೃತಿಗಳಿವೆ.

1547

ಕೆ. ಎ. ೨೮೯/೫ | ವಿಭೀಷಣ ಶರಣಾಗತಿ | ಭಾಮಿನೀಷಟ್ಪದಿ

೧೨.೬"×೭.೯" | ಕುಮಾರವಾಲ್ಮೀಕಿ | ಸು. ೧೫೮೦

೩೭–೪೩ ಪತ್ರ | ೨೨ ಪಂಕ್ತಿ | ೨೪ ಅಕ್ಷರ

ಆದಿ : ಪದನ ಸೂಚನೆ ॥ ಶರಣುಹೊಕ್ಕ ವಿಭೀಷಣನ ಪರಿ
ಕರಿಸಿ ಲಂಕಾವನಿಯ ಜನಪದದ
ನರಸುತನವನು ಕೊಟ್ಟು ಮನ್ನಿಸಿದನು ಮಹೀರಮಣಾ ॥

ಪದನೂ ॥ ಕೇಳಿದೈ ರಘುವಂಶದವನೀ
ಪಾಲ ಭವಕೋಟಲೆಯ ಕೈ
ತೋಳಕಳಬೆದ ಕಲಿವಿಭೀಷಣದೇವ ನಿರ್ಗಮವಾ
ಕೇಳಿ ಬಂದರು ತನ್ನ ಪೂರ್ವದ
ನಾಲುವರು ಮಂತ್ರಿಗಳು ಬಳಿವಿಡಿ
ದೋಲಗಿಪ ಚಾತುರ್ವಿಧದ ಪುರುಷಾರ್ಥದಂದದಲಿ ॥ ೧ ॥

ಅಂತ್ಯ : ವರವಿಭೀಷಣದೇವ ಲಂಕಾ
ಪುರದರಸನೆಂದಮರಪತಿ ಡಂ
ಗುರವ ಪೊಯಿಸಿದನಮರವಾನರವ್ಯರಡು ಕಟಕದಲಿ
ತರಣಿವಂಶದ ರಾಯ ತೊರವೆಯ ನ
ಗರದ ನರಹರಿಯ ಸಿರಿಪಾದದಲಿ ನಿಜ
ಸಿರವ ಮಣಿದಮರೇಂದ್ರನಮರಾವತಿಗೆ ಬೀಳ್ಕೊಂಡಾ ॥ ೪೦ ॥

ವಿಷಯ : ವಿಭೀಷಣನು ರಾಮನಲ್ಲಿ ಶರಣಾಗತನಾದುದು.

ವಿಶೇಷ : ಇದು ತೊರವೆರಾಮಾಯಣದ ಒಂದು ಭಾಗ. ಒಂದೇಕಡೆಯಲ್ಲಿ ಬರೆದಿದೆ. ಇದರೊಂದಿಗೆ ಸಂಕ್ಷೇಪರಾಮಾಯಣ, ಸಂಕ್ಷೇಪಭಾರತ, ಅಂಗದ ಸಂಧಾನ, ಬಾಣಾಸುರನ ಪೂಜೆ ಎಂಬ ಗ್ರಂಥಗಳೂ ಇವೆ.

1548

ಕೆ. ೩೦೧ | ವಿರಾಟಪರ್ವ | ಭಾಮಿನೀಷಟ್ಪದಿ

೧೮.೨"×೧.೪" | ಕುಮಾರವ್ಯಾಸ | ಸು. ೧೮೩೦

೧–೭೫ ಪತ್ರ | ೫ ಪಂಕ್ತಿ | ೭೮ ಅಕ್ಷರ

ಆದಿ : ಭಾರದಲ್ಲಿ ಚತುರ್ತಿ ನಾಲ್ಕನೆಪರ್ವ ವಿರಾಟಪರ್ವ ಬರೆಯುವದಕ್ಕೆ ನಿರ್ವಿಘ್ನ ಮಸ್ತು.

ಸೂಚನೆ ॥ ಕಾಯಿದರು ಸತ್ಯವನು ವನವಾ
ಸಾಯತವ ನೆರೆ ಗೆಲಿದು ಪಾಂಡುವ
ರಾಯರೋಲೈಸಿದರು ಬಂದು ವಿರಾಟನಗರಿಯಲೀ ॥

ಪದನೂ ॥ ಕೇಳು ಜನಮೇಜಯ ಧರಿತ್ರೀ
ಪಾಲ ಮುನಿಜನ ನೃಪಜನಂಗಳ
ಬೀಳುಕೊಟ್ಟನು ಭೂಮಿಪತಿ ಬಲವಂದು ಹುತವಹನಾ
ಮೇಲು ಶಕುನದ ಚಾರುನಿನದವ
ನಾಲಿಸುತ್ತ ಸೋದರರು ಸಹಿತ ವ
ನಾಲಯವ ಹೊರವಂಟು ಸಾರಿದರೊಂದು ವಟಕುಜವಾ ॥ ೧ ॥

ಅಂತ್ಯ : ಆದುದಭಿಮಂನ್ಯುವಿನ ಮದುವೆ ಮ
ಹಾದಯಾಂಬುಧಿ ಕೃಷ್ಣರಾಯನ
ಪಾದದರುಶನವಾಗಲಿಂಮ್ಮಡಿಸಿತು ನಂಮುದೆಯಾ
ಮೇದಿನಿಯ ನಾವೊತ್ತೈವಿಟೆವು
ಕಾದುಕೊಂಡೆವು ಸತ್ಯವನು ಮೇ
ಲಾದುದನು ನೀ ಕರುಣಿಸೆಂದರು ವೀರನಾರಾಯಣನ ಕರುಣದಲಿ ॥ ೮೫ ॥
ಅಂತು ಸಂಧಿ ೧೧ಕಂ ಪದನು ೬೯೯ಕಂ ಜಯಮಂಗಳಂ ಮಹಾಶ್ರೀ ॥ × ×
ಭಾರಥದಲಿ ವಿರಾಟಪರ್ವ ಸಂಪೂರ್ಣಂ ಮಂಗಳಂ ಶ್ರೀ॥ × × × ×
ಭಾರತದಲಿ ನಾಲ್ಕನೆ ಪರ್ವ ಸಂಪೂರ್ಣ ॥ ಯಿದರ ಮುಂದೆ ವುದ್ಯೋಗ
ಪರ್ವ ಬರೆಯಬೇಕು × × ಯಿಂತ್ತಿ ॥ ಸರ್ ೧೮೭೦ ನೆ ಯಿಸ್ವಿ ಮೇ
ತಾರೀಖು ೧೩ ಕ್ಕೆ ಸರಿಯಾದ ಪ್ರಮೋದೂತ ಸಂಮತ್ಸರದ ವೈಶ್ಯಾಕ ಬ್ಧ
೧೩ ಲೂ ಸಂಪೂರ್ನಂ ॥

ವಿಷಯ : ಪಾಂಡವರು ವಿರಾಟನಗರಿಯಲ್ಲಿ ಅಜ್ಞಾತವಾಸ ಮಾಡಿದ ಕಥೆ.

ವಿಶೇಷ : ಕಟ್ಟಿನ ಕೊನೆಯಲ್ಲಿ ಕೆಲವು ಶುದ್ಧಪತ್ರಗಳಿವೆ. ಅಕ್ಷರಗಳು ವಿರಳವಾಗಿವೆ.

1549

ಕೆ. ಬಿ. ೨೧೦	**ವಿರಾಟಪರ್ವ**	ಯಕ್ಷಗಾನ
೭.೫″×೬″	ಲಿಂಗರಾಜ	೧೮೫೦
೧–೩೬ ಪತ್ರ	೧೮ ಪಂಕ್ತಿ	೨೪ ಅಕ್ಷರ

ಆದಿ : ಯಕ್ಷಗಾನ ವಿರಾಟಪರ್ವ ||

ಕಂದ || ಶ್ರೀಕಾಳೀ ನವಯವ್ವನ
ಮಾಕಂದಶುಕಂ ಶುಕಾದಿ ಮುನಿಜನಹೃದಯಾ
ಬ್ಜಾಕರಹಂಸಂ ಕರುಣಾ
ಕೇಕರನೆಮಗೀಗೆ ಸೌಖ್ಯಮಂ ಕಾಳೀಶಂ || ೧ ||

ರಾಗ || ನಾಟಿ || ಜಂಪೆ ||

ಜಯತು ಕಾಳೀಕಾಂತ ಜಯತು ರಹಿತಾದ್ಭಾಂತ
ಜಯ ವಲಯಿತಾನಂತ ಜಯ ದಯಾಕ್ರಾಂತ
ಜಯತು ಜಿತಸಾಮಂತ ಜಯ ನತವನವಸಂತ
ಜಯತು ನುತ ನಿಗಮಾಂತ ಜಯತು ನಿರಹಂತ || ೧ ||

× × × ×

ಕಂದ || ವರಪಾಂಡುಸುತರು ತಮಗುರೆ
ದೊರೆತಜ್ಞಾತಾಬ್ದವಂನು ವಿಸ್ತರಿಸುವ
ಭಾಪೆನಲು ಯಕ್ಷಗಾನಕ್ರಮದಿಂ || ೧೪ ||

ಅಂತ್ಯ : ವಾರ್ಧಖ || ಹಿಂದಕಟಾ ಜೂಜಿನೊಳ್ಳೊಂದು ವನವಾಸದೊ
ಳ್ಬೆಂದು ನಾನಾಕಷ್ಟವಂ ಪಟ್ಟರಯ್ಯಯ್ಯೊ
ಮುಂದಾದರುಂ ಸುಂಮನಿರದೆ ನಿಂಮಯ ಸೊಂಮ ಪೊಂದುವದು ಮತವಿ
ದದರಿಂ
ಸಂದಿಗಾ ಮಂದಮತಿಯಡೆಗಟ್ಟುವದು ಭೀತಿ
ಯಂದು ಯಮನಂದನಗೆ ಮಂಥರಧರಂ ಪೇಳ್ದ
ನೆಂದಿಂದುಕುಲತಿಲಕ ಜನಮೇಜಯನಿಗೆ ವೈಶಂಪಾಯನಂ ಪೇಳಿದಂ||೪೨೧||

ರಾಗ || ದೇಶಿ || ರೂಪ || ಮಂಗಳಾ ||

ಶಿವಗೆ ಮಂಗಳಂ ಕಾಳೀಧವಗೆ ಮಂಗಳಂ ||ಪ||
ಭವಗೆ ಮಂಗಳಂ ಸುವೈಭವಗೆ ಮಂಗಳಂ ||ಅನು||
ಭುಜಗಹಾರಗೆ ಮತಂಗಜವಿದಾರಗೆ
ವಿಜಯರಕ್ಷಗೆ ಚತುರ್ಭುಜ ಸಪಕ್ಷಗೆ ||ಸದಾ|| ||೪೨೨||
ಕಾಲಕಾಲಗೆ ದಯಾಶಾಲಿಶೀಲಗೆ ಶೈಲಚಾಪಗೆ ರಮಾಲೋಲರೂಪಗೆ
|| ೪೨೩ ||
ತುಂಗಮಹಿಮಗೆ ಜಟಾಸಂಗಿ ಸೋಮಗೆ
ಲಿಂಗರೂಪಗೆ . . ತ್ಮ ಲಿಂಗರೂಪಗೆ ||೪೨೪||

ಕಂದ ॥ ಕರಿ ರಸ ಭಕ್ತಿ ಪಯೋನಿಧಿ
ಪರಿಮಿತ ಕಲಿವತ್ಸರಂ ತ....ತೆರಳಲ್ಕೀ
ಮೆರೆಯುವ ವಿರಾಟಪರ್ವ್ವವ
ನೊರೆದಂ ಲಿಂಗೇ....ನೊಲಿದುಘೇಯೆನೆ ಲೋಕಂ ॥೪೨೫॥
ವಿರಾಟಪರ್ವ ಸಂಪೂರ್ಣಂ ॥

ವಿಷಯ : ಪಾಂಡವರು ವಿರಾಟನಗರದಲ್ಲಿ ಅಜ್ಞಾತವಾಸ ಮಾಡಿದ ಕಥೆ.

ವಿಶೇಷ : ತೆಳುವು ಕಾಗದ. ಎರಡು ವಿಧವಾದ ಅಕ್ಷರಗಳಿವೆ. ೩, ೪, ೫ ನೆಯ ಪುಟಗಳನ್ನು ಕೆಂಪು ಮಸಿಯಲ್ಲಿ ಬರೆದಿದೆ. ಪತ್ರಗಳಿಗೆ ಕ್ರಮಾಂಕವನ್ನು ಹಾಕಿಲ್ಲ. ಆರಂಭದ ಎರಡು ಪತ್ರಗಳ ಅಕ್ಷರಗಳನ್ನು ಬಿಟ್ಟರೆ ಉಳಿದ ಪತ್ರಗಳಲ್ಲಿರುವ ಅಕ್ಷರಗಳು ಸುಂದರವಾಗಿವೆ.

1550

ಕೆ. ಬಿ. ೫೦೫	**ವಿರಾಟಪರ್ವ**	ಯಕ್ಷಗಾನ
೮.೭"×೬.೧"	ಲಿಂಗರಾಜ	೧೮೫೦
೧–೩೧ ಪತ್ರ	೨೨ ಪಂಕ್ತಿ	೨೦ ಅಕ್ಷರ

ಆದಿ : ಶ್ರೀಶಂಭುಲಿಂಗಜಯಂ । ವಿರಾಟಪರ್ವ್ವಂ ಶುಭಂ ॥
ಶ್ರೀಕಾಳೀನವಯವ್ವನ
ಮಾಕಂದಶುಕಂ ಶುಕಾದಿ ಮುನಿಜನ ಹೃದಯಾ
ಬ್ಜಾಕರಹಂಸಂ ಕರುಣಾ
ಕೇಕರನೆಮಗೀಗೆ ಸೌಖ್ಯಮಂ ಕಾಳೀಶಂ ॥ ೧ ॥

ರಾಗಾ । ನಾಟಿ । ಜಂಪೆ ।
ಜಯತು ಕಾಳೀಕಾಂತ ಜಯತು ರಹಿತಾದ್ಯಂತ
ಜಯ ವಲಯಿತಾನಂತ ಜಯ ದಯಾಕ್ರಾಂತ
ಜಯತು ಜಿತಸಾಮಂತ ಜಯ ನತವನವಸಂತ
ಜಯತು ನುತ ನಿಗಮಾಂತ ಜಯತು ನಿರಹಂತ ॥ ೨ ॥

ಅಂತ್ಯ : ವಾರ್ಧಕ ॥ ಹಿಂದಕಟ ಜೂಜಿನೋಳ್ಸೊಂದು ವನವಾಸದೋ
ಳ್ಬೆಂದು ನಾನಾಕಷ್ಟವಂ ಪಟ್ಟರೈಯ್ಯೊಯೊ
ಮುಂದಾದರುಂ ಸುಂಮನಿರದೆ ನಿಂಮಯ ಸೊಂಮು ಪೊಂದುವದು
ಮತವಿದದರಿಂ

ಸಂದಿಗಾ ಮುಂದಮತಿಯಡಿಗೆಗಟ್ಟುವದು ನೀತಿ
ಯೆಂದು ಯಮನಂದನಗೆ-ಮುಂದರಥರಂ ಪೇಳ್ದ
ನೆಂದಿಂದುಕುಲತಿಲಕ ಜನಮೇಜಯನಿಗೆ ವೈಶಂಪಾಯನಂ ಪಾಳಿದಂ
|| ೪೨೧ ||

× × × ×

ಕಂದ ಪದ್ಯಮು |

ಕರಿ ರಸ ಭಕ್ತಿ ಪಯೋನಿಧಿ
ಪರಿಮಿತ ಕಲಿವತ್ಸರಂ ತೆರಳಲ್ಕೀ ಮೆರೆಯುವ
ವಿರಾಟಪರ್ವವನೊರೆದಂ
ಲಿಂಗೇಂದ್ರನೊಲಿದುಘೇಯನೆ ಲೋಕಂ || ೪೨೫ || ಶ್ರೀ.
ಭಾರತದೊಳಗಣ ವಿರಾಟಪರ್ವಂ ಸಂಪೂರ್ಣಮಾದುದೂ ಶ್ರೀ. × ×
ವೀರನಗೆರೆ ಪುಟ್ಟಂಣನ ಬರಹಂ ಶ್ರೀ. ಯಿದರಲ್ಲಿ ಯಿರತಕ್ಕ ವಾರ್ಧಕಗಳು
೬೨ ಭಾಮಿನಿಗಳು ೧೭ ಕಂದಪದ್ಯಗಳು ೩೯ ಯೆಕೋನು ೧೦೮.

ವಿಷಯ : ಪಾಂಡವರು ವಿರಾಟನಗರದಲ್ಲಿ ಅಜ್ಞಾತವಾಸ ಮಾಡಿದ ಕಥೆ.

ವಿಶೇಷ : ಕೈಯಿಂದ ತಯಾರಿಸಿದ ಕಾಗದದ ಪ್ರತಿ.

1551

ಕೆ. ೪೦೨	**ವಿರಾಟಪರ್ವ**	ಯಕ್ಷಗಾನ
೮.೮"×೧.೫"	ವಿಷ್ಣು ?	೧೯ನೆಯ ಶತಕ
೧–೨೨ ಪತ್ರ	೭ ಪಂಕ್ತಿ	೪೨ ಅಕ್ಷರ

ಆದಿ : ಯಕ್ಷಗಾನದಲ್ಲಿ ವಿರಾಟಪರ್ವವಂನ್ನು ಬರೆಯುವದಕ್ಕೆ ಶುಭಮಸ್ತು.

ಕಂದ || ಶ್ರೀಲಕ್ಷ್ಮೀಕಾಂತಂ ವನಾ
ಮಾಲಂ ವೃಂದಾರಕೇಂದ್ರವಂದಿತಪದಂ
ಬಾಲಾರ್ಕಾಮಿತಭಾಸಂ
ನೀಲನಿಭಾಂಗಂ ಕಟಾಕ್ಷದಿಂ ಪೊರೆಗೆಮ್ಮಂ ||

ರಾಗಾ || ಪಂತು || ಆದಿ ||
ಜಯ ಜಯ ಜಯ ಜಯ ಜಗವಕ್ತ್ರಾ
ಜಯ ಜಯ ಜಯ ಜಯ ನುತಿಪಾತ್ರಾ

ಪರಶು ಪಶಾಂಕುಶಧರ ಪಂನ್ನಗಭೂಷ
ಕರುಣಾಕರಪೋಷ ತರಣಿಭಾಷಾ ‖ ಜಯಜಯ ‖

× × × ×

ಭಾಮಿನೀ ‖ ಗಿರಿಜೆ ಶ್ರೀಸರಸ್ವತಿಯರಂಗ್ರಿಗೆ
ಪರಮ ಭಕ್ತಿಗಳಿಂದ ನಮಿಸುತ
ಸುರಪಮುಖ್ಯಾಮರರಿಗೆರಗುತ ಕವಿಗಳಂ ನೆನದೂ
ಗುರುವಿನಡಿದಾವರೆಗೆ ವಂದಿಸಿ
ವರ ಮಹಾಭಾರತ ಪುರಾಣದೊ
ಳೊರೆವೆ ಧರೆಗೆ ವಿರಾಟಪರ್ವವನೆಕ್ಷಗಾನದಲೀ ‖

ಅಂತ್ಯ : ಅವನೀಶನರಸಿಕೇಳೂ
ಹದಿಮೂರು ವರುಷ ನಾವೀಯಡೆಯೊಳೂ
ತವಕದಲಿ ನೀವು ನಂಮ್ಮಾ ನೂಕಿದರು
ಅವಧಿಯೊಳು ಪೋಗೆವಂಮ್ಮಾ
ಮುಂದೆ ನೀವೇ ಯಂನ್ನನೂ ಯಿರು ಯೆಂದರೊಂದುದಿನವಿರೆವು ನಾವೂ ‖
ಚಂದವಹುದಿಂನ್ನು ನಿಮಗೇ ಬೆದರದಿರಿಯೆಂದು ತೆರಳಿದ..................
ಭಾಮಿನೀ ‖ ಯಲೆ ಧರಾದಿಪ ಕೇಳು ಕೀಚಕನಳಿದನಾ..................
ತಿಳಿದನಾ ಮುಂದಣ ಕಥಾಂಮ್ರುತವೆನಗೆ ನೀನರುಹೆನಲು ಮುನಿಪತಿ........
....ರಾಟಪರ್ವ ಸಂಪೂರ್ನ ಮಂಗಳಂ ಮಹಾ ಶ್ರೀ.

ವಿಷಯ : ಪಾಂಡವರು ವಿರಾಟನಗರದಲ್ಲಿ ಅಜ್ಞಾತವಾಸ ಮಾಡಿದ ಕಥೆ.

ವಿಶೇಷ : ಶಿಥಿಲಪ್ರತಿ. ಕೀಚಕಸಂಹಾರದ ಪೂರ್ತಿ ಕಥೆಯಿದೆ. ಗೋಗ್ರಹಣದ ಕಥಾಭಾಗ ಇಲ್ಲ. ೧೫ನೆಯ ಕ್ರಮಸಂಖ್ಯೆಯ ಎರಡು ಪತ್ರಗಳಿವೆ.

1552

ಕೆ. ಬಿ. ೩೫೪/೨	**ವಿರಾಟಪರ್ವ**	ಯಕ್ಷಗಾನ
೭.೧"×೫.೮"	ವಿಷ್ಣು ?	೧೯ನೆಯ ಶತಕ
೧–೩೪ ಪತ್ರ	೧೯ ಪಂಕ್ತಿ	೨೦ ಅಕ್ಷರ

ಆದಿ : ಭಾರಥದೊಳಗಣ ವಿರಾಟಪರ್ವ ಬರೆಯುವದಕ್ಕೆ ಶುಭಮಸ್ತು.

ವೃತ್ತ ॥ ಶ್ರೀಲಕ್ಷ್ಮೀಕಾಂತಂ ವನ
ಮಾಲಂ ವೃಂದಾರಕೇಂದ್ರವಂದಿತಪಾದಂ
ಬಾಲಾರ್ಕಾಮಿತಶುಭಂ
ನೀಲನಿಭಾಂಗಂ ಕಟಾಕ್ಷದಿಂ ಪೊರೆ ಯಂನಂ ॥ ೧ ॥

ರಾಗಾ । ಸವೂರಾ ॥ ಆದಿತಾ ॥
ಜಯ ಜಯ ಜಯ ಜಯ ಗಜವಕ್ತ್ರಾ
ಜಯ ಜಯ ಕಮಲಜ ನುತಿಪಾತ್ರಾ
ಜಯ ಜಯ ಗಜವಕ್ತ್ರಾ ॥ ಪಲ್ಲಾ ॥

ಅಂತ್ಯ : ಯಿಂತಾ ನೃಪಂಗೆ ವೈಶಂಪಾಯಮುನಿಯೊರಂ
ಸಂತಸದೊಳಿಂದನಾ ಕಥನವಂ ಧರಾಮರ
ಸಂತತಿಯೊಳುದಿಸೆ ಪೆಸರ್ವಡದ ರಾಮಾಖ್ಯಜಂ ವಿಷ್ಣುವೆಂಬಣುಗನೂ
ಕಂತುಸಂಹ್ಹಾರನಂ ನೆನದೆಕ್ಷಗಾನದೊಳ್
ಧರೆಗುಸುರೆನುತ್ತುಮು ಚರಿತ್ರವಂ ಪೇಳ್ದಿ
ವಂ ತಿಳಿಯದವನೆಂದು ಜರಿಯದೀ ಪುಂಣ್ಯಕಥೆಯಂ ಲಾಲಿಪುದು
ಸುಜನರು ॥ ೬ ॥

× × × ×

ವುರುಗಾಕುಂಡಲಧರನಿಗೆ ಸಿವಗೇ
ಭರತವಿನೋದಗೆ ಭಾರ್ಗವಗೇ
ಸರಸಿಜ ಅಜಪುರವಾಸಗೆ ಯಿಾಶಗೆ
ಗಿರಿಜೇಶಗೆ ಮಹಲಿಂಗನಿಗೆ ಮಂಗಳಂ ಜಯ ಮಂಗಳಂ ॥ ೩೦ ॥
ಅಂತು ಸಂಧಿ ೩ ಕಂ॥ ಪದನೂ ೨೨೦ ಕ್ಕಂ ಮಂಗಳಮಹಾಶ್ರೀ ॥
ವಿರಾಟಪರ್ವಾ ಸಂಪೂರ್ನಾ ॥

ವಿಷಯ : ಪಾಂಡವರು ವಿರಾಟನಗರದಲ್ಲಿ ಅಜ್ಞಾತವಾಸ ಮಾಡಿದ ಕಥೆ.

ವಿಶೇಷ : ಪತ್ರಗಳಿಗೆ ಕ್ರಮಾಂಕವನ್ನು ಹಾಕಿಲ್ಲ. ಇದೇ ಪುಸ್ತಕದಲ್ಲಿ ಚಿತ್ರಸೇನನ ಕಾಳಗ, ಕರ್ಣಾರ್ಜುನರ ಕಾಳಗ, ಧ್ರುವಚರಿತ್ರೆ, ಐರಾವತ ಎಂಬ ಈ ನಾಲ್ಕು ಕೃತಿಗಳೂ ಇವೆ.

1553

ಕೆ. ಬಿ. ೩೮೭	**ವಿರಾಟಪರ್ವ**	ಯಕ್ಷಗಾನ
೭.೬"×೫.೯"	ವಿಷ್ಣು ?	೧೯ನೆಯ ಶತಕ
೪೬ ಪತ್ರ	೧೭ ಪಂಕ್ತಿ	೧೮ ಅಕ್ಷರ

ಆದಿ : ವಿರಾಟಪರ್ವ ಬರಿಯುವದಕ್ಕೆ ಶುಭಮಸ್ತು ||

ಕಂದ || ಶ್ರೀಲಕ್ಷ್ಮೀಕಾಂತಂ ವನ
ಮಾಲಂ ವೃಂದಾರಕೇಂದ್ರವಂದಿತಪಾದಂ
ಬಾಲಾರ್ಕಾಮಿತಭಾಸಂ
ನೀಲನಿಭಾಂಗಂ ಕಟಾಕ್ಷದಿಂ ಪೊರೆಗೆಮಂ || ೧ ||

ರಾ|| ಸೌರಾಷ್ಟ್ರ | ಆದಿತಾಳಾ ||
ಜಯ ಜಯ ಜಯ ಜಯ ಗಜವಕ್ತ್ರಾ
ಜಯ ಜಯ ಕಮಲಜ ನುತಿಪಾತ್ರಾ || ಪ ||

× × × ×

ಪರಮ ಕರುಣಾಪಾಂಗನಂ ಮಹಾಲಿಂಗನಂ
ಸ್ಮರಿಸುವೆನು ಮನ್ಮನದೊಳೂ || ೩ ||
ಭಾಮಿನಿ || ಗಿರಿಜೆ ಶಿರಿ ಸರಸ್ವತಿಯರಂಘ್ರಿಗೆ
ಪರಮಭಕ್ತಿಗಳಿಂದ ನಮಿಸುತ
ಸುರಪಮುಖ್ಯಾಮರರಿಗೆರಗುತ ಕವಿಗಳಂ ನೆನದೂ
ಗುರುವಿನಡಿದಾವರೆಗೆ ವಂದಿಶಿ
ವರ ಮಹಾಭಾರತ ಪುರಾಣದೊ
ಳೊರವೆ ಧರೆಗೆ ವಿರಾಟಪರ್ವವನೆಕ್ಷಗಾನದಲೀ || ೪ ||

ಅಂತ್ಯ : ಯಿಂತಾ ನೃಪಂಗೆ ವೈಶಂಪಾಯ ಮುನಿವರಂ
ಸಂತಸದಿ ಪೇಳ್ದ ಕಥೆಯನು ಧರಾಮರರ ಕುಲ
ಸಂತತಿಯೊಳುದಿಶಿ ಪೆಸರ್ವಡೆದ ರಾಮಾತ್ಮಜಂ ವಿಷ್ಣುವೆಂದೆಂಬಾತನೂ
ಕಂತುಸಂಹಾರನಂ ನೆನದೆಕ್ಷಗಾನದಿಂ
ದಿಂತುಸುರ್ದೆನೀ ಚರಿತ್ರೆಯ ಕೇಳ್ವಪೇಳ್ವಜನ.
ರಂತು ಜರೆಯದೆ ಪುಣ್ಯಕಥೆಯಂಬ ಹರ್ಷದಿಂ ಕೇಳ್ವುದೆಲ್ಲಾ
ಸುಜನರೂ || ೨೧೩ ||

× × × ×

ವುರಗಕುಂಡಲಧಾರಗೆ ಶಿವಗೆ
ಭರಿತ ವಿನೋದಿಗೆ ಭರ್ಗನಿಗೆ
ಸರಸಿಜ ಅಜಪುರವಾಸಗೆ ಯಿಾಶಗೆ
ಗಿರಿಜೇಶಗೆ ಮಹಲಿಂಗನಿಗೆ ॥ ಮಂಗಳಂ ಜಯಮಂಗಳಂ ॥ ೨೧೭ ॥
ಅಂತು ಸಂದಿ ೨ ಕ್ಕಾಂ ಪದನು ೪೫೨ ಕ್ಕಾಂ ಮಂಗಳಮಹಾ ಶ್ರೀ ॥

ವಿಷಯ : ಪಾಂಡವರು ವಿರಾಟನಗರದಲ್ಲಿ ಅಜ್ಞಾತವಾಸ ಮಾಡಿದ ಕಥೆ.

ವಿಶೇಷ : ಪತ್ರಗಳಿಗೆ ಕ್ರಮಾಂಕವಿಲ್ಲ. ತೆಳುವು ಕಾಗದ. ಮಸಿಯ ದೋಷದಿಂದ ಓದಲು ಕಷ್ಟವಾಗಿದೆ.

1554

ಕೆ. ಎ. ೨೧೮	**ವಿರೂಪಾಕ್ಷಪಂಚಾಶಿಕೆ**	ಭಾಮಿನೀಷಟ್ಪದಿ
೧೨.೭"×೮.೧"	?	?
೧–೫೬ ಪತ್ರ	೨೦ ಪಂಕ್ತಿ	೨೫.೭ ಅಕ್ಷರ

ಆದಿ : ವಿರೂಪಾಕ್ಷ ಪಂಚಾಶಿಕೆ । ಭಾಮಿನಿಷಟ್ಪದಿ ॥
ಇಂದಿರನು ಗಜಯುಗದ ಕದನವ
ನಂದು ಪರಕಿಪವಸರದೊಳು ತಾ
ನೊಂದಿ ಗಿರಿಯುಗಳವನು ಕಾದಿಸಿದನು ವಿರೂಪಾಕ್ಷಾ ॥
ಪದ ॥ ಕನಕ ನಗ ಕೋದಂಡ ಮನಸಿಜ
ಜನಕಲೋಚನ ಚರಣಸರಸಿಜ
ಸನಕ ಮುಖನುತ ಶಿಖಿಗಮನ ಗಜವರದನ ತಾತ
ವನಜತನಯ ವರಪ್ರದಾಯಕ
ಧನಪಸಖಸುರ ನಿಮ್ನಗಾಧರ
ಘನದಯಾರಸವನಧಿ ಜಯ ಧವಳಾಂಗ ಶಿವಲಿಂಗ ॥ ೧ ॥

× × × ×

ಗುರುವರಗೆ ಗಣಪತಿಗೆ ನಂದಿಗೆ
ಕರುಣಿ ವೀರೇಶ್ವರಗೆ ಕುವರಗೆ
ಭರಿತವಾಗಿಯೆ ಭುವನತತಿಯೊಳು ಮೆಱೆ ಪುರಹರನ
ಶರಣರಡಿದಾವರೆಗಳಿಗೆ ನಾನಿರ
ದೆರಗಿ ರಚಿಸುವೆನು ಸುರಪಗೆ
ಪರಮಶಿವನುಪದೇಶಿಸಿದ ಪಂಚಾಶಿಕಾಗಮವ ॥ ೪ ॥

× × × ×

ಸರಸಸಂಧಿ ಸಮಾಸ ತದ್ಧಿತ
ನಿರುತ ಕಾರಕ ಮುಖ್ಯ ಲಕ್ಷಣ
ಸುರುಚಿರ ವ್ಯಾಕರಣ ಸದಲಂಕಾರ ತತ್ವರಸ
ನೆರದು ನೆಲಸಿದ ಕೃತಿಯಿದರೊಳಧಿ
ಕರಿಸಿ ತೋಱುವ ಬುಧರು ತಪ್ಪದು
ಬೆರೆದಿರಲರಿಜುಮಾಡಿ ಮೆಱೆವುದಸೂಯೆಯನು ಬಿಟ್ಟು

ಅಂತ್ಯ : ಸರ್ವಧಾರಿಯ ಮಾದಸದ
ಖರ್ವ ವೈಶಾಖದಸಿತೋದ್ಯದ
ಪೂರ್ವಪಕ್ಷೈಕಾದಶಿಯ ಶಶಿವಾರದುದಯದೊಳು
ಪರ್ವಪೂರ್ವಕಪೂರ್ವಕವಾಗಿ ಮುಗಿಯಿ
ಶುರ್ವಿ ವಿಬುಧರು ಮೆಚ್ಚುವಂದದೆ
ಶರ್ವಶಿವಲಿಂಗೇಶನಾಜ್ಞೆಯೊಳಿದುವೆ ಶುಭಮಸ್ತು ॥ ೪೯ ॥
ಶಸ್ತ ಶಶಿಲೇಖಾ ವಿಭೂಷಿತ
ಮಸ್ತಕಾಚ್ಯುತ ನೇತ್ರಪಾದಸ
ಮಸ್ತ ನಿಗಮ ಶಿರೋವರೋಧ ವಿಬಾಧ ಗತಭೇದ
ನಿಸ್ತುಲಾನಂದಾತ್ಮ ನಿರುಪಮ
ನಿಸ್ತರಂಗ ನಿರಂಗ ತೇಜೋ
ಧ್ವಸ್ತದೋಷ ಪತಂಗ ತೋಂಟದ ಸಿದ್ಧಲಿಂಗಜಯ ॥ ೫೦ ॥

× × × ×

ಇದು ಪರಮ ಶಿವತತ್ವಕೋವಿದ
ಹೃದಯಬುಧ ಹರ್ಷಾಮೃತಾರ್ಣವ
ವಿದಿತ ಪೂರ್ಣ ಶಶಾಂಕಸಾಧಕ ವಿತ್ತಿಮುಖಮುಕುರಾ
ಸದರವಾದಪವರ್ಗ ಸಾಮ್ರಾ
ಜ್ಯದ ಮಹಾಪಟ್ಟಾಭಿಷೇಕ
ಪ್ರದದ ಪನ್ನೆರಡಧಿಕರಣ ಪಂಚಾಶಿಕಾಗಮುದಿ ॥ ೫೧ ॥

ವಿಷಯ : ವೀರಶೈವ ತತ್ತ್ವಗಳು.

ವಿಶೇಷ : ಸ್ಫುಟಾಕ್ಷರ. ಕೆಲವು ಪದ್ಯಗಳಲ್ಲಿ ತೋಂಟದ ಸಿದ್ಧಲಿಂಗನ ಅಂಕಿತವಿದೆ.

1555

ಕೆ. ಬಿ. ೩೨೧/೧ **ವಿರೂಪಾಕ್ಷ ಶತಕ** ಕಂದ
೬.೪″×೪.೧″ ಯೋಗಾನಂದ ಸು. ೧೭೫೦
೧–೧೨ ಪತ್ರ ೧೧ ಪಂಕ್ತಿ ೨೬ ಅಕ್ಷರ

ಆದಿ : ವಿರೂಪಾಕ್ಷ ಶತಕ ಶುಭಮಸ್ತು.
ಶ್ರೀನಗರಾಜಕುಮಾರೀ
ಮಾನಸ ಕುಮುದಾಬ್ಜ ದೇವಮಂದಾರ ಸುಭ
ಕ್ತಾನನ ಬಿಸಹರಿ ಕೋವಿದ
ಜ್ಞಾನನೆ ವಿರುಪಾಕ್ಷಲಿಂಗಾ ಕರುಣಾಂಗಪಾಂಗ ‖ ೧ ‖

× × × ×

ತಪ್ಪಿರೆ ತಿದ್ದಲಿ ಸುಕವಿಗ
ಳಿಪ್ಪುದ ತಿಳಿಕೊಳ್ಳದೆ ಕುಕವಿಯಿಂನಿದ ಜರಿಯಲ್
ವಪ್ಪವು ಯಿಾಶ........ತವು ನಿನ
ಗರ್ಪಿತ ವಿರುಪಾಕ್ಷಲಿಂಗಾ ಕರುಣಾಪಾ........‖ ೧೧ ‖

ಅಂತ್ಯ : ಪಂಚಚಾಮರ ವೃತ್ತಾ ‖
ವಿರಿಂಚಿಯಿಂದ್ರದೇವಮೌನಿ ವಿಷ್ಣುಜಿಂಷ್ಣುಸ್ತುತ್ಯನೇ
ಶರಾನನ ತ್ರಿನೇತ್ರಭಾವಜಾರಿ ಭಕ್ತಿಪಾಲನೇ
ಧರಾತ್ಮಜ ಮನೋಬ್ಜ ಭೃಂಗ ದಂದಶೂಕಭೂಷನೆ
ಚಿರಾಚರಾದಿ ವಿಶ್ವಕೆಲ್ಲ ಸಾಕ್ಷಿಯಾಗಿ ಯಿಪ್ಪನೇ ‖

ಗದ್ಯಾ ‖ ಯಿದು ವಿಶ್ವಸ್ರುಟ್ಸಹಸ್ರಾಕ್ಷಾದಿ ಅಖಿಲ ಸುಮನಸ ಯಿಂದ್ರಾರಯ ಶೀರ್ಷಾಲಂಕೃತಾಭರಣ ಮಕುಟಮಣಿಗೃಷ್ಟಿದ್ಯುತಿ ನಿಕರರಂಜಿತ ಚಾರು ಚರಣಾಂಭೋರುಹ ಶ್ರೀ ಹೇಮಕೂಟಭೂಧರ ಪರಿವೃಢ ವಿರೂಪಾಕ್ಷ ಘೃಣಾಲಬ್ಧಾತ್ಮ ವಿದ್ಯಾಪ್ರವೀಣ ಮಾನಸಾಬ್ಜ ವಂಶೋದ್ಭವ ವರ ತರಿಮೆಲ ಪುರಾಧಿಪತಿ ಚಂನರಾಜಗರ್ಭೋದಿತ ಬಸವರಾಜವರಜ ಯೋಗಾನಂದಾಹ್ವಯ ರಚಿತ ವಿರುಪಾಕ್ಷ ಶತಕಂ ಸಂಪೂರ್ನಂ ‖

ವಿಷಯ : ವಿರೂಪಾಕ್ಷಸ್ತುತಿ.

ವಿಶೇಷ : ಅತ್ಯಂತ ಶಿಥಿಲ ಪ್ರತಿ. ಪತ್ರಗಳನ್ನು ಹುಳು ತಿಂದಿರುವುದರಿಂದ ರಂಧ್ರ

ಗಳು ಬಿದ್ದು ಮಧ್ಯೆ ಮಧ್ಯೆ ಅಕ್ಷರಗಳು ಲುಪ್ತವಾಗಿವೆ. ಪ್ರತಿ ಕಂದವೂ 'ವಿರೂಪಾಕ್ಷಲಿಂಗ ಕರುಣಾಪಾಂಗಾ' ಎಂದು ಮುಗಿಯುತ್ತದೆ. ಇದೇ ಪುಸ್ತಕದಲ್ಲಿ ಬಸವ ಶತಕ ಮತ್ತು ಮಾನಸ ಶತಕ (ತೆಲುಗು) ಎಂಬ ಕೃತಿಗಳಿವೆ. ಕೊನೆಯ ಆರು ಪತ್ರಗಳಲ್ಲಿ ಗುರುಸ್ತುತಿ ಮತ್ತು ಮೇಹರೋಗಕ್ಕೆ ಔಷಧವಿದೆ.

1556

ಕೆ. ಬಿ. ೧೭೯/೧	**ವಿರೂಪಾಕ್ಷ ಶತಕ**	ಭಾಮಿನೀಷಟ್ಪದಿ
೮"×೬.೪"	?	?
೧೫ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ : ವಿರೂಪಾಕ್ಷ ಶತಕ ಬರಿಯುವದಕ್ಕೆ ಶುಭಮಸ್ತು ||
ಶ್ರೀಗುರುವ ಬಲಗೊಂಬೆ ಸ
ರಾಗದಲಿ ಹೇಮಂತಕೂಟದ
ಯೋಗಿಯನು ಶ್ರೀಪರ್ಾದೊಲ್ಲಭ ವರಮುನೀಂದ್ರರನೂ
ಶ್ರೀಗಣಾಧೀಶನನು ವಾಣಿಯ
ನಾಗಭೂಷಣಗೆರಗಿ ಪೊಗಳುವೆ
ಆಗಮೋಕ್ಷವನೀವ ಪೊಂಪಾಪುರ ಯದೀಶ್ವರನಾ || ೧ ||

ಅಂತ್ಯ : ಧರಣಿ ಬೆಳೆಯಲಿ ಕಾಲದಲಿ ಮಳೆ
ಬರಲಿ ವೃಕ್ಷಗಳೆಲ್ಲ ಸುಪಲವೆರ
ಶಿರಲಿ ಗೋಗ್ರಾಸ ಬೆಳೆಯಲಿ ಗೋವು ಪಸರಿಸಲೀ
ಭರಡು ಕರೆಯಲಿ ಭಂಜೆಯರು ಪು
ತ್ರರನು ಪಡೆಯಲಿ ಹಂಪ್ಪೆಯಾಳ್ದನ
ಕರುಣವಾಗಲಿ ಕೃತಿಯ ಕೇಳ್ದವರಿಂಗ್ಗೆ ಶ್ರೀ ವಿರೂಪಾಕ್ಷಾ ||೧೩೬||
ಇತೀ ಶ್ರೀ ವಿರೂಪಾಕ್ಷಶತಕಂ ಸಂಪೂರ್ನಂ ಮಂಗಳಮಹಾ ಶ್ರೀ ||

ವಿಷಯ : ಹಂಪೆಯ ವಿರೂಪಾಕ್ಷನ ಸ್ತುತಿ.

ವಿಶೇಷ : ಮೊದಲಿನ ಮೂರು ಪತ್ರಗಳ ಒಂದೆರಡೆಡೆಗಳಲ್ಲಿ ಸ್ವಲ್ಪ ಹುಳು ತಿಂದಿದೆ. ಗ್ರಂಥಾಂತ್ಯದಲ್ಲಿ ವಿಘ್ನೇಶ್ವರನ ಚಿತ್ರವಿದೆ. ಪ್ರತಿಪದ್ಯವೂ 'ಶ್ರೀ ವಿರೂಪಾಕ್ಷಾ' ಎಂದು ಮುಗಿಯುತ್ತದೆ. ಈ ಗ್ರಂಥದೊಂದಿಗೆ ಪ್ರಾಣೇಶ್ವರಶತಕ, ಸದಾಶಿವಶತಕ, ಗುರುಶಿಷ್ಯಸಂವಾದ, ಅಂಬರೀಶಚರಿತ್ರೆ, ಧ್ರುವಚರಿತ್ರೆ, ದೂರ್ವಾಸಚರಿತ್ರೆಗಳಿವೆ.

1557

ಕೆ. ಬಿ. ೩೮೪/೨	**ವಿರೂಪಾಕ್ಷ ಶತಕ**	ಭಾಮಿನೀಷಟ್ಪದಿ
೭.೬" × ೫.೯"	?	?
೧೮–೩೩ ಪತ್ರ	೨೦ ಪಂಕ್ತಿ	೧೭ ಅಕ್ಷರ

ಆದಿ : ವಿರುಪಾಕ್ಷಶತಕ ಬರಿಯುವುದಕ್ಕೆ ಶುಭಮಸ್ತು.
ಶ್ರೀಗುರುವ ಬಲಗೊಂಬೆನೀಗ ಸ
ರಾಗದಲಿ ಹೇಮಂತಕೂಟದ
ಯೋಗಿಯನು ಶ್ರೀಪಾದದೊಲ್ಲಭ ವರಮುನೀಂದ್ರರನು
ಶ್ರೀಗಣಾಧೀಶನನು ವಾಣಿಯ
ನಾಗಭೂಷಣಗೆರಗಿ ಪೊಗಳುವೆ
ಆಗ ಮೋಕ್ಷವನೀವ ಪೊಂಪಾಪುರಯದೀಶ್ವರನ ॥ ೧ ॥
ಪೊಗಳುವೆನು ಪಾರ್ವತಿಯ ರಮಣನ
ಪೊಗಳಿ ಮಂಗಳಮೂರ್ತಿ ಹಂಪೆಯ
ಗಗನ ಗಂಗಾವೃತ ಜಟಾಜೂಟನನು ಮುದದಿಂದ
ಪೊಗಳಲೀತನಗಮ್ಯ ಸಾಧ್ಯವು
ನಗೆಗೆ ಜಯಮಾಡಿದರು ಶೂಲಿಯ
ಪೊಗಳ್ವ ಪರಿಯನು ತಿದ್ದಿಕೊಡಿ ಶಿವಭಕ್ತರಹುದೆನಲು ॥ ೨ ॥

ಅಂತ್ಯ : ರಾಯಸಂಗಮಸೂನು ಹರಿಹರ
ರಾಯನಾತನ ತಂಮ್ಮನಗ್ಗದ
ರಾಯ ಬುಕ್ಕನೃಪಾಲನಾತನ ಸುತನೊಳತ್ಯಧಿಕ
ರಾಯ ಹರಿಹರನನುಜ ವಿಕ್ರಮ
ರಾಯನಂದನ ಬುಕ್ಕನೃಪತಿಯ
ಸೂನು ದೇವನು ದೇವರಾಯಂಗಾಯುಶ್ರೀಯವನಿತ್ತು ಸಲಹೈ
ಶ್ರೀವಿರುಪಾಕ್ಷ ॥ ೧೩೨ ॥
ರಾಯಬಾಂಕನೃಪಾಲ ನೆಲೆಗೊಳ್ಳ
ಲಾಯತಿಕೆ ವಿದ್ಯಾನಗರ ಕುರು
ರಾಯನಾಳಿದ ಹಸ್ತಿನಾಪುರಕೆ ಸರಿಮಿಗಿಲು
ಜೀಯನಾ ಪುರವಾಸವಾ ಭೂ
ಸ್ತ್ರೀಯನಾಳುವ ದೇವರಾಯಂ
ಗಾಯು ಶ್ರೀಯವನಿತ್ತು ರಕ್ಷಿಸು ಶ್ರೀ ವಿರುಪಾಕ್ಷ ॥ ೧೩೭ ॥

× × × ×

ಧರಣಿ ಬೆಳೆಯಲಿ ಕಾಲದಲಿ ಮಳೆ
ಬರಲಿ ವೃಕ್ಷಗಳೆಲ್ಲ ಸುಫಲವೆ
ಶಿರಲಿ ಗೋಗ್ರಾಸವದು ಬೆಳೆಯಲಿ ಗೋವು ಪಸರಿಸಲಿ
ಬಂಡು ಕರೆಯಲಿ ಬಂಜೆಯರು ಪು
ತ್ರರನು ಪಡೆಯಲಿ ಹಂಪೆಯಾಳ್ದನ
ಕರುಣವಾಗಲಿ ಕೃತಿಯ ಕೇಳ್ದವರಿಗೆ ವಿರೂಪಾಕ್ಷ || ೧೩೬ ||
ಶ್ರೀ ವಿರೂಪಾಕ್ಷಶತಕ ಸಂಪೂರ್ಣ ಮಂಗಳ ಮಹಾ ಶ್ರೀ ||

ವಿಷಯ : ಹಂಪೆಯ ವಿರೂಪಾಕ್ಷನ ಸ್ತುತಿ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಪ್ರತಿಪದ್ಯವೂ 'ವಿರೂಪಾಕ್ಷ' ಎಂದು ಮುಗಿಯುತ್ತದೆ. ಈ ಪುಸ್ತಕದಲ್ಲಿ ಪ್ರಾಣೇಶ್ವರಶತಕ ಮತ್ತು ಸದಾಶಿವಶತಕ ಎಂಬ ಎರಡು ಕೃತಿಗಳಿವೆ. ತೆಳುವು ಕಾಗದ.

1558

ಕೆ. ೧೩೯/೩	**ವಿರೂಪಾಕ್ಷಾಸ್ಥಾನ ವರ್ಣನೆ**	ಚಂಪು
೧೪.೫" × ೧.೩"	ಚಂದ್ರ	ಸು. ೧೪೩೦
೧–೫ ಪತ್ರ	೭ ಪಂಕ್ತಿ	೬೫ ಅಕ್ಷರ

ಆದಿ : ಶ್ರೀ × × ಹಂಪೆ ವಿರೂಪಾಕ್ಷಾಸ್ಥಾನ ವರ್ಣನೆವಳಗೆ ನೃತ್ಯಪ್ರಕರಣಂ.
ಮತ್ತಮಾ ನಾದಮೂರ್ತಿಯಾದ ವಿರೂಪಾಕ್ಷನ ಕಟಾಕ್ಷವೀಕ್ಷಣದಿಂ ವರಂಬಡೆದ ಯಕ್ಕಲನಮಳವೃಂದರೆಂಬ ಮೂರು ತಿರದ ಗಾಣನಾಯಕರೊಳಗೆ ಸುಗುಡನೆನಿಸಿದ ಜಾಣಗಾಣಂ ತನಗುಚಿತವಾದ ತಾಣದೊಳಿರ್ದು ಭಾರಿಯ ದಂಡಿಗೆಯಂ ಕಂಬಳನೆಂಬ ಪಣಿಪತಿವೊಯ್ಯ

ಅಂತ್ಯ : ಕಂ || ದೊರೆವಡೆದೀ ಕೃತಿರತ್ನಮ
ನೆರಡಿಲ್ಲದ ಭಕ್ತಿಯಿಂದೆ ಪಂಪಾರಮಣನ
ಚರಣಾಂಬುಜಕರ್ಪಿಸಿದಂ
ಗುರುರಾಯ ಮಹಾಪ್ರಧಾನನಪ್ರತಿಮಾನಂ || ೯೬ ||
ಯಿಂದೀ ಶ್ರೀ ವಿರೂಪಾಕ್ಷಲಿಂಗನ ಆಸ್ಥಾನವರ್ನನೆ ವಚನ ೩೬ ಕಂದ ವೃತ್ತದಿಂದ್ಯೆವತ್ತೊಂಭತ್ತು ಮಂಗಳ ಮಹಾಶ್ರೀ.

ವಿಷಯ : ಹಂಪೆಯ ವಿರೂಪಾಕ್ಷನ ಆಸ್ಥಾನದ ನೃತ್ಯವರ್ಣನೆ.

ವಿಶೇಷ : ವಿರೂಪಾಕ್ಷಾಸ್ಥಾನವರ್ಣನೆಯ ನೃತ್ಯಭಾಗದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಇಲ್ಲಿ ಬರೆದಿದೆ. ಇದೇ ಕಟ್ಟಿನಲ್ಲಿ ಶೃಂಗಾರರತ್ನಾಕರ, ಸಭಾಪತಿ ಲಕ್ಷಣ (ತೆಲುಗು), ಸಭಾಪತಿಲಕ್ಷಣ, ಸುಳಾದಿಯೆಂಬ ಇತರ ಗ್ರಂಥ ಗಳಿವೆ.

1559

ಕೆ. ಎ. ೩೧	**ವಿರೂಪಾಕ್ಷಾಸ್ಥಾನ ವರ್ಣನೆ**	ಚಂಪು
೧೨.೯" × ೮"	ಚಂದ್ರ	ಸು. ೧೪೩೦
೯ ಪತ್ರ	೨೩ ಪಂಕ್ತಿ	೨೭ ಅಕ್ಷರ

ಆದಿ : ಹಂಪೆ ವಿರೂಪಾಕ್ಷಾಸ್ಥಾನ ವರ್ನನೆ ವಳಗೆ ನೃತ್ಯಪ್ರಕರಣಂ.
ಮತ್ತಮಾ ನಾದಮೂರ್ತಿಯಾದ ವಿರೂಪಾಕ್ಷನ ಕಟಾಕ್ಷವೀಕ್ಷಣದಿಂ ವರಂಬಡೆದ ಯಕ್ಕಲನವುಳವೃಂದರೆಂಬ ಮೂರುಂ ತೆರದ ಗಾಣನಾಯಕ ರೊಳಗೆ ಸುಗುಡನೆನಿಸಿದ ಜಾಣಗಾಣಂ ತನಗುಚಿತಮಾದ ತಾಣದೊಳಿರ್ದು ಭಾರಿಯ ದಂಡಿಗೆಯಂ ಕಂಬಳನೆಂಬ ಫಣಿಪತಿವೊಯ್ಯ ಪೆರೆಯನುರ್ಚುವಂತೆ ಬೆಳ್ವಟ್ಟೆಯ ಗವಸಣಿಗೆಯನುರ್ಚಿ ತುದಿವೆರಲಿಂ ತಂತಿಗಳಂ ಮಿಡಿದು ನೋಡ್ವೆ × × × ನಯನೇವಣೆಗಳನಳವಡಿಸುತ್ತೆ ಸಂದಷ್ಟುಮಾದ ಯಿಪ್ಪತ್ತೆ ದವಗುಣಂಗಳನಿಲ್ಲೆ ನಿಸುತ್ತೆ ಚದುರರ ಚಿತ್ತಮನಿರ್ಕುಳಿಗೊಳಿಸುತ್ತೆ ಕೇಳಿಸು ತಿರ್ದರಂತುಮಲ್ಲದೆಯುಂ || ೭೫ ||

ಅಂತ್ಯ : ಕಂದಾ || ದೊರೆವಡೆದೀ ಕೃತಿರತ್ನಮ
ನೆರಡಿಲ್ಲದ ಭಕ್ತಿಯಿಂದೆ ಪಂಪಾರಮಣನ
ಚರಣಾಂಬುಜಕರ್ಪಿಸಿದಂ
ಗುರುರಾಯ ಮಹಾಪ್ರಧಾನನಪ್ರತಿಮಾನಂ || ೯೭ ||
ಯಿಂದೀ ಶ್ರೀ ವಿರೂಪಾಕ್ಷಲಿಂಗನ ಆಸ್ಥಾನವರ್ನನೆ ವಚನ ೩೭ ಕಂದ ವೃತ್ತದಿಂದ್ಯೆವತ್ತೊಂಭತ್ತು ಮಂಗಳ ಮಹಾ ಶ್ರೀ ||

ವಿಷಯ : ಹಂಪೆಯ ವಿರೂಪಾಕ್ಷನ ಆಸ್ಥಾನದ ನೃತ್ಯವರ್ಣನೆ.

ವಿಶೇಷ : ಅಸಮಗ್ರಪ್ರತಿ. ಪತ್ರದ ಒಂದುಕಡೆ ಮಾತ್ರ ಬರವಣಿಗೆಯಿದೆ.

1560

ಕೆ. ೧೮	**ವಿವೇಕಚಿಂತಾಮಣಿ**	ಗದ್ಯ
೯.೧"×೧.೩"	ನಿಜಗುಣಶಿವಯೋಗಿ	ಸು. ೧೫೦೦
೪೦–೨೪೩ ಪತ್ರ	೭ ಪಂಕ್ತಿ	೫೩ ಅಕ್ಷರ

ಆದಿ : ಯಿಹುದರಿಂದಾ ಚಿಂತೆಯೋರದಿಹುದೆ ಪರಲೋಕದುಃಖಾಭಾವಮಕ್ಕುಂ ॥ ಮತ್ತಂ ಸರ್ವೈಶ್ವರ್ಯ ಸಂಪಂನನಾದ ಸಾರ್ವಭೌಮಾದಿ ಹಿರಣ್ಯಗರ್ಭಾಂಕ ಮಾದು ಕರೋತ್ತರಮಾಗಿ ಬಯಸಲ್ಪಕ್ಕ ಶತಗುಣೋತ್ತರಾನಂದಂಗಳೆಲ್ಲಂ ನಿಃಪ್ರುಹನಾದ ವಿವೇಕಿಗುಂಟಾಗಿಯುಂ ಬಳಿಕಾ ಆನಂದಂಗಳೆಲ್ಲಂ ಗ್ನಾನಿಯಿಂ ದರಿಯಲ್ಪಟ್ಟ ಬ್ರಂಹ್ಮಾಸಂಗಳಪ್ಪುದರಿಂದಾತಂಗಖಂಡಾನಂದ ಸಿದ್ಧಿಸಿತ್ತಾಗಿ ಯುಮದೆ ಸರ್ವಕಾಮಾಪ್ತಿಯೆನಿಸೂದು ।

ಅಂತ್ಯ : (೨೪ಗನೆಯ ಪತ್ರ) ಮತ್ತಮಾಬಿಂದುವಿನತಿಕ್ರಮಿಸಿರ್ದ ಶುಧನಿಃಷ್ಕಳ ಚಿಚಿಕ್ತ್ರಿಯಗ್ರದಲ್ಲಿ ಬೆಳಗುತಿರ್ಪ್ಪ ಶ್ರೀಗುರುಶಂಭುಲಿಂಗದಲ್ಲಿ ಕಾಲದೇಶಾದಿ ಕಲನ ಎಂದ್ದೂಯಿಲ್ಲದದರಿಂದ ಶ್ರೀಗುರು ಶಂಭುಲಿಂಗವೆ ನಿತ್ಯನಿರ್ಮಲ ನಿರಾ ವರಣ ನಿರ್ಮಾಯ ನಿರ್ಗುಣಾ ನಿಃಕಂರ್ಮ ನಿಷ್ಕಳ ನಿಃಪ್ರಪಂಚ ನಿರೌಘ ನಿರ್ಲೇಪ ನಿರಾಮಯ ನಿರವದ್ಯ ನಿಃಸಂಗ್ಗ ನಿರ್ದ್ವಂದ್ವ ನಿರಾಕುಳ ನಿರಾತಂಕ ನಿಃಷ್ಕಂಪ ನಿಸ್ತತ್ವ ನಿರಾಶ್ರಯ × × × × ಶ್ರೀಗುರುಶಂಭುಲಿಂಗದೊಡಗೂಡಿ ಸರ್ವಗ್ನತ್ವ ಸರ್ವಕರ್ತುತ್ವದಿಂ ಸತ್ಯಾನಂದಸ್ವರೂಪರಾಗಿರ್ಪ ಭೋಗ ಮೋಕ್ಷಂಗಳಂನೇಕಾಗ್ರಚಿತ್ತದಿಂ ಕೇಳಿ ಹೇಳಿದರ್ಗಾಗಲೆಂಬೀ ಪ್ರಾತರಾಸೀ ರ್ವಾದ ಲಕ್ಷಣ ಮಂಗಳಾಚರಣದಿಂದ ವಿವೇಕಚಿಂತಾಮಣಿಯಂಬ ಪ್ರಕರಣಮಂ ಪರಿಪೂರ್ನಮಕ್ಕುಂ ॥ ನಿಜಾಗುಣಾಂಹ್ವಯೇನ ಯೋಗಿನಾ ವಿರಚಿತಮಪ್ಪ ವಿವೇಕಚಿಂತಾಮಣಿ ಪ್ರಕರಣದೊಳ್ ಕಾಲಕ್ರಮವರ್ನನಂ ದಶಮಪರಿಚ್ಛೇದಃ ॥ ಶುಭ.

ವೃ ॥ ಶ್ರೀಮದನಂತಶೂರಿಜನಸಂಮತಿಯಿಂದೆಸವೀ ವಿವೇಕಚಿಂತಾ
ತಾಮಣಿಯಂಬ ಸತ್ಕ್ರುತಿಯನಾಲಿಸಿದವರ್ಗೆಡೆಗೊಂಡ ಸಂಶಯ
ಸ್ತೋಮವುಡಂಗಿ ಬೇರೆ ಬಹುಶಾಸ್ತ್ರವನೋದುವ ಬಾಧೆ ಬಂಗ್ಗಿಸ
ತ್ತ್ರೇಮದೊಳಕ್ಕುಮಿಷ್ಟಫಲಸಿಧಿಸಮುಂನ್ನತಿ ಶಂಭುಲಿಂಗದಿಂ ॥

ಗದ್ಯ ॥ ಸ್ವಸ್ತಿ ಸಮುಸ್ತ ಸುರವಿಸರ ಮಕುಟಮಣಿಗಣಕಿರಣ ಪ್ರಚುರಪ್ರವಾಹ ತರಂಗಿಣೀತಟ........ಪದಯುಗಳ ಶ್ರೀಶಂಭುಸತ್ಕ್ರುಪಾಕಟಾಕ್ಷಸಾಂದ್ರ ಚಂದ್ರಿಕಾಸಂಕ್ರಾಂತ ನಿರಸ್ತ ನಿಖಿಲ ಸಂಸ್ಸಾರಾಶ್ರಮ ವಿಸ್ಫಾರಿತ ನಿಜಾನಂ ದನಾಸ್ವಾದನಾ ಶಕ್ತಚಿತ್ತೋಪೇತ ನಿಜಗುಣಾಂಹ್ವಯನ ಶಿವಯೋಗಿನಾ ವಿರಚಿತ ವಿವೇಕಚಿಂತಾಮಣಿ ನಾಮಪ್ರಕರಣಂ ಪರಿಸಮಾಪ್ತತಂ ॥

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಅಸಮಗ್ರ ಪ್ರತಿ. ಶಕಟರೇಫದ ಬಳಕೆ ಇದೆ. ೧೭೧, ೧೮೭, ೧೮೮, ೧೮೯ ಈ ಕ್ರಮಾಂಕದ ಎರಡೆರಡು ಪತ್ರಗಳಿವೆ. ೧೧೧, ೨೩೨ ನೆಯ ಪತ್ರಗಳಿಲ್ಲ. ೧೮೭ ನೆಯ ಕ್ರಮಾಂಕದ ಎರಡನೆಯ ಪತ್ರದಲ್ಲಿ ಒಂದುಕಡೆ ಬರವಣಿಗೆಯಿಲ್ಲದೆ ಮತ್ತೊಂದು ಕಡೆಯಲ್ಲಿ ಎರಡು ಪಂಕ್ತಿಗಳಿವೆ. ೫೨, ೭೮, ೧೦೮, ೧೧೯, ೧೧೦, ೧೧೩, ೧೧೪, ೧೧೭ ರಿಂದ ೧೨೪, ೧೯೯ ರಿಂದ ೨೦೪ ಈ ಕ್ರಮಾಂಕದ ಪತ್ರಗಳು ಶಿಥಿಲ.

1561

ಕೆ. ೧೯೦/೩	**ವಿವೇಕಚಿಂತಾಮಣಿ**	ಗದ್ಯ
೧೩.೩"×೧.೭"	ನಿಜಗುಣಶಿವಯೋಗಿ	ಸು. ೧೫೦೦
೫೧-೧೯೩ ಪತ್ರ	೯ ಪಂಕ್ತಿ	೬೨ ಅಕ್ಷರ

ಆದಿ : ಶ್ರೀ ನಿಜಗುಣಶಿವಯೋಗಿಗಳು ವಿರಚಿತ ವಿವೇಕಚಿಂತಾಮಣಿಯೆಂಬ ಶಾಸ್ತ್ರವಂನು ಪ್ರಾರಂಭಿಸಿ ಬರೆಯುವದಕ್ಕೆ ನಿರ್ವಿಘ್ನಮಸ್ತು.

ಶ್ರೀಮದನೇಕ ಲೋಕಹಿತಮಾಗಿರೆ ವೇದ ಪುರಾಣ ಶಾಸ್ತ್ರದೊಳ್ ನಿ
ಯಾಮಿಸಿ ತೋರ್ಪ್ಪ ವಿಶ್ವವಿಷಯಂಗಳ ಸುಸ್ಥಿತಿಯಂ ವಿವೇಕಚಿಂ
ತಾಮಣಿಯೆಂದು ಸಲ್ಪ ಪೆಸರಿಟ್ಟು ಮಹಾಕವಿತಾ ಪ್ರಬಂಧಮಂ
ಪ್ರೇಮದಿ ಪೇಳ್ವೆ ನೀನೊಲಿದಾಲಿಸು ಶಂಭುಲಿಂಗವೇ ॥

ಗದ್ಯಾ ॥ ಶ್ರೀಮದನೇಕ ಭುವನ ಭವನಾರಂಭ ಮೂಲಸ್ತಂಬರೂಪ ಶಂಭುಲಿಂಗವಾದಿಯಾಗಿ ನಿರಾಭಾರಿ ದೇಶಿಕೋತ್ತಮಪರ್ಯಂತಮಾದ ಗುರುಪರಂಪರೆಗೆ ಮನೋವಾಕ್ಕಾಯಂಗಳಿಂದಭಿವಂದಿಸಿ

ಅಂತ್ಯ : ಇತಿ ಕಾಲಚಕ್ರವರ್ನ್ನನಂ ದಶಮಪರಿಚ್ಛೇದಃ ॥

ಶ್ರೀಮದನಂತಸೂರಿ ಜನಸಂಮತದಿಂದೆಸೆವೀ ವಿವೇಕಚಿಂ
ತ್ತಾಮಣಿಯೆಂಬ ಸತ್ಕೃತಿಯನಾಲಿಸಿದರ್ಗ್ಗಡೆಗೊಂಡ ಸಂಶಯ
ಸ್ತೋಮಮಡಂಗಿ ಬೇರೆ ಬಹುಶಾಸ್ತ್ರವನೋದುವ ಬಾಧೆ ಪಿಂಗಿ ಸ
ತ್ಪ್ರೇಮದೊಳಕ್ಕುಮಿಷ್ಟಫಲಸಿದ್ಧಿ ಸಮುಂನತಿ ಶಂಭುಲ್ಲಿಂಗದಿಂ ॥ ಶ್ರೀ ॥

ಗದ್ಯ ॥ ಸ್ವಸ್ತಿ ಸಮಸ್ತ ಸುರವಿಸರ ಮಕುಟಮಣಿಗಣಕಿರಣ ಪ್ರಚುರ ಪ್ರವಾಹತರಂಗಿಣೀತಟ ವಿರಾಜಿತ ಪದರಾಜೀವಯುಗಳ ಶ್ರೀ ಶಂಭು ಸತ್ಕೃಪಾಕಟಾಕ್ಷಸಾಂದ್ರ ಚಂದ್ರಿಕಾ ಸಂಕ್ರಾಂತ ನಿರಸ್ತ ನಿಖಿಳ ಸಂಸಾರ

ಶ್ರಮವಿಸ್ಫೂರಿತ ನಿಜಾನಂದಾಸ್ಪದ ಜ್ಞಾನಶಕ್ತಿಚಿತ್ತ್ರೋಪೇತ ನಿಜಗುಣಾ ಹ್ವಯೇನ ಶಿವಯೋಗಿ ವಿರಚಿತ ವಿವೇಕಚಿಂತ್ತಾಮಣಿ ನಾಮಪ್ರಕರಣಂ ಪರಿಸಮಾಪ್ತ.

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಇದರೊಂದಿಗೆ ಈತನ ಪರಮಾರ್ಥಗೀತೆ ಮೊದಲಾದ ಷಟ್ಶಾಸ್ತ್ರಗ್ರಂಥ ಗಳೂ, 63 ಪುರಾತನರ ತ್ರಿವಿಧಿಯೂ ಇರುತ್ತವೆ. ಕಾಲಾದಿಗಳನ್ನು ಪರಮಾರ್ಥಪ್ರಕಾಶಿಕೆಯ ಕೊನೆಯಲ್ಲಿ ನೋಡಿರಿ.

1562

ಕೆ. ೧೯೭	**ವಿವೇಕಚಿಂತಾಮಣಿ**	ಗದ್ಯ
೯.೪" × ೨"	ನಿಜಗುಣಶಿವಯೋಗಿ	ಸು. ೧೫೦೦
೧–೧೬೪ ಪತ್ರ	೯ ಪಂಕ್ತಿ	೩೦ ಅಕ್ಷರ

ಆದಿ : ಶ್ರೀ × × ವಿವೇಕಚಿಂತಾಮಣಿ ಬರೆವದಕೆ ನಿರ್ವಿಘ್ನಮಸ್ತು ||
ಶ್ರೀಮದನೇಕ ಲೋಕಹಿತಮಾಗಿರೆ ವೇದ ಪುರಾಣ ಶಾಸ್ತ್ರದೊ
ಳ್ಪೇಮಿಸಿ ತೋರ್ಪ ವಿಶ್ವವಿಷಯಂಗಳಂ ಸುಸ್ಥಿತಿಯಂ ವಿವೇಕಚಿಂ
ತಾಮಣಿಯೆಂದು ಸಲ್ವ ಪೆಸರಿಟ್ಟು ಮಹಾ ಕವಿತಾಪ್ರಬಂಧಮಂ
ಪ್ರೇಮದಿಂ ಪೇಳ್ವೆ ನಾನಿದ ನೀನೊಲಿದಾಲಿಸು ಶಂಬುಲಿಂಗವೇ || ೧ ||

ಗದ್ಯ || ಶ್ರೀಮದನೇಕ ಭುವನ ಭವನಾರಂಭ ಮೂಲಸ್ತಂಭರೂಪ ಶಂಭುಲಿಂಗ ವಾದಿಯಾಗಿ ನಿರಾಭಾರಿ ದೇಶಿಕೋತ್ತ್ರಮಪರ್ಯಂತಮಾದ ಗುರುಪರಂಪರೆಗೆ ಮನೋವಾಕ್ಕಾಯಂಗಳಿಂದಭಿವಂದಿಶಿ ಮತ್ತಮಾ ನಮಸ್ಕಾರ ಲಕ್ಷಣ ಮಂಗಲಾಚರಣಕ್ಕೆನಿರ್ದಿ....ದಿಂ ಪ್ರಕರಣ ಪರಿಸಮಾಪ್ತಿ ಶಿಷ್ಯ ಪ್ರಶಿಷ್ಯ ಪ್ರವಾಹಪ್ರವರ್ತನೆ....ಳ್ವರ ಚಿತ್ತ್ರಸ್ವಸ್ಥತೆಗಳೆಂಬ ಫಲತ್ರಯಸಿದ್ಧಮೆಂದು ನಿರ್ಧರಿಸಿ × × × ಮುಮುಕ್ಷುಜನಂಗಳೀ ಜಗತ್ತ್ರಿನ ಸ್ಥಿತಿಗತಿಗಳಾದ ಪ್ರಕಾರದಿಂದಿಹವೆಂದರಿಸಿ ಬಳಲದಭಿವ್ಯಕ್ತಮಾಗಿಲ್ಲಿಯೆ ಸಲ್ಲೀಲೆಯಿಂದರಿದು ಕೃತಾರ್ಥರಾಗಲೆಂದು ನಿಜಗುಣಶಿವಯೋಗಿ ಬೆಳುಗಂನಡಮಾದ ವಚನ ರಚನೆಗಳಿಂ ವಿವೇಕಚಿಂತಾಮಣಿಯಂಬ ಪ್ರಕರಣಮಂ ಪೇಳ್ದನದೆಂತೆಂ ದೊಡೆ |

ಅಂತ್ಯ : ಅನಂತರದೊಳಾ ಸ್ಥೂಲರೂಪ ಪೃಥ್ವೀತತ್ವದತ್ತಣಿಂ ದಶಗುಣಾಧಿಕಮಾ ಗಾವರಿಸಿರ್ದ ಅಪ್ಪುತತ್ವದಲ್ಲಿ ಅಮರೇಶ ಪ್ರಭಾಸ ನೈಮಿಶ ಪುಷ್ಕರ ಆಷಾಡಿ

K 0.91.016

ಡಿಂಡಿ ಭಾರಭೂತಿ ನಾಕುಲರೆಂಬ ಗುಹ್ಯಾಷ್ಟಕರಿಹರೂ ಅಪ್ಪುತತ್ವದತ್ತಣಿಂ ದಶಗುಣಾಧಿಕವಾಗಾವರಿಸಿರ್ದ ತೇಜಸ್ತತ್ವದಲ್ಲಿ ಹರಿಶ್ಚಂದ್ರ ಶ್ರೀಶೈಲ ಕಲ್ಪವಾನ್ನು ವಾತಕೇಶ್ವರ ಮಹಾಕಾಳ ಮಧ್ಯಮ ಕೇತಾರ ಭೈರವರೆಂಬ ಆದಿಗುಹ್ಯಾಷ್ಟಕರಿಹರು ||

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ೭೭, ೧೩೫ ನೆಯ ಪತ್ರಗಳಲ್ಲಿ ಒಂದು ಪಾರ್ಶ್ವದಲ್ಲಿ ಮಾತ್ರ ಬರವಣಿಗೆ ಇದೆ. ೧೧೭ ನೆಯ ಕ್ರಮಾಂಕದ ಎರಡು ಪತ್ರಗಳಿವೆ. ಕೆಲವು ಪತ್ರಗಳನ್ನು ಹುಳು ಹೊಡೆದಿರುವುದರಿಂದ ಅವುಗಳಲ್ಲಿ ರಂಧ್ರ ಬಿದ್ದಿದೆ.

1563

ಕೆ. ೪೧೨/೭	**ವಿವೇಕಚಿಂತಾಮಣಿ**	ಗದ್ಯ
೧೮. ೨"×೨"	ನಿಜಗುಣಶಿವಯೋಗಿ	ಸು. ೧೫೦೦
೧೪೮–೨೫೭ ಪತ್ರ	೯ ಪಂಕ್ತಿ	೭೫ ಅಕ್ಷರ

ಆದಿ : ಶ್ರೀ ನಿಜಗುಣಶಿವಯೋಗಿಗಳು ವಿರಚಿತ ವಿವೇಕಚಿಂತಾಮಣಿಯೆಂಬ ಶಾಸ್ತ್ರವನ್ನು ಪ್ರಾರಂಭಿಸಿ ಬರೆಯುವುದಕ್ಕೆ ನಿರ್ವಿಘ್ನಮಸ್ತು || ಶ್ರೀ ನಾರಾಯಣ ಪ್ರಭುರ್ಜಯತಿ ||

ಶ್ರೀಮದನೇಕ ಲೋಕಹಿತವಾಗಿರೆ ವೇದ ಪುರಾಣ ಶಾಸ್ತ್ರದೊಳು ನಿ
ಯಾಮಿಸಿ ತೋರ್ಪ ವಿಶ್ವ ವಿಷಯಂಗಳ ಸುಸ್ಥಿತಿಯಂ ವಿವೇಕಚಿಂ
ತಾಮಣಿಯೆಂದು ಸಲ್ವ ಪೆಸರಿಟ್ಟು ಮಹಾ ಕವಿತಾಪ್ರಬಂಧಮಂ
ಪ್ರೇಮದಿ ಪೇಳ್ವೆ ನೀನೊಲಿದಾಲಿಸು ಶಂಭುಲಿಂಗವೇ ||

ಗದ್ಯಾ || ಶ್ರೀಮದನೇಕ ಭುವನ ಭವನಾರಂಭ ಮೂಲಸ್ಥಂಭರೂಪ ಶಂಭುಲಿಂಗವಾದಿಯಾಗಿ ಸಿರಾಭಾರಿ ದೇಶಿಕೋತ್ತಮಪರ್ಯಂತವಾದ ಗುರುಪರಂಪರೆಗೆ ಮನೋವಾಕ್ಕಾಯಗಳಿಂದಭಿವಂದಿಸಿ ||

ಅಂತ್ಯ : ಇತಿ ಕಾಲಚಕ್ರವರ್ಣನಂ ದಶಮ ಪರಿಚ್ಛೇದಃ ||

ಶ್ರೀಮದನಂತಸೂರಿಜನ ಸಂಮತದಿಂದೆಸೆ ವಿವೇಕಚಿಂ
ತ್ತಾಮಣಿಯೆಂಬ ಸತ್ಕ್ರಿಯನಾಲಿಸಿದರ್ಗೆಡೆಗೊಂಡ ಸಂಶಯ
ಸ್ತೋಮವಡಂಗಿ ಬೇರೆ ಬಹುಶಾಸ್ತ್ರವ ನೋಡುವ ಬಾಧೆ ಪಿಂಗಿ ಸ
ತ್ಪ್ರೇಮದೊಳಕ್ಕುತ್ಕೃಷ್ಟ ಫಲಸಿದ್ಧಿ ಸಮುಂನತಿ ಶಂಭುಲಿಂಗದಿಂ ||

ಸ್ವಸ್ತಿ ಸಮಸ್ತ ಸುರವಿಸರ ಮಕುಟಮಣಿಗಣಕಿರಣ ಪ್ರಚುರ ಪ್ರವಾಹತರಂಗಿಣೀತಟ ವಿರಾಜಿತ ಪದರಾಜೀವಯುಗಳ ಶ್ರೀಶಂಭುಸತ್ಕೃಪಾಕಟಾಕ್ಷ ಸಾಂದ್ರ ಚಂದ್ರಿಕಾ ಸತ್ಕಾ್ರಂತ ನಿರಸ್ತನಿಖಿಳ ಸಂಸಾರಶ್ರಮವಿಸ್ಫೂರಿತ ನಿಜಾನಂದಾಸ್ಪದ ಜ್ಞಾನಶಕ್ತಿ ಚಿತ್ತೋ್ಪೇತ ಗುಣಾಹ್ವಯೇನ ಶ್ರೀ ಶಿವಯೋಗಿ ವಿರಚಿತ ವಿವೇಕಚಿಂತಾಮಣಿ ನಾಮಪ್ರಕರಣಂ ಪರಿಸಮಾಪ್ತ ॥ ಜಯಮಂಗಳ ಮಹಾ ಶ್ರೀ ಶ್ರೀ ಶ್ರೀ ॥ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕ ವರ್ಷಂಗಳು ೧೭೪೯ನೆ ಸರ್ವಜಿನ್ನಾಮ ಸಂವತ್ಸರ ಪುಷ್ಯ ಶು ೧೦ ಲ್ಲು ಮಹಾರಾಜ ಶ್ರೀ ಕೃಷ್ಣರಾಜಯ್ಯರಶಿನವರ ಪುತ್ರರಾದ ನಾರಣರಾಜಯ್ಯ ಅರಶಿನವರ ಸಂನಿಧಾನಕ್ಕೆ । ಶ್ರೀ ಯೋಗವಟಾಗ್ರಹಾರದ ಶೇಷಾಚಾರ್ಯರ ಪುತ್ರನಾದ ರಾಮಸ್ವಾಮಿಯು ಬರದು ವಪ್ಪಿಸಿಕ್ಕೊಟ್ಟ ಶ್ರೀ ನಿಜಗುಣ ಸ್ವಾಮಿಗಳು ನಿರೂಪಿಸಿದ ಕಾವ್ಯ ೬ ತ್ರಿವಿಧೆ ೧ ಸಹಾ ಕಾವ್ಯ ೭ನೂ ಯಿದು ವಂದೇ ಪುಸ್ತಕಕ್ಕೆ ಬರದು ವಪ್ಪಿಸಿಕೊಟ್ಟ ಯೀ ಪುಸ್ತಕಾ ಆಚಂದ್ರಾರ್ಕ ಸ್ಥಾಯಿಯಾಗಿ ಆಯುರಾರೋಗ್ಯೈಶ್ವರ್ಯಪ್ರದವಾಗಿ ವಿಜಯಪ್ರದವಾಗಿ ಯಿರಲುಳ್ಳದ್ದು ಶ್ರೀ ಶ್ರೀ ಶ್ರೀ ಕಾವ್ಯ ಯೇಳಕ್ಕೆ ವಿವರಾ । ವಚನಾ ೧ । ವಿವೇಕಚಿಂತಾಮಣಿ ೧ ಪರಮಾರ್ಥಪ್ರಕಾಶಿಕೆ ೧ ಪರಮಾನುಭವಬೋಧೆ ೧ ಅನುಭವಸಾರ ೧ ಗೀತೆ ೧ ತ್ರಿವಿಧೆ ೧ ಸಹಾ ಕಾವ್ಯ ೭ ಕ್ಕೆ ಶ್ರೀ ಶಂಭುಲಿಂಗ ನಿಜಗುಣಶಿವಯೋಗಿಗಳ ಕೃಪಾಕಟಾಕ್ಷ ಸಿದ್ಧಿರಸ್ತು ಶ್ರೀ ಶ್ರೀ ಶ್ರೀ.

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಗ್ರಂಥ ಸುಸ್ಥಿತಿಯಲ್ಲಿದೆ. ಇದರೊಂದಿಗೆ ಇದೇ ಗ್ರಂಥಕಾರನ ಕೈವಲ್ಯ ಪದ್ಧತಿ, ಅರವತ್ತುಮೂವರತ್ರಿವಿಧಿ , ಪರಮಾರ್ಥಪ್ರಕಾಶಿಕೆ, ಪರಮಾರ್ಥ ಗೀತೆ, ಅನುಭವಸಾರ, ಪರಮಾನುಭವಬೋಧೆ ಎಂಬ ಆರು ಗ್ರಂಥಗಳೂ ಇವೆ. ಕಟ್ಟಿನ ಕೊನೆಯಲ್ಲಿ ಪ್ರತಿಯ ಕಾಲವನ್ನು ಶಾ. ಶಕ ೧೭೪೯ ಎಂದು ಕೊಟ್ಟಿರುತ್ತದೆ.

1564

ಕೆ. ೫೧೫	**ವಿವೇಕಚಿಂತಾಮಣಿ**	ಶ್ಲೋಕ, ಗದ್ಯ
೧೨.೭"×೨.೧"	ನಿಜಗುಣಶಿವಯೋಗಿ	ಸು. ೧೫೦೦
೧–೫೬ ಪತ್ರ	೧೧ ಪಂಕ್ತಿ	೬೦ ಅಕ್ಷರ

ಆದಿ : ಶ್ರೀ ಗುರುವೇ ನಮಃ ॥
ವಿದ್ಯಾವಾರ್ಧಿವಿಲೋದನಾತ್ಸಮುದಿತೋ ವಿಜ್ಞಾನಸಭಾಭಿರ್ಯುತೋ
ವಿದ್ವತ್ಸಂಮತಿಮದ್ವಿವೇಕ ಪದಯುಕ್ಚಿಂತಾಮಾಗಿರ್ದೀಪ್ತಿಮ್
ಶ್ರೀ ಕರ್ನಾಟಭಾಷಯಾ ನಿಜಗುಣ ಶ್ರೀಯೋಗಿನಾ
ನಿರ್ಮಿತಸ್ತಂ ಗೀರ್ವಾಣ ವಚೋಮುಖೇನ ವಿವೃತಂ ತುರ್ವೇ
ಪ್ರಣಾಮ್ಯಾಂಬಿಕಾಂ ॥ ೧ ॥

× × × ×

ಶ್ರೀಮದನೇಕಲೋಕಹಿತಮಾಗಮ ವೇದ ಪುರಾಣ ಶಾಸ್ತ್ರ
ಣವರ್ಗಾಶಿದೈಶ್ಯ ವಿಶ್ವವಿಷಯೋನ್ನತಿ ಸುಸ್ಥಿತಿಗಂ ವಿವೇಕಚಿಂ
ತಾಮಣಿರಿತ್ಯಘೋಘವರನಾಮಕಂ ಮಹಾ ಕವಿತಾಪ್ರಬಂಧಕಂ
ಪ್ರೇಮತ ಆತನೋವ್ಯತ ಇಮಂ....ಣು ಪಾಲಯ ಶಂಭುಲಿಂಗ ಮಾಂ
॥ ೧೧ ॥

× × × ×

ಅನಂತರಮನಾದಿ ನಿರ್ಮಲ ಚಿದ್ರೂಪ ಸರ್ವೋತ್ಕೃಷ್ಟ ಸರ್ವಜ್ಞ ಸರ್ವೈಶ್ವರ್ಯ ಸಂಪನ್ನ ಸರ್ವಾರ್ಥವೇತ್ರೇತಿ ಶ್ರುತಿ ಶ್ರುತಿಬೋಧಿತ ಸರ್ವಜ್ಞತ್ವ ಬ್ರಹ್ಮ ವಿಷ್ಣು ರುದ್ರಾದಿ ಪಂಚಮೂರ್ತಿ

ಅಂತ್ಯ : ತದುತ್ಪನ್ನ ಸರ್ವೋತ್ಕೃಷ್ಟ ಚರಮಸ್ಥಾನೀಭೂತ ಪುನರಾವೃತ್ತಿರಹಿತ ಸಕಲಶಾಸ್ತ್ರ ಕೋಲಾಹಲ ಪರ್ಯವಸನ್ನ ನಾಮಜಾತಿ ಕ್ರಿಯಾವಾಸನಾ ಪ್ರಾಪ್ತಿ ಮನೋವಾಗಗಚೋರ ನಿತ್ಯಾನಂದಾತ್ಮಕ ಶ್ರುತ್ಯಾಚಾರ್ಯಪ್ರಸಾದ ಸಿದ್ಧಿನಿಶ್ಚಿತ ವಿದೇಹ ಕೈವಲ್ಯಮಮೂಲ್ಯಂ ವಿಜೃಂಭತೇ ॥ ಇತಿ × × × ಶ್ರೀ ಲಿಂಗರಾಜೇನ ವಿರಚಿತೆ ವಿವೇಕಚಿಂತಾಮಣಿ ವಿವರಣೆ ಶ್ರೀ ಲಿಂಗ ರಾಜೀಯೆ ಸಕಲ ವಿದ್ವಜ್ಜನ ಕಿರೀಟಾಯಮಾನೆ ವೇದಾದಿ ಸರ್ವಾರ್ಥ ಪ್ರಕಾಶಃ ಪ್ರಥಮ ಪರಿಚ್ಛೇದಃ ॥
ವಿವೇಕಚಿಂತಾಮಣಿರಬ್ಜ ಜನ್ಮನಾ ಚಿಂತಾಮಣಿಃ ಪ್ರಾಕ್ತುಲಿತಾ ಸ
ಕೌತುಕಂ ।
ಪೂರ್ವೋಗುರುರ್ಲಿಂಗನೃಪಂ ಸಮಾಗಮಾದ್ಗಿರ್ಣಹೇತೋರಪರೋ
ಲಘುರ್ಹರಿಂ ॥
ಇಂದ್ರಂ ॥ ಶ್ರೀ ಶಿವಾಭ್ಯೋಂ ನಮಃ ॥ ಶ್ರೀ ನಿಡಿಮಾವಿಡೀ ಯಿಂಮ್ಮಡಿ ಕರಿಬಸವಶಿಷ್ಯ ಶ್ರೀ ವೀರಪ್ಪಾರಾಧ್ಯಣಿ ಪುಸ್ತಕಂ ॥ ಶ್ರೀ ॥

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ೧೪ನೆಯ ಗರಿಯಲ್ಲಿ ೫ ಪಂಕ್ತಿಗಳನ್ನು ಮಾತ್ರ ಬರೆದಿದೆ. ೨೭ನೆಯ ಗರಿಯ ಒಂದು ಕಡೆ ಮಾತ್ರ ಬರಹವಿದೆ. ೩೪ನೆಯ ಗರಿಯ ಒಂದು ಪಾರ್ಶ್ವದಲ್ಲಿ ೪ ಪಂಕ್ತಿಗಳನ್ನು ಮಾತ್ರ ಬರೆದಿದೆ.

1565

ಕೆ. ಎ. ೨೫೭	**ವಿವೇಕಚಿಂತಾಮಣಿ**	ಗದ್ಯ, ಪದ್ಯ
೧೩.೯"×೯.೨"	ನಿಜಗುಣಶಿವಯೋಗಿ	ಸು. ೧೫೦೦
೧–೧೦೪ ಪತ್ರ	೨೬ ಪಂಕ್ತಿ	೨೪ ಅಕ್ಷರ

ಆದಿ : ಶ್ರೀಮದನಕ ಲೋಕಹಿತಮಾಗಿರೆ ವೇದ ಪುರಾಣ ಶಾಸ್ತ್ರದೊ
ಳ್ನೇಮಿಶಿ ತೋರ್ಪ ವಿಶ್ವವಿಷಯಂಗಳ ಸಂಸ್ಥಿಯಂ ವಿವೇಕಚಿಂ
ತಾಮಣಿಯೆಂದು ಸಲ್ವ ಪೆಸರಿಟ್ಟು ಮಹಾ ಕವಿತಪ್ರಬಂಧಮಂ
ಪ್ರೇಮದಿ ಪೇಳ್ವೆ ನಾನಿದನೆ ನೀನೊಲಿದಾಲಿಸು ಶಂಭಲಿಂಗವೇ ||

× × × ×

ಬಳಲದಭಿವ್ಯಕ್ತಮಾಗಿಲ್ಲಿಯೆ ಸಲೀಲೆಯಿಂದರಿದು ಕೃತಾರ್ಥರಾಗವೆಂದು ನಿಜಗುಣಶಿವಯೋಗಿ ಬೆಳಗುಂನಡಮಾದ ವಚನರಚನೆಗಳಿಂ ವಿವೇಕ ಚಿಂತ್ರಾಮಣಿಯಂಬ ಪ್ರಕರಣಮಂ ಪೇಳ್ವೆನೆಂದೆಂತೊಡೆ

ಅಂತ್ಯ : || ಶಿವಸಭಾಸ್ಥಾನ || ಬಳಿಕ ನಾಲ್ಕು ಬಾಗಿಲನೊಳಹೊಕ್ಕು ನಿರೀಕ್ಷಿಸೆ ದೃಷ್ಟಿ ಗಶ್ಚರಿದೋರಿ ವರ್ನಿಸಲಸ್ತ್ರಕ್ಯಮಾಗಿ ಸರ್ವೇಶ್ವರನ ಸಭಾಮಂಟಪಂ ಪರಿಶೋಭಿಸುತಿಹುದದರ ನಟ್ಟನಡುವೆ ಕೋಟಿಸೂರ್ಯ........ಡಿಸುವ ದಿವ್ಯ ಸಿಂಹ್ಮಾಸನ

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಅಸಮಗ್ರ. ಶಿಥಿಲಪ್ರತಿ. ಕೊನೆಯ ಪತ್ರದ ಸ್ವಲ್ಪಭಾಗ ಹಂದು ಹೋಗಿದೆ.

1566

ಕೆ. ಬಿ. ೧೪೯	**ವಿವೇಕಸಾರ, ಭಾಗ–೧**	ಗದ್ಯ
೭.೪" × ೬.೨"	ವಾಸುದೇವಯತಿ ಶಿಷ್ಯ	?
೧–೧೫೯ ಪತ್ರ	೧೧ ಪಂಕ್ತಿ	೧೬ ಅಕ್ಷರ

ಆದಿ : ಶ್ರೀ × × ಮಥರೆ ಮನನ ಬರೆವುದಕ್ಕೆ ನಿರ್ವಿಘ್ನಮಸ್ತು.
ಬೋಧಾನಂದಘನಂ ನಿರಸ್ತ ಸಕಲಂ ಕಾರುಣ್ಯಪೂರ್ಣೇಕ್ಷಣಂ
ಮೂಢಾನಾಮುಪದೇಶಕಂ ಚ ಸತತಂ ಪಾಪಾತ್ಮನಾ ಪಾಪಹಂ
ವೈರಾಗ್ಯಂ ಚ ಹಿ ರಾಗಿಣಾಂ ಸುಖಕರಂ ಸಂಪಾದಕಂ ಸರ್ವದಾ
ಶ್ರೀಮದ್ದೇಶಿಕ ವಾಸುದೇವ ಯತಿವರಃ ಸರ್ವಸ್ವರೂಪಂ ಭಜೇ ||

× × × ×

ಅನುಗ್ರಹಾರ್ಥ ಮರ್ತ್ಯಾನಾಂ ಸಂಸ್ಕೃತಾನಧಿಕಾರಿಣಾಂ |
ವಿವೇಕಸಾರಾದ್ರಿರಿತ್ರೂಣಾಂ ರಚ್ಯತೇ ಭಾಷಯಾಮಯ ||
ಆವನಾನೊಬ್ಬನು ಲೋಕದಲ್ಲಿ ಮೂಢರನೆಲ್ಲಾ ವಿವೇಕವಂತರ ಮಾಡಿ ಸರ್ವೋಪದೇಶಕನಾಗಿ ಸರ್ವಸ್ವರೂಪಿಯಾಗಿ ಯಿಹನು ಅಂಥಾ ವಾಸುದೇವ ಯತಿಯರು ವಂದನೆಯ ಮಾಡಿ × × × × × ವಿವೇಕಸಾರವೆನಿಸುವ ಗ್ರಂಥವು ನನ್ನಿಂದ ಕರ್ನಾಟಕ ಭಾಷಾರಚನೆಯಾಗಿ ಹೇಳಲ್ಪಟ್ಟಿತು ||

ಅಂತ್ಯ : ಈ ದೇಶದಲ್ಲಿ ಯಿದ್ದೆನು. ಆ ದೇಶದಲ್ಲಿ ಯಿರಲಿಲ್ಲವೆಂದು ದೇಶದಿಂದಲು ನಾನು ಈ ಸಂವತ್ಸರದಲ್ಲಿ ಹುಟ್ಟಿದೆನು | ಯಿನ್ನುಮೇಲೆ ತಾನು ಯಿಲ್ಲದೆ ಹೋಗುತ್ತಿದೇನೆ ಯಂದು ಕಾಲದಿಂದಲು ಈ ವಸ್ತುವು ನಾನಲ್ಲ | ಆ ವಸ್ತುವು ನಾನು ಅಲ್ಲವೆಂದು.

ವಿಷಯ : ವೇದಾಂತ.

ವಿಶೇಷ : ಅಕ್ಷರಗಳು ವಿರಳವಾಗಿವೆ. ಇದರ ಉತ್ತರಭಾಗ ಕೆ. ಬಿ. ೨೧೭ನೆಯ ಪುಸ್ತಕದಲ್ಲಿದೆ.

1567

ಕೆ. ಬಿ. ೨೧೭ **ವಿವೇಕಸಾರ, ಭಾಗ–೨** ಗದ

೭.೪″ × ೬.೨″ ವಾಸುದೇವಯತಿಶಿಷ್ಯ ?

೧೬೧ ಪತ್ರ ೧೧ ಪಂಕ್ತಿ ೧೬ ಅಕ್ಷರ

ಆದಿ : ವಸ್ತುವಿನಿಂದಲು ಆತ್ಮನು ಪರಿಚ್ಛಿನ್ನನಾಗಿ ತೋರುತ್ತಾ ಯಿಧಾನೆ. ಭ್ರಾಂತಿ ಇಂದ ತೋರುವಂಥಾ ಈ ಪರಿಛಿಂನತ್ವವು ವಿಚಾರಿಸ್ತರೆ ಯಿಲ್ಲದೆ ಹೋಗುತ್ತಿದೆ. ಅದೆಂತೆಂದರೆ ಹೇಳೇವು | ಆತ್ಮನು ವ್ಯಾಪಕನಾಗಿ ಯಿಧಾನೆಯಾದ ಕಾರಣ ಆತ್ಮನಿಗೆ ದೇಶದಿಂದ ಪರಿಛಿಂನತ್ವವು ಇಲ್ಲಾ

ಅಂತ್ಯ : ಅವರಲ್ಲಿ ಯಿರುವ ಅಭಿಮಾನವನು ಇಡದೆ ಸೋಹಂಭಾವನಾದ ಯಲ್ಲಾ ಅಭಿಮಾನವು ಸರ್ವಥಾನಾದ ಆತ್ಮನೆ ನಾನು ಯಂದು ಯಾವನ ತಿಳಿಯುತ್ತಾನೊ ಅವನೆ ಮುಮುಕ್ಷು ಅವನೆ ಸಚಿದಾನಂದಾತ್ಮನು ಅವನೆ ಮುಮುಕ್ಷ್ನು ಯಂದು ಶಾಸ್ತ್ರಸಂಮತ್ತ ಶಿದ್ಧಾಂತವೆಂದು ಯಿತಿ ಕನ್ನಡ ಭಾಷೆಯೊಳ್ವಿರಚಿಸಿದ ವಾಸುದೇವ ಯತೀಂದ್ರೋಕ್ತವಾದ ವಿವೇಕಸಾರದಲ್ಲಿ ಪ್ರಿಯತಮತ್ವಪ್ರಕರಣಮಂ ಪೇಳ್ದುದೆಂಬಲ್ಲಿಗೆ ಯಿಪತ್ತೊಂದನೆ ಅಧ್ಯಾಯ ಸಂಪೂರ್ನ ಮಂಗಳಮಹಾ ಶ್ರೀ ॥

ವಿಷಯ : ವೇದಾಂತ.

ವಿಶೇಷ : ಇದರ ಪೂರ್ವಭಾಗ ಕೆ. ಬಿ. ೧೪೯ನೆಯ ಪುಸ್ತಕದಲ್ಲಿದೆ.

1568

ಕೆ. ೩೯೨	**ವಿವೇಕಸಾರ**	ಗದ್ಯ
೧೫″ × ೧.೪″	ವಾಸುದೇವಯತಿಶಿಷ್ಯ	?
೧–೧೭೦ ಪತ್ರ	೭ ಪಂಕ್ತಿ	೭೦ ಅಕ್ಷರ

ಆದಿ : ಶ್ರೀ × × × ಮನನದ ಪುಸ್ತಕಕ್ಕೆ ಬರವದಕ್ಕೆ ನೆರ್ವಿಗ್ನಮಸ್ತು × ×
ಬೋಧಾನಂದ ಘನಂ ನಿರಸ್ತ ಸಕಲಂ ಕಾರುಣ್ಯಪೂರ್ಣೇಕ್ಷಣಂ
ಮೂಢಾನಾಮುಪದೇಶಕಂ ಚ ಸತತಂ ಪಾಪಾತ್ಮನಾಂ ಪಾಪಹಂ
ವೈರಾಗ್ಯಂ ಚ ವಿರಾಗಿಣಾಂ ಸುಖಕರಂ ಸಂಪಾದಕಂ ಸರ್ವದಾ
ಶ್ರೀಮದ್ದೇಶಿಕ ವಾಸುದೇವಯತಿನಂ ಸರ್ವಸ್ವರೂಪಂ ಭಜೇ ॥
× × × ×
ಅನುಗ್ರಹಾರ್ಥಂ ಮರ್ತ್ಯಾನಾಂ ಸಂಸ್ಕೃತಾನಧಿಕಾರಿಣಾಂ
ವಿವೇಕಸಾರಃ ಶೋತೃಣಾಂ ರಚ್ಯತೆ ಭಾಷಯಾ ಮಯಾ ॥
ಆವನಾನೊಬ್ಬನು ಲೋಕದಲ್ಲಿ ಮೂಢರನೆಲ್ಲಾ ವಿವೇಕವಂತರ ಮಾಡಿ ಸರ್ವೋಪದೇಶಕನಾಗಿ ಸರ್ವಸ್ವರೂಪಿಯಾಗಿ ಯಿಹನು ಅಂಥಾ ವಾಸುದೇವ ಯತಿಯನೂ ವಂದನೆಯಂ ಮಾಡಿ

ಅಂತ್ಯ : ನಾವು ಯಾವದ್ಯಾವತ್ ಯಲ್ಲಿ ಯಲ್ಲಿ ನಿರೂಪಿಸಿಯಿಥೆವೆಯೋ ಅದೆಲ್ಲಾ ಶಾಸ್ತ್ರಗಳಲ್ಲಿ ನಿರೂಪಿಸಿ ಯಿದೆಯಂದು ತಿಳಿದುಕೊಂಬುದು । ಯಿಾಯರ್ಥದಲ್ಲಿ ಸಂದೇಹವಿಲ್ಲ । ನಿಶ್ಚಯವು । ಯೀ ಪ್ರಕಾರಕ್ಕೆ ತಾದಾತ್ಮ್ಯತ್ರಯವನು ವಿಚಾರಿಸಿ ತಾದಾತ್ಮ್ಯತ್ರಯಉ ಅಹಂಕಾರಕೆ ಸರಿ

ಅಹಂಕಾರಾದಿ ಸರ್ವಸಾಕ್ಷಿಯಾದ ನಿರ್ವಿಕಾರನಾದ ಅಸಂಗನಾದ ನನಗೆ ಯಿಲ್ಲವೆಂದು ಯಾರು ತಿಥಾರೇಯೊ ಅವನು ಮುಕ್ತನೆಂದು ವೇದಾಂತ ಸಿದ್ಧಾಂತವು ॥ ತಾದಾತ್ಮ್ಯಪ್ರಕರಣಂ ಸಮಾಪ್ತಂ । ೫೦ ಪ್ರಕರಣ ೪೪ಕ್ಕೆ.

ವಿಷಯ : ವೇದಾಂತ.

ವಿಶೇಷ : ಪುಸ್ತಕ ಸ್ವಲ್ಪ ಶಿಥಿಲ. ೬೧ ನೆಯ ಪತ್ರದನಂತರ ಒಂದು ಪ್ರತ್ಯೇಕವಾದ ಪತ್ರ ಇದೆ. ೧೦೬ ನೆಯ ಪತ್ರ ಮುರಿದಿದೆ. ೯೮ ಮತ್ತು ೧೬೭ ಕ್ರಮ ಸಂಖ್ಯೆಯ ಎರಡೆರಡು ಪತ್ರಗಳಿವೆ. ೧ ಮತ್ತು ೬೨ ನೆಯ ಪತ್ರಗಳು ಎರಡೆರಡಿದ್ದು ಒಂದು ಪತ್ರದಲ್ಲಿರುವುದನ್ನು ಇನ್ನೊಂದರಲ್ಲಿ ಪ್ರತಿ ಮಾಡಿದೆ. ೧ ನೆಯ ಪತ್ರದಲ್ಲಿ ಒಂದಕ್ಕೊಂದಕ್ಕೆ ಸ್ವಲ್ಪ ವ್ಯತ್ಯಾಸವಿದೆ.

1569

ಕೆ. ಬಿ. ೩೦೨	**ವಿವೇಕಸಾರ**	ಗದ್ಯ
೭.೯"×೬.೩"	ವಾಸುದೇವಯತಿಶಿಷ್ಯಂ	?
೧೮೬ ಪತ್ರ	೧೭ ಪಂಕ್ತಿ	೨೪ ಅಕ್ಷರ

ಆದಿ : ಬೋಧಾನಂದ ಘನಂ ನಿರಸ್ತ ಸಕಲಂ ಕಾರುಣ್ಯಪೂರ್ಣೇಕ್ಷಣಂ
ಮೂಢಾನಾಮುಪದೇಶಕಂ ಚ ಸತತಂ ಪಾಪಾತ್ಮನಾಂ ಪಾಪಹಂ
ವೈರಾಗ್ಯಂ ಚ ಹಿ ರಾಗಿಣಾಂ ಸುಖಕರಂ ಸಂಪಾದಕಂ ಸರ್ವದಾ
ಶ್ರೀಮದ್ದೇಶಿಕ ವಾಸುದೇವ ಯೆತಿನಂ ಮೂಢಾತ್ಮಕೋಹಂ ಭಜೇ ॥

× × ×

ಅನುಗ್ರಹಾರ್ಥಂ ಮರ್ತ್ಯಾನಾಂ ಸಂಸ್ಕೃತಾನಧಿಕಾರಿಣಾಂ ।
ವಿವೇಕಸಾ ಶ್ರೋತೃಣಾಂ ಪಚ್ಯತೇ ಭಾಷಯಾ ಮಯಾ ॥
ಅಧ್ಯಾರೋಪಾಪವಾದಗಳಿಂದಾ ಬ್ರಹ್ಮವನ್ನು ತಿಳಿಯಬೇಕು । ಅಧ್ಯಾರೋಪ ಯೇನು ಯೆಂದರೆ ವಸ್ತುವಿನಲ್ಲಿ ಅ ವಸ್ತುವಿನ ಆರೋಪಲುಪ ಅಧ್ಯಾರೋಪಲೂ ॥

ಅಂತ್ಯ : ಆಗಲಾಗಿ ಅಧಿಷ್ಠಾನಚೈತನ್ಯವು ಅಂತಃಕರಣ ಪ್ರತಿಬಿಂಬ ಚೈತನ್ಯವೂ ಶರೀರತ್ರಯವೂ ಯಿದರಲ್ಲಿ ಅಧ್ಯಾಸವು ಕೂಡಿ ಜೀವನೆಂದು ಹೇಳಲ್ಪಡುವದು । ಜೀವಸ್ವರೂಪ ಪ್ರಕರಣಂ ಸಮಾಪ್ತಃ । ಅಂತೂ ೩೯ ನೆ ಜೀವ ಸ್ವರೂಪವರ್ನಕಂ ಯೇಕೋನಚತ್ವಾರಿಂಶೋಧ್ಯಾಯಃ । ನವತ್ರಿಂಶೋಧ್ಯಾಯಃ ॥

ವಿಷಯ : ವೇದಾಂತ.

ವಿಶೇಷ : ಕ್ರಮಸಂಖ್ಯೆ ಇಲ್ಲ. ಮಧ್ಯೆ ಎರಡು ಪತ್ರಗಳ ಒಂದು ಪಕ್ಕದಲ್ಲಿ ಮಾತ್ರ ಬರೆದಿದೆ.

1570

ಕೆ. ಬಿ. ೧೮೫	**ವಿವೇಕಾಭರಣ**	ಭಾಮಿನೀಷಟ್ಪದಿ
೭.೬"×೬.೩"	ಶಾಲ್ಯದ ಕೃಷ್ಣರಾಜ	೧೭೪೮
೨೦೧ ಪತ್ರ	೧೧ ಪಂಕ್ತಿ	೧೬ ಅಕ್ಷರ

ಆದಿ : ಶ್ರೀ × × ಶ್ರೀ ಶಾಲ್ಯದ ಕ್ಷಿತಿಪರು ಕೃಷ್ಣ । ರಾಜಶೇಖರರಿಂ ಲೋಕೋಪಕಾರಾರ್ಥಮಾಗಿ ವಿರಚಿಸಿದ ಕರ್ನಾಟಕಭಾಷಾರೀತ್ಯ ಮಾಡಲ್ಪಟ್ಟ ವಿವೇಕಾಭರಣವೆಂಬ ಗ್ರಂಥವನ್ನು ಬರೆಯುವುದಕ್ಕೆ ಶುಭಮಸ್ತು.

ಭಾಮಿನಿ ಷಷ್ಟಪದಿ ಕಾವ್ಯ ಪ್ರಬಂಧ ॥
ಶ್ರೀಕರಂ ಭಕ್ತರ್ಗೆನಿಪುದಂ
ಸ್ವೀಕರಿಸಲದ್ಯಾಸದಿಂದೇ
ಲೋಕದೊಳವರಿವಂಗೆ ಬಂದುದು ಬಂಧವಿಂತೆಂದು
ಶೋಕಮೋಹಂಗಳಿಗಹಂ
ಕೃತಿಯಾತರಮುದಕ್ಕೊಡೆಯ
ಕ್ಕಾಗಿ ವಿತತಿಗಳಿದನ್ನೈದಿ ಸದಶಿವನೆಮ್ಮ ರಕ್ಷಿಸುಗೆ ॥ ೧ ॥
ಯೀಸು ಸಂಸೃತಿಯೊಳಗೆ ತೊಳಲಿದ
ರೈಸು ಕ್ಯೆಯಂಣೆಯನೊಂದು
ವಾ್ಸನೆಗಳಂಟುವವು ಬಿಡದಃತಃಕರಕದರಿಂ
ಮೋಸಮುಪ್ಪುದು ಚಿತ್ರಮೆಂದದ
ನೋಸರಿಸದಧಿಕರಿಸಿ ಮೆರೆವ
ವಾಸುದೇವಂ ತತ್ಪರಿಪಾಕವನು ನೆರೆಗೈಗೆ ॥ ೨ ॥

ಅಂತ್ಯ : ಜಯ ಜಯ ನಿರಾಕಾರಾ ನಿರ್ಭರ
ಜಯ ಜಯ ನಿರಾಘಾತ ಸನ್ಮತ
ಜಯ ಜಯ ವಿರೂಪಾಕ್ಷ ವಿಭುದಾವನ ಕಲಾದ್ಯಕ್ಷ
ಜಯ ಜಯ ಹತಾಪಾಯ ನಿರ್ಭಯ
ಜಯ ಜಯ ಶುಭಶ್ಲೋಕ ಭಾವಕ
ಜಯ ಜಯ ವಿಧೂತಾರ್ತಿ ಶ್ರೀಗುರು ದಕ್ಷಿಣಾಮೂರ್ತಿ ॥ ೪೬ ॥

ಯಿದು ಶ್ರೀವಿದ್ವಿವೇಕಾಭರಣವೆಂಬ ಕಾವ್ಯದೊಳ್ವಸ್ತು ನಮಸ್ಕೃತಿ ರೂಪವಮಂ ನಲಮಂ ಪೇಳಿದುದು ಸರ್ವ ಹದಿನೆಂಟನೆಯ ಸಂಧಿ ಸಮಾಪ್ತಂ ಮಂಗಳಮಹಾ ಶ್ರೀ ||

ವಿಷಯ : ವೇದಾಂತ.

ವಿಶೇಷ : ಮೋಡಿ ಲಿಪಿ. ಈ ಗ್ರಂಥವಾದಮೇಲೆ 'ಭಕ್ತಿಮಾರ್ಗಸರೋವರ ಬರೆವುದಕ್ಕೆ ಶುಭಮಸ್ತು' ಎಂದು ಪ್ರಾರಂಭಿಸಿ ಕೆಲವು ಹಾಡುಗಳನ್ನು ಬರೆಯಲಾಗಿದೆ.

1571

ಕೆ. ೧೭೫/೨	**ವಿಶೇಷಾರ್ಥಪ್ರಕಾಶಿಕೆ** (ಸಟೀಕು)	ಶ್ಲೋಕ, ಟೀಕು
೧೦.೫"×೨.೪"	ಉಜ್ಜಿನೀಶ	?
೪೭–೧೦೧ ಪತ್ರ	೧೨ ಪಂಕ್ತಿ	೪೫ ಅಕ್ಷರ

ಆದಿ : ಶ್ರೀ ಗುರುಬ್ಯೋ ನಮಃ || ವಿಶೇಷಾರ್ತ್ಥ ಪ್ರಕಾಶಿಕೆ ||
ಶ್ರೀಮದ್ಯೈಪುರ ಸೋಮೇಶ ಲಿಂಗಾಯಾ ಲಿಂಗರೂಪಿಣೇ |
ಲಿಂಗಾಂಗೈಕ್ಯಸ್ಥಲಿಂಗಾಯ ನಮಸ್ತೇ ಲಿಂಗಮೂರ್ತ್ತಯೇ ||
ಟೀ || ಅಲಿಂಗರೂಪಿಣೇ | ಕುಱುಹಿಲ್ಲದೆಯಿದ್ದ ಸ್ವರೂಪನುಳ್ಳಂಥಾ | ಲಿಂಗಾಂಗೈಕ್ಯಸ್ಥಲಿಂಗಾಯ | ಲಿಂಗಾಂಗ ಸಂಬಂಧವೇ ತಂನ ಕುಱುಹಾಗಿ ವುಳ್ಳಂಥಾ | ಶ್ರೀಮದ್ಯೈಪುರ ಸೋಮೇಶಲಿಂಗಾಯ | ವೊಪ್ಪುತ್ತಂಬಿದ್ದ ಐಪುರಸೋಮೇಶ್ವರನೆಂಬ ಲಿಂಗವಾದ | ಲಿಂಗಮೂರ್ತ್ತಯೇ | ಲಿಂಗ ಮೂರ್ತ್ತಿಗೋಸ್ಕರ | ನಮಃ ನಮಸ್ಕಾರವು || ೧ ||
ನಮಃಶಬ್ದ ಉಮಾಸಾಕ್ಷಾಚ್ಛಿವಶಬ್ಧ ಶಿವಸ್ವಯಂ |
ಆಯಶಬ್ದ ಸ್ತಯೋರ್ಯ್ಯೋಗಃ ಸೋಮಸ್ತಂ ಸಮುಪಾಸ್ಮಹೇ ||
ಟೀ || ನಮಃಶಬ್ಧಃ | ನಮಃಶಬ್ಧಉ

ಅಂತ್ಯ : ಸಂಸಾರಬಂಧವಿಚ್ಛೇದಕರ ಜ್ಞಾನಾಸ್ತ್ರದ ಪ್ರಭೋ | ಶ್ರೀಮದ್ಯೈಪುರ ಸೋಮೇಶ ನಮಸ್ತೇ ಷಟ್ಸ್ಥಲಾತ್ಮನೆ || ೨ || ಸಂಸಾರಬಂಧುವಿಚ್ಛೇದಕರ ಜ್ಞಾನಾಸ್ತ್ರದ | ಸಂಸಾರಬಂಧವ ತುಂಡಿಸುವ ಜ್ಞಾನಾಸ್ತ್ರವ ಕೊಡುತ್ತಂ ವಿದ್ದ | ಶ್ರೀಮದ್ಯೈಪುರಸೋಮೇಶ | ಶ್ರೀಮದ್ಯೈಪುರಸೋಮೇಶ್ವರನೆಂಬ | ಷಟ್ಸ್ಥಲಾತ್ಮನೇ | ಷಟ್ಸ್ಥಲಮೂರ್ತಿಯಾದ | ಭೋ ಪ್ರಭೋ | ಯೆಲೆ ವೊಡೆಯನೆ | ತೇ | ನಿನಗೋಸ್ಕರ | ನಮಃ | ನಮಸ್ಕಾರವು || ೧೦೬ ||

ಇತಿ ಪೂರ್ವೋತ್ತರಭಾಗದ್ವಯ ಸಮುಚಿತಮೇತದಹಿತಂ ವಿಹಿತಂ । ಶಿವ ಸಿದ್ಧಾಂತತಂತ್ರಂ ಶಿವಾನುಭವಸೂತ್ರಮತ್ರ ಸಂಪೂರ್ನ್ನಂ ॥ ಇತಿ ಈ ಪ್ರಕಾರದಲ್ಲಿ । ಶಿವಾನುಭವಸೂತ್ರಂ । ಶಿವಾನುಭವಸೂತ್ರವಹಂಥಾ । ಪೂರ್ವೋತ್ತರಭಾಗದ್ವಯ ಸಮುಚಿತಂ । ಪೂರ್ವಭಾಗ ಉತ್ತರಭಾಗವೆರಡ ರ್‍ಂದ । ಉಚಿತವಹಂಥಾ । ವಿಹಿತಂ । ವಿಹಿತವಾಗಿ । ಅಭಿಹಿತಂ । ಹೇಳಲು ಪಟ್ಟಂಥಾ । ಏತಚ್ಛಿವಸಿದ್ಧಾಂತತಂತ್ರಂ । ಈ ಶಿವಸಿದ್ಧಾಂತತಂತ್ರಉ । ಅತ್ರ । ಇಲ್ಲಿ । ಸಂಪೂರ್ನಂ । ಸಂಪೂರ್ನ್ನಂ ॥ ೧೦೭ ॥

ಯ ಏತದಾಚರತ್ಯೇವಂ ಸ ಆಚಾರ್ಯ್ಯವರೋ ವಿಭುಃ ।
ಶಿವಾನುಭವಸೂತ್ರೋಕ್ತಂ ಪರಮಾರ್ತ್ಥಂ ಪರಂ ಪದಂ ॥

ಯಃ । ಆವನಾನೊಬ್ಬನು । ಪರಂಪದಂ । ಪರಮಪದವಹಂಥಾ । ಪರಾನು ಭವಸೂತ್ರೋಕ್ತಂ । ಪರಮವಹ ಅನುಭವಸೂತ್ರದಲ್ಲಿ ಹೇಳಿದಂಥಾ ಆಚಾರ್ಯಶ್ರೇಷ್ಠನಹಂಥಾ । ವಿಭುಃ । ವೊಡೆಯನು ॥ ೧೦೮ ॥ ಶ್ರೀ ಅಧಿಕರಣಾಂತ್ಯದಲ್ಲಿ :—"ಯಿತಿ ಶ್ರೀ ಶಿವಸಿದ್ಧಾಂತತಂತ್ರೇ ವಿಶೇಷಾರ್ತ್ಥ ಪ್ರಕಾಶಕೇ ಗುರುಶಿಷ್ಯಸಂವಾದೇ ಶ್ರೀಮದಭಿಂನ ಪ್ರಸಂನ ಶಾಂತೇಶ್ವರ ಪ್ರಸಾದ ಪ್ರಾಪ್ತ ಪ್ರಸಂನ ಸ್ವಾಂತೇನ ಷಟ್ಸ್ಥಲ ಬ್ರಹ್ಮಜ್ಞಾನ ಶಿವ ಸಿದ್ಧಾಂತ ಶಿಕ್ಷಾಚಾರ್ಯೇಣ ಉಜ್ಜಿನೀಶ್ವರಾಖ್ಯೇನ ವಿವೃತಾಯಾಂ ಕರ್ಣ್ನಾಟಭಾಷಾ ಟೀಕಾಯಾಂ ಷಟ್ಸ್ಥಲಬ್ರಹ್ಮ ಪುನಶ್ಚರಣ ನಾಮ ಚತುತ್ಥಾಧಿಕರಣಂ ಸಂಪೂರ್ಣಂ ॥

ವಿಷಯ : ಷಟ್ಸ್ಥಲಸಿದ್ಧಾಂತ.

ವಿಶೇಷ : ಗ್ರಂಥ ಸುಸ್ಥಿತಿಯಲ್ಲಿದೆ. ಮೊಗ್ಗೆಯ ಮಾಯಿದೇವನ ಸಂಸ್ಕೃತ ಶ್ಲೋಕ ಗಳಿಗೆ ಕನ್ನಡ ವ್ಯಾಖ್ಯಾನವಿದೆ. ಐದನೆಯ ಅಧಿಕರಣದ ಕೊನೆಯಲ್ಲಿ ಮಾತ್ರ ವ್ಯಾಖ್ಯಾಕಾರನ ಉಲ್ಲೇಖವಿಲ್ಲ. ಇದರೊಂದಿಗೆ ಜಯಸ್ತೋತ್ರ (ಬಿರುದಾವಳಿ ವಿವರ), ಪರಮ ರಹಸ್ಯ, ಮನೋವಿಜಯ, ಪರಮಾರ್ಥಗೀತೆ, ಅನುಭವಸೂತ್ರ, ಶಿವಪೂಜಾವಿಧಾನ, ಮೂರೇಳು ದೀಕ್ಷಾಪ್ರಶಸ್ತಿ ಎಂಬ ಗ್ರಂಥಗಳಲ್ಲದೆ ರಸಸಿಂಧೂರಕ್ರಮವೂ ಇದೆ.

1572

ಕೆ. ೪೩೯/೧	ವಿಷಚಿಕಿತ್ಸಾ	ಶ್ಲೋಕ, ಟೀಕು
೮.೧"×೧.೩"	?	?
೨—೨೪ ಪತ್ರ	೬ ಪಂಕ್ತಿ	೩೨ ಅಕ್ಷರ

ಆದಿ : ಲಸ್ಯೆಮೂರ್ಧ್ನಸಾ
ರಾಜಾವರ್ತ ಸಮೋಬಿಂದು ಮಹಾಪದ್ಮಸ್ಯೆಪೃಷ್ಠತಃ |
ಪದ್ಮಸ್ಯ ಪೃಷ್ಠೇ ದೃಶ್ಯಂತೆ ನರಕಃ ಪಂಚಬಿಂದವಃ ||
ಏವಂ ಯೋಯೆತ್ರಿಜಾತ್ಯಾದಿ ನಾಮಚಿಂನ್ಹಾಂ ಸಿವೋದಿತಂ |
ತಸ್ಯ ಮಂತ್ರೌಷಧಂ ಸರ್ವಂ ಸಿದ್ಯಂತಿ ಬಹುನಾನ್ಯಥಾ |
ಮಾರತತಸ್ಯ ಸರ್ಪಾದ್ಯಃ ಗಚ್ಛಂತಿ ಗರುಡಂ ಯಥಾ ||

ಟೀಕು || ಸಿರಸ್ಸಿನಲ್ಲಿಯು ಬೆಂನ್ನಿನಲ್ಲಿಯು ಬಿಳುಪಾದ ಪದ್ಮ ಉಳ್ಳದು ಅನಂತ ನೆನಿಸಿಕೊಂಬುದು | ಸಿರಸ್ಸಿನಲ್ಲಿ ಶಂಖ ಉಳ್ಳದು ಶೇಷನೆನಿಸಿಕೊಂಬದು | ಬೆನ್ನಿನಲ್ಲಿ ನೈದಲ ಪುಷ್ಪದ ಆಕಾರವುಳ್ಳದು ವಾಸುಕಿಯೆನಿಸಿಕೊಂಬುದು |

ಅಂತ್ಯ : ಫಲಾಯನಮಂತ್ರಾ || ಬಂ ಷಂ ಸರ್ಪಕುಲಾಯಸ್ವಾಹಾಯ........... ರೆಂಟುವೇಳೆ ಮಂತ್ರಿಸಿ ವಂದುದಾಱ ಬಿಟ್ಟು ಮಿಕ್ಕಾದ ಸ್ತಳಗಳಿಗೆ ಯರಚಲು ಸರ್ಪ ಫಲಾಯನವಾಗಿ ಹೋಗುವದು || ಸರ್ಪಚಿಕಿತ್ಸೆ ಸಂಪೂರ್ಣ ಮಂಗಳಮಹಾ ಶ್ರೀ ||

ವಿಷಯ : ಹಾವು, ಚೇಳು ಮೊದಲಾದ ವಿಷಪ್ರಾಣಿಗಳ ಪ್ರಭೇದ ಮತ್ತು ಅವುಗಳ ವಿಷಕ್ಕೆ ಮಾಡಬೇಕಾದ ಚಿಕಿತ್ಸೆ.

ವಿಶೇಷ : ಶಕಟರೇಫವನ್ನು ಬಳಸಿದೆ. ಒಂದನೆಯ ಪತ್ರ ಇಲ್ಲ. ಪತ್ರಗಳನ್ನು ಹುಳು ಹೊಡೆದು ಕೆಲವು ಕಡೆ ರಂಧ್ರ ಬಿದ್ದಿರುವುದರಿಂದ ಮಧ್ಯೆ ಅಕ್ಷರಗಳು ಲುಪ್ತ ವಾಗಿವೆ. ಇದೇ ಕಟ್ಟಿನಲ್ಲಿ ಸ್ವರಲಕ್ಷಣ ಚಿಂತಾಮಣಿ ಎಂಬ ಗ್ರಂಥವಿದೆ.

1573

ಕೆ. ಎ. ೧೩೭	**ವಿಷ್ಣುಧರ್ಮೋತ್ತರಪುರಾಣ**	ಗದ್ಯ
೧೩"×೮.೧"	?	?
೧–೩೨ ಪತ್ರ	೩೫ ಪಂಕ್ತಿ	೩೬ ಅಕ್ಷರ

ಆದಿ : ವಿಷ್ಣುಧರ್ಮೋತ್ತರಪುರಾಣ ಭಕ್ತಿಪರ ಶ್ರೀ × × ×
ವೃತ್ತ || ಶ್ರೀರಾಮಚಂದ್ರ ರಘುಪುಂಗವ ರಾಜವರ್ಯ
ರಾಜೇಂದ್ರಚಂದ್ರ ರಘುನಾಯಕ ರಾಘವೇಶಾ
ರಾಜಾಧಿರಾಜ ರಘುನಂದನ ರಾಮಭದ್ರಾ
ದಾಸೋಹಮದ್ಯಭವತಃ ಶರಣಾಗತೋಸ್ಮಿ ||

ಶ್ಲೋಕ ॥ ಶುಕ್ಲಾಂಬರಧರಂ × × × ಸರ್ವವಿಘ್ನೋಪಶಾಂತಯೇ ।
ಯಸ್ಯದ್ವಿರದವಕ್ತ್ರಾದ್ಯಾಃ × × ವಿಷ್ವಕ್ಸೇನಂ ತಮಾಶ್ರಯೇ ॥ ೩ ॥
× × ಶ್ಲೋಕೈಕಶ್ರವಣಮಾತ್ರದಿಂದ ಸಕಲ ಕಲಿಕಲ್ಮಷಾಪನೋದನ ಪಟುತರ ವಾದ ಧರ್ಮಾರ್ಥ ಕಾಮ ಮೋಕ್ಷಗಳೆಂಬ ಚತುರ್ವಿಧಫಲ ಪುರುಷಾರ್ಥಸಾಧನ ಭಗವತ್ಪ್ರೋಕ್ತವಾದ ಗರುಡಪುರಾಣದಲ್ಲಿ ವಿಷ್ಣುಧರ್ಮೋತ್ತರಶಾಸ್ತ್ರ ಕಥಾಪ್ರಸಂಗವೆಂತೆನೆ ॥

ಶ್ಲೋಕ ॥ ಸಮ್ಯಜ್ಞಾನಾತ್ಮಸಂತುಷ್ಟಂ ಭಗವತ್ಪ್ರಿಯವಾಹನಂ ।
ವಿನತಾತನಯಂ ಶಾಂತಂ ಮರೀಚಿ ಪರ್ಯಪೃಚ್ಛತ ॥

ಟೀಕು ॥ ಸಮ್ಯಜ್ಞಾನಾತ್ಮನಾಗಿ ಸಂತುಷ್ಟನಾಗಿ ಭಗವತ್ಪ್ರಿಯನಾಗಿ × × × ಪ್ರಶ್ನೆಯಂ ಮಾಡಿದ ಪ್ರಕಾರ—

ಅಂತ್ಯ : ಸಮಸ್ತ ಪಾಪಗಳು ಜ್ಞಾನಿಗಳಿಗೆ ಕ್ಷಣಮಾತ್ರದಿಂದ ಪರಿಹಾರವಾಗುವದು । ಜ್ಞಾನವನ್ನು ಜ್ಞಾನಯೋಗಕ್ಕೆ ಸಮಾನವಾಗಿ ಅಷ್ಟಾಂಗಯೋಗವು ಸಮನಲ್ಲ । ಯಲೆ ಮುನೀಂದ್ರನೆ ಜ್ಞಾನವೆಂಬ ಯೋಗದಿಂದ ಪರಮಾತ್ಮನ ದ್ಯಾನವನ್ನು ಮಾಡದೆ ಅನೇಕ ಯೋಗ ಅನೇಕ ತಪಸ್ಸುಗಳಿಂದ ಪ್ರಯೋಜನವಿಲ್ಲ । ಜಾಗ್ರತೆಯಿಂದ ವಿಷ್ಣುಸಾಯುಜ್ಯವನ್ನು ಪಡೆಯಬೇಕಾದರೆ ಜ್ಞಾನಯೋಗವೆ ಮುಖ್ಯವೂ । ಯಿತಿ ಗಾರುಡಪುರಾಣೆ ವಿಷ್ಣುಧರ್ಮೋತ್ತರೆ ಜ್ಞಾನಯೋಗವೆಂಬ ಷೋಡಶಾಧ್ಯಾಯ ಸಂಪೂರ್ಣ ಮಂಗಳಮಹಾಶ್ರೀ ॥

ವಿಷಯ : ಭಕ್ತಿಯ ಮಹಿಮೆ.

ವಿಶೇಷ : ಮೋಡಿ ಲಿಪಿ.

1574

ಕೆ. ೨೬೫	**ವಿಷ್ಣುಪುರಾಣ**	ಚಂಪು
೧೪.೧"×೧.೯"	ಚಿಕ್ಕುಪಾಧ್ಯಾಯ	೧೬೭೨
೧–೨೯೨ ಪತ್ರ	೯ ಪಂಕ್ತಿ	೮೫ ಅಕ್ಷರ

ಆದಿ : ಶ್ರೀ ವಿಷ್ಣುಪುರಾಣ ಬರವದಕ್ಕೆ ನಿರ್ವಿಘ್ನಮಸ್ತು
ಶ್ರೀಮತ್ಪಕ್ಷಿಮರಂಗಧಾಮನಮರೇಂದ್ರಾಂಭೋಜ ಭೂರುದ್ರ ಮುಖ್ಯಾಮರ್ತ್ಯಾವಳಿ ಮೌಳಿರತ್ನಘೃಣಿ ದಿವ್ಯತ್ಪಾದಪದ್ಮಂ ರಮಾಧಾಮಾಲಿಂಗನ ನಿತ್ಯಜಾತಪುಳಕಾಂಕುರಾಂಚಂದಂಗಂ ಮಹಾಕ್ಷೇಮಾರ್ಥಂಗಳನಿತ್ತು ಮಾಣದೊಸೆದೆಂಮಂ ಪಾಲಿಕಾನಂದದಿಂ ॥ ೧ ॥

ಅಂತ್ಯ : ಧರಣೀಶಂ ಚಿಕದೇವರಾಜನೊಲವಿಂದಾ ಸಂಸ್ಕೃತ ಪ್ರೋಕ್ತ ವಿಸ್ಫುರಿತಂ ವಿಷ್ಣುಪುರಾಣಮಂ ಸುಲಲಿತಂ ಕರ್ನ್ನಾಟದೊಳ್ವಸ್ತುಕೋತ್ಕರದೀ ಪೇಳೆನೆ ರಂಗಪಂಡಿತ ಕುಮಾರಂ ಪಾರುಕುತ್ಸಾನ್ವಯಂ ವರಲಕ್ಷ್ಮೀಪತಿ ನಾಮಧೇಯ ಚಿಕುಪಾಧ್ಯಾಯಾಖ್ಯೆಯಿಂ ವಿಶ್ರುತಂ ||೨೪೩||

ಕ್ರಮದಿಂದೊಪ್ಪುವ ಶಾಲಿವಾಹನ ಶಕಾಬ್ದಂ ವಂಹ್ನಿ ಚಂದ್ರರ್ತ್ತು ಚಂದ್ರಮ ಸಂಖ್ಯಾಲಶಿತ ಪ್ರಮೋದಶರ ಮದ್ಯತ್ಫಾಲ್ಗುಣಂ ಸ್ವೇತ ಪಂಚಮಿಯಾ ಭಾಸ್ಕರವಾರದಲ್ಲಿ ವರಕರ್ನ್ನಾಟೋಕ್ತಿಯಿಂ ತಳ್ತ ತತ್ವಮಯಂ ವಿಷ್ಣುಪುರಾಣಮಂ ರಚಿಸಿದಂ ಪೂರ್ನಂ ಜಯಂ ಮಂಗಳಂ || ೨೨೪ ||

× × × ×

ಶ್ರೀ ಚಿಕುಪಾಧ್ಯಾಯ ವಿರಚಿತಮಪ್ಪ ಶ್ರೀ ವಿಷ್ಣುಪುರಾಣನಾಮ ಪ್ರಬಂಧದ ಷಷ್ಠಾಂಶದೊಳ್ ಖಾಂಡಿಕ್ಯ ಮಹಾಪಾಲಂಗೆ ಕೇಶಧ್ವಜರಾಜಂ ವಿಸ್ತರಿಸಿ ಪೇಳ್ದ ಯೋಗಮಹಿಮ ವಿವರಣಂ ವಿಷ್ಣುಸರ್ವೋತ್ಕರ್ಷವರ್ನ್ನನಂ ಪುರಾಣಶ್ರವಣ ಮಹಾಫಲಪ್ರಾಪ್ತಿ ಕಥನಂ ದ್ವಿತೀಯಾಶ್ವಾಸಂ || ಯಿಾ ಷಷ್ಠಾಂಶದ ಆಶ್ವಾಸ ೨ ಕ್ಕೆ ಪದ್ಯಂ ೪೪೬ ಪ್ರಥಮಾಂಶಕ್ಕೆ ಆಶ್ವಾಸ ೬ ಕ್ಕೆ ಪದ್ಯ ೧೨೫೦ ದ್ವಿತೀಯ್ಯಕ್ಕೆ ಆಶ್ವಾಸ ೩ ಕ್ಕೆ ಪದ್ಯ ೬೫೩ ತೃತೀಯ್ಯಕ್ಕೆ ಆಶ್ವಾಸ ೩ ಕ್ಕೆ ಪದ್ಯ ೬೫೨ ಚತುರ್ತ್ಥಕ್ಕೆ ಆಶ್ವಾಸ ೫ ಕ್ಕೆ ಪದ್ಯ ೯೬೧ ಪಂಚಮಕ್ಕೆ ಆಶ್ವಾಸ ೧೩ ಕ್ಕೆ ಪದ್ಯ ೨೧೯೩ ಷಷ್ಠಕ್ಕೆ ಆಶ್ವಾಸ ೨ ಕ್ಕೆ ಪದ್ಯ ೪೪೬ ಅಂತು ಅಂಶ ೬ ಕ್ಕೆ ಆಶ್ವಾಸ ೩೨ ಕ್ಕೆ ಪದ್ಯ ೬೨೫೫ ಕ್ಕಂ ಶ್ರೀಮದ್ವಿಷ್ಣುಪುರಾಣಂ ಸಮಾಪ್ತಂ ಮಂಗಲಮಹಾಶ್ರೀ.

ವಿಷಯ : ವಿಷ್ಣುಮಾಹಾತ್ಮ್ಯೆ.

ವಿಶೇಷ : ೧೯ ನೆಯ ಪತ್ರ ಸ್ವಲ್ಪಭಾಗ ಮುರಿದಿದೆ. ೬೨–೬೬ ರವರೆಗೆ ಪತ್ರಗಳಿಲ್ಲ.

1575

ಕೆ. ಎ. ೧೫೨	**ವಿಷ್ಣುಪುರಾಣ**	ಚಂಪು
೧೨.೬"×೪.೧"	ಚಿಕ್ಕುಪಾಧ್ಯಾಯ	೧೬೭೨
೧–೫೬ ಪತ್ರ	೩೫ ಪಂಕ್ತಿ	೩೫ ಅಕ್ಷರ

ಆದಿ : ವಿಷ್ಣುಪುರಾಣದಲ್ಲಿ ಕಥಾನುಕ್ರಮಣಿಕ ಕ್ರಮವೆಂತೆಂದರೆ ಪ್ರಥಮಾಂಶದ ಪ್ರಥಮಾಶ್ವಾಸದಲ್ಲಿ ಜಗಶಿಷ್ಟಿಯಾದಿ ವರ್ಣನೆ

× × × ×

ಸೂಚನಾದ್ಯಾಯ ಪ್ರಾರಂಭವಂ ಕವಿಯು ಮಾಡುತ್ತಾನೆ.

ವೃತ್ತ ॥ ಶ್ರೀಮತ್ಪಶ್ಚಿಮರಂಗದಾಮನಮರೇಂದ್ರಾಂಭೋಜ ಭೂರುದ್ರಮು
ಖ್ಯಮತ್ರ್ಯಾವಳಿ ಮೌಳಿರತ್ನಘೃಣಿ ದಿವ್ಯತ್ಪಾದ ಪದ್ಮಂ ರಮಾ
ದಾಮ ವಿರೂಪಸತ್ಯತ್ರಂತ ಪುಳಕಾಂ ಹರಾಂ ಚದಂಗಂ ಮಹಾ
ಕ್ಷೇಮಾರ್ಥಗಳನಿತ್ತು ಮಾಣದೊಗದೆಮ್ಮಂ ಪಾವಿತಾನಂದದಿಂ ॥

ಅಂತ್ಯ : (೫೧ನೆಯ ಪತ್ರ) ಯಿದು ಶಿವ ಕಮಲಭವ ದಿವಿಜ × × × ಶ್ರೀ ಚಿಕುಪಾದ್ಯಾಯ ಪ್ರಣೀತಮಪ್ಪ ವಿಷ್ಣುಪುರಾಣದ ಕ್ರುತಿಯಂಶದೊಳ್ ಮನ್ವಂತರ ತತ್ಕಾಲಪ್ರಭವ ದೇವರ್ಷಿದ್ರ ವಿವರಣ ಯುಗಕಲ್ಪನಿರ್ನ್ನಯ × × ಪ್ರಥಮಚ್ಛಾಶ್ವಸಂ ಸಂಪೂರ್ನ × × ×
ಜನಪತಿಕೇಳಾ ವನಕಿಂ
ಚನನ ಸಂಬಂಧನಾಗಿತಶಾಂತರದಿಂ
ಮನವೆಳಸಿ ಬಂದನಂಭೋ
ಜನದಿಂ ಮಂನಿಸಲವಾಗದೋ ಗತಿಯಕ್ಕುಂ ॥ ೧೪೯ ॥

ವಿಷಯ : ವಿಷ್ಣುಮಾಹಾತ್ಮ್ಯಂ.

ವಿಶೇಷ : ಅಸಮಗ್ರ. ಸಣ್ಣಕ್ಷರ.

1576

ಕೆ. ಬಿ. ೨೯	**ವಿಷ್ಣುಪುರಾಣ** (೧–೨ ಅಂಶಗಳು)	ಚಂಪು
೭.೭" × ೬.೩"	ಚಿಕ್ಕುಪಾಧ್ಯಾಯ	೧೬೭೨
೧–೩೦೦ ಪತ್ರ	೧೧ ಪಂಕ್ತಿ	೧೯ ಅಕ್ಷರ

ಆದಿ : ಶ್ರೀ ವಿಷ್ಣುಪುರಾಣ.
ಶ್ರೀಮತ್ಪಶ್ಚಿಮರಂಗಧಾಮನಮರೇಂದ್ರಾಭೋಜ ಭೂರುದ್ರಮು
ಖ್ಯಾಮರ್ತ್ಯಾವಳಿವರೌಳಿ ರತ್ನಮಣಿ ದಿವ್ಯಾಕ್ಪಾದಪದ್ಮಂ ರಮಾ
ಧಾಮಾಲಿಂಗನ ನಿತ್ಯಜಾತ ಪುಳಕಾಂಕುರಾಂ ಚದಂಗಂ ಮಹಾ
ಕ್ಷೇಮಾರ್ಥಂಗಳನಿತ್ತು ಮಾಣದೊಸೆದೆಂಮಂ ಪಾಲಿಕಾನಂದದಿಂ ॥ ೧ ॥

ಅಂತ್ಯ : ಅವನಾತ್ಮಮೋಹಮಂ
ಣ್ದವಿದ್ಯೆಯುಂ ಕಳಿದು ಜನನಮರಣಾಸ್ಪದಮಾ
ದವಿರಳ ಸಂಸಾರ ಮಹಾ
ರ್ಣವಮಂ ಪಾಯ್ದೊಡನೆ ಮುಕ್ತಿಯೋಗ್ಯನೆನಿಕ್ಕುಂ ॥ ೧೮೪ ॥
ಇಂತಿ ದ್ವಿತೀಯದಂಶಕೆ
ಸಂತತಮಜ ರುದ್ರ ವಿನುತ ನಾರಾಯಣನೇ
ಸಂತಸದಿಂ ಶುಭಮಂ ಸರಿ
ವಂತೆಸಗುಗೆ ವಿಷ್ಣುತಿಮಿರಹರಣಾದಿತ್ಯಂ ॥ ೧೮೫ ॥

ಗದ್ಯ ॥ ಇದು ಶಿವಕಮಲಭವ ದಿವಿಜ × × × ಶ್ರೀ ನರಪತಿ ಚಿಕ್ಕದೇವ ಮಹಾರಾಜ ಕರುಣಾಕಟಾಕ್ಷರುಚಿ ಚಂದ್ರಿಕಾಲೋಲಚಕೋರ ಶ್ರೀ ಚಿಕ್ಕುಪಾಧ್ಯಾಯ ವಿರಚಿತಮಪ್ಪ ಶ್ರೀ ವಿಷ್ಣುಪುರಾಣಾಖ್ಯ ಮಹಾ ಪ್ರಬಂಧ ದೊಳ್ ಪರಾಶರ ಮೈತ್ರೇಯ ಸಂವಾದ ದ್ವಿತೀಯಾಂಶದೊಳ್ ನವರತ ನೃಪ ವಾನಪ್ರಸ್ಥ ಮೃಗದರ್ಶನ ತದ್ರಕ್ಷಣ × × × ಭೂಪಾಖ್ಯಾನಾದಿ ತೃತೀಯಾಶ್ವಾಸಂ. ಅಂತು ಆಶ್ವಾಸ ೩ ಕ್ಕಂ ಪದ್ಯಂಗಳ್ ೬೫೩ ದ್ವಿತೀ ಯಾಂಶಂ ಸಮಾಪ್ತಂ. ಅಂತು ಅಂಶ ೨ ಕ್ಕಂ ಆಶ್ವಾಸ ೯ ಕ್ಕಂ ಪದಂಗಳ್ ೧೯೦೩ ॥ ಶ್ರೀ ಶ್ರೀ

ವಿಷಯ : ವಿಷ್ಣುಮಾಹಾತ್ಮ್ಯ.

ವಿಶೇಷ : ೩–೪ ನೆಯ ಅಂಶಗಳು ಕೆ. ಬಿ. ೩೦ ನೆಯ ಪುಸ್ತಕದಲ್ಲಿಯೂ, ೫–೬ ನೆಯ ಅಂಶಗಳು ಕೆ. ಬಿ. ೩೩ ನೆಯ ಪುಸ್ತಕದಲ್ಲಿಯೂ ಇವೆ.

1577

ಕೆ. ಬಿ. ೩೦	**ವಿಷ್ಣುಪುರಾಣ** (೩-೪ ಅಂಶಗಳು)	ಚಂಪು
೭.೮″×೬.೨″	ಚಿಕ್ಕುಪಾಧ್ಯಾಯ	೧೬೭೨
೧–೨೩೮ ಪತ್ರ	೧೧ ಪಂಕ್ತಿ	೧೯ ಅಕ್ಷರ

ಆದಿ : ತೃತೀಯಾಂಶ ಪ್ರಾರಂಭ.
ಶ್ರೀ ಕಮಲಜಾದಿ ವಿಬುಧಾನೀಕ
ಹೃದಂಬೋಜ ವಿಕಸನಾರ್ಕ್ಕನ ಪುಣ್ಯ
ಶ್ಲೋಕನ ವಿಷ್ಣುವಿನೊಲವಿಂ
ದೀ ಕೃತಿಗೆ ತೃತೀಯ್ಯದಂಶಮಂ ಸೊಲ್ಲಿಸುವೆಂ ॥ ೧ ॥

ಅಂತ್ಯ : ಯಿಂತಿನ ಸುಧಾಂಶುಕುಲಜರ
ಸಂತತಿ ಚಾರಿತ್ರ ಅಸಿತಕಿಯಂಶಕೆ ಮಾ
ಕಾಂತಂ ಭಕ್ತಜನಾವಳಿ
ಚಿಂತಾಮಣಿ ವಿಷ್ಣು ಪೆಚ್ಚಿಕರೆ ಮಂಗಳಮಂ ॥ ೨೬೦ ॥

ಗದ್ಯ ॥ ಇದು ಶಿವ ಕಮಲಭವ ದಿವಿಜ × × × ಶ್ರೀ ನರಪತಿ ಚಿಕ್ಕದೇವ ರಾಜ ಮಹಾರಾಜ ಕರುಣಾಕಟಾಕ್ಷ ರುಚಿಸಾಂದ್ರ ಚಂದ್ರಿಕಾಲೋಲ ಚಕೋರ ಶ್ರೀ ಚಿಕ್ಕುಪಾಧ್ಯಾಯ ವಿರಚಿತಮಪ್ಪ ವಿಷ್ಣುಪುರಾಣನಾಮ ಪ್ರಬಂಧದೊಳ್ ಚತುರ್ಥಾಂಶದೊಳನುತುರ್ವ ಸುದ್ರುಹ್ಯ ಪೂರ್ವಂಶವಿಸ್ತರ ದುಷ್ಯಂತೋಪಾಖ್ಯಾನ ಪಾಂಚಾಲ ಮಾಗಧನೃಪೋತ್ಪತ್ತಿ ಶಂತನುಚರಿತ ಭೀಷ್ಮ ಧೃತರಾಷ್ಟ್ರ ಪಾಂಡು ಜನನ ಯುಧಿಷ್ಠಿರಾದ್ಯುದ್ಭವ ಪರೀಕ್ಷಜನ್ಮ ಭವಿಷ್ಯದ್ಭೂಪಾಲಕನ ಕಲಿಯುಗ ಪ್ರವರ್ತನ ಧರ್ಮ್ಮಕಲ್ಕ್ಯವತರಣ ಸಕಲ ವಸ್ತು ನಿರ್ಮ್ಮಮತ್ವಾದಿ ವರ್ನ್ನನಂ ಪಂಚಮಾಶ್ವಾಸಂ ಚತುರ್ಥಾಂಶಂ ಸಮಾಪ್ತಂ.

ವಿಷಯ : ವಿಷ್ಣು ಮಾಹಾತ್ಮ್ಯೆ.

ವಿಶೇಷ : ಇದರ ೧–೨ ನೆಯ ಅಂಶಗಳು ಕೆ. ಬಿ. ೨೯ ನೆಯ ಪುಸ್ತಕದಲ್ಲಿಯೂ, ೫–೬ ನೆಯ ಅಂಶಗಳು ಕೆ. ಬಿ. ೩೩ ನೆಯ ಪುಸ್ತಕದಲ್ಲಿಯೂ ಇವೆ.

1578

ಕೆ. ಬಿ. ೩೩	**ವಿಷ್ಣುಪುರಾಣ** (೫-೬ ಅಂಶಗಳು)	ಚಂಪು
೭.೮"×೬.೨"	ಚಿಕ್ಕುಪಾಧ್ಯಾಯ	೧೬೭೨
೧–೩೭೭ ಪತ್ರ	೧೧ ಪಂಕ್ತಿ	೨೦ ಅಕ್ಷರ

ಆದಿ : ಪಂಚಮಾಂಶ ಪ್ರಾರಂಭ × × ×
ಶ್ರೀ ಕರುಣೇಶಂಗೆ ಜಗ
ದ್ವ್ರಾತಮನಾಗಿಸುವ ಬಳೆಯಿಸುವಡಂಗಿಪ ವಿ
ಖ್ಯಾತ ಮಹಿಮಂಗೆ ನಮಿಪೆಂ
ಚೈತನ್ಯಾತ್ಮಕನೆನಿಪ್ಪ ವಿಷ್ಣುಗೆ ಸತತಂ ॥ ೧ ॥

ಅಂತ್ಯ : ಧರಣೀಶಂ ಚಿಕ್ಕದೇವರಾಜನೊಲವಿಂದಾ ಸಂಸ್ಕೃತಪ್ರೋಕ್ತ ವಿ
ಸ್ಫುರಿತಂ ವಿಷ್ಣುಪುರಾಣಮಂ ಸುಲಲಿತಂ ಕರ್ನಾಟದೊಳ್ ವಸ್ತುಕೋ

ತ್ಕರದಿಂ ಪೇಳೆನೆ ರಂಗಪಂಡಿತಕುಮಾರಂ ಪೌರುಕುತ್ಸಾನ್ವಯಂ
ವರಲಕ್ಷ್ಮೀಪತಿ ನಾಮಧೇಯ ಚಿಕ್ಕುಪಾಧ್ಯಾಯಾಖ್ಯೆಯಿಂ ವಿಶ್ರುತಂ॥೨೩॥
ಕ್ರಮದಿಂದೊಪ್ಪುವ ಶಾಲೀವಾಹನ ಶಕಾಬ್ದ ವನ್ಹಿಚಂದ್ರರ್ಕು ಚಂ
ದ್ರಮು ಸಂಖ್ಯಾಲಸಿತ ವೋದ ಶರದುದ್ಯತ್ಫಾಲ್ಗುಣ ಶ್ವೇತಪಂ
ಚಮಿಯಾ ಭಾಸ್ಕರವಾರದಲ್ಲಿ ವರಕರ್ನಾಟೋಕ್ತಿಯಿಂ ಕಳತ
ತ್ವಮಯ ವಿಷ್ಣುಪುರಾಣಮಂ ರಚಿಸಿದಂ ಪೂರ್ನಂ ಜಯಂಗಳಂ ॥೨೪॥

× × × ×

ಶ್ರೀ ಚಿಕ್ಕುಪಾಧ್ಯಾಯ ವಿರಚಿತಮಪ್ಪ ಶ್ರೀ ವಿಷ್ಣುಪುರಾಣನಾಮ ಪ್ರಬಂಧ ಷಷ್ಠಾಂಶದೋಳ್ ಭಾಂಡಿಕ್ಯ ಮಹೀಪಾಲಂಗೆ ಕೇಶಿಧ್ವಜರಾಜಂ ವಿಸ್ತರಿಸಿ × × × ಅಂತು ಅಂಶ ೬ ಕ್ಕೆ ಆಶ್ವಾಸ ೩೨ ಕ್ಕೆ ಮಂಗಳ ಮಹಾಶ್ರೀ.

ವಿಷಯ : ವಿಷ್ಣುಮಾಹಾತ್ಮ್ಯ.

ವಿಶೇಷ : ೧–೨ ನೆಯ ಅಂಶಗಳ ಕೆ. ಬಿ. ೨೯ ನೆಯ ಪುಸ್ತಕದಲ್ಲಿಯೂ, ೩–೪ ನೆಯ ಅಂಶಗಳು ಕೆ. ಬಿ. ೩೦ ನೆಯ ಪುಸ್ತಕದಲ್ಲಿಯೂ ಇವೆ.

1579

ಕೆ. ೮೧	**ವಿಷ್ಣುಪುರಾಣ**	ಗದ್ಯ
೧೮.೨"×೧.೬"	ಚಿಕ್ಕುಪಾಧ್ಯಾಯ	೧೬೭೨
೧–೨೮೩ ಪತ್ರ	೭ ಪಂಕ್ತಿ	೬೦ ಅಕ್ಷರ

ಆದಿ : ಶ್ರೀ ವಿಷ್ಣುಪುರಾಣದ ಟೀಕು. ಶಾರ್ದೂಲವಿಕ್ರೀಡಿತವೃತ್ತಂ ॥
ಶ್ರೀಮತ್ಪಶ್ಚಿಮರಂಗಧಾಮನಮರೇಂದ್ರಾಂಭೋ......................
ರಮಾಧಾಮರಿಂ ಘನ ನಿತ್ಯಜಾ ಪುಳಕಾಂಕುರಾಂ ಚದಂಗಮಹಾ
ಕ್ಷೇಮಾರ್ತ್ಥಂಗಳನಿತ್ತು ಮಾಣದೊಸೆದೆಂಮಂ ಪಾಲಿತಾನಂದದಿಂ ॥ ೧ ॥

× × × ×

ಲಕ್ಷ್ಮೀದೇವಿಯರಿಗೆ ಆಶ್ರಯಣೀಯ್ಯನಾದ ನಾರಾಯಣಂಗೆ ನಿತ್ಯ ವಾಸ ಸ್ಥಾನವಾದ ಹೃದಯಕಮಲವು ಪರಾಶರರಿಂದ ವಿಕಾಸಂ ಮಾಡ........ ಆ ಪರಾಶರರೆಂಬ ಸೂರ್ಯ್ಯನನು ನಮಸ್ಕರಿಸುವೆಂ.

ಅಂತ್ಯ : ಪರವಾಸುದೇವನಂಶದಿಂದೀ ಮೂರ್ತಿಗಳೆರಡೂ ಭೂಮಿಯೊಳವತರಿಸಿ ಕಣ್ಗೊಳಿಸವು। ಯಿಪ್ಪತ್ತು ದಿವ್ಯಮೂರ್ತಿ . . ಳೆರಡನೂ ನೋಡಿ ಕಂಣ್ಗಳೆರಡೂ ಸಾಫಲ್ಯವನೈದಿದಂತೆ ಭಗವಚ್ಚುಭಾಂಗ ಸಂಸ್ಪರ್ಶನ ಉಂಟಾದರೆ ಯಂನೊಡಲೆಲ್ಲವು ಕೃತಾರ್ಥಮಪ್ಪುದು ಯಿಾ ಶಿದ್ವಿಧಪರಿ.

ವಿಷಯ : ವಿಷ್ಣುಮಾಹಾತ್ಮ್ಯೆ.

ವಿಶೇಷ : ಅಸಮಗ್ರವಾಗಿದೆ. ಪ್ರತಿ ಶಿಥಿಲ. ಕೆಲವು ಪತ್ರಗಳು ಮುರಿದಿವೆ. ೨೦೧ ರಿಂದ ಮುಂದಕ್ಕೆ ಕ್ರಮಸಂಖ್ಯೆ ಇಲ್ಲ.

1580

ಕೆ. ಎ. ೯೯	**ವಿಷ್ಣುಪುರಾಣ, ಭಾಗ–೧**	ಗದ್ಯ
೧೦.೮″ × ೮.೨″	ಚಿಕ್ಕುಪಾಧ್ಯಾಯ	೧೬೭೨
೪೭೧ ಪತ್ರ	೧೭ ಪಂಕ್ತಿ	೨೧ ಅಕ್ಷರ

ಆದಿ : ....ತಾದಿ ಚತುರ್ಯುಗಗಳ ಕಾಲಪ್ರಮಾಣವನು ಬ್ರಂಹ್ಮ ಕ್ಷತ್ರಿ ವೈಶ್ಯ ಶೂದ್ರಾದಿ ವರ್ನಧರ್ಮಂಗಳನು ಬ್ರಂಹ್ಮಚಾರಿ ಗ್ರಹಸ್ತ ವಾನಪ್ರಸ್ತ ಸಂನ್ಯಾಸಿಗಳ ನಿಯತಧರ್ಮಂಗಳನು ಹಾಗೆ ಅನುಲೋಮ ಪ್ರತಿಲೋಮಾದಿ ಜಾತಿ ಸಂಕೀರ್ಣವಾದವರಿಗೆ ವಿಹಿತವಾದ ಸಾಮಾನ್ಯ ವಿಶೇಷವಾದ ಧರ್ಮಂಗಳನೂ ವಶಿಷ್ಠಕುಮಾರರಾಗಿ ಸಕಲ ಶಾಸ್ತ್ರಜ್ಞರಾಗಿ ಮಹಾರ್ಷಿಯಾದ ನಿಂಮ ಅನುಗ್ರಹದಿಂದಾ ಸರ್ವ ರಹಸ್ಯವನ್ನು ಕೇಳಲಾಪೇಕ್ಷಿಸುತಿದ್ದೆನು.

ಅಂತ್ಯ : ಕಾಲಕರ್ಮವಂ ಯೈದಿದನಾದ ಕಾರಣ ಅನುಮತದಲ್ಲಿ ಅಗ್ನಿಪ್ರವೇಶವಂ ಮಾಡುವಲ್ಲಿ ನಿಶ್ಚಯವಂ ಮಾಡಿದ ಸಮಯದಲ್ಲಿ ಕಾಲತ್ರಯಜ್ಞಾನಿಯಾದ ವೋರ್ವನೂ ಶೀಘ್ರದಲ್ಲಿ ಅಲ್ಲಿಗೆ ಬಂದು ಕೇಳು ರಾಜಪತ್ನಿ ಅಗ್ನಿಪ್ರವೇಶವೆಂಬ ಅತಿ ಸಾಹಸದಿಂದಾ ಸಾಕುಮಾಡು ಅದೇನು ಕಾರಣವೆಂಬೆಯಾ ನಿಂನ ವುದರದಲ್ಲಿ ಅಖಿಳ ಭೂಮಂಡಲಪತಿಯು....

ವಿಷಯ : ವಿಷ್ಣುಮಾಹಾತ್ಮ್ಯೆ.

ವಿಶೇಷ : ಮೊದಲ ಪತ್ರದ ಅರ್ಧಭಾಗ ಹರಿದುಹೋಗಿದೆ. ಅಕ್ಷರಗಳು ಸ್ಫುಟವಾಗಿ ಸುಂದರವಾಗಿವೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಪತ್ರಗಳ ಕ್ರಮಸಂಖ್ಯೆಯಿಲ್ಲ. ಇದರ ಉತ್ತರಭಾಗ ಕೆ. ಎ. ೧೦೦ ರಲ್ಲಿದೆ.

1581

ಕೆ. ಎ. ೧೦೦ **ವಿಷ್ಣುಪುರಾಣ, ಭಾಗ-೨** ಗದ್ಯ
೧೦.೫"×೮" ಚಿಕ್ಕುಪಾಧ್ಯಾಯ ೧೬೭೨
೧-೩೩೯ ಪತ್ರ ೧೮ ಪಂಕ್ತಿ ೨೪ ಅಕ್ಷರ

ಆದಿ : ವಿಷ್ಣುಪುರಾಣದ ಚತುರ್ಥಾಂಶೆಯಲ್ಲಿ ತ್ರಿ.... ಯೋಧ್ಯಾಯ ಸಮಾಪ್ತಿಯಾಗಿ ಚತುರ್ಥೋಽಧ್ಯಾಯಃ ಪ್ರಾರಂಭವೂ.
ಶ್ರೀ ವಿಷ್ಣುವೇ ನಮಃ ಪರಶಾರಃ ಕೇಳೂ ಮೈತ್ರೇಯ ಕಶ್ಯಪನ ಕುಮಾರತಿಯು ಸುಮತಿಯೂ ವಿದರ್ಭರಾಯನ ಕುಮಾರತಿಯು ಕೇಶನಿಯೆಂಬವಳು ಯಿವರಿಬ್ಬರು ಸಗರಚಕ್ರವರ್ತಿಗೆ ಪತ್ನಿಯರಾದರೂ ಅವರಿಬ್ಬರಿಂದಲೂ ಸಂತಾನಾರ್ಥವಾಗಿ ಓರ್ವ ಋಷೀಶ್ವರನು ಶಿಶ್ರುಷೆಯಂ ಮಾಡಲ್ಪಟ್ಟರಾದ ಕಾರಣ ವರವನ್ನು ಕೊಟ್ಟನೂ

ಅಂತ್ಯ : ಜಂನ್ಮಜರಾದಿರಹಿತಸಾದವನ ಕ್ರುಪಾಕಟಾಕ್ಷದಿಂದಾ ವಿಶೇಷವಾಗಿ ಯಿರಿಯೆಂದು ಪರಾಶರರೂ ಮೈತ್ರೇಯಂಗೆ ನಿರೂಪಿಸಿದರೂ ಯೆಂಬ ಬಳಿಗೆ ಶ್ರೀ ವಿಷ್ಣುಪುರಾಣ ಪಂಚಮಾಂಸೆ ಮುವ್ವತ್ತೆಂಟನೆ ಅದ್ಯಾಯಃ ಸಮಾಪ್ತ

× × × ×

ದಕ್ಷಣದಿಗ್ವಿದುರಮಣನ ಶ್ರಿತ
ಲೋಕವುದ್ಧರಿತನಂ ಬೇಡುವೆನು ಮುದದಿಂದಾ ॥ ಶ್ರೀ ॥
ಸತ್ಯ ಪರಾಕ್ರಮ ವೀರರೇ ನರಪತಿ
ಚಿಕ್ಕದೇವ ಮಹಾರಾಜ ನೀನೊಲಿದು ರಕ್ಷಿಸಲಿಬೇಕೆಂದ ॥
ವಿಷ್ಣುಪುರಾಣ ಸಂಪೂರ್ನ ಮಂಗಳ ಮಹಾಶ್ರೀ.

ವಿಷಯ : ವಿಷ್ಣುಮಾಹಾತ್ಮ್ಯೆ.

ವಿಶೇಷ : ಇದರ ಪೂರ್ವಾರ್ಧ ಕೆ. ಎ. ೯೯ ರಲ್ಲಿದೆ. ಪತ್ರದ ಒಂದು ಕಡೆ ಬರೆದಿದೆ. ಪತ್ರಗಳಿಗೆ ಕ್ರಮಸಂಖ್ಯೆ ಇಲ್ಲ.

1582

ಕೆ. ಎ. ೧೫೬. **ವಿಷ್ಣುಪುರಾಣ** ಶ್ಲೋಕ, ಟೀಕ
೧೨.೬"×೭.೬" ಚಿಕ್ಕುಪಾಧ್ಯಾಯ ೧೬೭೨
೧-೩೫೫ ಪತ್ರ ೨೦ ಪಂಕ್ತಿ ೨೪ ಅಕ್ಷರ

ಆದಿ : ಶ್ರೀ ವಿಷ್ಣುಪುರಾಣ ಪ್ರಾರಂಭಃ
ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂ ಧ್ಯಾಯೆತ್ಸರ್ವ ವಿಘ್ನೋಪಶಾನ್ತಯೆ ॥
× × × ×
ಶ್ರೀಯಶ್ರೇಯಸ್ಸದಾಸ್ಥಾನಂ ದಿವ್ಯಂ ಹೃದಯಪಙ್ಕಜಂ ।
ಬೋಧಿತಂ ಯೇನ ತಂ ವಂದೇ ಪರಾಶರ ದಿವಾಕರಂ ॥
ಶ್ರೀ ಪರಾಶರ ಮಹರ್ಷಿಗಳು ಲೋಕಹಿತಕ್ಕಾಗಿ ತಮ್ಮ ಶಿಷ್ಯನಾದ ಮೈತ್ರೇಯ ಋಷಿಯನ್ನು ನಿಮಿತ್ತೀಕರಿಸಿ ಶ್ರೀ ವಿಷ್ಣುತತ್ವಪ್ರತಿಪಾದಕವಾದ ಪುರಾಣವನ್ನು ಷಡಂಗಗಳಿಂದ ಕೂಡಿದ ವೇದದಂತೆ ಷಡಂಗಗಳಾಗಿ ಹೇಳಿದರು. ಅದೇನಂದರೆ :—

ಅಂತ್ಯ : ರಂಜಿಸುವ ಪರಮಾತ್ಮನ ರೂಪವು ಸಮಸ್ತವಾದ ಪುರುಷರಿಗೂ ಜನ್ಮ ಜರಾದಿ ರಹಿತನಾದವನ ಕೃಪಾಕಟಾಕ್ಷದಿಂದ ವಿಶೇಷವಾಗಿರುವದೆಂದು ಪರಾಶರರು ಮೈತ್ರೇಯರಿಗೆ ನಿರೂಪಿಸಿದರೂ ಎಂಬ ಬಳಿಗೆ ॥ ಶ್ರೀ ವಿಷ್ಣು ಪುರಾಣದಲ್ಲಿ ಪಂಚಮಾಂಶದಲ್ಲಿ ಮುವ್ವತ್ತೆಂಟನೆಯ ಅಧ್ಯಾಯವು ಸಮಾಪ್ತಿಯು × × × ×
ಸರಸ ಸದ್ಗುಣಶಾಲಿ ನೀತಿವಿದನು ದುಃಖಿರ್ತಿ ತೇಜೋಗನಸ್ಪುರಣನಂ ಕೋವಿದನಿದನಿಂ ನಿಘ್ನವನಘಂ ಗಾಂಭೀರ್‍ಯರತ್ನಾಕರಂ ನಿರುತಂ ದಾನ ವಿನೋದಿಯಂ ಜುಲಮಹಾ ಸೌಂದರ್‍ಯರೂಪಂ ಸದಾ ಕರುಣಪೂರ್ನ ಕ್ಷನಂ ॥ ೪ ॥
ದಕ್ಷಣದಿಗ್ವಿದುರಮಣನ ಶ್ರಿತ
ಲೋಕ ಉದ್ಧರಿತನಂ ಬೇಡುವೆನು ಮುದದಿಂದ ॥ ೫ ॥
ಸತ್ಯ ಪರಾಕ್ರಮ ವೀರ ಶ್ರೀ ನರಪತಿ
ಚಿಕ್ಕದೇವ ಮಹಾರಾಜ ನೀನೊಲಿದು ರಕ್ಷಿಸಲಿಬೇಕೆಂದ ॥
ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶ ಸಮಾಪ್ತಿಯು.

ವಿಷಯ : ವಿಷ್ಣುಮಾಹಾತ್ಮ್ಯ.

ವಿಶೇಷ : ೧೮೦ ನೆಯ ಪತ್ರದಲ್ಲಿ ಬರವಣಿಗೆಯಿಲ್ಲ.

1583

ಕೆ. ಎ. ೧೯೦/೭	**ವಿಷ್ಣುಭಕ್ತಿಸಾರ**	ಭಾಮಿನೀಷಟ್ಪದಿ
೧೨.೬" × ೮"	ಕನಕದಾಸ	ಸು. ೧೫೫೦
೧೩–೧೮ ಪತ್ರ	೨೫ ಪಂಕ್ತಿ	៣៥ ಅಕ್ಷರ

ಆದಿ : ವಿಷ್ಣುಭಕ್ತಿಸಾರ ಬರೆವುದಕ್ಕೆ ಪ್ರಾರಂಭಾ.
ಶ್ರೀಯರಸೆ ಗಾಂಗೇಯನುತ ಕೌ
ತೇಯಾ ವಂದಿತ ಚರಣಕಮಲದ
ಛಾಯತಾಂಬಕರೂಪ ಚಿನುಮಯ ದೇವಕೀತನೆಯಾ
ರಾಯ ರಘುಕುಲವರ್‍ಯ ಭೂಸುರ
ಪ್ರೀಯ ವರಪುರನಿಲೆಯ ಚಂನಿಗ
ರಾಯ ಚದುರೋಪಾಯ ರಕ್ಷಿಸು ನಂಮನನವರತಾ ॥ ೧ ॥
ಕುರುನೃಪತಿ ಗರ್ವಾಪಹಾರನೆ ಬೂ
ಸುರ ಚತುರ್ದಶಬುವನ ಕಾಲನ
ಸಿಕ್ಷ ಕಾರಣನೇ....
ಹರ ಚತುರ್ಮುಖವಂದ್ಯ ಸುರಕುಜ
ಗುರುಲಗುತ್ತಮಾ ರೂಪ ಸಾಮಜ
ವರದ ಹರಧನುರ್ಭಂಗ
ವರಪುರದರಸ ಚಂನಿಗರಾಯ ರಕ್ಷಿಸು ನಂಮನನವರತಾ ॥ ೨ ॥

ಅಂತ್ಯ : ಕುಲಗಿರಿಗಳಾಂನ್ವಯವು ದಾರುಣಿ
ಜಲದಿ ಪಾವಕಸಕನು ಮಾರುತಿ
ಜಲಝುಮಿತ್ರ ಹಿಮಾಂಸ್ಸುತಾರೆಗಳುಳ್ಳ ಪರಿಯಂತಾ
ಚಲನವಿಲ್ಲದೆ ನಿಂಮ ಚರಿತೆಯ
ವಲಿದು ದರೆಗಿದು ವಪ್ಪುವಂದದಿ
ಚಲುವ ಚಂನಿಗರಾಯ ರಕ್ಷಿಸು ನಂಮನನವರತಾ ॥ ೧೧೧ ॥
ಯಿದುವೆ ಮಂಗಳಕರ ಸುಬೋಧಯ
ಯಿದುವೆ ವತ್ಸಂಭವ ದುಷ್ಕೃತ
ನಿದನ ಶತ್ರುದಂಸ್ಸಕರ ದಾರಿದ್ರದುಖ್ಖಹರಾ
ಯಿದು ಮನೋಭೀಷ್ಟಪ್ರದಂ ಕಾ
ದುದೂ ಸಂಪದಕರಂ ಪುತ್ರಪ್ರದಂ
ಕಾದುದು ಮನೋಜ್ಞಮಿದೆಂದು ಜನರಿಂಗೊರದನಾ ಕನಕಾ ॥ ೧೧೨ ॥
ಭಕ್ತಿಸಾರ ಸಂಪೂರ್ನ ಜಯಮಂಗಳ ಮಹಾಶ್ರೀ ॥

ವಿಷಯ : ವಿಷ್ಣುಭಕ್ತಿ.

ವಿಶೇಷ : ಇದೇ ಪುಸ್ತಕದಲ್ಲಿ ಸೋಮೇಶ್ವರ ಶತಕ, ಸಂಕ್ಷೇಪ ರಾಮಾಯಣ, ಸಂಕ್ಷೇಪ ಭಾರತ, ಧರ್ಮನೀತಿ, ವಿಭೀಷಣನಬುದ್ಧಿ, ಗೋವಿನಹಾಡು,

ಸುಭಾಷಿತಗ್ರಂಥ, ನಳಚರಿತ್ರೆ, ಹರಿಶ್ಚಂದ್ರೋಪಾಖ್ಯಾನ, ರುದ್ರಭಾರತ ಎಂಬ ಕೃತಿಗಳಿವೆ.

1584

ಕೆ. ಬಿ. ೪೬೬ **ವೀರಭದ್ರತಾರಾವಳಿ** ಹಾಡು

೮.೩" × ೬.೬" ? ?

೧–೪೪ ಪುಟ ೧೨ ಪಂಕ್ತಿ ೧೫ ಅಕ್ಷರ

ಆದಿ : ಶ್ರೀ ವೀರಭದ್ರ ತಾರಾವಳಿ. ರಾಗ—ತಿಳಿಗನ್ನಡ ಕಾಂಬೋಧಿ.
ಪ್ರತಿಯಿಲ್ಲ ನಿಮಗೆ ಇನ್ನು ಪ್ರತಿಯಿಲ್ಲ ನಿಮ್ಮದು
ನ್ನತವಾದ ಮಹಿಮೆಗೆ ಕ್ಷಿತಿಜನತಾತ ಶ್ರೀ ವೀರಭದ್ರೇಶ್ವರ ॥ ಪಲ್ಲ ॥
ಶ್ರೀ ಗುರುಮೂರ್ತಿಯ ಆದಿ ಆಧಾರನೆ
ಶ್ರೀ ಗುರುಮೂರ್ತಿಯ ಶ್ರೀ ಗಣವಂದ್ಯನೆ
ಶ್ರೀ ಗುರುಮೂರ್ತಿಯ ಸುರರ ಸಂತುಷ್ಟನೆ
ಶ್ರೀ ಗುರುಮೂರ್ತಿಯೆ ಮುನಿಧರ್ಮಶಾಂತನೆ ॥

ಅಂತ್ಯ : ಹಾಂ ಹಂ ಭೂತ ಪಿಶಾಚ ಕಂಠಗ್ರಹಮಂ ಪೀಡಾಕರಂ ಪೋಗುವಂ
ಮಹಾವ್ಯಾಘ್ರನು ಚೋರ ಅಗ್ನಿ ಜಲಮಂ ಜಾರಸ್ತ್ರಿಯಂ ಕಂಟಕಂ
ಬಾಹಮ್ಮಿಂದಲಿ ತುಡುಕಿದೆಲ್ಲ ನಿಲಿಸಿಂ ವೀರಾದಿವೀರಾವತಂ
ಸ್ವಾಹಂಭಾವದಿ ನಿತ್ಯ ಜಪಿಸಿದವರ್ಗಂ ಸಾಲೋಕ್ಯಪದಶಿದ್ಧಿಯಂ ॥ ೨ ॥
ಸಂಪೂರ್ಣಂ.

ವಿಷಯ : ವೀರಭದ್ರನ ಸ್ತುತಿ.

ವಿಶೇಷ : ಸಮಗ್ರವಾಗಿದೆ.

1585

ಕೆ. ೨೪೧/೨ **ವೀರಭದ್ರದೇವರಖಡ್ಗ** ಗದ್ಯ

೧೧.೫"×೧.೪" ? ?

೩೭–೩೮ ಪತ್ರ ೬ ಪಂಕ್ತಿ ೫೬ ಅಕ್ಷರ

ಆದಿ : ಶ್ರೀ ವಿರುಪಾಕ್ಷಯಂ ನಃ ॥ ವೀರಭದ್ರದೇವರು ಖಡ್ಗ ॥ ವಚನ.
ಹರಹರ ಮಹದೇವ । ನಂಮ ಹರನಿಗೆ ರಜತಾದ್ರಿ ಹರಿಗೆ ಪಾಲ್ಗಡಲು ।
ವಿಭೀಷಣಂಗೆ ಲೆಂಕನಗಿರಿ । ವಿಷ್ಟಿಣಅಂಗೆ ಮಧುರಸೆ । ಬೊಮರಾಂಬಿಕಿತ ।
ಕ್ಷಿರಸಾಗರದೊಳು ಮುತ್ತುಬೆಳೆ ಹುಟ್ಟಿದಂತೆ । ತಾಂಬ್ರದ ಪ್ರತಿಯೆಂತೆ ।

ಅಂತ್ಯ : ಬಿದಿಲುಂಬ ಬಿನಗುದೈವದಗಂಡ । ವೀರಧಿವೀರ ವೀಶ್ವರನ ಕೊಮಾರ । ಶ್ರೀ ಶಿವನ ಸಾಕಾರ । ದಕ್ಷಣನ ಸಂಹರ । ಶ್ರೀ ರಜೋಟ್ಟೆ ಶ್ರೀ ವೀರಭದ್ರ ಮುರ್ತಿ । ವೀರಭದ್ರದೇವರ ಖಡ್ಗ ಸಮಸ್ತ ಮಂಗಳ ಮಹ ಶ್ರೀ ॥

ವಿಷಯ : ವೀರಭದ್ರನ ಮಹಿಮೆ.

ವಿಶೇಷ : ಈ ಗ್ರಂಥದಿಂದ ಮುಂದಕ್ಕೆ ೩೮ ಮತ್ತು ೩೯ ನೆಯ ಪತ್ರಗಳಲ್ಲಿ ಕೆಲವು ಪದ್ಯಗಳಿವೆ. ಇದೇ ಕಟ್ಟಿನಲ್ಲಿ ಪಂಚರತ್ನಪ್ರತಿಪಾಕಸ ಎಂಬ ಕೃತಿಯಿದೆ.

1586

ಕೆ. ೨೦೦	**ವೀರಭದ್ರನ ಸಾಂಗತ್ಯ**	ಸಾಂಗತ್ಯ
೯"×೧.೪"	ಸೋಮ	ಸು. ೧೭೦೦
೧–೬೫ ಪತ್ರ	೫ ಪಂಕ್ತಿ	೪೦ ಅಕ್ಷರ

ಆದಿ : ವೀರಭದ್ರ ಸಂಗಿತ್ಯವ ಬರೆವದಕ್ಕೆ ಶುಭಮಸ್ತು.
ಶ್ರೀ ಮಹಾದೇವರ ದೇವ ಸರ್ವೇಶನೆ
ಸೋಮಧರನೆ ಫಣಿಬೂಸ
ಕಾಮನ ಬಸಿತಾಂಗ ಬೀಮನೆ ತ್ರೈಲೋಕ್ಯ
....ಮನೆ ಸಲಹು ಸೋಮೇಶ ॥ ೧ ॥

× × × ×

ನುಡಿಯೊ....ಫ್ಪುಗಳೆದರುಬರವು ಕಡು
ಹಿಡಿದು ಸಾದಿಶಬೇಡ ಕೇಳಿ
ವಡಿಹುಟ್ಟಿದವ ಸೋಮನರಿಯನೆಸುತ್ತವೆ....
ಬಿಡದೆ ಲಾಲಿಸಿ ಬಕ್ತಜನರೂ ॥ ೧೦ ॥

ಅಂತ್ಯ : ಶರಣಾರ್ತಿ ಶೋಮೇಶ ಶರಣಾರ್ತಿ ವೀರೇಶಾ
ಶರಣರ್ತಿ ತೊಂದ ಸಿದ್ಧಾ
ಶರಣಾರ್ತಿ ಸಜ್ಜನ ಶರಣ ಸಂದೋಹಕ್ಕೆ
ಶರಣಾರ್ತಿ ಸಂಧಿಗಳೈದೂ ॥ ೫೨ ॥
ಅಂತು ಸಂಧಿ ೫ಕ್ಕೆ ಪದನು ೫೧೫ಕಂ ಮಂಗಳಮಹಾ ಶ್ರೀ ॥ ವೀರಭದ್ರನ ಸಂಗಿತ್ಯಕ್ಕೆ ನಿರ್ವಿಗ್ನಮಸ್ತು-ಸಂಪೂರ್ನ.

ವಿಷಯ : ವೀರಭದ್ರಾವತಾರ.

ವಿಶೇಷ : ಶಿಥಿಲಪ್ರತಿ. ಗ್ರಂಥದ ಕೊನೆಯಲ್ಲಿ ಅರ್ಜುನ ಕೊರವಂಜಿ ಎಂಬ ಗ್ರಂಥದ ೭ ಪತ್ರಗಳಿವೆ.

1587

ಕೆ. ೫೮೧ **ವೀರಭದ್ರಲೀಲಾರತ್ನ** ಸಾಂಗತ್ಯ

೧೪.೪"×೨.೩" ಶಾಂತವೀರ ಸು. ೧೬೦೦

೧–೫೭ ಪತ್ರ ೧೨ ಪಂಕ್ತಿ ೬೮ ಅಕ್ಷರ

ಆದಿ : ವೀರಭದ್ರಲೀಲಾರತ್ನವ ಬರವುದಕ್ಕೆ ಶುಭಮಸ್ತು × ×

ಕಂದಾ ॥ ನುತಿಗತಿಶಯು ಶಿವಸಭೆಯೊಳ
....ಮನ್ನಣೆಗುಂದಿ ದಕ್ಷ ತಂನ್ನಯ ಮನದೊಳು
ಖತಿಗೊಂಡು ಹರವಿರಹಿತ
ಕ್ರತುವಂ ಬಂದೆಸಗುತಿರ್ದ ಕಥನವದೆಂತೆನೆ ॥ ೧ ॥

× × × ×

ಭೂತೇಶನಣುಗ ಶ್ರೀ ವೀರಭದ್ರೇಶ್ವರನ
ದೇತಕ್ಕೆ ಕುರಿದಲೆಯ ದಕ್ಷಗಿತ್ತವನೆನಲೂ
ಸುತಗೊರದನು ಲಕ್ಷ ಗ್ರಂಥವ ದಧೀಚ ಮುನಿನಾಥನನುಬವದೊಳ್ಪಿನಾ
ವೀತಿಯರಿದುಸುರ್ವ ಹರಕವಿಕುಲಕೆ ವರಭ್ರುತ್ಯ
ಪ್ರೀತಿಯಲಿ ಶಿವಪೌರಾಣದ ಶಾಂತವೀರ ಪೇ
ಳ್ದೋತು ಶಿವಭಕ್ತಜನರಾಲಿಸುವದೀ ವೀರಭದ್ರ ಲೀಲಾರತ್ನವಾ ॥

ಪದನೂ ॥ ಶ್ರೀ ಪಾರ್ವತಿಯೊದನಾಂಭುಜ ವಿಕಚ ದಿ
ವಾಪತಿ ತೇಜವಿರಾಜಾ
ಗೋಪತಿಧ್ವಜ ಚಂನಮಲೇಶ ಲಿಂಗ ದ
ಯಾಪರವಸ್ತುವಿಗೆ ಶರಣೂ ॥ ೧ ॥

ಅಂತ್ಯ : ವಪ್ಪಿದ ಜಗದೇಕ ಭದ್ರಕಾಳಿಯ ಪ್ರಿಯ್ಯ
ಸರ್ಪಭೂಷಣ ವೀರೇಶಾ
ದರ್ಪ ದಕ್ಷನ ಮುಖಸಂಹಾರನೆಂಬ
ಅಪ್ರತಿಚರಿತೆ ಸಂಪೂರ್ನಾ ॥ ೧೧೮ ॥

ಅಂತೂ ಸಂದಿ ೯ ಕಂ ಪದನೂ ೧೬೪೯ ಕ್ಕೆ ವಿವರ । ಕಂದ ೧೮ ಷಟ್ಪದಿ ೨೭ ಮಂಗಳಾಷ್ಟಕ ೮ ಅಂತೂ ಪದ ಕಂದ ಷಟ್ಪದಿ ಮಂಗಳಾಷ್ಟಕ ಸಹ ೧೭೦೧ ಕಂ ಮಂಗಳಮಹ ಶ್ರೀ × × ಆನಂದ ಸಂವತ್ಸರದ ಶ್ರಾವಣ ಬ ೭ ಸ್ಥಿರವಾರ ಕಾಗದಕೇ ಕಟ್ಟೆ ಶಂಕಟಭಟ್ಟನು ಬರದ ವೀರಭದ್ರಲೀಲಾರತ್ನದ ಪುಸ್ತುಕಕೆ ಶುಭಮಸ್ತು.

ವಿಷಯ : ವೀರಭದ್ರಾವತಾರ.

ವಿಶೇಷ : ಸಾಂಗತ್ಯದ ಜೊತೆಗೆ ಕಂದ, ಷಟ್ಪದಿ, ಮಂಗಳಾಷ್ಟಕಗಳೂ ಇವೆ. ಕೊನೆಯಲ್ಲಿ ಶ್ರೀಮದ್ವೀರಕರ ವೀರಭದ್ರವಿಜಯ, ದೇವಿಅಷ್ಟೋತ್ತರ ಮೊದಲಾದುವುಗಳನ್ನುಳ್ಳ ಬೇರೆ ೫ ಪತ್ರಗಳಿವೆ.

1588

ಕೆ. ೨೫೨	**ವೀರಭದ್ರವಿಜಯ**	ಭಾಮಿನೀಷಟ್ಪದಿ
೧೮.೨"×೧.೫"	ನಿಶ್ಚಿಂತಾತ್ಮ	ಸು. ೧೬೦೦
೧–೭೨ ಪತ್ರ	೬ ಪಂಕ್ತಿ	೭೮ ಅಕ್ಷರ

ಆದಿ : ವೀರಭದ್ರಲೀಲಾವಿಜಯ ಬರೆಯುವಧಕ್ಕೆ ಶುಭಮಸ್ತು. ರಾಗ–ಷಟ್ಪದಿವರ್ನ.
ಯಿಂದುಧರನ....ಮರೆದು ದಕ್ಷನು
ಪೇಂದ್ರಸಹಿತೆಗ್ನವನು ಮಾಡಿದ
ಗೊಂದಣವ ನೆರೆ ಮುರಿದು ಮೆರೆದನು ವೀರಭದ್ರಾಖ್ಯಾ ||
ಪದನೂ || ಶ್ರೀ....ಮರಜ ವಿಷ್ಣುಕೋಟಿಃ
ಸ್ತೋಮವಂದಿತ ಪಾದಪಂಕಜ
ವ್ಯೋಮಕೇಶ .... ರಾ....ಯನು ನಿರ್ಭಿಂನ....ದ್ಯಾ
ಭೀಮ ನಿತ್ಯ ನಿಜೈಕ್ಯ ಭಕ್ತಿ
ಪ್ರೇಮ ಶರಣ ಕುಟುಂಬಿ ನಿಗಮಃ
ಸ್ತೋಮಶೇಖರ ಸರ್ವತೋಮುಖ ಸಲಹೆಂನ್ನನವರತಾ || ೧ ||

ಅಂತ್ಯ : ಶ್ರೀಯು ಸೌಭಾಗ್ಯತೆಯುಧಾರತೆ
ಕಾಯ್ಯಜಾರಿಯ ಭಕ್ತಿ ಸೌಖ್ಯಮು
ದಾಯು ಗಂಭೀರತೆಯೂ ಸಂಪದ ಸಕಲ ಸಿದ್ಧಿಗಳಿಾ || ೮೮ ||
ಆಯತವನೊಲಿದಿತ್ತು ರಕ್ಷಿಪ
ರಾಯ ವಿಶ್ವೇಶ್ವರ ಕೃಪಾಕರ
ಜೀಯ ಲಾಲಿಸು ಸಕಲ ಭಕ್ತರ ಧರಣಿಮುಳ್ಳನಕಾ ||
ಹೇವಿಳಂಬಿ ಸಂವತ್ಸರದ ಮಾಘ ಶುಧ ೫ ಯಲ್ಲು ಗುರುಮಲ್ಲೇದೇವರ ಮಗ
ಬೋಗೈಯ ಬರೆದ ವೀರಭದ್ರವಿಜಯ
ಗದ್ಯ || ಶ್ರೀ ಸೋಮೇಶ್ವರ ಪಾದಾರವಿಂದ ಮದುಸಉತ ಮದುಕರರಾಯ ಮನ ,ಮಹಾಯೆತೀಶ್ವರ ನಿಶ್ಚಿಂತ್ತಾತ್ಮ ವಿರಚಿತ ವೀರಭದ್ರವಿಜಯ ಸಂಪೂರ್ನಂ. ಆದ್ಯಾಯ ೯ ಕಂ ಪದನು ೮೦೦೦ ಕಂ ಮಂಗಳಮಹಾ ಶ್ರೀ

ವಿಷಯ : ವೀರಭದ್ರನ ಚರಿತ್ರೆ.

ವಿಶೇಷ : ಶಿಥಿಲ. ಶಕಟರೇಫದ ಬಳಕೆಯಿದೆ.

1589

ಕೆ. ಬಿ. ೩೨	**ವೀರಭದ್ರವಿಜಯ**	ಭಾಮಿನೀಷಟ್ಪದಿ
೭.೯"×೬.೪"	ಸಿಶ್ಚಿಂತಾತ್ಮ	ಸು. ೧೬೦೦
೧–೧೫೯ ಪತ್ರ	೨೫ ಪಂಕ್ತಿ	೧೫ ಅಕ್ಷರ

ಆದಿ : ವೀರಭದ್ರವಿಜಯ × ×

ಪಲ್ಲವ ॥ ಯಿಂದುಧರನನು ಮರದು ದಕ್ಷ
ವುಪೇಂದ್ರ ಸಹಿತ ಯೆಗ್ನವ ಮಾಡಲು
ಣಂದಣವ ನೆರೆಮುರಿದು ಮೆರದನು ವೀರಭದ್ರಾ್ರಕ್ಷಾ ॥
ಪದ ॥ ಶ್ರೀಮದಮರ ಕಿರೀಟ ಕೋಟಿ
ಸ್ತೋಮ ಪಾದಪಂಕಜ
ವ್ಯೋಮಕೇಶ ನಿರಾಮಯ ನಿರ್ಭಿಂನ ನೀರವಂದ್ಯಾ
ಭೀಮ ನಿತ್ಯ ನಿಜೆಯಿಕ್ಯ ಭಕ್ತಿ
ಪ್ರೇಮ ಶರಣಕುಟುಂಬ ನಿರ್ಮ್ಮಳ
ಸೋಮಶೇಖರ ವಿಶ್ವತೋಮುಖ ಸಲಹುಗನವರತಾ ॥ ೧ ॥

ಅಂತ್ಯ ॥ ಸಿರಿಯು ಸವುಭಾಗ್ಯಕೆ ವು
ದಾರಕೆ ಕಾಯಜಾರಿಯ ಭಕ್ತ
ಸೊಖ್ಯಮದಾಯ ಗಾಂಭಿರತಿಯು ಸಂಪದ ಸಕಲ ಸಿದ್ಧಿಗಳಾ
ಆಯತವನೊಸೆದಿತ್ತು ರಕ್ಷಿಪ
ರಾಯ ವೀರೇಶ್ವರ ಕೃಪಾಕರ
ಜೀಯ್ಯ ಪಾಲಿಸು ಸಕಲ ಭಕ್ತರ ದರಣಿವುಳ್ಳಂನಕಾ ॥ ೫೯ ॥
ಅಂತು ಸಂಧಿ ೧೦ ಕ್ಕಂ ಪದ ೬೨೫ ಕ್ಕಂ ಮಂಗಳಮಹಾ ವೀರಭದ್ರ ವಿಜೆಯ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : ವೀರಭದ್ರನಚರಿತ್ರೆ.

ವಿಶೇಷ : ಪದ್ಯಗಳನ್ನು ಪಾದವಿಭಾಗ ಮಾಡಿ ಬರೆದಿದೆ. ಕೆಲವೆಡೆ ಪ್ರಾಸ ಬಿಟ್ಟು ಹೋಗಿದೆ. ಮತ್ತೆ ಕೆಲವೆಡೆ ಕೆಲವು ಚರಣಗಳು ಲುಪ್ತವಾಗಿವೆ.

1590

ಕೆ. ಎ. ೧೧೪	**ವೀರಭದ್ರವಿಜಯ**	ಚಂಪು
೧೨.೫" × ೭.೭"	ವೀರಭದ್ರರಾಜ	೧೫೩೦
೧–೨೪೩ ಪತ್ರ	೨೩ ಪಂಕ್ತಿ	೧೪ ಅಕ್ಷರ

ಆದಿ : ವೀರಭದ್ರವಿಜಯಂ.

ಶ್ರೀಗೌರೀ ಪೀನವೃತ್ತಸ್ತನಘುಸೃಣದಿನೋರಂತೆ ರಂಜಿಪ್ಪ ವಕ್ಷೋ
ಭಾಗಂ ಬ್ರಹ್ಮೇಂದ್ರಮುಖ್ಯಾಮರ ಮಣಿಮಕುಟಶ್ರೇಣಿ ಶೋಣಾಂಘ್ರಿ ಯುಗ್ಮಂ
ನಾಗಾಧೀಶೋಪವೀತಂ ರವಿಶಶಿಶಿಖಿನೇತ್ರಂ ಜಗದ್ಧಾತ್ರನೀಗೊ
ಲ್ದೀಗಂ ಭಕ್ತಪ್ರತಾಪಕ್ಕಭಿಮತವನೊರಲ್ದಾವಗಂ ವಿಶ್ವನಾಥಂ ॥ ೧ ॥

ಅಂತ್ಯ : ಗಿರಿಯ ಮಗಳ ಮುಡಿಯೊಳಮರ್ದ ಸುರಕುಜಪ್ರಸೂನದೊಳ್
ಬೆರೆದರಜಮನುತಿದೆ ಸವಿದು ತಣಿದು ತನ್ನ ಲೀಲೆಯಿಂ
ಮೊರೆವ ಮಧುಸರವದ ಸವಿಗೆ ಕಿವಿಯನಿತ್ತು ಧಾತ್ರಿಯಂ
ಪೊರೆವ ಗರಳಗಳನ ಚರಣಕಮಲಮಿಾಗಭೀಷ್ಟಮಂ ॥ ೧೪೧ ॥

ಗದ್ಯ ॥ ಇದು ಸಮಸ್ತ ಬ್ರಹ್ಮಾಂಡ × × × × ಕಾಶೀಪುರಪ್ರವೇಶ ವಿಶ್ವೇಶ್ವರ ಪದಸಂದರ್ಶನ ಸರ್ವದೇವತಾ ಪುನಃ ಪ್ರಾಣದಾನ ವರಪ್ರದಾನ ವರ್ಣನಂ ದ್ವಾದಶಾಶ್ವಾಸಂ ಸಮಾಪ್ತಂ.

ಅಂತು ಆಶ್ವಾಸಂ ೧೨ ಕ್ಕೆ ಪದ್ಯ ೧೦೩೮ ಕ್ಕಂ ಮಂಗಳಮಸ್ತು-

ವಿಷಯ : ವೀರಭದ್ರನ ಚರಿತ್ರೆ.

ವಿಶೇಷ : ೬೯ ನೆಯ ಪುಟ ಆದಮೇಲೆ ಮುಂದಿನ ಪುಟಗಳು ೭೮ ನೆಯ ಪುಟದ ವರೆಗೆ ಹಿಂದುಮುಂದಾಗಿವೆ. ೨೦೧ ಮತ್ತು ೨೦೨ ನೆಯ ಪುಟಗಳ ಮಧ್ಯ ದಲ್ಲಿ ೧ ಖಾಲಿ ಪತ್ರವಿದೆ.

1591

ಕೆ. ಎ. ೧೩೦	**ವೀರಭದ್ರಶತಕ**	ವೃತ್ತ
೧೩.೨"×೮.೧"	ಲಿಂಗರಾಜ	೧೮೫೦
೧–೧೬ ಪತ್ರ	೨೪ ಪಂಕ್ತಿ	೧೮ ಅಕ್ಷರ

ಆದಿ : ಶ್ರೀ ವೀರಭದ್ರಶತಕಂ.
ಶ್ರೀಮದ್ಗೋತ್ರಾಧಿನಾಥಾತ್ಮಜೆಯ ಶಿವೆಯ ಸರ್ವೇಶನರ್ಧಾಂಗಮಂ ಕೊಂ
ಡಾ ಮಾದೇವಂಗೆ ಶಕ್ತಿತ್ರಯಮೆನಿಸುತೆ ಮೂಱುಂ ಜಗಕ್ಕಂ ವಲಂ ತಾ
ನೇ ಮಾತೃ ಖ್ಯಾತೆಯಾಗಿರ್ಪಳ ಮನದೞಲಂ ಮಳ್ಗಿಸಿರ್ದೊಳ್ಪುವೆತ್ತಿ
ರ್ದಾ ಮೈಮಾ ರಕ್ಷಿಸೆವ್ಯ್ರಂ ಕರುಣದೆಸಕದಿಂದಂ ಸದಾ ವೀರಭದ್ರಾ ॥೧॥

ಅಂತ್ಯ : ಇದು ಸಾಕ್ಷಾದ್ವೇದಪಾರಂ ಬಳಿಕಿದು ಪರಮಜ್ಞಾನ
ಧರೆಯರಿವಿನೆಗಂ ಕೊಟ್ಟೆ ಮಾಮೈಮನೇ ತ್ವ
ಚ್ಚರಣಂ ಮಚ್ಚಿತ್ತದೊಳ್ತಾಂ ಬರೆದವೊಲುರೆ ಬೈತಂತೆ ಬೆಚ್ಚಂತೆ ತೋರ್ಪೆಂ
ವರಮೊಂದಂ ಕೊಟ್ಟು ದೇವಾ ಸಲಹನವರತಂ ದಕ್ಷಭಿಗ್ವೀರಭದ್ರಾ ॥೧೩೭॥
ಸಮಾಪ್ತಂ.

ವಿಷಯ : ವೀರಭದ್ರನ ಮಹಿಮೆ.

ವಿಶೇಷ : ಈ ಶತಕದ ಆದಿಪದ್ಯದಲ್ಲಿ ಮಾತ್ರ ಱ, ೞ ಗಳು ಕಂಡುಬರುತ್ತವೆ. ಉಳಿದ ಪದ್ಯಗಳಲ್ಲಿ ಕಂಡುಬರುವುದಿಲ್ಲ. ೩ ನೆಯ ಪತ್ರ ಮಧ್ಯದಲ್ಲಿ ಸ್ವಲ್ಪ ಹರಿದಿದೆ. ೧೨೩ ನೆಯ ಪದ್ಯದಿಂದ ೧೨೯ ರವರೆಗೆ ಗ್ರಂಥಪಾತ.

1592

ಕೆ. ಬಿ. ೩೪೯	**ವೀರಭದ್ರಶತಕ**	ವೃತ್ತ
೮.೧″ × ೭″	ಲಿಂಗರಾಜ	೧೮೫೦
೧–೧೨ ಪತ್ರ	೨೨ ಪಂಕ್ತಿ	೨೦ ಅಕ್ಷರ

ಆದಿ : ವೀರಭದ್ರಶತಕ ಬರೆಯುವದಕ್ಕೆ ನಿರ್ವಿಘ್ನಮಸ್ತು.
ಶ್ರೀಮತ್ಕಾಳೀಕುಚಾಂಭೋರುಹ ಮುಕುಳಲಸತ್ಕುಂಕುಮೋದ್ಭಾಸಿ ವಕ್ಷಂ
ಪ್ರೇಮಾಂಭೋರಾಸಿ ಭಕ್ತಾಮರತರು ದಿವಿಜಾಧೀಶ ಸಂಸೇವ್ಯಪಾದಂ
ರಾಮಾರ್ಧಾಂಗಂ ವಿರಾಜನ್ಮುನಿಜನಹೃದಯಾಂಭೋಜ ಭಾನುಸ್ವರೂಪಂ
ಸೋಮೋದ್ಯನ್ಮೂರ್ಧನೆಂಮಂ ಸಲಹಲಿ ಮುದವಂನೀಯ್ಯುತಂ ವೀರಭದ್ರಂ
॥ ೧ ॥

ಅಂತ್ಯ : ಸಲಹೈ ಸಂಪದವಿತ್ತು ಸರ್ವಸುಖವಿತ್ತಾವಾಗಲುಂ ಪುತ್ರರಂ
ವಲಿದೀಯುತ್ತ ಮನೋರಥಂಗಳನು ನೀಂ ಸಂಪೂರ್ತಿಯು ಗೆಯ್ಯುತಂ
ವಲವಿಂ ನಿಂನಯ ಕೋಮಲಾಂಘ್ರಿಯುಗದೊಳ್ಸದ್ಭಕ್ತಿಯಂ
ಪಾಲಿಸೀಗಲೆಯನ್ನಂ ಪರದಕ್ಷ ಶೀಕ್ಷಣಚಣ ಶ್ರೀ ವೀರಭದ್ರೇಶ್ವರ ॥೧೦೧॥

× × × ×

ಲಿಂಗರಾಜನ ಮಡದಿ ಕೆಂಪದೇವಾಂಬೆಯ ಗಬ ಪಾಲ್ಗಡಲ್ಗೆ ಪುಂಣುಮೆ ಕಣ್ಗದಿರನಾಗಿ . . ರಿ ನುಡಿವೆಣ್ಗಳೊಡೆವೆರದ ಲಿಂಗರಾಜನುಸುರಿದ ವೀರ ಭದ್ರಶತಕಂ ಸಂಪೂರ್ಣಂ.

ವಿಷಯ : ವೀರಭದ್ರನ ಮಹಿಮೆ.

ವಿಶೇಷ : ಪ್ರತಿ ತುಂಬಾ ಶಿಥಿಲ. ಕೆಲವು ಭಾಗ ಹುಳುಹಿಡಿದುಹೋಗಿದೆ.

1593

ಕೆ. ಬಿ. ೪೨೮	**ವೀರಭದ್ರಶತಕ**	ವೃತ್ತ
೮.೧"×೬.೬"	ಲಿಂಗರಾಜ	೧೮೫೦
೧–೨೨ ಪತ್ರ	೧೨ ಪಂಕ್ತಿ	೧೭ ಅಕ್ಷರ

ಆದಿ : ವೀರಭದ್ರಶತಕಾ ಬರಯುವದಕ್ಕೆ ನಿರ್ವಿಘ್ನಮಸ್ತು ||
ಶ್ರೀಮತ್ಕಳಾಕುಚಾಂಭೋರುಹ ಮುಕುಳಲಸತ್ಕುಂಕುಮೋದ್ಭಾಸಿಪಕ್ಷಂ
ಪ್ರೇಮಾಂಭೊರಾಸಿ ಭಕ್ತಾಮರತರು ದಿವಿಜಾಧೀಶ ಸಂಸೇವ್ಯಪಾದಂ
ರಾಮಾರ್ಥಾಂಗಂ ವಿರಾರ್ಜ ಮುನಿಜನಹೃದಯಾಂಭೋಜ ಭಾನುಸ್ವರೂಪಂ
ಸೋಮೊದ್ಯನ್ಮೂರ್ಧನೆಂಮಂ ಸಲಹಲಿ ಮುದವಂನೀಯ್ಯುತಂ ವೀರಭದ್ರಂ
|| ೧ ||

ಅಂತ್ಯ : ಸಲಹೈ ಸಂಪದವಿತ್ತು ಸರ್ವಸುಖವಿತ್ತಾಗಲುಂ ಪುತ್ರರಂ
ವಲಿದೀಯುತ್ತ ಮನೋರಥಂಗಳನು ನೀಂ ಸಂಪೂರ್ತಿಯುಗೈಯ್ಯುತಂ
ನಲವಿಂ ನಿಂನಯ ಕೋಮಲಾಂಘ್ರಿಯುಗದೊಳ್ಸದ್ಭಕ್ತಿಯಂ
ಪಾಲಿಸೀಗಲೆ ಯನ್ನಂ ಪರದಕ್ಷ ಶಿಕ್ಷಣ ಚಣ ಶ್ರೀ ವೀರಭದ್ರೇಶ್ವರ ||೧೦೧||

ಯಿದು ಸಾಲ್ವಿಡಿದು ಮೆಲ್ವಾಯ್ವನಾಳ್ದೊಳ‿ಟ್ಟುವಗೆಯ ಸಾರದೆ×× ××ಕೃಷ್ಣರಾಜಂಗೆ ಕೂರ್ಮೆಯಳಿಯನಾಗಿ ದೊಡ್ಡ ಲಿಂಗರಾಜನ ಮಡದಿ ಕೆಂಪದೇವಾಂಬೆಯ ಗಬ್ಬಪಾಲ್ಗಡಲ್ಕೆ ಪುಂಣ್ಣುಮೆ ತಣ್ಗದಿರನಾಗಿ ಶಿರಿನುಡಿ ವೆಣ್ಗಳೊಡೆವೆರದ ಲಿಂಗರಾಜನುಸುರಿದ ವೀರಭದ್ರಶತಕಂ ಸಂಪೂರ್ಣಂ || ಮಂಗಳಮಸ್ತು ||

ವಿಷಯ : ವೀರಭದ್ರನ ಮಹಿಮೆ.

ವಿಶೇಷ : ೨೪ ನೆಯ ಪತ್ರದಲ್ಲಿ "K. B. 349 ನೆಯ ಪುಸ್ತುಕವು ಶಿಥಿಲವಾದ ಪ್ರಯುಕ್ತ ಸದರಿ ಪುಸ್ತಕವನ್ನು ಕಾಪಿ ಮಾಡಿಸಿರುತ್ತೆ. 13–5–25" ಎಂದಿದೆ.

1594

ಕೆ. ೧೬೭ **ವೀರಮಾಹೇಶ್ವರಾಚಾರ ಸಂಗ್ರಹದ ವಾಖ್ಯಾನ** ಶ್ಲೋಕ, ಟೀಕ

೨೧.೩"×೨" ಶ್ರೀಧರಾಂಕ ಸು. ೧೫೫೦

೧೭–೪೩೨ ಪತ್ರ ೧೨ ಪಂಕ್ತಿ ೧೨೦ ಅಕ್ಷರು

ಆದಿ : ಶ್ರೀ ಗುರುಬಸವಲಿಂಗಾಯ ನಮಃ ‖ ವೀರಮಾಹೇಶ್ವರಾಚಾರ ಸಂಗ್ರಹದ ವ್ಯಾಖ್ಯಾನವು ‖ —೦— ‖

ಯಃ ಸಂಸಾರಾನ್ಮಹಾಘೋರಾನ್ಮೋಚಯತ್ಯಾಶ್ರಿತಾನ್ ಜನಾನ್ ।
ಕೃಪಾಕಟಾಕ್ಷಪಾತೇನ ತಸ್ಮೈ ಶ್ರೀ ಗುರವೇ ನಮಃ ‖
ಯಃ = ಆವನಾನೊಬ್ಬ ಗುರು..................ಮಹಾ ಘೋರಾತ್ = ಅತಿ ಭಯಂಕರವಹಂಥಾ ಸಂಸಾರಾತ್=ಸಂಸಾರದ ದೆಸೆಯಿಂದ ಮೋಚಯತಿ= ಬಿಡಿಸುತ್ತಂವಿಹನು ತಸ್ಮೈ=ಅಂಥಾ ಶ್ರೀಗುರವೇ=ಶ್ರೀಗುರುವಿಂಗೋಸ್ಕರ ನಮಃ = ನಮಸ್ಕಾರವು. ಆನತಾಖಿಲಸದ್ಭಕ್ತ......................ನತ= ನಮಸ್ಕರಿಸಲುಪಟ್ಟ

ಅಂತ್ಯ : ಇತಿ ಶ್ರೀ ನೀಲಕಂಠ ನಾಗಾಥಾಚಾರ್ಯ್ಯವರ್ಯ್ಯ ವಿರಚಿತೇ ಶ್ರೀಮದ್ವೀರ ಮಾಹೇಶ್ವರಾಚಾರಸಂಗ್ರಹೇ ಸದಾಚಾರ ನಿರೂ...............ವದ್ವೀಶ್ವರ ಸ್ಕಂದ ಸಂವಾದೋ ನಾಮಾಷ್ಟಸಪ್ತತಿತಮೋಧ್ಯಾಯಃ ‖ ಶ್ರೀ ಶ್ರೀ

ವೀರಮಾಹೇಶ್ವರಾಚಾರಸಂಗ್ರಹಸ್ಯ.........ಇತಿ ನಿಖಿಲ ಸುರಾಸುರೇಂದ್ರ ವಿರಿಂಚಿ ಮುಕುಂದಮಣಿಗಣಬಿಂಬಚುಂಬಿತಾಂಘ್ರಿ ನಖೇಂದು ಭಗವದಂ ಬಿಕಾಮುಖಾಂಬುಜಾದಿತ್ಯ ಪರಮ ಶಿವಚರಣ .... ಜನಾಜ್ಞಾನನಿರ್ಹರಣಾ ರಾಧ್ಯವರ್ಯ್ಯ ಗೊರೆಗೋಡಪುರವರಾಧೀಶ್ವರ ಬೊಪ್ಪಣ ದೇಶಿಕೇಂದ್ರ ತನೂಭವ ಶ್ರೀ ಮಲ್ಲಿಕಾರ್ಜುನಾಚಾರ್ಯ ಸಕಲ ವಿದ್ವತ್ಸ ಭಾಮು....ತ್ರಾನು ಮತಾನ್ಮಾಹೇಶ್ವರ ಮನಃಕುಮುದವನವಿಕಾಸ ಮನೋಲ್ಲಾಸ ಚಂದ್ರೋ ದಯ ವೀರಮಾಹೇಶ್ವರಾಚಾರಸಂಗ್ರಹಂ ನೀಲಕಂಠನಾ – — ಮಂಜುಳಗಿ ರಾವ್ಯಾ ಕ್ರಿಯತೇ। ಪರಗುಣಪರಮಾಣುಮಪಿ ಪರ್ವತಾಕಾರಂ ಕೃತವದ್ಭಿ ರ್ನಿತ್ಯಂ,ಸುಖಾತಿಶಯೇನ ಶಿವಕಥಾಮೃತಂ ಪೇಪೀಯ್ಯ್ಯ – — – ‖

ಆಶೀರ್ವಾದ ಮಾಡುವ ವೃತ್ತ ‖

ವಿಶ್ವಂ ಯಸ್ಯ ಹೃದಿಸ್ಫುರತ್ಯ ವಿರತಂ ದೇವಪ್ರಸಾದಾದಹೋ
ಜಜ್ಞೋ ಸರ್ವಮಿದಂ ಸುರಾಸುರಗುರೋಃ........
...ಯಸ್ತ್ವ ವಿರತಂ ಬಾಣಸ್ತು ರಕ್ಷಾಕರಃ
ಸೃಷ್ಟಿಂ ಚಾಪಿ ಕರೋತಿ ಸಾರಥಿರಹೋ....ಜ್ಯಾಥಾರ್ಯ್ಯತೇ ಮೇದಿನೀಂ ‖

ಯಜ್ಞಾತ್ಥರ್ಸ್ತುರಗಾಶ್ಚರಾಚಾರಮಿ........ವಿದ್ರಿಕೆ ಮನೋಹರ ಭಾಕ್ತಿಕ ಪದ್ಮವೃಂದ ಸಂಪದ ಶೇಖರಾಂಶು ಸಜ್ಜನ ಸುಚಿತ್ರವನಕ್ಕೆ ವಸಂತ ನಾಡೆ ಸೊಂಪೊದವಿದ ವೀರಶೈವ ಘನತಂತ್ರದ ದೀಪಿಕೆ ಭೂತಳಾಗ್ರದೊಳೂ ||

ವಿಷಯ : ವೀರಮಾಹೇಶ್ವರಾಚಾರ ಮತ್ತು ಸಿದ್ಧಾಂತ ನಿರೂಪಣೆ.

ವಿಶೇಷ : ಶಕಟರೇಫದ ಪ್ರಯೋಗವಿದೆ. ೧೭ ನೆಯ ಪತ್ರದಿಂದ ೪೫೯ ನೆಯ ಪತ್ರಸಂಖ್ಯೆಯವರೆಗೆ ಇದ್ದು ಇದಾದನಂತರ ಮುರಿದ ಅಸಮಗ್ರ ಮುಂದಿನ ಗ್ರಂಥದ ಕೊನೆಯ ಭಾಗದ ೩ ಪತ್ರಗಳೂ ಇವೆ. ಈ ಕಟ್ಟಿನಲ್ಲಿ ಕ್ರಮಾಂಕವನ್ನು ಸರಿಯಾಗಿ ನಮೂದಿಸಿಲ್ಲ. ಕೆಲವೆಡೆ ಎರಡೆರಡು ಕ್ರಮಾಂಕಗಳು ನಮೂದಾಗಿವೆ. ಕೆಲ ಪತ್ರಗಳು ತ್ರುಟಿತಗಳಾಗಿಯೂ, ಕೆಲವು ಮುರಿದು ಭಾಗಶಃ ಲುಪ್ತವಾಗಿಯೂ ಇರುವುದರಿಂದ ಸಮಗ್ರವೆನಲು ಬಾರದಿದ್ದರೂ ಸಮಗ್ರಪ್ರಾಯವೆನ್ನಬಹುದಾಗಿರುತ್ತದೆ. ಪತ್ರಸಂಖ್ಯೆ ಸರಿಯಿಲ್ಲವಾದರೂ ವಿಷಯಾನುಸಾರಿ ಪತ್ರಜೋಡಣೆ ಮಾತ್ರ ಸರಿಯಾಗಿರುತ್ತದೆ. ೧೭. ೩೨, ೨೩೧. ೨೩೩, ೨೪೬, ೨೭೧,೨೮೧, ೨೯೬, ೨೯೯, ೩೦೦, ೩೦೪?, ೩೦೫?, ೩೧೦, ೩೨೫, ೩೬೯, ೩೮೧, ೩೮೩, ೪೩೦, ೪೩೧, ೪೩೨ ನೆಯ ಪತ್ರಗಳು ತ್ರುಟಿತವಾಗಿವೆ. ೨೮೮, ೩೬೧ ಮತ್ತು ೩೭೦ ನೆಯ ಪತ್ರಗಳು ಎರಡು ತುಂಡಾಗಿದ್ದರೂ ತುಂಡುಗಳೂ ಸಹ ಇರುತ್ತವೆ. ೨೪೨, ೨೪೩ ಈ ಸಂಖ್ಯೆಯ ಪತ್ರಗಳು ಮುಕ್ಕಾಲುಭಾಗ ಖಾಲಿಯಿದ್ದರೂ ಗ್ರಂಥ ಲೋಪವಾಗಿಲ್ಲ. ಇದು ನೀಲಕಂಠ ನಾಗನಾಥಾಚಾರ್ಯ ಕೃತ ಸಂಸ್ಕೃತ ಗ್ರಂಥದ ಕನ್ನಡ ಟೀಕೆ. ಪ್ರತಿಯ ಕಾಲಾದಿಗಳುಕ್ತವಾಗಿಲ್ಲ.

1595

ವೀರಮಾಹೇಶ್ವರಾಚಾರ ಸಂಗ್ರಹದ ವ್ಯಾಖ್ಯಾನ

ಕೆ. ೪೭೪		ಶ್ಲೋಕ, ಟೀಕು
೩೪.೫″ × ೨.೧″	ಶ್ರೀಧರಾಂಕ	ಸು. ೧೫೫೦
೧–೩೬೫ ಪತ್ರ	೧೦ ಪಂಕ್ತಿ	೧೪೦ ಅಕ್ಷರ

ಆದಿ : ....ವಾ........|| ಶುಭಮಸ್ತು || ವೀರಮಾಹೇಶ್ವರಾಚಾರ ಸಂಗ್ರಹದ ವ್ಯಾಖ್ಯಾನ ||

ಯಃ ಸಂಸಾರಾನ್ಮಹಾಘೋರಾನ್ಮೋಚಯಿತ್ಯಾಶ್ರಿತಾನ್ ಜನಾನ್ ।
ಕೃಪಾಕಟಾಕ್ಷಪಾತೇನ ತಸ್ಮೈ ಶ್ರೀ ಗುರವೇ ನಮಃ ||

ಯಃ=ಆವನೊಬ್ಬ ಗುರುರಾಯನು ಆಶ್ರಿರ್ತಾ=ಆಶ್ರೈಸಿದಂಥಾ ಜರ್ನಾ= ಜನರುಗಳನು........ಶ್ರೀಗುರುವಿರಗೋಸ್ಕಂ ಬಿಡಿಸುತ್ತ ಯಿಹನು, ತಸ್ಮೈ= ಅಂಥಾ ಶ್ರೀಗುರುವೇ= ನಮ=ನಮಸ್ಕಾರವು.

ಆನತಾಖಿಲಸದ್ಭಕ್ತ ಕಾಮಿತಾರ್ತ್ಥಪ್ರದಾಯಿನೇ ।
ನಮೋ ಮುಳ್ಳಾಯಿ ಸೋಮೇಶ ಗುರುವೇ ಕರುಣಾಬ್ಧಯೇ ॥

ಆನತಾಖಿಲಸದ್ಭಕ್ತ ಕಾಮಿತಾರ್ತ್ಥಪ್ರದಾಯಿನೇ-ಆನತ = ನಮಸ್ಕರಿಸಲು ಪಟ್ಟ ಅಖಿಲಸದ್ಭಕ್ತ=ಸಮಸ್ತ ಸದ್ಭಕ್ತರುಗಳ ಕಾಮಿತಾರ್ತ್ಥ=ಇಷ್ಟಾರ್ಥಂಗಳ ಪ್ರದಾಯಿನೇ............ಸೋಮೇಶ ಗುರವೇ=ಮುಳ್ಳಾಗಿಲ ಸೋಮೇಶ್ವರ ಗುರುರಾಯಗೋಸ್ಕರ ನಮಃ=ನಮಸ್ಕಾರಲು.

ಅಂತ್ಯ : ಪಠತೇ ಶ್ರಾವಯೇದ್ಯಸ್ತು ಧರ್ಮ್ಮಾಖ್ಯಾನಮಿದಂ ನರಃ।
ಸತಿಃ ಸಪ್ತಕುಲೋಪೇತಃ ಶಿವಲೋಕೇ ಮಹೀಯ್ಯತೇ ॥

ಯಃ=ಆವನಾನೊಬ್ಬ ನರಃ= ಮನುಷ್ಯನು × × × ಮಹೀಯತೇ= ಪೂಜ್ಯನಾಗುತ್ತಿಹನು ॥೧॥ ಇತಿ ಶ್ರೀ ನೀಲಕಂಠ ನಾಗನಾಥಾಚಾರ್ಯ್ಯ ವರ್ಯ ವಿರಚಿತೇ ಶ್ರೀಮದ್ವೀರಮಾಹೇಶ್ವರಾಚಾರಸಂಗ್ರಹೇ .... ಸದಾಚಾರನಿರೂಪಣೇ ವೀರಶೈವಾಗಮಸುಧಾರ್ನ್ನವ ಪೂರ್ನ್ನಚಂದ್ರಸ್ಯ ಗೋರಗೋಡಪುರಾವರಾದೀಶ್ವರ ಮಲ್ಲಿಕಾರ್ಜ್ಜುನಾಚಾರ್ಯಸ್ಯನುಜ್ಞಯಾ ಶ್ರೀಧರಾಂಕಪ್ರಣೀತೇ ಕರ್ನ್ನಾಟಭಾಷಾ ವಿವರಣೇ ಶೈವಭಕ್ತ ಪೂಜಾ ಮಾಹಾತ್ಮ್ಯಕಥನೇ ಶ್ರೀಮದ್ವೀರಸ್ಕಂದಸಂವಾದೋ ನಾಮಾಷ್ಟಸಪ್ತತಿ ತಮೋಧ್ಯಾಯಃ ॥ ಅಧ್ಯಾಯ ೭೭ ಕ್ಕಂ ಮಂಗಲಮಹಾ ಶ್ರೀ ಶ್ರೀ ಶ್ರೀ

ವೃತ್ತ॥ ಶ್ರೀಮದ್ಬೊಪ್ಪಣ ದೇಶಿಕೇಂದ್ರ ತನಯಃ ಸರ್ವಾಂಗಮಾತ್ಮೋದಯಃ।
ಸಾರಜ್ಞಃ ಶಿವಪಾದಪಂಕಜಲಸದ್ಭೃಂಗಪ್ರಕಾಶೀಕೃತಃ ॥
ವ್ಯಾಖ್ಯಾಂ ಸದ್ಗುರು ಮಲ್ಲಿಕಾರ್ಜ್ಜುನವಿಭುಃ ಶ್ರೀ ವೀರಮಾಹೇಶ್ವರಾ
ಚಾರಸ್ಯ ಸುಶುಭಂ ತು ತಸ್ಯ ಸುಧಿಯಾ ಯಚ್ಛ್ರೀಧರಾಂಕೇಣ ವಾ ॥

ಶ್ಲೋಕ ॥ ವೀರಮಾಹೇಶ್ವರಾಚಾರಸಂಗ್ರಹಸ್ಯ ಶುಭಾತ್ಮಿಕಾ ।
ಕರ್ನ್ನಾಟಭಾಷಯಾ ವ್ಯಾಖ್ಯಾ ಜೀಯಾದಾಚಂದ್ರತಾರಕಂ ॥

ವೃತ್ತ ॥ ಯಚ್ಚಾಪಸ್ತು × × × ತಷ್ಟ್ಯರ್ಥಮವ್ಯ ಸಃ ॥

ಗದ್ಯ ॥ ಇತಿ ನಿಖಿಲ × × × ಗೊರಗೋಡಪುರವರಾಧೀಶ್ವರ ಬೊಪ್ಪಣ ದೇಶಿಕೇಂದ್ರ ತನೂಭವ ಶ್ರೀ ಮಲ್ಲಿಕಾರ್ಜ್ಜುನಾಚಾರ್ಯ್ಯ ಸಕಲ ವಿದ್ವತ್ಸಭಾ ಮಧ್ಯೇ ಪದವಾಕ್ಯಪ್ರಮಾಣಜ್ಞಂ ವಿಬುಧಜನ ಕರ್ನ್ನಾಮೃತಸ್ಯಂದಿನಂ

ಶ್ರೀಧರಾಂಕಂ ಮಾಮಲೋಕ್ಯ ಪೂರ್ವ್ವಸ್ಮಿನ್ವೀರಶೈವಾಗ್ರಗಣ್ಯ ವಿದ್ಯಾಶಂಕಂ ನಾಮದ ರಾಜಪುತ್ರಾನುಮತಾನ್ಮಾಹೇಶ್ವರಃ × × × × ಮಾಹೇಶ್ವರಾಚಾರಸಂಗ್ರಹಂ ನೀಲಕಂಠ, ನಾಗನಾಥಾಚಾರ್ಯ್ಯ ಕಲ್ಪಯಾಮಾಸ ತಚ್ಛಾಷ್ಟಸಹಸ್ರ ಗ್ರಂಥಂ ಜಗದ್ಧಿತಾರ್ತ್ಥಂ ಕರ್ನ್ನಾಟಭಾಷಾ ವ್ಯಾಖ್ಯಾ ಕರ್ತವ್ಯೇತ್ಯುದೀರಯಾಮಾಸ ತಥೇತ್ಯಂಗೀಕೃತ್ಯಮಯಾ ಮಂಜುಳಗಿರಾ ವ್ಯಾಕ್ರಿಯತೇ × × ಬ್ಬ್ರವದ್ಭಿಃ ಶ್ರೋತವ್ಯಂ ॥ ಆಶೀರ್ವ್ವಾದಗ್ರಂಥಾ ॥ ವಿಶ್ವಂ ಯಸ್ಯ × × × × ರಕ್ಷಾಕ್ಷಮಃ ॥

ಚಂಪಕಮಾಲಾವೃತ್ತ ॥ ಯಿದು ಶಿವಭಕ್ತಚಾತಕಚಯಕ್ಕೆ × × × ವೀರಶೈವ ಘನತಂತ್ರದ ದೀಪಿಕೆ ಭೂತಳಾಗ್ರದೊಳೂ ॥ ಶ್ರೀ ವೀರ....ಗ್ರಹ ವ್ಯಾಖ್ಯಾನಂ ಸಂಪೂರ್ನ್ನಮಂಗಲ ಮಹಾಶ್ರಿ ಶ್ರಿಶ್ರೀ ॥ ಸ್ವಸ್ತಿಶ್ರೀ . . ಯಾಭ್ಯುದಯ ಶಾಲಿವಾಹನಶಕ ವರ್ಷ ೧೫೫೬ ಸಂದ ವರ್ತ್ತಮಾನ ಶ್ರೀಮುಖ ಸಂವತ್ಸರ ಮಾರ್ಗ್ಗಶಿರ ಶು. ೧೦ ಯು ಬುದವಾರದಲ್ಲಿ ತ್ರಿಯಂಬಕದೇವರವರಿಗೆ ಬಂಣದ ಬಡದಳದ ವಾಲೆ ಕಲ್ಲಪ್ಪನ ಪುತ್ರನು ಬಸಪ್ಪಸೆಟ್ಟಿಯು ವೀರಮಾಹೇಶ್ವರಾಚಾರ ಸಂಗ್ರಹದ ಪುಸ್ತವನು ಭಕ್ತಿಪೂರ್ವ್ವಕವಾಗಿ ಬರಸಿ ಸಮ........ಸಿದವರು ಸೆಜ್ಜೆ ರೇವಣಸಿದ್ದೇಶ್ವರನು । ಯಿಾ ಪುಸ್ತಕಯೆಲ್ಲಾ ವೀರಮಾಹೇಶ್ವರರ ಪುಸ್ತಕ ಸಮಾಪ್ತ ಮಂಗಲಮಹಾಶ್ರೀ ಶ್ರೀ ॥ ಶುಭಮಸ್ತು ನಿರ್ವ್ವಿಜ್ಞ್ನಮಸ್ತು ॥ ಮಳವಳ್ಳಿಯ ನೋಟದ ಮಲ್ಲೀದೇವರ ಮಗ ಮಲ್ಲಿಕಾರ್ಜುನನು ಬರದನು ॥ ಶುಭಮಸ್ತು ನಿರ್ವಿಗ್ನಮಸ್ತು ॥ ....ಪುತ್ರಿಕೆಯೆಂದು ತೆಕ್ಕೊಂಡಂದಾವರು ಶಿವಭಕ್ತರಾದರು × × ತಂಮ ಕುಲದೈವ ಮನದೈವಕ್ಕೆ ಅಳುಪಿದ ಹಾಗೆ × × ಗುರುಪತ್ನಿ ಗುರುವಿಗೆ ಅ................................

ವಿಷಯ : ವೀರಮಾಹೇಶ್ವರಾಚಾರ ಮತ್ತು ಸಿದ್ಧಾಂತನಿರೂಪಣೆ.

ವಿಶೇಷ : ೧೦॥ ಅಂಗುಲದಷ್ಟು ತಾಳಪತ್ರದ ತುದಿಭಾಗ ೪–೫–೬ ಅಂಗುಲಗಳಷ್ಟು ತ್ರುಟಿತವಾಗಿ ಆದಿಯ ೩–೪ ಸಾಲುಗಳ ಭಾಗ ಲುಪ್ತವಾಗಿದೆ. ೩೬೫ ನೆಯ ಪತ್ರವು ಆದಿಯಲ್ಲಿ ೫–೬ ಸಾಲಿನಷ್ಟು ಭಾಗ ತ್ರುಟಿತವಾಗಿ ಲುಪ್ತವಾಗಿದೆ. ಅಕ್ಷರಗಳು ಸ್ಫುಟವಾಗಿವೆ. ಶಕಟರೇಫವಿಲ್ಲ. ಪ್ರತಿಯ ಕಾಲಾದಿಗಳೂ, ಫಲಶ್ರುತಿಯೂ ಗ್ರಂಥಾಂತ್ಯದಲ್ಲಿ ನಮೂದಾಗಿದೆ. ಈ ಓಲೆಯ ಕಟ್ಟು ಆಕಾರದಲ್ಲಿ ಬೃಹತ್ತಾಗಿದೆ.

1596

ಕೆ. ಎ. ೩೨೨ **ವೀರಮಾಹೇಶ್ವರಾಚಾರಸುಧಾವಾರ್ಧಿಃ** ಶ್ಲೋಕ, ಟೀಕು

೧೩.೩"×೮.೩" ಬಸವಲಿಂಗ ೧೭ ನೆಯ ಶತಕ

೧– ೨೭೯ ಪತ್ರ ೨೦ ಪಂಕ್ತಿ ೧೬ ಅಕ್ಷರ

ಆದಿ : ವೀರಮಾಹೇಶ್ವರಾಚಾರಸುಧಾವಾರ್ಧಿಃ
ಶಿವ ವೆಂಕಟಾದ್ರಿ ಭೂವಲ್ಲಭೌ ಮಹಾತ್ಮಾನೌ ಗುರು
ಪಾದದೇವ ದೇಶಿಕಕರಪಂಕಜಸಭವೌ ಭುವಂ ಪಾತಃ ॥ ೧೨ ॥

ಗದ್ಯ........ಸದಾಶಿವಂ ಪದಂ........ತಿ ಸ್ತುತಿ ರಾರಾಜಮಾನ ಮ್ಮಾನಸ ಗುರು ಲಿಂಗ ಜಂಗಮ ಸುನಿಶ್ಚಲ ಭಕ್ತಿ ಮುಕ್ತಿಸಾಧನ ಸಮಗ್ರ ಯುಕ್ತಿ ಶಿವಕೃಪಾ ಯೋಗ್ಯ ವೈರಾಗ್ಯಹಂಸಾವಳೀ ಮಾನಸ

× × × ×

ಸಕಲ ಕಲಾಪ್ರವೀಣ ಶ್ರೀಮುತ್ಕೆಳದಿಪುರಾಧಿನಾಯಕ ಧೀಮತ್ಕಾಮಿತಫಲ ಪ್ರದಾಯಕ ರಾಜಾಧಿರಾಜ ಶ್ರೀಶಿವಭುವನಾಧಿಪತಿ ವೆಂಕಟಾದ್ರಿಭೂಪಾಲೋ ವೀರಮಾಹೇಶ್ವರಾಚಾರ ಸುಧಾವಾರ್ಧೇಃ ವಿದ್ವದ್ಭಿಸ್ಸಹ ಟೀಕಾಂ ಕರ್ತುಂ ಷಟ್ಸ್ಥಲಾಚಾರಚಕ್ರಿಣೊ ಬಸವಲಿಂಗದೇವಾನ್ನಃ ಸದ್ವಿನಯ ನಯ ಭಯ ಭಕ್ತಿಮನ್ತ್ರೋsಸಮುನಿಚಾಪ್ತವನ್ತ ಶಿವವೆಂಕಟಭೂಪಾದಿ ಶಿವಭಕ್ತಿಸಿದ್ಧಯಃ ಪುನಃ....ಖ್ಯ ಪುರಾಣಾನಿ ಪ್ರಯತ್ನತಃ । ಕರ್ಣಾಟಕಭಾಷಾ ಟೀಕಾಂ ಪ್ರಕುರ್ಮಹೆ । ವೀರಮಾಹೇಶ್ವರಾಚಾರಸುಧಾ ॥

ಅಂತ್ಯ : ತಸ್ಮಾತ್ಸರ್ವಂ ಪರಿತ್ಯಜ್ಯ ವೀರಮಾಹೇಶ್ವರಂ ಜನಂ ।
ಪೂಜಯೇದಾದರಾದ್ಯಸ್ತು ಸಸಮ್ಯಜ್ಞಾನರ್ವಾ ಭವೇತ್ ॥

ಟೀಕಾ ॥ ತಸ್ಮಾತ್ । ಅದುಕಾರಣದತ್ತಣಿಂದ । ಯಸ್ತು–ಆವಾತನು । ಸರ್ವಂ ಬ್ರಹ್ಮಾದಿಯಾದೆಲ್ಲವನು । ಪರಿತ್ಯಜ್ಯ । ಬಿಟ್ಟು । ವೀರಮಾಹೇಶ್ವರಂ । ವೀರಶೈವನಾದ । ಜನಂ । ಜನವನು । ಆದರಾತ್ । ಪ್ರೀತಿಯತ್ತಣಿಂದ । ಪೂಜಯೇತ್ । ಪೂಜಿಪನು । ಸಃ । ಆತನು । ಸಮ್ಯಜ್ಞಾನವಾನ್ । ಶಿವಜ್ಞಾನವುಳ್ಳವನು । ಭವೇತ್ । ಆದಪನು ॥ ೪೬ ॥ ಈ ಗ್ರಂಥಮಾತ್ರ ಕೆಯಲ್ಲಿರುವುದೆಲ್ಲಾ ಕಾಪಿಯಾಗಿದೆ.

ವಿಷಯ : ವೀರಶೈವತತ್ತ್ವಪ್ರತಿಪಾದನೆ.

ವಿಶೇಷ : ಸಮಗ್ರ. ನೀಲಿ ಪತ್ರಗಳು. ೨೧೭, ೨೧೮ ಕ್ರಮಸಂಖ್ಯೆಯ ಎರಡೆರಡು ಪತ್ರಗಳಿವೆ.

1597

ಕೆ. ಬಿ. ೩೧೭ **ವೀರಶೈವಚಿಂತಾಮಣಿ** ಶ್ಲೋಕ, ಟೀಕು
೭.೭"×೬.೩" ಉದ್ದಾನ ಸಿದ್ಧಲಿಂಗದೇವರು ?
೧–೧೪೨ ಪತ್ರ ೧೨ ಪಂಕ್ತಿ ೨೦ ಅಕ್ಷರ

ಆದಿ : ಅಕ್ಷರಾಚಾರ್ಯನಾದಂಥ ಉದ್ದಾನ ಸಿದ್ಧಲಿಂಗದೇವರು ಸೇರಿಸಿದ ವೀರಶೈವ ಚಿಂತಾಮಣಿಯಂ ಲೇಖನವ ಮಾಡುವದಕ್ಕೆ ನಿರ್ವಿಘ್ನಮಸ್ತು ॥

ಮಾಲಿನೀವೃತ್ತ ॥ ಜಯ ಬಸವರಾಜಃ ಸ್ಥಾಲ್ಯ ನೈರ್ಮಲ್ಯಪೂಜಃ
ಪ್ರಮಥಗಣ ಸಮಾಜಃ ಪ್ರೋಲ್ಲಸದ್ಭಕ್ತಿನೈಜಃ
ಪ್ರಸೃತವಿನಮದಾರ್ತಿಃ ಸ್ಥಾಯದಾಮ್ನಾಯಪೂರ್ತಿಃ
ಸ್ಥಿರದಿಗಮಿತಕೀರ್ತಿಃ ಶ್ರೀ ವೃಷಾಧೀಷಮೂರ್ತಿಃ ॥

ಟೀ ॥ ಸ್ಥಾಲ್ಯನೈರ್ಮಲ್ಯಪೂಜಃ । ಸ್ಥಾಲ್ಯನೈರ್ಮಲ್ಯ, ಬಾಹ್ಯಾಭ್ಯಂತರಸಂಬಂಧ ವಾದ । ಪೂಜಃ, ಶಿವಪೂಜೆಯನುಳ್ಳಾತನಾದ । ಪ್ರಮಥಗಣ, ವೀರಕ ವೀರಭದ್ರಾದಿ ಪ್ರಮಥಗಣಂಗಳ । ಸಮಾಜಃ, ಸಮೂಹವನುಳ್ಳಾತನಾದ । × × × ಮೂರ್ತಿಃ–ಮೂರ್ತಿಯಾದ । ಬಸವರಾಜಃ, ಬಸವೇಶ್ವರನು । ಜಯತು, ಸರ್ವೋತ್ಕೃಷ್ಟನಾಗು ॥ ೧ ॥

ಅಂತ್ಯ : ವೃ ॥ ದಗ್ಧಂ ಪೂರ್ವಮದೀಶ್ವರೇಣ ನಕೃತಂ ಸದ್ಯೋಖಿಲಂ ಯೇನಯಾ
ದಗ್ಧಂ ಬಿಜ್ಜಳ ಸಿಹ್ಮವಿಷ್ಟರ ಮಹೋ ಸದ್ಯಃ ಕೃತಂ ಪೂರ್ವವತ್
ಶ್ರೇಯೊ ಜಂಗಮ ಜೀವನೆನದತಾಭೀತಾಶ್ಚ ಕರ್ಣೇ ಜಪಾಃ
ಸೋಯಂ ಶ್ರೀ ಬಸವೇಶ್ವರಃ ಪ್ರಬುಧರಾಟ್ಪಾಯಾದ್ದ್ವಿತೀಯಶ್ಶಿವಃ ॥

ಟೀ ॥ ಈಶ್ವರೇಣ–ಪರಮೇಶ್ವರನಿಂದೆ । ದಗ್ಧ, ಸುಡಲ್ಪಟ್ಟ ತ್ರಿಪುರಂಗಳ ।

× × × ×

ಅಯಂ ಈ । ಬಸವೇಶ್ವರಃ, ಬಸವೇಶ್ವರನು ।, ವಃ, ನಿಮ್ಮನು । ಪಾಯಾತ್, ರಕ್ಷಿಸಲಿ ॥—ಶ್ರೀ—॥ (ಐಕ್ಯಸ್ಥಲ ಸಂಪೂರ್ಣಂ)
ಸ್ಥಲ ೨೦ ಕ್ಕಂ ಸೇರಿದ ಗ್ರಂಥ ೪೭೨ ಕ್ಕಂ ಮಂಗಳಮಹಾಶ್ರೀ
ಸಟೀಕ ವೀರಶೈವ ಚಿಂತಾಮಣಿ ಸ್ಸಂಪೂರ್ಣಂ ॥

ವಿಷಯ : ವೀರಶೈವತತ್ತ್ವಪ್ರತಿಪಾದನೆ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ.

1598

ಕೆ. ಬಿ. ೯೫ ವೀರಶೈವತತ್ತ್ವಪ್ರಕಾಶ ಶ್ಲೋಕ ಟೀಕು
೭.೮″×೬.೩″ ? ?
೧–೨೮೨ ಪುಟ ೧೨ ಪಂಕ್ತಿ ೨೨ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ವೀರಶೈವತತ್ವಪ್ರಕಾಶ ಪ್ರಾರಂಭಃ ॥
ಶ್ರೀ ಗುರುಲಿಂಗ ಸದೋದಿತ ಘನಸುಖಸಾಗರ ಷಟ್ಸ್ಥಲನಾಯಕ ಪರಶಿವಯೋಗಿ ಮನೋಮಂದಿರ ಸರ್ವಾಂತರ್ಯಾಮಿ ಜಗತ್ಸಾಕ್ಷಿ ರಾಗ ವಿರಾಗವಿದೂರ ನಿಖಿಲ ಭವರೋಗಚಿಕಿತ್ಸಕ ಬಸವೇಶ್ವರ ಗಮನಾಗಮ ನಾದಿ ವಿವರ್ಜಿತ ಕರ್ಮಫಲಪ್ರದ ಜಯ ಸತತಂ । ಜಯ ಜಯ ಪ್ರಣವವೆ ಮಸ್ತಕ । ಪರಮಾಮೃತವೆ ಕಿವಿವಾಯಿಂದೊಸರುವಂಥಾ ಜಲ । ಅನಾದಿ ಶಿವಗಣಂಗಳೆ ಹಿಣಿಲು । ಉಪನಿಷದಾದಿಗಳೆ ಕೊಂಬುಗಳು । ವೇದಂಗಳೇ ಚರಣಂಗರು । ಷಡ್ಗುಣಂಗಳೆ ಠಣಕಾರಧ್ವನಿ । ಸಕಲ ಭುವನಂಗಳೆ ಉದರ ವಾಗಿದ್ದಂಥ ಎಲೆ ವೃಷಭೇಶ್ವರನೆ ಶರಣು ॥ ಇದಕ್ಕೆ ಸಾಕ್ಷಿ ॥
ಅಥರ್ವಣೇ ॥ ಓಂ ಭಕ್ತಿಸ್ಸಾಕ್ಷಾದ್ವೃಷಸ್ಥಲಮಾತ್ರಂ ಬ್ರಹ್ಮಣೇ ಸ್ಥಿತಮಿತಿ ।
ಭಕ್ತ್ಯಾಸ್ತದ್ವಿಜಮೇಪಾನಾದಿ ವೃಷಾಹ್ವಯಮಿತಿ ॥
ಭಕ್ತ್ಯಾ ಕರ್ಮನಿಷ್ಠಾದೃಢಪ್ರತ್ಯಯಚತುರಃ ।
ಕಾದಸಂಜ್ಞಿಕಾ । × × × × ×
ಸಾವಲಂಬನೇನ ಪಾರಂ ತರತೀತಿ ಪುಚ್ಛಮಿತಿ ಸದಾಬ್ಯುಹವಿಭವಾವಧಾರಣ ಮೇವ ಲಲಾಟವೈಭವಮಿತಿ ವೃಷಭಸ್ವರೂಪಾಪಾರಮಹಿಮ್ನಾ ಸಚ್ಚಿದಾನಂದ ಸ್ವರೂಪಂ ಭವತಿ ॥

ಟೀ ॥ ಭಕ್ತಿಸ್ಸಾಕ್ಷಾತ್ ಎಂಬುದಾದಿಯಾಗಿ ಭಕ್ತಿಃ–ಭಕ್ತಿಯು, ಸಾಕ್ಷಾದ್ವೃಷ ಸ್ಥಲಂ । ಸಾಕ್ಷಾತ್–ಪ್ರತ್ಯಕ್ಷವಾಗಿ ವೃಷಸ್ಥಲಂ–ಬಸವೇಶ್ವರನಲ್ಲಿರುವುದು । × × × ಅಪಾರಮಹಿಮಾ । ಇಷ್ಟೆಂದು ಹವಣಿಸಬಾರದ ಮಹಿಮಾ ಶಾಲಿಯು । ಸಚ್ಚಿದಾನಂದಸ್ವರೂಪಂ ಭವತಿ । ಸಚ್ಚಿದಾನಂದಾತ್ಮಕನಾಗು ತ್ತಿಹನು । ಪುರುಷಾರ್ಥ ಬಯಸುವಂಥ ದಾಂಟ ಶಕ್ಯವಲ್ಲದ ಸಂಸಾರ ಸಾಗರವ ದಾಂಟಲಿಚ್ಛೈಸಿದ ಮಾಹೇಶ್ವರ ಶಿರೋಮಣಿಗಳಿಂದೆ । ಜ್ಞಾನ ವೈರಾಗ್ಯಸಿದ್ಧಿಗೋಸ್ಕರ । ಭಕ್ತಿಯು । ಆ ಬಸವೇಶ್ವರನಲ್ಲಿಯೆ ಮಾಡಲ್ಪಡುಕ್ಕು ದೆಂದು ಅಥರ್ವಣಶೃತಿಯ ತಾತ್ಪರ್ಯಾರ್ಥ ॥

ಅಂತ್ಯ : ಇತಿ ಪರಮರಹಸ್ಯಂ ವೇದವೇದಾಂತಸಾರಂ ।
ಹೃತಭವಭಯಬಾಧಂ ಷಟ್ಸ್ಥಲಬ್ರಹ್ಮಬೋಧಂ ॥

ಗುರುಪದ ಶಿವಭಕ್ತಿಪ್ರಾಪ್ತವದ್ಯಾಯದೇಯಂ |
ವಿರಹಿತ ಘನಭಕ್ತಿಶ್ರೇಯಸೇ ನ ಪ್ರದೇಯಂ ||
ನ ವಕ್ತವ್ಯಮಿದಂ ಶಾಸ್ತ್ರಂ ಭಕ್ತಿಹೀನಾಯ ಪಾಪಿನೇ |
ನಾಸ್ತಿಕಾಯ ಮನುಷ್ಯಾಯ ಶ್ರದ್ಧಾಹೀನಾಯ ಸರ್ವದಾ ||

ಎಂದುದಾಗಿ || ಇದು ಸಕಲ ಶೃತಿ ಸ್ಮೃತಿ ಪುರಾಣಾಗಮರಹಸ್ಯಸಾರ ಮಾದ ಭಕ್ತಜನ ಹಿತೋಪದೇಶಕಾರಣಾರ್ಥವಾಗಿ ಸಂಗ್ರಹಿಸಲ್ಪಟ್ಟ ಶ್ರೀ ವೀರಶೈವತತ್ವಪ್ರಕಾಶದಲ್ಲಿ ಲಿಂಗಾಂಗಸಂಬಂಧ ಪ್ರಕರಣಂ ಸಂಪೂರ್ಣಂ.

ವಿಷಯ : ವೀರಶೈವ ದರ್ಶನಶಾಸ್ತ್ರವಿಚಾರ.

ವಿಶೇಷ : ಕನ್ನಡ ಸರಳ ಗದ್ಯಾನುವಾದದಿಂದ ಪ್ರಶ್ನೆ–ಸಮಾಧಾನಗಳೊಂದಿಗೆ ವೀರಶೈವದರ್ಶನವನ್ನು ಸಾಕ್ಷಿಗ್ರಂಥಗಳ ಮೂಲಕ ಶಾಸ್ತ್ರಪಾರಂಪರ್ಯಪ್ರಕರಣಾದಿ ಎಂಟು ಪ್ರಕರಣಗಳಲ್ಲಿ ವಿವೇಚಿಸಲಾಗಿದೆ. ಪ್ರತಿಪ್ರಕರಣಾಂತ್ಯದಲ್ಲಿಯೂ ಮೇಲ್ಕಂಡ ಕೊನೆಯ ಪ್ರಕರಣದಲ್ಲಿದ್ದಂತೆ ಗದ್ಯಭಾಗವಿದೆ.

1599

ಕೆ. ೪೯೩	**ವೀರಶೈವಶಿಖಾರತ್ನ**	ವಚನ, ಪದ್ಯ, ಶ್ಲೋಕ
೦.೫″×೨.೨″	ಬಾಲಸಂಗಮ	೧೨೦೦
೧–೪೫ ಪತ್ರ	೧೫ ಪಂಕ್ತಿ	೧೨೫ ಅಕ್ಷರ

ಆದಿ : ವೀರಶೈವ ಶಿಖಾರತ್ನ ಬರೆವುದಕ್ಕೆ ಶುಭಮಸ್ತು ||
ಹರನಟ್ಟಿದ ಅಗ್ರಹದನಿಂ ನಿಗ್ರಹದ | ಬೆಸನ | ಗುರುನಿರೂಪವೆಂದು ಕರುಣಿ ಬಸವಂಣ ಕೈಕೊಂಡು ಯೇಳುನೂರೆಪ್ಪತ್ತಮರಗಣಂಗಳು ಸಹಿತ | ಗುರು ಲಿಂಗ........ಕಂಗಳಿಗೆ ಪರಮಗುರುವಾದನೈಯ್ಯಾ ಬಸವಂಣ | ಜಡರುಗಳ ಮನದ ಕಳರೆಯ ಕಳೆಯಬೇಕೆಂದು ಕಲ್ಯಾಣದಲ್ಲಿ ಕಟ್ಟಿತಯ್ಯ ಮಹಾ ದೇವನ ಮಂಟಪವು ಪರಮನಟ್ಟಿಸಿದವೊ ಬಂದಿಳಿಯಿತ್ತು ಬಿಜ್ಜಳನ ಸಿಂಹ್ವಾಸನ ಮುಂದೆ ಅದ ಕಂಡು ವೋದಿಸಲು ಶ್ರಿಷ್ಟಿಯ ಶೇನಬೋವರಿಗೆ ತಿಳಿಯದು |........ × × × × ಯಿಂನೂ ವಾರ್ದ್ಧಿಕಷಟ್ಪದಿ ||ಪಲ್ಲ||
ಶ್ರೀ ಪರಮ ಪಾಲ್ಕುರಿಕೆ ಸೋಮೇಶನಂ ತಟಾ
ಕ ಪದ್ಮರಾಜನಂ ನೆನನೆನದು ಕೊಂಡಾಡಿ
ದೀಪಿಸುವೆನೀಕೃತಿಯ ಶಿವಯುತ ಚಿತ್ತಮಂ ಸೆರೆಗೆಯ್ವೆ....
....
............ಳ್ಗಖಿಳ ಸಿದ್ಧಿಗಳ
ನೀಸರಿಯು ತನ್ನ ಮೈಗಪ್ಪಿರ್ನ ತಿರುಳ್ತಿಗದು ಸಿಂಗರಿಸಿದಳೊ ಯೆನಿಪ್ಪಾ
ಭಾಸುರದು ಪುಬ್ಬುರ್ಗಳ ಹುರಿನಿಂದವವಗೀವ

ಶ್ರೀ ಸರ್ವ್ವ ಮಾಂಗಲ್ಯ ಕೈವಲ್ಯ ಕಾಂತಾವಿ
ಶೇಷಾನುಕೂಲ ಶಿವ ನವರಸ ವಿಲಾಸೋಕ್ತಿ ಲೇಸಿನಿಂದೀಗೆ ನಮಗೆ ||೧||

ಅಂತ್ಯ : ಪುರಮಥನದಿಂದಾದ ಕರಿಯ ವೃಷಭನದೊಂದು
ಚಿರಧರ್ಮದಿಂದಾದ ಬಿಳಿಯ ವೃಷಭನದೊಂದು
ಮೆರೆದರಿಂ ಬಲನ ನೇಗಿಲಕೊಂಡು ನೀನಖಿಳ ಧಾನ್ಯಮಂ ಬಿತ್ತಿಬೆಳೆ........
...............ಮಂ ಮಾಡಿ ನೀನಿಕ್ಕಿದಪೆ
ತಿರಿದುಂಬದತಿಕಷ್ಟ ಬೇಡೆಂದು ಗಡ್ಡಮಂ
ಗಿರಿಜಾತೆ ಹಿಡಿದು ಬೇಡಲ್ ಗಹಗಹಿಸಿ ನಗುವ ವೃಷಲಿಂಗ ಸಲಹುಗೆಂಮಂ
|| ೩೫ ||

ಅಂತು ಸಂಧಿ ೧೬ಕ್ಕಂ ಪದನೂ ೭೩೨ಕ್ಕಂ || ವೀರಶೈವಶಿಖಾರತ್ನ ಸಮಾಪ್ತಂ ಮಂಗಳ ಮಹಾಶ್ರೀ || ಸ್ವಸ್ತಿ ಶ್ರೀಮದ್ವಿಜಯಾಭ್ಯುದಯ ಶಾಲಿಯವಾಹನ ಶಖಾದ್ಯಬ್ದ ೧೭೦೫೩ ನೇ ವರುಷಕ್ಕೆ ಸಲುವ ವಿಭವ ಸಂವತ್ಸರದ ಬಹುಳ ೮ ಮಿ ಬುದುವಾರಕ್ಕೆ ವೀರಶೈವ ಶಿಖಾರತ್ನವನು ಬರದಾತ ತೂಕದ ದೊಡ್ಡವೀರೈಯ್ಯನ ಕೊಮಾರ ಮುದಂಣ । ಮುದಂಣನ ಆತ್ಮಭವ ||

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಶಿಥಿಲಪ್ರತಿ. ೧, ೧೨ ನೆಯ ಕ್ರಮಾಂಕದ ಓಲೆಗಳು ಮುರಿದಿವೆ. ಇದರಲ್ಲೂ ೧ ಮತ್ತು ೫೬ ಈ ಎರಡು ವಿಧವಾದ ಕ್ರಮಾಂಕದಿಂದ ಪ್ರಾರಂಭವಾಗಿ ೪೫ ಮತ್ತು ೧೦೦ ನೆಯ ಕ್ರಮಸಂಖ್ಯೆಗಳಲ್ಲಿ ಮುಗಿದಿವೆ. ಇದೇ ಗ್ರಂಥದ ೯ ಪತ್ರಗಳಿಂದ ಪ್ರತಿ ಮಾಡಿದ ಬೇರೆ ೯ ಪತ್ರಗಳಿವೆ. ಇದಾದಮೇಲೆ ಈ ಗ್ರಂಥಕ್ಕೆ ಸಂಬಂಧಿಸದ ಮೂರು ಪತ್ರಗಳಿವೆ.

1600

ಕೆ. ಬಿ. ೩೪೫/೨	**ವೀರಶೈವಶಿಖಾರತ್ನ**	ವಚನ
೭.೮″×೫.೫″	ಬಸವ	ಸು. ೧೧೬೦
೧೧ ಪತ್ರ	೧೯ ಪಂಕ್ತಿ	೨೦ ಅಕ್ಷರ

ಆದಿ : ವೀರಶೈವ ಶಿಖಾರತ್ನ ಬರೆಯುವದಕ್ಕೆ ಶುಭಮಸ್ತು.

ವಚನ || ಅನಾದಿ ಸದಾಸಿವತತ್ವ । ಅನಾದಿ ಯಿಶ್ವರತತ್ವ । ಅನಾದಿ ಮಹೇಶ್ವರತತ್ವವೆಂಬ್ಬ । ಅನಾದಿ ತತ್ವತ್ರಿಗುಣಂಗಳು ತಾನಲ್ಲಾ । ಶಂಕ್ಕರ ಆದಿ ಸದಾಸಿವತತ್ವ । ಆದಿ ಯಿಶ್ವರತತ್ವ । ಆದಿ ಮಹೇಶ್ವರತತ್ವೆಂಬ್ಬ । ಆದಿ ತ್ರಿತತ್ವಂಗ್ಗಳು ತಾನಲ್ಲಾ । ಶಂಕ್ಕರ । ಶಶಿಧರ । ಗೌರೀಶ । ಕಾಲಕಂಠ । ಕಪಾಲಮಾಲಾಧರ । ಕಾಲಾಗ್ನಿರುದ್ರ । ಯೇಕಪಾದರುದ್ರ ।

ಅಂತ್ಯ : ತಾನೆ ಭಕ್ತಾ । ತಾನೆ ಮಹೇಶ್ವರ । ತಾನೆ ಪ್ರಸಾದಿ । ತಾನೆ ಪ್ರಾಣ ಲಿಂಗ । ತಾನೆ ಶರಣು । ತಾನೆ ಐಕ್ಯ । ತಾನೆ ಷಟುಸ್ಥಲಬ್ರಹ್ಮ ನೋಡಾ । ತಾನಲ್ಲದೆ ಬ್ಯಾರೆ ಪರಬ್ರಹ್ಮ ವುಂಟ್ಟೆಂಬ ಭ್ರಾಂತ್ತು ಭ್ರಮಿಕರನೆಂಬ್ಬೆನೈಯ್ಯ। ಅಪ್ರಮಾಣ ಕೂಡಲು ಸಂಗಮದೇವಾ ॥೩೬॥ ಭಿಂನಗ್ನಾನದಲ್ಲಿ ಮೋಕ್ಷವಿಲೆಂದು । ಸಂಮ್ಯಗ್ನ್ಯಾನಯುಕ್ತವಾಗಿ ನಿರೂಪಿಸಿದ್ದ ವೀರಶೈವ ಶಿಖಾರತ್ನಮಂ । ಮುವ್ವತ್ತಾರು ವಚನ ಸಂಪೂರ್ನ ಮಂಗಳಮಹಾ ಶ್ರೀ ॥

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ೩೬ ವಚನಗಳು ಮಾತ್ರ ಇವೆ. ಇದೇ ಪುಸ್ತಕದ ಮೊದಲಲ್ಲಿ ಪಂಚೀಕರಣ ಹಸುಗೆಯೆಂಬ ಇನ್ನೊಂದು ಗ್ರಂಥವಿದೆ. ಪತ್ರಗಳಿಗೆ ಕ್ರಮಾಂಕವಿಲ್ಲ. ಈ ಗ್ರಂಥಕ್ಕೆ ಮೊದಲು ಮತ್ತು ಅನಂತರದಲ್ಲಿ ಕೆಲವು ಶುದ್ಧಪತ್ರಗಳಿವೆ. ಪ್ರಕೃತ ಗ್ರಂಥವಾದಮೇಲೆ ವಿಶ್ವೋಶ್ರುಷ್ಟಿ ಯುಗವುತ್ಪತ್ತಿಯ ವಿಚಾರವನ್ನು ತಿಳಿಸುವ ೮ ಪಂಕ್ತಿಗಳಿವೆ.

1601

ಕೆ. ಬಿ. ೧೬೯	**ವೀರಶೈವಸಿದ್ಧಾಂತ**	ವಚನ
೭.೭"×೬"	ಗುರುಗುಹೇಶ್ವರ	?
೧–೩೭ ಪತ್ರ	೧೧ ಪಂಕ್ತಿ	೨೧ ಅಕ್ಷರ

ಆದಿ : ವೀರಶೈವ ಸಿದಶ್ಧಂತ. ಶ್ರೀ ಗಣಾಧಿಪತಯೆ ನಮಃ. ಗುರು ಗುಂಹೇಶ್ವರರು ವಿರಚಿಸಿದ ಶೈವಶಿಧಾಂತ ಬರೆವುದಕ್ಕೆ ಶುಭಮಸ್ತು ನಿರ್ವಿಘ್ನಮಸ್ತು, ಜ್ಯೋತಿರ್ಮಯ ದೀಕ್ಷಾಭೋದೆ.

ವೀರಶೈವವೆಂಬುದೊಂದು ಅರಂಣ್ಯಮದ್ಯದಲ್ಲಿ ವಬ್ಬ ಸರ್ಪಬಕ್ಷಕನು ಹೇಳಿದುದು ಅಲ್ಲ । ವಬ್ಬ ಮಾಂಸಬಕ್ಷಕನು ಹೇಳಿದುದು ಅಲ್ಲಾ । ವೀರಶೈವವೆಂಬುದು ವೊಂದು ಅರಂಣ್ಯಮದ್ಯದಲ್ಲಿ × × × ವಚನವ ಮಾಡಿ ವುಪದೇಶಿಸಿದನೂ । ಗುಂಹೇಶ್ವರನ ವಾಖ್ಯವು ॥ ೧ ॥

ಅಂತ್ಯ : ಮಹಾಪಾತಕ ದ್ರಿಷ್ಟಿಯೆಂದು ವಿಷಗಾಳಿಯಂದು ವುತ್ಪಾತಲಿಂಗವೆಂದು ಲಿಂಗವಿಲ್ಲದ ಕಾರಣ ಕನಿಷ್ಟವೆಂದು ಹೇಳಲ್ಪಟ್ಟಿತು. ಆದಕಾರಣ ಶಿವ ಭಕ್ತರು ಗುಹೇಶ್ವರ ಲಿಂಗವನ್ನು ಕಂಡು ಜ್ಯೋತಿರ್ಮಯ ಶಾಂಭವದೀ ಕಾಂಬುದೆ ಸಂಗಮೇಶ ಯಂದು ಹೇಳಲ್ಪಟ್ಟದೇ ವೀರಶೈವ ಶಿದ್ಧಾಂತ ಸಂಪೂರ್ನ ಮಂಗಳಮಹಾ ಶ್ರೀ.

ವಿಷಯ : ವೀರಶೈವ ತತ್ತ್ವ.

ವಿಶೇಷ : ಪ್ರತಿ ಸಮಗ್ರವಾಗಿದೆ.

1602

ಕೆ.ಎ. ೩೧೩ **ವೀರಶೈವಸಿದ್ಧಾಂತ ಉದ್ಧರಣೆಯ ಪಟಲಗಳು** ಚಿತ್ರಗಳು

೨೦.೨″ × ೧೧.೨″ ? ?

೧–೨೪ ಪತ್ರ — —

ಆದಿ :



ಅಂತ್ಯ :



ವಿಷಯ : ವೀರಶೈವ ಸಿದ್ಧಾಂತವನ್ನು ಬೋಧಿಸುವ ಉದ್ಧರಣೆಯ ಚಿತ್ರಗಳು.

ವಿಶೇಷ : ಇದರಲ್ಲಿ ಒಟ್ಟು ೨೪ ವರ್ಣರಂಜಿತ ಚಿತ್ರಗಳಿವೆ. ಇವುಗಳಲ್ಲಿ ಆದಿಯ ವಿಭಾಗದಲ್ಲಿ ಮೊದಲನೆಯ ಪತ್ರದಲ್ಲಿರುವ ಚಿತ್ರದ ಪಡಿಯಚ್ಚನ್ನೂ ಅಂತ್ಯ

ವಿಭಾಗದಲ್ಲಿ ೨೪ ನೆಯ ಪತ್ರದಲ್ಲಿರುವ ಪಡಿಯಚ್ಚನ್ನೂ ಕೊಟ್ಟದೆ. ಪತ್ರದ ಒಂದೇ ಕಡೆಯಲ್ಲಿ ಬರೆದಿದೆ. ೩ ಮತ್ತು ೪ ನೆಯ ಪತ್ರಗಳ ಅಳತೆ ೪೧"X೧೧"

1603

ಕೆ. ೩೩೭ **ವೀರಶೈವಾಮೃತಮಹಾಪುರಾಣ** ವಾರ್ಧಕಷಟ್ಪದಿ

೧೮.೮"X೨.೨" ಗುಬ್ಬಿಯ ಮಲ್ಲಣಾರ್ಯ ೧೫೩೦

೧–೨೯೮ ಪತ್ರ ೧೨ ಪಂಕ್ತಿ ೧೨೦ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ | ವೀರಶೈವಾಮೃತಪುರಾಣ.

ಪಲ್ಲವ | ರಾಗ ನಾಟಿ ||
ಶ್ರೀ ವಿಮಲ ಗುರುಲಕ್ಷಣಂ ಸಾಂಪ್ರದಾಯ ಶಿವ
ದೇವ ಪ್ರಸಾದ ಪಿಂಡಸ್ವರೂಪಾದ ಸ
ದ್ಭಾವಿ ಶಿಷ್ಯೋದ್ಭವಂಗಳ ಕಾವ್ಯಕ್ರುತ ಶಿವಕವೀಶಾದಿಗಳನೊರೆವೆನೂ ||
ಪದ || ಶ್ರೀಮದನುಪಮ ನಿತ್ಯ ನಿರ್ಮಲ ಚಿದಾನಂದ
ಸಾಮವೇದಾತೀತ ಪರಶಿವ ಸದಾಶಿವ ಮ
ಹಾಮಹಿಮ ಪಂಚಶಕ್ತ್ಯಾಧಾರ....ಮಹೇಶ ಲೀಲಾವಿಗ್ರಹಾ
ಸ್ವಾಮಿ ಗುರುಲಿಂಗ ಜಂಗಮ ರೂಪನಾಗಿ ಯಂ
ನ್ನೀ ಮನೋವಾಕ್ಕಾಯಕಂಗಳೊಳ್ಬಿಡದಿರ್ಪ್ಪ
ರಾಮಣೀಯ್ಯಕ ಶಾಂತಮಲ್ಲಿಕಾರ್ಜ್ಜುನ ರಕ್ಷಿಸೈಯ್ಯ ನಿಂನ್ನಯ
ಶರಣರಾ || ೧ ||

ಅಂತ್ಯ : ||೬೧|| ಯಿದು ವೀರಶೈವಷಟ್ಸ್ಥಲಮಾಗಿ ಸದ್ಭಾವಿ
ಸದನಸುವಿ........ಯಾ
ಪ್ರದಹಲಗೆಯಾಚಾರ್ಯನಖಿಳಮಾಹೇಶ್ವರ ಹಿತಾರ್ಥದಿಂ ಕೇಳ್ವತಂನ್ನಾ ||
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮ್ರುತದೊಳಗಾ
ದುದು ಪುರಾಣಪೂರ್ನದೆಡೆಗೇಳುಕಾಂಡಂ ಸಂಧಿಯಿಪ್ಪತ್ತೆರಡಲಾ ||೬೨||
ಅಂತು ಸಂಧಿ ೨೨ಕ್ಕಂ | ಪದ ೧೧೫೬ ಕ್ಕಂ | ಗ್ರಂಥ ೧೯೦ ಕ್ಕಂ
ಮಂಗಳಮಹಾ ಶ್ರೀ

ಯಿದು ಪರಮಷಟ್ಸ್ಥಲಬ್ರಹ್ಮಿಗಳ ವೀರಶೈ
ವದ ಮಾರ್ಗದುಂನ್ನತಗ್ನಾನಿಗಳ ನೈರ್ಮಲ್ಯ
ಹೃದಯ ನಿಶ್ಚಯತತ್ವಸಂಪಂನ ಹಲಗೆಯಾರ್ಯಂ ಕೆಂಚವೀರಾಖ್ಯಗೇ

ಪದಪಿಂದ ನಂಜುಂಡದೇವರೊಪ್ಪುವ ತೆರದೊ
ಳುದಿತ ವರವೀರಶೈವಾಮ್ರುತಾಖ್ಯಾನನೆಂ
ಬುದ ನಿರೂಪಂಗೊಟ್ಟುದೆಂಟುಕಾಂಡಂ ಪೂರ್ನವಾಯಿತ್ತು ಮಂಗಳಮಹಾ
॥ಶ್ರೀ॥ .... ತು ಕಾಂಡ ೮ ಕ್ಕೆ ಸಂಧಿ ೧೩೬ಕ್ಕಂ। ಪದ ೭೦೯೯.ಕ್ಕಂ ಗ್ರಂಥ ೮೧೭ ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ ★ ಶ್ರೀ ಪ್ರಥಮಕಾಂಡಕ್ಕೆ ಸಂಧಿ ೯ ಕ್ಕಂ। ಪದ ೪೬೯ ಕ್ಕಂ ಗ್ರಂಥ ೨೨೨ ಕ್ಕಂ ॥ — ॥ ದ್ವಿತೀಯ ಕಾಂಡಕ್ಕೆ ಸಂಧಿ ೧೩ ಕ್ಕಂ। ಪದ ೭೬೧ ಕ್ಕಂ। ಗ್ರಂಥ ೯೧ ಕ್ಕಂ ॥ ತ್ರುತೀಯಕಾಂಡಕ್ಕೆ ಸಂಧಿ ೨೨ ಕ್ಕಂ । ಪದ ೧೨....ತುರ್ಥಕಾಂಡಕ್ಕೆ ಸಂಧಿ ೨೫ ಕ್ಕಂ ಪದ ೧೩೫೨ ಕ್ಕಂ । ಗ್ರಂಥ ೭೭ಕ್ಕಂ ॥ ಪಂಚಮಕಾಂಡಕ್ಕೆ ಸಂಧಿ ೨೦ಕ್ಕಂ ಪದ ೭೩೫ ಕ್ಕಂ। ಗ್ರಂಥ ೩೭ ಕ್ಕಂ ॥ ಷಷ್ಟಕಾಂಡಕ್ಕೆ ಸಂಧಿ ೬ ಕ್ಕಂ ಪದ ೪೦೮ ಕ್ಕಂ। ಗ್ರಂಥ ॥ .... ಸಪ್ತಮಕಾಂಡಕ್ಕೆ ಸಂಧಿ ೧೭ ಕ್ಕಂ ಪದ ೯೭೮ ಕ್ಕಂ । ಗ್ರಂಥ ೨೨೬ ಕ್ಕಂ........ಂಧಿ ೨೨ ಕ್ಕಂ ಪದ ೧೧೫೬ ಕ್ಕಂ। ಗ್ರಂಥ ೧೯ ಕ್ಕಂ ॥ ಅಂತು ಕಾಂಡ ೮ ಕ್ಕಂ ಸಂಧಿ ೧೩೬ಕ್ಕಂ । ಪದ ೭೦೯೯ ಕ್ಕಂ । ಗ್ರಂಥ ೮೧೭ ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ ॥ ರುಧಿರೋದ್ಗಾರಿ ಸಂವತ್ಸರ ಚೈತ್ರ ಶು ೧ ಪಾಡ್ಯಕ್ಕೆ ಕಲಿಯುಗ ಸಂದುದು ॥ ೪೮೪೪ ವರುಷ । –೬೫ ॥ ರುಧಿರೋರಿ ಸಂವತ್ಸರ ಕಾರ್ತಿಕ ಶು ೫ ಪಂಚಮಿಾಯಲ್ಲು ಮಂಗಳ ವಾರ ಮುಗಿದು ಸಮಾಪ್ತಿ ॥ ಶ್ರೀ ಶ್ರೀ ಶ್ರೀ ॥ ಯಿತಿ ಮಂಗಳಮಹಾ ಶ್ರೀ ॥

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ೧೪೧, ೨೦೬, ೨೪೬, ೨೯೫, ೨೯೭ ಮತ್ತು ೨೯೮ನೆಯ ಪತ್ರಗಳು ತ್ರುಟಿತವಾಗಿವೆ

1604

ಕೆ. ೨೦೭/೫	**ವೀರಸಂಗಯ್ಯನ ಚೌಪದ**	ಚೌಪದ
೬.೬" × ೧"	ಚನ್ನಮಲ್ಲಯ್ಯ	ಸು. ೧೭೦೦
೬೫–೮೪ ಪತ್ರ	೫ ಪಂಕ್ತಿ	೩೨ ಅಕ್ಷರ

ಆದಿ : ವೀರಸಂಗನಚಾಪದಾ।
ಶ್ರೀ ಗುರುವೆ ಜಯಜಯತು ನೀಲಕಂದರನೆ
ಶ್ರೀ ಗಂಗೆ ಗೌರಿ ಮನೋಹರನೆ ವಲ್ಲಭನೆ
ಶ್ರೀ ಗಣನೆ ಮತಿಯ ಕೊಡು ಆನೆಮುಖದವನೆ
ಶ್ರೀ ಗಿರಿ ಚಂನಮಲ್ಲೇಶ ರಕ್ಷಿಪನೆ ॥೧॥

ಅಂತ್ಯ : ಶರಣು ಶರಣಾರ್ತಿ ಪ್ರಭುದೇವರಿಗೆ ಶರಣಾರ್ತಿ
ಶರಣು ಶರಣಾರ್ತಿ ಗುರುದೇವರಿಗೆ ಶರಣಾರ್ತಿ
ಶರಣು ಶರಣಾರ್ತಿ ಬಸವೈಯ ಶರಣಾರ್ತಿ
ಶರಣು ಶರಣಾರ್ತಿ ಶಂಕರನೆ ಶರಣಾರ್ತಿ ||೯೦||
ವೀರಸಂಗನ ಚೌಪದ ಸಮಾಪ್ತಂ ಜಯಮಂಗಳಮಹಾ ಶ್ರೀ.

ವಿಷಯ : ಅರಸನಾದ ಭಾಸ್ಕರನು ಚಂದ್ರುಮಣಿಯನ್ನು ಮೋಹಿಸಿ ಆಕೆಯ ಪತಿಯಾದ ವೀರಸಂಗನನ್ನು ಎದುರುಗೊಂಡಾಗ ಶಿವನು ಪ್ರತ್ಯಕ್ಷನಾಗುತ್ತಾನೆ. ಚಂದ್ರುಣಿಯಿಂದ ದೀಕ್ಷೆಯನ್ನು ಸ್ವೀಕರಿಸಿ ಭಾಸ್ಕರನು ಕೊನೆಯಲ್ಲಿ ಎಲ್ಲರೊಡನೆ ಕೈಲಾಸಕ್ಕೆ ಹೋಗುತ್ತಾನೆ.

ವಿಶೇಷ : ಈ ಗ್ರಂಥದ ಜೊತೆಯಲ್ಲಿ ಗಂಗೇಗೌರಿ ವಾದ, ಹಾಡು, ಸ್ತ್ರೋತ್ರ ಮೊದಲಾದ ಇತರ ೮ ಗ್ರಂಥಗಳಿವೆ.

1605

ಕೆ. ೩೯೮/೮	**ವೀರಸಂಗಯ್ಯನ ಚೌಪದ**	ಚೌಪದ
೭.೯″ × ೧.೮″	ಚನ್ನಮಲ್ಲಯ್ಯ	ಸು. ೧೭೦೦
೧–೧೧ ಪತ್ರ	೯ ಪಂಕ್ತಿ	೩೫ ಅಕ್ಷರ

ಆದಿ : ವೀರಸಂಗಯನ ಚವುಪದ ಬರವುದಕ್ಕೆ ಶುಭಮಸ್ತು
ಶ್ರೀ ಗುರುವೆ ಜಯಜಯತು ನೀಲಕಂದರನೇ
ಶ್ರೀ ಗವುರಿ ಗಂಗೆ ಮನೋಹಗನೆ ವಲ್ಲಭನೆ
ಶ್ರೀ ಗಣಪತಿ ಕೊಡೊ ಆನೆಮೊಕದವನೇ
ಶ್ರೀ ಗಿರಿಯ ಚಂನಮಲ್ಲೇಶ ರಕ್ಷಿ....ನೇ ||೧||

ಅಂತ್ಯ : ಶರಣು ಶರಣಾರ್ಥಿ ಷರಸಿವಗೆ ಶರಣಾರ್ಥಿ
ಶರಣು ಶರಣಾರ್ಥಿ ಪ್ರಭುದೇವ ಶರಣಾರ್ತೀ
ಶರಣು ಶರಣಾರ್ಥೀ ಗುರುಮೂರ್ತೀ ಶರಣಾರ್ಥೀ ||
ಶರಣು ಶರಣಾರ್ಥಿ ಬಸವೈಯು ಶರಣಾರ್ಥೀ ||೮೯||
ಅಂತು ವೀರಸಂಗೈಯನ ಚೌಪದ ಸಂಪೂರ್ನ.

ವಿಷಯ : ವೀರಸಂಗಯ್ಯನ ಕಥೆ.

ವಿಶೇಷ : ಪತ್ರಗಳ ಅಂಚುಗಳು ಮುರಿದಿವೆ. ಇದರ ಜೊತೆಯಲ್ಲಿರುವ ಉಳಿದ ೭೧ ಪತ್ರಗಳಲ್ಲಿ ಭಿಕ್ಷಾಟನದ ಚರಿತೆ, ಗಣಾಷ್ಟಕ, ಅಂಗದ ಸಂಧಾನ, ಬಭ್ರುವಾಹನ ಕಾಳಗ ಇತ್ಯಾದಿ ವಿಷಯಗಳಿದ್ದು ಎಲ್ಲವೂ ಅಸಮಾಗ್ರವಾಗಿವೆ.

1606

ಕೆ. ಎ. ೨೮೬/೨ **ವೀರಸಂಗಯ್ಯನ ಚೌಪದ** ಚೌಪಾದ
೧೨.೬"×೮" ಚನ್ನಮಲ್ಲಯ್ಯ ಸು. ೧೭೦೦
೧–೧೫ ಪತ್ರ ೧೯ ಪಂಕ್ತಿ ೨೨ ಅಕ್ಷರ

ಆದಿ : ಶ್ರೀ ಗುರುವೆ ಜಯ ಜಯತು ನೀಲಕಂದರನೆ
ಶ್ರೀ ಗಉರಿ ಗಂಗೆ ಮನೋಹರನೆ ವಲ್ಲಭನೆ
ಶ್ರೀ ಗಣಪತಿಯ ಕೊಡು ಆನೆಮುಖದವನೆ
ಶ್ರೀ ಗಿರಿಯ ಚನ್ನಮಲ್ಲೇಶ ರಕ್ಷಿಪನೆ ||೧||

ಅಂತ್ಯ : ಶರಣು ಶರಣಾರ್ತಿ ಶಂಕರನೆ ಶರಣಾರ್ತಿ
ಶರಣು ಶರಣಾರ್ತಿ ಚರಮೂರ್ತಿ ಶರಣಾರ್ತಿ
ಶರಣು ಶರಣಾರ್ತಿ ಸದ್ಗುರುವೆ ಶರಣಾರ್ತಿ
ಶರಣು ಶರಣಾರ್ತಿ ಪ್ರಭುದೇವ ಶರಣಾರ್ತಿ ||೮೯||
ವೀರಸಂಗಯ್ಯನವರ ಚಉಪದ ಸಮಾಪ್ತ ಮಂಗಳಮಹಾ.

ವಿಷಯ : ವೀರಸಂಗಯ್ಯನ ಕಥೆ.

ವಿಶೇಷ : ಇದೇ ಪುಸ್ತಕದಲ್ಲಿ ಪಾರ್ವತೀಸ್ತೋತ್ರ, ಇಂದ್ರಕೀಲ ಚೌಪದ, ಮಹಾ ನವಮಿಯ ಪದಗಳೆಂಬ ಇತರ ಗ್ರಂಥಗಳಿವೆ. ಪತ್ರದ ಒಂದುಕಡೆ ಮಾತ್ರ ಬರೆದಿದೆ.

1607

ಕೆ. ಬಿ. ೨೦೦ **ವೀರಸಿಂಹಚರಿತ್ರೆ** ನಾಟಕ
೮"×೬.೨" ? ?
೧–೫೩ ಪತ್ರ ೧೯ ಪಂಕ್ತಿ ೨೦ ಅಕ್ಷರ

ಆದಿ : ವೀರಸಿಂಹ ಚರಿತ್ರೆ (ಸುಸೀಲ, ಕಲಭಕರ ಪ್ರವೇಶ)

ಸುಸೀಲ — ಛೀ ಛಿ, ತೆಗೆತೆಗೆ. ಲೋಕದಲ್ಲಿ ಒಬ್ಬಳಿಗಿಂತ ಹೆಚ್ಚಾಗಿ ಹೆಂಡ ರನ್ನು ಕಟ್ಟಿಕೊಳ್ಳುವುದು ಶುದ್ಧ ಅವಿವೇಕ. ಅವರು ಕುಟ್ಟೆಹುಳುವಿನಂತೆ ಕೈಹಿಡಿದವನನ್ನು ನಿಸ್ಸಾರಮಾಡಿ ಕೊನೆಗೆ ತೀರಿಸಿಯೇ ಬಿಡುವರು.
ಕಲಭಕ — ಅಯ್ಯಾ ನೀನಾಡುವದು ಯುಕ್ತವಾದರೂ “ ಅಪುತ್ರಸ್ಯ ಗತಿರ್ನಾಸ್ತಿ ” ಎಂಬ ಶಾಸ್ತ್ರೋಕ್ತಿಗನುಸಾರವಾಗಿ ಒಬ್ಬಳಲ್ಲಿ ತಪ್ಪಿದರೆ

ಮತ್ತೊಬ್ಬಳಲ್ಲಿಯಾದರೂ ಸಂತಾನವಾದೀತೆಂಬ ಪ್ರತ್ಯಾಸೆಯಿಂದಲ್ಲವೆ ಬಹು ಪತ್ನಿಯರನ್ನು ಕಟ್ಟಿಕೊಳ್ಳತಕ್ಕದ್ದು.

ಅಂತ್ಯ : ಮಂಗಳ

ಕ್ಷೇಮದಿಂದಾವಗಮುಂ ಭೂಮಿಯೊಳ್ ದಂಪತಿಗಳ್
ತಾಮರಸಲೋಚನನ ಪ್ರೇಮದೆ ಬಾಳುತ್ತಿರಲಿ
ಕನ್ನೆಯೆ ದೃಢವಾಗಲಿ ನಿನ್ನಯ ಸೌಮಂಗಲ್ಯಂ
ನಿನ್ನಿರವು ಶಾಶ್ವಿತವೆಂದೆನ್ನಿಸುಗೆ ವೀರವರಾ ॥ ೨ ॥

ಪಂಚಮಾಂಕಂ ಸಂಪೂರ್ಣಂ.

ವಿಷಯ : ಸಾಮಾಜಿಕ ನಾಟಕ.

ವಿಶೇಷ : ಆಧುನಿಕ ನಾಟಕ.

1608

ಕೆ. ೬೨೫/೧	**ವೀರೇಶ್ವರ ಚರಿತ್ರೆ**	ಉದ್ದಂಡಷಟ್ಪದಿ
೮"×೨"	ರಾಘವಾಂಕ	೧೩೦೦
೧–೨೦ ಪತ್ರ	೧೧ ಪಂಕ್ತಿ	೩೮ ಅಕ್ಷರ

ಆದಿ : ಮಾಸಲುಗವಿತ್ಯ ॥

ಮೃಡನೋಲಗದೊಳ್ ಮನ್ನಣೆವಡೆಯದೆ ದಕ್ಷಂ
ಕಡುಮುಳಿಸಿಂ ಹರವಿರಹಿತ ಯಾಗವ ನಡಸಲ್
ಘುಡುಘುಡಿಸುತ ನಡತಂದು ದಧೀಚಿವ್ರತಿ ಶಪಿಸಿದನಮರರ ಮನುಮುನಿ
ಗಳನೂ ॥

ಪದ ॥ ಶ್ರೀಪತಿ ವಾಣೀಪತಿ ಸುರಪತಿ ದಿನಪತಿ ತಾ
ರಾಪತಿ ಮೊದಲಾದ ಸಮಸ್ತಾಮರರೆನಿಸುವ
ಪಾಪಾದದ್ವಯನಕ್ಷಯನದ್ವಯನನುಪಮನತಿಶಯರೂಪನು ಶಿವನೂ
ಕೋಪಾಟೋಪದಿ ದಕ್ಷಧ್ವರ ವಿಧ್ವಂಸಾ
ಳಾಪದಿ ವೀರೇಶ್ವರನುದ್ಭವಿಸಿದ ಗುರು ಪೊಂ
ಪಾಪುರದರಸ ವಿರೂಪಾಕ್ಷಂ ಕೊರ್ತೆಮಗೀಗಿಷ್ಟಾರ್ಥದ ಭಕ್ತಿಯನೂ ॥೧॥

ಅಂತ್ಯ : ಸಾಯದೆ ಬದುಕಿದಿರಜ ಹರಿ ಸುರಸಂಕುಳ ಸಹಿತಂ
ನ್ಯಾಯವನೆಂದುಂ ನೀಂ ಬಳಸದಿರೆಂಮಲ್ಲಿಯ
ಪಾಯಂಗೊಳದು ಹಂಮೇಜಾದ ಸಾಕ್ಷಾತ್ ಶ್ರೀ ವೀರದ ರುದ್ರನುಮಿವನಾ

ಘಾಯಕೆ ತರಹರಿಸಲ್ಬಾರದೆನುತ ಹಂಪೆಯ
ರಾಯನವರ ಕಳುಹಿದ ಕ್ರುತಿಯಂ ರಚಿಸಿದ ಕವಿ
ರಾಯನ ವರಸುತ ರಾಘವದೇವನ ಬಿಂನಪಮಂ ಸದ್ಭಕ್ತರು ಕೇಳಿ ॥ ೫೭ ॥

ಅಂತು ಸಂಧಿ ೨ ಕ್ಕಂ ಪದನು ೧೨೭ ಕ್ಕಂ ಮಂಗಳಮಹಾ ಶ್ರೀ.

ವಿಷಯ : ದಕ್ಷಾಧ್ವರಧ್ವಂಸ.

ವಿಶೇಷ : ಗರಿಗಳು ಸ್ವಲ್ಪ ಮುರಿದಿವೆ. ಶಕಟರೇಫದ ಪ್ರಯೋಗವಿದೆ. ಈ ಕಟ್ಟನಲ್ಲಿ ಶಂಕರ ಉಮಾಸ್ತೋತ್ರ ಮೊದಲಾದ ಇತರ ಗ್ರಂಥಗಳಿವೆ.

1609

ಕೆ. ೩೬/೫	**ವೃಷಭಗೀತೆ**	ಭೋಗಷಟ್ಪದಿ
೧೪.೭" × ೨.೩"	ಗುರುಬಸವೇಶ್ವರ	ಸು. ೧೪೩೦
೫೫–೫೮ ಪತ್ರ	೧೨ ಪಂಕ್ತಿ	೮೫ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ವೃಷಭಗೀತೆ ॥ ಭೋಗಷಟ್ಪದ ॥
ರಾಗ ಹಿಂದೂಳವಸಂತಾ ॥
ಶ್ರೀಮದಮಲಭಕ್ತಹೃನ್ನಿ
ಕಾಯ ಚಿತ್ರದೀಪನಖಿಲ
ಧಾಮನಮೃತ ಸೋಮನತುಳ ಭೀಮರೂಪನೂ
ಪ್ರೇಮದಿಂದ ನಂದಿನಿವಹ
ತತ್ರಸಹಿತವಾಗಿ ಪೂರ್ನ್ನ
ಕಾಮನಾಗಿ ಜಗವ ಸಲಹಲೆಂಬವಂ ಕೃತಾರ್ತ್ಥನೂ ॥ ೧ ॥

ಅಂತ್ಯ : ಈ ರಹಸ್ಯವಾವನಾತ್ಮ
ಯೋಗವಾಗಲವನು ನಿರ್ವ್ವಿ
ಕಾರನಹ ಚಿದಾಬ್ಧಿಯೊಳಗೆ ಮುಳುಗಿ ತೇಲುತಾ
ಪಾರಮಾರ್ತ್ಥ ಭೂತಿಯೊಳಗೆ
ಸುಖದೊಳಿಪ್ಪನೆಂದು ನುಡಿದ
ಚಾರುಚರಿತ ಗುರುಬಸವಗೆ ಶರಣು ಸಂತತಂ ॥ ೧೦೧ ॥
ವೃಷಭಗೀತೆ ಸಂಪೂರ್ನ ಮಂಗಳಮಹಾ ಶ್ರೀ ಶ್ರೀ ಶ್ರೀ ಪಂಚಕಾವ್ಯಕ್ಕಂ ಪದನು ೭೮೭ ಕ್ಕಂ ಮಂಗಳಮಹಾ ಶ್ರೀ

ವಿಷಯ ಬಸವಸ್ತುತಿರೂಪ ಮತ್ತು ವೀರಶೈವ ವೇದಾಂತ ಪ್ರತಿಪಾದಕ

ವಿಶೇಷ : ಶಕಟರೇಫದ ಬಳಕೆಯಿದೆ. ಸುಸ್ಥಿತಿ. ಇದರೊಂದಿಗೆ ಅವಧೂತ ಗೀತೆ, ಮನೋವಿಜಯಕಾವ್ಯ ಮೊದಲಾದ ಗ್ರಂಥಗಳಿವೆ. ಇಲ್ಲಿನ ಭೋಗಷಟ್ಪದಿಯಲ್ಲಿ ೨ ಮತ್ತು ೫ ನೆಯ ಪಾದಗಳಲ್ಲಿ ಪ್ರಾಸವಿಲ್ಲದಿರುವುದನ್ನು ಗಮನಿಸಬಹುದು.

1610

ಕೆ. ಬಿ. ೩೪೪/೧	**ವೃಷಭಗೀತೆ**	ಭೋಗಷಟ್ಪದಿ
೭.೪"×೬"	ಗುರುಬಸವೇಶ್ವರ	ಸು. ೧೪೩೦
೧–೨೩ ಪುಟ	೧೫ ಪಂಕ್ತಿ	೨೫ ಅಕ್ಷರ

ಆದಿ : ವೃಷಭಗೀತೆ ಬರೆಯುವುದಕ್ಕೆ ಶುಭ ನಿರ್ವಿಘ್ನಮಸ್ತು ॥ ಶ್ರೀಗುರು ಬಸವಾ ॥
ಹಿಂದೂಳವಸಂತ ॥ ಭೋಗಷಟ್ಪದಿ ॥
ಶ್ರೀಮದಮಲ ಭಕ್ತ ಹೃಂನಿ
ಕಾಯ ಚಿತ್ರದೀಪನಖಿಲ
ದಾಮನಮೃತ ಸಾಮನತುಳ ಭೀಮರೂಪನು
ಪ್ರೇಮದಿಂದ ನಂದಿನಿವಹ
ತತ್ರಸಪೂರ್ಣ
ಕಾಮನಾಗಿ ಜನವ ಸಲಹಲೆಂಬವಂ ಕೃತಾರ್ಥನು ॥ ೧ ॥

ಅಂತ್ಯ : ಯಿಾ ರಹಸ್ಯವಾವನಾತ್ಮ
ಯೋಗವಾಗಲವನು ನಿರ್ವಿ
ಕಾರನಹ ಚಿದಾಬ್ಧಿಯೊಳಗೆ ಮುಳಿಗಿ ತೇಲುತ
ಪಾರಮಾರ್ಥ ಭೂತಿಯೊಳಗೆ
ಸುಖದೊಳಿರ್ಪನೆಂದು ನುಡಿದ
ಚಾರುಚರಿತ ಗುರುಬಸವಗೆ ಶರಣು ಶರಣು ಸಂತತಂ ॥ ೧೦೧ ॥
ವೃಷಭಗೀತಿ ಸಂಪೂರ್ಣ ಮಂಗಳ ಮಹಾಶ್ರೀ ॥ ಅಂತು ಪಂಚಕಾವ್ಯಕಂ ಪದನು ೭೯೬ಕಂ ಮಂಗಳಮಹಾಶ್ರೀ ॥ ಶ್ರೀಗುರು ಬಸವರಾಜನೆ ಗತಿ ಶ್ರೀ॥

ವಿಷಯ : ಬಸವಸ್ತುತಿರೂಪ ಮತ್ತು ವೀರಶೈವ ವೇದಾಂತಪ್ರತಿಪಾದಕ.

ವಿಶೇಷ : ಪದ್ಯಗಳು 'ಕೃತಾರ್ಥನು' ಎಂಬ ಪದದಿಂದ ಮುಗಿಯುತ್ತವೆ. ಇದರೊಡನೆ ಅವಧೂತಗೀತೆ, ಪರಮಾರ್ಥಗೀತೆಯ ಟೀಕು (ಭಾವಾರ್ಥ ಪ್ರಕಾಶಿಕೆ), ಪಂಚವಿಂಶತಿಲೀಲೆ ಎಂಬ ಇತರ ಮೂರು ಕೃತಿಗಳೂ ಇವೆ. ಇಲ್ಲಿನ ಭೋಗಷಟ್ಪದಿಯಲ್ಲಿ ೨ ಮತ್ತು ೫ ನೆಯ ಪಾದಗಳಲ್ಲಿ ಪ್ರಾಸವಿಲ್ಲದಿರುವುದನ್ನು ಗಮನಿಸಬಹುದು.

1611

ಕೆ. ೧೬೯/೧೫ **ವೃಷಭೇಂದ್ರ ಪುರಾಣದ ನಾಂದ್ಯ** ವೃತ್ತ

೯.೬"×೨" ಷಡಕ್ಷರಿ ೧೬೫೦

೬೪–೬೭ ಪತ್ರ ೧೦ ಪಂಕ್ತಿ ೫೦ ಅಕ್ಷರ

ಆದಿ : ಪದ್ಯನಾರ್ತ್ಥ ॥ ಕಂದ ॥ ಮಂಗಳ ಮರದುದಿ ನವಿಲು ಭುಜಂಗಾಗ್ನಿ ಶ್ರೀಗುರು ಬಸವಲಿಂಗಾಯ ನಮಃ ॥ ವೃಷಭೇಂದ್ರವಿಜಯ ಪುರಾಣದ ಸ್ತೋತ್ರ ನಾದ್ಯ ॥

ವೃತ್ತ ॥ ಶ್ರೀಮತ್ಕಲ್ಯಾಣ ಭೂಭೃನ್ನತ ಸುಕರಪದಂ ದಿವ್ಯ ಗಂಗಾಬಿಕಾ ಸ
ತ್ರೈೀವಮಾವಾಸಂ ಗಣೇಂದ್ರಾನ್ವಿತನುರುಮಹಿಮಾಧಾರನಶ್ರಾಂತ ಸಶ್ವಾ
ರಾಮಂ ಭೂತಿ ಪ್ರಯುಕ್ತಂ ಪ್ರಣವ ರುಚಿ ಪರಾನಂದ ಧರ್ಮಸ್ವಲೀಲೋ
ದ್ದಾಮಂ ರಕ್ಷಿಪುದೆಮ್ಮಂ ಬಿಡದನವರತಂ ನಂದಿಕೇಶಂ ಮಹೇಶಂ ॥ ೧ ॥

ಅಂತ್ಯ : ಶ್ರೀ ಶಾಂಭವಿ ಶುಭಾಂಗ ನಿ
ವೇಶಿತ ವಾಮಾಂಗನಂಗಜಾಹಿತನುರಗಾ
ಧೀಶಧರನಮಳ ಗುಣನಿಧಿ
ಕೋಶಂ ಕೊಡುಗೆಮಗೆ ಸೌಖ್ಯಮಂ ಶಿವಲಿಂಗಂ ॥ ೪೩ ॥
ಶಿವಲಿಂಗಸ್ತೋತ್ರ ಕಂದ ಸಂಪೂರ್ಣಂ ಮಂಗಳಮಹಾಶ್ರೀ.

ವಿಷಯ : ಸ್ತುತಿಪದ್ಯಗಳು.

ವಿಶೇಷ : ಎಲ್ಲ ಪದ್ಯಗಳೂ ಶಿವಲಿಂಗ ಎಂದು ಮುಗಿಯುತ್ತವೆ. ಇದೇ ಕಟ್ಟಿನಲ್ಲಿ ವೃಷಭೇಂದ್ರಸ್ತುತಿ, ಷಡ್ವಕ್ತ್ರದ ನಾಂದ್ಯಗಳೆಂಬ ಇನ್ನೂ ೨೩ ಗ್ರಂಥಗಳಿವೆ.

1612

ಕೆ. ೧೬೯/೧೬ **ವೃಷಭೇಂದ್ರ ಪುರಾಣದ ನಾಂದ್ಯ** ರಗಳೆ

೯.೬"×೨" ಷಡಕ್ಷರಿ ೧೬೫೦

೬೮–೭೬ ಪತ್ರ ೧೦ ಪಂಕ್ತಿ ೫೦ ಅಕ್ಷರ

ಆದಿ : ವೃಷಭೇಂದ್ರಸ್ತುತಿಃ ॥ ಲಲಿತಪದವೃತ್ತ ॥

ಶ್ರೀಕರಗುಣಾಂಬುಧಿ ಸುಧಾಕರ ಕಳಾಧರ ಕೃ

ಪಾಕಲಿತ ಲೋಚನ ದಿವಾಕರಸಹಸ್ರ
ಲೋಕರುಚಿ ವಿಗ್ರಹ ಪಿನಾಕಧರದರ್ಶನ ಕ
ಳಾಕರ ಸುಪುಂಣ್ಯ ಪರಿಪಾಕಯುತ ಸೇವ್ಯಾ
ಭೀಕರ ಯಮಪ್ರಹರ ನಾಕಕಸದನಾರ್ಚ್ಯಪದ
ಕೋಕನದ ನಿರ್ಜಿತವರಾಕಪದವಾದ
ನೀ ಕವಿನತಾಸುತ ಪತಾಕನುತ ಪಾಲಿಸು ಗ
ಣೈಕಪತಿ ಪಾಲಿತ ಸುಲೋಕ ಬಸವೇಶಾ ॥ ೧ ॥

ಅಂತ್ಯ : ಕುಷ್ಠಮುಖ ದುಸ್ಸಂಗ ಬಲಿಷ್ಠಗದಮರ್ದ್ದನ ಗ
ರಿಷ್ಠ ನಿಜಪಜ್ಞಾಯುಧಿಷ್ಠಿರನರ್ಜ್ಯಾ
ಧಿಷ್ಠಿತ ಗಜತ್ರಯ ವರಿಷ್ಠ ಗರುಡಾಂತ ಪರ
ಮೇಷ್ಠಿನುತ ಭರ್ಗ್ಗಪದನಿಷ್ಠಜನಲೋಲಾ
ಶ್ರೇಷ್ಠ ಸುಕವಿಪ್ರಕರ ಷಷ್ಠಸುರಭೂಜ ಖಲ
ಕಾಷ್ಠದವ ಪಾವಕಪತಿಠಿಷ್ಠಗಣವೃಂದ್ಯ
ಜ್ಯೇಷ್ಠ ಪರಿತರ್ಜಿತ ಲಘಿಷ್ಠಮತವಾಧಿಕುಲ
ಸುಟ್ಟು ವಚನೋತ್ಕರ ಮಹಿಷ್ಠ ಬಸವೇಶ ॥ ೫೯ ॥
ವೃಷೇಂದ್ರವಿಜಯ ಪುರಾಣದೊಳ್ ವೃಷೇಂದ್ರಸ್ತುತಿಃ
ಸಂಪೂರ್ಣ ಮಂಗಳಮಹಾ ಶ್ರೀ.

ವಿಷಯ : ಸ್ತುತಿಪದ್ಯಗಳು.

ವಿಶೇಷ : ಇದೇ ಕಟ್ಟಿನಲ್ಲಿ ಷಡ್ವಕ್ತ್ರದ ನಾಂದ್ಯ (ಸಂ), ಚನ್ನಬಸವೇಶ್ವರ ಪುರಾಣದ ನಾಂದ್ಯಗಳೆಂಬ ಇನ್ನೂ ೨೩ ಗ್ರಂಥಗಳಿವೆ.

1613

ಕೆ. ೩೨೫/೨೦	**ವೃಷಭೇಂದ್ರಪುರಾಣದ ನಾಂದ್ಯ**	ರಗಳೆ
೯.೫″×೨″	ಷಡಕ್ಷರಿ	೧೬೫೦
೫೮–೬೫ ಪತ್ರ	೧೦ ಪಂಕ್ತಿ	೫೫ ಅಕ್ಷರ

ಆದಿ : ವೃಷಭೇಂದ್ರಲಲಿತ ನಾದ್ಯ ॥

ಶ್ರೀಕರ ಗುಣಾಂಬುಧಿಸುಧಾಕರ ಕಳಾಧರ ಕೃ
ಪಾಕಲಿತಲೋಚನ ದಿವಾಕರ ಸಹಸ್ರಾ

ಲೋಕರುಚಿವಿಗ್ರಹ ಪಿನಾಕಧರದರ್ಶನ ಕ
ಳಾಕರ ಸುಣ್ಯಪರಿಪಾಕಯುತ ಸೇವ್ಯ
ಭೀಕರ ಯಮಪ್ರಹರ ನಾಕಸದನಾರ್ಚ್ಯಪದ
ಕೋಕನದ ನಿರ್ಜ್ಜಿತವರಾಕಪರವಾದಾ
ನೀ ಕವಿನತಾಸುತಪತಾಕ ನುತ ಪಾಲಿಸು ಗ
ಣೈಕಪತಿ ಪಾಲಿಸು ಸುಲೋಕ ಬಸವೇಶಾ ॥ ೧ ॥

ಅಂತ್ಯ : ಕುಷ್ಟಮುಖದುಸ್ಸಹ ಬಲಿಷ್ಟ ಗದಮರ್ದನಗ
ರಿಷ್ಟ ನಿಜಪಜ್ಜಲ ಯುಧಿಷ್ಠಿರನರಾರ್ಜ್ಯಾ
ದಿಟ್ಟಿತ ಜಗತ್ರಯವರಿಷ್ಟ ಗರುಡಾಂಕ ಪರ
ಮೇಷ್ಟಿನುತ ಭರ್ಗ್ಗಪದನಿಷ್ಟಜನಲೋಲಾ
ಶ್ರೇಷ್ಟಸುರ ವಿಪ್ರಕರ ಷಷ್ಟಸುರಭೂಜ ಖಲ
ಕಾಷ್ಟದವಪಾವಕ ಪರಿಷ್ಟಗಣವೃಂದ
ಜೇಷ್ಟಪರಿತರ್ಜ್ಜಿತಲಘಿಷ್ಟಮತವಾದಿ ಕುಲ
ಸುಷ್ಟವಚನೋತ್ತರ ಮಹಿಷ್ಟ ಬಸವೇಶಾ ॥ ೫೭ ॥
ವೃಷೇಂದ್ರವಿಜಯ ಲಲಿತಪದ ನಾಂದ್ಯ ಸಮಾಪ್ತ ಮಂಗಳಮಹಾಶ್ರೀ.

ವಿಷಯ : ಸ್ತುತಿಪದ್ಯಗಳು.

ವಿಶೇಷ : ಪ್ರತಿಪದ್ಯವೂ ಬಶವೇಶಾ ಎಂದು ಮುಗಿಯುತ್ತದೆ. ಇದೇ ಕಟ್ಟಿನಲ್ಲಿ ಲಿಂಗಸ್ತೋತ್ರದಪದ, ಶಿವಲಿಂಗ ಮಹಿಮಾ ನಾಂದ್ಯಗಳೆಂಬ ಇನ್ನೂ ೨ಳ ಗ್ರಂಥಗಳಿವೆ.

1614

ಕೆ. ೪೦೬	**ವೃಷಭೇಂದ್ರ ವಿಜಯ**	ಚಂಪು
೧೯.೨"×೨.೧"	ಷಡಕ್ಷರಿ	೧೬೫೦
೧–೧೫೪ ಪತ್ರ	೧೦ ಪಂಕ್ತಿ	೧೦೫ ಅಕ್ಷರ

ಆದಿ : ಶ್ರೀಮದ್ವೃಷಭೇಂದ್ರವಿಜಯ ಮಹಾಪುರಾಣಂ ಲಿಖ್ಯತೇ.

ವೃ ॥ ಶ್ರೀಮತ್ಕಲ್ಯಾಣ ಭೂಭೃನ್ನುತ ಸುಕರಪದಂ ದಿವ್ಯಗಂಗಾಂಬಿಕಾ ಸ
ತ್ರೈಮಾವಾಸಂ ಗಣೇಂದ್ರಾನ್ವಿತನುರುಮಹಿಮಾಧಾರನಶ್ರಾಂತ ಸತ್ಪಾ
ರಾಮಂ ಭೂತಿಪ್ರಯುಕ್ತಂ ಪ್ರಣವರುಚಿ ಪರಾನಂದ ಧರ್ಮಸ್ವಲೀಲೋ
ದ್ದಾಮಂ ರಕ್ಷಿಪುದೆಮ್ಮಂ ಬಿಡದನವರತಂ ನಂದಿಕೇಶಂ ಮಹೇಶಂ ॥ ೧ ॥

× × × ×

ಕೃತಿ ಬಸವಪುರಾಣಂ ಕೃತಿ
ಪತಿ ಬಸವಂ ಕೃತಿಯನುಸುರ್ದವಂ ಶಿವಕವಿ ಸಾ
ರತರ ಷಡಕ್ಷರಿದೇವಂ
ಕೃತಿಪಾಲಕರಭವಭಕ್ತರೆನೆ ಮಚ್ಚದರಾರ್ ॥ ೫೬ ॥

ಅಂತ್ಯ : ಪೃಥ್ವಿವೃತ್ತಂ ॥

ಸುಪರ್ಣರಥಪೂಜಿತೆ ಸುಧಾಕರಕೀರ್ತಿವಿಭ್ರಾಜಿತೇ
ಕೃಪಾರಸತರಂಗಿಣಿ ಕುಪಿತದೈತ್ಯಸಂಹಾರಿಣೀ
ಕಪರ್ದಿಹೃದಯಪ್ರಿಯೆ ಕನಕವರ್ಣೆ ಸಚ್ಚಿನ್ಮಯೇ
ಜಪಾಸುಮರುಚಿಪ್ರಜೆ ಜನನಿ ಪಾಲಿಸದ್ರೀಂದ್ರಜೇ ॥ ೯೪ ॥

ಗದ್ಯಾ ॥ ಯಿದು ವಿನಮದಖಿಳ ಸುರಾಸುರೇಂದ್ರ ಮಕುಟತಟಘಟಿತ ಮಣಿ ಗಣಾಗಣಿತ ರುಚಿನಿಚಯ ಕರುಣಾರುಣಾತಪಪರಿಲಸಿತ ಪರಮಶಿವಲಿಂಗ ಪಾದಾರವಿಂದ ಪರಾಗಭಸಿತ ಭಾಸುರಲಲಾಟ ಪಟ್ಟ ಸರಸಜನ ಮಾನಿತೋ ಭಯ ಕವಿತಾವಿಶಾರದ ಶ್ರೀಷಡಕ್ಷರಿದೇವಭಕ್ತಿ ವಿರಚಿತಮಪ್ಪ ಶ್ರೀಮದ್ಬಸವ ರಾಜವಿಜಯ ಮಹಾಪುರಾಣದೊಳ್ಬಸವೇಂದ್ರವಿಜಯ ವರ್ಣನಂ ದ್ವಿಚತ್ವಾ ರಿಂಶದಾಶ್ವಾಸಂ ಪರಿಸಮಾಪ್ತಂ. ಅಂತು ಆಶ್ವಾಸ ೪೨ ಕ್ಕೆ ಪದ್ಯಗಣನೆ ೩೫೯೨ ಕ್ಕಂ ಮಂಗಳಮಹಾಶ್ರೀ.

ವಿಷಯ : ಬಸವಚರಿತ್ರೆ.

ವಿಶೇಷ : ಪ್ರತಿ ಚೆನ್ನಾಗಿದೆ. ೧೧೭ ಮತ್ತು ೧೫೯ ಕ್ರಮಸಂಖ್ಯೆಯ ಎರಡು ಪತ್ರಗಳು ಖಾಲಿಯಿವೆ. ಪ್ರತಿಯ ಕೊನೆಯಲ್ಲಿ 'ವಿಕ್ರಮ ಸಂ॥ ಮಾರ್ಗಶಿರ ಬ ೯ ಯಲ್ಲು । ಗಂಜಾಂ । ಯತಿರಾಜೈಯ್ಯನಿಂದ ಸಮಾಪ್ತವಾಯ್ತು' ಎಂದಿದೆ.

1615

ಕೆ. ೬೨೦	**ವೃಷಭೇಂದ್ರ ವಿಜಯ**	ಚಂಪೂ
೧೩.೭" × ೨.೧"	ಷಡಕ್ಷರಿ	೧೬೫೦
೧—೨೫೧ ಪತ್ರ	೧೨ ಪಂಕ್ತಿ	೫೪ ಅಕ್ಷರ

ಆದಿ : ಶ್ರೀಮದ್ಬಸವರಾಜ ಮಹಾಪುರಾಣಮಂ ಪ್ರಭುಕಾರುಣ್ಯಮಸ್ತು.

ವೃತ್ತಂ ॥ ಶ್ರೀಮತ್ಕಲ್ಯಾಣ ಭೂಭೃನ್ನುತಸುಕರಪದಂ ದಿವ್ಯಗಂಗಾಂಬಿಕಾ ಸ
ಪ್ರೇಮಾವಾಸಂ ಗಣೇಂದ್ರಾನ್ವಿತಸುರುಮಹಿಮಾಧಾರಶ್ರಾಂತ ಸತ್ವಾ
ರಾಮಂ ಭೂತಿಪ್ರಯುಕ್ತಂ ಪ್ರಣವರುಚಿ ಪರಾನಂದಧರ್ಮಂ ಸಲೀಲೋ
ದ್ಧಾಮಂ ರಕ್ಷಿಪ್ಪುದೆಂಮಂ ಬಿಡದನವರತಂ ನಂದಿಕೇಶಂ ಮಹೇಶಂ ॥ ೧ ॥

ಅಂತ್ಯ : ಲಲಿತಪದವೃತ್ತ ॥

ಕುಷ್ಟಮುಖ ದುಸ್ಸಹ ಬಲಿಷ್ಟ ಗದಮರ್ದನಗ
ರಿಷ್ಟ ನಿಜಪಜ್ಜಲ ಯುಧಿಷ್ಟಿರ ನರಾರ್ಚಾ
ಧಿಷ್ಟಿತ ಜಗತ್ರಯವರಿಷ್ಟ ಗರುಡಾಂಕ ಪರ
ಮೇಷ್ಟಿನುತ ಭರ್ಗಪದನಿಷ್ಟಜನಲೋಲಾ
ಶ್ರೇಷ್ಟಸುಖ ವಿಪ್ರಕರ ಪಷ್ಟ ಸುರಭೂಜ ಖಲ
ಕಾಷ್ಠದವ ಪಾವಕ ಪಟಿಷ್ಟಗಣವೃಂದ
ಜೇಷ್ಟ ಪರಿತರ್ಜ್ಜಿತ ಲಿಖಿಷ್ಟಮತವಾದಿಕುಲ
ಸುಷ್ಟುವಚನೋತ್ಕರ ಮಹಿಷ್ಟ ಬಸವೇಶ ॥ ೧೧೫ ॥

ಗದ್ಯ ॥ ಇದು ವಿನಮಿದಖಿಳ ಸುರಾಸುರೇಂದ್ರ ಮಕಟತಟಘಟಿತ ಮಣಿಗಣಾ ಗಣಿತ ರುಚಿನಿಚಯ ತರುಣಾರುಣಾತಪ ಪರಿಲಸಿತ ಪರಮ ಶಿವಲಿಂಗ ಪಾದಾರವಿಂದ ಪರಾಗಭಸಿತ ಭಾಸುರಲಲಾಟಪಟ್ಟ ಸರಸಜನಮಾನಿತೋ ಭಯ ಕವಿತಾವಿಶಾರದ ಶ್ರೀ ಷಡಕ್ಷರಿದೇವ ಭಕ್ತಿವಿರಚಿತ ಶ್ರೀಮದ್ಬಸವರಾಜ ವಿಜಯ ಮಹಾಪುರಾಣದೊಳ್ ಬಸವರಾಜವಿಜಯವರ್ಣನಂ ದ್ವಿಚತ್ವಾರಿಂ ಶಾಶ್ವಾಸಂ ಪರಿಸಮಾಪ್ತಂ, ಮಂಗಳಮಸ್ತು । ಅಂತೂ ಆಶ್ವಾಸ ೪೨ ಕ್ಕಂ ಪದನೂ ೪೪೭೨ ಕ್ಕಂ ಮಂಗಳಮಹಾ.

ವಿಷಯ : ಬಸವಚರಿತ್ರೆ.

ವಿಶೇಷ : ಪ್ರತಿಯ ಕೊನೆಯಲ್ಲಿ 'ಹೇವಳಂಬಿ ಸಂವತ್ಸರದ ಕಾರ್ತೀಕ ಶುದ್ಧ ೧೩ ಲ್ಲು ಶ್ರೀಮದ್ರೇವಣಾಚಾರ್ಯವಂಶಸಂಭವರಾದಂಥಾ ಹೊಸಕೋಟೆ ಮಠದ ಗುರುಶಿದ್ಧದೇವರು ನಂದಿಕೆರೆಯುಲೆ ವೀರಂಣಸೆಟ್ರ × × × × ಬರದುಕೊಟ್ಟ ಶ್ರೀಮದ್ವೃಷಭೇಂದ್ರವಿಜಯ ಮಹಾಪುರಾಣಕ್ಕೆ ಸರ್ವ ಮಂಗಳಾನಿಭವಂತು' ಎಂದಿದೆ.

1616

ಕೆ. ಬಿ. ೫೪	**ವೆಂಕಟಗಿರಿ ಮಾಹಾತ್ಮ್ಯೆ**	ಚಂಪು
೭.೭"×೬.೨"	ಚಿಕ್ಕುಪಾಧ್ಯಾಯ	೧೬೭೨
೧–೭೮ ಪತ್ರ	೧೧ ಪಂಕ್ತಿ	೨೫ ಅಕ್ಷರ

ಆದಿ : ವೆಂಕಟಗಿರಿಮಾಹಾತ್ಮ್ಯೆ ಬರೆಯುವದಕ್ಕೆ ಶುಭಮಸ್ತು.

ವೃ॥ ಶ್ರೀಕರ ಲಾಲಿತಾಂಘ್ರಿ ವಿನಮಚ್ಛಿವ ಪದ್ಮಭವಾದಿ ನಿರ್ಜರಾ
ನೇಕ ಕಿರೀಟರತ್ನನಿಚಯಾಂಶುತಟಿದ್ಯುತ ಮೇಘವರ್ನನ
ಸ್ತೋಕ ಚಿದಂಚಿತಾಖಿಲ ಮುನಿವ್ರಜಮಾನ ಸಮಾನಸಾರಥಿಂ
ದಾಕರಹಂಸನೆಂಮನೊಸೆದೋವುಗೆ ವೆಂಕಟಶೈಲನಾಯಕಂ ॥ ೧ ॥

ಅಂತ್ಯ : ಪರಮಾದ್ಭುತ ವೆಂಕಟ ಭೂ
ಧರಮಾಹಾತ್ಮ್ಯಪ್ರಬಂಧಮಿದು ವಿಬುಧಮುಖಾಂ
ತರದಿಂದಾಚಂದ್ರಾರ್ಕಂ
ಧರಣಿಯೊಳಭಿವರ್ಧಿಸಿರ್ಕೆ ಮಾಧವನೊಲವಿಂ ॥ ೬೪ ॥

ಗದ್ಯ॥ ಇದು ವಿನಮಿತ ಸುರವರಕಿರೀಟ ಮಣಿಗಣಪ್ರಭಾಪುಂಜರಂಜಿತ ವೃಷಗಿರಿಸದನ ನಿರುಪಮ ಚರಣ ಸರಸಿಜಪರಾಗ ಕಾಶ್ಮೀರ × × × × ಶ್ರೀಮಚ್ಚಿಕ್ಕದೇವಮಹಾರಾಯ ಪ್ರಸಾದೈಕಾಶ್ರಯ ಚತುರಮತಿ ಸಚಿವ ಕುಲತಿಲಕ ಶ್ರೀಮಚ್ಚಿಕ್ಕುಪಾಧ್ಯಾಯನಿರೂಪಣ ಕವಿ ತಿಮ್ಮಪ್ರಣೀತಮಪ್ಪ ವೆಂಕಟಾಚಲ ಮಾಹಾತ್ಮ್ಯೆಯೊಳ್ ಕೃಷ್ಣಶರ್ಮಭಾರ್ಯಾಪುತ್ರ ಪುನರುಜ್ಜೀವನಾದಿ ವರ್ನ್ನನಂ ದಶಮಾಶ್ವಾಸಂ ಸಂಪೂರ್ಣಂ. ಅಂತೂ ಆಶ್ವಾಸ ೧೦ಕ್ಕಾಂ ಪದನೂ ೫೦೨ ಕ್ಕಾಂ ಮಂಗಳಮಹಾ.

ಅಂತೂ ವೆಂಕಟಗಿರಿಮಾಹಾತ್ಮ್ಯೆಯೊಳ್ ಆಶ್ವಾಸ ೧೦ ಕ್ಕಾಂ ಕಂದ ೧೯೦ ವೃ॥ ೨೮೫ ॥ ವ ॥ ೩೧ ॥ ಅಂತೂ ೫೦೨ ಕ್ಕಾಂ ಮಂಗಳಮಹಾ.

ವಿಷಯ : ತಿರುಪತಿ ಬೆಟ್ಟದ ಮಹಿಮೆ.

ವಿಶೇಷ : ಅಕ್ಷರ ಚೆನ್ನಾಗಿವೆ.

1617

ಕೆ. ೮೦/೨	**ವೆಂಕಟಾಚಲ ಮಾಹಾತ್ಮ್ಯೆ**	ಹಾಡು
೭.೨"×೧.೭"	ಚೆಲುವಾಂಬೆ	೧೭೨೫
೧೭೧–೨೧೧ ಪತ್ರ	೭ ಪಂಕ್ತಿ	೨೫ ಅಕ್ಷರ

ಆದಿ : ವೆಂಕಟಾಚಲಮಹಾತ್ಮೆ. ಲಾಲಿಪದ. ರಾಗ ಕಾಂಬೋಧಿ ॥ ತಾಳ ಜಂಪೆ ॥
ಜೋಜೋ । ಜೋ ವೆಂಕಟೇಶ । ನವಜಲದ ಸಂಕಾಶ ನವ್ಯಗುಣಕೋಶ ।
ಜೋ ಜೋ ॥ ಪಲ್ಲ ॥
ಮಣಿಮಯದ ಬ್ರಹ್ಮಾಂಡಮಂಟಪದೊಳೆಸೆವ
ಫಣಿರಾಜನೆನಿಪ ನರಫಣಿಯ ಕಟ್ಟೆರುವ ॥

× × × ×

ನಾರದನು ಭೃಗುಮುನಿಗೆ ನಲವಿನಿಂದೊರೆದ
ಶ್ರೀರಮಣ ನೆಲಸಿರ್ಪ ವೆಂಕಟಾಚಲದ
ಭೂರಿ ಮಹಿಮೆಗಳ ಯಮುನಾಸರಿದ್ವರದ
ತೀರದ ಮುನೀಂದ್ರರಿಗೆ ಸೂತಮುನಿ ನುಡಿದ । ಜೋ ಜೋ ॥ ೪ ॥

ಅಂತ್ಯ : ಶ್ರೀಕಾಂತನೃಪನುದರವಾರ್ಧಿಯೊಳು ಬಂದು
ಶ್ರೀಕೃಷ್ಣರಾಜೇಂದ್ರನರ್ಧಾಂಗಿಯೆಂದು
ಲೋಕವಿಶ್ರುತೆಯಾದ ಚೆಲ್ವಾಂಬೆಗಿಂದು
ಬೇಕಾದಭೀಷ್ಟಗಳ ಕೊಡು ದಯಾಸಿಂಧು ॥ ಜೋ ಜೋ ॥ ೨೦೨ ॥

ಅಲರ್ಮೇಲುಮಂಗನಾಯಕಿರಮಣ ಲಾಲಿ
ಜಲಜಾಕ್ಷಿ ಪದ್ಮಿನಿಯ ಹೃದಯೇಶ ಲಾಲಿ
ಅಲರಸಂಲನ ಪೆತ್ತ ನಿರುಪಮನೆ ಲಾಲಿ
ಕಲುಷಹರ ಪರಕಾಲ ಯೆತಿನುತನೆ ಲಾಲಿ ॥ ಲಾಲಿ ॥ ೨೦೩ ॥
ಲಾಲಿ ಜಯಶಾಲಿ । ಶ್ರೀಲೋಲ ವೆಂಕಟಾಶೈಲೇಶ ಲಾಲಿ ॥ ಲಾಲಿ ॥ಪಲ್ಲ॥

ವಿಷಯ : ತಿರುಪತಿ ಬೆಟ್ಟದ ಮಹಿಮೆ.

ವಿಶೇಷ : ಸುಂದರಾಕ್ಷರ. ಇದೇ ಕಟ್ಟಿನಲ್ಲಿ ವರನಂದಿ ಕಲ್ಯಾಣ ಮುತ್ತು ಅಲಮೇಲಮ್ಮನವರಮೇಲೆ ಬರೆದಿರುವ ಲಾಲಿಪದಗಳಿವೆ.

1618

ಕೆ. ಬಿ. ೪೩೫	**ವೆಂಕಟೇಶಭಾರತ**	ಭಾಮಿನೀಷಟ್ಪದಿ
೮.೨"×೬.೬"	ಶ್ರೀನಿವಾಸಶರ್ಮ	೧೮೩೪
೧–೭೮ ಪತ್ರ	೧೭ ಪಂಕ್ತಿ	೩೦ ಅಕ್ಷರ

ಆದಿ : ಶ್ರೀ × ಶಕ ೧೮೩೪ ವಿರೋಧಿಕೃತ್ ಸಂ|| ಭವಿಷ್ಯೋತ್ತ್ರರ ಪುರಾಣಾನುಸಾರೇಣ ಕಾರ್ನಾಟ್ಕಕಾವ್ಯ ಪ್ರಾರಂಭಃ ||

ಭಾಮಿನಿಷಟ್ಪದಿ || ಶ್ರೀಮನೋಹರಮೂರ್ತಿ ಹೃತ್ಪದ
ತಾಮರಸದೊಳು ನೆಲಸಿ ಮನ್ಮನ
ತಾಮಸವ ಪರಿಹರಿಸಿ ಮನ್ನಿಸಿ ಲೋಕಗಳ ಪೊರೆವಾ
ತಾಮರಸಸಖನಂತರಾತ್ಮಕ
ತಾಮರಸದಳನೇತ್ರ ಮಂಗಳ
ತಾಮರಸಜಾವರನು ವೇಂಕಟರವಣಗೆರಗುವೆನೂ || ೧ ||

× × × ×

ಈಶಸುತ ವಿಘ್ನೇಶ ಭಾರತಿ
ಯುಮಾ ವಾಗೀಶಸತಿ ಗಾಯತ್ರಿ
ನಾರದ ಕಶ್ಯಪಾದಿ ಸಮಸ್ತ ಋಷಿಗಳ ಮಾನಸದಿ ಭಜಿಸೀ
ವ್ಯಾಸಮುನಿಯಾನಂದತೀರ್ಥರು
ವ್ಯಾಸರಾಜಯತೀಂದ್ರ ಮುಂತಾ
ದೀ ಸುಗುಣ ಯತಿಕುಲಪರಂಪರೆವೆಣಿಸುತಭಿನಮಿಸೀ || ೪ ||

× × × ×

ಸರ್ವಮಂಗಳೆ ಲಕುಮಿ ವೇಂಕಟ
ಸಾರ್ವಭೌಮನ ಚರಿತಸುಧೆಯನು
ಸರ್ವಸಜ್ಜನರೊಲಿವ ತೆರದಲಿ ಸರ್ವಬಗೆಗಳನೂ
ಸರ್ವಕವಿತೆಯಸಾರವೆನಗೀ
ಸರ್ವಸುಜ್ಞಾನಗಳ ಪಾಲಿಸಿ
ಸರ್ವಮಂಗಳವಾಹ ತೆರದಲಿ ರಚನೆಗೈಸುಪುದೂ || ೧೦ ||

ಅಂತ್ಯ : ಭಾವಿಸುತಲೀ ಚರಿತೆ ಸುಧೆಗಳ
ಭಾವಗರ್ಭಿತ ಶ್ರೀನಿವಾಸನು
ತೀವಿ ಮನದೊಳಪೊಗಿಸಿ ಭಾವದಿ ಸೋವಿ ತಾ ನಿರತಾ
ಕಾವ್ಯವಿದನೆನ್ನಿಂದ ರಚಿಸಿಹ
ಭೂವಿಬುಧಸೂರಿಗಳು ಇದರ ಸ್ವ
ಭಾವತಪ್ಪುಗಳಿರಲು ಸರಳಸ್ವಭಾವ ನೆಲೆಗೊಳಿಸಿ || ೧೫೬ ||

× × × ×

ಶಾಲಿವಾಹನ ವರಮಾನನ
ಕಾಲ ಸಾವಿರದೆಂಟುನೂರರ
ಮೇಲೆ ಚತುಸ್ತ್ರಿಂಶತಿ ವಿರೋಧಿಕೃತಿಯವರ್ಷಾ
ಕಾಲ ಶ್ರಾವಣ ಕೃಷ್ಣ ಪಂಚಮಿ
ಮೂಲವಾಸರದಿಂದ ಕವಿತೆಯ
ವೂಳಿಗದಿ ಪರಿಪಾದಭಕುತಿಯ ತಾಳಿಯಾದಿವಸಾ || ೧೫೯ ||

ಆದಿಯಾರಂಭದಲಿ ಮುಗಿದಿಹು
ದೀದಿನವು ಪೌರ್ಣಮಿಯತಿಥಿ ಭೃಗು
ವಾರ ತಿಂಗಳು ಭಾದ್ರಪದವೀ ಕವಿತೆ ಮಂಗಳವೂ
ವರಹರದನಜೆತೀರದುತ್ತರ
ನರಹರಿಯ ಪರ್ವತದ ರಾಮೇ
ಶ್ವರನ ದಯೆಯಲಿ ಬಾಣಗಾರಕ್ಷೇತ್ರವಾಸದೊಳೂ || ೧೬೦ ||

ಇರುವ ಕಾಶ್ಯಪಗೋತ್ರಜನು ಹರಿ
ಶರಣ ವೇಂಕಟರಮಣಪುತ್ರನು
ಮೆರೆವ ವೈಷ್ಣವ ಬಡಗನಾಡಿಗ ಶ್ರೀನಿವಾಸಾಖ್ಯ
ವರಪೆಸರುದಾಳಿರುವ ಪಾಮರ
ದುರಿತಹರ ಶ್ರೀವೇಂಕಟೇಶ್ವರ
ನರುಪಿದಂದದಿ ರಚಿಸಿಯಾತನಿಗರ್ಪಿಸಿಹೆನಿದನೂ || ೧೬೧ ||

× × × ×

ಮಂಗಳವು ಶೇಷಾದ್ರಿವರದಗೆ
ಮಂಗಳವು ಮಹಿಸೂರಧೀಶಗೆ
ಮಂಗಳವು ಶರಗ್ರಹದ ಈಶಗೆ ಸಂಕಟೇಶ್ವರಗೆ || ೧೬೭ ||

ಅಂತು ೫ ನೇ ಸಂಧಿ ೧೬೭ ಪದ ಮತ್ತು ೪ ನೇ ಸಂಧಿವರಿಗೆ ೬೬೧ ಸಹಿತ ೮೨೮ ಪದಗಳಿಗೆ ಮಂಗಳಮಹಾಶ್ರೀ ||

ವಿಷಯ : ಭವಿಷ್ಯಪುರಾಣದಲ್ಲಿರುವ ವೆಂಕಟೇಶನ ಮಾಹಾತ್ಮ್ಯ.

ವಿಶೇಷ : ತಪ್ಪುಗಳನು ತಿದ್ದಿರುತ್ತಾರೆ. ಕೆಲವು ಕಡೆಗಳಲ್ಲಿ ಅಕ್ಷರಗಳಮೇಲೆ ಬೇರೆ ಕಾಗದವನ್ನು ಅಂಟಿಸಿ ಅದರಮೇಲೆ ಶುದ್ಧವಾದ ಪಾಠಗಳನ್ನು ಬರೆದಿರುತ್ತಾರೆ. ೫ ನೆಯ ಕ್ರಮಸಂಖ್ಯೆಯುಳ್ಳ ಎರಡು ಪತ್ರಗಳಿವೆ.

1619

ಕೆ. ४೦ **ವೆಂಕಟೇಶ ಮಾಹಾತ್ಮ್ಯೆ** ಗದ್ಯ

೧೨.೫″ × ೧.೨″ ಚಿಕ್ಕುಪಾಧ್ಯಾಯ ೧೬೭೨

೧–೧೦೩ ಪತ್ರ ೫ ಪಂಕ್ತಿ ೪೪ ಅಕ್ಷರ

ಆದಿ : ಶ್ರೀ ವೆಂಕಟಗಿರಿ ಮಹಾತ್ಮೆಯ ಬರೆವ ಪುಸ್ತಕಕ್ಕೆ × × × ಬ್ರಹ್ಮಾಂಡ ಪುರಾಣ ವರಾಹಪುರಾಣ ಪದ್ಮಪುರಾಣ ವಾಮನಪುರಾಣ ಸ್ಕಂದಪುರಾಣ ಮಾರ್ಕಂಡೇಯಪುರಾಣ . . ಶಿವು ಮೊದಲಾದಪುರಾಣಂಗಳಲ್ಲಿ ಯಿರ್ದ ರಹಸ್ಯಾರ್ಥವಾದ ಯಿತಿಹಾಸವನುಬ್ರಹ್ಮಪುರಾಣಂಗಳಲ್ಲಿರ್ದ್ದವೃತ್ತಾಂತ್ತಂಗಳಂ × × × × ಶ್ರೀ ಹರಿಕಥಾಮ್ರುತವನೆ ಆಹಾರಮಂ ಮಾಡಿಕೊಂಡು ಪರಮಾನಂದಭರಿತರಾಗಿ ಕಥಾಶ್ರವಣಕಾಲದೊಳೊಂದು ದಿನದಲ್ಲಿ ಸಕಲ ರುಷಿಗಳು ಯೆದ್ದು ನಿಂದು ಕೈಗಳಂ ಮುಗಿದುಕೊಂಡು ಯೆಲೆ ಸೂತ ಪುರಾಣಿಕಾ

ಅಂತ್ಯ : ಆ ಬಿಲಮಾರ್ಗವೆ ಮೋಕ್ಷಮಾರ್ಗ. ಆ ಪಟ್ಟಣವೆ ವೈಕುಂಠನಗರ. ಅಲ್ಲಿರ್ದವರೆಲ್ಲರು ನಿಕ್ತಮುಕ್ತರು. ಅಲ್ಲಿರ್ದು ಕಾಣಿಸಿಕೊಂಡ ಸ್ವಾಮಿಯೆ ಆದಿನಾರಾಯಣಂ। ಆತನೆ ಶ್ರೀ ವೆಂಕಟೇಶ್ವರ, ಯಿ ಗಿರಿಯೆ ಪ್ರತ್ಯಕ್ಷ ಪರಮಪದಂ। ಯಿ ಗಿರಿಯ ಮಹಾತ್ಮೆಯನು ಅಲ್ಲಿ ಯಿರುವ ಪುಣ್ಯ ಪುಷ್ಕರಂಗಳನು ಪುಣ್ಯತೀರ್ಥಪ್ರಭಾಮಗಳನು ವಿವರಿಸಲು ಶಕ್ಯವಲ್ಲೆಂದ। ಪುಣ್ಯತೀರ್ಥಂಗಳ ಮಹಿಮೆಯನು ಬ

ವಿಷಯ : ವೆಂಕಟೇಶಮಾಹಾತ್ಮ್ಯೆ.

ವಿಶೇಷ : ಅಸಮಗ್ರಪ್ರತಿ.

1620

ಕೆ. ೧४४ **ವೆಂಕಟೇಶ ಮಾಹಾತ್ಮ್ಯೆ** ಗದ್ಯ

೧೫.೨″×೧.೬″ ಚಿಕ್ಕುಪಾಧ್ಯಾಯ ೧೬೭೨

೧–೧೫೫ ಪತ್ರ ೭ ಪಂಕ್ತಿ ೫೬ ಅಕ್ಷರ

ಆದಿ : ಶ್ರೀ ವೆಂಕಟೇಶಾಯ ನಮ: । ಬ್ರಂಹ್ಮಪುರಾಣ ವಾರಾಹಪುರಾಣ ಪದ್ಮಪುರಾಣ ವಾಮನಪುರಾಣ ಸ್ಕಂಧಪುರಾಣ ಮಾರ್ಕ್ಕಂಡೇಯಪುರಾಣ ಯಿವು ಮೊದಲಾದ ಪುರಾಣಗಳಲ್ಲಿ ಯಿದಂಥಾ ಐಹಸ್ಯವಾದ ಯಿತಿಹಾಸ

ವಂನ್ನು × × × × ಕೇಳುವವರ ಭವಾಂತ್ರರಗಳ ದುರಿತಕ್ಷಯವಾದುದು । ಶ್ರೀ ವೆಂಕಟೇಶ್ವರನ ಮಹಾಮಹಿಮೆಗಳ ವಿಸ್ತರಿಸುವರೆ.

ಅಂತ್ಯ : ಉಭಯ ದೇವಿಯರು ಭಜಿಸಿದ ಭಕ್ತರಿಗೆ ಪ್ರತ್ಯಕ್ಷವಾಗಿ ದೃಷ್ಟಿಗೋಚರನಾಗಿ-ವಿಹರಿಸುತಾ ಯಿದ್ದನು ಯೆಂದ್ದು ಶೌನಕಾದಿ ಋಷಿಗಳಿಗೆ ಸೂತಪೂರಾಣಿಕರು ಹೇಳಿದಂಥಾ ಶ್ರೀ ವೆಂಕಟಗಿರಿವಾಸ ಶ್ರೀನಿವಾಸಸ್ವಾಮಿಯ ಮಹಾತ್ಮೆ ಆ ವೆಂಕಟಗಿರಿಯ ಮಹಾತ್ಮೆ ಆ ತೀರ್ಥದ ಮಹಾಮಹಿಮೆಯ ಬರದವರಿಗೂ × × ಸೂತಪೂರಾಣಿಕರು ಹೇಳಿದ ವೆಂಕಟಗಿರಿ ಮಹಾತ್ಮೆಗೆ ಮಂಗಳ.

ವಿಷಯ : ವೆಂಕಟೇಶಮಾಹಾತ್ಮ್ಯ.

ವಿಶೇಷ : ೨೫, ೧೪೧ ನೆಯ ಪತ್ರಗಳು ಇಲ್ಲ. ೮೨ ಮತ್ತು ೮೬ ನೆಯ ಪತ್ರಗಳು ಖಾಲಿ ಇವೆ. ಪ್ರತಿಯ ಮೊದಲಲ್ಲಿ 'ವ್ಯಯನಾಂ ಸಂತ್ಸರದ ಆಶ್ವಿಜ ಯಿ ೧೩ ಯಲ್ಲು । ಶ್ರೀ ವೇಂಕಟೇಶ್ವರಮಹಾತ್ಮೆ ಶುಭನಕ್ಷತ್ರ ಶುಭಮೂಹೂರ್ತ ಶುಭನಕ್ಷತ್ರದಲ್ಲು ಪ್ರಾರಂಭಾ' ಎಂದಿದೆ. ಪ್ರತಿಯ ಕೊನೆಯಲ್ಲಿ 'ವ್ಯಯನಾಂ ಸಂವತ್ಸರದ ಮಾಘ ಬ ೧ ಯು ಚೆಂದ್ರವಾರ ದಿವಸ ಸೂರ್‍ಯೋದಯವಾದ ದಿವಿ ಗಳಿಗೆ ೩ ಮೂರರಲ್ಲು ಶ್ರೀ ವೆಂಕಟಗಿಱಿಮಹಾತ್ಮೆ ಮಾತ್ರುಕೆಯಲ್ಲಿ ಯಿದ್ದ ಪ್ರಕಾರ ಬರದುಯಿದೆ' ಎಂದಿದೆ.

1621

ಕೆ. ೧೮೨	**ವೆಂಕಟೇಶ ಮಾಹಾತ್ಮ್ಯ**	ಗದ್ಯ
೧೬.೩" × ೧.೫"	ಚಿಕ್ಕುಪಾಧ್ಯಾಯ	೧೬೭೨
೧–೧೨೭ ಪತ್ರ	೭ ಪಂಕ್ತಿ	೭೮ ಅಕ್ಷರ

ಆದಿ : ವೆಂಕಟಗಿರಿ ಮಾಹಾತ್ಮೆ ಬರೆವ ಪುಸ್ತಕಕ್ಕೆ ಕಲ್ಯಾಣಮಸ್ತು. ಬ್ರಹ್ಮಾಂಡ ಪುರಾಣ ವಾರಾಹಪುರಾಣ । ಪದ್ಮಪುರಾಣ । ವಾಮನಪುರಾಣ । ಸ್ಕಂದ ಪುರಾಣ । ಮಾರ್ಕ್ಕಂಡೇಯಪುರಾಣ ॥ ಯಿಂತಿ ಯಿವು ಮೊದಲಾದ ಪುರಾಣಂಗಳಲ್ಲಿರ್ದ್ದ ರಹಸ್ಯಾರ್ಥವಾದ ಯಿತಿಹಾಸವನು ಬ್ರಹ್ಮಪುರಾಣ ದಲ್ಲಿರ್ದ್ದ ವೃತ್ತಾಂತಂಗಳಂ ಭೂಲೋಕದಲ್ಲಿ ಜನರು ಬಂದು ದರ್ಶನವನು ಮಾಡಿ ತೀರ್ಥಸ್ನಾನವನು ಮಾಡಿದ ಮಾತ್ರದಲ್ಲಿ ಅವರ ಜನ್ಮಜಲ್ಮಾಂತ ರಂಗಳ ಪಾಪಂಗಳಂನ್ನು ಪರಿಹರಿಸಿ ಮತ್ತಂ × × × × ಶ್ರೀಮದ್ವೆಂಕಟೇಶ್ವರನ ಮಹಾಮಹಿಮೆಗಳಂ ಕೇಳಬೇಕೆಂದು

ಅಂತ್ಯ : ಅಲಮೇಲುಮಂಗನಾಚಾರಿಯಂಮನ . . ರಿಗೆ ಪದ್ಮಿನಿದೇವಿಯರನೂ ನಮಸ್ಕಾರಂಗಳಂ ಮಾಡಿಶಿ । ಬಲದಲ್ಲಿ ಅಲಮೇಲುಮಂಗನಾಚಾರಿಯರು । ಯಡದಲ್ಲಿ ಪದ್ಮಿನಿದೇವಿಯರು । ಬಲದಲ್ಲಿ ಸಹಾ ರತ್ನನಿರಾಜನಾದಿ ಮಂಗಳಾರತಿಯನೂ ಕೈಕೊಂಡು । ಉಭಯ ದೇವಿಯರು ಭಜಿಸಿದ ಭಕ್ತರಿಗೆ ಪ್ರಸಂನನಾಗುತ್ತಾ । ಅವರವರ ಮನೋಭೀಷ್ಟಂಗಳಂ ಪಾಲಿಸುತ್ತಾ ವೆಂಕಟಾಚಲದ ಶ್ರೀನಿವಾಸಸ್ವಾಮಿಯೂ ಅತ್ಯಂತ ವೈಭವದಿಂದಾ । ಅಧ್ಯಾಪಿಯಾಗಲೂ । ಪ್ರತ್ಯಕ್ಷವಾಗಿ ದೃಷ್ಟಿಗೋಚರವಾಗಿ ವಿಹರಿಸುತ್ತಾ ಯಿದ್ದಾರೂ । ಆ ವೆಂಕಟೇಶ್ವರಸ್ವಾಮಿಯವರ ಮಹಾತ್ಮೆ ಸಂಪೂರ್ನ್ನಂ ॥

ವಿಷಯ : ವೆಂಕಟೇಶಮಹಾತ್ಮೆ.

ವಿಶೇಷ : ೭೪ ನೆಯ ಪತ್ರ ಮಾತ್ರ ಲುಪ್ತವಾಗಿದೆ.

1622

ಕೆ. ಬಿ. ೧೬೮	**ವೆಂಕಟೇಶ ಶತಕ**	ಭಾಮಿನೀಷಟ್ಪದಿ
೭.೬"×೬.೨"	ಚನ್ನರಾಜಪ್ಪ	ಸು. ೧೭೫೦
೧–೨೪ ಪತ್ರ	೧೧ ಪಂಕ್ತಿ	೧೮ ಅಕ್ಷರ

ಆದಿ : ಶ್ರೀ ವೇಂಕಟೇಶ್ವರ ಶತಕ ಬರೆವರೆ ನಿರ್ವಿಘ್ನಮಸ್ತು ॥
ಶ್ರೀಲಲನೆ ತನುಕಾಂತಿಯಂಗದಿ
ಲೀಲೆಯಿಂ ಪ್ರತಿಫಲಿಸೆ ನಿರ್ಮಲ
ನೀಲಮೇಘಮಿದೆಂದು ಹರುಷಿಪ ಭಕ್ತಜಾತಕರ
ಜಾಲವಂ ಪಾಲಿಸುತ ತತ್ಪರಕ
ಮೂಲವಾದ ನಿಜಾತ್ಮತತ್ವವಿ
ಶಾಲ ವೇಂಕಟ ಸಲಹೊ ಯಂನನು ನಿತ್ಯಶುಭವಿತ್ತು ॥ ೧ ॥

ಅಂತ್ಯ : ಧರೆ ಜಲಾನಲ ಗಗನ ಪಾವಕ
ತರಣಿ ಚಂದ್ರಮರುಳ್ಳಪರಿಯಂ
ತರದಿ ನಿಂಮಯ ದಿವ್ಯಕೀರ್ತನೆ ನಿತ್ಯವೆಂದೆನಿಸಿ
ಬರದು ವೋದಿ ಕೇಳ್ದ ಜನರಿಗೆ
ಪರಮ ಮಂಗಳವಿತ್ತು ಶಾಶ್ವತ
ಪೊರೆಯೊ ಲಕ್ಷ್ಮೀರಮಣ ವೇಂಕ ಸಲಹೊ ಯಂನ್ನನು ನಿತ್ಯಶುಭವಿತ್ತು
॥ ೧೦೩ ॥

ವೇಂಕಟೇಶ್ವರ ಶತಕವನ್ನು ಮೈಸೂರು ಆನೆಗೊಂದಿ ಅರಸಿನವರು ಚಂನರಾಜಪ್ಪನವರಿಂದ ವಿರಚಿಸಲ್ಪಟ್ಟ ವೇಂಕಟೇಶ್ವರಶತಕ ಸಂಪೂರ್ಣ ಮಂಗಳಮಹಾಶ್ರೀ ||

ವಿಷಯ : ವೆಂಕಟೇಶಸ್ತುತಿ.

ವಿಶೇಷ : ಈ ಶತಕದ ಪ್ರತಿಯೊಂದು ಪದ್ಯವೂ 'ವೆಂಕಟೇಶ ಸಲಹೊ ಯೆನ್ನನು ನಿತ್ಯಶುಭವಿತ್ತು' ಎನ್ನುವುದರಿಂದ ಮುಗಿಯುತ್ತದೆ.

1623

ಕೆ. ಬಿ. ೩೫೩/೯	**ವೆಂಕಟೇಶ ಶತಕ**	ಭಾಮಿನೀಷಟ್ಪದಿ
೯"X೬.೫"	ಚನ್ನರಾಜಪ್ಪ	ಸು. ೧೭೫೦
೧೮೩–೧೯೬ ಪತ್ರ	೧೭ ಪಂಕ್ತಿ	೨೧ ಅಕ್ಷರ

ಆದಿ : ಶ್ರೀಲಲನೆ ತನುಕಾಂತಿಯಂಗದಿ
ಲೀಲೆಯಿಂ ಪ್ರತಿಪಾಲಿಸೆ ನಿರ್ಮಲ
ನೀಲಾಮೇಗವಿದೆಂದೂ ಹರುಷಿಪ ಭಕ್ತಜಾತಕದಾ ||
ಪದನೂ|| ಜಾಲವಂ ಪಾಲಿಸುತ್ತ ತಾರಿಕಾ
ಮೂಲವಾದಾ ನಿಜಾತ್ಮ ತತ್ವವಿ
ಶಾಲವೇಕಟ ಸಲಹೊ ಯನ್ನನು ಸಕಲಾ ಸೂಭವಿತ್ತು ||೧||

ಅಂತ್ಯ : ಧರೆ ಜಲಾನಿಲ ಗಗನಪಾವಕ
ತರಣಿ ಚಂದ್ರಮರುಳ್ಳ ಪರಿಯಂ
ತರದಿ ನಿಂಮಯ ದಿವ್ಯಚರಿತೆಯ ನಿತ್ಯವೆಂದೆನಿಸಿ
ಬರದು ವೋದಿ ಕೇಳ್ದ ಜನರಿಗೆ
ಪರಮ ಮಂಗಳವಿತ್ತು ಶಾಶ್ವತ
ಪೊರೆಯೊ ಲಕ್ಷ್ಮೀರಮಣ ವೇಂಕಟ ಬಿಡದೆ ಕರುಣದಲಿ ||೧೦೮||
ಶ್ರೀ ವೇಂಕಟೇಶ್ವರನ ಶತಕ ಸಂಪೂರ್ನ ಮಂಗಳಮಹಾಶ್ರೀ

ವಿಷಯ : ವೆಂಕಟೇಶಸ್ತುತಿ.

ವಿಶೇಷ : ೧೮೧ ನೆಯ ಪತ್ರ ಖಾಲಿಯಿದೆ. ಶಿಥಿಲ ಮತ್ತು ಅಶುದ್ಧಪ್ರತಿ. ಹುಳು ಹೊಡೆದಿದೆ. ಈ ಶತಕದ ಪ್ರತಿಯೊಂದು ಪದ್ಯವೂ 'ವೇಂಕಟ ಸಲಹೊ ಯನ್ನನು ನಿತ್ಯ ಶುಭವಿತ್ತು' ಎನ್ನುವುದರಿಂದ ಮುಗಿಯುತ್ತದೆ. ಕೊನೆಯಲ್ಲಿ "ಶ್ರೀ ವರಕರಿಮಲ ಪುರವರಾಧೀಶ್ವರ ಚಂನ್ನರಾಜಪೌತ್ರ ವೇಗಮರಾಜಪುತ್ರ

ಚಂನ್ನಕೇಶವರಾಜ ವಿರಚಿತ ವೇಂಕಟೇಶ್ವರಶತಕಂ ಸಂಪೂರ್ಣಂ " ಎಂದಿದೆ. ಕೆ. ಬಿ. ೧೬೮ ನೇ ಪ್ರತಿಯಲ್ಲಿ ಚನ್ನರಾಜಪ್ಪ ವಿರಚಿತ ಎಂದಿದೆ. ಇದರಂತೆಯೇ ಕವಿ ಚನ್ನರಾಜಪ್ಪ ಎಂದು ಬರೆದಿದೆ. ಇದೇ ಪುಸ್ತಕದಲ್ಲಿ ರಾವಣೋದ್ಭವಪ್ರಸಂಗ, ಪುತ್ರಕಾಮೇಷ್ಟಿ, ಚಿಕ್ಕಪಟ್ಟಾಭಿಷೇಕ, ವಾಲಿಸುಗ್ರೀವರ ಕಾಳಗ, ಚೂಡಾಮಣಿಪ್ರಸಂಗ, ಸೇತುಬಂಧನಪ್ರಸಂಗ, ಅಂಗದಸಂಧಾನ, ಎಂಬ ಕೃತಿಗಳಿವೆ. ಕೊನೆಯಲ್ಲಿ ರಾಮಾಯಣ ಕಥೆಗೆ ಸಂಬಂಧಿಸಿದ ಆರು ಬಿಡಿಪತ್ರಗಳಿವೆ.

1624

ಕೆ. ೪೦೦	**ವೆಂಕಟೇಶ್ವರನ ಲಾವಣಿ**	ಹಾಡು
೯.೪"×೧.೬"	?	?
೧-೪ ಪತ್ರ	೮ ಪಂಕ್ತಿ	೪೦ ಅಕ್ಷರ

ಆದಿ : ವೆಂಕಟೇಶ್ವರನ ಲಾವಣಿ ಬರೆಯುವದಕ್ಕೆ ನಿರ್ವಿಘ್ನಮಸ್ತು.
ಸ್ವಾರಿ ಬರುತನೇ ತೇಜಿಯನೇರಿ ನೋಡಲೀಕೆ ಬಿಲ್ಪರೀ
ಸಾಲುಸತ್ತಿಗೆ ನಳಲಲಿ ಬರುತನೆ ರೂಢಿಗೆ ವೆಂಕಟದೋರೀ ॥ ಪಲ್ಲಾ ॥
ಉಟ್ಟ ಪೀತಾಂಬ್ರ ಕಟ್ಟದ ನಡುಕಟ್ಟೆಟ್ಟ ಮಿಂಚಿನಾಚರೀ
ನಿರಾಜಿದುಪ್ಪಟಿ ಕುಸುಂಬಿ ಮುಂಡಾಸು ಮುತ್ತಿನಂಗಿ ಜಲ್ತರೀ ॥ ೧ ॥

ಅಂತ್ಯ : ಉರಿಯೊಳು ಜನಿಶಿದವನ ನಿಜತಂಗಿಯ
ಶರಗ ಪಿಡಿದ ಖಳನಂಣನ ತಂಗಿಯ
ವರನ ತಲ್ಲೆಯಂನ್ನೂ ಶರವ ತಂಬಿಶಿ
ಅನುದೀನಾ ತಂಮ ಭಕ್ತನಾ ಪಾಲಿಪ
ಉರುಗ ಗಿರಿಯ ವೆಂಕಟಾದಿಕೇಶವನಾ
ಗರುವನೀಶಂ ..... ತೋರೇ ॥ ೩ ॥

ವಿಷಯ : ವೆಂಕಟೇಶಮಹಿಮೆ.

ವಿಶೇಷ : ಶಿಥಿಲಪ್ರತಿ.

1625

ಕೆ. ಬಿ. ೪೩೪	**ವೇಣುಪುರದ ಕ್ಷತ್ರಿಯರ ವಂಶಾವಳಿ**	ಗದ್ಯ
೭.೯"×೬.೬"	?	೧೯ ನೇ ಶತಕ
೧-೩೪ ಪತ್ರ	೧೨ ಪಂಕ್ತಿ	೧೮ ಅಕ್ಷರ

ಆದಿ : ಶುಭಮಸ್ತು × × ಶ್ರೀ ವೇಣುಪುರದ ಕ್ಷತ್ರಿಗಳವರ ವಂಶಾವಳಿ—

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನಶಕ ವರುಷ ೧೪೨೧ ನೆ ಸಿದ್ಧಾರ್ಥಿನಾಮ ಸಂವತ್ಸರದ ಮಾಘ ಶುದ್ಧ ೧೦ ಲ್ಲು ದಿಗ್ವಿಜಯ ನಿಮಿತ್ಯವಾಗಿ ಚಿತ್ತೈಸಿದನ್ಥಾ ಭಾರದ್ವಾಜಗೋತ್ರ ಆಶ್ವಲಾಯನಸೂತ್ರ ಋಕ್ಶಾಖಾಧ್ಯಾಯಿಗಳಾದ ಯಾದವಕುಲತಿಲಕ ಶ್ರೀಮದ್ರಾಜಾಧಿರಾಜ ಪರಮೇಶ್ವರ ಶ್ರೀಮನ್ಮಹಾಮಂಡಲೇಶ್ವರ ಜಪಾದಿ ಕೋಳಾಹಳ ಪಸುಳೆ ಹನುಮ ಗರುಡ ಅರಸ ಖಂಡೇಯ ರಣಾಂಕ ಚಕ್ರೇಶ್ವರರಾದನ್ಥಾ ದ್ವಾರಕಿ ಪ್ರದೇಶದಿಂದ ದಯಮಾಡಿದನ್ಥಾ ಕೃಷ್ಣರಾಜ ವಡೆಯರು ವಿಜಯನಗರಕ್ಕೆ ಕೃಷ್ಣರಾಯರ ಬಳಿಯಲ್ಲಿ ಸ್ವಲ್ಪದಿವಸ ಇರುವಲ್ಲಿ × × × × ತಮ್ಮಕಡೆ ಮನುಷ್ಯರನ್ನು ಕಳುಹಿಸಿಕೊಟ್ಟು ಕಳಲೆ ಪಟ್ಟವನ್ನು ಕಾನ್ತಾ ವಡೆರೈಯ್ಯನವರಿಗೆ ಕಟ್ಟಿದರು.

ಅಂತ್ಯ : ೨೫೮ ವರುಷ ೧೯ ದಿನ ಮೇಲ್ಕಂಡ ೧೨ ಜನ ಕಳಲೆ ಪಟ್ಟವನ್ನಾಳಿದರು. ನಂತರ ಹೈದರನು ಮೈಸೂರಿಗೆ ಶೇರಿಸಿಕೊಂಡು ಇವರಿಗೆ ಮಾಸಾಶನ ೪೦೦ ವರಹಾ ನಗದು ೩೦೦ ವರಹಾ ದಿನಸಿ, ಹಸು, ಕಾವಲು, ತೋಟ, ಗದ್ದೆ, ಸರ್ವಮಾನ್ಯ ಗ್ರಾಮ ಸಹ ನಡಿಸುತ್ತಾ ಬಂದನು. ನಂತರ ಟಿಪ್ಪೂ ದಿವಸದಲ್ಲಿ ೨೦೦ ವರಹ ನಗದು ೩೦೦ ವರಹಾ ದಿನಸಿ, ಹಸು ಗ್ರಾಮ ವಗೈರೆ ನಡಸುತ್ತಾ ದಳತನ ಮೊಕೂಫ್ ಮಾಡಿದನು. ಬಹುಧಾನ್ಯ ಸಂವತ್ಸರದ ಆಶ್ವೀಜ ಬಹುಳ ೮ ಮಂಗಳವಾರ ಮಹಾರಾಜ ಶ್ರೀ ನಂಜರಾಜ ವಡೆಯರವರ ಕೊಮಾರ್ರು ವೀರರಾಜ ವಡೇಯರವರಿಗೆ ಆಳಿ॥ ಮಹಾಸ್ವಾಮಿಯವರ ಸನ್ನಿಧಾನದಲ್ಲಿ ಮೈಸೂರು ದಳತನಕ್ಕೆ ಉಡುಗೆರೆ ಅಗಿ ಇತ್ತು ವರುಷ ೮ ಶ್ರೀ ಮಂಗಳಮಸ್ತು ಶ್ರೀ.

ಕಳಲೆ ರಂಗಸ್ವಾಮಯ್ಯಂಗಾರ್ಯರಿಂದಾ ಚಕ್ರವರ್ತಿ ಶ್ರೀನಿವಾಸಾಚಾರ್ಯರು ತಂದ ಪುಸ್ತಕದಿಂದ ಕಾಪಿಯಾದದ್ದು.

ವಿಷಯ : ಕಳಲೆ ಅರಸರ ವಂಶಾವಳಿ.

ವಿಶೇಷ : ಸ್ಫುಟಾಕ್ಷರ. ಪ್ರತಿಯ ಕಾಲ 12-4-1921.

1626

ಕೆ. ಬಿ. ೧೯೫	**ವೇದಾಂತ ಡಿಂಡಿಮ**	ಶ್ಲೋಕ, ಟೀಕು
೭.೮"×೬.೩"	?	?
೧-೩೬ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ : ವೇದಾಂತ ಡಿಂಡಿಮಾಸ್ತತ್ವಮೇಕಮುದ್ ಘೋಷಿಯಂ ತತ್ ।
ಆಸ್ತಾಂ ಪುರಸ್ತಾತತ್ತ್ರೇಜೊ ದಕ್ಷಿಣಾಮೂರ್ತಿ ಶಬ್ದಿತಂ ॥ ೧ ॥
ಚತುರ್ಮುಖಮುಖಾಯಸ್ಯ ಮುಖಾಶಂ ಮುಖತಂ ಸದಾ ।
ಗೃಣಂತೋ ಕೇಯಯುರ್ನಾಕಂ ಗಣಾನಾಂ ತಂ ಹರಿಂ ಭಜೇ ॥ ೧ ॥
ಶ್ರೀ ಕೃಷ್ಣರಾಜ ಭೂಪಾಲ ಸಾರ್ವಭೌಮಪ್ರಚೋದಿತಃ ।
ವೇದಾಂತ ಡಿಂಡಿಮವ್ಯಾಖ್ಯಾಂ ಕರಿಷ್ಯೇ ಪ್ರಾಕೃತಾಕ್ಷರೈಃ ॥ ೨ ॥
ಪರಮ ಕಾರುಣಿಕರಾದ ಸದಾಶಿವ ಬ್ರಹ್ಮೇಂದ್ರರೆಂಬ ಯತೀಶ್ವರರು ಬ್ರಂಹ್ಮಜ್ಞಾನವೆನ್ನುವ ಪ್ರಕಾಶರಹಿತವಾದ ಸಂಸಾರವೆನ್ನುವ ಕತ್ತಲೆಯಲ್ಲಿ

ಅಂತ್ಯ : ಶ್ರೀ ಕೃಷ್ಣರಾಜ ಭೂಪಾಲ ಸಾರ್ವಭೌಮ ಪ್ರಚೋದಿತಂ ।
ವೇದಾಂತಡಿಂಡಿಮವ್ಯಾಖ್ಯಾಂ ಕೃತವಾನ್ ಕೃಷ್ಣನಾ ॥

× × × ×

ವೇದಾಂತಡಿಂಡಿಮ ಯಂದು ಪೆಸರುಳ ಗ್ರಂಥಾರ್ಥವನ್ನು ವಿಚಾರಿಸುವ ಸಜ್ಜನರು × × × × ಮೌನದಿಂದ ಈ ಭೂಭಾರದಲ್ಲಿ ಯಿರುವಂಥಾವರಾಗಲಿ ಯಂದು ಸದಾಶಿವಬ್ರಹ್ಮೇಂದ್ರರು ಪ್ರಾರ್ಥನರೂಪವಾದ ಯೀ ವೇದಾಂತಡಿಂಡಿಮಃ ಯನ್ನುವ ಗ್ರಂಥಕ್ಕೆ ಮಂಗಳಮಹಾಶ್ರೀ ॥ ಯಿತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಸದಾಶಿವ ಬ್ರಹ್ಮೇಂದ್ರ ವಿರಚಿತ ವೇದಾಂತಡಿಂಡಿಮ ಸ್ತೋತ್ರಂ ಸಂಪೂರ್ನಂ ॥

ವಿಷಯ : ವೇದಾಂತ.

ವಿಶೇಷ : ಮೋಡಿಲಿಪಿ.

1627

ಕೆ. ೪೨೯	**ವೇದಾಂತ ಪ್ರಕರಣ ನಿರ್ಣಯ**	ಶ್ಲೋಕ, ಗದ್ಯ
೧೬" × ೧.೫"	ಶಿವಯೋಗೀಂದ್ರ	?
೧–೬೦ ಪತ್ರ	೭ ಪಂಕ್ತಿ	೭೦ ಅಕ್ಷರ

ಆದಿ : ಶುಭಮಸ್ತು × × × ವೇದಾಂತಪ್ರಕರಣ ನಿರ್ಣಯದ ಆನಂದಕಲ್ಲೋಲ ಬರೆಯುವುದಕ್ಕೆ ನಿರ್ವಿಘ್ನಮಸ್ತು ॥
ವಾಚಃ ಪಾರಾವಾರಃ ಪ್ರಥನಮಹಿಮ್ನುಃ ಶ್ರುತಿತತೇ
ಪ್ರಸಿದ್ಧಂ ಯದ್ವಸ್ತು ಪ್ರಥಿತ ನವನೀತೋಪಮಮಭೂತ್
ತದದ್ವೈತಶ್ರಾಂತಃ ಪ್ರತಿಪದ.........ಶಿವಃ
ಪ್ರಣೀತಂ ಯದ್ವಸ್ತು ಪ್ರಥಯತಿ ಜಗನ್ನಿಶ್ಕೃತಿಕರಂ ॥ ೧ ॥

ತತ್ವಂ ಪದವಿವೇಕೋಕ್ತಿಮವಧೂತಃ ಸದಾಶಿವಃ ।
ಕುರುತೇ ಬಾಲಬೋಧಾಯ ಯಥಾ ವೇದಾಂತಪದ್ಧತಿಃ ॥ ೨ ॥
× × × ಆಶೀರ್ನನಮಸ್ಕ್ರಿಯಾವಸ್ತು ನಿರ್ದೇಶಃ ಹೀಗೆಂಬ ಶಾಸ್ತ್ರ ಸಮಯ ಉಂಟಾಗಿ ಯೀ ಮಹಾ ಗ್ರಂಥಾರಂಭದಲ್ಲಿ ವಸ್ತುನಿರ್ದೇಶ ಹೇಳಲ್ಪಟ್ಟಿತು.

ಅಂತ್ಯ : ಅವಾಙ್ಮನಸಗೋಚರವಹ ಪರಬ್ರಹ್ಮದಲ್ಲಿ ಆ ಅಹಂಕಾರವು ಸಮರಸವಾಯಿತೆಂಬುದೀಗ ರಹಸ್ಯ । ವರ್ಷೋಪಲವೆಂದರೆ ಆನಕಲ್ಲು ಯಂಬರ್ಥ ।
ಕಾರ್ಯೋಪಾಧಿರಯಂ ಜೀವಃ ಕಾರಣೋಪಾಧಿರೀಶ್ವರಃ ।
ಕಾರ್ಯಕಾರಣತಾಂ ಹಿತ್ವಾ ಪೂರ್ಣಬೋಧೋ ವಿಶಿಷ್ಯತೇ ॥
ಯಂದು ಅಭಿಮಾನಚೈತನ್ಯಗಳ ಏಕಾನೇಕವಿಚಾರ ಹೇಳಲ್ಪಟ್ಟಿತು. ॥
ಇತಿ ಶ್ರೀ ಕೈವಲ್ಯಾನ್ವಯಪ್ರವರ್ತಕ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪರಶಿವಪಾದಯುಗಕಮಲ ನೀ ರಾಜಹಂಸಾವಧೂತ ಶಿವಯೋಗೀಂದ್ರ ವಿರಚಿತ ವಾಕ್ಯೇ ಅಭಿಮಾನಚೈತನ್ಯ ಏಕಾನೇಕವಿಚಾರ ಪ್ರಕರಣಂ ಸಂಪೂರ್ಣಂ.

ವಿಷಯ : ವೇದಾಂತ.

ವಿಶೇಷ : ನಂದಿನಾಗರಿಲಿಪಿ. ಈ ಗ್ರಂಥಕ್ಕೆ 'ಆನಂದಕಲ್ಲೋಲ' ಎಂಬ ಮತ್ತೊಂದು ಹೆಸರಿದೆ.

1628

ಕೆ. ೩೫೫/೧೬	**ವೇದಾಂತವಿಚಾರ ಶ್ಲೋಕಗಳು**	ಶ್ಲೋಕ, ಟೀಕು
೮.೫" × ೧.೯"	ಮಾತಂಗ	?
೧೮೬–೧೮೭ ಪತ್ರ	೧೨ ಪಂಕ್ತಿ	೫೦ ಅಕ್ಷರ

ಆದಿ : ಶ್ರೀ ಮತಂಗ ಉವಾಚ.

ಗ್ರಂ ॥ ದೇಹಿನಾಂ ದೇಹನಂ ಯೋಗ ವಿಯೋಗಸ್ಸು ಪ್ರತೀರ್ಯತೇ ।
ಕುತಃ ಪ್ರಯಾತಿನಂ ತ್ಯಜ್ಯ ಕಸ್ಮಾದಾಗತ್ಯಯುಜ್ಯತೇ ॥
ಟೀ॥ ಯೆಲೆ ಸರ್ವೇಶ್ವರನೆ । ದೇಹಿನಾಂ । ಆತ್ಮರುಗಳಿಗೆ । ದೇಹನಂ ಯೋಗಃ । ದೇಹದೊಡತಣ ಕೂಟಟಾವಿಯೋಗಃ । ದೇಹದ ಅಗಲಿಕೆಯು । ಸುಪ್ರತೀರ್ಯತೆ । ಚೆಂನಾಗಿ ಕಾಲುಪಡುತ್ತಿದ್ದಿತ್ತು ॥

ಅಂತ್ಯ : ತಸ್ಮಾದನಾದಿಕಂ ಕರ್ಮವಾಯಾಪ್ಯೇವಮನಾದಿಕಂ ।
ತಥಾನಾದಿ ಶಿವಃ ಕರ್ತಾ ಸರ್ವಸ್ಯ ಜಗತಃ ಸ್ಥಿತಃ ॥

ಟೀ॥ ತಸ್ಮಾತ್ । ಅದು ಕಾರಣದ ದೆಸೆಯಿಂದ । ಕರ್ಮವನಾದಿಯಾಗ ದಿದ್ದರೆ । ವಿಚಿತ್ರಸೃಷ್ಟಿಯಾಗದಿದ್ದರೆ । ಕರ್ಮ । ಕರ್ಮವು । ಅನಾದಿಕಂ । ಅನಾದಿಯಾಗಿದ್ದಂಥಾದು । ಮಾಯಾಪಿ । ಮಾಯೆಯು । ಏವಂ । ಈ ಪ್ರಕಾರದಿಂದ । ಅನಾದಿಕಂ । ಅನಾದಿಯಾಗಿದ್ದಂಥಾದು । ತಥಾ । ಹಾಂಗೆ । ಸರ್ವಸ್ಯ ಜಗತಃ । ಸಮಸ್ತ ಲೋಕಕ್ಕೆ । ಕರ್ತಾ । ಕರ್ತೃವಾದ । ಶಿವಃ । ಪರಮೇಶ್ವರನು ।.ಅನಾದಿ । ಅನಾದಿಯಾಗಿ । ಸ್ಥಿತಃ । ಇದ್ದಂಥಾತನು ॥ ೫ ॥

ವಿಷಯ : ಈಶ್ವರನ ಅನಾದಿಸ್ಥಿತಿ.

ವಿಶೇಷ : ಕೆ. ೩೫೫/೧-೭ ರ ವರೆಗೆ ಮತ್ತು ಕೆ. ೩೫೫/೧೪, ೧೫, ೧೭ ಲಿಂಗಾಂಗ ಸಂಬಂಧವೇ ಮೊದಲಾದ ಸಂಸ್ಕೃತ ಸ್ತೋತ್ರಗ್ರಂಥಗಳೂ, ಕೆ. ೩೫೫/೮-೧೩ ರ ವರೆಗೆ ಶ್ರೀರುದ್ರಭಾಷ್ಯ ಟೀಕು ಮೊದಲಾದ ಟೀಕಿರುವ ಗ್ರಂಥಗಳೂ ಇವೆ.

1629

ಕೆ. ಬಿ. ೧೭೮	**ವೈದ್ಯಕಂದ**	ಕಂದ
೮.೧"×೬.೭"	ಬೊಮ್ಮಯ್ಯ	೧೮ ನೆಯ ಶತಕ
೧-೮೩ ಪತ್ರ	೧೮ ಪಂಕ್ತಿ	೨೧ ಅಕ್ಷರ

ಆದಿ : ಮಂಗಳ ಸುಶ್ರೀ ಭಂಡೆಯ ರಂಗಗೆ- ಸರ್ವೇಶ ಸರ್ವ ಜಗದೋದ್ಧಾರಗೆ-
ಮಂಗಳ ಕರುಣಾಂಬುಧಿಕರ ರಂಗಗೆ-ಭಕ್ತಾಬ್ಜ ಹೃದಯಾಬ್ಜಭೃಂಗಗೆ ಸತತಂ ॥ ೧ ॥

ಭಾರದ್ವಾಜ ಸುಗೋತ್ರ
ಧಾರಕ ಋಗ್ವೇದ ಬಡಗನಾಡಿನ ಕನ್ನಡ
ಬೇಡಗಧಿಕ ಹಂಪೆಯ
ಚಾರು ಕ್ಷೇತ್ರತಿಗೆ ಪಶ್ಚಿಮದೊಳ್ ಪೊಪ್ಪುವದಂ ॥ ೨ ॥
ಕೊಟ್ಟೂರು ಶೀಮೆಯೊಳಗಣ
ಇಟ್ಟಿಗೆಯ ಕುಲಕರ್ಣಿ ಸೂರ್ಯರಾಯನ ಕುವರನು
ಶ್ರೇಷ್ಠನು ಹನುಮಪ್ಪದಾಸನ
ಪಟ್ಟದಸತಿ ಭಾಗಾಂಬೆಯ ಉದರಾಂಬುಧಿಯೊಳ್ ॥ ೩ ॥

ಪುಟ್ಟಿದೆನು ಬ್ರಹ್ಮನಾಮದಿ
ಶ್ರಿಷ್ಟಿಯೊಳುದ್ಧರಿಸಿ ಹಿರಿಯ ಗುರು ಕಾರುಣ್ಯದಿ
ಕಟ್ಟಿದ ಮತಿಇಂದ ನುತಿಸಲ್
ಪಟ್ಟೆನು ಶ್ರೀ ಭಂಡೆವಾಸಾ ರಂಗನ ಪದವಂ ॥ ೪ ॥

ಶ್ರೀಮದ್ಭಂಡೆಯ ರಂಗನ
ಪ್ರೇಮದಿ ವೈದ್ಯೋಪಯೋಗಂಗಳ ಕಂನಡದಿಂ
ಭೂಮಿಯೊಳ್ ಪೇಳ್ವೆ ಬುಭಜನ
ಸ್ತೋಮಗಳಾನಂದದಿಂ ನುತಿಸುವ ತೆರದಿಂ ॥ ೫ ॥

ಚಾರಕ ಸುಶ್ರುತ ಬಾಹಟ
ವಾರತಿ ಸ್ಫುಟ ಸಾರಂಗಧರ ವೃಂದಾದಿಗಳೊಳ್
ಕಿರಿದಾದಯೋಗ ಬಹುಗುಣ
ದಿರವಂ ತಿಳಿದುಸುರ್ದೆ ಕಲ್ಪನೆಗಳಿಲ್ಲವಿದರೊಳ್ ॥ ೬ ॥

ಅಂತ್ಯ : ಅರಿಶಿನವು ಜ್ಯೆಷ್ಠಮಧು ಮರ
ದರಶಿನವಂ ಬಾಳೆಯಿಪ್ಪೆಯ ಹುವ್ವಾಪಿಸಿನ ಬಿ
ತ್ತರದೀವುದಕ್ಕೆ ಕಚ್ಚಲಿ
ಪರಿಹರ ತರುಣಿಯರ ಸೂತಕದ ರಕುತಂ ॥ ೬೧೬ ॥

ಇತಿ ಶ್ರೀ ಸೂರ್ಯರಾಯವಂಶೋತ್ಪಂನೇನ ಶ್ರೀಮದ್ಬಂಡೇ ರಂಗಪದ ಪರಿಚರಣಧುರೀಣ ಬೊಮ್ಮಯ್ಯಾಮರ್ತ್ಯ ವಿರಚಿತಮಪ್ಪ ವೈದ್ಯಕಂದ ಪದ್ಯಕ್ಕು ಮಂಗಳಮಹಾಶ್ರೀ.

ವಿಷಯ : ವೈದ್ಯಶಾಸ್ತ್ರ.

ವಿಶೇಷ : ಎರಡು ವಿಧವಾದ ಲಿಪಿ ಇದೆ. ಪ್ರತಿಯ ಕಾಲ ೧೮೮೫. ಪ್ರತಿಕಾರರು ಶ್ರೀಕಂಠಯ್ಯನವರು. ೨೮ ನೆಯ ಪತ್ರ ಖಾಲಿಯಿದೆ.

1630

ಕೆ. ೪.೨೫	**ವೈದ್ಯಗ್ರಂಥ**	ಶ್ಲೋಕ, ಟೀಕು
೧೪.೬"×೧.೫"	?	?
೧–೧೬೧ ಪತ್ರ	೭ ಪಂಕ್ತಿ	೫೫ ಅಕ್ಷರ

ಆದಿ : ಶುಭಮಸ್ತು × × ×
ಹರಿಂ ಶಿವಂ ವಿದಾತಾರಂ ತತ್ಪತ್ನೀಸ್ತತ್ಸುತಾನ್ ಗುರೂನ್
ನಮಸ್ಸಮಸ್ತತ್ಪತ್ಯೂಹ ಶಾಂತಯೇ ಮಂಗಳಾಯ ಚ
ಆದೌ ಸರ್ವೇಷು ರೋಗೇಷು ನಾಡೀ ಜಿಹ್ವಾಂ ಚ ಮೂತ್ರಕಂ
ಪರೀಕ್ಷಯೇತ್ಸ್ವಯಂ ವೈದ್ಯಸ್ತು..............................‖

.....ಸಮಸ್ತ ರೋಗಗಳಲ್ಲಿ ಮೊದಲು ವೈದ್ಯನು ನಾಡಿಯನ್ನು ಜಿಹ್ವೆಯನ್ನು ಮೂತ್ರವನ್ನು ಪರೀಕ್ಷಿಸುವದು । ಆನಾಲ್ ಜಿಹ್ವೆ ಮೂತ್ರಗಳ ಲಕ್ಷಣಂಗಳ ಪೇಳಲ್ಪಡುತ್ತಿದ್ದಾತು ।

ಕರೇತು ದಕ್ಷಿಣೇ ಪುಂಸಾಂ ವಾಮಹಸ್ತೇ ತು ಯೋಷಿತಾಂ ।
ಪ್ರಕೋಷ್ಠ ಮಣಿಬಂಧ........ಮಂಗುಳೀವ ತ್ರಿಪೀಡ್ಯತ್ಯೇ ‖
ಪುರುಷರಗಳಿಗೆ ಬಲದಕ್ಕೈ ಹೆಬ್ಬೆರಳ ಮೊದಲಲ್ಲಿ × × × × ಈ ರೀತಿಯಲ್ಲಿ ನೋಡುವುದು ‖

ಅಂತ್ಯ : ಪ್ರವಾಳಭಸ್ಮಂ—ಹವಳವನ್ನು ತಂದು ನಿಂಬೆಹುಳಿಯಲ್ಲಿ ೩ ದಿನ ನೆ........ಲೆ ಅದರನ್ನು ಸರದಾಳೀರಸ ಹಿಂಡಿ ಕೆಳಕೆ ಮೇಲಕ್ಕೆ ಆ ಸರದಾಳಿಸಿಯೆಣ್ಣೆ ದರೆಯನ್ನು ಮಡಗಿ ಗಜಪುಠ ಹಾಕುವದು. ಆಮೇಲೆ ಆ ಹವಳವನ್ನು ತೆಗದು ನಿಂಬೇ....ಳಿ ರಸ ಬಿಟ್ಟು ಅರದು ಬಿಲ್ಲೆ ಮಾಡಿ ವಣಗಿಸಿ ಪುನಹ ಆಶಿದರೆ ಕೆಳಕ್ಕೆ ಮೇಲಕ್ಕೆ ಮಡಗಿ ಪುನಹ ಗಜಪುಠಾ ಹಾಕಿ ಈ ಮೇರೆ ಮೂರು ಪುಠ ಹಾಕಿದರೆ ಭಸ್ಮವಹುದು. ಇದಕ್ಕೆ ಅನುಪಾನ । ನಿಂಬೆ ಹುಳಿಯಲ್ಲಿ ಶೂಲೆ ಪರಿ........ಲೆ ರಸದಲ್ಲಿ ಖಾಸ ಪರಿಹರ । ಉಪ್ಪಿಹಣ್ಣಿನ ರಸದಲ್ಲಿ ಶ್ವಾಸ ಪರಿಹರ । ಖರ್ಜೂರ ಅತಿಮಧುರ ತೇದು ಅದರೊಳಗೆ ಕೊಟ್ಟರೆ ಕ್ಷಯ ಪರಿಹರವಹುದು । ರಸ ಜಂಬು ಬಾದಾಮಿ ತಿರಳು ೧, ಕಾಗಮಾರಿಬೀಜದ ತಿರುಳು ೧, ಭವಂತಿಬೀಜ ೧, ಖಚೋರ ೧, ಕರ್ಪೂರ ‖ ಬೆಣ್ಣೆ ೧ ಪಾವಿನಲ್ಲಿ ಅದನ್ನು ನಾಲ್ಕುಜಾವ ಕಲ್ಪತ್ತಿನಲ್ಲಿ ಮರ್ದನ ಮಾಡಿ ಕ ಜಿ........

ವಿಷಯ : ರೋಗಗಳಿಗೆ ಔಷಧ.

ವಿಶೇಷ : ಶಿಥಿಲಪ್ರತಿ. ಅಸಮಗ್ರ. ಗ್ರಂಥಾಕ್ಷರ. ಆರಂಭದಲ್ಲಿ ಕ್ರಮಾಂಕ ವಿಲ್ಲದ ಔಷಧಗಳನ್ನು ಬರೆದಿರುವ ಬೇರೆ ಬೇರೆ ಅಳತೆಯ ಕೆಲವು ಓಲೆಗಳಿವೆ. ಕೊನೆಯಲ್ಲಿರುವ ಪ್ರವಾಳಭಸ್ಮದ ವಿಷಯವೇ ೧೩೮ ನೆಯ ಓಲೆಯಲ್ಲೂ ಇದೆ. ಆದಿಯಲ್ಲಿರುವ ನಾಡೀ ವಿಷಯದ ಶ್ಲೋಕವು ಹಾರೀತಮುನಿಪುಂಗವ

ಬ್ರಹ್ಮಚಾರಿ ವಿರಚಿತವಾದ ನಾಡೀತಂತ್ರದ ಆರನೇ ಅಧ್ಯಾಯದ ಶ್ಲೋಕವಾಗಿದೆ. ಇದನ್ನು ಕೆ ೫೩೬ ಓಲೆಗ್ರಂಥದ ೪೯ ನೆಯ ಪತ್ರದಲ್ಲಿ ಕಾಣಬಹುದು.

1631

ಕೆ. ೪೫೯	**ವೈದ್ಯಚಿಂತಾಮಣಿ** (ಸಟೀಕು)	ಶ್ಲೋಕ, ಟೀಕು
೨೦.೩"×೨.೪"	ವಲ್ಲಭೇಂದ್ರ	?
೧–೬೬ ಪತ್ರ	೧೦ ಪಂಕ್ತಿ	೬೫ ಅಕ್ಷರ

ಆದಿ : ವೈದ್ಯಚಿಂತಾಮಣಿ ಪ್ರಾರಂಭಾ—ಶ್ರೀನಾಥಾ................ವಾಣೀನಾಥಂ ಬ್ರಹ್ಮನು । ಸರಸ್ವತಿ-ಸರಸ್ವತಿಯನು । ದುರ್ಗಾ–ದುಗ್ಗಿ್ಗಯಂನ್ನು । ವಟುಕ-ಭೈರವವನು । ಹೇರಂಭಾ ವಿನಾಯಕನನು । ಇಷ್ಟು ದೇ...........ದ್ವೈದ್ಯು ಪಿತಾಮುಹಂ ।

ಅಮರೇಶ್ವರಭಟ್ಟಸ್ಯಾ ಪ್ರಿಯಾಸೂನು ಗುಣೋಂನ್ನತಂ ।
ವಲ್ಲಭೇಂದ್ರಂ ವಿರಚಿತಂ ಜನಾನಾಂ ಹಿತಕಾರಣಂ ॥

ವೈದ್ಯಚಿ...............ಡೈನಟು ವಂಟಿವಾಡು ಜಗದ್ವೈದ್ಯ ಪಿತಾಮುಹಂ । ಭೂಮಿ ಲೋಪಲಗಲ ವೈದ್ಯುಲಕಲ್ಲಾನು । ತಂಡ್ರಿ ಐನಟುವಂಟಿ ಅಮರೇಶ್ವರಭಟಸ್ಯ........ಅಧಿಕವ್ಯೈನ ಗುಣವತ್ತುಂಡು ವಲ್ಲಭೇಂದ್ರಂ ವಿರಚಿತಂ–ವಲ್ಲಭೇಂದ್ರಡನೆ ಪೆರಗಲ ಆತಡು × × × × ನಾಡಿ ಲಕ್ಷಣಾ ॥ ಅಂಗುಷ್ಟಮೂಲಮಾಶ್ರಿತ್ಯ ಅಂಗಳತ್ರಯಮಾ ಕಂ ಯವಸ್ಯ ಬೀಜಮಾತ್ರ ....ಗೆ ನಾಡಿಯು ಸರ್ವಾಂಗಮಂ ವ್ಯಾಪಿಸಿಕೊಂಡಿಹುದು ॥

ಅಂತ್ಯ : ತಾಳೀಸಚೂರ್ನ ॥ ತಾಳೀಸಂ ತಿಂತ್ರಿಣೀ ಕಂಚಾ । ಚಾತುರ್ಜಾತ ಕಟುತ್ರಯಂ ತವಕ್ಷೀರಂ ಚ ವ್ಯದ್ವೀಕ ಖರ್ಚೂರಂಚ ಸುದು...............॥

ವಿಷಯ : ವೈದ್ಯಶಾಸ್ತ್ರ.

ವಿಶೇಷ : ಅಸಮಗ್ರ ಮತ್ತು ಶಿಥಿಲಪ್ರತಿ. ಕೆಲವು ಪತ್ರಗಳು ಹುಳುವಿಗೆ ತುತ್ತಾಗಿವೆ ಮತ್ತೆ ಕೆಲವು ಮುರಿದಿವೆ. ಆರಂಭದ ಮೂರು ಶ್ಲೋಕಗಳಿಗೆ ತೆಲುಗಿನಲ್ಲಿ ಟೀಕಿದ್ದು ಉಳಿದ ಶ್ಲೋಕಗಳಿಗೆ ಕನ್ನಡದ ಟೀಕಿದೆ. ೩ ನೆಯ ಪತ್ರ ಎರಡಿವೆ. ೧೦ ನೆಯ ಪತ್ರದಲ್ಲಿಯೇ ೧೧ ನೆಯ ಕ್ರಮಸಂಖ್ಯೆಯನ್ನೂ ಬರೆದಿದೆ.

1632

ಕೆ. ೪೨೮ **ವೈದ್ಯದ ಪುಸ್ತಕ** ಶ್ಲೋಕ, ಟೀಕು

೧೮.೩"×೧.೩" ? ?

೧–೧೧೭ ಪತ್ರ ೫ ಪಂಕ್ತಿ ೭೦ ಅಕ್ಷರ

ಆದಿ : ಶುಭಮಸ್ತು × × × ಹುಚ್ಚುನಾಯಿ ಕಚ್ಚಿದ್ದಕ್ಕೆ.
ಉನ್ಮತ್ತಶ್ವಾನದಷ್ಟೇನ ಕುಮಾರೀದಲ ಸೈಂಧವೈಃ ।
ಕ್ಷಾರಯೇತ್ಸಪ್ತವಾರಂತು ಸರ್ವಂ ಗ್ರಹಹರಂ ಪರಂ ॥
ಟೀಕು ॥ ಲೋಳಿಸರದ ಹಲಿ ಸೈಂಧವಲವಣ ಯಿಾ ೨ ನು ಪ್ರಾತಃಕಾಲದಲ್ಲಿ ಯೇಳು ದಿನ ಕೊಡಲು ಹುಚ್ಚು ಬರುವುದಿಲ್ಲ । ಸೈಂಧವಲವಣ ೧ ವರಹ ತೂಕ ಲೋಳಿಸರದ ಹಲಿ ೧ ದುಡ್ಡು ತೂಕ । ಶೀಘ್ರದಲ್ಲಿ ಮುಟ್ಟಾಗು ದಕ್ಕೆ ॥

ಅಂತ್ಯ : ಸೂಳೆಹುಣ್ಣು ಮೊದಲಾದ ಸಕಲ ವ್ರಣಗಳಿಗೆ ಮುಲಾವಿನ ಕಪ್ಪು ಮಾಡುವ ಕ್ರಮ ॥ ಕಪ್ಪಿಗೆ ವರಹಾ ತೂಕ ೧ ಪಚ್ಚೆ ತುತ್ತ ವರತೂಕ ಅರೆ ಎಲಗಪ್ಪುರಿ ವರಹತೂಕ ೧ ಪಾದರಸ ವರಹತೂಕ ಅರೆ ಈ ಪಾದರಸವನ್ನು ವೀಳ್ಯೆದೆಲೆ ರಸದಲ್ಲಿ ಮರ್ದಿಸಿದ್ದು × × × × ಯಿಷ್ಟಂನ್ನು ಸಂಣನಾಗಿ ಮರ್ದಿಸಿ ಹಸುವಿನ ಬೆಣ್ಣೆಯಲ್ಲಿ ಕಲಸಿಕೊಂಡು ಕಂಚಿನ ಹರಿವಾಣದಮೇಲೆ ತಾಂಮ್ರದ ಚಂಬಿನಲ್ಲಿ ಮರ್ದಿಸಿ ತಾಂಮ್ರದ ಭರಣಿಯಲ್ಲಿ ಇರಿಸಿಕ್ಕೊಂಡು ಕೋಳೀಗರಿಯಲ್ಲಿ ತೊಡೆಯಲು ಸಕಲವ್ರಣಹರವಾಗುವದು ಶ್ರೀ ಶಕುನಿ ವೆಂಕಟೇಶಾರ್ಪಣಮಸ್ತು ॥

ವಿಷಯ : ವೈದ್ಯಶಾಸ್ತ್ರ (ಔಷಧಿಗಳನ್ನು ಮಾಡುವ ವಿಧಾನ)

ವಿಶೇಷ : ನಾಗರಿಲಿಪಿ. ಲಿಪಿಯು ಸುಂದರವಾಗಿದೆ.

1633

ಕೆ. ೪೩೩ **ವೈದ್ಯದ ಪುಸ್ತಕ** ಶ್ಲೋಕ, ಟೀಕು

೧೧"×೧.೪" ? ?

೧–೧೫೦ ಪತ್ರ ೭ ಪಂಕ್ತಿ ೫೫ ಅಕ್ಷರ

ಆದಿ : ಶ್ರೀ × × ವೈದ್ಯದ ಪಸ್ತುಕ ಬರೆಯುವುದಕ್ಕೆ ನಿರ್ವಿಗ್ನಮಸ್ತೂ ॥
ನಾಡಿ ಪರೀಕ್ಷೆ ॥ ಸ್ತ್ರೀನಾಡಿಯ ಪರೀಕ್ಷೆ ಸ್ವಸ್ತನನಾಡಿಯಪರೀಕ್ಷೆ ॥

ಗ್ರಂಥಾ ॥ ಸರ್ಪಿಜಲೋಕದಿಗತಿಂ ವದಂತಿ ವಿಭುದಾ ।
ಪಭಂಜನೆ ನಾಡಿವಿಕ್ರ್ತೇ ಚ ಕಕಲಾವಕನುಂ ॥
ಮಂಡುಕಗತಿವಿದು ಸುಧಿಯಃ । ರಜಹಂಸಮಯೂರಾಣಾಂ ।
ಪಾರವತ ಕಪೋತಯೋಃ ॥
ಕುಕ್ಕುಟಸ್ಯ ಗತಿಂ ದಂತಿ ದಮನಿ ಕಪಸಾಗ್ನಿನಿ ।
ಮಹಂ ಸರ್ಪ್ಪಗತಿಂ ನಾಡಿ ಮುಹುರ್ಭೇಕಗತಿಂ ದತಃ ।
ವಾತಪಿತ್ತದ್ವಯೋದ್ಭೂತಂ ಪ್ರವಗತಂತಿ ಲಕ್ಷಣಂ ॥

ಟೀಕು ॥ ಸರ್ಪನ ನಡೆಹಾಗೆ ನಡೆವುದು । ಕಪ್ಪೆ ಮರ್ಯಾದೆಯಲ್ಲಿ ನಡೆದರೆ ವಾತಪಿತ್ತನಾಡಿ । ಸರ್ಪನ ಹಾಗೆ ಹಂಸೆಯ ಹಾಗೆ ನಡೆದರೆ ವಾತಶ್ಲೇಷ್ಮ ನಾಡಿಯೆಂದರಿವುದು × × × × × ಯಿಡಾ । ಪಿಂಗಳ । ಸುಷಂಮ್ನ । ಶಂಕಿನಿ । ಕಹ್ಯಗಂದಾರಿ । ಗಜ । ಸಿಂಹ ಇವು ೮ ನಾಡಿ ಹೆಸರುಗಳೂ ॥

ಅಂತ್ಯ : ಸೊನಬು ಹುಂಣಿಗೆ । ಯಿಂಡಗದ ಚಿಗರತಂದು ಸಂಣ್ಣನಾಗಿ ಅರೆದೂ ಹಸುವಿನ ಬೆಣ್ಣೆಯಲ್ಲಿ ಮರ್ದಿಸಿ ಹರಿವಾಣದಮೇಲೆ ಹಾಕಿ ತಾಂಬ್ರದ ಚಂಬಿನಲ್ಲಿ ಮರ್ದಿಸಿ ೨ ದಿನ ಲೇಪಿಸುವದು । ಮೂರುದಿನದಮೇಲೆ ಸೀಗೇಕಾಯಬಿಟ್ಟು ನೀರಲ್ಲಿ ತೊಳೆವುದು । ಆರಿದ ಮೇಲೆ ಲೇಪನವ ಮಾಡುವುದು । ಆ ಹುಂಣು ಮಾಣುವದೂ ॥ ವೈದ್ಯ ಸಂಪೂರ್ಣ ಮಂಗಳ ಮಹಾಶ್ರೀ ॥ ಸನ್ ೧೮೬೯ ನೆ ಯಿಸವಿಗೆ ಸರಿಯಾದ ಶುಕ್ಲ ಸಂವತ್ಸರದ ಪುಷ್ಯ ಬ ೧೨ ಲ್ಲು ಹಂಗಳದಲ್ಲಿ ಯಿರುವ ಪುಣಜೂರು ಐಯನವರಿಗೆ ಬಸವಟ್ಟಗೆ ಉಪಾದ್ಯರ ನಂಜುಂಡ್ಯೆಯನು ಬರೆದುಕೊಟ್ಟ ವೈದ್ಯದ ಪುಸ್ತಕಕ್ಕೆ ಜಯಮಂಗಳ ಮಹಾಶ್ರೀ.

ವಿಷಯ : ರೋಗಗಳು ಮತ್ತು ಅವುಗಳಿಗೆ ಔಷಧಗಳು.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಕೆಲವು ಓಲೆಗಳನ್ನು ಹುಳು ತಿನ್ನಲು ಪ್ರಾರಂಭಿಸಿ ಒಂದೆರಡೆಡೆಗಳಲ್ಲಿ ರಂಧ್ರಗಳಾಗಿವೆ. ೩೩ ಮತ್ತು ೩೪ ನೆಯ. ಪತ್ರಗಳ ಮಧ್ಯೆ ಮತ್ತೊಂದು ಪತ್ರ ಸೇರಿದೆ. ೫೯ ನೆಯ ಪತ್ರ ಲುಪ್ತ. ೧೦೬, ೧೩೭ ನೆಯ ಪತ್ರ ಎರಡೆರಡಿವೆ. ಗ್ರಂಥದ ಕೊನೆಯಲ್ಲಿ ೧೪ ಮತ್ತು ೨೬ ಸಂಖ್ಯೆಯಿರುವ ಬೇರೆ ಎರಡು ಪತ್ರಗಳಿವೆ.

1634

ಕೆ. ೧೬೪/೧	**ವೈದ್ಯ ನಿಘಂಟು**	ಪ್ರತಿಪದಗಳು
೨೦.೫"×೨.೨"	?	?
೧–೪೫ ಪತ್ರ	೧೦ ಪಂಕ್ತಿ	೭೦ ಅಕ್ಷರ

ಆದಿ : ಅಳಿಷ್ಠಃ । ತಿಲಕವೃಕ್ಷ । ಅಳಿಕಾ । ಬಳ್ಳಿಹರುವೆ । ಅಳಿಕಂ । ಬಳ್ಳಿ ಸೊಂಡೆ । ಅಳಕಃ । ಗರುಗಾ । ಅಲಸಾ । ಬಿಂಡ್ಲುದಾರೆ । ಅಕ್ಷಿ । ನರುವಂಜಿ । ಅಲಾಜ್ಯಂ । ವಣಗಿದವುರಾ । ಅಲಾಬುಃ । ಸೋರೆ । ಕಹಿಸೋರೆ ।

ಅಂತ್ಯ : ಕ್ಷೇತ್ರಸಂಭೂತ । ಗಂಜಳಿಕೆಯ ಹುಲ್ಲು । ಕ್ಷೇತ್ರವಿನಾಸಿನಿ । ಕುರುಟಿಗೆ । ಕ್ಷೇದಾ । ಕಹಿಹೀರಾ । ಕ್ಷೌದ್ರೇಯಂ । ಜೇನಮೇಣ । ಕ್ಷೌದ್ರೇಜ । ಜೇನಶರ್ಕರೆ । ಕ್ಷೌದ್ರಪ್ರಿಯಃ । ನೀರಿಪ್ಪೆ । ಕ್ಷೌದ್ರದಾತು । ಹೇಮ ಮಕ್ಷಿಕಾ । ಕ್ಷೌದ್ರಶರ್ಕ್ಕರಾ । ಜೇನಶರ್ಕರೆ ॥

ನಂದನ ಸಂವತ್ಸರದ ಕಾರ್ತಿಕ ಶು ೩ ಲ್ಲು ಕಟಿಗೆ ಸೇರುವೆಗಾರ್‍ರು ಪುಟಂ ಣೈಯ್ಯನವರಿಗೆ । ಕಟಗೆ । ಪಟ್ಟಣದ ವೆಂಕಟೈಯನ ಮಗ ತಿಂಮೈಯನು ಬರೆದುಕೊಟ್ಟ ಅಕಾರಾದಿ ನಿಗಂಟು ಪುಸ್ತುಕಕ್ಕೆ ಜಯಮಂಗಳ ಮಹಾಶ್ರೀ॥

ವಿಷಯ : ವೈದ್ಯಕೋಶ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಪ್ರತಿ ಪಕ್ಕವನ್ನೂ ಒಂಬತ್ತು ವಿಭಾಗಗಳನ್ನಾಗಿ ಮಾಡಿ ಒಂದೊಂದು ಭಾಗದಲ್ಲಿ ಒಂದು ಪದದ ಕೆಳಗೆ ಮತ್ತೊಂದು ಪದವನ್ನು ಅಚ್ಚಿನ ನಿಘಂಟಿನ ಪುಸ್ತಕದ ಕ್ರಮದಲ್ಲಿ ಬರೆದಿದೆ. ಇದೇ ಕಟ್ಟಿನಲ್ಲಿ ದ್ರಾಕ್ಷಾದಿ ಚೂರ್ಣವೆಂಬ ಮತ್ತೊಂದು ಗ್ರಂಥ ಕೊನೆಯಲ್ಲಿದೆ.

1635

ಕೆ. ೪೪೨/೨	**ವೈದ್ಯನಿಘಂಟು** (ಸಟೀಕು)	ಶ್ಲೋ, ಕನ್ನಡ ಅರ್ಥ
೧೫.೧×೨	?	?
೧-೪ ಪತ್ರ	೧೩ ಪಂಕ್ತಿ	೧೦೦ ಅಕ್ಷರ

ಆದಿ : ಅಮೃತವಲ್ಲಿ । ಭಿಂನಾಭಿಂನ್ನೋದ್ಭವಾ । ಅಮೃತಲತಾ । ಧಾರಾ । ಸೃತಾ । ಶೈವೋಕ್ತಾ । ವಯಸ್ತಾ । ಮಂಡಲೀ । ಸೋಮಾ । ಯಿಾ ೧೦ ಅಮರದ ಬಳ್ಳಿ.

ಗುಡೂಚ್ಯಂ ಸ್ವರಸೇ ತಿಕ್ತಾ ಕಾಷಾಯೋಪ ಗುರುಸ್ತಥಾ ।
ತ್ರಿದೋಷಜಂತುರಕ್ತಾಮಕುಷ್ಠ ಜ್ವರಹರೋ ಮತಾ ಗುಣ ॥ ೧ ॥
ಶುಕ್ಲ ಕಂದಾಭಂಗುರಾ ಶ್ಯಾಮಕಂದಾ ಉಪವಿಷಾ ।
ಪ್ರೋಕ್ತಾಶ್ಚೈತದಚಾಚ್ಛೈವ ವಿರೂಪಾ ಘುಣವಲ್ಲಭಾ ।

ಅರುಣೀ ಚ ತಥಾ ಜ್ಞೇಯಾ ಸ್ಮೃತಾ ಮಾರೀಚ ಶೃಂಗಿಕಾ ||
ಯಿಾ ೧೦ ಅತಿಬಜೆ ||೨||

ಅಂತ್ಯ : ತ್ರಾಂತ್ರಿ ಕಫ ಪಿತಾಸ್ರು ಪ್ಲೀವಾ ಗುಲ್ಮ ಜ್ವರೋಪಹ |
ರಕ್ತಪಿತ್ತಶ್ರಮಚ್ಛರ್ದಿ ವಿಷಘ್ನಂ ತಿಕ್ಷ್ನಮಲ್ಲಲಂ || ೧೭೯ ||
ತ್ರಾಯಮಾಣರಸೆ ತಿಕ್ತಾ ಕಷಾಯ ಮಧುರಾಟಿತಃ |
ಕಫ ಪಿತ್ತ ಹರಾ ಜ್ಞೇಯಾ ಕೋಷ್ಟ ರಕ್ತಹರಾ ಮತಾ || ೧೮೦ ||
ಶ್ರೀಗುರುಬಸವಲಿಂಗಾಯ ನಮಃ ||

ವಿಷಯ : ವೈದ್ಯನಿಘಂಟು.

ವಿಶೇಷ : ಆರಂಭ ಅಂತ್ಯಗಳು ಉಕ್ತವಾಗಿಲ್ಲವಾದರೂ ೧ ರಿಂದ ೧೮೦ ಕಾರಿಕೆಗಳು ಇದ್ದು ಕೊನೆಯಲ್ಲಿ ಶ್ರೀಗುರುಬಸವಲಿಂಗಾಯನಮಃ ಎಂದು ಪತ್ರ ಖಾಲಿ ಯಿರುವುದರಿಂದ ಸಂಗ್ರಹಿಸಿರುವುದೇ ಇಷ್ಟು ಎಂದು ತಿಳಿಯುತ್ತದೆ. ಇದರೊಂದಿಗೆ ರಾಜೇಂದ್ರವಿಜಯಪ್ರಬಂಧ, ನಾನಾರ್ಥರತ್ನಮಾಲಾ (ಸಂಸ್ಕೃತ), ಇಂದ್ರದೀಪಿಕಾನಿಘಂಟು, ಶಬ್ದಾನುಶಾಸನ, ಶಬ್ದಮಣಿದರ್ಪಣ ಎಂಬ ಇತರ ಗ್ರಂಥಗಳಿವೆ.

1636

ಕೆ. ಎ. ೧೧೮	**ವೈದ್ಯನಿಘಂಟು**	ಪ್ರತಿಪದಗಳು
೧೧.೧″×೮.೭″	?	?
೬೦ ಪತ್ರ	೨೩ ಪಂಕ್ತಿ	೨೫ ಅಕ್ಷರ

ಆದಿ : ಶ್ರೀಃ—ಅಂಗಾರವಲ್ಲೀ–ಭಾರಂಗಿ. ಅಂಗಾರಧೂಮ–ಇಲ್ಲಣ. ಅಜನಿ–ಕಣಿಗಿಲು. ಅರ್ಜಕ–ಬಿಳಿ ಕಕ್ಕೊರಳೆ. ಅರುಣಾರಿಪು–ಸುರಸುರಕಿ. ಅಂಜನಿಕಾ–ಯೆಕ್ಕೆ. ಅಜಸಾರ–ಯಲೆಕಳ್ಳಿ–ದೊಡ್ಡಿ ಪತ್ರೆ.

ಅಂತ್ಯ : ಕ್ಷುದ್ರ–ನೆಲಗುಳ್ಳ, ಕ್ಷುದ್ರಖುಗ–ಭದ್ರಮುಸ್ತೆ, ಕ್ಷುದ್ರವರ್ಷಾಭೂ–ಬಿಳಿ ಕುರುಜೆ | ಕ್ಷುದ್ರವಾರ್ತಕೀ–ನೆಲಗುಳ್ಳ | ಕಾಡುಇಟ್ಟೆ | ಕ್ಷ್ನುಗಕ–ಮುಗ್ಗಾರೆ | ಕ್ಷುದ್ರೇಲಾ–ಸಣ್ಣಯಾಲಕ್ಕಿ, ಕ್ಷುದ್ರಸಹ್ನ–ಏಲಕ್ಕಿ.

ವಿಷಯ : ವೈದ್ಯಶಾಸ್ತ್ರಕ್ಕೆ ಸಂಬಂಧಪಟ್ಟ ಸಂಸ್ಕೃತ ಪದಗಳಿಗೆ ಕನ್ನಡ ಪ್ರತಿ ಪದಗಳು.

ವಿಶೇಷ : ಪದಗಳನ್ನು ಅಕಾರಾದಿಯಾಗಿ ಕೊಟ್ಟಿದೆ. ಪತ್ರಗಳ ಕ್ರಮಸಂಖ್ಯೆಯನ್ನು ಸೂಚಿಸಿಲ್ಲ. ಕೆಲವು ಅಕ್ಷರಗಳು ತೆಲುಗು ಲಿಪಿಯನ್ನು ಹೋಲುತ್ತವೆ.

1637

ಕೆ. ೪೨೬	**ವೈದ್ಯಶಾಸ್ತ್ರ**	ಶ್ಲೋಕ, ಟೀಕು
೯.೧" × ೧.೮"	?	?
೧–೮೦ ಪತ್ರ	೧೨ ಪಂಕ್ತಿ	೪೨ ಅಕ್ಷರ

ಆದಿ : ಶ್ರೀರಸ್ತು ॥ ಅಥ ರಕ್ತಪಿತ್ತ ಚಿಕತ್ಸೆ ॥

ಘೆರ್ಮ ವ್ಯಾಯಾಮ ಶೋಕೈಶ್ಚ ಕ್ಷಾರ ತಿಕ್ತ್ರೋಷ್ಣಸೇವನಾತ್ ।
ತೇನಪಿತ್ತ್ರಂ ಪ್ರವೇದುಷ್ಟಂ ರಕ್ತ್ರಂ . . ಸಾಸ್ಯ ಕರ್ನಧೃಕ್ ॥
ಮೇಢ್ರಯೋನೌ ಗುದದ್ವಾರೇ ಕುಪಿತಂ ರೋಮಕೂಪಕೇ ।

× × × ×

ಪ್ರಾಗಥೋಗಮನೇಪೆ ಯಾಚಮನಂತು ಯಥಾಬಲಂ ॥

ಟೀ ॥ ಬಿಸಿಲು ದಾರಿಯ ನಡೆವದು ದುಖ್ಖಪಡುವದು ಕಾರದ್ರವ್ಯ ಕಹಿಯಾದ ದ್ರವ್ಯ ಉಷ್ಣದ್ರವ್ಯ ಯಿವರಿಂದಾ ಮೂಗು ಬಾಯಿ ಕಿವಿ ಕಂಣುಗಳಲ್ಲಿ ದುಷ್ಟರಕ್ತ ಸುರಿವುದೂ ।

ಅಂತ್ಯ : ಅರಳೀಮರದ ವಳನಾರಿನಲ್ಲಿ ಕಷಾಯವಿಕ್ಕಿ ಕೊಡಿಸಲು ದಾಹಸಹಿತ ಜ್ವರಹರ । ಯಲಚೀಸೊಪ್ಪಿನ ಕಷಾಯದಿಂ ಜೀರ್ಣಜ್ವರಹರ । ಯಿದಕ್ಕೆ ಹಿಪ್ಪಲಿ ಚೂರ್ಣವಹಾಗೆ ಸನ್ನಿಪಾತಹರ । ಬೇವಿನಕಡ್ಡಿ ಕಹಿಪಡವಲ । ಅಮೃತಬಳ್ಳಿ ಶುಂಠಿ ಮುಸ್ತೆ ತ್ರಿಫಲೆ ಯಿವಿಷ್ಟೂ ಕಷಾಯವಿಕ್ಕಿ ಜೇನುತುಪ್ಪ ಸಖ್ಖರೆ ವೆರಶಿ ಕೊಡಿಸಲು ಜ್ವರಹರ ।

ವಿಷಯ : ರೋಗಗಳಿಗೆ ಔಷಧ ಮತ್ತು ಅವುಗಳ ತಯಾರಿಕೆ.

ವಿಶೇಷ : ಮೋಡಿ ಮತ್ತು ಸಣ್ಣಕ್ಷರ. ಅಸಮಗ್ರಪ್ರತಿ. ಮಧ್ಯೆ ಮಧ್ಯೆ ಕೆಲವು ಸಂಸ್ಕೃತ ಶ್ಲೋಕಗಳಿವೆ. ಕೊನೆಯಲ್ಲಿ ಕ್ರಮಾಂಕವಿಲ್ಲದ ವೈದ್ಯಶಾಸ್ತ್ರಕ್ಕೆ ಸಂಬಂಧಪಟ್ಟ ಎರಡು ಓಲೆಗಳಿವೆ.

1638

ಕೆ. ೪೬೦	**ವೈದ್ಯಶಾಸ್ತ್ರ**	ಗದ್ಯ
೯.೬" × ೨"	?	?
೧–೪೩ ಪತ್ರ	೧೨ ಪಂಕ್ತಿ	೪೪ ಅಕ್ಷರ

ಆದಿ : ವೈದ್ಯಶಾಸ್ತ್ರ ಬರೆಯುವುದಕ್ಕೆ ನಿರ್ವಿಘ್ನಮಸ್ತು ॥ ದ್ರಾಕ್ಷಾದಿಚೂರ್ಣ ॥ ದ್ರಾಕ್ಷಿಹಂಣ್ಣು ಹಿಪ್ಪೆಹುಲು । ಯಷ್ಟಿಮದುಕ । ಲೋಧ್ರ । ಗೂಳ್ಳದಬೇರು । ಸೊಗದೆಬೇರು । ಭದ್ರಮುಸ್ತೆ । ನೆಲ್ಲೀಚಟ್ಟೊ । ಲಾವಂಚ । ಮುಡಿವಾಳ । ತಾವಗೆಕುಸುಮ । ಪದ್ಮ್ಕ । ತಾವರೆಗೆಣಸು । ನೈದಲಗೆಣಸು । ಖರ್ಜೂರ । ಶ್ರೀಗಂಧ ಯಿವು ಸಮಾನತೂಕ ॥

ಅಂತ್ಯ : ಮಧರಾಹಾರವನು ಶರ್ಕರೆಯನು ಕೂಡಿಕೊಂಡು ಊಟಾಮಾಡಿ ಸೂದು, ಉಳಿ ಶಿಕ್ಷಾಹಾರವ ಬಿಡಿಸೂದು, ನೂರುಮಂದಿ ಸ್ತ್ರೀಯರನನು ಭವಿಸಬಹುದು. ವೀರ್ಯವರ್ಧನವಹುದು. ಡಂದಬಲುಹು ತಗ್ಗದು ನಪುಂಸಕ ನಿಗೆ ಪುರುಷಶಕ್ತಿಯಹುದು. ಮಧ್ಯವಯಸ್ಸಿನಲ್ಲಿ ಯೇನಾನು ಕಾರಣದಿಂದ ನಷ್ಟ

ವಿಷಯ : ರೋಗಗಳಿಗೆ ಔಷಧ (ಚೂರ್ಣ, ತೈಲ, ಅಂಜನಾ, ಇತ್ಯಾದಿ)

ವಿಶೇಷ : ಅಸಮಗ್ರಪ್ರತಿ. ಕೊನೆಯಲ್ಲಿ ಜ್ಯೋತಿಶ್ಯಾಸ್ತ್ರಕ್ಕೆ ಸಂಬಂಧಪಟ್ಟ ಒಂದು ತತ್ರ ಇದೆ. ೨೧ ನೆಯ ಪತ್ರದಲ್ಲಿ ಜ್ಯೋತಿಶ್ಯಾಸ್ತ್ರಕ್ಕೆ ಸಂಬಂಧಪಟ್ಟ ವಿಷಯ ಗಳಿವೆ. ಈ ಪತ್ರ ಬೇರೆ ಕಟ್ಟಿನದಾಗಿದ್ದು ಮಧ್ಯದಲ್ಲಿ ಸೇರಿಕೊಂಡಿದೆ. ೩೬ ರಿಂದ ४೧ ಪತ್ರ ಲುಪ್ತ.

1639

ಕೆ. ४೬೭	**ವೈದ್ಯಶಾಸ್ತ್ರ**	ಗದ್ಯ
೧೫.೯"×೧.४"	?	?
೧–೯೦ ಪತ್ರ	೫ ಪಂಕ್ತಿ	೬೨ ಅಕ್ಷರ

ಆದಿ : ಭೋಜನಪತ್ರಲಕ್ಷಣಂ ॥ ಶ್ರೀ ಗಣಾಧಿಪತಯೇ ನಮಃ । ಶ್ರೀ ಶಾರದಾ ಗುರುಭ್ಯೋಂ ನಮಃ ॥ ಶ್ರೀ ಲಕ್ಷ್ಮೀನರಸಿಂಹಾಯ ನಮಃ । ಅಕ್ಷಯ ಸಂವತ್ಸರದ ಫಾಲ್ಗುಣ ಶುದ್ಧ ೩ ಲ್ಲು ವೈದ್ಯಶಾಸ್ತ್ರ ಬರೆಯುವದಕ್ಕೆ ನಿರ್ವಿಘ್ನೆ ಮಸ್ತೂ ॥

ಸೂಚನೇ ॥ ಕದಳೀಪತ್ರಗುಣಂ ॥ ಅತಿ ಸುಚಿಯಾಗಿ । ಮಹಾ ಪ್ರೀಯ ವಾಗಿ । ವಾತಶ್ಲೇಷ್ಮದೋಷಂಗಳಂನ್ನು । ಪರಿಹರಿಸಿ । ಬಲವನು ಆರೋಗ್ಯ ವಂನ್ನು ವುಂಟುಮಾಡಿ । ರತಿಪ್ರಿಯವನು । ಶರೀರಕಾಂತಿಯನು । ಅಂನ್ನದ ಮೇಲೆ ಅಪೇಕ್ಷೆಯನುಂಟುಮಾಡುವದೆ । ಬಾಳೆಯ ಯಲೆಯ ಗುಣಂ ॥ ಪದ್ಮಪತ್ರಗುಣಂ ॥ ತಾವರೆ ಯಲೆಯಲ್ಲಿ ವೂಟಮಾಡಿದರೆ । ಅತಿರುಕ್ಷಾ । ಕಾರಿಯೋಗಿ । ವಾತರೋಗವನುಂಟುಮಾಡುವದಾಗಿ । ಶ್ರೀತರವಾಗಿ ।

ಹೊಟ್ಟೆಯಲ್ಲಿ ಹುಟ್ಟುವ ಸಕಲರೋಗ ಸಮೂಹವಂನ್ನು ಹೋಗಲಾಡಿಸಿ ।
ಪಿತ್ತಕಾರಣವಾದ್ದೆ ತಾವರೆಯಲೆಯ ಗುಣಂ ॥

ಅಂತ್ಯ : ಗಂಡೌಷದಾ ॥ ಹಿಪ್ಪಲಿ ಲವಣಂಗಳಂ ಮಾದಳದ ಹಂಣಿನ ರಸದಿಂದ ಅರೆದು ಜಿಂಹ್ವೆಗೆ ತೊಡೆಯಲು ಜಿಂಹ್ವತೀಸಂನಿ ಪರಿಹರಾ ॥ ಅಂತ್ತುಕಲ್ಕಾ ೨ ಕಷಾಯ ೬ ಗುಳಿಗೆ ೧ ಗಂಡೌಷಧ ೧ ಅಂತುಪ್ರಯೋಗ ೧೦ ॥ ಶ್ರೀ

ವಿಷಯ : ವೈದ್ಯ.

ವಿಶೇಷ : ಕನ್ನಡ ಮತ್ತು ತೆಲುಗುಭಾಷೆಗಳಲ್ಲಿ ವೈದ್ಯದ ವಿವರಣೆಯಿದೆ. ಅಲ್ಪ ಸ್ವಲ್ಪ ಹುಳುಹಿಡಿದು ಶಿಥಿಲವಾಗಿದೆ.

1640

ಕೆ. ೬೨೨	**ವೈದ್ಯಶಾಸ್ತ್ರಸಾರ**	ಶ್ಲೋಕ, ಟೀಕು
೧೦.೮"×೧.೧"	?	?
೧–೨೩೪ ಪತ್ರ	೫ ಪಂಕ್ತಿ	೪೨ ಅಕ್ಷರ

ಆದಿ : ವೈದ್ಯಮತಂ ಬೇಧಾ ॥
ರಸಾರ್ನವಂ ಬಾಹಾಟಂ ಚ ಪಾರಿಜಾತಂ ಚ ಕವುಮುದಿ ।
ನಾಗಾರ್ಜುನಂಚ ಕಾಪಾಲಿ ದಾಮೋದರ ಮತಂ ತಥಾಃ ॥
ರಸಪ್ರೇಂಚ್ಯಂ ಯಿಂದ್ರಸಾರಂ ಸುರರಾಜಂ ಚ ಟಂಕಣಂ ।
ಕಲ್ಯಾಣಂ ಭೇಷಜಂ ಕಲ್ಪಂ ಸೂತ್ರಸ್ತಾನಂ ಚ ಸಂಗ್ರಹಂ ॥
ಶಾರೀರಂ ವೀರಬಟ್ಟೀಯಂ ವೈದ್ಯಸ್ಯ ಆದಿಕಮೇವಚಾ ।
ಸೋಮನಾತಂ ಮಹಾಶಾಸ್ತ್ರಂ ನಂದಿನಾತಂ ಸಿಕಿಚ್ಚಕಂ ॥
ಅಶ್ವನಿಯಂ ರಸೇಂದ್ರಂ ಚ ಚೂಡಾಮಣಿ ಮತಸ್ತಥಾ ।
ಚಂದ್ರಜ್ಞಾನಂ ಚ ಕೃಷ್ಟೀಯಂ ಏಸಿಷ್ಠಂ ಚ ಪುರಾತನಂ ॥
ಕಲ್ಯಾಣಕಾರಕಂ ಕಲ್ಪಂ ಕೌಮಳಂ ರಸದರ್ಪಣಂ ।
ಯೇತಾನಿ ವೈದ್ಯಶಾಸ್ತ್ರಾಣಿ ಸಾರಮಾದಾಯ ವಚ್ಯತೆ ॥
ಯಿವು ವೈದ್ಯಶಾಸ್ತ್ರದ ಹೆಸರುಗಳು ।
ಅಶೀತಿರ್ವಾತರೋಗಂ ಚ ಚತ್ವಾರಿವಿಂಶತಿಪೈತ್ಯಕಂ ।

× × × ×

ಅಶೀತಿವ್ರಣರೋಗಾನಿ ಸ್ಫೋಟಕಂ ನವವಿಧಂ ತಥಾ ।
ಯೇತಾನಿ ಸರ್ವರೋಗಾನಿ ದೇಹಂ ಚ ವ್ಯಾಪಕಂ ತತಃ ॥

ಅಂತ್ಯ : ಪುರುಷವ್ಯಾಧಿಗೆ ದಾಳಿಬಂದ ಚಿಗುರು....ಅರದು ಪೂಸಲು ಪುರುಷವ್ಯಾಧಿ ಮಾಣ್ಗು । ಬೇವಿನ ಚಿಗುರು ಅರಿಸಿನ ಅರದು ಬಿಲ್ಲೆಮಾಡಿ....ಕಾದಮೇಲೆ ಆ ಬಿಲ್ಲೆಯ ಬಿಸಾಟು ಆ ಯೆಂಣೆಯನ ಹುಂಣಿಗೆ ತೊಡದರೆ ಮಾಣ್ಗು ॥

ವಿಷಯ : ರೋಗಲಕ್ಷಣ ಮತ್ತು ಅವುಗಳ ನಿವಾರಣೆಗೆ ಔಷಧ.

ವಿಶೇಷ : ಓಲೆಯಲ್ಲಿ ತಿಳಿಸಿರುವ ವಿಷಯವನ್ನು ಆ ಓಲೆಯ ಒಂದು ಪಾರ್ಶ್ವದಲ್ಲಿ ಬರೆದಿದೆ. ಕೆಲವುಕಡೆ ತೆಲುಗುಭಾಷೆಯಲ್ಲೂ ಬರೆದಿದೆ. ೩೬ ನೆಯ ಓಲೆ ಅರ್ಧಕ್ಕೆ ಮುರಿದಿದೆ. ಶಿಥಿಲಪ್ರತಿ. ಗ್ರಂಥಾರಂಭಕ್ಕೆ ಮೊದಲು ಗ್ರಂಥಕ್ಕೆ ಸೇರದ ಒಂದು ಓಲೆಯಲ್ಲಿ ಅದೃಶ್ಯಕರಣದ ಮಂತ್ರ ಮತ್ತು ಔಷಧ ಪ್ರಯೋಗವಿದೆ.

1641

ಕೆ. ೪೧೧/೨	**ವೈದ್ಯಸಂಗ್ರಹ**	ಗದ್ಯ
೯.೨"×೨.೨"	?	?
೧೨ ಪತ್ರ	೯ ಪಂಕ್ತಿ	೩೮ ಅಕ್ಷರ

ಆದಿ : ಯಿಂನ್ನು ಗರ್ಬೋತ್ಪತ್ತಿಗೆ ॥ ಬಂಜೆಯರ ಪರೀಕ್ಷೆ ॥ ಹುಟ್ಟುಬಂಜೆ ವೊಂದು ಹೆತ್ತಭಂಜೆ । ನಷ್ಟಭಂಜೆ । ಕೀಟಭಂಜೆ । ಅಂತು ೪ ತೆರನಕ್ಕುಂ । ವಾತ ಯೋನಿ ಪಿತ್ತಯೋನಿ ಶ್ಲೇಷ್ಮಯೋ ಮಿಶ್ರಲಕ್ಷಣಯೋನಿ ಯಿಾ ೪ ಭೇದವಂ ತಿಳಿವುದುಂ । ಇದರಿಂದಾ ಗರ್ಬಾಚವಿಶ್ರವವೆಂಬ ರೋಗಂ ಪುಟ್ಟುಗು । ಭೂತಪಿಶಾಚಾದಿ ಪೀಡಣೆಇಂದಂ ಗರ್ಬ್ಭಂ ಕೆಡಿಸುಗುಂ ।

ಅಂತ್ಯ : ಕುಂಕುಮಕೇಶರಿ । ಶರ್ಕ್ಕರೆ । ತುಪ್ಪಂಬೆರಸಿ ಕುಡಿದು ಅದನೆ ನಶ್ಯಂ ಮಾಡುಗೆ ಯೆಲ್ಲಾತೆರದ ಶಿರರೋಗಂಗಳಂ ಕೆಡಿಸುಗುಂ ॥ ಯಿಪ್ಪೆಯ ಕೊರಡಂ ಮೂತ್ರದಲ್ಲು ನಶ್ಯಂ ಮಾಡುಗೆ ಯೆಲ್ಲಾ ಶಿರೋರೋಗಹರಂ ॥ ಅರೆದಲೆ ಬೇನೆಗೆ । ಸಮುದ್ರಫಲಮಂ ಆಡಿನ ಮೂತ್ರದಲ್ಲಿ ಅಥವಾ ನರ ಮೂತ್ರದಲ್ಲಿ........

ವಿಷಯ : ಗರ್ಭೋತ್ಪತ್ತಿ, ರಸವೈದ್ಯ, ವಿಷವೈದ್ಯ. ಇತ್ಯಾದಿ

ವಿಶೇಷ : ೭೩ ನೆಯ ಪತ್ರದವರೆಗೆ ಜ್ಯೋತಿಷವಿಚಾರವಿದೆ. ೭೩, ೭೪ ಪತ್ರ ಗಳಲ್ಲಿ ಗರ್ಭವಿಚಾರವಿದೆ. ೭೫ ರಿಂದ ೭೮ ಪತ್ರಗಳಲ್ಲಿ (ಚಿನುವಾರ್ದ ೭ಗೆ ಬಂಣಸರ ಮಾಡುವ ಕ್ರಮ, ಸೂಜಿಕಲ್ಲಿನ ಪ್ರಯೋಗ) ರಸವೈದ್ಯ

ವಿಚಾರವಿದೆ. ೭೯ ರಿಂದ ೧೮೦ ಪತ್ರಗಳು ಲುಪ್ತ. ೧೮೧ ರಿಂದ ೧೮೬ ಪೂರ್ತಿ ವೈದ್ಯಾಮೃತ ಗ್ರಂಥದ ಸಕಲ ಜಂಗಮ ವಿಷ ಚಿಕಿತ್ಸಾ ವಿವರ ಮತ್ತು ಪುಷ್ಟಿಗೆ ಔಷಧವಿದೆ. ಅನಂತರ ಇರುವ ಒಂದು ಪತ್ರದಲ್ಲಿ ೧ ರಿಂದ ೬೬ ಪತ್ರಗಳಲ್ಲಿರುವ ವಿಷಯಸೂಚಿ ಇದೆ. ಕೊನೆಯಲ್ಲಿ ಕ್ರಮಾಂಕವಿಲ್ಲದ ೧೪ ಪತ್ರಗಳಲ್ಲಿ ಪಂಚಪರಮೇಷ್ಠಿಗಳ ವ್ಯಾಖ್ಯಾ ಎಂಬ ಜೈನಸಿದ್ಧಾಂತ ಗ್ರಂಥವಿದೆ.

1642

ಕೆ. ೫೩೮	**ವೈದ್ಯಸಂಗ್ರಹ**	ಶ್ಲೋಕ, ಟೀಕು
೧೧.೫"×೨"	?	?
೧–೩೧೭ ಪತ್ರ	೮ ಪಂಕ್ತಿ	೪೩ ಅಕ್ಷರ

ಆದಿ : ಶ್ರೀಮತ್ಕರಿಣ ಕಮಟೋಪಸರ್ಗವಿಜೇ ಪಾರಿಶ್ವನಾಥಾಯ ನಮಃ ॥ ಶುಭಮಸ್ತು ॥

ಶ್ರೀಮಚ್ಚಾತುರ್ನಿಕಾಯಾಮರ ಖಚರವದಂ ನೃತ್ಯ ಸಂಗೀತಕೀರ್ತಿ
ವ್ಯಾರ್ಪ್ತಾಶಾಲಂ ಸುರಪಟಹಾದ್ಯ ಸತ್ಪ್ರಾತಿಹಾರ್ಯಂ
ನತ್ವಾ ಶ್ರೀ ವೀರನಾದಂ ಭುವಿ ಸಕಲ ಜನಾರೋಗ್ಯಸಿಧ್ಯೈ ನಮಸ್ತ್ರೈ
ರಾಯುರ್ವೇದೋಕ್ತಸಾರೈ ರಿಹಮಮಲ ಮಹಾಸಂಗ್ರಹಂ ಸಂಲಿಖಾಮಿ॥೧॥
ಗುಣಭೇಷಜಕಲ್ಪಂ ನಾಡೀತಂತ್ರಂ ವಿದಾನಮಘಪಾಕಂ
ಪಿಂಡೋತ್ಪತ್ತಿಂ ಗರ್ಭ್ಭಚಿಕಿತ್ಸಾ ಬಾಲಗ್ರಹಾಧಿಕಾರಂ ಚ
ಸದ್ವೈದ್ಯಚಿನ್ಹಮಭಯಾಲಕ್ಷ್ಮ್ಯಂ ರಸಶುದ್ಧಿ ಶಕುನ ನಿರಂಜನಂ
ಸಾಧ್ಯಾಸಾಧ್ಯಾನಿಗವ್ಯಂ ಲಂಘನ ಪಥ್ಯಂ ಚ
ಕಲ್ಕಕ್ವಾಥವಿದಿಂ ನಸ್ಯಂ ಚ ಚೂರ್ನ್ನ ಘುಟಿಕಾ ಲೇಹ್ಯ ಸ್ನೆ ಹಾವಗಹನ
ಘೃತ ಸದ್ಭಸ್ತಂ ರಸಯೋಗಂ ನೇತ್ರರುಜಾನ್ಯಕಾರಃ ॥—॥

ಗುಣಪಾಠ—ಇಕ್ಷ್ವಾದಿ:ವರ್ಗವಿಯ್ಯೋಗ್ನ್ಯೋ ವೈದ್ಯೋ ವೈದ್ಯೋ ಭವೇದ್ಯತಃ।
ತತಸ್ತತ್ಸಿದ್ಧಯೇ ವರ್ಗ್ಗ ವೀರ್ಯಂ ಸಂಕ್ಷಿಪ್ಯ ಕಥ್ಯತೇ ॥

ಅಂತ್ಯ : ಭಲ್ಲಾತಕ ರಸಾಯನ ॥ ಗೇರಹರಳು ೨೫ ಹಲ । ಹಸುವಿನತುಪ್ಪ ೧೧ ಹಲ । ಆಕಳಹಾಲು ೧೨॥ ಹಲ ॥ ಗೇರಹರಳ ನಾಲ್ಕು ನಾಲ್ಕು ಭಾಗವಾಗಿ ಕತ್ತರಿಸಿ ಮೊದಲು ಹೇಳಿದ ಹಾಲು ತುಪ್ಪದಲ್ಲಿ ಹಾಕಿ ಕಾಸಿದ ಬಳಿಕ ಆ ಗೇರಹರಳನೆಲ್ಲವನೂ ತೆಗೆದುಹಾಕಿ । ಆ ಹಾಲ ಹೆಪ್ಪಕೊಟ್ಟು ಮೂಱು ದಿವಸ ಕಡದು ಬೆಣ್ಣೆಯಂ ತೆಗೆದು । ತುಪ್ಪವ ಮಾಡಿ ಆ ತುಪ್ಪದೊಳಗೆ

ಪಂಚಧಾರೆಯ ಸಕ್ಕರೆ ೩೦ ಹಲವನಿಕ್ಕಿ ತೊಳಸಿ । ನಿತ್ಯದಲ್ಲಿ ಆಮಲಕ ಪ್ರಮಾಣವನು ಸೇವಿಸುತ್ತ ಬಾಹುದು । ವಂದು ಮಂಡಲ ಕೊಂಡಡೆ ಸ್ವೇತಕುಷ್ಠ ಮಾಣ್ಬುಂ । ಸಂದೇಹಬೇಡ ॥

ವಿಷಯ : ರೋಗಗಳಿಗೆ ಔಷಧ, ಅವುಗಳ ತಯಾರಿಕೆ ಮತ್ತು ಶಾಂತಿಗಳು.

ವಿಶೇಷ : ಶಕಟರೇಫದ ಬಳಕೆಯಿದೆ. 'ಪೂಜ್ಯಪಾದೇನ ಭಾಷಿತಂ' ಎಂದು ಒಂದೆರಡು ಕಡೆ ಇದೆ. ಕೆಲವು ಕಡೆ ಸಂಸ್ಕೃತ ಶ್ಲೋಕ ಮಾತ್ರವಿದ್ದು ಟೀಕೆ ಇಲ್ಲ. ಇನ್ನು ಕೆಲವೆಡೆಗಳಲ್ಲಿ ಗದ್ಯ ಮಾತ್ರ ಇದೆ. ಈ ಸಂಕಲನದಲ್ಲಿ ೧ ರಿಂದ ೨೧ ಪತ್ರಗಳಲ್ಲಿ ಗಣಪಾಠ ಇದೆ. ಬಳಿಕ ಹಾರೀತ ಮುನಿಪುಂಗವ ಬ್ರಹ್ಮಚಾರಿ ವಿರಚಿತ ನಾಡಿತಂತ್ರವೆಂಬ ಗ್ರಂಥವು ಪ್ರಾರಂಭವಾಗಿ ೫೪ ನೆಯ ಪತ್ರದಲ್ಲಿ ಮುಗಿದಿದೆ. ಅನಂತರ ಶ್ರೀಮದ್ವಾಗ್ಭಟ ಸುಶ್ರುತಾದಿ ವಿಮಲ ಶ್ರೀ ವೈದ್ಯಶಾಸ್ತ್ರಾರ್ಣವ ಗ್ರಂಥದಿಂದ ಸಾರಸಂಗ್ರಹವೆಂಬ ಸಂಗ್ರಹವನ್ನು ರಚಿಸಿರುವ ವಿಜಯಣೋಪಾಧ್ಯಾಯರ ಗ್ರಂಥವು ೧೦೮ ನೆಯ ಪತ್ರದಲ್ಲಿ ಮುಗಿದಿದೆ. ಆ ಬಳಿಕ ನಿತ್ಯನಾಥನ ರಸರತ್ನಾಕರವೆಂಬ ಗ್ರಂಥವು ೧೨೩ನೆಯ ಪತ್ರದವರೆಗಿದೆ. ಬಳಿಕ ಶಕುನ, ವ್ಯಾಧಿಹರಮಂತ್ರ ಮತ್ತು ಯಂತ್ರಗಳು, ಜ್ವರನಕ್ಷತ್ರ ಮತ್ತು ತಿಥಿಫಲ, ಜ್ವರಕ್ಕೆ ಔಷಧ, ಚೂರ್ಣಗಳು, ವಟಕಗಳು, ಲೇಹ್ಯ, ತೈಲ, ಘೃತ, ರಸ, ಭಸ್ಮ ಇವುಗಳನ್ನು ತಯಾರಿಸುವ ಕ್ರಮ ಮತ್ತು ಉಪಯೋಗ ಈ ವಿಷಯಗಳು ಸಂಗೃಹೀತವಾಗಿವೆ. ಮಧ್ಯೆ ೨೨೧–೨೨೬ ರ ವರೆಗಿನ ಪತ್ರಗಳಿಲ್ಲ. ೧೮೯ ನೆಯ ಮತ್ತು ೨೫೩ ನೆಯ ಪತ್ರಗಳೆರಡೆರಡಿವೆ. ಈ ಸಂಕಲನದಲ್ಲಿ ರಸರತ್ನಾಕರ, ನಾಡೀತಂತ್ರ, ಸಾರಸಂಗ್ರಹ ಎಂಬ ಮೂರು ಗ್ರಂಥಗಳೂ ಪೂರ್ಣವಾಗಿವೆ.

1643

ಕೆ. ೨೧೨/೧	**ವೈದ್ಯಸಾರಸಂಗ್ರಹ**	ಶ್ಲೋಕ, ಟೀಕು
೧೯.೧"×೨"	ನಂಜಿನಾಥ ಭೂಪಾಲ	?
೧–೮ ಪತ್ರ	೧೦ ಪಂಕ್ತಿ	೭೪ ಅಕ್ಷರ

ಆದಿ : ವೈದ್ಯಸಾರ ಸಂಗ್ರಹವ ಬರವದಕ್ಕೆ ನಿರ್ವಿಘ್ನಮಸ್ತು ॥
ಹರಿಂ ಶಿವಂ ವಿದಾತಾರಂ ತತ್ಪತ್ನೀ ತತ್ಸುತಾನ್ ಗುರೂನ್ ।
ನಮಃ ಸಮಸ್ತ ಪ್ರತ್ಯೂಹ ಶಾಂತಯೇ ಮಂಗಳಾಯ ಚಾ ॥
ಆದೌ ಸಮಸ್ತರೋಗೇಷು ನಾಡಿಂ ಜಿಹ್ವಾಂ ಚ ಮೂತ್ರಕಂ ।
ಪರೀಕ್ಷಯೇತ್ಸ್ವಯಂ ವೈದ್ಯ ಸ್ತದ್ವಿದಾನಂ ನಿಗದ್ಯತೇ ॥

ಟೀಕೂ ॥ ಸಮಸ್ತ ರೋಗಂಗಳಲ್ಲಿ ಮೊದಲು ವೈದ್ಯನು ನಾಡಿಯನು । ಜಿಂಹ್ವೆಯನು ಮೂತ್ರವನು ಪರೀಕ್ಷಿಸುವದು । ಆ ನಾಡಿ ಜಿಂಹ್ವೆ ಮೂತ್ರಂಗಳ ಪೇಳಲ್ಪಡುತ್ತಾ ಯಿದ್ದಾವು ॥ ೨ ॥

ಅಂತ್ಯ : ಶೀಘ್ರದಲ್ಲಿ ಚಿಕಿತ್ಸೆಯ ಮಾಡಲು ಯೋಗ್ಯವಲ್ಲದವನು ದಿನಸಾಮ್ಯದಲ್ಲಿ ಚಿಕಿತ್ಸೆಯ ಮಾಡತಕ್ಕವನು । ಖಾಮಾದಿ ಸರ್ವ್ವಗ್ರಹಗಳ ಅನುಕೂಲ್ಯ ಉಳ್ಳದ ಮಾಡುತ ಲಕ್ಷಣ । ಶಕುನ । ಅರಿಷ್ಟಲಕ್ಷಣಗಳನೂ ನೋಡಿ ವೈದ್ಯನು ಚಿಕಿತ್ಸೆಯಂ ಮಾಡುವದೂ ॥ ಇತಿ ಶ್ರೀ ನಂಜಿನಾಥಭೂಪಾಲ ವಿರಚಿತೆ ವೈದ್ಯಸಾರಸಂಗ್ರಹೆ ಚಿಕಿತ್ಸೋಪಕ್ರಮೋನಾಮ ದ್ವಿತೀಯಂ ಪ್ರಕರಣಂ ॥ ಮಂಗಳಂ ಮಹಾಶ್ರೀ ॥ ವಾತಪ್ರಕೋಪಕ್ರಮ ಸಂಧಾರಣಾತ್ಯಶನ ಜಾಗರಣೋಚ್ಚಭಾಷಾ × × × × ಪಾನಾಹಾರವಿಹಾರ ಭೇಷಜಮಿದಂ ವಾತಪ್ರಶಾಂತಿಂ ನ್ನಯೇತ್ ॥

ವಿಷಯ : ವೈದ್ಯಶಾಸ್ತ್ರ.

ವಿಶೇಷ : ಅಸಮಗ್ರಪ್ರತಿ. ಇದೇ ಕಟ್ಟಿನ ಆರಂಭದಲ್ಲಿ ಸಾಮುದ್ರಿಕ ಮತ್ತು ವೈದ್ಯಕ್ಕೆ ಸಂಬಂಧಪಟ್ಟ ಕ್ರಮಾಂಕವಿಲ್ಲದ ೧೫ ಪತ್ರಗಳಿವೆ. ಕೊನೆಯಲ್ಲಿ ವೈದ್ಯಾಮೃತ ಗ್ರಂಥದ ಕೆಲವು ಭಾಗಗಳೂ ಗೋವೈದ್ಯವೆಂಬ ಛಂದಸ್ಸಿನಲ್ಲಿರುವ ಒಂದು ಅಪೂರ್ಣಗ್ರಂಥವೂ ಇದೆ.

1644

ಕೆ. ೨೮೭	**ವೈದ್ಯಸಾರಸಂಗ್ರಹ**	ಶ್ಲೋಕ, ಟೀಕು
೧೩.೬"×೧.೩"	ನಂಜಿನಾಥಭೂಪಾಲ	?
೨೨೪ ಪತ್ರ	೬ ಪಂಕ್ತಿ	೭೦ ಅಕ್ಷರ

ಆದಿ : ಶ್ರೀ ಗಣಾದಿಪತಯೇಂ ನಮಃ । ಲೋಕೋಪಕಾರ ವೈದ್ಯ ಬರಉದಕ್ಕೆ ಶುಭಮಸ್ತು ॥

ಓಂ ಹರಿಃ ಶಿವಂ ವಿಧಾತಾರಂ ತತ್ಪತ್ನೀಂ ಸ್ತತ್ಸುತಾರ್ನ ಗುರೂನ್ ।
ನಮುನಮುಸ್ಯಪ್ರತ್ಯೂಹಶಾಂತಯೇ ಮಂಗಳಾಯ ಚ ॥
ಆ . - ಸರ್ವ್ವೇಷು ರೋಗೇಷು ನಾಡಿಜಿಂಹ್ವಾಂ ಚ ಮೂತ್ರಕಾಂ ।
ಪರೀಕ್ಷಯೇತ್ಸಯಂ ವೈದ್ಯಸ್ತದ್ವಿಧಾನಂ ನಿಗದ್ಯತೇ ॥

ಟೀಕು ॥ ಸಮಸ್ತ ರೋಗಂಗಳಲ್ಲಿ ಮೊದಲು । ವೈದ್ಯನು । ನಾಡಿಯನು । ಜಿಹ್ವೆಯನು । ಮೂತ್ರವನೂ । ಪರೀಕ್ಷಿಸುವದು । ಆ ನಾಡಿ ಜಿಂಹ್ವೆ ಮೂತ್ರಗಳ ಲಕ್ಷಣಗಳು ಹೇಳಲ್ಪಡುತಾ ಇದ್ಧೀತು ॥

ಅಂತ್ಯ : ಟೀಕು ॥ ವಾತಸ್ಥಾನದಲ್ಲಿ ವಾತಶ್ಲೇಷ್ಮದೂಷಿತವಾದರೆ । ತಾನು ಸ್ವತಂತ್ರ ವಾಗಿ । ಬಹು ಉಪದ್ರವ ಮಾಡುವದೂ । × × × ×

ವೈವರ್ಣ್ಯಂ ದೇಹಕಾರ್ಶಂ ಚ ಬಹಿರುಂನತತಾಧಿಕಂ ।
ದುಷ್ಟವಾತೋಸ್ಥಿತೋ ಗ್ರಂಥಿಪಾರ್ಶ್ವ ಹೃಂನಾಭಿವಸ್ತಿಷು ॥
ತದು............

ವಿಷಯ : ವೈದ್ಯಶಾಸ್ತ್ರ.

ವಿಶೇಷ : ಈ ಕಟ್ಟನಲ್ಲಿ ಎರಡು ಭಾಗಗಳಿವೆ, ಮೊದಲಭಾಗ (೧–೧೨೨) ದಲ್ಲಿ ೧೯, ೨೨, ೨೩, ೫೧–೫೬, ೮೦–೮೨, ೮೯ ಈ ಗರಿಗಳು ಲುಪ್ತವೂ, ೨೧ ನೆಯ ಗರಿಯು ತುಂಡಾಗಿಯೂ, ೨೮, ೪೯ ಈ ಗರಿಗಳು ಮುರಿದು ಸ್ವಲ್ಪ ಭಾಗ ಲುಪ್ತವಾಗಿಯೂ ಇವೆ. ಎರಡನೇ ಭಾಗ (೧–೧೦೨) ದಲ್ಲಿ ೭, ೮, ೨೦ ನೆಯ ಗರಿಗಳು ಲೋಪವೂ, ೩ ನೆಯ ಗರಿಯು ತುಂಡಾಗಿಯೂ ೧-೩೬ ರವರೆಗೆ ಕ್ರಮಾಂಕವಿದ್ದು ಮುಂದೆ ಇರುವ ಗರಿಗಳಿಗೆ ಕ್ರಮಾಂಕದ ಭಾಗ ಮುರಿದಿರುವುದೂ ಇಲ್ಲವೇ ಮುರಿದ ಭಾಗಗಳೂ ಕಂಡುಬರುತ್ತವೆ.

1645

ಕೆ. ಬಿ. ೨೨೮	**ವೈದ್ಯಸಾರಸಂಗ್ರಹ**	ಶ್ಲೋಕ, ಟೀಕು
೭.೫″ × ೬.೨″	ನರಸಿಂಹಶಾಸ್ತ್ರಿ	?
೧–೨೮೫ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ : ಗುಲ್ಮಚಿಕಿತ್ಸೆ—ಶ್ಲೋಕ ।

ಗುಲ್ಮೋಷ್ಟಧಾ ಪೃಥಗ್ದೋಷೈಃ ಸಂಸೃಷ್ಟೈರ್ನಿಚಯಾಗಕ್ಯೈಃ ।
ಆರ್ತವಸ್ಯಚ ದೋಷೇಣ ನಾರೀಣಾಂ ಜಾಯತೇಽಷ್ಟಮಃ ॥

ಟೀಕು ॥ ಗುಲ್ಮವ್ಯಾಧಿಯಂ ವಾತದಿಂದ ಪಿತ್ತದಿಂದ ಶ್ಲೇಷ್ಮದಿಂದ ದೋಷ ಗಳಿಂದ, ಸನ್ನಿಪಾತಗಳಿಂದ ಏಳು ಪ್ರಕಾರವಾಗಿರಬಹುದು, ಎಂಟನೆಯ ಗುಲ್ಮವು ಸ್ತ್ರೀಯರುಗಳಿಗೆ ರಕ್ತದೋಷದಿಂದ ಉಂಟಾಗುವುದು. ಇದು ಸಹ ಗುಲ್ಮವು ಎಂಟು ಪ್ರಕಾರವೂ

ಅಂತ್ಯ : ಆಡಿನ ಮಾಂಸಕ್ಕೆ

ಅಜೇ ಕೋಲಕಪಿತ್ಥಮಸ್ತುಕುರವಂ ಶಸ್ತಂ ತಥಾನ್ಯೇಫಲೆ ॥
ಕುರಿಯ ಮಾಂಸಗಳಿಂದುಂಟಾದ ವಿಷಕ್ಕೆ ಎಲಚಿಯಬೇರನಾದರೂ ಕೆಂಪಿನ ಗೋರಟೆಯ ಬೇರನಾದರೂ ಮಜ್ಜಿಗೆಯಿಂದ ತುಳಿದು ಹಿಂಡಿಕೊಂಡು ಕುಡಿಯಕೊಡುವುದು.
ಎಳಗಸ ಮಾಂಸಕ್ಕೆ ಚಾಲೀ ತಕ್ರ ತಿಲೋದ್ಭವಂ ಪ್ರತಿವಿಷಂ ಸರ್ಪಾರಿವಲ್ಕಂ ತಥಾ ॥
ಎಳಗನ ಮಾಂಸದಿಂದುಂಟಾದ ವಿಷಕ್ಕೆ ಅಂಬಿಲವನಾದರೂ ಹುಳಿಮಜ್ಜಿಗೆಯನಾದರೂ ಕುಡಿಯಕೊಡಿಸುವದು.
ಇತಿಶ್ರೀ ಕರ್ಣಾಟದೇಶಾಂತರ್ಗತ ಹವುಷಣದೇಶ ಮಧ್ಯೋಲ್ಲಸತ್ಕಾವೇರೀ ದಕ್ಷಿಣಭಾಗಸ್ಥಿತ ಬಾಲಚಂದ್ರಪುರಸ್ಥಿತ ಸಕಲಶಾಸ್ತ್ರಕೋವಿದ ನಾರಸಿಂಹ ಶಾಸ್ತ್ರಿಣಾ ವಿರಚಿತ ಸರ್ವಲೋಕೋಪಕಾರಕ ಕರ್ನಾಟಕಭಾಷಾಧಿಷದೀಕೃತ ವೈದ್ಯಸಾರಸಂಗ್ರಹೇ ಪಾದರೋಗ, ತೊಡೆವಾಳೆ ಪುರುಷವ್ಯಾಧಿ, ದೇಹಕ್ಲೇದ, ಗಂಡಾಮಾಲೆ, ಸ್ಥಾವರ ವಿಷಚಿಕಿತ್ಸೆ, ನಾಡೀವ್ರಣ ಕೃತ್ರಿಮಲಕ್ಷಣ ವಿಷಪ್ರತಿವಿಷದ್ವಾದಶಪ್ರಕರಣಂ ॥ ಶ್ರೀ ॥

ವಿಷಯ : ವೈದ್ಯಶಾಸ್ತ್ರಸಂಗ್ರಹ.

ವಿಶೇಷ : ಅಸಮಗ್ರಪ್ರತಿ. ಸ್ಫುಟಲಿಪಿ.

1646

ಕೆ. ೨೧೨/೨	**ವೈದ್ಯಾಮೃತ**	ಶ್ಲೋಕ, ಗದ್ಯ
೧೯.೧"×೨"	ಶ್ರೀಧರದೇವ	ಸು. ೧೫೦೦
೧–೧೯೮ ಪತ್ರ	೯ ಪಂಕ್ತಿ	೭೮ ಅಕ್ಷರ

ಆದಿ : ವೈದ್ಯಾಮೃತವ ಬರವದಕ್ಕೆ ನಿರ್ವಿಘ್ನಮಸ್ತು ॥
ಪ್ರಣಮ್ಯಂ ಸರ್ವವಿಘ್ನಸ್ತು ಸವಿತಾಗ ಜಿನೇಶ್ವರಃ ।
ವೈದ್ಯಾಮೃತ ಮಹಾಲಕ್ಷ್ಮ ಲೋಕಸ್ಯಾರೋಗ್ಯ ಕಾರಣಂ ॥
ಟೀಕು ॥ ಶ್ರೀಧರದೇವರು ವಿರಚಿತಮಪ್ಪ ವೈದ್ಯಾಮೃತ । ಸಕಲ ಜಗಜ್ಜನ ಹಿತಾರ್ಥಕಾರಣ । ಅಷ್ಟಾಂಗಚಿಕಿತ್ಸೆ । ಯೋನಿಲಕ್ಷಣ । ಮತ್ತೊಂದು ಪುಸ್ತಕದಲ್ಲಿ ಬರೆದು ಇದ್ದೀತು । ಪುಷ್ಟಿವೀರ್ಯವರ್ಧನಕ್ಕೆ ಕೂಷ್ಮಾಂಡಘೃತ

ಅಂತ್ಯ : ಮುತ್ತುಗದ ಬೀಜದಲ್ಲಿ ತೈಲವಂ ತೆಗೆದು ಅದರಲ್ಲಿ ಯರಡು ಹಲ ಹಸುವಿನ ಹಾಲಕೂಡಿ ತೆಗೆದುಕೊಳ್ಳು ಮೂರ್ಛಾಗತನಹನು । ಹಲ್ಲಮಿಾಟೆ ಹಾಲ

ಹೊಯ್ದರೆ ಮೂರ್ಛೆ ತಿಳಿವುದು, ಯಿೂ ಪ್ರಕಾರದಿಂ ತಿಂಗಳು ನಡೆಸೆ ದಿವ್ಯಜ್ಞಾನಿಯಹನು । ಮೂರು ತಿಂಗಳಿಗೆ ದೂರಶ್ರವಣವಂ ಕೇಳುವನು । ಐದು ತಿಂಗಳಿಗೆ ಖೇಚರಗಾಮಿಯಹನು । ಆರು ತಿಂಗಳಿಗೆ ಯಿೂಶ್ವರನಂತೆ ಲೋಕತ್ರಯನಕ್ಕುಂ । ಕರ್ತನಾಗಿ ಯಿೂಶ್ವರನ ಸಮಾನತ್ವ ಉಳ್ಳವನಹನು । ಒಂದು ವರುಷ ಕೊಳ್ಳಲು ಕಲ್ಪಾಂತಪರಿಯಂತ ಬಾಳುವಂ । ಇದು ಮಹಾ ಯೋಗ । ಜಿತೇಂದ್ರಿಯನಾಗಿ ದೇವತಾರಾಧಕನಾಗಿ ಸೇವಿಸಲು ಈ ಪ್ರಕಾರ ಸಿದ್ಧಿಗಳಹವು ।

ವಿಷಯ : ರೋಗ ನಿಧಾನ, ಔಷಧಿ ಮತ್ತು ಅವುಗಳ ಪ್ರಯೋಗ.

ವಿಶೇಷ : ಅಸಮಗ್ರಪ್ರತಿ. ಇದೇ ಕಟ್ಟಿನ ಆರಂಭದಲ್ಲಿ ಸಾಮುದ್ರಿಕ ಮತ್ತು ವೈದ್ಯಕ್ಕೆ ಸಂಬಂಧಪಟ್ಟ ಕ್ರಮಾಂಕವಿಲ್ಲದ ೧೫ ಪತ್ರಗಳಿವೆ. ೧೯೮ ನೆಯ ಪತ್ರದಿಂದಮುಂದೆ ೫ ಪತ್ರಗಳಲ್ಲಿ ಗೋವೈದ್ಯವೆಂಬ ಒಂದು ಅಪೂರ್ಣ ಗ್ರಂಥವೂ ೨೦೪ ನೆಯ ಪತ್ರದಿಂದ ಮುಂದೆ ೨೬ ಪತ್ರಗಳಲ್ಲಿ ಔಷಧಿಗಳ ಸಂಗ್ರಹವೂ ಇದೆ. ಗ್ರಂಥಾರಂಭಕ್ಕೆ ಮೊದಲು ಪ್ರತಿಪತ್ರದಲ್ಲೂ ಬರುವ ವಿಷಯಗಳ ಸೂಚಿಯನ್ನು ೬ ಪತ್ರಗಳಲ್ಲಿ ಬರೆದಿದೆ. ಇದಕ್ಕೆ ಮೊದಲು ವೈದ್ಯಸಾರ ಸಂಗ್ರಹವೆಂಬ ಅಸಮಗ್ರ ಗ್ರಂಥವಿದೆ.

1647

ಕೆ. ೬೦೫	**ವೈದ್ಯಾಮೃತ**	ಶ್ಲೋಕ, ಗದ್ಯ
೯.೫"×೧.೩"	ಶ್ರೀಧರದೇವ	ಸು. ೧೫೦೦
೧–೧೯೧ ಪತ್ರ	೭ ಪಂಕ್ತಿ	೩೫ ಅಕ್ಷರ

ಆದಿ : ಶುಭುಮಸ್ತು । ವೈದ್ಯಾಮೃತ ॥
ಪ್ರಣಮ್ಯ ಸರ್ವವಿಶ್ವೇಶಂ ವೀತರಾಗಂ ಜಿನೇಶ್ವರಂ ।
ವೈದ್ಯಾಮೃತಂ ಪ್ರವಕ್ಷ್ಯಾಮಿ ಲೋಕಸಾರೋಗ್ಯಕಾರಣಂ ॥
ಶ್ರೀಧರದೇವಂ ಕರುಣದೊ
ಳೀ ಧರೆಯ ಮನುಷ್ಯತತಿಗೆ ಹಿತಮಪ್ಪನೆಗಂ
ವ್ಯಾಧಿ ಹರನಪ್ಪ ತೆಱನಂ
ಸಾಧಿಸಿ ಪೇಳ್ದಪೆನಿಂದೊಂದು ವೈದ್ಯಾಮೃತಮಂ ॥
ಅದೆಂತೆಂದೊಡೆ – ಗರ್ಭಾನ ಮಾವಾದಿಯಾಗಿ ಮೊದಲದು ದ್ರವ್ಯಸಂಗ್ರಹ ಧಾನ್ಯೌಷಧಿ ರಸಂಗಳಂ ಮೊದಲಾಧ್ಯಾಯಂ । ಯೋನಿದೋಷಮಂ ಪೇಳ್ವೆಂ ॥

ಅಂತ್ಯ : ಭದ್ರಿರ್ಶೈತ್ಯಂ ಮುಹುರ್ದ್ಧಾರ್ಹಾ ಕೃಷ್ಣಾಮೋಹೋಸ್ಥಿ ವೇದನಾಃ ||
ಮಂದವಾತೇ ವ್ಯವಸತಿಂ ಲಿಂಗಂ ಪಿತ್ತಕಪೋದ್ಭಣೇ || ೩ ||
ಸಂಧ್ಯಸ್ಥಿ ಶಿರಸಶೂಲಂ ಪ್ರಲಾಪೋ ಗೌರವಂ . . ||
ವಾತೋ . . ಣೆಸ್ಯಾ . ನುಗೆ ತೃಷ್ಣಾ ಕಂಠಾಸ್ಯ ಶುಷ್ಕತಾ || ೪ ||
ರಕ್ತವಿಣ್ಮಾತ್ರ ತಥಾಹಸ್ವೇದಸ್ತ್ರ್ಯ .... ||

ವಿಷಯ : ರೋಗ ನಿಧಾನ, ಔಷಧಿ ಮತ್ತು ಅವುಗಳ ಪ್ರಯೋಗ.

ವಿಶೇಷ : ಮಧ್ಯೆ ಕೆಲವು ಪತ್ರಗಳು ಲುಪ್ತವಾಗಿವೆ. ಅಸಮಗ್ರಪ್ರತಿ. ಕೊನೆಯಲ್ಲಿ ಕ್ರಮಾಂಕವಿಲ್ಲದ ಗ್ರಂಥಕ್ಕೆ ಸೇರದ ವೈದ್ಯಶಾಸ್ತ್ರಕ್ಕೆ ಸಂಬಂಧಪಟ್ಟ ಹತ್ತು ಪತ್ರಗಳಿವೆ. ಶಕಟರೇಫದ ಬಳಕೆ ಇದೆ. ಕೆಲವು ಪತ್ರಗಳಲ್ಲಿ ಒಂದು ಪಾರ್ಶ್ವದಲ್ಲಿ ಮಾತ್ರ ಬರವಣಿಗೆ ಇದೆ. ೬೧, ೧೭೮, ೧೭೯, ೧೮೧, ೧೮೮ ನೆಯ ಪತ್ರ ಲುಪ್ತ.

1648

ಕೆ. ಬಿ. ೨೪೦/೪	**ವೈರಾಗ್ಯಕೀರ್ತನೆ**	ಹಾಡು
೭.೮"×೬.೨"	?	?
೯–೧೦ ಪತ್ರ	೧೩ ಪಂಕ್ತಿ	೧೩ ಅಕ್ಷರ

ಆದಿ : ವೈರಾಗ್ಯಕೀರ್ತನೆ । ರಾಗ – ಕಲ್ಯಾಣಿ – ತಾಳ – ಝಂಪೆ.
ಈಷಣತ್ರಯದೊಳಗೆ
ದೋಷಗಳನರಿತು ಫಣಿ
ಭೂಷಣನ ಭಜಿಸು ಮನಸೆ || ಪಲ್ಲವಿ ||
ಶೋಷಿಸುವೆ ವಿಷಯಾಭಿ
ಲಾಷೆಯಿಂದಲಿ ಬರಿಯ
ವೇಷಗಳಿವೇನು ನಿಜವೆ ತಿಳಿಯೆ || ಅನುಪಲ್ಲವಿ ||

ಅಂತ್ಯ : ತೊರದು ನಿಜಸೌಖ್ಯವನು ।
ಕರಗಿ ತನ್ನೊಳು ತಾನು
ತರತರದಿ ತಪವ ಮಾಡಿ ।
ಸುರರನೆಲ್ಲರ ಬೇಡಿ
ವರದಿಯರವತ್ತು ಸಾಸಿರ ತನಯರನು ಪಡದು
ಸರಿಯಾರು ತನಗೆಂದು ಮೆರೆಯುತ್ತಲಿರೆಯುವರು

ವುರಿದು ಪೋದುದ ತಿಳಿಯದೆ ಬರಿಯ ಮೋಹವಿದೇಕೆ
ಕರುಣದಿಂ ಚಾಮುಂಡಿ ಪೊರೆವಳಲ್ಲದೆ ಬರುವರೆ ಸುತರು ‖ ೩ ‖

ವಿಷಯ : ವೈರಾಗ್ಯಬೋಧಕ ಹಾಡುಗಳು.

ವಿಶೇಷ : ಅಸಮಗ್ರಪ್ರತಿ. ಇದರೊಡನೆ ಆಳಿದ ಮಹಾಸ್ವಾಮಿಯವರ ಸ್ವಾರಿ ವರ್ಣನೆ, ಅನುಭವ ಪಂಚರತ್ನ, ವೈರಾಗ್ಯಪ್ರತಿಪಾದಕ ಝಾವಡಿಗಳು ಎಂಬ ಕೃತಿಗಳಿವೆ.

1649

ಕೆ. ಬಿ. ೨೪೦/೩ **ವೈರಾಗ್ಯಪ್ರತಿಪಾದಕ ಝಾವಡಿ** ಹಾಡು
೭.೮"×೬.೨" ಕೃಷ್ಣರಾಜ ವಡೆಯರು ೧೯ ನೆಯ ಶತಕ
೧ ಪತ್ರ (೪ ನೆಯ ಪತ್ರ) ೧೬ ಪಂಕ್ತಿ ೨೧ ಅಕ್ಷರ

ಆದಿ : ಶ್ರೀ ಕೃಣ್ಣರಾಜಮಹಾರಾಜಕಂಠೀರವ ವಿರಚಿತವಾದ ವೈರಾಗ್ಯ ಪ್ರತಿ ಪಾದಕವಾದ ಝಾವಡಿಗಳೂ ‖ ರಾಗ ‖ ಭೈರವಿ ‖ ತಾಳ ‖
ಮಾಡಿ ಮಾಡೀ ಮೂಢನಾದೆ । ಆಡಿ ಆಡಿ ದುಷ್ಟರೊಡನೆ
ಜಾಡನೂ ತಿಳಿಯದೆ । ಕೂಡಿ ಮುಂನ ಕಾರ್ಯಗಳನಾ ‖ ಪ‖
ಚಂಡಸುತವೀ ಪಂಡಿತರನೂ । ಕಂಡದುದಕೆ ಕಂಣನಿಟ್ಟು
ಪುಂಡತನದೀ ಭ್ರಮಿಸಿಕೊಂಡು । ಪುಂಡರೀಕಾಕ್ಷನ ನೆನೆಯದೆ ನಾ ‖ ೧ ‖

ಅಂತ್ಯ : ರಾಗ ‖ ಪಂತುವರಾಳಿ ‖ ಅಟತಾಳ ‖ ಚಾಪು ‖
ಮಾವವಾ ಜನ್ಮದೊಡ್ಡದು ವ್ಯರ್ಥ
ಹಾನಿಮಾಡಬ್ಯಾಡಿ ಸಂಸಾರಿಗಳಿರಾ ‖ ಪ ‖

× × × ×

ತಂನಗೆ ನೋಡಲು ತಾಯಿ ತಂದೆ ಸತಿ
ಮುಂನಣೆಗ್ಯೆಯಾವ ಮಕ್ಕಳ್ಯಾರೊ
ಯಿಂನಾದರು ನೀವು ಯೇಕಭಾವದಿಂದ
ಚನ್ನಾಗಿ ಭಜಿಶಿರೊ ಚಾಮುಂಡೇಶ್ವರಿಯಾ ‖ ೩ ‖

ವಿಷಯ : ವೈರಾಗ್ಯಬೋಧಕ ಹಾಡುಗಳು.

ವಿಶೇಷ : ಅಸಮಗ್ರ. ಇದರೊಡನೆ ಆಳಿದ ಮಹಾಸ್ವಾಮಿಯವರ ಸ್ವಾರಿವರ್ಣನೆ, ಅನುಭವ ಪಂಚರತ್ನ , ವೈರಾಗ್ಯ ಕೀರ್ತನೆ ಎಂಬ ಕೃತಿಗಳಿವೆ.

1650

ಕೆ. ೧೬೯/೨೪	**ವೈರಾಗ್ಯಷಟ್ಪದಿ**	ವಾರ್ಧಕಷಟ್ಪದಿ
೯.೬"×೨"	ಮುರಿಗೆಯ ಶಾಂತವೀರೇಶ್ವರಸ್ವಾಮಿ	ಸು. ೧೫೩೦
೧೨೫–೧೩೭ ಪತ್ರ	೧೦ ಪಂಕ್ತಿ	೫೦ ಅಕ್ಷರ

ಆದಿ : ಮುರಿಗಾ ಶಾಂತವೀರೇಶ್ವರಸ್ವಾಮಿಗಳು ನಿರೂಪಿಸಿದ ವೈರಾಗ್ಯಷಟ್ಪದಿ

ವಾರ್ಧಿಕ ॥ ಶ್ರೀಮನ್ಮಹಮಹಿಮಸಾರನಂ ಧೀರನಂ
ಕಾಮಿತಾರ್ತ್ಥವನೀವ ಕರುಣಿಯಂ ತರುಣಿಯಂ
ವಾಮಭಾಗದಿ ತಾಳ್ದ ದಕ್ಷನಂ ತ್ರ್ಯಕ್ಷ ನಂ ಪಕ್ಷನಂ ಶಿವಭಕ್ತಿಯಾ
ವ್ಯೋಮ ಗಂಗಾ ಶಿರೋತ್ತಂಸನಂ ಹಂಸನಂ
ಕಾಮೋಗ್ರ ಜಿಹ್ವಗ ವಿನಾಯಕನ ನಾಯಕನ
ರಾಮ ಕಂಧರ ವುರ್ದ್ದರೀತನಂ ನೀತನಂ ಬಸವಲಿಂಗನ ಭಜಿಪೆನೂ ॥ ೧ ॥

ಅಂತ್ಯ : ಗುರುಲಿಂಗ ಚರರೂಪ ಧರಿಸಿದನುಲಾನಂದ
ವರಬಸವ ಚಂನಬಸವಾಂಕ ಚಿತ್ಪ್ರಭುದೇವ
ಪರಮ ಮಹಿಮರಪಾದ ಮಕರಂದ ಪಂತರೂಹ ಷಟ್ಪದಂಗಳ ಸಂತತಂ
ಸ್ಥಿರವಾಗಿ ಹೃತ್ಕಮಲದೊಳ್ಧರಿಸಿ ಪದನ ಸರ
ಸಿರುಹದೊಳ್ನಿಲೆಗೊಳಿಸಿ ಪಠಿಸಿ ಭಕ್ತಿಜ್ಞಾನ
ವಿರತಿಯಂ ಕರುಣಿಪನ ಕರಕಂಜ ಪುರವಾಸ ವರ ಯಿಷ್ಟಲಿಂಗೇಶನೂ ॥೧೦೧॥
ವೈರಾರ್ಗ್ಯಷಟ್ಪದಿ ಸಂಪೂರ್ನಂ ಮಂಗಳಮಹಾ ಶ್ರೀ.

ವಿಷಯ : ನೀತಿ ಮತ್ತು ವೈರಾಗ್ಯಬೋಧೆ.

ವಿಶೇಷ : ಇದೇ ಕಟ್ಟಿನಲ್ಲಿ ನೀಲಾಂಬಿಕ ಲಲಿತಸ್ತೋತ್ರ, ಚಿಕ್ಕನೀಲಮ್ಮ ಸ್ತೋತ್ರ ಮೊದಲಾದ ಇತರ ೨೩ ಗ್ರಂಥಗಳಿವೆ.

1651

ಕೆ. ೩೨೫/೨೪	**ವೈರಾಗ್ಯಷಟ್ಪದಿ**	ವಾರ್ಧಕಷಟ್ಪದಿ
೯.೫"×.೨"	ಮುರಿಗೆಯ ಶಾಂತವೀರೇಶ್ವರಸ್ವಾಮಿ	ಸು. ೧೫೩೦
೯೬–೯೭ ಪತ್ರ	೧೧ ಪಂಕ್ತಿ	೫೦ ಅಕ್ಷರ

ಆದಿ : ಮುರಿಗೆಸ್ವಾಮಿಗಳು ಸೇರಿಸಿದ ವೈರಾಗ್ಯಷಟ್ಪದಿ ।
ಶ್ರೀಮನ್ಮಹಾಮಹಿಮಸಾರನಂ ಧೀರನಂ
ಕಾಮಿತಾರ್ತ್ಥವನೀವ ಕರುಣಿಯಂ ತರುಣಿಯಂ
ವಾಮಭಾಗದಿ ತಾಳ್ದ ದಕ್ಷನಂ ತ್ರಿಯಕ್ಷನಂ ಶಿವಭಕ್ತಿಯಾ

ಯೋಮಗಂಗಾ ಶಿರೋತ್ತಂಸನಂ ಹಂಸನಂ
ಕಾಮೋಗ್ರ ಜಿಂಹ್ವಗ ವಿನಾಯಕನ ನಾಯಕನಾ
ರಾಮಕಂದರ ವೂರ್ಧ್ವರೇತನಂ ನೀತನಂ ಬಸವಲಿಂಗನ ಭಜಿಪೆನೂ || ೧ ||

ಅಂತ್ಯ : ಭೂಸುರಂ ವುದ್ದಾಲನೆಂಬವಂ ಚಂಡಿಯಿಂ
ಗಾಸೆಯಾಗೆಯ್ದಿದಂ ಕಾಸಿಗಂ ವಿಕ್ರಮಂ
ಲೇಸೆನಿಪ ತುರುಗವಾದಂ ಬಿಟ್ಟಪಾರಾದನಂದು ಅಂಗನೆಗೆ ಮಚ್ಚಿ
ತಾ ಸತ್ತ ಕೀಚಕಂ ದ್ರೌಪತಿಯ ರತಿಗೆಳ್ಳಸಿ
ಆಸೆ ಮಾಡಳಿದ ಬಾಹೂರ ರಕ್ಷಸನು ಬಿಳಿ
ಕಾ ಸತಿಯು ಕಂಜರಿಗೆ ಸತಿಯಗ್ಗ್ರ ಮಚ್ಚಿದರ್ಗುಂಟೆಯಿಹ ಪರವು ಗುರುವೆ || ೧೪ ||

ಸೀತೆ ರಾಮನ ಮಾತ ಕೇಳದಾ ಪತಿಯ ಬ್ರ

ವಿಷಯ : ವೈರಾಗ್ಯ.

ವಿಶೇಷ : ಅಸಮಗ್ರ. ಶಕಟರೇಫವಿದೆ. ಇದೇ ಕಟ್ಟನಲ್ಲಿ ಪ್ರಭು ನಟನಾತಾರಾವಳಿ, ನೀಲಲೋಚನ ಸ್ತುವಿತ್ರ ಮೊದಲಾದ ಇತರ ಇನ್ನೂ ೨೪ ಗ್ರಂಥಗಳಿವೆ.

1652

ಕೆ. ೩೪೩/೧	**ವೈರಾಗ್ಯಷಟ್ಪದಿ**	ವಾರ್ಧಕಷಟ್ಪದಿ
೧೨.೨"×೨.೩"	ಮುರಿಗೆಯ ಶಾಂತವೀರೇಶ್ವರಸ್ವಾಮಿ	ಸು. ೧೫೩೦
೮೬–೯೫ ಪತ್ರ	೧೧ ಪಂಕ್ತಿ	೫೮ ಅಕ್ಷರ

ಆದಿ : ಶ್ರೀ ಗುರುಬಸಲಿಂಗಾಯ ನಮಃ || ವೈರಾಗ್ಯಷಟ್ಪದಿಯ ಬರವುದಕ್ಕೆ ಶುಭ ಮಸ್ತು ||

ಶ್ರೀಮನ್ಮಮಹಾ ಮಹಿಮಸಾರನಂ ಧೀರನಂ
ಕಾಮಿತಾರ್ತ್ಥವನೀವ ಕರುಣಿಯಂ ತರುಣಿಯಂ
ವಾಮಭಾಗದಿ ತಾಳ್ದ ದಕ್ಷನಂಕೆತ್ರ್ಯೈಯಕ್ಷನಂ ಶಿವಭಕ್ತಿಯ
ವ್ಯೋಮಗಂಗಾ ಶಿರೋತ್ತಂಸನಂ ಹಂಸನಂ
ಕಾಮೋಗ್ರ ಜಿಂಹ್ವಗದಿನಾಯಕನ ನಾಯಕನ
ರಾಮಕಂಧರ ವೂರ್ಧ್ವರೇತನಂ ನೀತನಂ ಬಸವಲಿಂಗನ ಭಜಿಪೆನೂ || ೧ ||

ಅಂತ್ಯ : ಗುರುಲಿಂಗ ಚರರೂಪ ಧರಿಸಿದಮುಲಾನಂದ
ವರಬಸವ ಚೆಂನಬಸವಾಂಕ ಚಿತ್ಪ್ರಭುದೇವ
ಪರಮ ಮಹಿಮರ ಪಾದ ಮಕರಂದ ಪಂಕರುಹ ಷಟ್ಪದಂಗಳ ಸಂತತಂ
ಸ್ಥಿರವಾ ಹೃತ್ಕಮಲದೊಳ್ದರಿಸಿ ವದನ ಸರಿ
ಸೀರುಹದೊಳ್ನೆಲೆಗೊಳಿಸಿ ಪಠಿಸಿ ಭಕ್ತಿಜ್ಞಾನ
ವಿರತಿಯಂ ಕರುಣಿಪನು ಕರಕಂಜ ಪುರವಾಸ ವರದಿಷ್ಟಲಿಂಗೇಶನೂ ||೧೦೧||
ವೈರಾಗ್ಯ ಷಟ್ಪದಿ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : ನೀತಿ ಮತ್ತು ವೈರಾಗ್ಯಭೋಧೆ.

ವಿಶೇಷ : ವೈರಾಗ್ಯ ಷಟ್ಪದಿಯ ಆರಂಭದಲ್ಲಿ ಬಸವಲಿಂಗ - ವೃಷಲಿಂಗ ಸ್ತುತಿಗಳೂ ಕೊನೆಯಲ್ಲಿ " ಕರಕಂಜ ಪುರವಾಸ ವರದಿಷ್ಟಲಿಂಗೇಶಾಂಕಿತವೂ " ಇರುತ್ತದೆ. ೯೩ ನೆಯ ಪತ್ರ ಶಿಥಿಲ. ಇದರೊಂದಿಗೆ ಲಿಂಗಸ್ತೋತ್ರ ಷಟ್ಪದ, ಶಿವಲಿಂಗ ಷಟ್ಪದಿ, ಶಿವಮಹಿಮಾಶತಕ, ಪಂಚವಿಂಶತಿನುತಿ, ಷಡ್ವಕ್ತ್ರಸ್ತೋತ್ರಂ ಈ ಗ್ರಂಥಗಳೂ ಇರುತ್ತವೆ.

1653

ಕೆ. ೩೫೯/೨	**ವೈಷ್ಣವವಾದಖಂಡನ**	ಗದ್ಯ
೧೧" × ೧.೭"	?	?
೨೫೩–೩೧೮ ಪತ್ರ	೮ ಪಂಕ್ತಿ	೫೫ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ || ವೈಷ್ಣವವಾದಖಂಡನ ||
ಶ್ರೀಮನ್ಮಹಾ ಸ್ವಸ್ತಿ ಸಮಸ್ತ ಪ್ರಸಸ್ತಿ ಸಹಿತ। ಬ್ರಹ್ಮಾಂಡ ಭಾಂಡ ಗರ್ಭೀಕ್ರಿತ ವಿಧಿ ಮಧುಸೂದನ ತ್ರಿದಶೇಶ್ವರಾಧ್ಯನೇಕ ದೇವಗಣ ಮಕುಟ ಮಣಿಗಣ ದೀಪ್ತಿ ದೀಪ್ತಕಾ ಪಾದಪಯೋಜ ಯುಗಳದಿಂ ರಾಜಿಸುತಿಪ್ಪ ಶ್ರೀ ಪರಮೇಶ್ವರನ ಸಾರುಪ್ಯ ಪದದೊಳಿರ್ದ್ದ × × × × ಬೆಳಗಹ ಹೊತ್ತಿಗೆ ವಿಶ್ವನಾಥ ರಚಿಸಿದ ತಟಾಕಮಂ ರಾಜನಿಗೆ ತೋಱಿಸಲಾಗಿ ಆ ರಾಜನು ಕಂಡು ತಂನ ನಾಶಾಗ್ರದ ಮೇಲೆ ಕರಾಂಗುಲಿ ಸಂಪುಟನಾಗಿ ತಲೆದೂಗಿ। ಆಶ್ಚರ್ಯ್ಯಂಬಟ್ಟು। ನೀವೆರಡನೆಯ ವಿಶ್ವನಾಥನು। ನೀಉತಾನೆ ಎಂದು ಪದ್ಮ ದಣಾಯಕರಿಗೆ ನಮಸ್ಕರಿಸಿ ಪರವಾದಿಗಳ್ಸಹಿತ ಸ್ತೋತ್ರಮಂ ಮಾಡಿ ತಟಾಕ ಪದ್ಮರಸರೆಂಬಭಿಧಾನಮಂ ಕೊಟ್ಟು। ಮರಳ್ದು ನಮಸ್ಕರಿಸಿ। ನೀಉ ಇಂದು ಮೊದಲಾಗಿ ನೀವೆಂಮ ಕಾರ್ಯ್ಯಕ್ಕೆ ಬರಸಲ್ಲದು।

ನೀವಿರ್ದ್ದ ಠಾವಿಗೆ ನಿಮಗೆ ಕೊಡುವ ದ್ರವ್ಯಮಂ ಕಳುಹುತಿರ್ದ್ದಪೆವೆಂಬ ಮಾತಿಗೆ ನಿಂಮ ಸೇವೆ ನಿಮಿತ್ಯವಾಗಿ ನಾಲು ತೆಕ್ಕೊಂಬುದಲ್ಲದೆ ಹಾಂಗೆ ನಾಲು ತೆಕ್ಕೊಳ್ಳಲಿಲ್ಲ । ವಿಶ್ವನಾಥನು ತಂನವರು ತನಗೆ ಬೇಕಾದಡೆ ಕೊಟ್ಟು ಬಂದಹನು । ಇಂತೆಂಬ ಮಾತನು ರಾಜಂಗೆ ಉತ್ತರಮಂ ಕೊಟ್ಟು ರಾಜನ ಕೈಇಂ ಬೀಳ್ಕೊಂಡು ತಂಮ ಮಹಾಮನೆಗೆ ಬಿಜಯಂಗೆಯ್ದು । ಶಿವಗಣಂಗಳ ನೆರವಿಯ ಸಂಭ್ರಮದಿಂದಲು । ಶಿವಗಣಂಗಳ ಪಾದೋದಕ ಪ್ರಸಾದದ ಉಲ್ಲಾಸದಿಂದಲು । ಶಿವಗಣಂಗಳ ಶಿವಾನುಭವದ ರಸಾರ್ನ್ನವದೊಳಗಾಳುತ್ತ ಮುಳುಗುತ್ತ ಶಿವಸುಖ ಸಂಕಥಾ ವಿನೋದದೊಳಗಿರ್ದ್ದ ತಟಾಕ ಪದ್ಮರಸಾಚಾರ್ಯರ ಜನನ ಸೂಚನಾದಿ ಸಮಾಪ್ತ ಮಂಗಳಮಹಾ ಶ್ರೀಶ್ರೀ ಶ್ರೀ. ಮುಂದೆ ವೈಷ್ಣವ ವಾದ ಖಂಡನವೆಂತೆಂದಡೆ ॥ ಇಂತೆಸೆವ ತಟಾಕ ಪದ್ಮರಸಾಚಾರ್ಯ ಮಹಿಮಾಸ್ಪದಂ ಕರ್ನ್ನ ಪಾರಂಪರೆಯಿಂದ। ಇಂದ್ರದೇಶದೊಳಿರ್ದ್ದ ತ್ರಿಭುವನ ತಾತನೆಂಬ ಅಪರ ವೈಷ್ಣವ ಕೇಳ್ದು

ಅಂತ್ಯ : ಈ ವಾದ ಖಂಡನವೆಂಬುದು ದೋರಾಂಬುಧಿ ಎಂಬ ಪುರಕ್ಕಧಿಪತಿಯಾದ ನೃಸಿಂಹ್ಯ ಬಲ್ಲಾಳರಾಜನ ಮಹದೈಶ್ವರ್ಯಕ್ಕೆ ದಣಾಯಕ ಪಟ್ಟಮಂ ತಾಳಿರ್ದ್ದ । ಆ ರಾಜನಿಗೆ ತಟಾಕದ ಮಹಿಮೆಯಂ ತೋಱಿ ಮೆಱದ ತಟಾಕ ಪದ್ಮದಣಾಚಾರ್ಯರ ಪುತ್ರಪೌತ್ರಾದಿ ವಿಡಿದು ಬಂದು ಪದ್ಮದಣಾಚಾರ್ಯರು ಆ ವಾದನಿಮಿತ್ಯವಾಗಿ ವೇದೋಪನಿಷತ್ಪುರಾಣಾಗಮಂಗಳ ಗ್ರಂಥಗಳೆಲ್ಲವಂ ತೆಗೆದು ವಾಕ್ಯಾಷ್ಟನವಾಗಿ ಷಟ್ಪದ ಪದಬಂಥ ರೂಪಿನಿಂದ ರಚಿಸಿದರೂ ॥ ಅವರ ವಾಕ್ಪ್ರಸಾದದ ಬಲದಿಂದ ವೇದೋಪನಿಷತ್ಪುರಾಣಾಗಮ ಗ್ರಂಥಂಗಳನೂ ಸಂಗ್ರಹಿಸಿಕೊಂಡು ತ್ರಿಲೋಚನಾಚಾರ್ಯರ ಸತ್ಕುಮಾರನು ನಂಜೆನಾಥಾರ್ಯ್ಯನು ತ್ರಿಭುವನತಾತನೆಂಬ ವಾದಿ। ತಂನ ವಿಷ್ಣುವಿನ ಮಹತ್ವವ ನುಡಿದ ನುಡಿಗಳೆಲ್ಲವನೂ ವಚನರೂಪಿನಿಂದ ಖಂಡಿಸಿ ಆ ವಚನದೆಡೆಗೆಡೆಗೆ ವೇದಪುರಾಣಾಗಮಾದಿ ಗ್ರಂಥಂಗಳಂ ಬರದು ಇದು ವೈಷ್ಣವ ವಾದ ಖಂಡನವೆಂದು ಹೆಸರನಿಟ್ಟು ಮಾಡಿದ । ಈ ಕಥನವನೂ ನಂಮ ಶಿವಸಮಯದೊಳಗಾದ ಸದ್ವಿಂದ್ವಾಂಪಕರುಗಳು ಬಾಲವೃದ್ಧರು ಮೊದಲಾದ ಸದ್ಭಕ್ತ ಜನರುಗಳು ಲಾಲಿಸಿ ಪಾಲಿಸೂದು ಎಂನ ॥ * ॥ ವೈಷ್ಣವ ವಾದ ಖಂಡನ ಸಮಾಪ್ತಃ ॥ ಶ್ರೀ ॥ ॥ ಶ್ರೀ ॥ ॥ ಶ್ರೀ ॥

ವಿಭವ ಸಂವತ್ಸರದ ಚೈತ್ರ ಶು ೧೦ ಯೂ ಗುರುವಾರ ಕಳಲೆಯ ನಂಜ ರಾಜಯ್ಯನಿಗೆ ನಂಜನಗೂಡ ವಿಷಕಂಠನು ಬರೆದ ವೈಷ್ಣವವಾದಖಂಡನಂ ಮುಕ್ತಿಮಾಂಗಲ್ಯಮಸ್ತು । ಸೋಮನಾಥಭಾಷ್ಯ ವೈಷ್ಣವವಾದಖಂಡನ ವುಭಯಶಾಸ್ತ್ರಕ್ಕೆ ಸೇರಿದ ವೋಲೆ ೩೧೮ ಕ್ಕಂ ಗ್ರಂಥ ೮೦೦೦ ಕ್ಕಂ ಮಂಗಳ ಮಹಾಶ್ರೀ.

ವಿಷಯ : ವೈಷ್ಣವವಾದಖಂಡನ.

ವಿಶೇಷ : ಶಕಟರೇಫವಿದೆ. ಇದರೊಂದಿಗೆ ಸೋಮನಾಥಭಾಷ್ಯವೂ ಇದೆ. ಪ್ರತಿಯ ಕಾಲಾದಿಗಳ ಬಗ್ಗೆ ಗ್ರಂಥಾಂತ್ಯದಲ್ಲಿ ಉಲ್ಲೇಖವಿದೆ. ಪ್ರತಿ ಶಿಥಿಲವಾಗಿದೆ.

1654

ಕೆ. ೪೧೫	**ವೊಡ್ಡಾರಾಧಣಂ**	ಗದ್ಯ
೧೭.೫"×೧.೯"	ಶಿವಕೋಟ್ಯಾಚಾರ್ಯ	ಸು. ೧೧೧೦
೧–೧೦೪ ಪತ್ರ	೯ ಪಂಕ್ತಿ	೬೫ ಅಕ್ಷರ

ಆದಿ : ....ಂತರ್ಗ್ಗ ನಮಸ್ಕಾರಂಗೆಯ್ದು ದೇವೋಪಸರ್ಗ್ಗ ಮನುಷ್ಯೋಪಸರ್ಗ್ಗ ತಿರಿಕೋಪಸರ್ಗ್ಗಮಚೇತನೋಪಸರ್ಗ್ಗಮೆಂದಿಂತು ಚತುರ್ವ್ವಿದಮಪ್ಪುಪಸರ್ಗ್ಗಮು.....ನೀರಳ್ಕೆ ಮೊದಲಾಗೊಡೆಯ ಯಿಪ್ಪತ್ತೆರಡು ಪರೀಷಹಂಗಳಂ ಸೈರಿಸಿ । ಅಯ್ದುಮಿಂದ್ರಿಯಂಗಳಂ ಗೆಲ್ದು ಬಾಹ್ಯಾಭ್ಯಂತ.....ಗ್ರಹಂಗಳಂ ತೋಜಿ....ದಶವಿಧಮಪ್ಪ ತಪದೊಳ್ನೆಗಳ್ದು ಪ್ರಾಯೋಪಗಮನದಿಂ ಸನ್ಯಸನಂಗೆಯ್ದು ತಮ್ಮ ಕ್ಷಯಂಗೆಯ್ದು ಮೋಕ್ಷಕ್ಕೆ ವೋದರ್ । ಮತ್ತಂ ಸರ್ವಾರ್ತ್ಥಸಿದ್ಧಿಯೊಳ್ಪುಟ್ಟಿದ ಮಹಾಪುರುಷರ್ಕ್ಗಳ ಕಥೆಗಳಂ ಪೇಳ್ವಲ್ಲಿ ಮುಂನ ಸುಕುಮಾರಸ್ವಾಮಿಯ ಕಥೆಯಂ ಪೇಳ್ವೆಂ

ಗಾಹೆ ॥ ಭಲ್ಲುಂಕಿಯೆ ಣಿಂಚಂ ಖಂಜಂತೊ ಘೋರವೇದಣಂಶೋಪಿ ।
ಆರಾದಣಂ ಪಂವಣಾ ಝಾಣೇಣ ಅವಂತಿ ಸುಕುಮಾರೊ ॥
ಭಲ್ಲುಂಕಿಯೆ । ಮುಂನಿನ

ಅಂತ್ಯ : ಪಸಿವುಂ ನೀರಳ್ಕೆ ಮೊದಲಾಗೊಡೆಯ ಪರೀಷಹಂಗಳಂ ಬ್ಯಾದಿಗಳೊಳಪ್ಪ ವೇದನೆಗ....ರಿ....ಕ್ಷಮೆಯಂ ಭಾವ್ಸಿ ಶುಭ ಪರಿಣಾಮದಿಂದಂ ಪರಮ ಶುದ್ಧ ಸಹಜ ದರ್ಶನ ಜ್ಞಾನ ಚಾರಿತ್ರಂಗಳಂ ಸಾದಿಸಿ ಸ್ವರ್ಗಾಪವರ್ಗ ಸುಖಂಗಳ ನೆಯ್ದುಗೆ ॥೧೯॥ ಯಿಾ ಪೇಳ್ದ ಪತ್ತೊಂಭತ್ತು ಕಥೆಗ....ಟ್ಯಾಚಾರ್ಯ್ಯರು ಪೇಳ್ದ ವೊಡ್ಡಾರಾದಣಂ ಸಂಪೂರ್ಣ್ಣಂ.

ವಿಷಯ : ಜೈನತತ್ತ್ವನಿರೂಪಣ ಕಥೆಗಳು.

ವಿಶೇಷ : ಪ್ರತಿ ತುಂಬಾ ಶಿಥಿಲವಾಗಿದೆ. ಪ್ರತಿಯ ಕೊನೆಯಲ್ಲಿ "ಆನಂದ ಸಂವತ್ಸರದ ಕಾರ್ತ್ತಿಕ ಬಹುಳ ಪಾಡ್ಯ ಸೋಮವಾರದಲು ಮಲ್ಲರಸನು ಬರೆದ ವೊಡ್ಡಾರಾದನೆ ಸಮಾ...." ಎಂದಿದೆ. ೫೪ ನೆಯ ಪತ್ರ ಲುಪ್ತ. ಕೆಲವು ಪತ್ರಗಳು ಮುರಿದಿವೆ.

1655

ಕೆ. ಎ. ೨೯೭ **ವೊಡ್ಡಾರಾಧಣಂ** ಗದ್ಯ

೧೩.೨"×೪.೨" ಶಿವಕೋಟ್ಯಾಚಾರ್ಯ ಸು. ೧೧೧೦

೧–೨೯೪ ಪುಟ ೨೦ ಪಂಕ್ತಿ ೨೨ ಅಕ್ಷರ

ಆದಿ : ಶಿವಕೋಟ್ಯಾಚಾರ್ಯ ವಿರಚಿತಮಪ್ಪ ವೊಡ್ಡಾರಾಧಣಂ. ಸುಕುವಾರ ಸ್ವಾಮಿಯ ಕಥೆ.

ಗಾಹೆ ॥ ಭಲ್ಲುಂಕಿಯೆಣಿಣಂಚಂ ಖಂಜಂತೊ ಘೊರವೇ ದಣಂಶೋಪಿ ।
ಆರಾಧಣಂ ಪವಂಣೊ ಝಾಣೇಣ ಅವಂತಿ ಸುಕುಮಾರೊ ॥
ಭಲ್ಲುಂಕಿಯೆ । ಮುನ್ನಿನ ಜನ್ಮಾಂತರ........ಯಿಂದಂ ಣಿಂಚಂ ಕಂಜಂತೊ। ಮೂರು ದಿವಸಂ ನಿರಂತರಮಿರುಳುಂ ಪಗಲುಂ ತಿ............ಅದೆಂತೆಂದೊಡೆ ....ಪೊಳಲ್ ಅದನಾಳ್ವೊಂ.

ಅಂತ್ಯ : ಸೇರಿಸಿ ಕ್ಷಮೆಯಂ ಭಾವಿಸಿ ಶುಭಪರಿಣಾಮದಿಂದಂ ಪರಮ ಶುದ್ಧ ಸಹಜ ದರುಶನ ಜ್ಞಾನಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ ।।೧೯।। ಈ ಪೇಳ್ದ ಪತ್ತೊಂಭತ್ತು ಕಥೆಗಳು ಶಿವಕೋಟ್ಯಾಚಾರ್ಯರ್ಪೇಳ್ದ ವೊಡ್ಡಾರಾಧಣಂ ಸಂಪೂರ್ಣಂ.

ವಿಷಯ : ಜೈನತತ್ತ್ವ ನಿರೂಪಣ ಕಥೆಗಳು.

ವಿಶೇಷ : ಇದರ ಕೆಲವು ಭಾಗಗಳು ಕೆ. ೪೧೫ ನೆಯ ನಂಬರಿನ ಓಲೆಯ ಪ್ರತಿಯಿಂದ ಬರೆದವು. ಪ್ರತಿಯ ಕೊನೆಯಲ್ಲಿ "ಸ್ವಸ್ತಿ ಶ್ರೀಮತು ಸಕವರ್ಷ ೧೩೭೫ ಸುಭಾನು ಸಂವತ್ಸರದ ಕಾಬ ಅಮವಾಸೆ ಬುಧವಾರದಲು । ಸ್ವಸ್ತಿ ಶ್ರೀಮದ್ರಾಯ ರಾಜಗುರುಮಂಡಳಾಚಾರ್ಯ × × × × ಶ್ರೀ ಭಾನು ಮುನಿಗಳ ವಾಕ್ಯಾಮೃತದಿಂ ಬರದುಕೊಟ್ಟನು. ಬರಸಿಕೊಟ್ಟಾತನು ಒಜಂಣಸೆಟ್ಟಿಯರ ಮಗ ಕಲ್ಲಪ್ಪಸೆಟ್ಟಿಯು ಕಮಳಶ್ರೀ ಅವ್ವಗಳಿಗೆ ಆತ್ಮಾರ್ಥವಾದಿ ವೊಡ್ಡಾರಾಧನೆಯನು ಬರಯಿಸಿಕೊಟ್ಟುದಕ್ಕೆ ಮಂಗಳ ಮಹಾ" ಎಂದಿದೆ. ಅಕ್ಷರಗಳು ವಿರಳವಾಗಿ ಸುಂದರವಾಗಿವೆ. ಗ್ರಂಥದ ಆದಿಯ ಬೇರೊಂದು ಪುಟದಲ್ಲಿ ವಿಷಯಸೂಚಿಯಿದೆ.

1656

ಕೆ. ೧೬೦/೨ **ವ್ಯವಹಾರಗಣಿತ** ಪದ್ಯ, ಟೀಕು

೧೨.೧"×೧.೨" ರಾಜಾದಿತ್ಯ ಸು. ೧೨೨೦

೨೪–೧೧೫ ಪುಟ ೭ ಪಂಕ್ತಿ ೪೬ ಅಕ್ಷರ

ಆದಿ : ಕಂ || ಶ್ರೀಮದವಿಚಲಿತ ಲಕ್ಷ್ಮೀ
ಪ್ರೇಮಂ ತ್ರೈಲೋಕ್ಯದಾಮನವನತ ಶಕ್ರ
ಸ್ತೋಮಂ ಸ್ವಾದೀನಸುಖಂ
ನೇಮಿಜಿನಂ ನಮಗೆ ಮಾಳ್ಕೆ ಬೋದೊದಯಮಂ ||
ಶ್ರೀಜಯ ಜಿತಾಂಗಜಂ ಸುರ
ರಾಜ ಸಮಾಜ ಪ್ರಪೂಜ್ಯನತಿಶಯಭೋಗಂ
ಭ್ರಾಜಿಷ್ಣು ನೇಮಿಜಿನಪತಿ
ರಾಜಾದಿತ್ಯಂಗೆ ಮಾಳ್ಕೆ ಮತಿವಿಕಸನಮಂ ||

ಅಂತ್ಯ : ಪ್ರತ್ಯೇಕ ೨ ತೂಕ ಬ........ರಿ ತೂಕ ೫೫ ಪ್ರತ್ಯೇಕ ೧ ತೂಕ ಬ ೯.... ೩ ಕ್ಕೆ ಬಂ ೧೦ ತೂಕ ೫೭ ༄ಂ ವುಳಿದವು ༄ಂ ತೂಕ ಯಿಾ ಪ್ರಕಾರದಲ್ಲಿ ತೂಕವನೂ ಕಡಮೆಯ ಮಾಡಿಕೊಂಡು ವೊಂದು ರಾಗಿ ಕಡಮೆ ಹೊತ್ತು ಬಂಣ ಪರಿಯಂತರವು ನೋಡಿಕೊಂಬುದು

ವಿಷಯ : ವ್ಯಕ್ತಗಣಿತ.

ವಿಶೇಷ : ಅಸಮಗ್ರಪ್ರತಿ. ಇದೇಕಟ್ಟಿನಲ್ಲಿ ಮಹಾವೀರಾಚಾರ್ಯನ ಗಣಿತಸಾರಸಂಗ್ರಹ ಎಂಬ ಕೃತಿ ಇದೆ. ಶಕಟರೇಫದ ಬಳಕೆಯಿದೆ. ಕೆಲವು ಓಲೆಗಳ ಅಂಚು ಮುರಿದಿದೆ. ಕಟ್ಟಿನ ಮೊದಲಿನಲ್ಲಿರುವ ಒಂದು ಓಲೆಯಲ್ಲಿ ಗಾಯದ ಎಣ್ಣೆಯನ್ನು ತಯಾರಿಸುವ ಕ್ರಮ ಇದೆ. ಬಳಿಕ ನಾಲ್ಕು ಓಲೆಗಳಲ್ಲಿ ಕೋಷ್ಟಕ ಇದೆ. ಕೊನೆಯಲ್ಲಿ ಸಂವತ್ಸರ, ಮಾಸ, ರಾಶಿಗಳ ಹೆಸರುಗಳನ್ನು ತಿಳಿಸುವ ಮೂರು ಪ್ರತ್ಯೇಕ ಓಲೆಗಳಿವೆ.

1657

ಕೆ. ಎ. ೧೪	**ವ್ಯವಹಾರಗಣಿತ**	ಪದ್ಯ, ಟೀಕು
೧೨.೮"×೭.೮"	ರಾಜಾದಿತ್ಯ	ಸು. ೧೨೨೦
೧–೮೧ ಪುಟ	೩೦ ಪಂಕ್ತಿ	೨೨ ಅಕ್ಷರ

ಆದಿ : ಕಡ್ಡಿಯ ಕರಗಿದ ಲೆಖ್ಖ

ಬಂ-೫	ಬಂ-೫|	ಬಂ.೫||	ಬಂ-೫|||	ಬಂ-೬	ಬಂ-೬|
ಗ ೧	ಗ ೧	ಗ ೧	ಗ ೧	ಗ ೧	ಗ ೧
ಬಂ-೬||	ಬಂ-೬|||	ಬಂ-೭	ಬಂ-೭|	ಬಂ-೭||	ಬಂ-೭|||
ಗ ೧	ಗ ೧	ಗ ೧	ಗ ೧	ಗ ೧	ಗ ೧

ಬಂ-೮	ಬಂ-೮|	ಬಂ-೮||	ಬಂ-೮|||	ಬಂ-೯	ಬಂ-೯|
ಗ ೧	ಗ ೧	ಗ ೧	ಗ ೧	ಗ ೧	ಗ ೧
ಬಂ-೯||	ಬಂ-೯|||	ಬಂ-೧೦	ಬಂ.೧೦|	ಬಂ-೧೦||	ಬಂ-೧೦|||
ಗ ೧	ಗ ೧	ಗ ೧	ಗ ೧	ಗ ೧	ಗ ೧
ಬಂ-೧೧	ಬಂ-೧೧|	ಬಂ-೧೧||	ಬಂ-೧೧|||	ಬಂ-೧೨	ಬಂ-೧೨|
ಗ ೧	ಗ ೧	ಗ ೧	ಗ ೧	ಗ ೧	ಗ ೧
ಬಂ-೧೨||	ಬಂ-೧೨|||	ಬಂ-೧೩			
ಗ ೧	ಗ ೧	ಗ ೧			

ಲಬ್ಧ ಬಂಣ ೯—ಟೀ । ಯಿಾ ೩೩ ನೆ ಮನೆಯ ಬಂಣವನು ಹಾಗವ ಮಾಡಿ ಊರ್ಧ್ವ ಠವಣೆಯನಿಕ್ಕಲು ೧೧೮ ಯಿಾ ಬಂಣದ ತೂಕ ೩೩ ಱಂ ಭಾಗಿಸಲು ೩೬ ದ್ವಿತಿಯ್ಯಹಾರ ೪ ಱಿಂ ಭಾಗಿಸಲು ೯ ಬಂಣ ತಪ್ಪದು—

ಶ್ರೀಮತ್ಕನಕಾಚಲದ ವಿಜಯಪಾರ್ಶ್ವತೀರ್ಥಂಕರಾಯ ನಮಃ ||

ಜೀವಿತದ ಪೊಂಗಳಂ ತದ್ಭಾವವಿನಾಳಿಂದವಿಱಿದು ಕೂಡಿಟ್ಟು ಬಳಕ್ಕಾ
ವಾಗಂ ತ್ರೈರಾಸಿಕದಾ ವಿಧದಿಂದೆಸೆಯಲೊಡ್ಡಿ ನಿಡುವಂ ರಾಜಂ || ೧ ||

× × × ×

(೧೧ ನೆಯ ಪುಟ) ಯಿದು ಶುಭಚಂದ್ರದೇವ ಯೋಗೀಂದ್ರ ಪಾದಾರವಿಂದ ಮದ ಮಧುಕರಾಯಮಾನ ಮಾನಸಾನಂದಿತ ಸಕಲ ಗುಣಿತತ್ವ ವಿಳಾಸಂ ವಿನ ಯಜನವಿನೂತಂ ಶ್ರೀ ರಾಜಾದಿತ್ಯ ವಿರಚಿತಮಪ್ಪ ವ್ಯವಹಾರಗಣಿತದೊಳು ತ್ರೈರಾಶಿ ಪಂಚರಾಶಿಭ್ಯಸ್ತ ಪಂಚರಾಶಿಬೆಸ್ತ ತ್ರೈರಾಶಿ । ಚಿನ್ನ ಪದಘ ಬಣಾಂತರ । ಹೊದೆಯಂಬಿನ ಸೂತ್ರ । ಮಾಳಿಗೆಯ ವಿಧುರೆ । ಕೊಟ್ಟಗೆಯ ವಿಧುರೆ ಕುರಿನೀಲಸೂತ್ರ । ಕುಂಭಿನೀಸೂತ್ರ । ಸಮಾಪ್ತ ಮಂಗಳಮಹಾಶ್ರೀ.

ಅಂತ್ಯ : ಮೂಱು ಗೋಟಿನ ಭೂಮಿಯಂ ಉದ್ದವನಳದು ೧೦ ಅಗಲವನಳದರೆ ೧೦ ಯಿಾ ಹತ್ತನು ಅರ್ಧಿಸಿದರೆ ೫ ಯಿಾ ೫ ನು ಉದ್ದ ೧೦ ನೂ ಗುಣಿಸಲು ೫೦ ಹಾರ ೫ ವೃತ್ತವಾಗಿದ್ದ ಭೂಮಿಯನು ಅರ್ಧವ ಮಾಡಿದರೆ ೪ ಯಿಾ ೪ ನು ಅರ್ಧಿಸಿದರೆ ೨ ಯಿಾ ೨ ನು ಗುಣಿಸಿದರೆ ೪ ಕಂಭವಹುದು ೧೫೬೧ ||

ಪ್ರಮಾಥಿ ಸಂವತ್ಸರದ ಆಶ್ವೀಜ ಶುದ್ಧ ೧೦ ಗುರುವಾರ ಸೂರ್ಯೋ ದಯವಾದ ಘಳಿಗೆ ೧೦ ಮಲೆಯೂರ ಆಧೀಶ್ವರನ ಪಾದಸನ್ನಿಧಿಯಲ್ಲಿ ಮಲೆಯೂರ ಆಡಪ್ಪಯ್ಯನು ಹರವೆ ವಿಜಯಣಯ್ಯಗೆ ಬರೆದ ಪುಸ್ತಕಕ್ಕೆ ಮಂಗಳಮಹಾಶ್ರೀ.

ವಿಷಯ: ವ್ಯವಹಾರಗಣಿತ.

ವಿಶೇಷ : ನೀಲಿ ಬಣ್ಣದ ಪತ್ರದಲ್ಲಿ ಸ್ಫುಟವಾಗಿ ಬರೆದಿದೆ. ಈ ಪುಸ್ತಕಕ್ಕೆ ಗಣಿತ ವಿಲಾಸವೆಂಬ ಹೆಸರೂ ಕೆಲವುಕಡೆ ಕಂಡುಬರುತ್ತದೆ. ಶಕಟರೇಫದ ಬಳಕೆ ಇದೆ. ಪತ್ರಗಳ ಸಂಖ್ಯೆಯಲ್ಲಿ ತಪ್ಪಿದೆ- ೭೦ ಕ್ಕೆ ೭೧ ಎಂದಿದೆ. ೨೨, ೩೦ ಪುಟಸಂಖ್ಯೆ ಬಿಟ್ಟುಹೋದರೂ ವಿಷಯಲೋಪವಿಲ್ಲ. ೬೧ ನೆಯ ಸಂಖ್ಯೆಯು ಎರಡು ಪುಟಗಳಿವೆ.

1658

ಕೆ. ಬಿ. ೨೨೦	**ವ್ಯವಹಾರಗಣಿತ**	ಪದ್ಯ, ಟೀಕು
೭"×೬.೫"	ರಾಜಾದಿತ್ಯ	ಸು. ೧೨೨೦
೧–೩೩ ಪತ್ರ	೨೦ ಪಂಕ್ತಿ	೨೭ ಅಕ್ಷರ

ಆದಿ : ವ್ಯವಹಾರಗಣಿತ ರಾಜಾದಿತ್ಯಂ ವಿರಚಿತ × × × ಸ್ಥಾನನ್ನೈಜ್ಞೆಯನರಿವುದಕ್ಕೆ ಸೂತ್ರ ||

ಯೇಕಂತು ಪ್ರಥಮಸ್ಥಾನಂ ದ್ವಿತೀಯಂ ಸಯ್ಯುತಂ |
ತ್ರಿತೀಯಂ ಶತಮಿತ್ಯಾಹು ಚತುರ್ತ್ಥಂ ತು ಸಹಸ್ರಂತಂ ||
ಪಂಚಮಂ ದಶಸಹಸ್ರಂ ಷಷ್ಟಮಂ ಲಕ್ಷಮೇವ ಚ |
ಸಪ್ತಮಂ ದಶಲಕ್ಷಂತು ಅಷ್ಟಮಂ ಕೋಟಿರುಚ್ಯತೇ ||
ನವಮಂ ದಶಕೋಟ್ಯಸ್ತು ದಶಮಂ ಶತಂ ಕೋಟಿಯೊ |
ಅರ್ಬುದಂ ರುದ್ರಸಂಯುಕ್ತಂ ನಿರ್ಬುದಂ ದ್ವಾನಸಂಭವೇತ್ ||
ಖರ್ವಂ ತ್ರಯೋದಶಸ್ಥಾನಂ ಮಹಾಖರ್ವಂ ಚತುರ್ದಶಂ |
ಪದ್ಮಪಂಚದಶಶ್ಶೈವ ಮಹಾಪದ್ಮಂ ತು ಷೋಡಶಂ ||
ಕ್ಷೋಣಿಸಕ್ತ ದಶಶ್ಚೈವ ಮಹಾಕ್ಷೋಣಿ ದಶಾಷ್ಟಕಂ |
ಶಂಖರ್ನಪದಶಸ್ಥಾನಂ ಮಹಾಶಂಖಂ ತು ವಿಂಶಕಂ ||
ಕ್ಷಿತಿರೇಕವಿಂಶಸ್ಥಾನಂ ಮಹಾಕ್ಷಿತ್ಯಾದ್ವಿವಿಂಶಕಂ |
ತ್ರಿವಿಂಶಕಮತಕ್ಷೋಭಂ ಮಹಾಕ್ಷೋಬಂ ಚತರ್ಥಯಂ ||
ಪಂಚವಿಂಶ ನದಿಶ್ಚೈವ ಷಡ್ವಿಂಶತಿ ಮಹಾನಧಿ |
ಸಪ್ತಿಂಸರಿ ನಗಶ್ಚೈವ ಅಷ್ಟಿಂಶತಿ ಮಹಾನಗ ||
ನವಿಂಶತಿ ರಥಶ್ಚೈವ ತ್ರಿಂಶಸ್ಥಾನಂ ಮಹಾರಥ |
ಯೇಕತ್ರಿಂಶತಿ ಹರಿಶ್ಚೈವಾದ್ವಾ ತ್ರಿಂಶತು ಮಹಾಹರಿ ||
ತ್ರಯತಿಂಶತ್ ಪಣುಶ್ಚೈವ ಚತುತ್ರಿಂಶತಿ ಮಹಾಫಣಿ |
ಪಂಚತ್ರಿಂಶತ್ ಕ್ಷತುಚೈವ ಷಡುತ್ರಿಂಶತ್ ಮಹಾಕ್ರತು ||

ಅಂತ್ಯ : ವೊಂದರೊಳೊಂದನೊತ್ತಿದರೆ । ದ್ರವ್ಯದ ಲೆಕ್ಕವದಂ ವಿಶೇಷದಿಂ ತಂದಿರ ದಿಟ್ಟು ಬೇರೆ ಪ್ರತಿಯಂ ಕಡೆಯಿಂದವೆ ಭಾಗಿಸುತ್ತ ಮತ್ತಂ ವೀಪಲಮುಂ ನಿನದೆಂದು ಬಳಿಕ್ಕ ತತ್ಪಳಂ ನಯಸಿಶಿಗತಿ ಶರಸಂಶೆಯ ಗುಣಂಗಳಿಂ ನಾಲ್ಕು ಪುರದೊಳು ಪಡೆದುದ ಪಡೆದುದನಾಪುರದ ಶಿವಭವನಕಂ ತಾಂ ಸರಿಮಿಗಿಲಂ ಪೇಳು ಮೊದಲುವಂ ಪೂಜೆಯಮುಮಂ ‖ ೨ । ೩ । ೪ । ೫ । ಲಬ್ಧ ಮೊದಲು ತಂದದ್ದು ೮೬ ಸಮಾನಪೂಜೆ ೧೨೦ । ೧೨೦ । ೧೨೦ । ಕ್ಕೆ ಯಿಾ ನಾಲ್ಕು ಪೂಜೆಯನು ಅಡಿಯಿಂ ಗುಣಿಯಿಸಲು ಸಮಾನಪೂಜೆ ಯಕ್ಕುಂ ಮೊದಲ ಗುಣ ವುಳಿಯೈನೆಯ ಗುಣದಿಂ ೧ ಕೂಡಿ ಮೂರನೆಯ ಗುಣದಿಂ ಗುಣಿಸೆ ಮತೊಂದಂ ಕೂಡಿ ನಾಲ್ಕನೆಯ ಗುಣಿಯಿಸಿ ಕೂಡಲು ಮೊದಲಮಕ್ಕುಂ ‖ ಶ್ರೀ ರಾಜಾದಿತ್ಯ ವ್ಯವಹರಗಣಿತ ಸೂತ್ರ ಸಮಾಪ್ತ. ಮಂಗಳಮಹಾಶ್ರೀ.

ವಿಷಯ : ವ್ಯವಹಾರಗಣಿತ.

ವಿಶೇಷ : ಸಮಗ್ರಪ್ರತಿ.

1659

ಕೆ. ೧೬೫	**ವ್ರಣಚಿಕಿತ್ಸೆ**	ಗದ್ಯ
೧೧.೯″ × ೧.೩″	?	?
೧–೬೧+೧–೪೭ ಪತ್ರ	೫ ಪಂಕ್ತಿ	೨೮ ಅಕ್ಷರ

ಆದಿ : ರಣಚಿಕಿತ್ಸೆ ‖ ಲೋಹಬಸ್ಮಾ ‖
…………ಶಿಕೊಂಡರವೆದುಡುಕ್ಕು ೬ . . . . . ನಲ್ಲಿ ಹಾಕಿ ಹುರುದು ಚೆಂನ್ನಾಗಿ . . . . ದ್ದು ಪಾತ್ರೆಗೆ ಬೊಗ್ಗಿಶಿಕೊಂಡು………………
× × × × ತರಿವಾಯ ರಸ ಹಾಕಿದರೆ ರಸಸು ಸಹ ಮಿಶ್ರವಾಗಿ ವಡದು ನುಚ್ಚುನುಚ್ಚಾಗಿ ಆಗುವದು. ಅದ ವೊಂಭತ್ತು ಭಾಗವಂ ಮಾಡಿ ಯಿರಿಶಿ ಕೊಂಬೂವದೂ ‖

ಅಂತ್ಯ : ಯಿನ್ನು ತೀರುವ ವ್ಯಾಧಿಗಳು । ಜಲೋದರ । ಕೂಮಾರೋದರ ಸೂಲೆ । ವಳಗಿನ ಗೆಂಡೆ । ವಾಯ್ಯು ಮೊದಲಾದ ವ್ಯಾದಿಗಳು ಗುಣವಾಗೂವದೂ । ಶೋಬೆ ಮೊದಲಾದ ರೋಗಗಳು ಗುಣವಾಗುವದೂ. ಈ ಶಿದ್ಧರ ಪತ್ಯ ದಿಂದ ಕೊಡುವದು. ಸಕಲವಾದ ಶೂಲೆ ವಳಗಿದ್ದಂತಾ ವ್ಯಾಧಿಗಳೂ ಶೋಭೆ ಮೊದಲಾದ್ದು ಗುಣವಾಗುವದು. ಯಿಾ ಶಿಂದೂರ ಮಹಾಉವಾತ ಯಂಬರು ‖…………

ವಿಷಯ : ವ್ರಣರೋಗಗಳ ಚಿಕಿತ್ಸಾಕ್ರಮ.

ವಿಶೇಷ : ನೋಡಿ ಅಕ್ಷರ. ಲಿಪಿಯನ್ನು ಓದುವುದು ಶ್ರಮಸಾಧ್ಯ. ಕೆಲವು ಗರಿಗಳು ಮುರಿದಿವೆ. ಮೊದಲು ಕ್ರಮಾಂಕ ೧ ರಿಂದ ೬೧ ಇದ್ದು ಮತ್ತೆ ೧ ರಿಂದ ಪ್ರಾರಂಭವಾಗಿ ೪೭ ಕ್ಕೆ ಮುಗಿದಿದೆ. ಇವೆರಡರ ಮಧ್ಯದಲ್ಲಿ ಬೇರೆ ೬ ಪತ್ರಗಳಿವೆ. ಕೊನೆಯಲ್ಲಿ ಕೆಲವು ಶುದ್ಧಪತ್ರಗಳಿವೆ.

1660

ಕೆ. ೯೦	**ಶಕುನಪ್ರಪಂಚ**	ಕಂದ, ವೃತ್ತ
೧೨.೭″×೨″	ಚಾಕರಾಜ	ಸು. ೧೫೦೦
೪೫–೮೩ ಪತ್ರ	೯ ಪಂಕ್ತಿ	೬೦ ಅಕ್ಷರ

ಆದಿ : ಹಿರಿಯ ಪಕ್ಷಿಯ ಶಕುನ

ಮದಚಚ್ಚಾರ್ಚ ಕೃಷ್ಣಲೇಖಾರುಚಿಯ ಸಿತ .... ಚಂದ್ರನೆಂಬಂದದಿ ಚೆಲ್ವಂ ತಾಳ್ದ ಮರ್ತ್ತ್ಯ ಪ್ರಕಟ ಮಕುಟ ಮಾಣಿಕ್ಯ ಚಂಚತ್ ಪ್ರಭಾ ಸಂಪದಭಾವಂ ಮಾಡುಗೆಂ............

ಅಂತ್ಯ : ಜ್ಯೋತಿಷಮಂ ಪಿಂಗಲಿಯೊ
ಳ್ನೀತಿಯ ಶಕುನಂಗಳಲ್ಲಿ ಯನುಭವದಿಂದಂ
ಕೌತುಕಮೆನೆ ಪೇಳ್ದೆಂ ಜಗ
ತೀತಳ ಮನುಜರ್ಗ್ಗೆ ಭಾವಿಪಂತೊಲಿದೊಲಿದುಂ || ೨ ||

ಯಿದು ಸಕಲಜನ ಮನೋರಂಜನಂ ಪಿಂಗಲಿಶಾಸ್ತ್ರ ಸಮುದಿತ ತ್ರಿಕಾಲ ಜ್ಞಾನೋದಯಂ ಶ್ರೀ ಚಾಕರಾಜ ವಿರಚಿತಮಪ್ಪ ಶಕುನಪ್ರಪಂಚದೊಳು ನಾನಾಧಿಕಾರಂ ಸಮಾಪ್ತಂ. ಅಂತು ಅಧ್ಯಾಯ ೨೫ ಕ್ಕಂ ಕಂದ ವೃತ್ತ ಸಹ ೬೨೦ ಕ್ಕಂ ಮಂಗಲಮಹಾ.

ವಿಷಯ : ಶಕುನ.

ವಿಶೇಷ : ೪೫ ನೆಯ ಪತ್ರದಲ್ಲಿ ಅರ್ಧಭಾಗ ಮುರಿದುಹೋಗಿದೆ. ಪ್ರತಿಯ ಕೊನೆಯಲ್ಲಿ "ಶಕವರ್ಷ: ೧೬೩೬ ನೆಯ ಜಯ ಸಂವತ್ಸರದ ನಿಜ ಆಷಾಢ ಬಹು ೩ ರವಿವಾರ ದೇವರಸುಪಾದ್ಯರ ಮಗ ಪುಟ್ಟುಪಾಧ್ಯನು ತನಗೆ ಬೇಕಾಗಿ ಪಿಂಗಲಿಯ ಶಕುನಮಂ ಬರೆದು ಸಂಪೂರ್ಣಮಾಯ್ತು" ಎಂದಿದೆ.

1661

ಕೆ. ೬೨೫/೨	**ಶಂಕರ ಉಮಾಸ್ತೋತ್ರ**	ಕಂದ, ವೃತ್ತ
೮"×೨"	?	?
೨೦–೩೧ ಪತ್ರ	೧೧ ಪಂಕ್ತಿ	೩೫ ಅಕ್ಷರ

ಆದಿ : ಶಂಕರ ಉಮಾ ಸ್ತೋತ್ರ.
ಶ್ರೀ॥ ಶ್ರೀಮತ್ಕಲ್ಯಾಣ ಭೂಚ್ಛ್ರನ್ನುತ ಸುಕರಪದಂ ದಿವ್ಯ ಗಂಗಾಂಬಿಕಾ ಸ
ತ್ರೈಮಾವಾಸಂ ಗಣೇಂದ್ರಾನ್ವಿತನುರುಮಹಿಮಾಧಾರನಶ್ರಾಂತ ಸತ್ವಾ
ರಾಮಂ ಭೂತಿಪ್ರಯುಕ್ತಂ ಪ್ರಣವರುಚಿ ಪರಾನಂದ ಧರ್ಮಸ್ವಲೀಲೋ
ದ್ದಾಮಂ ರಕ್ಷಿಪ್ಪುದೆಂ....................ತಂ ನಂದಿಕೇಶಂ ಮಹೇಶಂ ॥ ೧ ॥

ಅಂತ್ಯ : ಮಲ್ಲಿಕಾಮಾಲಾ ॥
ಸಾರಮೌಕ್ತಿಕಜಾಲದೊಳ್ಬೆರದಿಂದ್ರನೀಲದ ಮಾಲೆಯೊ
ಲ್ಬೂರಿ ಸಜ್ಜನ ಕಂಠಭೂಷಣವಾದ ಸಾಂಬನ ಗೌರಿಯಾ
ಚಾರು ಸಂನುತಿಯಂ ಮನುಷ್ಯರೊಳಾವನೋದುವನೊಲ್ಮೆಯಂ
ಗೌರಿ ಗೌರಿಯೆಧೀಶರೀವರವಂಗೆ ಶಾಶ್ವತ ಭೋಗಮಂ ॥ ೧೧ ॥
ಶಂಕರ ವುಮಾ ಸ್ತೋತ್ರ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ಶಿವ ಪಾರ್ವತಿಯರ ಸ್ತೋತ್ರ.

ವಿಶೇಷ : ಗರಿಗಳು ಸ್ವಲ್ಪ ಮುರಿದಿವೆ. ಈ ಕಟ್ಟಿನಲ್ಲಿ ವೀರೇಶ್ವರಚರಿತ್ರೆ, ಮಹಾನಾಟಕ ವೃತ್ತ (ಸಂ) ಮೊದಲಾದ ಇತರ ಗ್ರಂಥಗಳಿವೆ. ೩೧–೩೮ ಪತ್ರದ ವರೆಗೆ ಕಾಳಿದಾಸ ಮಾಡಿದ ಕಲ್ಮಾಲೆ ವೃತ್ತವೂ, ೭೦–೭೬ ರ ವರೆಗೆ ಮಲುಹಣಸ್ತೋತ್ರವೂ, ೭೭–೭೯ ಅನಾಮಯಸ್ತೋತ್ರವೂ, ೭೯–೮೫ ರ ವರೆಗೆ ಹಲಾಯುಧಸ್ತೋತ್ರವೂ, ೮೫–೮೮ ರ ವರೆಗೆ ಮಹಿಮ್ನಸ್ತೋತ್ರವೂ ಸಂಸ್ಕೃತ ಶ್ಲೋಕಗಳಲ್ಲಿ ಕನ್ನಡ ಲಿಪಿಯಲ್ಲಿವೆ.

1662

ಕೆ. ಎ. ೧೯೬	**ಶಂಕರದಾಸಿಮಯ್ಯನ ಚರಿತ್ರೆ**	ಭಾಮಿನೀಷಟ್ಪದಿ
೧೩"×೭.೯"	ಮಲ್ಲಿಕಾರ್ಜುನ	೧೬೮೭
೧–೨೦೪ ಪತ್ರ	೨೨ ಪಂಕ್ತಿ	೨೪ ಅಕ್ಷರ

ಆದಿ : ಸಲ್ಲಲಿತ ಕವಿಕುಲತಿಲಕ ಶಿವ
ನಲ್ಲದನ್ಯರ ಹೊಗಳದಿಹ ಕವಿ
ಬಲ್ಲಹರ ಕಿಂಕರ ವೊಳಲ್ಗುಂದಾಪುರನಿದಾನಾ

ಕಲ್ಲಿನಾಥನ ಭೃತ್ಯ ತಿಮುಕವಿ
ದಲ್ಲಣಾಗ್ರಘೆರಟ್ಟ ಪಂಡಿತ
ಮಲ್ಲಿಕಾರ್ಜ್ಜುನ ಕವಿಕಮಲರವಿ ಪೇಳ್ದನೀ ಕೃತಿಯಾ ॥ ೧೪ ॥

ಅಂತ್ಯ : ನೆನೆದ ಕಾರ್ಯಂ ಸಿದ್ಧಿಸಲಿ ಯ
ವ್ವನಮುದಾಗಲಿ ರಿಪುಗಳಡಗಲಿ
ತನತನಗೆ ಬೆಸಗೈಯ್ಯುಲತಿ ಮಿತ್ರ ಜನನ ರುಜೆ ದೋಷಾ
ತನುವ ವೇಧಿಸದಿರಲಿ ಭಾಗ್ಯಂ
ದಿನದಿನಕೆ ವಿಶೇಷವಾಗಲಿ
ಘನಪುರಾಣವನೋದಿದವರಿಗೆ ಕೇಳ್ವ ಸುಜನರಿಗೇ ॥ ೭೦ ॥
ಅಂತು ಸಂಧಿ ೧೬ ಕ್ಕಂ ಪದನು ೧೧೭೫ ಕ್ಕಂ ಮಂಗಳ ಮಹಾಶ್ರೀ.

ವಿಷಯ : ಶಂಕರ ದಾಸಿಮಯ್ಯನ ಚರಿತ್ರೆ.

ವಿಶೇಷ : ಗ್ರಂಥದ ಮೊದಲ ಬೇರೊಂದು ಪತ್ರದಲ್ಲಿ ವಿಷಯಸೂಚಿಯಿದೆ. ೧, ೨ ಪತ್ರಗಳು ಖಾಲಿಯಿವೆ. ೬ನೇ ಸಂಖ್ಯೆಯ ಎರಡು ಪತ್ರಗಳಿವೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಪ್ರತಿಯ ಕೊನೆಯಲ್ಲಿ 'ಅಂಗೀರಸ ಸಂವತ್ಸರದ ಫಾಲ್ಗುಣ ಬಹುಳ ಯೇಕಾದಶಿಯು ಸೋಮವಾರ ಶಂಕರ ದಾಸಮಯ್ಯನ ಪುರಾಣ ಸಮಾಪ್ತವಾಗಿ ಮುಗಿಯಿತು. ಬರದಾತ ಪಾಂಗಳಾದ ಕರಿಬಸಪ್ಪ ಮರಿದೇವರು' ಎಂದಿದೆ.

1663

ಕೆ. ೬೩/೩	**ಶಂಕರದೇವರ ಕಂದ**	ಕಂದ
೧೩.೮″ × ೧.೪″	ಶಂಕರದೇವ	ಸು. ೧೬೨೦
೨–೧೨ ಪತ್ರ	೫ ಪಂಕ್ತಿ	೫೪ ಅಕ್ಷರ

ಆದಿ : ಬೇಸರವಾಗದ ಪುಂಣ್ಯದ
ರಾಸಿಯೊ ಮೀಸಲ ವಿಲಸವಾ ಕರಕಮಳಾ
ವಾಸದೊಳು ಲಿಂಗ ನೆಲಸಿತು
ಲೇಸಾಯಿತೆನಗಂ ಪ್ರಸಂನ್ನ ಶಂಕರಲಿಂಗಂ ॥ ೧೧ ॥
........ಹಂ ಬ್ರಮೆ ಕೋಹಂ ಬ್ರಮೆ
ಸೋಹಂ ಬ್ರಮೆಯಳಿದುದೆಂನ್ನ ಕರಕಮಲದೊಳಂ

ಮೋಹರಿಪು ನೆಲಸಿದುದರಿಂ
ಆಹಾ ಸುಕವಂ ಪ್ರಸಂನ್ನ ಶಂಕರಲಿಂ....

ಅಂತ್ಯ : ಅಭಯಂ ಅಭಯಂ ಅಭಯಂ
ಅಭಯಂ ನತಜನ ಮನೋರತಪ್ರದ ಅಭಯಂ
ಅಭಯಕರ ಧಾನಿ ಅಭಯಂ
ಅಭಯಂ ಅಭಯಂ ಪ್ರಸಂನ್ನ ಶಂಖರಲಿಂಗಂ ॥ ೧೧೯ ॥
ಶ್ರೀ ನಾಗರಾಜ ಖಂಕಣ
ಧಾನವರಿಪು ನಯಚರಣ ನಿರುಪಮ ಭಕ್ತಿ
ಗ್ನಾನ ವೈರಾಗ್ಯವ ಕೊಡು
ನೀನೆನಗೊಲವಿಂ ಪ್ರಸಂನ್ನ ಶಂಖರಲಿಂಗಂ ॥ ೧೨೦ ॥
ಶಂಖರದೇವರ ಕಂದ ಸಂಪೂರ್ನ ಮಂಗಳ ಮಹಾಶ್ರೀ.

ವಿಷಯ : ಈಶ್ವರಸ್ತುತಿ.

ವಿಶೇಷ : ೧, ೧೧ ಗಂಗಳು ಲುಪ್ತವಾಗಿವೆ. ೫, ೧೦, ೧೨ ಈ ಗರಿಗಳು ಹೊರತು ಉಳಿದುವು ಕೊನೆಯಲ್ಲಿ ಮುರಿದಿವೆ. ಅಶುದ್ಧ ಹೆಚ್ಚು, ಪ್ರತಿ ಪದ್ಯವೂ 'ಶಂಕರಲಿಂಗಂ' ಎಂದು ಮುಗಿಯುತ್ತದೆ. ಈ ಕಟ್ಟಿನಲ್ಲಿ ನಾನಾರ್ಥರತ್ನಾಕರ, ಪ್ರಭುನಟನತಾರಾವಳಿ, ಎಲ್ಲಾ ಪುರಾತನರ ತ್ರಿವಿಧಿ, ಗುರುರಗಳೆಗಳಿವೆ.

1664

ಕೆ. ೩೨೩/೫	**ಶಂಕರದೇವರ ಕಂದ**	ಕಂದ
೫.೪"×೨"	ಶಂಕರದೇವ	ಸು. ೧೬೨೦
೫೩–೬೩ ಪತ್ರ	೧೧ ಪಂಕ್ತಿ	೩೦ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ । ಶಂಕರದೇವರ ಕಂದ ॥
ಶರಣೆಂಬೆಂ ಶರಣೆಂಬೆಂ
ಶರಣೆಂಬೆಂ ನಿಚ್ಚ ನಿಚ್ಚ ಶರಣೆನುತಿಹೆ ನಾಂ
ಗುರುಲಿಂಗ ಜಂಗಮದ ಶ್ರೀ
ಚರಣ ತಳಕ್ಕಂ ಪ್ರಸಂನ್ನ ಶಂಕರ ಲಿಂಗಾ ॥ ೧ ॥

ಅಂತ್ಯ : ಶ್ರೀ ನಾಗರಾಜ ಕಂಕಣ
ಧಾನವ ರಿಪುನಯನ ಚರಣ ನಿರುಪಮ ಭಕ್ತಿ

ಜ್ಞಾನ ವೈರಾಗ್ಯಮಂ ಕೊಡು
ನೀನೆನಗೊಲವಿಂ ಪ್ರಸಂನ ಶಂಕರಲಿಂಗಾ ॥ ೧೨೧ ॥
ಶಂಕರದೇವರ ಕಂದ ಸಮಾಪ್ತ ಮಂಗಳಮಹಾ ಶ್ರೀ ॥

ವಿಷಯ : ಈಶ್ವರ ಸ್ತುತಿ.

ವಿಶೇಷ : ಶಕಟರೇಫವಿದೆ. ಪ್ರತಿ ಪದ್ಯವೂ 'ಶಂಕರಲಿಂಗ' ಎಂದು ಮುಗಿಯುತ್ತದೆ. ಇದೇ ಕಟ್ಟಿನಲ್ಲಿ ಮಂತ್ರಮಹತ್ವದ ಕಂದ, ಮರುಳದೇವರ ಕಂದಗಳೆಂಬ ಇತರ ೧೬ ಗ್ರಂಥಗಳಿವೆ. ಇದರಲ್ಲಿ ಕೆಲವು ಸಂಸ್ಕೃತ ಕೃತಿಗಳಾಗಿವೆ.

1665

ಕೆ. ೩೬೯/೧೦	**ಶಂಕರದೇವರ ಕಂದ**	ಕಂದ
೮"×೧.೮"	ಶಂಕರದೇವ	ಸು. ೧೬೨೦
೬೬–೭೬ ಪತ್ರ	೯ ಪಂಕ್ತಿ	೪೧ ಅಕ್ಷರ

ಆದಿ : ಶಂಕರೇಶ್ವರ ನಿರೂಪಿಸಿದ ಕಂದ ॥
ಶರಣೆಂಬೆಂ ಶರಣೆಂಬೆಂ
ಶರಣೆಂಬೆಂ ನಿಚ್ಚ ನಿಚ್ಚ ಶರಣೆನುತಿಹೆ ನಾಂ
ಗುರುಲಿಂಗ ಜಂಗಮದ ಶ್ರೀ
ಚರಣಸ್ಥಳಕಂ ಪ್ರಸನ್ನ ಶಂಕರಲಿಂಗಾ ॥ ೧ ॥

ಅಂತ್ಯ : ಶ್ರೀ ನಾಗರಾಜ ಕಂಕಣ
ದಾನವರಿಪುನಯನ ಚರಣ ನಿರುಪಣ ಭಕ್ತಿ
ಜ್ಞಾನ ವೈರಾಗ್ಯಮಂ ಕೊಡು
ನೀನೆನಗೊಲವಿಂ ಪ್ರಸಂನ ಶಂಕರಲಿಂಗಾ ॥ ೧೨೧ ॥
ಕರುಣಾಬ್ಧಿ ಶಂಕರೇಶ್ವರಂ
ನೊರದಿ ಕಂದಂಗಳೊಲಿದು ಪರಿಸಿದ ಶರಣರು
........ರಣ ಭಯವಳಿದು ಶಿವನೊಳು
ಬೆರಸಿರ್ದತಿನಿತ ರಪ್ಪುದಿದು ಸಿದ್ಧಾಂತಂ ॥ ೧೨೨ ॥
ಶಂಕರದೇವರ ಕಂದ ಸಮಾಪ್ತ ಮಂಗಳಮಹಾಶ್ರೀ.

ವಿಷಯ : ಈಶ್ವರಸ್ತುತಿ.

ವಿಶೇಷ : ಪ್ರತಿ ಪದ್ಯವೂ 'ಪ್ರಸನ್ನ ಶಂಕರಲಿಂಗಾ' ಎಂದು ಮುಗಿಯುತ್ತದೆ.

ಗ್ರಂಥವು ಸುಮಾರಾಗಿದ್ದು ಅಂಚಿನಲ್ಲಿ ಗರಿಗಳು ಮುರಿದಿವೆ. ಇದೇ ಕಟ್ಟಿನಲ್ಲಿ ಗುರು, ಷಡಕ್ಷರಿ, ಬಸವ, ಮನೋವಿಕಾರನಿರಸನ, ಭಕ್ತಿಬಿನ್ನಹ ರಗಳೆಗಳೂ; ಬಸವಸ್ತೋತ್ರ, ಮಿಶ್ರಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ; ಮಂತ್ರಮಹತ್ವ, ಮರುಳುದೇವ, ಪ್ರಭುಲಿಂಗನ ಕಂದಗಳೂ; ಅಕ್ಷರಮಾಲಿಕ, ನಮಸ್ಕಾರ, ಷಟ್ಸ್ಥಲ, ಅಕ್ಷರಾಂಕನ ಗದ್ಯಗಳೂ; ಶತಕತ್ರಯವೂ, ಮಲ್ಹಣಸ್ತೋತ್ರವೂ ಇವೆ.

1666

ಕೆ. ೪೬೮/೭	**ಶಂಕರದೇವರ ಕಂದ**	ಕಂದ
೧೫.೩"×೧"	ಶಂಕರದೇವ	ಸು. ೧೬೨೦
೧೮–೩೦ ಪತ್ರ	೪ ಪಂಕ್ತಿ	೫೦ ಅಕ್ಷರ

ಆದಿ : ಶಂಖರದೇವರ ಕಂದ ||
ಶರಣೆಂಬ್ಯೆಂ ಶರಣೆಂಬ್ಯೆಂ
ಶರಣೆಂಬ್ಯೆಂ ನಿಚ್ಚ ನಿಚ್ಚ ಶರಣೆನುತಿಹೆ ನಾಂ
ಗುರು ಲಿಂಗ ಜಂಗಮದ ಶ್ರೀ
ಚರಣತಳಕ್ಕಂ ಪ್ರಸಂನ ಶಂಖರಲಿಂಗಾ || ೧ ||

ಅಂತ್ಯ : ಶ್ರೀ ನಾಗರಾಜ ಕಂಕಣ
ಧಾನವರಿಪೂ ನಯನ ಚರಣ ನಿರುಪಮ ಭಕ್ತಿ
ಗ್ನಾನ ವೈರಾಗ್ಯಮಂ ಕೊಡು
ನೀನೆನಗೆಲವಿಂ ಪ್ರಸಂನ ಶಂಖರಲಿಂಗಾ || ೧೧೮ ||

ವಿಷಯ : ಈಶ್ವರಸ್ತುತಿ.

ವಿಶೇಷ : ಪ್ರತಿ ಪದ್ಯವೂ 'ಪ್ರಸನ್ನ ಶಂಕರಲಿಂಗಾ' ಎಂದು ಮುಗಿಯುತ್ತದೆ. ಈ ಕಟ್ಟಿನಲ್ಲಿ ಅಕ್ಕಗಳ ಹಾಡು, ಅನ್ನಪೂರ್ಣಾಷ್ಟಕ (ಸಂ) ಹಾಡುಗಳು, ಬಸವೇಶ್ವರನ ನೂರೆಂಟು ನಾಮ ಇತ್ಯಾದಿ ಗ್ರಂಥಗಳಿವೆ.

1667

ಕೆ. ಬಿ. ೮೭/೫	**ಶಂಕರದೇವರ ಕಂದ**	ಕಂದ
೭.೯"×೬.೪"	ಶಂಕರದೇವ	ಸು. ೧೬೨೦
೧–೨೦ ಪತ್ರ	೧೨ ಪಂಕ್ತಿ	೧೨ ಅಕ್ಷರ

ಆದಿ : ಶ್ರೀರಸ್ತು. ಶಂಕರದೇವರ ಕಂದ ಬರೆಯುವದಕ್ಕೆ ಶುಭಮಸ್ತು.
ಶರಣೆಂಬೆಂ ಶರಣೆಂಬೆಂ
ಶರಣೆಂಬೆಂ ನಿಚ್ಚ ನಿಚ್ಚ ಶರಣೆನುತಿಹೆ ನಾಂ
ಗುರುಲಿಂಗ ಜಂಗಮದ ಶ್ರೀ
ಚರಣತಳಕ್ಕಂ ಪ್ರಸನ್ನ ಶಂಕರಲಿಂಗಾ ॥ ೧ ॥

ಅಂತ್ಯ : ಶ್ರೀ ನಾಗರಾಜ ಕಂಕಣ
ದಾಸವ ರಿಪುನಯನ ಚರಣ ನಿರುಪಮಃ ಭಕ್ತಿ
ಜ್ಞಾನವೈರಾಗ್ಯಮಂ ಕೊಡು
ನೀನೆನಗೊಲವಿಂ ಪ್ರಸನ್ನ ಶಂಕರಲಿಂಗಾ ॥ ೧೨೧ ॥
ಶಂಕರದೇವರ ಕಂದ ಸಮಾಪ್ತ ॥
ಮಂಗಳಮಹಾ ಶ್ರೀ.

ವಿಷಯ : ಶಂಕರಸ್ತುತಿ.

ವಿಶೇಷ : ಪ್ರತಿ ಪದ್ಯವೂ 'ಪ್ರಸನ್ನ ಶಂಕರಲಿಂಗಾ' ಎಂದು ಮುಗಿಯುತ್ತದೆ. ಸುಂದರ ಬರಹ. ಇದೇ ಪುಸ್ತಕದಲ್ಲಿ ಮರುಳುದೇವರ ಕಂದ, ಲಿಂಗಸ್ತೋತ್ರ ಷಟ್ಪದಿ, ಷಡಕ್ಷರಿಯ ಕಂದ, ಮಿಶ್ರಸ್ತೋತ್ರ, ಬಸವಸ್ತೋತ್ರದ ಗದ್ಯ ಇತ್ಯಾದಿ ಗ್ರಂಥಗಳಿವೆ.

1668

ಕೆ. ೪೩೭	**ಶಂಕರರಾಮಾಯಣ**	ಷಟ್ಪದಿ
೧೮.೮″ × ೧.೯″	ತಿಮ್ಮಣ್ಣ ?	?
೧–೧೩೭ ಪತ್ರ	೧೧ ಪಂಕ್ತಿ	೯೫ ಅಕ್ಷರ

ಆದಿ : ಶ್ರೀರಮಣಿ ಸಿರಿವತ್ಸ ಕೌಸ್ತುಭ
ಹಾರ ಮಣಿಕುಂಡಲ ಕಿರೀಟೋ
ದಾರ ಪೀತಾಂಬರ ಸುಭೂಶಣ ಚರಣದಲಿ ಮೆರವಾ
ಚಾರುತರ ಹಾಹೆಗಳ ದಿನಕರ
ದೋರಣದ ಶತಕೋಟಿ ತೇಜದ
ಮೇರೆಗುಂನತ ಪ್ರಭೆಯ ರಘುಪತಿ ರಕ್ಷಿಸೈ ಜಗವಾ ॥ ೧ ॥

ಅಂತ್ಯ : ಯಿಾ ಕಥೆಯ ಪೇಳ್ದರಿಗೆ ಮರಣ
ವು ಕೀತಟದಿ ಮಣಿಕಂನ್ನಿಕೆಯು ಭೂ

ಲೋಕದೊಳಗಾನೆಡೆಯಲಾಗಲಿ ಅವರ ಕರ್ಣದಲೀ
ಲೋಕನಾಥನ ಪುಣ್ಯನಾಮವ
ಸೋಕಿಸುವೆನುಪದೇಶದಲಿ ನಿ.......

ವಿಷಯ : ರಾಮಾಯಣ ಕಥೆ.

ವಿಶೇಷ : ಪ್ರತಿಯ ಕೊನೆಯಲ್ಲಿ 'ಅರಳುಗುಪ್ಪಿ ವೆಂಕಂಣನ ಮಗ ದಾಸಪ್ಪನು ಸ್ನೇಹಾರ್ಥವಾಗಿ ಬರಕೊಟ್ಟ ಶಂಕರರಾಮಾಯಣ' ಎಂದಿದೆ. ಪ್ರತಿಯ ಮೊದಲಲ್ಲಿ 'ಪ್ಲವನಾಮ ಸಂವತ್ಸರದ ಭಾದ್ರಪತ ಶು ೧೦ ಯು ಸೋಮ ವಾರದಲ್ಲು ಶ್ರೀ ಸದ್ಗುರು.......ಪಿಡಿದು ಬರದಾತ ತಿರುಪತಿ ಕೆಲ್ಲಂಗೆರೆ ಸ್ತ್ರಳದ ಶ್ಯಾನಭಾಗ ದೇವಂಣ್ಣಯ್ಯನವರ ದಂಹಿತ್ರನಾದ ಹುಲ್ಲೆಕೆರೆಯ ಸ್ತ್ರಳದ ಶ್ಯಾನಭಾಗ ತಿಂಮಪ್ಪೈಯನವರ ಪೌತ್ರನಾದ ತಿಂಮಂಣನು ಬರದ ಶಂಕರರಾಮಾಯಣದ ಪುಸ್ತುಕಕ್ಕೆ ಅವಿಘ್ನಮಸ್ತು' ಎಂದಿದೆ. ತಿಮ್ಮಣ್ಣನು ಈ ಕಾವ್ಯದ ಕರ್ತೃವೊ ಅಥವಾ ಈತ ಪ್ರತಿ ಮಾಡಿದ್ದನ್ನು ದಾಸಪ್ಪನು ಪ್ರತಿ ಮಾಡಿದನೊ ಹೇಳುವುದು ಕಷ್ಟ. ಪ್ರತಿಯಲ್ಲಿ ಕೆಲವು ಪತ್ರಗಳು ಮುರಿದಿವೆ.

1669

ಕೆ. ಬಿ. ೨೭೯	**ಶಂಕರವಿಜಯ**	ಶ್ಲೋಕ, ಟೀಕು
೮.೧"×೬.೫"	ಬ್ರಹ್ಮಾನಂದಾಚಾರ್ಯರ	?
೧–೮ ಪತ್ರ	೨೫ ಪಂಕ್ತಿ	೩೩ ಅಕ್ಷರ

ಆದಿ : ಶ್ರೀ ಸರ್ವಸಿದ್ಧಿಪ್ರದಾಯಕ ವಿನಾಯಕಾಯ ನಮಃ ॥ × ×

ಶ್ಲೋಕ ॥ ಶಂಭೂರ್ಭೂರಿಕೃಪಾನಿಧಿರ್ಜಗದಿದಂ ದ್ವೈತಾದಿಮರ್ಪಾದಿವತ್ಪಾ
ಷಂಡೋಕ್ತಿ ಭಿರಾಕುಲಂ ಸದಮಲಕ್ಷ್ಮೇಮಂ ವಿಧಾತುಂ ಕಲೌ
ಯದ್ರೂಪೇಣ ಮಹೀಪುರಾತದಮುನಾದ್ವೈತವಿದ್ಯಾಗುರುಂ
ಶ್ರೀಮಚಂಕರ ನಾಮದೇಯ ಭಗವತ್ಪಾದಾಂ ಹೃದಾ ಭಾವಯೇ ॥

ಶ್ರೀ ಶಂಕರಾಚಾರ್ಯ ಗುರುವಂಶೋತ್ಪತ್ತಿಯಂನು ಗೀರ್ವಾಣದಲ್ಲಿ ಹೇಳಿದ ಪ್ರಕಾರ ಅದೆ ಅರ್ಥವನ್ನೆ ಕಂನಡ ಭಾಷೆಯಿಂದ ವಿಸ್ತರಿಸಿದ ಪ್ರಕಾರ ಗುರು ಪರಂಪರಾ ॥

ಶ್ಲೋಕ ॥ ಶ್ರೀ ಗೌಡಪಾದಾಚಾರ್ಯಾಯ ಶುದ್ಧಾದ್ವೈತ ಪ್ರವರ್ತಿನೇ ।
ಗೋವಿಂದ ಭಗವತ್ಪಾದಾಚಾರ್ಯಾಯ ಚ ನಮೋ ನಮಃ ॥

ಟೀಕು || ಯಿವರ ಶಿಷ್ಯರು ಶಂಕರಾಚಾರ್ಯರು ಯಿವರು ಶಿವಾವತಾರವೆತ್ತಿದ ವೃತಾಂತ ಯಿವರು ಹೇಳಿದ ಶಂಕರವಿಜೆಯ ಮುಂತಾದ ಪ್ರಾಚೀನ ಗ್ರಂಥ ಗುರುವಂಶ ಕಾವ್ಯದಲ್ಲಿ ಬೇಳಿದ ಪ್ರಕಾರ ಕಲಿಯುಗ ಬಂದಮೇಲೆ ವಿಕ್ರಮ ಶಕದಲ್ಲು

ಅಂತ್ಯ : ಅಲ್ಲಿಗೆ ಶಾಲಿವಾಹನ ಶಕ ವರುಷ ೧೨೬೩ ನೆ ವಿಕ್ರಮ ಸಂವತ್ಸರದಲ್ಲು ಶ್ರೀ ನಿದ್ಯಾಶಂಕರ ದೇವಾಲಯ ನಿರ್ಮಾಣ ಜಕ್ಕಣಾಚಾರಿ ಯಿವನ ಮಗನಿಂದ ಸಹಾ ಶ್ರಿಂಗೇರಿ ಬೇಲೂರು ಹಳೆಬೀಡು ಯಿೂ ಮೂರು ಸ್ಥಳಗಳಲ್ಲಿ ದೇವಾಲಯ ನಿರ್ಮಾಣವಾಯಿತು.

ಹಬ್ಬಹುದೀಬುದೆರಾದಿ ದೇದಿ ವಾರಾದಿ ಸಂಜ್ಞಿಕಾಃ |
ಭವಿಶ್ಯಂತಿ ನರಾಧೀಶಃ ಕರ್ನಾಟಕ್ಷಿತಿಮಂಡಲೇ ||

ಯಿೂ ರೀತಿ ಹದಿಮೂರು ಮಂದಿ ರಾಯರು ಆಳಿದಮೇಲೆ ಕೃಷ್ಣರಾಯರ ಪರಿಯಂತಾ ನಡದು ಬಂತು ಅಲ್ಲಿಗೆ ರಾಯರ ವಂಶ ನಡದುಬಂತು ಅಲ್ಲಿಗೆ ರಾಯರ ವಂಶ ನಿಂತಿತೂ ಅಳಿಯ ಶ್ರೀರಂಗರಾಯರು ಕೆಲವು ದಿವಸ ಆಳಿದರು. ಮುಂದೆ ಗುರುಪಾರಂಪರಿಯನ್ನು ಹೇಳುವದೂ ಆದಿ ಗುರುಪರಂಪರೆ ಬರೆವರೆ ಶುಭಮಸ್ತು.

ವಿಷಯ : ಶ್ರೀ ಶಂಕರಾಚಾರ್ಯರ ಚರಿತ್ರೆ.

ವಿಶೇಷ : ಮೋಡಿ ಬರಹ. ಗ್ರಂಥದನಂತರ ೯ ನೆಯ ಪತ್ರದಲ್ಲಿ ಕೆಲವು ಹೆಸರುಗಳಿವೆ.

1670

ಕೆ. ಎ. ೨೪೭/೬	**ಶಂಕರವಿಜಯ ಸಂಗ್ರಹ** ೧, ೨, ೩	ಗದ್ಯ
೧೨.೯"×೮"	?	?
೧–೧೪+೪+೨ ಪತ್ರ	೨೪ ಪಂಕ್ತಿ	೨೩ ಅಕ್ಷರ

ಆದಿ : ಶಂಕರವಿಜಯ ಸಂಗ್ರಹ ಮೊದಲನೆಯ ಅಧ್ಯಾಯ ಇದರಲ್ಲಿ ಶಂಕರಾಚಾರ್ಯರು ಅವತರಿಸಿ ದುರ್ಮತ ಖಂಡನೆಮಾಡಿ ಷಣ್ಮತಸ್ಥಾಪನೆಮಾಡಿ ಗುಹಾ ಪ್ರವೇಶಮಾಡಿ ಕಾಯಸಹಿತವಾಗಿ ಕೈಲಾಸಕ್ಕೆ ಹೋದ ಪರ್ಯಂತರ ರಾಮಾಯಣಕ್ಕೆ ಸಂಕ್ಷೇಪರಾಮಾಯಣದಹಾಗೆ ಸೂಚನೆ ಕಂಡು ಒಟ್ಟು ಬರದು ಇರುವದು.

ಅಂತ್ಯ : ಕಲಿಯುಗದಲ್ಲಿ ಶಂಕರಾಚಾರ್ಯನಾಗಿ ಅವತರಿಸಿ ಧರ್ಮಸಂಸ್ಥಾಪನೆಮಾಡಿ ಅದ್ವೈತ ಮತವನ್ನು ಪ್ರಚುರಗೊಳಿಸಿದರಾದ್ದರಿಂದ ಈ ಶಂಕರವಿಜಯ ಪಠನಶ್ರವಣಗಳಿಂದ ಜನರಿಗೆ ಜೀವನ್ಮುಕ್ತಿ ಲಭಿಸುವದು.

ವಿಷಯ : ಶಂಕರಾಚಾರ್ಯರ ಚರಿತ್ರೆ.

ವಿಶೇಷ : ಇದರಲ್ಲಿ ಶೃಂಗೇರಿಮಠದ ಗುರುಪರಂಪರೆಯೂ ಇದೆ. ಇದರೊಂದಿಗೆ ಸೀತಾಕಲ್ಯಾಣ, ಚಂದ್ರಹಾಸನ ಕಥೆ, ಕೃಷ್ಣಪಾರಿಜಾತ, ವಿನಾಯಕಾಷ್ಟಕ ಹಾಡುಗಳೂ ಇವೆ.

1671

ಕೆ. ೮೮	**ಶಂಕರಸಂಹಿತೆ**	ವಾರ್ಧಕಷಟ್ಪದಿ
೧೩.೯"×೧.೯"	ಮುಮ್ಮಡಿತಮ್ಮ	ಸು. ೧೬೬೫
೮೩–೨೭೯ ಪತ್ರ	೧೧ ಪಂಕ್ತಿ	೯೬ ಅಕ್ಷರ

ಆದಿ : ಯುದ್ಧಕಾಂಡ ॥ ಪಲ್ಲ ॥ ನಾಟರಾಗ ॥
ಭಾನುಕೋಪಂ ರಣಕೆ ಬರೆ ವೀರನಂ ಕಳುಪೆ
ಸೇನಾನಿಯಾ ಪ್ರಬಲ ರಣದಲ್ಲಿ ಕೆಡಹಿದಂ
ದಾನವಂ ತಪ್ಪಿನಾಕಿ ಪ್ರಮುಖ ಸೇನಾಪತಿಗಳನತ್ಯುಗ್ರನಾಗಿ ॥

ಪದಾ ॥ ಭೂರಿಗೋತ್ರ ಸುಧರ್ಮ್ಮ ಭೂರಿಗೋತ್ರಸುಧರ್ಮ್ಮ
ತಾರಾಗ ವರಧಾಮ ತಾರಾಗ ವರಧಾಮ
ಸಾರಂಗ ವಿಹೃತಿಕರ ಸಾರಂಗ ರುಕ್ಕಂಧರಾ
ಧೀರಾಜಿತಾಕಾರ ಧೀರಾಜಿತಾಕಾರ
ಭಾರತೀ ಹಿತದಾನ ಭಾರತೀ ಹಿತದಾನ
ಸಾರ ರಕ್ಷೋಪಾಯ ಸಾರ ರಕ್ಷೋಪಾಯ ಶಂಭುಶಂಕರ ಜಯಜಯಾ ॥೧॥
ಭೂನುತ ಚರಿತ್ರರಿರ ಕೇಳೆಂದು ಸೂತ ತ
ಚ್ಛೌನಕಾದ್ಯರಿಗೊರೆವ ಪಿತನ ಬೀಳ್ಕೊಡುತಂದು
ಭಾನುಕೋಪಂ ತಂನ ಮನೆಗೈದಿ ವಜ್ರೋಪಮಾನಕವಚವನು ತೊಟ್ಟು
ತಾನು ಬತ್ತಳಿಕೆಯಂ ಬೆಂನೆಡೆಗೆ ಕಟ್ಟುತ್ತ
ನೂನ ಖಡ್ಗವ ಪಿಡಿವುತಂಗುಲಿ ತ್ರಾಣಮಂ
ದಾನವೇಶ್ವರ ಪುತ್ರನಂಗುಲಿಗೆ ಧರಿಸುತ್ತೆ ಮುಂಗುಲಿದೊವಲ ತಂನಯಾ ॥೨॥

ಅಂತ್ಯ : ಧರೆಯೊಳಗೆ ಜಸವೆತ್ತ ಸುಜ್ಞಾನಮೂರ್ತೀಶ
ಕರಜಾತರಾದ ಸುಗುಣೋರ ವಂಶಾಬ್ಧಿ ಹಿಮ

ಕರ ಚಿಕ್ಕ ತಂಮೇಂದ್ರ ಪುತ್ರನಿರ್ಮ್ಮಡಿತಂಮ್ಮಗಂ ವೆಂಕಟಾಂಬೆಗೊಗೆದಾ
ಸರಸಂ ತ್ರಿವಿಧ ಕವೀಶ್ವರನು ಮುಂಮಡಿ ತಂಮ್ಮ
ನುರು ಭಕ್ತಮಾಹೇಶ್ವರರ ಕೃಪೆಯೊಳೊರೆದ ಶಂ
ಕರ ಸಂಹಿತೆಯೊಳಗುಪದೇಶದೊಳ್ ಮೂವತ್ತಆಇದನೆಯ ಸಂಧಿ ಕೇಳಿ
|| ೫೭ ||

ಅಸಮ ನಯನಾಕಾರ ಪಶುಪವಾಹನ ಶೂರ
ಪಶುಪ ಸಮಯೋದ್ಧಾರ ವಿಶದ ವಿಭವಾಸ್ಫಾರ
ದಶ ದಿಗ್ಗ್ಯೀಶ ಪೂರ ಕುಸುಮ ಬಾಣ ಶರೀರ ಭಾಸಿತಾಂಗ ಮೋದಾಕರಾ
ಅಸಮ ಪುಣ್ಯ ಶರೀರ ವಸುಧಾ ಚಯಾಧಾರ
ಭಸಿತ ಕಾಯ ಕುಮಾರ ಪಿಶಿತಾಶನೋಸ್ಮಾರ
ಲಶಿತ ಶೈವಾಚಾರ ಸುಶರ ನಿತ್ಯುದ್ಧಾರ ಬಸವ ರಣಧೀರ ಶರಣೂ || ೫೮ ||
ಪದ ೧೬೩೪ ಕಂ ಉಪದೇಶ ಕಾಂಡಸ್ಸಮಾಪ್ತ ಮಂಗಳಮಹಾ ಶ್ರೀ ||

ವಿಷಯ : ಶಂಕರನ ಲೀಲೆಗಳು ಮತ್ತು ಮಾಹಾತ್ಮ್ಯ.

ವಿಶೇಷ ; ಅಸಮಗ್ರಪ್ರತಿ. ಸಣ್ಣಕ್ಷರ. ೮೮ ನೆಯ ಪತ್ರಕ್ಕೆ ಕ್ರಮಾಂಕವಿಲ್ಲ. ೧೧೭, ೧೪೯, ೧೮೧ ನೆಯ ಪತ್ರಗಳಲ್ಲಿ ಒಂದುಕಡೆ ಮಾತ್ರ ಬರವಣಿಗೆ ಇದೆ. ಶಕಟ ರೇಫವನ್ನು ಬಳಸಿದೆ. ಕೆಲವು ಪತ್ರಗಳ ಅಂಚು ಮುರಿದಿದೆ. ಸಂಧಿ ಮುಗಿಯುವ ಪ್ರತಿ ಪತ್ರದ ಎರಡು ತುದಿಗಳಲ್ಲೂ ಸುಂದರವಾದ ರೇಖಾ ಚಿತ್ರಗಳಿವೆ.

1672

ಕೆ. ಎ. ೨೦೫	**ಶಂಕರಸಂಹಿತೆ ಭಾಗ–೧**	ವಾರ್ಧಕಷಟ್ಪದಿ
೧೩"×೮"	ಮುಮ್ಮಡಿ ತಮ್ಮ	೧೬೬೫
೧–೪೬೧ ಪತ್ರ	೨೩ ಪಂಕ್ತಿ	೨೩ ಅಕ್ಷರ

ಆದಿ : ಶ್ರೀ ನಗಸುತಾರಮಣಮಾನತ ಕೃಪಾಭರಣ
ಮೌನಿಸನ್ನುತ ಪಾದಗಾನ ನಿಗಮಾಮೋದ .
ಸಾನುರಾಗ ಸ್ವಾಂತ ಭಾನುಬಿಂಬ................
....
.......................ಪಕ್ಷ........
ಭೂನಿಲಿಂಪಾಧ್ಯಕ್ಷ ವೈನತೇಯ ಗಣಪಗಾನು ಮಚ್ಚಾಪ ಶರಣೂ || ೧ ||

ಅಂತ್ಯ : ಧರೆಯೊಳಗೆ ಜಸವೆತ್ತು ಸುಜ್ಞಾನಮೂರ್ತಿಗೀಶ
ಕರ ಜಾತರಾದ ಸುಗುಟೂರ ವಂಶಾಬ್ಧಿ ಹಿಮ
ಕರ ಚಿಕ್ಕ ತಂಮೇಂದ್ರ ಪುತ್ರಗಿರ್ಮಡಿ ತಂಮುಗಂ ವೆಂಕಟಾಂಬೆಗೊಗೆದಾ
ಸರಸಂ ತ್ರಿವಿಧ ಕವೀಶ್ವರನು ಮುಮ್ಮಡಿ ತಮ್ಮ
ನುರು ಭಕ್ತ ಮಾಹೇಶ್ವರರ ಕೃಪೆಯೊಳೊರೆದ ಶಂ
ಕರ ಸಂಹಿತೆಯೊಳಿದುವೆ ಪದಿನೈದು ಸಂಧಿ ಶರಣಾನುಬಂಧಿ || ೫೩ ||
ಅಂತು ಪದ ೭೭೧ ಕ್ಕಂ ಯುದ್ಧಕಾಂಡ ಸಮಾಪ್ತಂ ||

ವಿಷಯ : ಶಂಕರನ ಲೀಲೆಗಳು ಮತ್ತು ಮಾಹಾತ್ಮ್ಯ.

ವಿಶೇಷ : ಅಲ್ಲಲ್ಲಿ ಕೆಲವು ಪದ್ಯಗಳು ಲೋಪವಾಗಿವೆ. ಗ್ರಂಥದಾದಿಯ ಬೇರೆ ಎರಡು ಪತ್ರಗಳಲ್ಲಿ ವಿಷಯಾನುಕ್ರಮಣಿಕೆಯಿದೆ. ಪತ್ರದ ಒಂದೇ ಕಡೆಯಲ್ಲಿ ಶುದ್ಧವಾಗಿ ಬರೆದಿದೆ. ೨೮–೪೧ ಕ್ರಮಸಂಖ್ಯೆಯ ಪತ್ರಗಳಿಲ್ಲ. ಆದರೂ ವಿಷಯ ಲೋಪವಿಲ್ಲ. ಈ ಗ್ರಂಥವಾದಮೇಲೆ ಮುಂದುವರಿದ ಭಾಗ ಕೆ. ಎ. ೨೦೬ ರಲ್ಲಿದೆ.

1673

ಕೆ. ಎ. ೨೦೬	**ಶಂಕರಸಂಹಿತೆ ಭಾಗ–೨**	ವಾರ್ಧಕಷಟ್ಪದಿ
೧೩" × ೮"	ಮುಮ್ಮಡಿ ತಮ್ಮ	೧೬೬೫
೪೬೨–೯೧೩ ಪತ್ರ	೨೩ ಪಂಕ್ತಿ	೨೩ ಅಕ್ಷರ

ಆದಿ : ಹರಿಮುಖಬರ್ಿಂನ್ಯೆಸೆ ಗುಹನಿಂದ್ರ ಪುತ್ರಿಯಂ
ಕರವಿಡಿದವಂಗೆ ಪಟ್ಟವ ಕಟ್ಟಿ ರಜತ ಭೂ
ಧರಕೆಯ್ದಿ ಪಿತೃಗಳ್ಗೆ ನಮಿಸುತ್ತಲಾಸ್ಕಂದ ಗಿರಿಯಲ್ಲಿ ಸುಖದೊಳಿರ್ದ್ದಂ ||
ಪದ || ಶ್ರೀರಮಣ ನುತಿಸಾರ ಸಾರ ಸಾರ್‍ಯಾಧಾರ
ಧಾರಾಳಿ ಕಚಭಾರ ಭಾರ ಭಾರಮ್ಯ ನತ
ವಾರ ವಾರಣಾನನ ಸಾರ ಸಾರಸ್ವತದ ವೀರ ವೀರಭದ್ರಾವತಾರಾ
ತಾರ ನಗ ಸಂಚಾರ ಚಾರಣಾಮರಧೀರ
ಧೀರಾಜಿತಾಪಾರ ಪಾರದಬ್ಜಾಕಾರ
ಕಾರಣ ಮಹೋದಾರ ದಾರ ವಾಮಶರೀರ ಗೌರೀಶ ಸಲಹಿಳೆಯನೂ || ೧ ||

ಅಂತ್ಯ : ಅಸುರರೊಡನಾ ಪುರಂಗಳನವರ್ಮೂವರುಗ
ಳೊಸಗೆಇಂ ನೋಡುತ್ತೆ ಮಯನ ಕೊಂಡಾಡುತ್ತೆ
ಲಸವು ಸಂತೋಷಮನೊಂದುತ್ತಾಲಾಮಯನಂ ಹಿತಾಹಿತಗಳಂ ಕೇಳಲೂ

ಬೆಸಸ ತೊಡಗಿದನು ಸಾಹಸ್ರ ವರ್ಷಾಂತದಿಂ
ದಸವ:ಲೋಚನನಿಂ ಕಡೆಯ ಕಾಬೆನೆಂದುದಿದು
ಕುಶಲತೆಯು ಮತ್ತೆಂನ ಸಾಹಿತಾಹಿತಗಳಂ ಕೇಳ್ದಿರಿ ಗಡಾ ಪೇಳ್ವೆನೂ
|| ೧೦ ||

ವಿಷಯ : ಶಿವನ ಲೀಲೆಗಳು ಮತ್ತು ಮಾಹಾತ್ಮ್ಯ.

ವಿಶೇಷ : ಅಸಮಗ್ರ. ಮೂಲಪ್ರತಿಯಲ್ಲಿದ್ದ ಗ್ರಂಥದ ಯಾವ ಭಾಗಕ್ಕೆ ಸೇರಿದ್ದೆಂದು ತಿಳಿಯದ ಕೆಲವು ಪತ್ರಗಳಿಂದ ಈ ಗ್ರಂಥದ ಕೊನೆಯ ಪ್ರತ್ಯೇಕ ೧೬ ಪತ್ರಗಳಲ್ಲಿ ಪ್ರತಿ ಮಾಡಲಾಗಿದೆ. ಪತ್ರದ ಒಂದೇ ಕಡೆಯಲ್ಲಿ ಬರೆದಿರುತ್ತೆ. ಇದರ ಮೊದಲಭಾಗ ಕೆ. ಎ. ೨೦೫ ರಲ್ಲಿದೆ. ೮೮೮, ೮೯೯ ನೆಯ ಪತ್ರಗಳಲ್ಲಿ ಬರವಣಿಗೆಯಿಲ್ಲ. ೮೯೦ ರಲ್ಲಿ ಮೂರುಸಾಲು ಮಾತ್ರ ಬರವಣಿಗೆಯಿದೆ.

1674

ಕೆ. ೫೨೬	**ಶಂಕರಸಂಹಿತೆ**	ಗದ್ಯ
೧೪"×೨.೨"	ಬಸವರಾಜೇಂದ್ರ	?
೧–೨೮೩ ಪತ್ರ	೧೦ ಪಂಕ್ತಿ	೫೫ ಅಕ್ಷರ

ಆದಿ : ಓಂಕಾರ ನಿಲಯನಾಗಿ ಚತುರ್ಭುಜನಾಗಿ ಬೃಹತ್ಕುಕ್ಷಿಯಾದ ಗಜವಕ್ತ್ರನೆಂಬ ದೇವನಂ ಆಧ್ಯಾತ್ಮಿಕಾದಿ ತಾಪತ್ರಯ ರೂಪವಾದ ವಿಘ್ನೋಪ ಶಾಂತ್ಯರ್ಥ ನಮಸ್ಕರಿಸುವೆಂ। ಪೂರ್ವದಲ್ಲಿ ಪರಮೇಶ್ವರನ ಕೃಪೆಯಿಂದ ಸಕಲ ಪ್ರಜೆಗಳಂ ಸ್ರಜಿಸುವೆನೆಂದಪೇಕ್ಷಿಶಿ ಚತುರ್ಮುಖನು ಕಾಂಬ ಪುರದೊಳು ಪರಮೇಶ್ವರನ ಆರಾಧನಾ ರೂಪಮಾದ ತಪಮನಾಚರಿಸುತಿರ್ದನು।

ಅಂತ್ಯ : (೨೮೧ ನೆಯ ಪತ್ರ) ಇತಿ ಶ್ರೀಮತ್ಕಮಲಭವ ಶತಮುಖ ಮುಖ ಸುರ ಸಮುದಯ ಪ್ರಣತ ಮಕುಟತಟಘಟಿತ ಮಂಜು ಮಾಣಿಕ್ಯ ಪ್ರಭಾಪುಂಜ ರಂಜಿತ ಪದ ನಖ ಮಯೂಖ ಸಾಂಬಶಿವ ಸುರುಚಿರ ಚರಣಾರವಿಂದ ಮಕರಂದಾಸ್ವಾದನ ಮತ್ತಮಧುಕರಾಯಮಾನ ಬಸವರಾಜೇಂದ್ರ ವಿರಚಿತಮಪ್ಪ ಕರ್ನಾಟಕ ವಚನ ರಚನಾಭಿಧಾನಮಾದ ಸ್ಕಾಂದಪುರಾಣದ ಶಂಕರ ಸಂಹಿತೆಯಲ್ಲಿ ಶಿವ ರಹಸ್ಯ ಖಂಡದ ದೇವಕಾಂಡದೊಳು ಷಷ್ಠೋಧ್ಯಾಯಃ

× × × ×

ಆ ಸ್ವಾಮಿಯ ಪ್ರಸಾದದಿಂದ ಇಂದ್ರತ್ವವನ್ನೈದಿದನು । ಬಳಿಕ ಮುಚು ಕುಂದನು ಪುರಾರಿಗೆ ಪ್ರಾಕಾರ ಮುಂತಾದ ಗೋ....ರಾತೆ ಪಿಲ ಮಂಟಪ ನಿರ್ಮಾಣವಂ ಮಾಡಿ । ಮಹಾದೇವಂಗೆ ಪೂಜೆಯಂ ಮಾಡಿ । ನಿಷ್ಕಂಟಕ ನಾಗಿ ರಾಜ್ಯಭಾರವ ವಹಿಶಿ । ಅಗ್ನಿವರ್ನನೆಂಬ ಪುತ್ರಗೆ ಪಟ್ಟವಂ ಕಟ್ಟಿ । ಅಂತ್ಯದ

ವಿಷಯ : ಶಿವಲೀಲೆಗಳು ಮತ್ತು ಮಾಹಾತ್ಮ್ಯ.

ವಿಶೇಷ : ೧೧೯, ೨೩೩ ರಿಂದ ೨೫೭, ಮತ್ತು ೨೬೮ ಪತ್ರಗಳಿಲ್ಲ. ೨೨೬ ರಿಂದ ೨೩೭ ಪತ್ರಗಳು ತ್ರುಟಿತ. ಅಸಮಗ್ರಪ್ರತಿ.

1675

ಶಂಕರಸಂಹಿತೆಯ ನಾಂದ್ಯದ ಲಿಂಗಸ್ತೋತ್ರದ ಪದ

ಕೆ. ೧೬೯/೧೯ — ವಾರ್ಧಕಷಟ್ಪದಿ

೯.೬″×೨″ — ? — ?

೮೯–೧೦೨ ಪತ್ರ — ೧೦ ಪಂಕ್ತಿ — ೫೦ ಅಕ್ಷರ

ಆದಿ : ಶಂಕರಸಂಹಿತೆಯ ನಾಂದ್ಯದ ಲಿಂಗಸ್ತೋತ್ರದ ಪದ—
ಶ್ರೀ ನಗಾಸುತಾರಮಣ ಮಾನಿತ ಕೃಪಾಧರಣ
ಮೌನಿಸಂನುತ ಪಾದ ಗಾನ ನಿಗಮಾಮೋದ
ಸಾನುರಾಗಸ್ವಾಂತ ಭಾನುಬಿಂಬನಿಶಾಂತ ಸೂನತ್ಕುಟಿಲ ಕಾಂತಾ
ಜ್ಞಾನಸುಖಸದ್ಧಾಮ ನಾನಾಗುಣಾರಾಮ
ಜಾನಕೀಪತಿ ಭೋಗಿಲಿಂಪಾಧ್ಯಕ್ಷ
ದಾನಕಲಿತಾಟೋಪ ವೈನತೇಯಗರೋಪ ಸಾನುಯಚ್ಚಾಪ ಶರಣು ॥ ೧ ॥

ಅಂತ್ಯ : ಅಸಮ ನಯನಾಕಾರ ಪಸುಪವಾಹನಶೂರ
ಪಸುಪಸಮಯೋದ್ಧಾರಾ ವಿದಶದವಿಭವಸ್ವಾರ
ಗದಿದಶ್ಯಶಃಪೂರ ಕುಸುಮಬಾಣಶರೀರ ಭಸಿತಾಂಗ ಮೋದಕಾರಾ
ಅಸಮಪುಣ್ಯಶರೀರ ವಸುದಾಚಯಾಧರ
ಭಸಿತಕಾಯ ಕುಮಾರ ಪಿಶಿತಾಶನೆ ೋನ್ಮಾರ
ಲಸಿತ ಶೈವಾಚಾರ ಸುಶರ ನಿತ್ಯುದ್ಧಾರ ಬಸವ ರಣಾಧೀರ ಶರಣೂ ॥೧೦೦॥
ಶಂಕರಸಂಹಿತೆಯ ಲಿಂಗಸ್ತೋತ್ರ ಸಂಪೂರ್ನ್ನಂ ಮಂಗಳಮಹಾ ಶ್ರೀ.

ವಿಷಯ : ಲಿಂಗಸ್ತೋತ್ರ.

ವಿಶೇಷ : ಇದೇ ಕಟ್ಟಿನಲ್ಲಿ ಪ್ರಭುದೇವರ ಪುರಾಣದ ನಾಂದ್ಯ, ಸೌಂದರಪುರಾಣದ ನಾಂದ್ಯಗಳೆಂಬ ಇನ್ನೂ ೨೩ ಗ್ರಂಥಗಳಿವೆ.

1676

ಕೆ. ೨೫/೧೩	**ಶತಕತ್ರಯ**	ವೃತ್ತ
೧೦.೬"X೨.೨"	ಮೊಗ್ಗೆಯ ಮಾಯಿದೇವ	೧೪೩೦
೮೯–೧೦೦ ಪತ್ರ	೧೬ ಪಂಕ್ತಿ	೬೫ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ವೊಗ್ಗೆಯ ಮಾಯಿದೇವಾಚಾರ್ಯ್ಯರು ನಿರೂಪಿಸಿದ ಶತಕತ್ರಯ ॥

ಶ್ರೀಗುರುವೆ ಮಹಾಗುರುವೆ ಶಾಂತಿಕಳಾಗುರುವೆ ಶಿವಾತ್ಮ ವಿ
ದ್ಯಾಗುರುವೆ ಪುರಾಗುರುವೆ ವಿಶ್ವ ಜಗದ್ಗುರುವೆ............
........ವೆ ಸುದ್ಧಿಗುರುವೆ ಭಕ್ತಿಯರ್ಣೋಗುರುವೆ ಪ್ರಸಾದ ತೇ
ಜೋಗುರುವೆ ಕೃಪಾಗುರುವೆ ಮದ್ಗುರುವೆ ಗುರುವೆ ಶಿವಾಧವಾ ॥ ೧ ॥

ಅಂತ್ಯ : ಅಪ್ರತಿಮಪ್ಪ್ರತಿಷ್ಟ ಪರಿಪೂರ್ನ್ನ ಪರಾನುಭವಪ್ರಭಾವ ಭ
ವ್ಯ ಪ್ರತಿತಾರ್ತ್ಥನಾದ ಪದಬಂದ ಪದೋತ್ತರ ಭಕ್ತಿಯೋಗ ಸೌ
ಖ್ಯಪ್ರದ ಸದ್ಗುರೂಕ್ತಿ ಮತಸಿದ್ಧಯೀ ಶತಕಕ್ಕೆ ಮಾಯಿದೇ
ವಪ್ರಭುವೀಗ ಕತ್ರ್ತು ಪರಮಪ್ರಭುವೇ ಮಹದೈಪುರೀಶ್ವರಾ ॥ ೧೧೩ ॥

ವಿಷಯ : ವೀರಶೈವ ತತ್ತ್ವಬೋಧೆ.

ವಿಶೇಷ : ಸಮಗ್ರ. ೯೯ ನೆಯ ಪತ್ರದ ಒಂದು ಮೂಲೆ ಮುರಿದುಹೋಗಿದೆ. ಶಿವಾಧವ ಶತಕ, ಶಿವಾವಲ್ಲಭ ಶತಕ, ಐಪುರೀಶ್ವರ ಶತಕಗಳು ಸಮಗ್ರವಾಗಿವೆ. ಈ ಕಟ್ಟು ಸಾಧಾರಣವಾಗಿ ಸುಸ್ಥಿತಿಯಲ್ಲಿದೆ. ಶಕಟರೇಫವಿದೆ. ಈ ಕಟ್ಟಿನಲ್ಲಿ ಪ್ರಭುದೇವರು ನಿರೂಪಿಸಿದ ಟೀಕಿನ ವಚನಂಗಳು, ಹಿರಿಯ ಮಂತ್ರಗೋಪ್ಯ ಮೊದಲಾದ ಇತರ ೧೨ ಗ್ರಂಥಗಳಿವೆ.

1677

ಕೆ. ಬಿ. ೩೯೮	**ಶತಕತ್ರಯ**	ವೃತ್ತ
೬.೬"X೪.೨"	ಮೊಗ್ಗೆಯಮಾಯಿದೇವ	೧೪೩೦
೧–೮೯ ಪತ್ರ	೨೫ ಪಂಕ್ತಿ	೧೫ ಅಕ್ಷರ

ಆದಿ : ಶತಕತ್ರಯ ಪ್ರಾರಂಭ.

ಶ್ರೀಗುರುವೇ ಮಹಾಗುರುವೆ ಶಾಂತಿಕಳಾಗುರುವೇ ಶಿವಾತ್ಮ ವಿ
ದ್ಯಾಗುರುವೇ ಪುರಾಗುರುವೆ ವಿಶ್ವ ಜಗದ್ಗುರುವೇ ವಿಶುದ್ಧ ಚೇ
ಷ್ಟಾಗುರುವೇ ಸುಧೀಗುರುವೆ ಭಕ್ತಿಯಶೋಗುರುವೆ ಪ್ರಸಾದ ತೇ
ಜೋಗುರುವೇ ಕೃಪಾಗುರುವೆ ಮದ್ಗುರುವೇ ಗುರುವೇ ಗುರುವೇ
ಶಿವಾಧವಾ ||

ಅಂತ್ಯ : ಅಪ್ರತಿಮ ಪ್ರತಿಷ್ಠ ಪರಿಪೂರ್ಣ ಪರಾಭವ ಪ್ರಭಾವ ಭ
ವ್ಯಪ್ರಥಿತಾರ್ಥವಾದ ಪದಬಂದ ಪದೋತ್ತರ ಭಕ್ತಿಯೋಗ ಸೌ
ಖ್ಯಪ್ರದ ಮದುರೂಕ್ತಿ ಮತಸಿದ್ಧಮಿದೀ ಶತಕಕ್ಕೆ ಮಾಯಿದೇ
ವಪ್ರಭುವೀಗ ಕರ್ತೃ ಪರಮಪ್ರಭುವೇ ಮಹದ್ವೈಪುರೀಶ್ವರಾ || ೧೧೩ ||

ಗದ್ಯ || ಇದು ಸಮಸ್ತ ಶಿವಯೋಗಿಜನ ಮನೋನಿಲಯ ಶ್ರೀಮನ್ನಿರಂಜನ ಲಿಂಗ ಚರಣಸರಸೀರುಹ ಸೌರಭಾಸಕ್ತ ಮತ್ತಮಧುಕರಾಯಮಾಣ ಷಟ್ಸ್ಥಲ ಲಿಂಗಾಂಗಸಂಯೋಗ ಸನ್ಮಾರ್ಗಸಿದ್ಧಾಂತಸ್ಥಾಪನಾಚಾರ್ಯ ಪರಮ ಸುಜ್ಞಾನ ಸತ್ಕ್ರಿಯಾಯುಕ್ತ ಭಕ್ತಿಭರಿತಾಂತರಂಗ ಪ್ರಣವ ಪೂರ್ವಕ ಪಂಚಾಕ್ಷರೀ ಮಂತ್ರೋದ್ಧಾರಿತ ಮಂಜುಳ ಭಾಷಾವಿಲಾಸನಪ್ಪ ಮಗ್ಗೇ ಮಾಯಿದೇವದೇಶಿಕನಿಂ ವಿರಚಿತಮಪ್ಪ ಶ್ರೀಮದ್ವೀರಶೈವಾಚಾರ ಸಾರೋದ್ಧಾರ ಪ್ರತಿಪಾದಕ ಶಿವಾಧವ, ಶಿವಾವಲ್ಲಭ, ಮಹದ್ವೈಪುರೀಶ್ವರಾಂಕಿತ ಶತಕತ್ರಯವು ಶ್ರೀ ವೀರಶೈವಮತಾನುವರ್ತಿ ಸಿದ್ಧವೀರ ಸುಧೀಕೃತ ಮಾದ ಬೋಧಪ್ರಕಾಶಿಸಿಯೆಂಬುದು ಪೂರ್ಣಮಾದುದು- ಶತಕತ್ರಯವು ಸಂಪೂರ್ಣವು.

ವಿಷಯ : ವೀರಶೈವ ತತ್ತ್ವಬೋಧೆ.

ವಿಶೇಷ : ಕೊನೆಯಲ್ಲಿರುವ ಬೇರೆ ಎರಡು ೫೦, ೫೧ ನೆಯ ಪತ್ರಗಳಲ್ಲಿ ಶಿವಾಷ್ಟೋತ್ತರನಾಮ ಮತ್ತು ಹಾಡುಗಳು ಇವೆ. ಗ್ರಂಥದ ಆದಿಯ ಒಂದು ಬೇರೆ ಪತ್ರದಲ್ಲಿ ಹಾಡುಗಳಿವೆ.

1678

ಕೆ. ೪೯೬	**ಶತಕತ್ರಯ (ಸಟೀಕು)**	ಶ್ಲೋಕ, ಟೀಕು
೧೪.೮" × ೩"	ವಿರಕ್ತತೋಂಟದಾರ್ಯ	೧೫೬೦
೧-೬೫ ಪತ್ರ	೯ ಪಂಕ್ತಿ	೮೩ ಅಕ್ಷರ

ಆದಿ : ಭಕ್ತಿಶತಕದ ಮೂಲಗ್ರಂಥ ||

ಯೋ ಗುರುಃ ಸ ಶಿವಃ ಪ್ರೋಕ್ತೋ ಯಃ ಶಿವಃ ಸ ಗುರುಃ ಸ್ಮೃತಃ ||

ಟೀಕು || ಯಃ | ಆವನೊರ್ವ್ವ | ಗುರುಃ | ಗುರುವುಂಟು | ಸಃ | ಆತನು | ಶಿವಃ | ಶಿವನೆಂದು | ಪ್ರೋಕ್ತಃ | ಹೇಳಲ್ಪಟ್ಟನು | ಯಃ | ಆವನೊರ್ವ್ವ ಶಿವಃ | ಶಿವನುಂಟು | ಸಃ | ಆ ಶಿವನು | ಗುರುಃ | ಗುರುವೆಂದು | ಸ್ಮೃತಃ | ಸ್ಮರಿಸಲ್ಪಟ್ಟನು |

ಗುರೌ ಲಿಂಗೇ ಜಂಗಮೇ ಚ ಪ್ರಾಸಾದೇಪ್ಯೇಕದರ್ಶನಂ |
ಯತ್ತದಾಚರಣಂ ಪ್ರೋಕ್ತಂ ವೀರಶೈವ ಮಹಾಗಮೇ ||

ಟೀ || ಗುರೌ | ಗುರುವಿನಲ್ಲಿಯು | ಲಿಂಗೇ | ಲಿಂಗದಲ್ಲಿಯು | × × × ಪ್ರೋಕ್ತಂ | ಹೇಳಲ್ಪಟ್ಟಿತ್ತು || ೧ ||

ಅಂತ್ಯ : ಗೀತಾಸಾರೈ ಸ್ಸಮಸ್ತೈಶ್ಚ ಪುರಾತನ ಮಹಾಮತೈಃ |
ಕಥ್ಯತೇ ಶಿವಸಿದ್ಧಾಂತಂ ತಂತ್ರಂ ಷಟ್ಸ್ಥಲನಿರ್ಣಯಂ ||

ಟೀ || ಗೀತಾಸಾರೈಃ | ಕೂರ್ಮಪುರಾಣ ಮೊದಲಾದವರಲ್ಲಿ | ಪೇಳ್ದ ಈಶ್ವರಗೀತಂಗಳು ಮೊದಲಾದವರ ಸಾರಂಗಳಿಂದವು | ಸಮಸ್ತೈಃ | ಸರ್ವ ವಾದಂಥ | ಪುರಾತನ ಮಹಾಮತೈಃ | ಪುರಾತನ | ಮುನ್ನಿನವರುಗಳ | ಮಹಾಮತೈಶ್ಚ | ಮಹತ್ತಾದ ಮತಂಗಳಿಂದವು | ಷಟ್ಸ್ಥಲನಿರ್ಣಯವೆಂಬ ಶಿವಸಿದ್ಧಾಂತ ತಂತ್ರವು | ಹೇಳಲ್ಪಡುತ್ತಿಹುದು || ೧೮೫ || ವೈರಾಗ್ಯ ಶತಕದ ಮೂಲಗ್ರಂಥ ಟೀಕು ಸಂಪೂರ್ಣ ಮಂಗಳಮಹಶ್ರೀ ||—– ಶತಕತ್ರಯ ಮೂಲಗ್ರಂಥ ೩ ಕ್ಕಂ ಗ್ರಂಥಲೆಖ್ಖ ೫೭೦ ಜಯಮಹಾಶ್ರೀ |

ವಿಷಯ : ವೀರಶೈವ ತತ್ತ್ವಭೋಧೆ.

ವಿಶೇಷ : ಇದೇ ಕಟ್ಟನಲ್ಲಿ ಷಟ್ಸಲತಿಲಕವೆಂಬ ಕೆ. ೪೯೭ ನೆಯ ನಂಬರಿನ ಮತ್ತೊಂದು ಕೃತಿ ಇದೆ.

1679

ಕೆ. ೩೧೬/೧	**ಶತಕತ್ರಯದ ವ್ಯಾಖ್ಯಾನ**	ಗದ್ಯ
೯.೭"×೨"	ತೋಂಟದ ಸಿದ್ಧಲಿಂಗದೇಶಿಕ	?
೧–೧೦೧ ಪತ್ರ	೧೧ ಪಂಕ್ತಿ	೪೪ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯನಮಃ ॥ ಮೊಗ್ಗೆಮಾಯಿದೇವರ ಪಾದವೇ ಗತಿ ॥ ನಿರಂಜನಪ್ರಭುವೇ ನಮಃ ॥ ಶತಕತ್ರಯದ ವ್ಯಾಖ್ಯಾನವ ಬರವುದಕ್ಕೆ ಶುಭಮಸ್ತು ॥

ಕಂದ ॥ ಶ್ರೀಗುರು ನಿಜಬೋಧಾಮೃತ
ಸಾಗರನಪ್ರತಿಮನಖಿಳ ಕಾರಣರೂಪಂ
ಯೋಗಿಜನಸೇವಿತಂ ಮಹಿ
ಮಾಗಾರಂ ಪಾಲಿಸುಗೆ ನಿರಂಜನಲಿಂಗಂ ॥ ೧ ॥

ಗದ್ಯ ॥ ಶ್ರೀಮದನೇಕಲೋಕವಿಸ್ತಾರ ಪ್ರಭಾಪುಂಜರಂಜಿತ ಮಂಜುಳಾಂತರಂಗ ಕಾಂಡತ್ರಯಾತೀತಾ ಖಂಡಿತಾ ಮಳ ಭಕ್ತಿಕಾಂಡ ಮಂಡಿತೋದ್ದಂಡ ಶಿವಯೋಗಿಜನ ಮನಸ್ಸರಸಿಲಹರೀ ರಾಜಹಂಸ ಭಕ್ತಿಜ್ಞಾನವೈರಾಗ್ಯ ಮಾರ್ಗೋದ್ಧಾರ ಪರಮಚರಿತ ಶರಣ ಕರುಣಾಪಾಂಗ ಶ್ರೀಮನ್ನಿರಂಜನ ಲಿಂಗ ಕೃಪಾಮೃತಸಾರಪೂರ ನಿರ್ಮ್ಮಲಾಂತಃಕರಣ ಶುದ್ಧಜ್ಞಾನ ಸತ್ಕ್ರಿಯಾಚಾರವರ್ತನಾಯುಕ್ತನಪ್ಪ ತೋಂಟದ ಸಿದ್ಧಲಿಂಗದೇವನೆ ನಾಂ ಮಗ್ಗೆಯ ಮಾಯಿದೇವಪ್ರಭು ನಿರೂಪಿತಮಪ್ಪ ಪರಮ ವೀರಶೈವಮಾರ್ಗ್ಗ ಪ್ರತಿಪಾದಿತಮಪ್ಪ ಶತಕತ್ರಯ ಮಹಾಪ್ರಬಂಧಮಂ ಸಮಸ್ತ ಶಿವಗಣಂಗಳ ಱದಾಚರಿಸಿ ನಿತ್ಯಮುಕ್ತರಾಗಲೆಂದು ಶಬ್ದಶಬ್ದಾರ್ಥಂಗಳನೆಲ್ಲರಱಿವಂತೆ ಕನ್ನಡಿಸಿ ವ್ಯಾಖ್ಯಾನಮಂ ಮಾಡಿದಪೆಂ × × × × ಟೀಕೆ। ಶ್ರೀಗುರುವೆ। ಜ್ಞಾನಸಂಪತ್ತಿಯಿಂದುಪದೇಶಿಸುವ ಗುರುವೇ। ಮಹಾಗುರುವೆ। ಪೂಜ್ಯ ವಾದಂಥಾ ಗುರುವೇ

ಅಂತ್ಯ : ಗದ್ಯ ॥ ಯಿದು ಸಮಸ್ತ ಶಿವಯೋಗ × × × × ಸನ್ಮಾರ್ಗಸಿದ್ಧಾಂತ ಸ್ಥಾಪನಾಚಾರ್ಯ್ಯ ಪರಮ ಸುಜ್ಞಾನ ಸತ್ಕ್ರಿಯಾಯುಕ್ತ ಭಕ್ತಿ .... ತಾಂತರಂಗ ಪ್ರಣವಪೂರ್ವ್ವಕ ಪಂಚಾಕ್ಷರೀ ಮಂತ್ರೋಚ್ಚಾರಿತ ಮಂಜಳ ಭಾಷಾವಿಲಾಸನಪ್ಪ ತೋಂಟದ ಸಿದ್ಧಲಿಂಗದೇ. . . ನಿಂ ವಿರಚಿತಮಪ್ಪ ವ್ಯಾಖ್ಯಾನದೊಳ್। ವೈರಾಗ್ಯ ಪ್ರತಿ....ದ ಶತಕಂ ಸಮಾಪ್ತಂ ಮಂಗಳ ಮಹಾಶ್ರೀ.

ವಿಷಯ : ಭಕ್ತಿ – ಜ್ಞಾನ – ವೈರಾಗ್ಯಯುಕ್ತ ವೀರಶೈವಸಿದ್ಧಾಂತ.

ವಿಶೇಷ : ೧೩ ನೆಯ ಪತ್ರವು ಲೋಪವಾಗಿದೆ. ೮೯ ನೆಯ ಪತ್ರ ಮುರಿದಿದೆ. ೧೦೧ ನೆಯ ಪತ್ರ ಅಂಚುಗಳಲ್ಲಿ ತ್ರುಟಿತವಾಗಿ ಸ್ವಲ್ಪ ಲುಪ್ತವಾಗಿದೆ. ಪ್ರಥಮದಲ್ಲಿ ಭಕ್ತಿಪ್ರತಿಪಾದಕವಾದ ಶಿವಾಧವಶತಕ, ದ್ವಿತೀಯದಲ್ಲಿ ಜ್ಞಾನಪ್ರತಿಪಾದಕ

ಶಿವಾವಲ್ಲಭಶತಕ ಮತ್ತು ತೃತೀಯದಲ್ಲಿ ವೈರಾಗ್ಯಪ್ರತಿಪಾದಕವಾದ ಐಪುರೀಶ್ವರ ಶತಕವೂ ಕ್ರಮವಾಗಿ ವ್ಯಾಖ್ಯಾನಮಾಡಲ್ಪಟ್ಟವೆ. ಒಟ್ಟನಲ್ಲಿ ಒಂದೆರಡು ಪತ್ರ ಲುಪ್ತವಾದರೂ ಸಮಗ್ರಪ್ರಾಯವೆನಬಹುದು. ಶಕಟರೇಫ ವಿದೆ. ಇದರೊಂದಿಗೆ ಪ್ರಭುಲಿಂಗಕಂದದ ಟೀಕಾ ಗ್ರಂಥವೂ, ಗುರುಸ್ತೋತ್ರ ತ್ರಿವಿಧಿ ವ್ಯಾಖ್ಯಾನವೂ, ಕೆಲ ಖಿಲ ಪತ್ರಗಳೂ ಇವೆ.

1680

ಕೆ. ೨೦೮/೧	**ಶತಕಂಧರ ಚರಿತೆ**	ಯಕ್ಷಗಾನ
೧೭.೪"X೧.೪"	?	?
೧–೪೪ ಪತ್ರ	೮ ಪಂಕ್ತಿ	೮೫ ಅಕ್ಷರ

ಆದಿ : ಶ್ರೀ ... ಸೀತಾರಾಮ ಶತಕಂದರ ಚರಿತ್ರೆ ಪುಸ್ತಕಾ ಯಕ್ಷಗಾನಾ ದ್ವಿಪದೆ ॥ ಶ್ರೀ ಜಕನಜಾಭೀಶತರಣ ಜನಪೋಷಾ

ರಾಜಿತಾಮರ ಪೂಜ ....
ವಾಸವ ರಿಪುಕಾಲವರ ಮಿಸುನಿ ಚೇಲ
ಭೂಸುರಾನ್ವಯಪಾಲ ಭುವನ ಕರೆಸೀಲಾ
ಕಪಟನಾಟಕಸೂತ್ರ ಕಮಲದಳನೇತ್ರ
ಚಪಲನೀರದಗಾತ್ರ ಚಂದ್ರಧರಮಿತ್ರ
ಅಗಣಿತಾಗಮಪೂರ ಅಂಬುಜ ಗಭೀರ
ನಿಗಮಕೋಟಿವಿದೂರ ನೀತಿ ಸುವಿಚಾರಾ

ವರ ಸಿಬಿಪುರನಿಲಯವಾಸ ನರಶಿಂಹ
ಪರಮಪಾವನದೇವ ಪಾಲಿಸುಗೆ ಜಗವಾ ॥ ೧ ॥

ಅಂತ್ಯ : ಧರಣಿಯೊಳೀ ಸೀತಾರಾಮನ
ಚರಿತೆಯ ಬರದೋದಿ ಕೇಳ್ವ ಮಾನವಜನರಿಗೆ
ಯಿರದೊಳಗಷ್ಟಯಿಶ್ವರಿಯವ
ಚಿರ ನಿತ್ಯಾನಂದ ಪದವಿ ಪರದೊಳಗಹುದು ॥ ೧ ॥

* * * *

ವರರತ್ನವ ಬಲ್ಲದೆ ಕಪಿಯಿಾ
ಚಿರಿತಾಮೃತಸಾರ ಮೂರ್ಖ ಮಾನವಗಹುದೆ

ನೆರೆ ಜಾಣರೊಲಿದು ಲಾಲಿಸಿ
ದುರಿತವನೊದದಮಳ ಪದವ ರಘುವರನೀವಂ ‖ ೩ ‖
ಯಿತಿ ಸೀತಾರಾಮುಚರಿತೆ ಸಮಾಪ್ತ ‖

ವಿಷಯ : ಶ್ರೀರಾಮನ ಕಥೆ.

ವಿಶೇಷ : ೩೫ ನೆಯ ಪತ್ರ ಲುಪ್ತ. ಇದಕ್ಕೆ ಸೀತಾರಾಮಚರಿತೆ ಎಂಬ ಹೆಸರೂ ಇದೆ. ಇದರೊಂದಿಗೆ ಲಕ್ಷ್ಮೀ ಕಲ್ಯಾಣವೆಂಬ ಯಕ್ಷಗಾನವೂ ಇದೆ.

1681

ಕೆ. ೧೫೭	**ಶತಕಂಧರ ಚರಿತೆ**	ಯಕ್ಷಗಾನ
೧೦.೩″ × ೧.೯″	?	?
೧೧೩–೧೮೩ ಪತ್ರ	೧೧ ಪಂಕ್ತಿ	೫೫ ಅಕ್ಷರ

ಆದಿ : ಶ್ರೀ ಸೀತಾರಾಮಾಯಣ ಶತಕಂದರ ಚರಿತ್ರೆ ಯಕ್ಷಗಾನದ ಪುಸ್ತ್ರಕಾ
ಬರವುದಕ್ಕೆ ಶುಭಮಸ್ತು × ×
ದ್ವಿಪದೆ । ರಾಗ । ನಾಟಿ ।
ಶ್ರೀ ಜನಕಜಾಧೀಶ ಶರಣಜನಪೋಷಾ
ರಾಜಿತಾಮರಪೂಜ ರಾಜಸುರಭೂಜಾ
ವಾಸವರಿಪುಕಾಲ ವರಮುನಿಸುನಿಭೇಲಾ
ಭೂಸುರಾಂನ್ವಯಪಾಲ ಭುವನಕತಿಸೀಲಾ
ಕಪಟನಾಟಕಸೂತ್ರ ಕಮಲದಳನೇತ್ರಾ
ಚಪಲ ನೀರದಘಾತ್ರ ಜಿಂದ್ರಧರ ಮಿತ್ರಾ

ಅಂತ್ಯ : ವರರತ್ನವ ಬಲ್ಲದೆ ಕಪಿ
ಯಿಾ....ತನಾರ ಮೂರ್ಖ ಮಾನವನಹುದೇ
ನೆರೆ ಜಾಣರೊಲಿದು ಲಾಲಿಸಿ
ದುರಿತವನೊದದಮಳಪದವ ರಘುವರನೀವಂ ‖ ೩ ‖
ಯಿಂತೀ ಶ್ರೀ ಸೀತಾರಾಮಾಯಣ ಚರಿತೆ ಸಂಪೂರ್ನ್ನ.

ವಿಷಯ : ಶ್ರೀರಾಮನ ಕಥೆ.

ವಿಶೇಷ : ಕೊನೆಯಲ್ಲಿ ' ಪ್ರಜೇತ್ಪತ್ಯನಾಮ ಸಂವತ್ಸರದ ಮಾಘ ಶು ೧೦ ಲ್ಲು ದೊಡ್ಡಸಿಬಪ್ಪನು ನಂಮ ರಂಗಪ್ಪನಿಗೆ ಬರದುಕೊಟ್ಟ ಶ್ರೀ ಸೀತಾ ರಾಮಾಯಣ ಯಕ್ಷಗಾನದ ಪುಸ್ತುಕಕ್ಕೆ ಮಂಗಳಮಹಾ ' ಎಂದಿದೆ.

೧೫೯ ಮತ್ತು ೧೬೬ ನೆಯ ಪತ್ರಗಳು ಇಲ್ಲ. ೧೨೮ ನೆಯ ಪತ್ರ ಅರ್ಧ ಭಾಗ ಮುರಿದುಹೋಗಿದೆ.

1682

ಕೆ. ೩೫೫/೧೦ **ಶತರತ್ನವ್ಯಾಖ್ಯಾನ** ಗದ್ಯ

೮.೫"×೧.೯" ಪರ್ವತೇಶ ಸು. ೧೬೦೦

೧೨೭–೧೫೭ ಪತ್ರ ೧೨ ಪಂಕ್ತಿ ೫೦ ಅಕ್ಷರ

ಆದಿ : ಶ್ರೀ .... ಶತರತ್ನ ॥ ಅವತಾರಿಕೆ ।
ಪ್ರಣಂಮ್ಯ ಚೆಂನವೀರೇಶ ಗುರು ಕರ್ಣಾಟಭಾಷಯಾ ।
ವ್ಯಾಖ್ಯಾಸ್ಯೇ ಶತರತ್ನಾಖ್ಯ ಸಂಗ್ರಹಂ ಮನ್ಮಹಾಜ್ಞಯಾ ॥
ಸದ್ಯೋಜ್ಯೋತಿಃ ಪಾದರಾಮಕಂಠಾಘೋರ ಶಿವಾಹ್ವಯೈಃ ।
ಶ್ರೀ ನಾರಾಯಣ ಕಂಠಾದ್ವೈ ಸ್ತ್ರೀಲೋಚನ ಶಿವೈಪುರಾ ॥
ತತ್ತತಂತ್ರೇಪು ಗುರುಭಿಃ ಕೃತ ವ್ಯಾಖ್ಯಾನುಸಾರತಃ ।
ಟೀಕಾಸೂತ್ರ ಶತಕಸ್ಯಾಸ್ಯ ಮುಮುಕ್ಷೂನ್ಪ್ರತಿ ರಚ್ಯತೇ ॥
ಆಚಾರ್ಯನು । ಅತಿ ವಿಸ್ತೃತವಾದ ಸಿದ್ಧಾಂತಶಾಸ್ತ್ರದ ದೆಸೆಯಿಂ ಶಿವಾದ್ಯರ್ಥ ಪ್ರಕಾಶಕತ್ವದಿಂ। ರತ್ನೋಪಮಂಗಳಾದ ಶತ ಸೂತ್ರಂಗಳನುದ್ಧರಿಸಿ ಸಂಗ್ರಹವನು ಮಾಡಲಿಚ್ಛೈಸಿ ।

ಅಂತ್ಯ : ಇತಿ ಶ್ರೀಮದನನ್ಯ ಶಿವಜ್ಞಾನ ದಾನಶೀಲ ಸಬೀಜಾಬೀಜ ಯೋಗಯೋಗಿಂದ್ರ ಚಿಂತಾರತ್ನ ಚೆನ್ನವೀರೇಶಾಖ್ಯ ದೇಶೀಕೇಂದ್ರ ಚೂಡಾಮಣಿ ಪಾಣಿಪದ್ಮಜನ್ಮನಾ । ಷಟ್ಥಸ್ಥಲಜ್ಞಾನ ಪೀಯೂಷ ಸಿಂಧು ಭದ್ರೇಣ ಶ್ರೀ ಪರ್ವತೇಶಾಖ್ಯ ದೇಶಿಕ ಸಾರ್ವಭೌಮೇನ। ಕರ್ನಾಟಭಾಷಾ ವಿರಚಿತಾ ಶತರತ್ನ ಸಂಗ್ರಹವ್ಯಾಖ್ಯಾ ಆಲೋಡ್ಯ ಸವ್ಯಾಕೃತಿ ಸಪ್ತಸಂಹಿತಾಃ ಶ್ರೀ ಪರ್ವತೇಶೋಪ್ಟ ವಿಧಾಂಶ್ಚ ಸಂಗ್ರಹಾನ್ । ಕರ್ಣಾಟವಾಣ್ಯಾ ಶತರತ್ನ ಸಂಗ್ರಹಂ ವ್ಯಾಖ್ಯಾತ್ ಸ್ಫುಟಂ ತತ್ವ ಬುಭುತ್ಸಯಾಚಿತಃ ॥ ಶತರತ್ನ ಸಮಾಪ್ತ ಮಂಗಳಮಹಾಶ್ರೀ.

ವಿಷಯ : ವೀರಶೈವ ವೇದಾಂತ.

ವಿಶೇಷ : ಈ ಕಟ್ಟಿನಲ್ಲಿ ತತ್ವನಿರ್ಣಯ ಮೊದಲಾದ ಇತರ ಹದಿನಾರು ಪುಸ್ತಕಗಳಿವೆ.

1683

ಕೆ. ಬಿ. ೧೯೩ | ಶನೀಶ್ವರನ ಕಥೆ | ಗದ್ಯ
೭.೩"×೬" | ? | ?
೧–೬೬ ಪತ್ರ | ೧೧ ಪಂಕ್ತಿ | ೧೮ ಅಕ್ಷರ

ಆದಿ : ಶನ್ಯೈಸ್ವರನ ಕಥೆ × × × ಪೂರ್ವದೇಶದಲ್ಲಿ ಪದ್ಮಪುರವೆಂಬ ಪಟ್ಟಣದಲ್ಲಿ ಪಿಪ್ಪಿಲಾರುಷಿಯಂಬ ಬ್ರಾಹ್ಮಣನು ರಾಜರುಷಿಯಾಗಿ ಮಂತ್ರಿಪ್ರದಾನಿ ಅನೇಕ ಆನೆ ಕುದುರೆ ಮುಂದಿ ಮೂರ್ಬಲಸಹಿತವಾಗಿ ವಂದಾನೊಂದು ದಿವಸ ದಲ್ಲು ಕರಿ ತುರಗ ರಥ ಸೇನೆ ಮಹಾರ್ಬಲ ನಿಯೋಗಿಗಳು ಪ್ರದಾನರು ಕರಣಿ ಕರೂ ಸಹ ವಡ್ಡೋಲಗಂಗೊಡುತ್ತಾ ಸುಖದಲ್ಲಿ ಕುಳಿರುವಂಥಾ ವೇಳ್ಯೆದಲ್ಲಿ ಅರ್ಕಸುತನಾದ ಶನ್ಯೈಶ್ಚರ ದೇವರು

ಅಂತ್ಯ : ಆ ಬ್ರಾಹ್ಮಣನು ನನಗೆ ಅವಮಂನಣೆಯಂ ಮಾಡಿಸಿದೆಯನಲು ಯಿದು ಮನಸ್ಸಿನಲ್ಲಿ ಯಿರಲಿ ಸದ್ಯದಲ್ಲಿ ನಿನ್ನ ವಂಶವೆಲ್ಲ ನಾಶವಾಗಿ ಪಾಂಡವರಿಂದ ನೀವು ಹತವಾಗಿ ಯಂದು ಶಾಪವಂ ಕೊಟ್ಟು ಮಾಯವಾಗಲು ಯಿತ್ತಲೀ ಪಾಂಡವರು ಮಾಧವನ ಸಹಾಯದಿಂದ ಮಹಾಸೇನೆಯಂ ಕೂಡಿಕೊಂಡು ಬಂದು ಕೌರವೇಶ್ವರನ ಕುಲವೆಲ್ಲ ಸಂಹರಿಸಿ ಸುಖವಾಗಿ ರಾಜ್ಯಭಾರಂ ಗೈದರೂ । ಶನ್ಯೈಶ್ವರನ ಕಥೆ ಸಂಪೂರ್ಣ ಮಂಗಳಮಹಾಶ್ರೀ ॥

ವಿಷಯ : ಶನಿಯ ಮಹಿಮೆ.

ವಿಶೇಷ : ౨೧ ಪತ್ರಸಂಖ್ಯೆ ಬಿಟ್ಟುಹೋದರೂ ವಿಷಯ ಲೋಪವಿಲ್ಲ. ೪೫ ಸಂಖ್ಯೆಯ ಎರಡು ಪತ್ರಗಳಿವೆ.

1684

ಕೆ. ಬಿ. ೩೨೪/೪ | ಶನೇಶ್ವರದಂಡಕಾ | ದಂಡಕ
೮.೩"×೬.೫" | ? | ?
೩ ಪತ್ರ | ೧೮ ಪಂಕ್ತಿ | ೨೩ ಅಕ್ಷರ

ಆದಿ : ಶನೇಶ್ಚರ ದಂಡಕಾ ಬರೆಯುವುದಕ್ಕೆ ಶುಭಮಸ್ತು ॥
ಶ್ರೀಂನ್ಮಹಾ ಮಾರ್ತಾಂಡ ಪುತ್ರಾ
ಮುನೀಂದ್ರಾದಿ ಸ್ತೋತ್ರಾ
ಪರಾನಂದಘಾತ್ರಾ ಪವಿತ್ರ
ವಿಚಿತ್ರಾಚರಿತಾ ಕಸ್ಯಪ ವತ್ಸಗೋತ್ರಾ ॥

ನಭೋಮಾರ್ಗ ಸಂಚಾರ ನೀನಾಗಿ
ನಾನಾ ಗ್ರಹಸ್ಥಾನಕತ್ಯೋಂನ್ನತಾವಾಸಾಮಂ ಮಾಡಿ
ಭಾಪಪ್ರಕಾಶಾ ಯಥಾ ಮಂಡಲಾಕಾರ
ನೀಲಾಂಬರದಂಬರಾ ನೀಲವಸ್ತ್ರಪ್ರೀಯಾ

ಅಂತ್ಯ : ಸತ್ಪುರುಷರ ಕಾಡಿಸದ
ಅಂನ್ಯಾಯಕಾರಿಯರಿಗಂಟೆ ನೀಂ ಬಿಡದೆ
ಅವರಲ್ಲಿ ನಿಂನ್ನ ಮನಬಂದ ರೀತಿಯಲಿ
ಬಾಧಿಪುದೈಯ್ಯಾ ಸಂನ್ಮವುನೀವ್ವಂಥಾ
ಸರ್ವೇಶ್ವರ ಸಧಾನಂದ ನಿರ್ಮಲಾತ್ಮಕವಂಥ್ಯಾ
ಮಂಥಕಾರಿ ಕುಜಾರಿ ಯಮಸಹೋಧರ
ವೀರಧರ್ಮ ಪರಿಪಾಲಾನಾ ।
ಇತಿ ಶನೇಶ್ವರ ದಂಡಕ ಸಂಪೂರ್ನಂ ಮಂಗಳಮಹಾಶ್ರೀ ॥

ವಿಷಯ : ಶನಿಗ್ರಹದ ಸ್ತೋತ್ರ.

ವಿಶೇಷ : ಇದೇ ಪುಸ್ತಕದಲ್ಲಿ ಪಂಚವಿಂಶತಿ ಪದ್ಧತಿವ್ಯಾಖ್ಯಾ, ಶ್ರೀರಂಗಮಾಹಾತ್ಮ್ಯ, ಜ್ಞಾನೋಪದೇಶ ಎಂಬ ಕೃತಿಗಳಿವೆ. ಕೊನೆಯ ಪುಟದಲ್ಲಿ ಒಂದೆರಡು ಔಷಧಗಳ ವಿವರ ಇದೆ.

1685

ಕೆ. ಬಿ. ೩೭೧	**ಶಬರಶಂಕರನಾಟಕ**	ನಾಟಕ
೬"×೪"	ಸಿದ್ದಪ್ಪ	೧೯೦೪
೧–೭೧ ಪತ್ರ	೧೪ ಪಂಕ್ತಿ	೯ ಅಕ್ಷರ

ಆದಿ : ಶ್ರೀ × × ಶಬರಶಂಕರ ನಾಟಕವು ಪ್ರಥಮಾಂಕ ಪ್ರಾರಂಭಃ
ಸೂತ್ರಧಾರಂ ॥ ನಾಂದೀ ॥ ವೃತ್ತಾ ॥

ಆವುದು ಧಾತೃಸೃಷ್ಟಿಗೆ ಮೊದಲ್ ಹುತಹವ್ಯಮನಾಂಪುದಾವುದಿ
ನ್ನಾವುದು ಹೋತೃ ಶಬ್ದ ಗುಣಮಾವುದವಾವವು ಕಾಲಕರ್ತೃಗಳ್
ಆವುದುಸುರ್ಜಗಕ್ಕುಸುರ್ವರಾವುದು ಭೂತಕುಲ ಪ್ರಧಾನಮೆಂ
ದಾವೊಡಲೆಂಟರಿಂದೆ ಮೆರೆವೀಶನೆಂಡರ್ರುಗೆ ನಿಮ್ಮಭೀಷ್ಟಮಂ ॥ ೧ ॥

ಅಂತ್ಯ : ವರ ವೇಣುಪುರದೊಳಿಹನಾ
ಪರಮ ವಿಬುಧಾಶ್ರಿತ ಶಿದ್ಧಪ್ಪನೆಂಬ ಕವಿ
ತರಳ ಹರಭಕ್ತ ಪೇಳ್ದ
ಪರಶಿವ ಕಿರಾತಲೀಲೆಯ ನಾಟಕರೂಪದೀ ‖ ೧ ‖

× × × ×

ಧೃತ ಶಶಿಖಂಡ ಜಿತ ಸುಮಕಾಂಡ
ಹತವೇತಂಡ ಭೃತ ಗಜದಂಡ ‖ ೨ ‖
ಪಾಲಯ ಕೃಷ್ಣನೃಪಾಲಯ ಮನುಕಂ
ಪಾಲಯ ಸದವನ ಶೀಲ ಮಹೇಶಾ ‖ ೩ ‖
ಶಬರಶಂಖರ ನಾಟಕ ಪಂಚಮಾಂಕ ಸಮಾಪ್ತ ಮಂಗಳಮಹಾ ‖

ವಿಷಯ : ಕಿರಾತಾರ್ಜುನರ ಯುದ್ಧ.

ವಿಶೇಷ : ಕೊನೆಯಲ್ಲಿ "ಕಳಲೆಯಲ್ಲಿರುವ ವರಕೋಡು ಪ್ರೈವೇಟ್ ಸ್ಕೂಲ್ ಮಾಸ್ಟರ್ ಸಿದ್ದಪ್ಪ. 2 - 1 - 1904" ಎಂದು ಬರೆದಿದೆ.

1686

ಕೆ. ೬೭/೨	**ಶಬರಶಂಕರವಿಳಾಸ**	ಚಂಪು
೧೩.೩"×೧.೭"	ಷಡಕ್ಷರದೇವ	೧೬೫೦
೧–೩೦ ಪತ್ರ	೧೧ ಪಂಕ್ತಿ	೮೨ ಅಕ್ಷರ

ಆದಿ : ಶಬರಶಂಕರವಿಲಾಸವ ಬರಉದಕ್ಕೆ ಶುಭಮಸ್ತು ‖
ಶ್ರೀಮತ್ಪದ್ಮಾಕ್ಷ ಮುಖ್ಯಾಮರ ಮಕುಟ ಮರುತ್ಸನ್ಮಣಿ ಶ್ರೇಣಿ ಭೃಂಗ
ಸ್ತೋಮಾಂಚತ್ಪಾದಪದ್ಮಂ ಗಿರಿವರತನಯಾ ನೇತ್ರ ನೀಲಾಬ್ಜ ಚಂಚ
ತ್ಸೋಮಂ ಭಕ್ತಾಘ ಕಲ್ಪದ್ರುಮ ನಮಿತ ಕೃಪಾಸಾಗರಂ ಭವ್ಯಲೀಲೋ
ದ್ದಾಮಂ ಕೂರ್ತೀಗೆ ಸದ್ಭಕ್ತಿಯನೆಮಗೆ ವೃಷಾಧೀಶ ಪತ್ರಂ ತ್ರಿನೇತ್ರಂ ‖೧‖

ಅಂತ್ಯ : ಪ್ರವಿಮಳ ರಾಜಶೇಖರವಿಳಾಸ ಮಹಾಕೃತಿಯಂ ನೃಷಾಧಿರಾ
ಜ ವಿಜಯ ಸತ್ಪ್ರಬಂಧಮುಮನೊಪ್ಪುವ ಕಂನಡದಿಂ ನಿಮಿರ್ಚಿದಂ
ಭುವನ ವಿನುತ್ಯಮಾಗೆ ಕವಿಕರ್ಣರಸಾಯನಮೆಂಬ ಕಬ್ಬಮುಂ
ಪ್ರವಿತತ ಸಂಸ್ಕೃತೋಕ್ತಿಯೊಳೊಡರ್ಚಿದನಲ್ತೆ ಷಡಕ್ಷರಾಹ್ವಯಂ ‖ ೬೨ ‖

ಇದು ನಿಖಿಳ ಸುರಾಸುರೇಂದ್ರ ವರದ ಭುವನೈಕವಲ್ಲಭ ಕರುಣಾಕರ ಪರಮ ಶಿವಲಿಂಗ ತರುಣ ಪತಂಗ ಸಂಗತ ಹೃದಯಾರವಿಂದ ಬಂಧುರ ಸರಸ ಜನಮಾನಿತೋಭಯ ಕವಿತಾವಿಚಕ್ಷಣ ಶ್ರೀ ಷಡಕ್ಷರಿದೇವ ವಿರಚಿತ ಶಬರ ಶಂಕರ ವಿಳಾಸಾಖ್ಯ ವಿಪುಳ ಪ್ರಬಂಧದೊಳ್ಪಾಶುಪತಾಸ್ತ್ರದ ಪ್ರಸಂನ ವರ್ಣನಂ ಪಂಚಮಾಶ್ವಾಸಂ ಮಂಗಳಮಹಾ ಶ್ರೀ ಶ್ರೀ.

ವಿಷಯ : ಶಿವನು ಬೇಡನಾಗಿಬಂದು ಅರ್ಜುನನಿಗೆ ದರ್ಶನವಿತ್ತುದು.

ವಿಶೇಷ : ೧ ಮತ್ತು ೨೯ ನೆಯ ಪತ್ರಗಳ ಅಂಚು ಸ್ವಲ್ಪ ಮುರಿದಿದೆ. ಇದೇ ಕಟ್ಟ ನಲ್ಲಿ ರಾಜಶೇಖರವಿಳಾಸವೆಂಬ ಮತ್ತೊಂದು ಕೃತಿ ಇದೆ.

1687

ಕೆ. ೧೧೫	**ಶಬರಶಂಕರವಿಳಾಸ**	ಚಂಪು
೧೯.೨"×೧.೯"	ಷಡಕ್ಷರದೇವ	೧೬೫೦
೧–೨೬ ಪತ್ರ	೧೧ ಪಂಕ್ತಿ	೯೦ ಅಕ್ಷರ

ಆದಿ : ಶಬರಶಂಕರವಿಳಾಸ ಬರೆವುದಕೆ ನಿರ್ವಿಘ್ನಮಸ್ತು ಸ್ರಗ್ಧರಾವೃತ್ತ ।
ಶ್ರೀಮತ್ಕಲ್ಯಾಣರೂಪಂ ಶರಭವನ ಗಜೋತ್ಸಗನಂಭ್ರಾಂತಯೋಗಾ
ರಾಮಾಂಚತ್ಪಾದಪದ್ಮಂ ಸುರುಚಿ ಗಣಪ ವಿಭ್ರಾಜಿತಂ ಸಾರಸತ್ವ
ವ್ಯಾಮಿಶ್ರಾಹೀನ ಚಂಚತ್ಕಟಕನಧಿಕ ದಿವ್ಯಾಗಮಂ ಸ್ವಸ್ಥಲೋಕ
ಸ್ತೋಮಂ ಭ್ರಾಜಿಷ್ಣುವೆಂಮಂ ಪೊರೆಗೆ ವಿತತ ಭಾಸ್ವತ್ಪ್ರಕಾಶಂ ಗಿರೀಶಂ ॥ ೧ ॥

ಅಂತ್ಯ : ನೆರದೇಕಾದಶವರ್ಷದ
ಹರೆಯದೊಳಭವ ಪ್ರಸಾದ ಬಲದಿಂ ಕವಿತಾ
ತರುಣಿ ಷಡಕ್ಷರಿದೇವನ
ನೆರವಿಲ್ಲದೆ ವರಿಯಿಸಿರ್ದಳರಿದೆನೆ ವಿಬುಧರ್ ॥ ೬೦ ॥

× × × ×

ಪ್ರವಿಮಳ ರಾಜಸೇಖರ ವಿಳಾಸ ಮಹಾಕೃತಿಯಂ ವೃಷಾಧಿರಾ
ಜ ವಿಜಯ ಸತ್ಪ್ರಬಂಧಮುಮನೊಪ್ಪುವ ಕನ್ನಡದಿಂ ನಿಮಿರ್ಚಿದಂ
ಭುವನ ವಿನುತ್ಯಮಾಗೆ ಕವಿಕರ್ಣರಸಾಯನನೆಂಬ ಕಬ್ಬಮಂ
ಪ್ರವಿತತಿ ಸಂಸ್ಕೃತೋಕ್ತಿಯೊಳೊಡರ್ಚಿದನಲ್ತೆ ಷಡಕ್ಷರಾಹ್ವಯಂ ॥ ೬೩ ॥

ಗದ್ಯ ॥ ಇದು ಸಮಸ್ತ ಸುರಾಸುರೇಂದ್ರ ವರದ ನಿಖಿಲ ಭುವನೈಕವಲ್ಲಭ ಕರುಣಾಕರ ಪರಮಶಿವಲಿಂಗ ತರುಣಪತಂಗ ಸಂಗತ ಹೃದಯಾರವಿಂದ ಬಂಧುರ ಸರಸಜನಮಾನಿತೋಭಯ ಕವಿತಾವಿಚಕ್ಷಣ ಶ್ರೀ ಷಡಕ್ಷರಿದೇವ ವಿರಚಿತಮಾದ ಶಬರಶಂಕರವಿಲಾಸ ವಿಪುಳ ಪ್ರಬಂಧದೊಳ್ ಶಂಕರಪ್ರಸಂನವರ್ನನಂ ಪಂಚಮಾಶ್ವಾಸಂ ಸಂಪೂರ್ನಂ.

ವಿಷಯ : ಶಿವನು ಬೇಡನಾಗಿ ಬಂದು ಅರ್ಜುನನಿಗೆ ದರ್ಶನವಿತ್ತುದು.

ವಿಶೇಷ : ಪ್ರತಿ ಸಮಗ್ರವಾಗಿದೆ.

1688

ಕೆ. ೩೫೭/೨	**ಶಬರಶಂಕರವಿಳಾಸ**	ಚಂಪು
೧೧.೧"×೨"	ಷಡಕ್ಷರದೇವ	೧೬೫೦
೫೬–೯೪ ಪತ್ರ	೧೦ ಪಂಕ್ತಿ	೬೦ ಅಕ್ಷರ

ಆದಿ : ಶಬರಶಂಕರ ವಿಲಾಸ ॥

ಶ್ರೀಮತ್ಕಲ್ಯಾಣರೂಪಂ ಶರಭನಗಜೋತ್ಸಂಗನಭ್ರಾಂತಯೋಗಾ
ರಾಮಾಂಚತ್ಪಾದಪದ್ಮಂ ಸುರುಚಿ ಗಣಪ ವಿಭ್ರಾಜಿತಂ ಸಾರಸತ್ವ
ವ್ಯಾಮಿಶ್ರಾಹೀನ ಚಂಚತ್ಕಟನಧಿಕ ದಿವ್ಯಾಗಮಂ ಸ್ವಸ್ಥಲೋಕ
ಸ್ತೋಮ ಭ್ರಾಜಿಷ್ಣುವೆಂಮಂ ಪೊರೆಗೆ ವಿತತ ಭಾಸ್ವತ್ಪ್ರಕಾಶಂ ॥ ೧ ॥

× × × ×

ಜೇಂಗೊಡದಂತೆ ಝೇಂಕರಿಪ ತುಂಬಿಗಳಿಂಚರದಂತೆ ಪೆಂಪನಾ
ಳ್ದಿಂಗಡಲಂತೆ ಪಣ್ತೆಸೆವ ಮಾಮರದಂತೆ ಪಯೋಜದಂತೆ ಬೆ
ಳ್ದಿಂಗಳ ಸೊಂಪಿನಂತೆ ಸುಸಿಲಾಸೆಯ ನಲ್ಲಳ ನೋಟದಂತೆ ಚಿ
ತ್ರಂಗೊಳಲಾಪ್ಪುರ್ದೀ ಕೃತಿ ಷಡಕ್ಷರದೇವಕೃತಂ ರಸಜ್ಞರಾ ॥ ೨೭ ॥

ಅಂತ್ಯ : ಪ್ರವಿಮಳ ರಾಜಶೇಖರವಿಳಾಸ ಮಹಾಕೃತಿಯಂ ವೃಷಾಧಿರಾ
ಜ ವಿಜಯ ಸತ್ಪ್ರಬಂಧಮುಮನೊಪ್ಪುವ ಕಂನಡದಿಂ ನಿಮಿರ್ಚಿದಂ
ಭುವನ ವಿನುತ್ಯಮಾಗೆ ಕವಿಕರ್ಣರಸಾಯನಮೆಂಬ ಕಬ್ಬಮುಂ
ಪ್ರವಿತತ ಸಂಸ್ಕೃತೋಕ್ತಿಯೊಳೊಡರ್ಚಿದನಲ್ತೆ ಷಡಕ್ಷರಾಹ್ವಯಂ ॥ ೬೩ ॥

ಗದ್ಯ ॥ ಯಿದು ನಿಖಿಳ ಸುರಾಸುರೇಂದ್ರ ವರದ ನಿಖಿಳ ಭುವನೈಕವಲ್ಲಭ ಕರುಣಾಕರ ಪರಮ ಶಿವಲಿಂಗ ತರುಣಪತಂ ಸಂಗತ ಹೃದಯಾರವಿಂದ ಬಂಧುರ ಸರಸಜನಮಾನಿತೋಭಯ ಕವಿತಾವಿಚಕ್ಷಣ ಶ್ರೀ ಷಡಕ್ಷರಿದೇವ

ವಿರಚಿತವಾದ ಶಬರಶಂಕರವಿಳಾಸ ವಿಪುಳಪ್ರಬಂಧದೊಳ್ಶಂಕರ ಪ್ರಸಂನ್ನ ವರ್ನನಂ ಪಂಚಮಾಶ್ವಾಸಂ ಪರಿಸಮಾಪ್ತಂ ಮಂಗಳಮಹಾಶ್ರೀ.

ವಿಷಯ : ಶಿವನು ಬೇಡನಾಗಿ ಬಂದು ಅರ್ಜುನನಿಗೆ ದರ್ಶನವಿತ್ತುದು.

ವಿಶೇಷ : ಪ್ರತಿ ಚೆನ್ನಾಗಿದೆ. ಶಕಟರೇಫಪ್ರಯೋಗ ಇದೆ. ಇದರೊಂದಿಗೆ ಗಿರಿಜಾ ಕಲ್ಯಾಣ, ರಾಜೇಂದ್ರವಿಜಯಗಳೆಂಬ ಗ್ರಂಥಗಳಿವೆ.

1689

ಕೆ.ಎ. ೨೨೪/೨	**ಶಬರಶಂಕರವಿಳಾಸ**	ಚಂಪು
೧೨.೫"×೭.೮"	ಷಡಕ್ಷರದೇವ	೧೬೫೦
೧–೨೨ ಪತ್ರ	೬೨ ಪಂಕ್ತಿ	೫೫ ಅಕ್ಷರ

ಆದಿ : ಶ್ರೀ ಶಬರಶಂಕರವಿಲಾಸ. ಸ್ರಗ್ಧರಾವೃತ್ತ ॥

ಶ್ರೀಮತ್ಕಲ್ಯಾಣರೂಪಂ ಶರಭವನಗಜೋತ್ಸಂಗನಭ್ರಾಂತಯೋಗಾ
ರಾಮಾಂಚತ್ಪಾದಪದ್ಮಂ ಸುರುಚಿಗಣಪ ವಿಭ್ರಾಜಿತಂ ಸಾರಸತ್ವಾ
ವ್ಯಾಮಿಶ್ರಾಹೀನ ಚಂಚತ್ಕಟಕನಧಿಕ ದಿವ್ಯಾಗಮಂ ಸ್ವಸ್ಥಲೋಕ
ಸ್ತೋಮ ಭ್ರಾಜಿಷ್ಣುವೆಮಂ ಪೊರಗೆ ವಿತತ ಭಾಸ್ವತ್ಪ್ರಕಾಶ ಗಿರೀಶಂ ॥ ೧ ॥

× × × ×

ಜೇಂಗೊಡದಂತೆ ಝೇಂಕರಿಪ ತುಂಬೆಗಳಿಂಚರದಂತೆ ಪೆಂಪನಾ
ಳ್ದಿಂಗಡಲಂತೆ ಪಣ್ತೆಸೆವ ಮಾಮರದಂತೆ ಪಯೋಜದಂತೆ ಬೆ
ಳ್ದಿಂಗಳ ಸೊಂಪಿನಂತೆ ಸುಸಿಲಾಸೆಯ ನಲ್ಲಳ ನೋಟದಂತೆ ಚಿ
ತ್ತಂಗೊಳಲಾರ್ಪುದೀ ಕೃತಿ ಷಡಕ್ಷರದೇವ ಕೃತಂ ರಸಜ್ಞರಾ ॥ ೨೭ ॥

ಅಂತ್ಯ : ಪ್ರವಿಮಳ ರಾಜಶೇಖರವಿಳಾಸ ಮಹಾಕೃತಿಯಂ ವೃಷಾಧಿ ರಾ
ಜವಿಜಯ ಸತ್ಪ್ರಬಂಧಮುಮನೋವುವ ಕನ್ನಡದಿಂ ನಿಮಿರ್ಚಿದಂ
ಭುವನ ವಿನುತ್ಯನಾಗೆ ಕವಿಕರ್ನರಸಾಯನಮೆಂಬ ಕಬ್ಬಮಂ
ಪ್ರವಿತತ ಸತ್ಯತೋಕ್ತಿಯೊಳೊಡರ್ಚಿದನಲ್ತೆ ....

ಗದ್ಯ ॥ ಯಿದು ನಿಖಿಳ ಸುರಾಸುರೇಂದ್ರ ವರದ ನಿಖಿಳ ಭುವನೈಕವಲ್ಲಭ ಕರುಣಾಕರ ಪರಮ ಶಿವಲಿಂಗ ಕರುಣಪತಂಗ ಸಂಗತ ಮಂಗಳ ಹೃದಯಾರವಿಂದ ಬಂಧುರ ಸರಸಜನಮಾನಿತೋಭಯ ಕವಿತಾ ವಿಚಕ್ಷಣ ಷಡಕ್ಷರಿದೇವ ವಿರಚಿತಮಾದ ಶಬರಶಂಕರವಿಳಾಸ ವಿಪುಳ ಪ್ರಬಂಧದೊಳ್ ಶಂಕರಪ್ರಸನ್ನ ವರ್ನನಂ ನಾಮ ಪಂಚಮಾಶ್ವಾಸಂ ಸಮಾಪ್ತಂ ॥ ಅಂತು ಆಶ್ವಾಸ ೫ ಕ್ಕಂ

ವಚನ ವಿರಹಿತವಾಗಿ ವೃತ ಕಂದ ಪದ್ಯಗಳು ೪೬೭ ಕ್ಕಂ ಶಬರಶಂಕರ ವಿಳಾಸಂ ಸಂಪೂರ್ನಂ.

ವಿಷಯ : ಶಿವನು ಬೇಡನಾಗಿ ಬಂದು ಅರ್ಜುನನಿಗೆ ದರ್ಶನವಿತ್ತುದು.

ವಿಶೇಷ : ಈ ಗ್ರಂಥದೊಂದಿಗೆ ಜೈಮಿನಿಭಾರತವೆಂಬ ಮತ್ತೊಂದು ಗ್ರಂಥವಿದೆ.

1690

ಕೆ. ೬೬ **ಶಬ್ದಮಣಿದರ್ಪಣಂ** ಗದ್ಯ, ಪದ್ಯ

೯.೮"×೨" ಕೇಶಿರಾಜ ಸು. ೧೨೬೦

೧_೧೩೧ ಪತ್ರ ೧೧ ಪಂಕ್ತಿ ೫೫ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ಶುಭಮಸ್ತು ॥ ನಿರ್ವಿಘ್ನಮಸ್ತು ॥ ಶಬ್ದಮಣಿದರ್ಪಣಕ್ಕೆ ನಿಟ್ಟೂರ ನಂಜೈಯ ಬರೆದ ಯಾಖ್ಯಾನದ ಪುಸ್ತಕಂ ॥

ಸೂತ್ರಂ ॥ ಶ್ರೀ ವಾಗ್ದೇವಿಗೆ ಶಬ್ದದಿ
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು
ಧ್ಭಾವಿಪ ನಿಮ್ರ್ಮಳಮೂತ್ರಿ್ರಗಿ
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ ॥

ಪದಚ್ಛೇದಂ ॥ ಶ್ರೀ ವಾಗ್ದೇವಿಗೆ । ಶಬ್ದದಿಂ । ಆವಾವಿಂದ್ರಿಯೆದ । ವಿಷಯಮಂ ಶ್ರೋತ್ರದೊಳ್ । ಉದ್ಭಾವಿಪ ನಿರ್ಮಳಮೂರ್ತಿಗೆ। ಇಳಾವಂದ್ಯೆಗೆ। ಶಾಸ್ತ್ರಮುಖದೊಳ್ । ಅವನತಂ । ಅಪ್ಪೆಂ ॥ ಅನ್ವಯಂ॥ ಆವಾವಿಂದ್ರಿಯದ। ವಿಷಯಮಂ । ಶ್ರೋತ್ರದೊಳ್ ॥ ಶಬ್ದದಿಂ । ಉದ್ಭಾವಿಪ ನಿಮ್ರ್ಮಳ ಮೂರ್ತಿಗೆ । ಇಳಾವಂದ್ಯೆಗೆ ಶ್ರೀ ವಾಗ್ದೇವಿಗೆ । × × × ×

ಕವಿ ಸುಮನೋಬಾಣನ ಯಾ
ದವ ಕಟಕಾಚಾರ್ಯನೆಸೆವ ದೌಹಿತ್ರನೆ ನಾಂ
ಕವಿಕೇಶವನೆಂ ಯೋಗಿ
ಪ್ರವರ ಚಿದಾನಂದ ಮಲ್ಲಿಕಾರ್ಜುನ ಸುತನೆಂ ॥

ಅಂತ್ಯ : ಭೂತಕಾಲಂ ಇಉವ ವಾಚಕಂಗಳಾಗಿ । ಕಾಲೋಪಯುಕ್ತಂಗಳ್ ॥

೨೩ ॥ ಗದ್ಯ ॥ ಇದು ಸಮಸ್ತ ಶಾಬ್ದಿಕ ಜನಮನೋಜನಿತ ಶಬ್ದಸಂದೇಹ ಶಲ್ಯಚಾರು ಚುಂಬಕಾಯಮಾನಾನೂನ ಕರ್ಣಾಟಕ ಲಕ್ಷಣ ಸಿಕ್ಷಾಚಾರ್ಯ

ಸುಕವಿ ಕೇಶಿರಾಜ ವಿರಚಿತಮಪ್ಪ ಶಬ್ದಮಣಿದರ್ಪಣದೊಳವ್ಯಯಾರ್ಥ ವಿವರಣಮಪ್ಪನು ಪ್ರಕರಣ ಸಂಪೂರ್ನ್ಣಂ ಶ್ರೀ.

ವಿಷಯ : ಹಳಗನ್ನಡ ವ್ಯಾಕರಣ.

ವಿಶೇಷ : ಸಮಗ್ರ. ಟಿ ಮತ್ತು ಶಕಟರೇಫಗಳಿವೆ. ನಿಟ್ಟೂರ ನಂಜೈಯ್ಯನು ಈ ವ್ಯಾಕರಣಕ್ಕೆ ವ್ಯಾಖ್ಯಾನ ಬರೆದಿರುತ್ತಾನೆ. ಗ್ರಂಥಾಂತ್ಯದನಂತರ ಹಿಂದೆ ಬಿಟ್ಟಿದ್ದ ವಿಷಯವನ್ನು ಕಡೆಯ ಪತ್ರದಲ್ಲಿ ಬರೆದಿದೆ. ೧೦ ನೆಯ ಕ್ರಮಸಂಖ್ಯೆಯ ಎರಡು ಪತ್ರಗಳಿವೆ.

1691

ಕೆ. ೨೩೧/೧	**ಶಬ್ದಮಣಿದರ್ಪಣಂ**	ಪದ್ಯ, ಗದ್ಯ
೧೦"×೧.೪"	ಕೇಶಿರಾಜ	ಸು. ೧೨೬೦
೧–೧೦೦ ಪತ್ರ	೯ ಪಂಕ್ತಿ	೪೮ ಅಕ್ಷರ

ಆದಿ : ಶಬ್ದಮಣಿದರ್ಪಣ.

ಶ್ರೀ ವಾಗ್ದೇವಿಗೆ ಶಬ್ದದಿ
ನಾವಾವಿಂದ್ರಿಯದ ವಿಷಯಮುಂ ಶ್ರೋತ್ರದೊಳು
ಧ್ಭಾವಿಪ ನಿರ್ಮ್ಮಳಮೂರ್ತಿಗಿ
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ ॥

ವೃ ॥ ಕಾಂತಿಯೆಂಬ ಗುಣದೊಳಂನ್ವಿತೆಯಪ್ಪ ವಾಕೆಂಬ ದೇವಿಗೆ, ಪಂಚೇಂದ್ರಿಯಂಗಳ್ಗೆ ವಿಷಮಪ್ಪ ಶಬ್ದಸ್ಪರ್ಶರೂಪು ರಸ ಗಂಧಂಗಳೊಳ್ಪಂ ಶ್ರೋತ್ರೇಂದ್ರಿಯ ಮೊಂದಯೊಳೆ ಶಬ್ದಮುಖದಿನಭಿವ್ಯಕ್ತಿ ಮಾಡುವ ವಿಮಳಸ್ವರೂಪಗೆ ಭುವನ ಸ್ತುತ್ಯೆಗೆ ಶಬ್ದಶಾಸ್ತ್ರಮುಖದೊಳ್ ನಮಸ್ಕರಿಸುವೆಂ ॥ ೧ ॥

ಅಂತ್ಯ : ವೃತ್ತ ॥ ಗಮಕಸಮಾಸದಿಂ ಅಳಕುಳಸ್ವರದಿಂ ಶೃತಿಸಹ್ಯ ಸಂಧಿಯಿಂ
ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ ಸಮಸ್ಯತೋಕ್ತಿಯಿಂ
ವಮಹಪ ಭೇದದಿಂ ವಿರಹಿತಾವ್ಯಯ ಸಂಸ್ಕೃತ ಲಿಂಗದಿಂ ಪದೋ
ತ್ತಮ ಶಿಥಿಲತ್ವದಿಂ ಯತಿವಿಲಂಘನದಿಂದರಿಪಲ್ತೆ ಕಂನ್ನಡಂ ॥

ಗದ್ಯ ॥ ಇದು ಸಮಸ್ತ ಶಾಬ್ದಿಕ ಜನಮನೋಜನಿತ ಶಬ್ದಸಂದೇಹ ಚಲ್ಯ ಚಾರುಚುಂಬಕಾಯಮಾನಾನೂನ ಕರ್ಣಾಟಲಕ್ಷಣ ಶಿಕ್ಷಾಚಾರ್ಯ ಸುಕವಿ ಕೇಶಿರಾಜ ವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಪ್ರಯೋಗ ಸಾರಶಬ್ದಾರ್ಥ ನಿರ್ಣಯಂ ಸಂಪೂರ್ಣಂ ಮಂಗಳಮಹಾ ಶ್ರೀ.

ವಿಷಯ : ಹಳಗನ್ನಡ ವ್ಯಾಕರಣ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಶಕಟರೇಫ ಮತ್ತು ೞ ಈ ಲಿಪಿಗಳ ಪ್ರಯೋಗ ವಿದೆ. ಇದೇ ಕಟ್ಟಿನಲ್ಲಿ ರಸರತ್ನಾಕರ, ಛಂದೋಂಬುಧಿ, ಶೃಂಗಾರರತ್ನಾಕರ, ಉದಯಾದಿತ್ಯಾಲಂಕಾರ ಎಂಬ ಈ ನಾಲ್ಕು ಕೃತಿಗಳೂ ಇವೆ. ಕ್ರಮಾಂಕ ೧೦೦ ಎಂದಿರುವ ಪತ್ರದ ಕೊನೆಯಲ್ಲಿ "ಶುಕ್ಲಸಂವತ್ಸರದ ಚೈತ್ರ ಶು ೧೨ ಲೂ ಬಸವಪ್ರಭುದೇವರು ಅಯ್ಯನವರಿಗೆ ಮಾಸ್ತಿಯ ಹಿರಿಯಣಗೌಡರು ಬರಸಿಕೊಟ್ಟ ಶಬ್ದಮಣಿದರ್ಪಣಕ್ಕೆ ಮಂಗಳಮಹಾ ಶ್ರೀ" ಎಂದಿದೆ. ಇದಾದಮೇಲೆ ಕ್ರಮಾಂಕ ೧೦೦ ಎಂದಿರುವ ಮತ್ತೊಂದು ಪತ್ರ ಮೊದಲನೆ ಯದರ ಕಾಪಿಯಾಗಿದೆ.

1692

ಕೆ. ೩೨೧	**ಶಬ್ದಮಣಿದರ್ಪಣಂ**	ಗದ್ಯ, ಪದ್ಯ
೧೨.೯"×೧.೯"	ಕೇಶಿರಾಜ	ಸು. ೧೨೬೦
೧–೧೧೫ ಪತ್ರ	೯ ಪಂಕ್ತಿ	೫೨ ಅಕ್ಷರ

ಆದಿ : ಶ್ರೀ ಗುರುಭ್ಯೋ ನಮಃ ॥ ಶಬ್ದಮಣಿದರ್ಪಣ ಬರಯುವದಕ್ಕೆ ನಿರ್ವಿಘ್ನ ಮಸ್ತು ॥

ಶ್ರೀ ವಾಗ್ದೇವಿಗೆ ಶಬ್ದದಿ
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು
ದ್ಭಾವಿಪ ನಿರ್ಮಳಮೂರ್ತಿಗಿ
ೞಾವಂದ್ಯೆ ಶಾಸ್ತ್ರಮುಖದೊಳವನತನಪ್ಪೆಂ ॥ ೧ ॥

ವೃ ॥ ಕಾಂತೆಯುಂಬ ಗುಣದೊಳನ್ವಿತೆಯಪ್ಪ ವಾಕೆಂಬ ದೇವಿಗೆ ಪಂಚೇಂದ್ರಿಯಂ ಗಳ್ವಿಷಯಮಪ್ಪ ಶಬ್ದಸ್ಪರ್ಶರೂಪು ರಸಗಂಧಂಗಳೊಳ್ಪಂ ಶ್ರೋತ್ರೇಂದ್ರಿಯ ಮುಂದರೊಳೆ ಶಬ್ದಮುಖದೆನಭಿವ್ಯಕ್ತಿ ಮಾಡುವ ವಿಮಳಸ್ವರೂಪೆಗೆ

× × × ×

ಸೂ ॥ ಕವಿ ಸುಮನೋಬಾಣನ ಯಾ
ದವ ಕಟಕಾಚಾರ್ಯನೆಸವ ದೌಹಿತ್ರನೆನಾಂ
ಕವಿಕೇಶವನೆಂ ಯೋಗಿ
ಪ್ರವರ ಚಿದಾನಂದ ಮಲ್ಲಿಕಾರ್ಜುನ ಸುತನೆಂ ॥ ೩ ॥

ಅಂತ್ಯ : ವೃ ॥ ಗಮಕಸಮಾಸದಿಂ ರಳಕುಳಸ್ವರದಿಂ ಶೃತಿಸಂಹ್ಯಸಂಧಿಯಿಂ
ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ
ವಮಹಪ ಭೇದದಿಂ ವಿರಹಿತಾನ್ವಯ ಸಂಸ್ಕೃತಲಿಂಗದಿಂ ಇದೋ
ತ್ರಮ ಶಿಥಿಲತ್ವದಿಂ ಯತಿವಿಲಂಘನದಿಂದರಿದಲ್ತೆ ಕಂನ್ನಡಂ ॥

ಗದ್ಯ ॥ ಇದು ಸಮಸ್ತ ಶಾಬ್ದಿಕ ಜನಮನೋಜನಿತ ಶಬ್ದಸಂದೇಹಶಲ್ಯ ಚಾರ ಚುಬುಕಾಯಮಾನನೂನ ಕರ್ಣಾಟಿಕ ಲಕ್ಷಣ ಶಿಕ್ಷಾಚಾರ್ಯಸುಕವಿ ಕೇಶಿರಾಜ ವಿರಚಿತಮಪ್ಪ ಶಬ್ದಮಣಿದೊಳ್ಪ್ರಯೋಗಸಾರ ಶಬ್ದಾರ್ಥ ನಿರ್ಣಯಂ ಪರಿಸಮಾಪ್ತಾ ॥ ಶ್ರೀ.

ವಿಷಯ : ಹಳಗನ್ನಡ ವ್ಯಾಕರಣ.

ವಿಶೇಷ : ಉತ್ತಮಸ್ಥಿತಿ. ೞ ಮತ್ತು ಶಕಟರೇಫ ಇವೆ. ಬರಹ ಸುಂದರ ವಾಗಿದೆ.

1693

ಕೆ. ೩೩೨/೨	**ಶಬ್ದಮಣಿದರ್ಪಣಂ**	ಗದ್ಯ, ಪದ್ಯ
೧೫"×೨.೧"	ಕೇಶಿರಾಜ	ಸು. ೧೨೬೦
೧–೨೯ ಪತ್ರ	೧೫ ಪಂಕ್ತಿ	೧೦೦ ಅಕ್ಷರ

ಆದಿ : ಶ್ರೀಗುರು ನಿರಂಜನಾಯ ನಮಃ ॥ ಶಬ್ದಮಣಿದರ್ಪಣಕ್ಕೆ ಶುಭಮಸ್ತು ॥

ಶ್ರೀ ವಾಗ್ದೇವಿಗೆ ಶಬ್ದದಿ
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು
ದ್ಭಾವಿಪ ನಿರ್ಮಲಮೂರ್ತಿಗೆ
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ

ವೃತ್ತಿ । ಶಬ್ದಂಗಳಿಂದೆ ಶ್ರೋತ್ರತ್ವಚಃನೇತ್ರ ಜಿಂಹ್ವಾ ಘ್ರಾಣದ್ಯ

× × × ×

ಕವಿ ಸುಮನೋಬಾಣನ ಯಾ
ದವ ಕಟಕಾಚಾರ್ಯನೆಸೆವ ದೌಹಿತ್ರನೆನಾಂ
ಕವಿಕೇಶವನೇಂ ಯೋಗಿ
ಪ್ರವರ ಚಿದಾನಂದ ಮಲ್ಲಿಕಾರ್ಜುನ ಸುತನೆಂ ॥ ೨ ॥

ಅಂತ್ಯ : ದೊರೆವಡೆದ ಚೋಳಪಾಲಕ
ಚರಿತಂ ಶ್ರೀ ಚಿತ್ರಮಾಲೆಯಂತೆ ಸುಭದ್ರಾ
ಹರಣಂ ಪ್ರಬೋಧಚಂದ್ರಂ
ಕಿರಾತಮಿವು ಕೇಶಿರಾಜ ವಿರಚಿತಕಂಗಳ್ ॥ ೨ ॥

× × × ×

ವೃತ್ತ ॥ ಗಮಕ ಸಮಾಸದಿಂ ಅಟಿ ಕುಳ ಕ್ಷಳದಿಂ ಶ್ರುತಿಸಹ್ಯ ಸಂಧಿಯಿಂ
ಸಮುಚಿತಮಾಗಿ ಬರ್ಪ್ಪ ಸತಿಸಪ್ತ ಮಿಯಿಂ ಸಮಸಂಸ್ಕೃತೋ....ಯಿಂ
ವಮಹ ಭೇದದಿಂ ವಿರಹಿತಾವ್ಯಯ ಸಂಸ್ಕೃತ........ದೋ
ತ್ತುಮ .... ಕುಸಡಂ ॥ ೫ ॥

ವಿಷಯ : ಹಳಗನ್ನಡ ವ್ಯಾಕರಣ.

ವಿಶೇಷ : ಕೊನೆಯ ಕೆಲವು ಗರಿಗಳು ಸ್ವಲ್ಪ ತ್ರುಟಿತ. ಶಕಟರೇಫ, ಟಕಾರಗಳ ಪ್ರಯೋಗವಿದೆ. ಇದರೊಂದಿಗೆ ರಾಜೇಂದ್ರವಿಜಯವೆಂಬ ಗ್ರಂಥವೂ ಇದೆ

1694

ಕೆ. ಎ. ೨೭೯	**ಶಬ್ದಮಣಿದರ್ಪಣಂ**	ಕಂದ
೧೨.೭"×೮"	ಕೇಶಿರಾಜ	ಸು. ೧೨೬೦
೧–೩೭ ಪತ್ರ	೨೫ ಪಂಕ್ತಿ	೨೨ ಅಕ್ಷರ

ಆದಿ : ಶಬ್ದಮಣಿದರ್ಪಣ ॥ ಶ್ರೀ ಗಣಾಧಿಪತಯೆ ನಮಃ ॥ ಶ್ರೀ ಗುರುಭ್ಯೋ ನಮಃ ॥

ಶ್ರೀ ವಾಗ್ದೇವಿಗೆ ಶಬ್ದದಿ
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು
ದ್ಭಾವಿಪ ನಿರ್ಮಳಮೂರ್ತಿಗಿ
ಳಾವಂದಿಗೆ ಶಾಸ್ತ್ರಮುಖದೊಳವನತನಪ್ಪೆಂ ॥ ೧ ॥

ಕವಿ ಸುಮನೋಬಾಣನ ಯಾ
ದವ ಕಟಕಾಚಾರ್ಯ್ಯನೆಸೆವ ದೌಹಿತ್ರನೆನಾಂ
ಕವಿಕೇಶವನೆಂ ಯೋಗಿ
ಪ್ರವರ ಚಿದಾನಂದ ಮಲ್ಲಿಕಾರ್ಜುನಸುತನೇಂ ॥ ೨ ॥

ಗುಣಮುಮರೆ ಶಬ್ದಮಣಿದ
ರ್ಪಣ ನಾಮಮನಿಟ್ಟು ನೆಜಿ಼ ಕರ್ನಾಟಕ ಲ

ಕ್ಷಣ ಶಬ್ದಶಾಸ್ತ್ರಮಮಂ ಲಾ
ಕ್ಷಣಿಕರ್ ಪೇಳೆಂದು ಬೆಸಗೆ ಬಗೆಉಗೆ ಪೇಟ್ದಿಂ ||

ಅಂತ್ಯ : ಸಮಸಂದಕಾಲ ವಾಚ
ಕಮಿವು ನಾಡಿದು ನಾಳೆ ನಿಂನ್ನೆಮೊನ್ನೆಗಳಾದಂ
....ಪರಿಪುವಿಪರಿಮೊನೆಯೆ
ಡಿವು ಕಿಂಚಿದ್ಭೂತಕಾಲ ಕಾಲದ್ವಯದೊಳ್ || ೨ ||

ಇದು ಸಮಸ್ತ ಶಾಬ್ದಿಕ ಜನಮನೋಜನಿತ ಶಬ್ದಸಂದೇಹ ಶಲ್ಯಚಾರುಚುಂಬ ಕಾಯಮಾನಾನೂನ ಕರ್ನಾಟಕಲಕ್ಷಣ ಶಿಕ್ಷಾಚಾರ್ಯ ಸುಕವಿ ಕೇಶರಾಜ ವಿರಚಿತಮಪ್ಪ ಶಬ್ದಮಣಿ ದರ್ಪಣದೊಳ್ ಅವ್ಯಯಾರ್ಥವಿವರಣಂ ಅಷ್ಟಮ ಪ್ರಕರಣಂ || ಮಂಗಲಮಹಾ ಶ್ರೀ||

ವಿಷಯ : ಹಳಗನ್ನಡ ವ್ಯಾಕರಣ.

ವಿಶೇಷ : ಅವ್ಯಯಾರ್ಥಪ್ರಕರಣದವರೆಗೆ ಮಾತ್ರ ಇದೆ. ಸೂತ್ರಗಳಿಗೆ ವಿವರಣೆ ಯಿಲ್ಲ. ೞ ಮತ್ತು ಶಕಟರೇಫಗಳಿವೆ. ಆದಿ ಅಂತ್ಯಗಳಲ್ಲಿ ಕೆಲವುಕಡೆ ಗ್ರಂಥ ಲೋಪವಿದೆ. ಪತ್ರದ ಒಂದುಕಡೆ ಮಾತ್ರ ಬರೆದಿದೆ.

1695

ಕೆ. ಎ. ೨೪೦	**ಶಬ್ದಮಣಿದರ್ಪಣಂ**	ಗದ್ಯ, ಪದ್ಯ
೧೨.೭″ × ೪″	ಕೇಶಿರಾಜ	ಸು. ೧೨೬೦
೧–೨೦೬ ಪತ್ರ	೨೩ ಪಂಕ್ತಿ	೨೦ ಅಕ್ಷರ

ಆದಿ : ಶಬ್ದಮಣಿದರ್ಪಣ. ಶ್ರೀಗುರುಬ್ಯೋ ನಮಃ ಶುಭಮಸ್ತು || ಸ್ವಸ್ತಿಶ್ರೀ ವಿಜಯಾಭ್ಯದಯ ಶಾಲೀವಾಹನ ಶಕವರ್ಷಂಗಳು ೧೭೫೦ ರಲ್ಲು ಸಂದು ವರ್ತಮಾನವಾದ ಸರ್ವಧಾರಿ ಸಂವತ್ಸರದ ನಿಜಾಷಾಢ ಶು ೬ ಶುಕ್ರವಾರ ದಿವದಲ್ಲಿ ಮಹಾರಾಜ ಶ್ರೀ....ರಾಜಯ್ಯ ಅರಸನವರ ಪುಸ್ತುಕದಲ್ಲಿ ಶಬ್ದ ಮಣಿದರ್ಪಣ ಬರಿಯುವುದಕ್ಕೆ ಪ್ರಾರಂಭ . . ಶ್ರೀ ಹಯಗ್ರೀವಾಮನಮಃ ||

ಶ್ರೀ ವಾಗ್ದೇವಿಗೆ ಶಬ್ದದಿನಾ
ವಾವಿಂದ್ರಿಯದ ವಿಷಯಮಂ ಶೋತ್ರದೊಳು
ಧ್ವಾವಿಪ ನಿರ್ಮಲಮೂರ್ತಿಗಿ
ಲಾವಂದ್ಯೆಗೆ ಶಾಸ್ತ್ರಮುಖದೊಳವನತಿನಪ್ಪೆಂ || ೧ ||

× × × ×

ಸೂ || ಕವಿ ಸುಮನೋಬಾಣನ ಯಾ
ದವ ಕಟಕಾಚಾರ್ಯನೆಸೆವ ದೌಹಿತ್ರನೆನಾಂ
ಕವಿಕೇಶನೇಂ ಯೋಗಿ
ಪ್ರವರ ಚಿದಾನಂದ ಮಲ್ಲಿಕಾರ್ಜುನಸುತನೇಂ || ೨ ||

ಅಂತ್ಯ : ಭೂತಕಾಲಂ | ಯಿವು ವರ್ಷವಾಚಕಂಗಳಾಗಿ ಕಾಲೋಪಯುಕ್ತಂಗಳ್ ||
ಗದ್ಯಾ || ಇದು ಸಮಸ್ತಶಾಬ್ದಿಕ ಮನೋಜನಿತ ಶಬ್ದಸಂದೇಹಶಲ್ಯ ಚಾರು ಚುಂಬಕಾಯಮಾನಾನೂನ ಕರ್ನಾಟಕಲಕ್ಷಣ ಶಿಕ್ಷಾಚಾರ್ಯ್ಯ ಸುಕವಿ ಕೇಶಿರಾಜ ವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಅವ್ಯಯಾರ್ಥ ವಿವರಣ ಮಪ್ಪಮಪ್ರಕರಣಂ || ಶ್ರೀ ||

ಅಪರಿಮಿತ ವಿದ್ಯರೆನಿಸಿ
ರ್ದ ಪುರಾಣ ಕವೀಂದ್ರರಖಿಳ ಕಾವ್ಯಂಗಳ ಗೂ
ಢಪದಪ್ರಯೋಗಮಂ ನೆ
ರಪಿ ಪದಪದಾರ್ಥಂಗಳಂ ಮನಂಬುಗೆ ಪೇಳ್ವೆಂ ||
ಶಬ್ದಮಣಿದರ್ಪಣವೆಂಬೀ ಕನ್ನಡವ್ಯಾಕರಣಂ ಸಂಪೂರ್ಣಂ ||

ವಿಷಯ : ಹಳಗನ್ನಡ ವ್ಯಾಕರಣ.

ವಿಶೇಷ : ಪತ್ರದ ಒಂದುಮುಖದಲ್ಲಿ ಮಾತ್ರ ಬರೆದಿದೆ. ಱ ಮತ್ತು ಶಕಟರೇಫಗಳಿವೆ. ಗ್ರಂಥದಾದಿಯ ಬೇರೊಂದು ಪತ್ರದಲ್ಲಿ ವಿಷಯಸೂಚಿಯಿದೆ.

1696

ಕೆ. ಎ. ೨೮೧	**ಶಬ್ದಮಣಿದರ್ಪಣಂ**	ಗದ್ಯ, ಪದ್ಯ
೧೨.೫" × ೮"	ಕೇಶಿರಾಜ	ಸು.೧೨೬೦
೧–೩೦೮ ಪತ್ರ	೧೭ ಪಂಕ್ತಿ	೨೦ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ | ಶುಭಮಸ್ತು || ನಿರ್ವಿಘ್ನಮಸ್ತು | ಶಬ್ದಮಣಿದರ್ಪಣಕ್ಕೆ ನಿಟ್ಟೂರ ನಂಜೈಯ ಬರೆದ ವ್ಯಾಖ್ಯಾನದ ಪುಸ್ತಕಂ ||
ಸೂತ್ರ || ಶ್ರೀ ವಾಗ್ದೇವಿಗೆ ಶಬ್ದದಿ
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು
ದ್ಭಾವಿಪ ನಿರ್ಮಳಮೂರ್ತಿಗೆ
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ ||

ಟೀಕು ॥ ಆವಾವಿಂದ್ರಿಯದ = ಶ್ರೋತ್ರತ್ವ ಜಕ್ಷುಃನೇತ್ರ ಜಿಹ್ವಾಘ್ರಾಣಗಳೆಂಬೀ ಸರ್ವೇಂದ್ರಿಯಂಗಳ । ವಿಷಯಮಂ = ಶಬ್ದಸ್ಪರ್ಶರೂಪರಸಗಂಧಂಗಳೆಂಬ ।

× × × ×

ಸೂ ॥ ಕವಿಸುಮನೋಬಾಣನ ಯಾ
ದವ ಕಟಕಾಚಾರ್ಯ್ಯನ ಯಸೆವ ದೌಹಿತ್ರನೆನಾಂ
ಕವಿಕೇಶವನೆಂ ಯೋಗಿ
ಪ್ರವರ ಚಿದಾನಂದ ಮಲ್ಲಿಕಾರ್ಜುನಸುತನೆಂ ॥

ಅಂತ್ಯ : ಮೊನೆ ಏಡೆಂದು ಭೂತಕಾಲಂ, ಇವ ಪೂರ್ವವಾಚಕಂಗಳಾಗಿ ಕಾಲೋಪ ಯುಕ್ತಂಗಳ್ ಇದು ಸಮಸ್ತಶಾಬ್ದಿಕ ಮನೋಜನಿತ ಶಬ್ದಸಂದೇಹ ಶಲ್ಯ ಚಾರುಚುಂಬಕಾಯಮಾನಾನೂನ ಕರ್ಣಾಟಕಲಕ್ಷಣ ಶಿಕ್ಷಾಚಾರ್ಯ್ಯ ಸುಕವಿ ಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಅವ್ಯಯಾರ್ಥ ವಿವರಣಂ ನಾಮ ಅಷ್ಟಮಪ್ರಕರಣಂ ಸಮಾಪ್ತಂ ॥ ಮಂಗಳಮಹ ॥ ಶ್ರೀ ॥

ವಿಷಯ : ಹಳಗನ್ನಡ ವ್ಯಾಕರಣ.

ವಿಶೇಷ : ಬರಹ ಸ್ಫುಟವಾಗಿದೆ. ಪತ್ರದ ಒಂದುಕಡೆ ಮಾತ್ರ ಬರೆದಿದೆ. ಕಡೆಯಲ್ಲಿ ೩೦೭ ಮತ್ತು ೩೦೮ ನೆಯ ಪತ್ರಗಳು ಹಿಂದೆ ಬಿಟ್ಟಿದ್ದ ವಿಷಯವನ್ನು ಬರೆದವುಗಳಾಗಿವೆ. ೞ ಮತ್ತು ಶಕಟರೇಫದ ಪ್ರಯೋಗವಿದೆ.

1697

ಕೆ. ೩೬೬/೧	**ಶಬ್ದರತ್ನಾಕರ**	ಕಂದ
೮.೭″ × ३.३″	?	?
೧–೩ ಪತ್ರ	೧೧ ಪಂಕ್ತಿ	೩೭ ಅಕ್ಷರ

ಆದಿ : ಶಬ್ದರತ್ನಾಕರಂ ॥ ಕಂದ ॥
ಕಮಲಮೆನೆ ಭುವನಮಕ್ಕುಂ
ಕಮಲಂ .... ಶಶಿಯು ಕರಿಹಯಮಕ್ಕುಂ·
ಕಮಲಮೆನೆ ಕುಮುದಮಕ್ಕುಂ
ಕಮಲಂ ತಾಂ ಕಮಲಮಕ್ಕು ಶಬ್ದಾಗಮದೊಳ್ ॥ ೧ ॥

ಕಮಲಮೆನೆ ತುಂಬಿಯಕ್ಕುಂ
ಕಮಲಂ ಬಿಳಿದಕ್ಕು ಹಂಸೆಕಂಣುಗಳಕ್ಕುಂ

ಕಮಲವೆನೆ ಕದನಮುಕ್ಕುಂ
ಕಮ° ಂಗೆರೆಯಕ್ಕು ನೋಡೆ ಶಬ್ದಾಗಮದೊಳ್ ॥ ೨ ॥

ಅಂತ್ಯ : ಆರಡಿಯನೆ ಮುಡಿಯಕ್ಕುಂ
ಆರಡಿಯೆನೆ ತುಂಬಿಯಕ್ಕು ಆರಡಿ ತುರಗಂ
ಆರಡಿಯೆನೆ ಗೆರೆಯಕ್ಕುಂ
ಆರಡಿಯೆನಲಕ್ಷಿಯನಿಕ್ಕು ಶಬ್ದಾಗಮದೊಳ್ ॥ ೨೯ ॥

ಅಜನೆನೆ ವಾರುಧಿಯಕ್ಕುಂ
ಅಜನೆಂದನಲಾನೆಯಕ್ಕುಮಂಬರಮಕ್ಕುಂ
ಅಜನೆನೆ ಶಶಿ ರವಿಯಕ್ಕುಂ
ಅಜನೆಂದೆನೆ ಮುಕ್ತಿಯುಕ್ಕು ಶಬ್ದಾಗಮದೊಳ್ ॥ ೩೦ ॥

ಶಬ್ದರತ್ನಾಕರ ಸಮಾಪ್ತ ಮಂಗಳಮಹಾ ಶ್ರೀ ॥

ವಿಷಯ : ಕೆಲವು ಕನ್ನಡಪದಗಳ ನಾನಾರ್ಥ.

ಶ್ರೀಮದಚಲಕುಮಾರಿ ಕಾಮುಖ
ತಾಮರಸ ಮಕರಂದ ಮಧುಕರ
ಸೋಮಶೇಖರಿ ಶತಮಖಾಚ್ಯುತ ಕಂಜಸುತವರದಾ
ಭೂಮಿ ಜಲ ಶಿಖಿ ಮಾರುತಾಂಬರ
ಸೋಮಯಾಜಿ ದಿನೇಶವಿದುತನು
ಸೋಮದಿಂ ಸಲಹೆಂಮನತಿದಯವೆರಸಿ ಶಿವಲಿಂಗಾ ॥ ೧ ॥

ಅಂತ್ಯ : ಸಲೆ ನಿಂನ ಪಂಚವಿಂಸತಿ ನುತಿಯನಿದನಾವ
ನೊಲಿದೋದಿದಪನವಗೆ ಭವಬಂಧನವದಿಲ್ಲ
ಸುಲಭದಿಂದರ್ತ್ಥವನು ಮಾಡಿದಾತಗೆಯೆಂತೆ ಕೇಳ್ದನಿಗದೇತೆರನಲ್ಲೈ
ಚಿಲಿಪಾಲು ಸಕ್ಕರೆಯ ಬೆರೆಕೆಯನು ಸವಿದವಗೆ
ನೆಲೆಯಾದ ಪು .... ಲದರುಚಿಯದರ ತೆರದೆ
ಚಲಿತಾನ್ಯನುತಿ ನಿಂನ ನುತಿಯೆ ನುತಿಯದಕೆ ಬೆಲೆಯಿಲ್ಲ ಶಿವಲಿಂಗೇಶ್ವರಾ
|| ೨೫ ||

ಶಿವಲಿಂಗ ನಾಂದ್ಯ ಸಂಪೂರ್ನಂ ಮಂಗಳಮಹಾಶ್ರೀ.

ವಿಷಯ : ಶಿವಸ್ತುತಿ.

ವಿಶೇಷ ; ಶಕಟರೇಫವಿದೆ. ಎಲ್ಲ ಪದ್ಯಗಳೂ ಶಿವಲಿಂಗೇಶ್ವರ ಎಂದು ಮುಗಿಯುತ್ತವೆ. ಇದೇ ಕಟ್ಟಿನಲ್ಲಿ ಮುರಿಗೆಸ್ವಾಮಿಗಳ ಸ್ತ್ರೋತ್ರದ ನಾಂದ್ಯ, ಚೇರಮನ ಕಾವ್ಯದ ನಾಂದ್ಯಗಳೆಂಬ ಇನ್ನೂ ೨೩ ಗ್ರಂಥಗಳಿವೆ.

1746

ಕೆ. ೩೨೫/೮	**ಶಿವಲಿಂಗನಾಂದ್ಯ**	ಭಾಮಿನಿ, ವಾರ್ಧಕಷಟ್ಪದಿ
೯.೫"×೨"	ಇಮ್ಮಡಿ ಮುರಿಗೆಸ್ವಾಮಿ	?
೨೨–೨೪ ಪತ್ರ	೧೨ ಪಂಕ್ತಿ	೫೬ ಅಕ್ಷರ

ಆದಿ : ಯಿಂಮಡಿ ಮುರಿಗೆ ಶಿವಲಿಂಗ ನಾಂದ್ಯ ||
ಭಾವಿನಿಷಟ್ಪದ || ಶ್ರೀಮುದಚಲಕುಮಾರಿ ಕಾಮುಖ
ತಾಮರಸ ಮಕರಂದ ಮಧುಕರ
ಸೋಮಶೇಖರ ಶತಮುಖಾಚ್ಚ್ರತಕಂಜ ಸುತವರದಾ
ಭೂಮಿ ಜಲ ಶಿಖಿ ಮಾರುತಾಂಬರ
ಸೋಮಯಾಜಿ ದಿನೇಶ ವಿಧುತನು
ಸಾಮದಿಂ ಸಲಹೆಂಮನತಿದಯವೆರಸಿ ಶಿವಲಿಂಗಾ || ೧ ||

ಅಂತ್ಯ : ಸಲೆ ನಿಂನ ಪಂಚವಿಂಶತಿ ನುತಿಯನಿದನಾವ
ನೊಲಿದೋದಿದಪನವಗೆ ಭವಬಂಧನವದಿಲ್ಲ
ಸುಲಭದಿಂದರ್ತ್ರವನು ಮಾಡಿದಾತಗೆ ಯಂತೆ ಕೇಳ್ದನಿಗದೇತೆರನದೈ
ಚಿಲಿಪಾಲು ಸಕ್ಕರೆಯ ಬೆರೆಕೆಯನು ಸವಿದನಿಗೆ
ನೆಲೆಯಾವಪುದೆ ಯಂಬಿಲದ ರುಚಿಯುದರ ತೆರದೆ
ಚಲಿತಾನ್ಯನುತಿ ನುಂನ ನುತಿಯೆನುತಿಯಿದಕೆ ಬೆಲೆಯುಲ್ಲ ಶಿವಲಿಂಗೇಶ್ವರಾ
|| ೨೫ ||

ಶಿವಲಿಂಗದನಾದ್ಯ ಸಮಾಪ್ತ ಮಂಗಳಮಹಾಶ್ರೀ.

ವಿಷಯ : ಶಿವಸ್ತುತಿ.

ವಿಶೇಷ : ಎಲ್ಲ ಪದ್ಯಗಳೂ ಶಿವಲಿಂಗೇಶ್ವರಾ ಎಂದು ಮುಗಿಯುತ್ತವೆ. ಈ ಗ್ರಂಥದ ಆರಂಭದಲ್ಲಿ ಭೂಧರೆಯೆಂಬ ಪದ ಅದಕ್ಕೆ ಟೀಕು ಇದೆ. ಇದೇ ಕಟ್ಟಿನಲ್ಲಿ ಸೋಮನಾಥನ ಕಾವ್ಯದ ನಾಂದ್ಯ, ಲಿಂಗಪುರಾಣದ ನಾಂದ್ಯಗಳೆಂಬ ೨೪ ಗ್ರಂಥಗಳಿವೆ.

1747

ಕೆ. ೩೨೫|೨೨	**ಶಿವಲಿಂಗನಾಂದ್ಯ**	ವಾರ್ಧಕಷಟ್ಪದಿ
೯.೫″ × ೨″	ಇಮ್ಮಡಿ ಮುರಿಗೆಸ್ವಾಮಿ	?
೭೫–೮೬ ಪತ್ರ	೧೧ ಪಂಕ್ತಿ	೫೦ ಅಕ್ಷರ

ಆದಿ : ಯಿಂಮಡಿ ಮುರಿಗೆಸ್ವಾಮಿಗಳು ನಿರೂಪಿಸಿದ ಶಿವಲಿಂಗ ಮಹಿಮಾನಾದ್ಯ ||
ಶ್ರೀಮದಜಹರಿ ಪುರಂದರ ಪುರೋಗದುದೇವ
ತಾಮಣಿಮುಕುಟಘಟಿತ ಚರಣಸರಸಿಜ ಶರಣ
ರಾಮಯ ವಿಪಿನದಾವ ದಾನವ ಮದಾಂಧ ತಮಸೋದಯ ನಳಿನಬಾಂಧ
ಹೇವ ಭೂಧರ ಶರಾಸನ ಶಶಿಕಲೋತ್ತಂಸೆ
ರಾಮಚಂದ್ರಾವನಿಪ ಪಾಶುಪತಬಾಣದ ಸು
ಧಾಮಯ ಕಲೇವರ ಮಹೇಶ್ವರ ಗಿರೀಶ್ವರ ಗಿರೀಶ್ವರೇಶ್ವರ ಪಾಲಯಾ ||೧||

ಅಂತ್ಯ : ಇದನಾವನೋದುವಾತಂ ಕೇಳುವಾತನಂ
ತಿದನಾವ ಬರೆವಾತನಿದನಾವನನುಸರಿಸಿ
ಮುದದಿಂದೆ ಪೇಳುವಾತಂ ಜನನಮರಣಂಗಳನು ಮೀರಿ ಯಿಹಪರದೊಳೂ
ಸದಮಳ ಮಹಾದೇವ ನಿಂನೊಳೇಕತ್ವವನು
ಪದುಳದಿಂ ಪಡೆದಮೃತವಮೃತವಂದಾದಂತೆ
ಮುದದಿಂದಲೊಂದಾಗಿ ಮೆಱೆವನೈ ಶುಭಮಸ್ತು ಸದಯ ಶಿವಲಿಂಗೇಶ್ವರಾ || ೧೦೧ ||
ಶ್ರೀಮದ್ವಿತೀಯ ಮುರಿಗಾಸ್ವಾಮಿಗಳು ನಿರೂಪಿಸಿದ ಶಿವಲಿಂಗ ಮಹಿಮಾನಾದ್ಯ ಸಮಾಪ್ತ ಶ್ರೀ.

ವಿಷಯ : ಶಿವಲಿಂಗಮಹಿಮೆ.

ವಿಶೇಷ : ಎಲ್ಲ ಪದ್ಯಗಳೂ 'ಶಿವಲಿಂಗೇಶ್ವರಾ' ಎಂದು ಮುಗಿಯುತ್ತವೆ. ಶಕಟರೇಫ ವಿದೆ. ಇದೇ ಕಟ್ಟಿನಲ್ಲಿ ಲಿಂಗಷಟ್ಪದಿ, ವೈರಾಗ್ಯಷಟ್ಪದಿಗಳೆಂಬ ಇನ್ನೂ ೨೪ ಗ್ರಂಥಗಳಿವೆ.

1748

ಕೆ. ೩೨೫|೧೮ **ಶಿವಲಿಂಗನಾಂದ್ಯ** ಕಂದ

೯.೫"×೨" ? ?

೫೪_೫೫ ಪತ್ರ ೧೧ ಪಂಕ್ತಿ ೫೩ ಅಕ್ಷರ

ಆದಿ : ಶಿವಲಿಂಗ ನಾಂದ್ಯ ||

ಶ್ರೀಮತ್ಕಲ್ಯಾಣ ಭೂಭೃನ್ನುತ ಸುಖದಪದಂ ದಿವ್ಯ ಗಂಗಾಂಬಿಕಾ ಸ
ತ್ಪ್ರೀಮಾವಾಸಂ ಗಣೇಂದ್ರಾನಿತನುರುಮಹಿಮಾಧಾರನಶ್ರಾಂತ ಸತ್ವಾ
ರಾಮಂ ಭೂತಿಪ್ರಯುಕ್ತಂ ಪ್ರಣರುಚಿ ಪರಾನಂದಧರ್ಮಂ ಸ್ವಲೀಲೋ
ದ್ದಾಮಂ ರಕ್ಷಿಪ್ಪುದೆಂಮಂ ಬಿಡದನವರತಂ ನಂದಿಕೇಶಂ ಮಹೇಶಂ || ೧ ||

ಕಂದ || ಶ್ರೀ ವಾಙ್ನುತ ಗಿರಿತನಯಾ
ಲಾವಣ್ಯರಸಾಂಬುರಾಶಿಹಂಸಂ ಜಗದು
ದ್ಭಾವನಕರ ವೃಷಭಧ್ವಜ
ನಾವಗಮೆಮಗೀಗೆ ಸೌಖ್ಯಮಂ ಶಿವಲಿಂಗ || ೨ ||

ಅಂತ್ಯ : ಶ್ರೀ ಶಾಂಭವಿ ಶುಭಾಂಗ ನಿ
ವೇಶಿತ ವಾಮಾಂಗನಂಗಜಾಹಿತಸುರಗಾ
ದೀಶಧರನಮಳ ಗುಣನಿಧಿ
ಕೋಶಂ ಕೊಡುಗೆಮಗೆ ಸೌಖ್ಯಂ ಶಿವಲಿಂಗಂ || ೪೨ ||
ಶಿವಲಿಂಗ ನಾದ್ಯ ಶ್ರೀ.

ವಿಷಯ : ಶಿವಲಿಂಗಮಹಿಮೆ.

ವಿಶೇಷ : ಪ್ರತಿ ಕಂದವೂ ' ಶಿವಲಿಂಗಂ ' ಎಂದು ಮುಗಿಯುತ್ತದೆ. ಮೊದಲ ಪದ್ಯ ಮಾತ್ರ ವೃತ್ತ, ಉಳಿದುವೆಲ್ಲಾ ಕಂದಗಳು. ಇದೇ ಕಟ್ಟಿನಲ್ಲಿ ದೇವೀನಾಂದ್ಯ, ವೃಷಭೇಂದ್ರಲಿಲಿತಗಳೆಂಬ ಇನ್ನೂ ೨೪ ಗ್ರಂಥಗಳಿವೆ.

1749

ಕೆ. ಬಿ. ೪೭೧ **ಶಿವಲಿಂಗಮಾಹೇಶ್ವರಚಾರಿತ್ರ** ಶರಷಟ್ಪದಿ

೧೧.೮"×೪" ? ?

೫೩ ಪತ್ರ ೧೩ ಪಂಕ್ತಿ ೫೪ ಅಕ್ಷರ

ಆದಿ : ಶಿವಲಿಂಗ ಮಹೇಶ್ವರನ ಲಿಂಗಾನಂದ ಚಾರಿತ್ರವನು ಬರೆವುದಕ್ಕೆ ಶುಭಮಸ್ತು. ಶರಷಟ್ಪದಿ ॥ ರಾಗ ತಂಮಿಜ್ಛಿ ಪದನು ॥
ಧರಣಿಗೀಶನು ಬಂದು
ನರರವಗುಣ ಕಳ
ದೊರಮುಕ್ತಿ ವಿತ್ತಾ ಚಾರಿತ್ರ ॥

ಪದ ॥ ಶ್ರೀ ಗುರುಬಸವ
ಲಿಂಗಾಯನಾಮುವೆಸಶ
ಲಾಗಮಕಿದೆ ಮುಕ್ತಿಸ್ತಾನಾ
ಭೋಗಿ ಶಿವಲಿಂಗ ಮಹಾ
ಯೋಗಿಯ ಚರಿತೆಯ
ಸಾಗಿಸುದಿದೆ ಮೂಲಗ್ನಾನ ॥ ೧ ॥

ಅಂತ್ಯ : ಪ್ರಸುವದಾಂಜುಳಿಯೆತ್ತಿ
ಅಸಿಯಳಿಗರ್ಧ್ಯತನು
ಕುಶಲದಿ ಕೊಟ್ಟ ದೇಶಿಕನಿಗೆ
ಮಿಸುಪ ಸಜ್ಜನರು ಕರೆ
ಬಸವ ಚಪ್ಪಳಿಯಿಕ್ಕಿ
ವಸುಧೆಗೆ ಬೀಳ್ಕೊಟ್ಟು ವುಘೆಯೆನಿರಿ ॥ ೨೮೪ ॥

ಯಿಂತಿ ಗತಿ ೯ ಕ್ಕಂ ವಟ್ಟಿನ ಗಣನಿ ಪದನು ೧೩೯ ಕ್ಕಂ ಮಂಗಳ ಮಹಾ. ಯಿಾ ಶಿವಲಿಂಗ ಮಹೇಶ್ವರ ಕಾವ್ಯವು ಆವ ದಿವಸ ಪ್ರತಿ ಸಮವಾಗಿ ಸಮಾಪ್ತವಾಯಿತು ಯಂದರೆ ಶಖೆ ೧೩೯ ಪ್ರವರ್ತಮಾನೆ ಪಿಂಗಳನಾಮ ಸಂವತ್ಸರ ಆಶ್ವಿಜ ವಧಿ ಸರ್ವಶಿದ್ಧಾಂತ ತ್ರಯೋದಶಿ ಬುಧವಾರ ಪ್ರಥಮ ಪ್ರಾಹರಚಂದ್ರನ ಐಯ್ಯಗೊಳು ಸಮಾಪ್ತಂ ॥ ಯಿಾ ಪುಸ್ತಕವನಾಜು ಬಜದರೆಂದಜಿ ಪಾಳ್ಯದ ಗುರುಸ್ಥಲದ ರಾಚ್ಯೈಯ್ಯನ ಕುಮಾರ ವೀರ್ಯೆಯ್ಯನ ಗರ್ಭರುಹಾ ಮಡಿವಾಳೈಯ್ಯನು ತಂಮ್ಮ ತರುಳ ಬುದ್ಧಿತನದಿಂದ ಬರದ ಕಾವ್ಯವು.

ವಿಷಯ : ಶಿವಲಿಂಗ ಮಾಹೇಶ್ವರ ಚರಿತ್ರೆ.

ವಿಶೇಷ : ಪ್ರತಿಯೊಂದು ಪತ್ರವೂ ಬಿಡಿಬಿಡಿಯಾಗಿದೆ. ಗ್ರಂಥದ ಅಂತ್ಯದಲ್ಲಿ ಎರಡು ಶಿವಲಿಂಗದ ಚಿತ್ರಗಳಿವೆ. ೧೯ ಮತ್ತು ೨೦ ನೆಯ ಪತ್ರಗಳ ಪಕ್ಕದ ಭಾಗ ತ್ರುಟಿತ. ೩೦ ಮತ್ತು ೪೨ ನೆಯ ಪತ್ರಗಳಿಲ್ಲ.

1750

ಕೆ. ೩೪೩/೩ **ಶಿವಲಿಂಗಷಟ್ಪದಿ** ವಾರ್ಧಕಷಟ್ಪದಿ

೧೨.೨"×೨.೩" ಮುರಿಗಾ ಗುರುಸಿದ್ಧಸ್ವಾಮಿ ಸು. ೧೬೦೦

೧೦೪–೧೧೩ ಪತ್ರ ೧೧ ಪಂಕ್ತಿ ೫೮ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ಮುರಿಗಾ ಗುರುಸಿದ್ದಸ್ವಾಮಿಗಳು ನಿರುಪಿಸಿದ ಶಿವಲಿಂಗ ಷಟ್ಪದಿಯ ಬರೆವುದಕ್ಕೆ ಶುಭಮಸ್ತು ॥ ನಿರ್ವಿಘ್ನೆಮಸ್ತು ವಾರ್ಧ್ದಿಕ ಪದ ॥

ಶ್ರೀಮದಜ ಹರಿ ಪುರಂದರ ಪುರೋಗಮದೇವ
ತಾಮಣಿಮುಕುಟಘಟಿತ ಚರಣ ಸರಸಿಜ ಶರಣ
ರಾಮಯ ವಿಪಿನದಾವ ದಾನವ ಮದಾಂತ ತಮಸೋದಯ ನಳಿನಬಾಂಧವ
ಹೇಮ ಭೂದರ ಶರಾಸನ ಸಸಿಕಲೋತ್ತ್ರಂಸ
ರಾಮಚಂದ್ರಾವನಿಪ ಪಾಶುಪತಬಾಣದ ಸು
ದಾಮಯ ಕಳೇವರ ಮಹೇಶ್ವರ ಗಿರೀಶ್ವರ ನಿರೀಶ್ವರ ಧರೇಶ್ವರ ಪಾಲಯಾ ॥ ೧ ॥

ಅಂತ್ಯ : ಇದನಾವನೋದುವಾತಂ ಕೇಳುವಾತನಂ
ತಿದನಾವ ಬರೆವಾತನಿದನಾವನನುಸರಿಸಿ
ಮುದದಿಂದೆ ಪೇಳುವಾತಂ ಜನನ ಮರಣಂಗಳನು ಮಿಾರಿ ಯಿಹಪರದೊಳೂ
ಸದಮಳ ಮಹಾದೇವ ಸಿಂನೊಳೇಕತ್ವವನು
ಪದುಳದಿಂ ಪಡೆದಮೃತವಮೃತವಂದಾದಂತೆ
ಮುದದಿಂದಲೊದಗೆ ಮೆಱೆವನೈ ಶುಭಮಸ್ತು ಸದಯ ಶಿವಲಿಂಗೇಶ್ವರಾ ॥ ೧೦೫ ॥

ಶ್ರೀಮದ್ವಿತೀಯ ಮುರಿಗೆಸ್ವಾಮಿಗಳು ನಿರೂಪಿಸಿದ ಶಿವಲಿಂಗ ಷಟ್ಪದ ಸಮಾಪ್ತ ಮಂಗಳಮಹಾಶ್ರೀ.

ವಿಷಯ : ಶಿವಲಿಂಗಮಹಿಮೆ.

ವಿಶೇಷ : ಶಿವಲಿಂಗೇಶಾಂಕಿತ, ಶಕಟರೇಫದ ಬಳಕೆಯಿದೆ. ಇದರೊಂದಿಗೆ ಶಿವಮಹಿಮಾಶತಕ, ಪಂಚವಿಂಶತಿನುತಿ, ಷಡ್ವಕ್ತ್ರಸ್ತೋತ್ರಂ, ವೈರಾಗ್ಯಷಟ್ಪದಿ, ಲಿಂಗಸ್ತೋತ್ರಷಟ್ಪದಿ ಎಂಬ ಇತರ ಗ್ರಂಥಗಳಿವೆ.

1751

ಕೆ. ಬಿ. ೨೮೪ **ಶಿವಲೋಕಾಸ್ಥಾನವರ್ಣನೆ** ವಾರ್ಧಕಷಟ್ಪದಿ

೮.೨"×೬.೫" ಲಕ್ಕಣ್ಣದಂಡೇಶ ೧೪೩೦

೧–೪ ಪತ್ರ ೨೫ ಪಂಕ್ತಿ ೩೦ ಅಕ್ಷರ

ಆದಿ : ಶಿವಲೋಕಾಸ್ಥಾನ ಶೈವಗ್ರಂಥ × ×
ಶಿವಲೋಕಮಂ ಶಿವನ ಸಭೆಯ ವಿಸ್ತಾರಮಂ
ಶಿವಪುರಾಣದ ರುದ್ರಕೋಟಿಸಂಹಿತೆಯೊಳಂ
ವಿವರಿಸಿದ ನಂದೀಶ ಬ್ರಂಹ್ಮನಂದನಗಿದಂ ಕೇಳಿ ಕೃತಕೃತ್ಯರಹುದೂ ||
ಪದನೂ || ಯಲೆ ಮಹಿಮ ನಂದೀಶ × × × ×
ಕುಲಗುರುವೆ ಕರುಣಿಪುದೆನಲೊಲಿದು ಪೇಳವನ ಚರಣಾಂಬುಜಕ್ಕೆ ಶರಣೂ ||

ಅಂತ್ಯ : ಯಿಾ ಮಹಾ ಶಿವಲೋಕಮಂ ಶಿವಸ್ಥಾನಮಂ
ಸೋಮಧರನಂ ಗಿರಿಜೆಯ ಸಭೆಯ ವಿಸ್ತಾರಮಂ
ಪ್ರೇಮದಿಂದಿದೀ ಕಡೆಯನಾವ ಪೇಳ್ವ ಕೇಳ್ವ ಲಾಲಿಸುವ ಕೊಂಡಾಡುವ
ಆ ಮಹೋತ್ತಮರ ಸಂತಾನಾಭಿವೃದ್ಧಿಯಹು
ದೀ ಮರಿಯೊಳೈಶ್ವರ್ಯ ಪರದೊಳನುರತ್ವವೆಂ
ದಾ ಮಹಾನಂದೀಶ ಪೇಳ್ದನಾತನ ವಿಮಲ ಚರಣಾಂಬುಜಕ್ಕೆ ಶರಣು || ೪೭ ||

ಶಿವಲೋಕಸ್ಥಾನ ಸಂಪೂರ್ನ ಮಂಗಳಮಹಾ ಶ್ರೀ.

ವಿಷಯ : ಶಿವಲೋಕಾಸ್ಥಾನ ವರ್ಣನೆ.

ವಿಶೇಷ : ಇದು ಶಿವತತ್ತ್ವಚಿಂತಾಮಣಿಗೆ ಸೇರಿದ ೨೭ ನೆಯ ಸಂಧಿಯ ಭಾಗವಾಗಿದೆ. ಪ್ರತಿಪತ್ರಗಳ ಮೊದಲು ಕೊನೆಗಳನ್ನು ಹುಳುತಿಂದಿದೆ. ೪ ನೆಯ ಪತ್ರದಲ್ಲಿ ಮಾತ್ರ ಒಂದೇ ಪಾರ್ಶ್ವದ ಮೊದಲಲ್ಲಿ ಸ್ವಲ್ಪ ಬರವಣಿಗೆಯಿದೆ.

1752

ಕೆ. ೧೮೪/೭	**ಶಿವವಚನ ಮತ್ತು ವಿಷ್ಣು ಕೀರ್ತನೆಗಳು**	ಹಾಡು
೧೩.೫″ × ೧.೮″	?	?
೨೦೪–೨೧೩ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : ರಾಗ ಶುದ್ಧಕಾಂಬೋದಿ । ಶರಣುಪಂಚಬ್ರಹ್ಮರೂಪಾ । ಸುಗಣಕಲಾಪ
ಕರುಣಾಂಬುನಿಧಿ ಸುರೋತ್ತುಂಗ ಶಿವಲಿಂಗಾ || ಪಲ್ಲ ||

ಅಂತ್ಯ : ಶರಣುಪಂಚಬ್ರಹ್ಮರೂಪಾ
ಶಾರದಪಯೋಧರ ಪಟೀರ ಹಿಮಕುಂದ ಮಂದಾರ
ದರಹಾಸ ಶಶಿತಾರ ಭೂಧರ ಸುಧಾಹಾರ

× × × ×

ದುರಿತದೂರ ನಿಗಮಾಗಮಕಲಾಪ
ಸಕಲದೂರಿನುತ ಸಂಶೃತಿ ದುರಾಪಾಸದಾ
ರಲಸದೇಕಾಂಬ್ರನಾಥನಿರ್ಲೇಪಾ ॥ ೧ ॥

ಕಲಿಪಾರ್ಥನೊಳು ಮಲ್ಲಯುದ್ಧವನು ಮಾಡಿದತ್ಯಲಗ್ಘುತರ ಮಲ್ಲೇಶಲಿಂಗ
ಜಲಜಭವನಂ ಪೂಜೆಯನು ಕೊಂಡು ವರವಿತ್ತ ವಿಲಸಿಕ ಬ್ರಹ್ಮೇಶಲಿಂಗಾ
ಸಲನೆನವ ಸುಜನರ ಸುಖಾಂಬುಧಿಗೆ ವರ್ದನವದವಿದಿವ ಸೋಮೇಶಲಿಂಗ
ಸಲಹೊಂನ ಪರಮ ಮಂಗಳಮೂರ್ತಿಯೆನಿಪ ನಿಶ್ಚಲಜ್ಯೋತಿ ಶಿವಲಿಂಗಾ
॥ ೨ ॥

ಶ್ರೀ ದಕ್ಷಿಣಾಮೂರ್ತಿ ಸಮೇತ ಸದಾಶಿವ ಬ್ರಹ್ಮೇಶಯೆ ನಮಃ ॥ ಯಿಾ ಪುಸ್ತಕದಲ್ಲಿ ಯಿರುವ ಶಾಸ್ತ್ರದ ವಿವರಾ ॥ ಪ್ರಥಮದಲ್ಲಿ ಅನುಭವಾಮೃತವೆಂಬ ಶಾಸ್ತ್ರ ೧ ಕ್ಕೆ ವಾಲೆ ೬೨, ದ್ವಿತೀಯದಲ್ಲಿ ಸಕಲ ಅಷ್ಟಕದ ಬಗೆ ಶಾಸ್ತ್ರ ೧ಕ್ಕೆ ವಾಲೆ ೧೦೧, ತ್ರಿತಯದಲ್ಲಿ ಶ್ರೀ ದಕ್ಷಿಣಾಮೂರ್ತಿಸ್ತ್ರೋತ್ರ ೧ ಕ್ಕೆ ವಾಲೆ ೧೪, ಚತುರ್ಥದಲ್ಲಿ ಗಜಾರಣ್ಯಕ್ಷೇತ್ರಮಾಹಾತ್ಮ್ಯೆ ೧ಕ್ಕೆ ವಾಲೆ ೩, ಪಂಚಮದಲ್ಲಿ ಯೀಶ್ವರಗೀತಾಶಾಸ್ತ್ರದ ಬಗೆ ೧ ಕ್ಕೆ ವಾಲೆ ೨೨, ಷಷ್ಟಮದಲ್ಲಿ ರಾಮಗೀತಾ ಶಾಸ್ತ್ರದ ಬಗೆ ೧ ಕ್ಕೆ ವಾಲೆ ೧೫, ಸಪ್ತಮದಲ್ಲಿ ಸರಸ್ವತ್ಯಾಸ್ತುತಿ ೧ ಕ್ಕೆ ವಾಲೆ ೪, ಅಷ್ಟಮದಲ್ಲಿ ಋಗ್ವೇದಸ್ತುತಿ ಚಾತುರ್ವೇದಸ್ತುತಿ ಸಹಾ ವಾಲೆ ೨, ನವಮದಲ್ಲಿ ಭರ್ತೃಹರಿಯೋಗೀಂದ್ರ ವಿರಚಿತವಾದ ಸುಭಾಷಿತದ ಶಾಸ್ತ್ರದ ಬಗೆ ೧ ಕ್ಕೆ ವಾಲೆ ೨೫, ದಶಮದಲ್ಲಿ ಕಾಳಿದಾಸಕೃತ ಶ್ಯಾಮಳಾ ದಂಡಸ್ತುತಿ ಬಗೆ ೧ ಕ್ಕೆ ವಾಲೆ ೨, ಏಕಾದಶದಲ್ಲಿ ಬಾಲರಾಮಾಯಣದ ಶಾಸ್ತ್ರದ ಬಗೆ ೧ ಕ್ಕೆ ವಾಲೆ ೫, ದ್ವಾದಶದಲ್ಲಿ ಕನ್ನಡ ಭಾರತಪ್ರಸಂಗದಲ್ಲಿ ಅರ್ಜುನನಿಗೆ ಈಶ್ವರ ಪ್ರತ್ಯಕ್ಷವಾಗಿ ಪಾಶುಪಥಾಸ್ತ್ರ ದಯಪಾಲಿಸಿದ ಬಗೆ ವಾಲೆ ೧೦, ತ್ರಯೋದಶದಲ್ಲಿ ಕನ್ನಡರಾಮಾಣದಲ್ಲಿ ಅಂಗದ ಸಂಧಾನಪಕ್ಕೆ ಪಾಲೆ ೬, ಚತುರ್ದಶದಲ್ಲಿ ಸುಭಾಷಿತರ ಚಾಟುಗ್ರಂಥದ ಬಗೆ ೧ ಕ್ಕೆ ವಾಲೆ ೬, ಪಂಚದಶದಲ್ಲಿ ಸೋಮಾರಾಧ್ಯರ ಶತಕದ ಬಗ್ಗೆ ೧ ಕ್ಕೆ ವಾಲೆ ೧೧, ಷೋಡಶದಲ್ಲಿ ರತ್ನಾಕರಶತಕದ ಬಗೆ ೧ ಕ್ಕೆ ವಾಲೆ ೧೨, ಸಪ್ತದಶದಲ್ಲಿ ಅರವತ್ತುಮೂರುಮಂದಿ ಶಿವಪ್ರಥಮಗಣಂಗಳ ಸ್ತುತಿ ೧ ಕ್ಕೆ ವಾಲೆ ೬, ಅಷ್ಟಾದಶದಲ್ಲಿ ಶಿವವಚನ ವಿಷ್ಣುಕೀರ್ತನೆ ಸಹಾ ವಾಲೆ ೮, ಅಂತೂ ಶಾಸ್ತ್ರದ ಬಗೆ ೧೮ ಕ್ಕೆ ವಾಲೆ ೩೧೪ ಕ್ಕೆ ಅನುಷ್ಟಪ್ ಗ್ರಂಥ ೧ ಕ್ಕೆ ಅಕ್ಷರ ಪ್ರಮಾಣದಲ್ಲಿ ಒಟ್ಟುಗ್ರಂಥ ೮೬೦೭ ನಿಧಾನವಾಗಿ ಲೆಖ್ಖವಾದ ಪುಸ್ತಕಕ್ಕೆ ಶಿವಕಟಾಕ್ಷಸಿದ್ಧಿರಸ್ತು । ಸರ್ವಸಿದ್ಧಿಪ್ರದಾಯಕ ಬಸವಾದ ಪ್ರಮಥಗಳಂಗಳ

ಕೃಪಾಕಟಾಕ್ಷಸಿದ್ಧಿರಸ್ತು । ಚಾಂದ್ರಮಾನ ಸ್ವಸ್ತಿಶ್ರೀ ವಿಜಯಾಭ್ಯುದಯ ಕಲಿಯುಗಪ್ರಮಾಣ ೪೩೨೦೦೦ ಸಾವಿರ ವರುಷಕ್ಕೆ ಯೀಗ ಸಂದುಯಿರೂದು ವರುಷ ೪೮೯೪ ವರುಷಕ್ಕೆ ವಿವರಾ ಪ್ರಥಮದಲ್ಲಿ ಯುಧಿಷ್ಠಿರಸೆಕೆ ೩೦೪೪, ಆಮೇಲ ದ್ವಿತೀಯದಲ್ಲಿ ವಿಕ್ರಮ ಸೆಕೆ ೧೩೫ ವರುಷ ಆಮೇಲೆ ತ್ರಿತೀಯದಲ್ಲಿ ಶಾಲಿವಾಹನ ಶಕಾಬ್ದ ೧೭೧೫ ವರುಷ ಸಲುವ ವರ್ತಮಾನವಾದ ಪ್ರಮಾಧೀಚ ನಾಮಸಂವತ್ಸರದ ಕಾರ್ತಿಕ ಶುದ್ಧ ೧೫ ಯಿಂದುವಾರ ತಿಥಿವಾರ ನಕ್ಷತ್ರಯೋಗಕರಣ ಸಹಾ ಶುಭದಿವಸದಲ್ಲಿ ಸೂರ್ಯಪೂರ್ವಪ್ರತಿಷ್ಠೆಯಾದ ಘಳಿಗೆ ೫ ರಲ್ಲಿಯೂ ಕೃತಿ ಬರೆದು ಪೂರ್ನವಾದುದಕ್ಕೆ ಶಂಭುಲಿಂಗಪಾರ್ವತೀ ಕೃಪಾಕಟಾಕ್ಷ ಸಿದ್ಧಿರಸ್ತು ॥ ಆಂಗೀರಸ ಬಾರ್ಹಸ್ಪತ್ಯಭಾರದ್ವಾಜತ್ರಯಾರ್ಷೇಯ ಪ್ರವರಾನ್ವಿತ ಭಾರದ್ವಾಜಗೋತ್ರ ಅಶ್ವಲಾಯನಸೂತ್ರ ಋಕ್ಶಾಖಾದ್ಯಾಯಿಗಳಾದ ಚಂದ್ರವಂಶೋದ್ಭವರಾದ ಕಳುಳ ಪುರಾಧಿಪರಾದ ರಾಜೈಯ್ಯರಶಿನವರ ಪ್ರಪೌತ್ರರಾದ ಕೆಂಪರಾಜೈಯರಸಿನವಪೌತ್ರರಾದ ಲಕ್ಷ್ಮೀಕಾಂತೈಯ್ಯರಸಿನವರ ಪುತ್ರರಾದ ಕಾಂತರಾಜೈಯ್ಯಅರಸಿನವರು ಸ್ವಹಸ್ತಾಕ್ಷರದಿಂದ ಬರೆದು ಪೂರ್ಣವಾದ ಸಾರಸಂಗ್ರಹದ ಪುಸ್ತಕಕ್ಕೆ ಶ್ರೀಗಿರಿಮಲ್ಲಿಕಾರ್ಜುನ ಭ್ರಮರಾಂಬ ಕೃಪಾಕಟಾಕ್ಷದಿಂದ ಆಚಂದ್ರಾರ್ಕ ಸಿದ್ಧಿರಸ್ತು । ಬಸವಾದಿ ಪ್ರಮಥಗಳಂಗಳ ಸ್ವಕೃಪಾಕಟಾಕ್ಷಸಿದ್ಧಿರಸ್ತು ಶ್ರೀಸಾಂಬನೇ ನಮಃ ॥ ಲಕ್ಷ್ಮೀಪತಿಕಟಾಕ್ಷಸಿದ್ಧಿರಸ್ತು.

ವಿಷಯ : ಭಕ್ತಿಯ ಹಾಡುಗಳು.

ವಿಶೇಷ : ಇದರೊಂದಿಗೆ ಕಿರಾತಾರ್ಜುನರಕಾಳಗ, ಅಂಗದ ಸಂಧಾನ, ಸುಭಾಷಿತ (ಸಂಸ್ಕೃತ), ಸೋಮಾರಾಧ್ಯಶತಕ, ರತ್ನಾಕರ ಶತಕ, ಅರವತ್ತುಮೂವರ ತ್ರಿವಿಧಿ, ಮಾನಸಪೂಜೆ (ಸಂಸ್ಕೃತ), ಗುರುಶಿಷ್ಯಸಂವಾದ, ಸದ್ಗುರುರಹಸ್ಯ, ಐರಾವತ, ಭಾರತದಲ್ಲಿ ರಾಜನೀತಿ, ಕೃಷ್ಣಮಾಚಾರ್ಯರ ಕಾಲಜ್ಞಾನ ಎಂಬ ಗ್ರಂಥಗಳೂ ಇವೆ.

1753

ಕೆ. ೨೨೦	**ಶಿವಷಣ್ಮುಖ**	ಲಲಿತರಗಳೆ
೧೪.೫″ × ೧.೬″	?	?
೧೫೨–೧೯೮ ಪತ್ರ	೯ ಪಂಕ್ತಿ	೭೫ ಅಕ್ಷರ

ಆದಿ : ಶಿರಷಣ್ಮುಖದ ಅರಿಕೆ ಪುಸ್ತುಕಾ ಬರಯುವದಕ್ಕೆ ಶುಭಮಸ್ತು । × × ಶಾಲಿವಾಹನಶಕ ೧೭೬೦ ನೆಯ ಕೀಕ ಸಂ । ಫಾಲ್ಗುಣ ಬ ೬ಲ್ಲು ॥

ಶ್ರೀಗುರು ಶಿವ ಷಣ್ಮುಖವಾದದಲಿ
ಯೋಗಿ ಜನಾನಂದಾನುಭವದಲಿ ||
ಅಂತುನೆರ ೫೩ಕೆ ಶ್ರೀ
ವಜ್ರಾಂಕುಶರೇಖಾ ಸಾಲುಗಳಾ
ಅರುಣಪಲ್ಲವದಾಯತರಡಿ ತಳದಾ
ವರಮಣಿ ಲಹರಿಯ ಮುದ್ರಾಂಕಿತದಾ
ನಾದಿಪ ತಿರುಘಂಟೆಗಳೋರಣದಾ
ದೀಧಿತಿಯಾಭರಣದ ಸಂಕುಲದಾ
ನಮುಚಿ ಸದಾನಾದ್ಯಮರ ವ್ರಜದಾ ||

ಸ್ಫುರಿಪಕಿರಣ ಪ್ರತಿಬಿಂಬನಿರಂತಾ
ಮೆರೆವಾ ಹರನಡಿಯುಗಕತಿ ಸ್ವಾಂತಾ
ಚಿತ್ತಂ ಗುಹನೆರಗಿದ ಹರುಷಿಸುತಾ
ವಿಸ್ತರಿಸುತ ಮಹಿಮೆಯ ಗುಣಾತೀತಾ || ೧ ||

ಅಂತ್ಯ : ಭ್ರುಂಗೀಶ್ವರ ನಾಟ್ಯದಸ್ವಾದಾ
ಅಂಗಜದಾಹನ ಯಶಸಂಪಾದಾ
ಕಂಗೊಳಿಸುವ ಕರುಣಾಮೃತ ರಸವಾ
ಶೃಂಗಾರದ ಶಿವಜಯ ಜಿತಕ್ರೋಧಾ || ೧೧ ||

ಶ್ರೀಗುರು ಶಿವಷಣ್ಮುಖವಾದದಲಿ
ಯೋಗಿಜನಾನಂದಾನುಭವದಲಿ
ತ್ರಿಗುಣಂಗಳ ರೂಪದ ಪ್ರಕರಣವ
ನಿಗಮಾಂತಜ್ಞರು ರರಿವದನುಭವದಾ ||
ಅಂತು ನೆಲೆ ೯೨ ಕ್ಕಂ ಮಂಗಳಮಹಾ ಶ್ರೀ ||

ಶಾಲಿವಾಹನಶಕ ವರುಷ ೧೭೭೧ ನೆಯ ಸೌಮ್ಯ ಸಂವತ್ಸರದ ಚೈತ್ರ ಬ ೧೨ ಶುಕ್ರವಾರದವರಿಗೆ ಬರದ್ದಾಯಿತ್ತು । × × × × ಕಣನೂರು ಶ್ಯಾನುಭಾಗರ ವಂಶದ ನರಶಿಂಗೈನ ಬರಹಾ । ಮುಂದೆ ಯಿಂನು ನಾಲ್ಕುದ ನೆಲೆಯಿಥೆಯಂತೆಯಲ್ಲಿ ಆದರು ಮಾತ್ರುಕೆ ಶಿಕ್ಕಿದರೆ ಬರೆಯಬೇಕು

ವಿಷಯ : ಶಿವ ಷಣ್ಮುಖ ಸಂವಾದರೂಪವಾದ ವೇದಾಂತತತ್ತ್ವ.

ವಿಶೇಷ : ಅಸಮಗ್ರ ಪ್ರತಿ. ೫೪ನೆಯ ನೆಲೆಯಿಂದ ೯೨ ನೆಲೆ ಪೂರ್ತಿ ಪ್ರಕೃತ ಕಟ್ಟಿನಲ್ಲಿದೆ. ಮೊಡಿಅಕ್ಷರ. ಪದ್ಯದ ಸಾಲುಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ

ಬರೆದಿದೆ. ಕಟ್ಟಿನ ಕೊನೆಯಲ್ಲಿ ೮ ಶುದ್ಧಪತ್ರಗಳಿವೆ. ಕೆಲವು ಪತ್ರಗಳನ್ನು ಹುಳುಹೊಡೆದು ರಂಧ್ರಮಾಡಿದೆ. ೧೫೨ ನೆಯ ಕ್ರಮಾಂಕದ ಎರಡು ಪತ್ರಗಳಿವೆ. ೧೬೭, ೧೬೯- ೧೭೫, ೧೭೯ - ೧೮೨, ೧೮೬ - ೧೮೯, ೧೯೧, ೧೯೨ ಈ ಕ್ರಮಾಂಕದ ಪತ್ರಗಳು ಹೆಚ್ಚು ಶಿಥಿಲವಾಗಿವೆ.

1754

ಕೆ ೪೪೪	**ಶಿವಷಣ್ಮುಖವಾದ**	ಗೀತ ?
೮.೨"×೧.೮"	?	?
೧–೨೨೫ ಪತ್ರ	೧೦ ಪಂಕ್ತಿ	೩೨ ಅಕ್ಷರ

ಆದಿ : ಶ್ರೀಗಣಾಧಿಪತಯೇ ನಮಃ। ಶ್ರೀಶಾರದಾಗುರುಭ್ಯೋನಮಃ। ಶಿವಶಂಣ್ಮುಖ ಬರವ ಪುಸ್ತುಕಕ್ಕೆ ಆಚೆಂದ್ರಾರ್ಕ್ಕನುಸ್ತು × ×

ನಂಬಿದವರಿಗೆ ತಂನ ತೆತ್ತಿಹ
ನೆಂಬ ಬಿರಿದನು ಮೆರದು ಭಕ್ತಕು
ಟುಂಬಿ ಸಾರಥಿಯಾದನೊಲಿದರ್ಜುನಗೆ ಮುರವೈರ್ರಿ ॥ ಶ್ರೀರಾಮಾಯ ನಮಃ ॥

ಶ್ರೀಗುರುಶಿವಶಂಣ್ಮುಖವಾದದಲೀ
ಯೋಗಿಜನಾನಂದಾನುಭವದಲೀ
ಶ್ರೀಗೌರೀವದನಾಂಬುಜಮಿತ್ರಾ
ರಾಗಕಗೋಚರ ನಿರ್ಮಲಗಾತ್ರಾ
ಯಿಂದುಕಲಾ ಮಂಡಿತ ಕೋಟೀರಾ
ಮಂದಾಕಿನಿಧರ ಮಹಿಮೋದಾರಾ
ಶಶಿರವಿ ಶಿಖಿಶೋಭಿತ ತ್ರೈನೇತ್ರಾ
ವಿಷಧರ ವಿಶ್ವೋದಯ ನುತಪಾತ್ರಾ
ಕಾಮ ಮದಾಪಹ ಕರುಣಾಪಾಂಗಾ
ಭೀಮಭರ್ಗ ಶಿವಗ್ನಾನ್ಯ ತರಂಗಾ
ಶೂಲಪರಶು ಪಾಶಾಂಕುಶಹಸ್ತಾ
ಕಾಲಾಂತ್ರಕ ದುರಿತವ್ರಜಧ್ವಸ್ತಾ

ಅಂತ್ಯ : ಕರುಣರಸಾಂಬೋನಿಧಿ ಶರಣೆನುತಾ
ಕರವ ಮುಗಿದನೀಶಗೆ ಶರಾಜಾತಾ ॥ ೧೦ ॥

ಶ್ರೀಗುರುಶಿವಷಂಣ್ಮುಖವಾದದಲೀ
ಯೋಗಿಜನಾನಂದಾನುಭವದಲೀ

ಪಂಚೇಂದ್ರಿಯದ ವಿವರ ಪ್ರಕರಣವಾ
ಪ್ರಪಂಚಜಿತರು ತಿಳಿದ ಪದನೂಭವವಾ ॥ ೯೩ ॥

ಶ್ರೀಸದ್ಗುರು ಚರಣಾರವಿಂದವೇ ಗತೀ ॥ ಶ್ರೀ ॥
ಮುಂದೆ ಸಂಪಾದಿಸಿ ಸಾಂಗವಾಗಿ ಬರೆಯಬೇಕೂ ।

ಶ್ರೀರಾಮಚೆಂದ್ರಾಯ ನಮಃ ಶ್ರೀಗೋಪಾಲಮೂರ್ತ್ರಯೇ ನಮಃ ॥ ಶ್ರೀ ಸೀತಾ ಲಕ್ಷ್ಮಣ ಭರತಶತ್ರುಘ್ನಹನೂಮತ್ಸಮೇತ ಶ್ರೀರಾಮಚೆಂದ್ರಾರ್ಪ್ಪಣಮಸ್ತೂ । ಶ್ರೀರಾಮಾರ್ಪ್ಪಣಮಸ್ತೂ ॥ ಶ್ರೀಸಾಂಬಸದಾಶಿವಾರ್ಪ್ಪಣಮಸ್ತೂ । ಸ್ವಸ್ತಿಶ್ರೀ ವಿಜಯಾದ್ಭುದಯ ಶಾಲಿವಾಹನಶಖವರುಷ ಸಾ ೧೬೭೭ಲನೆಯ ಧಾತುನಾಮಸಂವತ್ಸರದ । ಆಶ್ವಿಜ ಬ ೧೦ ಯ ಭಾನುವಾರದ ನಿರುಥಕ್ಕೆ । ಶ್ರೀಮತ್ತು ॥ ಬ್ರಂಹ್ಮಸಮುದ್ರದಾ । ವೆಂಕಟೇಶೈಯನವರು ॥ ಶಕುನಿರಾಯರವರಿಗೆ । ಬಾಗೂರ ಕಸಬೆ ದಾಸಪ್ಪೈಯನವರ ಮಗರ್ಾ। ರಂಗೈಯ್ಯನು ಬರದುಕೊಟ್ಟ। ಶಿವಷಂಣ್ಮುಖದ ಪುಸ್ತುಕಕ್ಕೆ ಆಚೆಂದ್ರಾರ್ಕ್ಕಮಸ್ತೂ ॥ ಶ್ರೀಮದ್ಭಾಗ್ಯಪುರದ ಪ್ರಸಂನ ಚೆಂನಕೇಶವಸ್ವಾಮಿಯವರ ದಿವ್ಯಶ್ರಿ ಚರಣಾರವಿಂದವೆಗತಿ ॥ ಬಲ್ಲಂತ್ತಾ ಪ್ರಾಗ್ನರು ತಪ್ಪತ್ತಿದ್ದುವಹಾಗೆ ಮಾಡುವದು ॥

ವಿಷಯ : ವೇದಾಂತ.

ವಿಶೇಷ : ೩೩, ೧೮೯ ಮತ್ತು ೧೨೧ ನೆಯ ಪತ್ರಗಳಿಲ್ಲ. ೫೧ ನೆಯ ಪತ್ರ ಅರ್ಧಭಾಗಲೋಪ. ೧೦೭ನೆಯ ಪತ್ರಾನಂತರದ ಪತ್ರ (ಸಂಖ್ಯಾಭಾಗವಿಲ್ಲ) ದಲ್ಲಿ ಅಂತು ಪ್ರಕರಣ ೪೫ಕಂ ಮಂಗಳಮಹ । ಮುಂದೆ ನಾಲ್ವತ್ತೇಳನೆ ಪ್ರಕರಣಾ ಯಂಬುದಾಗಿ । ಲೆಖ್ಖ ಯಿಕ್ಕೆ ಅಥಾನೆ । ವಾಲಿ ಲೆಖ್ಖದಲ್ಲು ನಾಲ್ಕು ವಾಲಿಯಿಲ್ಲದಾಗಿ ಮಾಡಿ ಅಥಾನೆ । ಯಿದ್ದಾಗ್ಯೂ । ವಾಲಿ ಹೋಗಿದ್ದಾಗ್ಯೂ । ಪ್ರಕರಣದ ಲೆಖ್ಖವಷ್ಟಕ್ಕೆ। ಯರಡು ಮೂರು ಪ್ರತಿಯಲ್ಲಿ ಸರಿನೋಡಿದಾಗ್ಯು । ಮುಂದಣ ಪ್ರಕರಣ । ನಾಲ್ವತ್ತಾರನೇದೆ ಸಂಧಿ । ಆಗಿ ಅದೆ । ಬರವವ । ಲೆಖ್ಖವ ತಪ್ಪಿಕ್ಕಿದ್ದಲ್ಲದೆ । ನೆರೆಪ್ರತಿಗೆ ಕುಂದಾಗಿಯಿಲ್ಲ ' ಎಂದು ಟಿಪ್ಪಣಿಯೂ ಇರುತ್ತದೆ. ಸಮಗ್ರಪ್ರಾಯ.

ಅಲ್ಲದೆ ಈ ಕಟ್ಟೆನಲ್ಲಿ ಕೊನೆಯಭಾಗದಲ್ಲಿ ೧–೭ ಪತ್ರಗಳಲ್ಲಿ ಬ್ರಹ್ಮಸಮುದ್ರದ ಶಕುನಿರಾಯರ ಮೂವರುಮಕ್ಕಳ ಜಾತಕ ಕುಂಡಲಿಗಳು ಬರೆದಿರುತ್ತವೆ. ಇದಾದಬಳಿಕ ' ಶಿವಷಣ್ಮುಖ ' ಗ್ರಂಥದ ಆದಿಯ ಭಾಗದ ಪ್ರತಿಯಾಗಿರುವ ೧–೫ ಪತ್ರಗಳೂ ಇರುತ್ತವೆ.

1755

ಕೆ. ೪೧೬/೨	**ಶಿವಸಹಸ್ರನಾಮ**	ನಾಮಾವಳಿ
೧೨.೨"×೧.೧"	?	?
೧-೧೪ ಪತ್ರ	೬ ಪಂಕ್ತಿ	೨೫ ಅಕ್ಷರ

ಆದಿ : ಶ್ರೀಗುರುಸಿದ್ದೇಶ್ವರಾಯ ನಮಃ ॥ ಶಿವಸಹಸ್ರನಾಮುವ ಬರಉದಕ್ಕೆ ಶುಭಮಸ್ತು ॥ ನಿರ್ವಿಘ್ನಮಸ್ತು ॥ ಆಯುರಾರೋಗ್ಯ ಐಶ್ವರ್ಯಮಸ್ತು ॥ ಓಂ ಅಥ ಅಂಗಪೂಜಯಾಮಿ । ಹರಾಯ ನಮಃ । ಪಾದೌ ಪೂಜಯಾಮಿ । ಶಂಭುವೇ ನಮಃ । ಗುಪ್ಲ ಪೂಜಯಾಮಿ ಶುಭಾಯ ನಮಃ । ಜಾನುನಿ ಪೂಜಯಾಮಿ ಸರ್ವ್ವಸಿವಾಯ ನಮಃ। ಉದರಂ ಪೂಜಯಾಮಿ ಸರ್ವ್ವಶಯನಾಯಂ ನಮಃ । ಕಟಿಂ ಪೂಜಯಾಮಿ ಸರ್ವ್ವರಕ್ರಯೆಂ ನಮಃ । ಜಗನಂ ಪೂಜಯಾಮಿ × × × × ಮನೋನ್ಮಂನ್ಯೆಂ ನಮಃ । ತಾಂಬೂಲಂ ಸಮರ್ಪಯಾಮಿ । ಛತ್ರ ಚಾಮರ ಆಂದೋಳಿತ ರಾಜೋಪಚಾರಂ ಸಮುರ್ಪ್ಪಯಾಮಿ ।

ಓಂ ಶಿವಾಯ ನಮಃ ಹರಾಯ ನಮಃ ರುದ್ರಾಯ ನಮಃ ಪುಷ್ಕಲಾಯ ನಮಃ ಮುದ್ಗಲಾಯಂ ನಮಃ ಬಲಾಯ ನಮಃ ಅಗ್ರಗಂಣ್ಯಾಯ ನಮಃ ಸದಾಚಾರಾಯ ನಮಃ ಯೀಶ್ವರಾಯ ನಮಃ ಸ್ಥಾಣುವೇ ನಮಃ ಯೀಶ್ವವಾಯ ನಮಃ ಸಹಸ್ರಾಕ್ಷಾಯಂ ನಮಃ ಸಹಸ್ರವದೇಂ ನಮಃ

ಅಂತ್ಯ : ಪರಾವರಪಸ್ಮೈ ನಮಃ ಪಲಾಯ ನಮಃ ॥ ೭೦೦ ॥ ಇತಿ ಸಪ್ತವ ಶತಕಂ ॥ .... ಯ ನಮಃ .... ಬ್ರ್ಯಾಯ ನಮಃ × × × × ಈಶಾಯಾನೀಶಾಯ ನಮಃ ಸುರವ್ಯಾಘ್ರಾಯ ನಮಃ ದೆ .... ಸಿಂಹಾಯ ನಮಃ ದಿ .... ಬರಾಯ ನಮಃ ವಿ .... ಚರಾಯ ನಮಃ

ವಿಷಯ : ಶಿವಸಹಸ್ರನಾಮಾವಳಿ.

ವಿಶೇಷ : ಶಿವಸಹಸ್ರನಾಮಾವಳಿ ೭೨೬ ರ ವರೆಗೆ ಇದೆ. ಅಸಮಗ್ರ. ಇದರೊಂದಿಗೆ ಕೆ.೪೧೬|೧ ಪರಮರಹಸ್ಯೋಪದೇಶಸಂಗ್ರಹವೂ ಇರುತ್ತದೆ.

1756

ಕೆ. ೨೩/೧೫	**ಶಿವಾಧವಶತಕ**	ವೃತ್ತ
೫.೪"×೨"	ಮೊಗ್ಗೆಯಮಾಯಿದೇವ	ಸು. ೧೪೩೦
೧೧೨-೧೨೪ ಪತ್ರ	೧೨ ಪಂಕ್ತಿ	೨೮ ಅಕ್ಷರ

ಆದಿ : ಮೊಗ್ಗೆಯ ಮಾಯಿದೇವಯ್ಯಗಳು ನಿರೂಪಿಸಿದ ಪ್ರಥಮದಲ್ಲಿ ಶಿವಾಧವ ಶತಕ.

ವೃ ॥ ಶ್ರೀಗುರುವೇ ಮಹಾಗುರುವೆ ಶಾಂತಿಕಳಾಗುರುವೆ ಶಿವಾತ್ಮ ವಿ
ದ್ಯಾಗುರುವೇ ಪುರಾಗುರುವೆ ವಿಶ್ವಜಗದ್ಗುರುವೆ ವಿಶುದ್ಧಚೇ
ಷ್ಟಾಗುರುವೇ ಸುಧೀಗುರುವೆ ಭಕ್ತಿಯಶೋಗುರುವೆ ಪ್ರಸಾದ ತೇ
ಜೋಗುರುವೇ ಕೃಪಾಗುರುವೆ ಮದ್ಗುರುವೆ ಗುರುವೆ ಶಿವಾಧವಾ ॥ ೧ ॥

ಅಂತ್ಯ : ಉ ॥ ಯಿಾಪರಿ ಷಟಸ್ಸ್ಥಲಾತ್ಮಕ ವಿಶಿಷ್ಟ ಮಹಾಂತ್ತರ ಭಕ್ತಿಯೋಗವಿ
ದ್ದ್ಯಾ ಪರಮಾರ್ತ್ಥ ತತ್ವಮಯಮಪ್ಪ ಲಸತ್ಶತಕ ಪ್ರಬಂಧಮಂ
ರೂಪಿಸಿ ಮಾಯಿದೇವವಿಭು ಲಕ್ಷಣಲಕ್ಷಿತಮಾಗಿ ಪೇಳ್ದನೊ
ಲ್ದ್ವೈಪುರ ಸೋಮನಾಥ ಚರಣಾಂಬುಜ ಷಟ್ಚರಣಂ ಶಿವಾಧವಾ
॥೧೦೧॥ ಶ್ರೀ.

ವಿಷಯ : ಭಕ್ತಿವೈರಾಗ್ಯಗಳ ನಿರೂಪಣೆ.

ವಿಶೇಷ : ಶಕಟರೇಫವಿದೆ. ಪ್ರತಿಪದ್ಯವೂ ಶಿವಾಧವಾ ಎಂದು ಮುಗಿಯುತ್ತದೆ. ೧೧ಲನೆಯ ಪತ್ರವು ಲುಪ್ತ. ಇದೇ ಕಟ್ಟಿನಲ್ಲಿ ಶಿವಾವಲ್ಲಭ ಶತಕ, ಮಹಾದೈಪುರೀಶ್ವರ ಶತಕ ಮೊದಲಾದ ಇನ್ನೂ ಇತರ ೧೬ ಕೃತಿಗಳಿವೆ. ಇದರಲ್ಲಿ ಕೆಲವು ಸಂಸ್ಕೃತ ಕೃತಿಗಳು.

1757

ಕೆ. ೩೬೯/೧೫	**ಶಿವಾಧವಶತಕ**	ವೃತ್ತ
೮"×೧.೮"	ಮೊಗ್ಗೆಯಮಾಯಿದೇವ	ಸು. ೧೪೩೦
೧೨೨–೧೩೭ ಪತ್ರ	೯ ಪಂಕ್ತಿ	೪೧ ಅಕ್ಷರ

ಆದಿ : ಪ್ರಥಮದಲ್ಲಿ ಶಿವಾಧವ ಶತಕ
ಶ್ರೀಗುರುವೆ ಶಾಂತಿಕಳಾಗುರುವೆ ಶಿವಾ........................
....ಗುರುವೆ ಪುರಾಗುರುವೆ ವಿಶ್ವಜಗದ್ಗುರುವೆ ವಿಶುದ್ದಜೆ
........ಪ್ಟಾಗುರುವೆ ಸುಧಿಗುರುವೆ................
............................ವೆ ಗುರುವೆ ಶಿವಾಧವಾ ॥ ೧ ॥

ಅಂತ್ಯ : ಈಪರಿ ಷಟ್ಸ್ಥಲಾತ್ಮಕ ವಿಶಿಷ್ಟಿ ಮಹತ್ತರ ಭಕ್ತಿಯೋಗ ವಿ
ಧ್ಯಾಪರಮೂರ್ತ್ತತತ್ವಮಯಮಪ್ಪ ಲಸಚ್ಛತಕ ಪ್ರಬಂಧಮಂ

ರೂಪಿಸ ಮಾಯಿದೇವವಿಭು ಲಕ್ಷಣಲಕ್ಷಿತಮಾಗೆ ಪೇಳ್ದನೊ
ದ್ದೈಪುರ ಸೋಮನಾಥ ಚರಣಾಂಬುಜ ಷಟ್ಚರಣಂ ಶಿವಾಧವಾ ॥೧೦೧॥
ಶಿವಾಧವಾ ಶತಕ ಸಂಪೂರ್ನ್ನ ಮಂಗಳಮಹಾ ॥ ಶ್ರೀ ॥

ವಿಷಯ : ಭಕ್ತಿವೈರಾಗ್ಯಗಳ ನಿರೂಪಣೆ.

ವಿಶೇಷ : ಈ ಗ್ರಂಥವು ಶಿಥಿಲವಾಗಿದೆ. ಆದರೂ ಸಮಗ್ರ. ಗರಿಯ ಅಂಚುಗಳು ಮುರಿದಿವೆ. ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಗುರು, ಷಡಕ್ಷರಿ, ಬಸವ, ಮನೋವಿಕಾರನಿರಸನ, ಭಕ್ತಿಬಿನ್ನಹ ರಗಳೆಗಳೂ, ಬಸವಸ್ತೋತ್ರ, ಮಿಶ್ರಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ ; ಶಂಕರ ದೇವ, ಮಂತ್ರಮಹತ್ವ, ಮರುಳುದೇವ, ಪ್ರಭುಲಿಂಗ ಕಂದಗಳೂ ; ಅಕ್ಷರ ಮಾಲಿಕ, ಇತ್ಯಾದಿ ಗದ್ಯಗಳೂ ; ಶಿವಾವಲ್ಲಭ, ಮಹದೈಪುರೀಶ್ವರ ಶತಕ ಗಳೂ ; ಮಲ್ಹಣಸ್ತೋತ್ರ ಎಂಬೀ ಗ್ರಂಥಗಳೂ ಇವೆ.

1758

ಕೆ. ೬೪೧	**ಶಿವಾಧಿಕ್ಯಪುರಾಣ**	ವಾರ್ಧಕಷಟ್ಪದಿ
೯.೯"×೧.೬"	ಬಸವಲಿಂಗ	೧೬೧೧
೧–೧೭೯ ಪತ್ರ	೮ ಪಂಕ್ತಿ	೪೮ ಅಕ್ಷರ

ಆದಿ : ಶಿವಾಧಿಖ್ಯಪುರಾಣ ಬರಲುಥಕ್ಕೆ ಶುಭಮಸ್ತು ॥ ಶೋಬನಮಸ್ತು ॥
ಸಾರ್ದೂಲ ಉ್ರತ್ತಾ ॥

ಶ್ರೀಮಂನಾಥಮಿಳಿರ್ವ ಬುಭುನಿಲಯಂ ಶ್ರೀಕಾಂತ್ತಾ ವೇದೋದಿತಂ
ಸೋಮಂ ದೂಮ ದಿನೇಶನೇತ್ರ ವಿಮಲಂ ಸೂಕ್ಷ್ಮಂ ಘರಂ ಪಾವನಂ
ವಾಮರ್ಧಾಂಗನಗೇಂದ್ರಜಾತೆ ವಿಲಸಂ ವಾಚ ಮನೋಘೋಚರಂ
ಭೀಮಂ ಭೀಮಭವರ್ನಗಂಮ್ಯ ವಡಭಾ ಭೂತೇಸ್ವರ ಪಾಹಿಮಾಂ ॥ಪದ॥

ವಾರ್ದಿಕಶಷ್ಟ್ಪದಿ ॥ ಪಲ್ಲ ॥
ಶ್ರೀಗುರುವಿನೊಲವ ಪಡೆಧಚಲಭಕ್ತರ ತನೆಯ
ಪೋಗಿ ಪೊರಕೇರಿಯುವರುಗಳ ಬೆರಶಿದನೆನುತಾ
ಲಾಗ ದ್ವಿಜರುಗಳು ನಿಂದಿಸಲು ಬಂಗಿಶಿ ಮೆರದರಿಳಿಯೊಳಿಸ್ವಾಚಾರ್ಯ್ಯರೂ॥

ಪಥ ॥ ಶ್ರೀ ಪರತರಮಲಜಿದ್ರೂಪನಘಜಿವಾಪ
ಮಾಪ ಗೋಪೇಂದ್ರನಮಿತಾ ಪದಂಭಕ ದೀಪ
ಲಾಪನಂನಂಗಳು ಪಂಚ್ಚತ್ರಿಯಕ್ಷ ನಿರ್ಲೇಪ ಕಾರೂಂಣ್ಯರಸದ ಕೂಪಾ ॥

ಪಾಪ ಸಂಶ್ರುತಿ ತಾಪ ಶರಧಿ ಕುಂಭಜನೆನಿಪ
ಕೋಪವರಿವರ್ಗಾಪ ನಿಜಪುಂಣ್ಯಾಥಯರೂಪ
ಹೇಪರಮಸಲ ವಿಶ್ವಾವಾಸ ಸದ್ಗುರು ಶಾಂತ್ನಾಕಾಪಾಲಿ ಚಂದ್ರಮೌಲಿ ||೧||

X X X X

ಪರಮಪಾನನ ಮೂರ್ತಿ ಷಡ್ಗುಣೈಶ್ವರಿ ಕೀರ್ತಿ
ಗುರುವಾರ್ಯ್ಯ ಚಂನಮಲ್ಲೇಶ್ವರನ ಕಾರುಣ್ಯಾ
ಕರಕಂಜಬವ ಬಸವಲಿಂಗ ಸಮರಸದಂಗ ಶರಣರಡಿಸವೀನ ಭೃಂಗಾ
ವಿರಚಿಶಿದನೀಕ್ರುತಿಯ ವಿಷ್ಣುವಿನ ಸ್ತಿತಿಗತಿಯಾ
ಪರಮಭಕ್ತರ ಪೆಚ್ಚು ಪರವಾದಿಗೆದೆಗಿಚ್ಚು
ಶರಣ ಷಡ್ಸುಲ ಬ್ರಾಂಹ್ಮಿಗಳ ಮೆಚ್ಚು ಶಾಶ್ವತಂ ಪರಶಿವನ
ಮಹಿಮೆಯಚ್ಚೂ || ೨೦ ||

ಅಂತ್ಯ : ಸಲೆ ಚದುರರಪ್ಪವರು ಶಾಲಿವಾಹನ ಸಕವ
ತಿಳಿವದಿದು ತ್ರಿಪಂಚ ಶತ ವತ್ಸರದ ಮೇಲೆ
ಬಳಿಕಲಷ್ಟಾದಶಉ ವರುಷವೆನೆ ಹೇವಳಂಬಿ ಸಂವತ್ಸರದ ಜ್ಯೇಷ್ಟಾದಿಂ
ಮಿಳಿತವೆಸಗುವ ಶುಕ್ಲದೊಳು ಶುಭವೆನಿಪ
ಲಲಿತ ಶುಧಕರವಾರ ಶುದ್ದಬಿದಿಗೆಯ ದಿಉಸ
ಮಲಹರಾದಿಕ್ಯಕ್ರುತಿ ಸಂಪೂರ್ನವಾಗಿ ಮಂಗಳಕರದೊಳೊಪ್ಪುತಿಹುದೂ
|| ೭೫ ||

X X X X

ಶ್ರೀಮತು ಶಿವದೇವೈಯ್ಯಗಳ್
ತಾಮಸಗಜರಾತಿ ಶರಭ ವಿಶ್ವಾಚಾರ್ಯ್ಯರೂ
ಕಾಮಾರಿಯಂ ಬೆರದ ಕೃತಿಯಂ
ಪ್ರೇಮದಿಂ ಪ್ರತಿಗೈದ ಚಂನಬಸವೇಶ್ವರನೂ || ೭೭ ||

ಅಂತೂ ಸಂಧಿ ೧೧ ಕಂ ಪದನು ೬೫೧ ಕಂದ ೧೦೦ ಶ್ರುತಿಗ್ರಂಥಂಗಳೂ ೩೦೫ ಉತ್ತ್ರ ೪೪ ಉಭಯಂ ೧೧೦೦ಯಿದರಲ್ಲಿ ಹೊಸ್ತಾಗಿ ನಾರುವೆ ಶ್ಯಾನಭಾಗ ಲಿಂಗಪ್ಪ ಬದಲ ಪುರಾಣ ಪುಸ್ತಕದಲ್ಲಿದ್ದಂತಾದ ತಂದೂ ಸೇರಿಸಿ ಬರದ ಭಾವನಿಪದ ೧೦೦ ದೀಕ್ಷವಿದಾನ ಗ್ರಂಥ ೪೦ ಪುರಾತರ ವಚನಗ್ರಂಥ ಕಾಲಚ ಸಹವಾಗಿ ೧೩೦ ಅಂತ್ತೂ ೨೭೦ ಉಭಯಂ ೧೩೭೦ ಕಂ ಸಮಪ್ತ ಮಂಗಳಮಹಾಶ್ರೀ || X X X X ದುರ್ಮುಖಿ ನಾಮ ಸಂಹ್ವತ್ಸರದಾ

ಬಾದ್ರಪದ ಶು ೧೦ ಭಾನುವಾರದಲ್ಲು ಮರಿಯನೆ ಕೆಂಪ್ಪನಂಜೈಯ್ಯ ಕೆಂಪ್ಪ ನಂಜೆ ಸ್ವಾಮಿಗಳ ಪಾದದ ಕ್ರುಪಾಕಟಾಕ್ಷದಿಂದ ಶಿವಾಧಿಕ್ಯಪುರಾಣ ಪುಸ್ತುಕಕ್ಕೆ ಶುಭಮಸ್ತು ||

ವಿಷಯ : ವಿಶ್ವಾಚಾರ್ಯನೆಂಬ ಶಿವಭಕ್ತನು ವೇದಾಗಮ ಪುರಾಣಗಳನ್ನು ತೃಣೀಕರಿಸಿ ಶಿವಾಧಿಕ್ಯವನ್ನು ಸ್ಥಾಪಿಸಿದುದು.

ವಿಶೇಷ : ವಾರ್ಧಕಷಟ್ಪದಿಯೊಂದೇ ಅಲ್ಲದೆ ಕಂದ ವಚನ, ವೃತ್ತಗಳೂ ಇವೆ. ಬರಹ ಸುಂದರ. ೨೩ನೆಯ ಕ್ರಮಾಂಕದ ಪತ್ರಗಳು ಎರಡಿವೆ.

1759

ಕೆ.ಎ. ೧೩೪	**ಶಿವಾಧಿಕ್ಯಪುರಾಣ**	**ವಾರ್ಧಕಷಟ್ಪದಿ**
೧೨.೮" × ೭.೯"	**ಬಸವಲಿಂಗ**	**೧೬೧೧**
೧-೫೯ ಪತ್ರ	**೩೨ ಪಂಕ್ತಿ**	**೩೦ ಅಕ್ಷರ**

ಆದಿ : ಶಿವಾಧಿಕ್ಯ ಪುರಾಣಂ x x x ಶ್ರೀಮಚ್ಛಿವನಿಂದೆ ನಿರ್ಮಿತವಾದ ಬ್ರಹ್ಮಾಂಡದೊಳೊಪ್ಪುತ್ತಿಂ। x x x x ಭೂತೇಶ್ವರ ಪಾಹಿಮಾಂ || ೧ ||

ವಾರ್ಧಿಕಶಟ್ಪದವೂ॥ ಶ್ರೀಗುರುವಿನೊಲವ ಪಡೆದಚಲಭಕ್ತರ ತನಯ
ಹೋಗಿ ಪೊರಕೇರಿಯುವರುಗಳ ಬೆರಶಿದನೆನುತ
ಲಾಗ ದ್ವಿಜರುಗಳು ನಿಂದಿಸಲು ಭಂಗಿಸಿ ಮೆರೆದರಿಳೆಯೊಳ್ವಿಶ್ವಾಚಾರ್ಯರೂ ||
ಪದನೂ ॥ ಶ್ರೀಪರತರಮಲ ಚಿದ್ರೂಪನಗಜಾವಾಪ
ಮಾಪ ಗೋಪೇಂದ್ರನಮಿತಾಪದಂಬಗದಿಪಂ
ಲಾಪನಂಗಳು ಪಂಚತ್ರಿಯಕ್ಷ ನಿರ್ಲಕ್ಷ ಕಾರುಣ್ಯರಸದ ಕೂಪಾ ||
ಪಾಪಸಂಶೃತಿತಾಪ ಶರಧಿ ಕುಂಭಜನೆನಿಪ
ಕೋಪ ಪರಿವರ್ಗಾಪ ನಿಜಪುಣ್ಯದಯಾರೂಪ
ಹೇ ಪರಮ ಸಲಹು ವಿಶ್ವಾಪ ಸದ್ಗುರುಶಾಂತ ಕಾಪಾಲಿ ಚಂದ್ರಮೌಳಿ ||೩||

ಅಂತ್ಯ : ಯಿದು ಬಸವಲಿಂಗ ದೇಶಿಕ ಭಕ್ತರುಗಳೊಡನೆ
ಸದುವಿನೆಯ ಸಹಜವಚನದೊಳಿಪ್ಪ ಕಾಲದೊಳು
ಮದಹರನು ನಿತ್ಯಮಾಥವನು ಸಾಯನೆಂಬ ವಿಧವೆಂತು ಸ್ವಾಮಿ ಯನಲೂ

ಮುದದಿಂದಲೊರೆದ ವಿಶ್ವಾಚಾರ್ಯರೊಳು ವಿಪ್ರ
ರೊದಗಿ ವಾದಿಸಲವರ ಭಂಗಿಸಿದ ಕಥನವನು
ತುದಿಮೊದಲುವಿಡಿದು ಭಕ್ತರಿಗೆ ವಚಿಸಿದ ವಾಕ್ಯವಿದು ಶಿವಾಧಿಕ್ಯಕೃತಿಯೊ
|| ೧೮೪ ||

ಅಂತು ಸಂಧಿ ೧೧ ಕಂ ಪದ ೧೪೨೧ಕಂ ಮಂಗಳಮಹಾಶ್ರೀ
ಶಿವಾಧಿಕ್ಯಪುರಾಣ ಸಂಪೂರ್ಣಃ

ವಿಷಯ : ಶಿವಾಧಿಕ್ಯಸ್ಥಿರೀಕರಣ.

ವಿಶೇಷ : ಗ್ರಂಥದ ಆದಿಯ ಐದು ಪತ್ರಗಳ ಒಂದೆಡೆ ಮೂಲೆಯಲ್ಲಿ ಸ್ವಲ್ಪ ಹುಳು ತಿಂದಿದೆ. ಸಣ್ಣಕ್ಷರ.

1760

ಕೆ.ಬಿ. ೧೯೭	**ಶಿವಾನಂದಲಹರೀಟೀಕೆ**	ಗದ್ಯ
೭.೭"×೬"	?	?
೧-೪೮ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ : ಶಿವಾನಂದಲಹರಿ x x ಲೋಕದಲ್ಲಿ | ಶಿವಪಾದಾರವಿಂದ ಭಜನೆ ಮಾಡಿ | ಸಕಲ ಸಾಂಬ್ರಾಜ್ಯವನ್ನು ಸಂಪಾದಿಸಿ ಧನ್ಯರಾಗುವರೆಂದು ನಿಶ್ಚಯಮಾಡಿ ಶ್ರೀ ಸಾಂಬಶಿವನಿಗೆ ಆನಂದಕರವಾಗಿ ಇರುವಂತ ಶಿವಾನಂದಲಹರಿ ಗ್ರಂಥವನ್ನು ಲೋಕೋಪಕಾರವಾಗಿ ಹೇಳುತ್ತಾರೆ | x x x ಕಲಾಭ್ಯಾಂ| ಕಾಲಸ್ವರೂಪವಾಗಿ ಯಿರುವಂಥಾ ಚಂದ್ರಕಲೆಯ ಶಿರಸ್ಸಿನಲ್ಲಿ | x x x (೨ನೆಯ ಪತ್ರ) ಯಿಷ್ಟಾರ್ಥ ಶಿದ್ಧಿಯಾಗಬೇಕೆಂದು | ಕಾಯಕ ಮನಸಿಕ ವೆಂದು ಯಿರುವ ಮಂಗಳಾಚರಣೆಯ ಮಾಡಿ | ಮುಂದೆ ಯಿೂ ಗ್ರಂಥದ ಪೆಸರು ಯಿದರ ಮಹಿಮೆಯನ್ನು ಹೇಳುತಿದಾರೆ || ೧ || ಗಳಂತಿ || ೨ || ಯಲೈ ಪರಮೇಶ್ವರನೆ ನಿನ್ನ ಚರಿತ್ರೆ ಯಂಬುವ ನಧಿಯಿಂದ ಪ್ರವಾಹಿಸು ವಂಥಾ ಇನ್ನು ಮಹಾಪಾಪಂಗಳೆಂಬ |

ಅಂತ್ಯ : ಕರುಣಾರ್ದ್ರ | ಕರುಣರಸದಿಂದ ಆರ್ದ್ರವಾಗಿಯಿರುವ ಮನಸ್ಸುವುಳ್ಳಂಥಾ | ಕಾಮಿತಾರ್ಥಗಳು ಕೊಡುವಲ್ಲಿ | ಕಲ್ಪವೃಕ್ಷ ಸಮಾನನಾಗಿ ಯಿರುವಂಥಾ ಸತ್ಪುರುಷರ ಸಂರಕ್ಷಣೆ ಮಾಡುವಲ್ಲಿ | ದೀಕ್ಷಾಬದ್ಧನಾಗಿ ಯಿರುವ

ಪರಮೇಶ್ವರನ್ನ ನಾನು ಹೃದಯಕಮಲದಲ್ಲಿ ಧ್ಯಾನಮಾಡುತ್ತಾ ಇಧೇನೆ ॥ ೯೯ ॥ ಶ್ರೀಯಸ್ತನೋತು ಶೀತಾಂಶು ಭೂಷಣಃ । ಕರುಣಾನಿಧಿಃ ಪಾರ್ವತೀ ವದನಾಂಭೋಜಮಕರಂದಾಸ್ವಾದ ಬಂಭರಃ ॥೧೦೦॥ ಯಿತಿ ಶಂಕರಾಚಾರ್ಯ ವಿರಚಿತೆ ಶಿವಾನಂದಲಹರೀ ಸಂಪೂರ್ಣಂ ಶ್ರೀ ಶ್ರೀ

ವಿಷಯ : ಶಿವಸ್ತೋತ್ರ.

ವಿಶೇಷ : ಬೈಂಡು ಮತ್ತು ಕೆಲವು ಪತ್ರಗಳನ್ನು ಅಲ್ಲಲ್ಲಿ ಹುಳುಗಳು ತಿಂದಿವೆ

1761

ಕೆ.ಎ. ೩೨೧	**ಶಿವಾಮೃತಲೀಲೆ**	ಭಾಮಿನೀಷಟ್ಪದಿ
೧೩.೪″ × ೮.೪″	ಶಿವಲಿಂಗ	೧೫೭೦
೧-೩೨೧ ಪುಟ	೨೨ ಪಂಕ್ತಿ	೧೪ ಅಕ್ಷರ

ಆದಿ : ಶಿವಾಮೃತಲೀಲೆ (ಶಿವಲೀಲಾಮೃತ) ಶಿವಾಮೃತಲೀಲೆಯ ಬರೆವುದಕ್ಕೆ ಶುಭಮಸ್ತು। ಶೋಭನಮಸ್ತು।

ಭಾಮಿನೀಷಟ್ಪದಿ॥ ಶ್ರೀಮದಮೃತಾಂ ಶಂಭು ಶಂಕರ
ಪ್ರೇಮನಾದರ ನಿರುಪನಿ ....
ಆದಯು ಆಧಾರವಿಲ್ಲದ
ನಾದ ಬಿಂದು ಕಳೆಗಳಿಲ್ಲದ
ನೋದಿಸಿಯೆ ನಿಂದಾ ಗೊಹೇಶ್ವರ ಮತಿಗೆ ಮಂಗಲವಾ ॥ ೧ ॥
ಮೇದಿನಿಗೆ ಅಧಿಪತಿಯು ಬಸವನ
ಸಾಧಿಸಿಯೆ ಸದ್ಭಕ್ತಿ ಮಾರ್ಗದ
ಹಾದಿಯನು ತೋರಿಸಿದ ... ... ಸಿ ಸಡಗರದಿ ದಕ್ಷನ ಶಿರವರಿದೀಶ
ಶರಣಾರ್ತಿ ॥೨॥

ಅಂತ್ಯ : ವೀರರಸ ಕಳೆ ಕಾಂತಿಯುಳ್ಳನು
ಭಾರಿಗುಣಮರಿ ಗುರುಶಾಂತಲಿಂಗನು
ಮಾರಾರಿಯ ಶಿವಸ್ತುತಿಯ ಇಳೆಗೆಯು ಘನವ ಬೆಳೆಸೆಂದು
ತೋರಿ ಪತಿ ಶಿವ ಮಾರ್ಗದಾದಿಯ
ನಾರಿಗೆಯು ಅಗಮ್ಯವಾದುದ
ಸಾರದಲಿ ಶಿವಲಿಂಗದೇವರಿಗೆ ಶರಣೆಂದು ॥ ೧ ॥

ಅಂತೂ ಗತಿ ೫೫ಕ್ಕಂ ಪದನು ಉಭಯಂ ವೊಟ್ಟು ೧೧೪೩ಕ್ಕಂ ಮಂಗಳ ಮಹಾ ಶ್ರೀ

ವಿಷಯ : ಪುರಾತನರಲ್ಲಿ ಒಬ್ಬನಾದ ನಂಬಿಯಣ್ಣನ ಚರಿತ್ರೆ.

ವಿಶೇಷ : ಗ್ರಂಥದ ಆದಿಯಲ್ಲಿರುವ ಮೊದಲನೆಯ ಪದ್ಯದ ಕೆಲವುಭಾಗ ಲುಪ್ತ ವಾಗಿದೆ. ಪ್ರತಿ ಸುದೃಢವಾಗಿದೆ.

1762

ಕೆ ೩೨೩/೧೬	ಶಿವಾವಲ್ಲಭ ಶತಕ	ವೃತ್ತ
೫.೪" × ೨"	ಮೊಗ್ಗೆಯ ಮಾಯಿದೇವ	ಸು ೧೪೩೦
೧೨೪-೧೩೮ ಪತ್ರ	೧೨ ಪಂಕ್ತಿ	೨೮ ಅಕ್ಷರ

ಆದಿ : ಶ್ರೀಗುರು ಶಾಂತಮಲ್ಲಿಕಾರ್ಜುನ ಲಿಂಗಯ ನಮಃ ||
ದ್ವಿತೀಯದಲ್ಲಿ ಶಿವಾವಲ್ಲಭ ಶತಕ ||

ಶಾ || ಶ್ರೀಮಚ್ಶಾಂಭವ ಭಕ್ತಿಯೋಗ ವಿಲಸಂನಿರ್ವ್ವಾಣ ನಿತ್ಯೋತ್ಸವಾ
ಪ್ರೇಮಾನಂದ ರಸಾಭಿವರ್ದ್ಧನ ಸದಾಚಾರಕ್ರಿಯಾ ಕೌಶಲಾ
ರಾಮೋದ್ಧಾಮ ಗುಣಪ್ರಭೂತಮಹಾದೈಶ್ವರ್ಯ್ಯಾನುಭೂತಿಪ್ರಭಾ
ಧಾಮಂ ತತ್ಪರಮಂ ಪದಂ ಗುರುಪದಂ ವಂದೇ ಶಿವಾವಲ್ಲಭಾ || ೧ ||

ಅಂತ್ಯ : ಮ|| ಯಿದನಾರೋದಿದವರ್ಗೆ ಕೇಳ್ದವರಿಗುದ್ಯದ್ಭಕ್ತಿಯೋಗಕ್ರಿಯಾ
ಸ್ಪದ ಸಮ್ಯಕ್ಷರಮುಪ್ರಸಂಗ ಪರಿಪೂರ್ನ್ನಕಾಗ್ರನಿಷ್ಠಾನು ಭೂ
ತಿದು ಸಚ್ಚಿತ್ಸುಖರೂಪ ನಿಃಕಳಮಹಾಲಿಂಗೈಕ್ಯ ನಿರ್ವ್ವಾಣ ಸಂ
ಪದನಿತ್ತ್ಯತ್ವಮನೀವುದೈಯ್ಯ ಕ್ರುಪೆಯಿಂ ನೀನೆ ಶಿವಾವಲ್ಲಭಾ || ೧೦೩ ||

ಶಿವಾವಲ್ಲಭ ಶತಕ ಸಂಪೂರ್ನ್ನ ಮಂಗಲ ಮಹಾಶ್ರೀ||

ವಿಷಯ : ಭಕ್ತಿ ವೈರಾಗ್ಯಗಳ ನಿರೂಪಣೆ.

ವಿಶೇಷ : ಶಕಟರೇಫದ ಪ್ರಯೋಗವಿದೆ. ಇದೇ ಕಟ್ಟಿನಲ್ಲಿ ಮಹದೈಪುರೀಶ್ವರ ಶತಕ, ಬಸವಸ್ತೋತ್ರದ ತ್ರಿವಿಧಿಗಳೆಂಬ ಇತರ ೧೬ ಕೃತಿಗಳಿವೆ. ಇದರಲ್ಲಿ ಕೆಲವು ಸಂಸ್ಕೃತ ಗ್ರಂಥಗಳು.

1763

ಕೆ. ೩೬೯/೧೬ ಶಿವಾವಲ್ಲಭ ಶತಕ ವೃತ್ತ

೮" × ೧.೮" ಮೊಗ್ಗೆಯ ಮಾಯಿದೇವ ಸು ೧೪೩೦

೧೩೭-೧೫೪ ಪತ್ರ ೯ ಪಂಕ್ತಿ ೪೧ ಅಕ್ಷರ

ಆದಿ : ಶ್ರೀಮಚ್ಛಾಂಭವ ಭಕ್ತಿಯೋಗ ವಿಲಸನ್ನಿರ್ವಾಣಾ ನಿತ್ಯೋತ್ಸವಾ
ಪ್ರೇಮಾನಂದ ರಸಾಭಿವರ್ಧನ ಸದಾಚಾರಕ್ರಿಯಾ ಕೌಶಲಾ
ರಾಮೋದ್ದಾಮ ಗುಣಪ್ರಭೂತ ಮಹದೈಶ್ವರ್ಯನು ಭೂತಿಪ್ರಭಾ
ಧಾಮಂ ತತ್ಪರಮಂ ಪದಂ ಗುರುಪದಂ ವಂದೇ ಶಿವಾವಲ್ಲಭಾ ॥ ೧ ॥

ಅಂತ್ಯ : ಇದನಾರೋದಿದವರ್ಗ್ಗೆ ಕೇಳ್ದವರಿಗುದ್ಯದ್ಭಕ್ತಿಯೋಗಕ್ರಿಯಾ
ಸ್ಪದ ಸಂಮ್ಯಕ್ಷದಮ ಪ್ರಸಂನ ಪರಿಪೂರ್ನೈಕಾಗ್ರವಿಷ್ಟಾನು ಭೂ
ತಿದಸಚ್ಚಿತ್ಸುಖರೂಪನಿಃಖಲ ಮಹಾಲಿಂಗಯಿಕ್ಯನಿರ್ವಾಣ ಸಂ
ಪದನಿತ್ಯತ್ವಮನೀವುದಯ್ಯ ಕ್ರುಪೆಯಿಂ ನೀನೆ ಶಿವಾವಲ್ಲಭಾ ॥ ೧೨೩ ॥

ಶಿವಾಧವಶತಕ ಸಂಪೂರ್ನ್ನ ಮಂಗಳಮಹಾ ಶ್ರೀ

ವಿಷಯ : ಭಕ್ತಿ, ವೈರಾಗ್ಯಗಳ ಪ್ರತಿಪಾದನೆ.

ವಿಶೇಷ : ಈ ಗ್ರಂಥವು ಶಿಥಿಲವಾಗಿದೆ; ಆದರೆ ಸಮಗ್ರ. ಗರಿಗಳು ಅಂಚಿನಲ್ಲಿ ಮುರಿದಿವೆ. ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಗುರು, ಷಡಾಕ್ಷರಿ ಬಸವ, ಮನೋವಿಕಾರ ನಿರಸನ, ಭಕ್ತಿಬಿನ್ನಹ ರಗಳೆಗಳೂ, ಬಸವಸ್ತೋತ್ರ, ಮಿಶ್ರಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ; ಶಂಕರ ದೇವ, ಮಂತ್ರಮಹತ್ವ, ಮರುಳದೇವ, ಪ್ರಭುಲಿಂಗ ಕಂದಗಳೂ ; ಅಕ್ಷರ ಮಾಲಿಕ ಇತ್ಯಾದಿ ಗದ್ಯಗಳೂ ; ಶಿವಾಧವ, ಮಹದೈಪುರೀಶ್ವರ ಶತಕಗಳೂ ; ಮಲ್ಹಣ ಸ್ತೋತ್ರ ಎಂಬೀ ಗ್ರಂಥಗಳಿವೆ.

1764

ಕೆ.ಬಿ. ೨೭೧ ಶೀಲವಂತನ ತ್ರಿವಿದಿ ತ್ರಿವಿದಿ

೮.೨" × ೬.೬" ಶಾಂತಾರೂಢ ?

೧-೧೮ ಪತ್ರ ೨೫ ಪಂಕ್ತಿ ೩೨ ಅಕ್ಷರ

ಆದಿ : ಶೀಲವಂತನ ತ್ರಿವಿದಿ x x x

ಕಂದಪದ್ಯ॥ ಬಸವೇಶನೆ ಬಸವರಾಜನೆ
ಬಸವಂಣನೆ ಬಸವತಂದೆ ಬಸವಕೃಪಾನಿಧಿ
ಬಸವ ಪರಮೇಶ್ವರೀಶ್ವರ
ಬಸವ ಪ್ರಮಥಾದಿದೇವ ರಕ್ಷಿಸು ಬಸವಾ
ಪ್ರಥಮಂತು ಬಸವಂಣ
ದ್ವಿತಿಯಂತು ಲಿಂಗವೂ
ತೃತೀಯಂತು ತತ್ವಬ್ರಹ್ಮಾಂಡವೆಲ್ಲಾ
ಅಕಳಂಕ ಗುಣನಿಧಿ ಚಿದಾನಂದ ಬಸವಂಗೆ
ಭಕತನಾದೆನು ಗುರುವೆ ಯೋಗಿನಾಥಾ ॥ ೧ ॥

ಅಂತ್ಯ: ಸಿದ್ದಿಸುವದತಿಶಯದ ಭಕ್ತಿ ವಿ
ರುದ್ದವಿಲ್ಲದೆ ಸಾರ್ಗು ಸುಸ್ಥಿತಿ
ಸಿದ್ದದೇಶಿಕ ನಿಂನ ನಾಮಾಮೃತವದೆಂತಹುದೊ॥
ಧರಣಿ ಜಲ ವನ ಪವನವಂ
ಬರ ನಿಶಾಪತಿ ಸೂರ್ಯನಾತ್ಮಂ
ಪರಮಗಾತ್ರವೆಯಾದ ಶಂಕರ ಸಂಗವೆನಿಸಿ ಪ್ರ
ಶರಣ ತೋಂಟದ ಸಿದ್ಧಲಿಂಗನ
ಚರಣವಾರಿಜ ಯಂನ ಹೃದಯಾಂ
ಬುರುಹದೊಳಗಿರೆ ತ್ರಿವಿದಿ ಕಾವ್ಯವ ಪೇಳ್ದೆ ಮುದದಿಂದಾ ॥
ಯಿಂತೆಸವ ಗುರುಸಿದ್ಧಲಿಂಗನ
ನಂತ ಮಹಿಮೆಯ ಪೊಗಳೆ ಲೋಕದೊಳ
ನಂತನಂತರಸನೆಗಳಗರಿದೆನೆ ಸಕ್ಯವೆ ಯನಗೆ
ಶಾಂತರೂಪನ ಪಾದಪಂಕಜ
ವಿಂತು ಯಂನಯ ಹೃತ್ಕಮಲದೊಳು
ಸಂತಸದೋಱರೆ ಶೀಲವಂತರ ತ್ರಿವಿದಿಲಕ್ಷಣದಿಂ ॥
ಯಿದು ವಿಮಲಗುರು ತೋಂಟದಾರ್ಯನ
ಪದಕಮಲ ಷಟ್ಚರಣವೆನಿಸುವ
ಸದಮನ ಸನ್ಮಲ್ಲಣಾರ್ಯನ ಕುಲಶರದಿ ಚಂದ್ರಾ
ಪದುಳದಿ ಶಾಂತಾರೂಡ ಮುದದಿಂ
ವಿದಿತ ಶೀಲವಂತರ ಪುರಾಣವ
ಮುದದಿ ವರದನು ವೋದಿ ಕೇಳ್ದವರಿಗಿಷ್ಟಾರ್ಥವೊಂದುವದೂ ॥

ಅಂತೂ ಶೀಲವಂತನ ತ್ರಿವಿದಿ ಸಂಪೂರ್ನ ಮಂಗಳಮಹಾ ಜಯ ಮಂಗಳ ಮಹಾ ||

ವಿಷಯ : ಬಸವಾದಿ ಶಿವಶರಣರ ಸ್ತೋತ್ರ.

ವಿಶೇಷ : ನೋಡಿ ಅಕ್ಷರ. ಈ ತ್ರಿವಿದಿಯಲ್ಲಿ ನಾಲ್ಕು ಸ್ಥಲಗಳಿವೆ. ಮೊದಲನೆಯ ಸ್ಥಲವೇ ಸಿದ್ಧರಾಮನ ಬಸವಸ್ತೋತ್ರದ ತ್ರಿವಿದಿ. ಎರಡನೆಯದು ಅಷ್ಟಾವರಣ ತ್ರಿವಿದಿ. ಇದರ ಅಂತ್ಯ ಈ ರೀತಿ ಇದೆ "ಇಂತು ಶೀಲವಂತನ ತ್ರಿವಿದಿಯೊಳಗೆ ಸಂತತ ಅಷ್ಟಾವರಣವಂನು ವಿವರಿಸಿದೆನ್ನೈ ಕಂತುಹರ ಸಿದ್ಧರಾಮೇಶ್ವರನೆ ಕೃಪೆ ಮಾಡು ಶಾಂತಆರೂಢನೆ ಯೋಗಿನಾಥಾ || ೧೩೨ || ಅಂತು ಶೀಲವಂತ ತ್ರಿವಿದಿ. ೨ಕ್ಕೆ 257ಕಂ ಮಂಗಳ ಶ್ರೀ" ಮೂರನೆಯದು ಮಿಶ್ರಸ್ತೋತ್ರ ತ್ರಿವಿದಿ. ಇದಾದ ಬಳಿಕ ಗುರುಲಿಂಗಾರ್ಯ ಮಾಲಿಂಗಾಂಗಸಂಗ ಸುಲಿಂಗ ಪ್ರಣಮಸಂಯೋಗದ ತ್ರಿವಿದಿ ಇದೆ. ಇದರ ಅಂತ್ಯದಲ್ಲಿ "ಯಲ್ಲಾ ಪುರಾತನರ ಮೆಲ್ಲಡಿ ನಿಜಹೃದಯದಲ್ಲಿ ತಳದಗಲದಿರು ಮಗನೆಯೆಂದು ಆರೂಡಶಾಂತನನು ಸಲಹಿದಿರಿ ಗುರುವೆ || ಕಂದ || ಈ ಶೀಲವಂತತ್ರಿವಿದಿಸ್ತವವ ರಾಗದಿ ಬರದೋದಿ ಕೇಳಿ ತಿಳಿದರ್ಥೈ ಸಲ್ಭೋಗ ಮೋಕ್ಷಗಳ್ ಪರಶಿವಯೋಗಾನುಭಾವ ಪ್ರಸಾದ ಸುಖ ದೊರಕೊಳ್ಳುಂ|| ಅಂತು ಶೀಲವಂತನ ತ್ರಿವಿದಿ ನಾಲ್ಕು ಸ್ಥಲಕ್ಕೆ ಳಳ ಪದಕಾಂ ಮಂಗಳಮಹಾ ಶ್ರೀ ಆಮೇಲೆ ಶಾಂತಾರೂಢ ತಮ್ಮ ಗುರು ತೋಂಟದ ಸಿದ್ಧೇಶ್ವರನ ಸ್ತೋತ್ರವೂ ಪೇಳಿರುತ್ತಾರೆ". ಎಂದಿದ್ದು ಮುಂದೆ ತೋಂಟದ ಸಿದ್ಧೇಶ್ವರನ ಸ್ತುತಿ ಇದೆ.

1765

ಕೆ. ೧೮೮/೭	**ಶೀಲವಂತಯ್ಯನ ತ್ರಿವಿದಿ (ಸಟೀಕು)**	**ತ್ರಿವಿದಿ**
೧೭.೬"×೨"	**ಶೀಲವಂತಯ್ಯ**	**ಸು. ೧೧೬೦**
೪೧-೫೬ ಪತ್ರ	**೧೧ ಪಂಕ್ತಿ**	**೯೨ ಅಕ್ಷರ**

ಆದಿ : ಶ್ರೀಗುರುಬಸವಲಿಂಗಾಯ ನಮ | ಶ್ರೀ ಐಶ್ವರಸ್ಯ ಸಮಗ್ರಸ್ಯ | ವೀರಸ್ಯಯಶಃ ಶ್ರೀಯಃ | ಜ್ಞಾನವೈರಾಗ್ಯಯೋಶ್ಚೈವ x x x ಷಡ್ಗುಣೈಶ್ವರ್ಯವನುಳ್ಳಂಥಾ | ಗುರು ಶಿಷ್ಯನ ಅಜ್ಞಾನಾಂಧಕಾರಕ್ಕೆ x x x x ಜೆಟ್ಟಿಕಾಯಕದ ಶೀಲವಂತ್ಯೈಯನ ತ್ರಿವಿದಿ ||

ಕಂದ ॥ ನಮುವಾತ್ಮಲಿಂಗಶಿವಯನ
ಅಮಲತರದ ಸಂಗ ಅಯುಗಳೆರಡಾರ್ನಂ ಚಿ
ದ್ರಮಣಲಿಂಗಾಂಗಸಂಗ
ಕ್ರಮುವಾತ್ಮ ಸುಲಿಂಗಪ್ರಣವ ಸಂಯ್ಯೋಗಮಿದುಂ ॥

ಟೀಕೆ ॥ ನಮು । ನ ಕಾರ । ಮುಕಾರಂಗಳೆರಡಾರ್ನ್ನ। ಆತ್ಮ । ಜೀವಾತ್ಮ ಸ್ವರೂಪವಹಂಥ ಅಂಗಸ್ಥಲವು । ಶಿವಯೆನಲು । ಶಿಕಾರವಕಾರಂಳಾದೊಡೆ। ಲಿಂಗ। ಪರಮಾತ್ಮ ಸ್ವರೂಪವಹಂಥಾ ಲಿಂಗಸ್ಥಲವು । ಅಯುಗಳೆರಡರ್ನ್ನಂ। ಅಕಾರಯಕಾರವೆಂಬುಭಯಾಕ್ಷರಂಗಳೆ । ಅಮುಲತರದ ಸಂಗ । ನಿರ್ಮ್ಮಲ ನಿರತಿಶಯವಾದ ನಿಜಭಕ್ತಿಯಂ ಕೊಡುವಂಥಾ । ಸಂಬಂಧವು । ಚಿದ್ರ ಮಣ । ಚಿಚ್ಛಕ್ತಿ ವಲ್ಲಭನಾದಂಥಾ । ಪ್ರಣವ । ಓಂಕಾರ । ಪೂರ್ವ್ವಕ । ಮಾದ ಷಡಕ್ಷರವು । ಕ್ರಮುಂ । ತರುವಾಯದಿಂದೆ । ಸುಲಿಂಗಂ । ಲೇಸಾ ದಂಥಾ ಶಿವನೆ । ಲಿಂಗಂ । ಲಿಂಗಸ್ಥಲವು । ಆತ್ಮ । ಜೀವಾತ್ಮನೆ । ಅಂಗ ಸ್ಥಲವು । ಸಂಯೋಗಂ । ಆ ಜೀವಾತ್ಮಗಳೆರಡರೈಕ್ಯವೆ । ಸಂಗಂ । ಆ ಲಿಂಗಾಂಗವೆರಡರ ಸಂಬಂಧವು । ಯಿದಂ । ಯೀ ಶಿವಾತ್ಮೈಕ್ಯವೆ ಲಿಂಗಾಂಗ ಸಂಯೋಗವೆಂದು ಶಿವಾಗಮುಂಗಳಲ್ಲಿ ಹೇಳುತ್ತಿಹವೆಂದು ಶ್ರೀಗುರು ಶಿಷ್ಯಂಗೆ ನಿರೂಪಿಸುತ್ತಿಹನೆಂಬುದರ್ತ್ಥ ॥ ೧ ॥

ತ್ರಿವಿದಿ ॥ ಶ್ರೀ ಗುರುದೇವಂಗೆಯೂಗಪಾತೀತಂಗೆ
ನಾಗಕಂಕಣಗೆ ಯತಿವರ ಮುರುಳಾರ್ಯ್ಯಂಗೆ
ರಾಗದಿಂದೊಂಮೆ ಶರಣೆಂಬೆ ॥

ಟೀಕೆ॥ ಶ್ರೀಗುರುದೇವಂಗೆ ಜ್ಞಾನೈಶ್ವರ್ಯವನುಳ್ಳ ಸದ್ಗುರುಸ್ವಾಮಿಗೋಸ್ಕರವು॥

ಅಂತ್ಯ : ॥ ೧೧೨ ॥ ಯೀ ಗುರುಸ್ತವವನಾವವ
ರಾಗದಿ ಬರದೋದಿಕೇಳಿ ತಿಳಿದರ್ಥೈಸಲು
ಭೋಗಮೋಕ್ಷಗಳು ಪರಶಿವ
ಯೋಗಾನುಭಾವಪ್ರಸಾದ ಸುಖ ದೊರಕೊಳ್ಳುಂ ॥

ಟೀಕೆ ॥ ಯೀ ಗುರುಸ್ತವವ । ಯೀ ಪ್ರಕಾರವಾದ ಗುರುಸ್ತೋತ್ರವನು । ಆವನಾನೊರ್ವ್ವನು । ರಾಗದಿಂ ಸಂತೋಷದಿಂದೆ ಬರೆದು । ವೋಲೆಗಳಲ್ಲಿ ಲಿಖಿತವ ಮಾಡಿ । ವೋದಿ ಪಾಠವ ಮಾಡಿ । ಕೇಳಿ । ಕರ್ನ್ನಪೂರಿತವಾಗಿ ಲಾಲಿಸಿ । ತಿಳಿದು । ಗುರುಮುಖದಿಂದಱಿದು । ಅರ್ತ್ಥೈಸಲ್। ಕೇಳಿದವರಿಗೆ ವುಪದೇಶವ ಮಾಡಲು । ಭೋಗ । ಬರೆದವಂಗೆ ಯಿಹಲೋಕದಲ್ಲಿಯ

ಮುಕ್ತಿಯು । ಪರಶಿವಯೋಗ । ಕೇಳಿದವಂಗೆ ಪರಶಿವನಲ್ಲಿಯ ಕೂಟವು । ಅನುಭವ । ತಿಳಿದವಂಗೆ ಪರಮುಸೂಕ್ಷ್ಮ ಜ್ಞಾನವು । ಪ್ರಸಾದಸುಖ ದೊರೆಗೊಳ್ಳುಂ । ಅಥವ ಮಾಡಿದವಂಗೆ ಪ್ರಸಂನ ಪ್ರಸಾದದ ಸುಖವು ದೊರೆಕೊಂಬುದು । ಆತ್ಮ ಲಿಂಗಪ್ರಣವ ಸಂಯೋಗಸ್ಥ್ವಥ ಸಂಪೂರ್ಣ್ನ ಸಮಾಪ್ತ ಮಂಗಳಮಹಾಶ್ರೀ

ವಿಷಯ : ಲಿಂಗಾಂಗ ಸಾಮರಸ್ಯ ನಿರೂಪಣೆ.

ವಿಶೇಷ : ಇದರೊಂದಿಗೆ ಷಡ್ವಕ್ತ್ರ ಸ್ತೋತ್ರದ ಟೀಕು ಮೊದಲಾದ ಇತರ ೧೫ ಗ್ರಂಥ ಗಳಿವೆ. ಶಕಟರೇಫ ಪ್ರಯೋಗವಿದೆ.

1766

ಕೆ ೩೨೩/೪	ಶೀಲವಂತಯ್ಯನ ತ್ರಿವಿದಿ	ತ್ರಿವಿದಿ
೫.೪" × ೨"	ಶೀಲವಂತಯ್ಯ	ಸು. ೧೧೬೦
೪೫-೫೨ ಪತ್ರ	೧೧ ಪಂಕ್ತಿ	೩೦ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ಶೀಲವಂತಯ್ಯನ ತ್ರಿವಿಧಿ ॥

ಕಂದ ॥ ನಮವಾತ್ಮಲಿಂಗ ಶಿವಯೆನ
ಲಮಲತರದ ಸಂಗ ಅಯಗಳೆರಡಾರ್ನ್ನಂ ಚಿ
ಧ್ರಮಣ ಲಿಂಗಾಂಗ ಸಂಗ
ಕ್ರಮವಾತ್ಮ ಸುಲಿಂಗ ಪ್ರಣಮ ಸಂಯೋಗಮಿದಂ ॥

ತ್ರಿವಿಧಿ ॥ ಶ್ರೀಗುರು ದೇವಂಗೆಯಾಗಮತೀತಂಗೆ
ನಾಗಕಂಕಣಗೆ ಯತಿವರ ಮರುಳಾರ್ಯ್ಯಂಗೆ
ರಾಗದಿಂದೊಂಮೆ ಶರಣೆಂಬೆ ॥ ೧ ॥

ಅಂತ್ಯ : ಯೆಲ್ಲಾ ಪುರಾತನರಾ ಮೆಲ್ಲಡಿಯ ನಿಜಹೃದಯಾ
ದಲ್ಲಿ ತಳೆದಗಲದಿರು ಮಗನೆಯೆಂದು ಚೆಂನ
ಮಲ್ಲನನು ಸಲಹಿದಿರಿ ಗುರುವೆ ॥ ೧೧೧ ॥

ಕಂದ ॥ ಈ ಗುರುಸ್ತವವನಾವಾವ
ರಾಗದಿಂ ಬರದೋದಿ ಕೇಳಿ ತಿಳಿದರ್ತ್ತ್ಯರಸ

ಲ್ಭೋಗ ಮೋಕ್ಷಗಳು ಪರಶಿವ
ಯೋಗಾನುಭಾವ ಶ್ರಸಾದಸುಖ ದೊಱಕೊಳ್ಗುಂ || ೧೧೨ ||

ಆತ್ಮಲಿಂಗ ಪ್ರಣಮಸಂಯೋಗಸ್ಥಲ ಸಂಪೂರ್ನ್ನಮಂಗಲಮಹಾಶ್ರೀ ||

ವಿಷಯ : ಲಿಂಗಾಂಗ ಸಾಮರಸ್ಯ ನಿರೂಪಣೆ.

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಶಂಕರದೇವರ ಕಂದ, ಮಂತ್ರ ಮಹತ್ವದ ಕಂದ ಮುಂತಾದ ಇತರ ೧೬ ಗ್ರಂಥಗಳಿವೆ. ಇವುಗಳಲ್ಲಿ ಕೆಲವು ಸಂಸ್ಕೃತ ಕೃತಿಗಳಾಗಿವೆ.

1767

ಕೆ. ೩೬೯/೯ **ಶೀಲವಂತಯ್ಯನ ತ್ರಿವಿದಿ** ತ್ರಿವಿದಿ

೮" × ೧.೮" ಶೀಲವಂತಯ್ಯ ಸು. ೧೧೬೦

೫೮-೬೬ ಪತ್ರ ೯ ಪಂಕ್ತಿ ೪೧ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಯಾ ನಮಃ || ಆತ್ಮಲಿಂಗ ಪ್ರಣವ ಸಂಯೋಗಸ್ಥಲ || ಲವಂತಯ್ಯನ ತ್ರಿವಿಧಿ ||

ಕಂದ|| ನಮವಾತ್ಮಲಿಂಗ ಶಿವಯೆನ
ಲಮಲತರದ ಸಂಗಯ್ಯಗಳೆರಡಾರ್ನ್ನಂ ಚಿ
ದ್ರಮಣ ಲಿಂಗಾಂಗ ಸಂಗ
ಕ್ರಮವಾತ ಸುಲಿಂಗಪ್ರಣವ ಸಂಯೋಗಮಿದಂ ||

ತ್ರಿವಿಧಿ || ಶ್ರೀಗುರುದೇವಂಗೆ ಆಗಮತೀತಂಗೆ
ನಾಗಕಂಕಣಗೆ ....
... . ರ್ಯಂಗೆ ರಾಗದಿಂದೊಂಮೆ ಶರಣೆಂಬೆ || ೧ ||

ಅಂತ್ಯ : ಯೆಲ್ಲಾ ಪುರಾತನರ ಮೆಲ್ಲಡಿಯ ನಿಜ ಹೃದಯದಲ್ಲಿ ತಳದಗಲ | ದಿರು ಮಗನೆಯೆಂದು | ಚೇನಮಲ್ಲರನು ಸಲಹಿದಿರಿ ಗುರುವೆ
ಈರುಗುಸ್ತವವನಾವವ
ರಾಗದಿ ಬರದೋದಿ ತಿಳಿದತ್ತೈರ್ಸಲ್
ಭೋಗ ಮೋಕ್ಷಗಳು ಪರಶಿವ
ಯೋಗಾನುಭವ ಪ್ರಸಾದ ಸುಖರದೊರಕೊಳುಂ || ೧೧೧ ||

ಆತ್ಮಲಿಂಗ ಪ್ರಣವಸಂಯೋಗಸ್ಥಲದ ಸೀಲವಂತಯ್ಯನ ತ್ರಿವಿಧಿ ಸಮಾಪ್ತ
ಮಂಗಳ ಮಹಾಶ್ರೀ

ವಿಷಯ : ಲಿಂಗಾಂಗ ಸಾಮರಸ್ಯ ನಿರೂಪಣೆ-

ವಿಶೇಷ : ಶಕಟರೇಫದ ಬಳಕೆಯಿದೆ. ಇದೇ ಕಟ್ಟಿನಲ್ಲಿ ಗುರು, ಷಡಾಕ್ಷರಿ, ಬಸವ, ಮನೋವಿಕಾರ ನಿರಸನ, ಭಕ್ತಿಬಿನ್ನಹ ರಗಳೆಗಳೂ, ಬಸವಸ್ತೋತ್ರ, ಮಿಶ್ರ ಸ್ತೋತ್ರ, ಅಷ್ಟಾವರಣ ತ್ರಿವಿದಿಗಳೂ , ಶಂಕರದೇವ, ಮಂತ್ರ ಮಹತ್ವ, ಮರುಳದೇವ, ಪ್ರಭುಲಿಂಗ ಕಂದಗಳೂ, ಅಕ್ಷರಮಾಲಿಕ, ನಮಸ್ಕಾರ, ಷಟ್ಸ್ಥಲ, ಅಕ್ಷರಾಂಕನ ಗದ್ಯಗಳೂ, ಶತಕತ್ರಯ, ಮಲ್ಹಣಸ್ತೋತ್ರ ಈ ಗ್ರಂಥಗಳೂ ಇವೆ.

1768

ಕೆ. ೬೩೩	**ಶುಕಮುನಿ ಚರಿತ್ರೆ**	**ವಾರ್ಧಕ ಷಟ್ಪದಿ**
೧೪.೧ × ೧.೯″	?	?
೧೮-೨೦೧ ಪತ್ರ	೧೦ ಪಂಕ್ತಿ	೬೦ ಅಕ್ಷರ

ಆದಿ : ಶುಕಮುನಿಯ ಚಾರಿತ್ರ ||

ಪಲ್ಲ|| ಭೂಮಿಯೊಳು ಶುಕನ ತಪಮಂ ಕೆಡಿಸಲೆಂದು ಸೂ
ತ್ರಾಮ ಕಳುಹಲು ರಂಭೆ ಬಂದಾ ಯತೀಶ್ವರನ
ಸಾಮಾರ್ಥನಿಮೆಯಂ ಕಾಣಲರಿಯದೆ ವಿರತಿಯಾಗಿ ಮರಳಿದಳು
ದಿವಿಗೇ ||

ಅಂತ್ಯ : ತುಂಗಕುಚರಂಭೆ ಸುರಪನ ಮನದ ಭೀತಿಯಂ
ಪಿಂಗಿಸಲು ಸಂತುಷ್ಟಮಾಗಿ ಲಲಿತಾಂಗಿಗೊಲಿ
ದಂಗೋಚಿತವನಿತ್ತು ಬೋಳೈಸಿ ಸುರನರೋರಗ ಗರುಡ ಗಂಧರ್ವರಾ
ವಂಗಡದ ಮಧ್ಯದೊಳು ಸುರರಾಜನಖಿಳ ಭೋ
ಗಂಗಳಂ ಭೋಗಿಸುತ ಸುಖದೊಳಿರ್ದ್ದಂ ಸರ್ವ
ಮಂಗಳಂ ಪ್ರೇಮಿ ಸೊಂನ್ನಲಾಪುರದ ಸೋಮೇಶ ಲಿಂಗನಂಘ್ರಿಯ
ನೆನವುತಾ || ೨೩ ||

ಶುಕಮುನಿಚಾರಿತ್ರ ಸಂಪೂರ್ನಂ || ಮಂಗಳಂ ||

ವಿಷಯ : ರಂಭಾಶುಕ ಸಂವಾದ.

ವಿಶೇಷ: ಈ ಕಟ್ಟಿನಲ್ಲಿ ಕೆ. ೬೩೪ ಮತ್ತು ೬೩೫ ನೆಯ ನಂಬರಿನ ಇಷ್ಟಲಿಂಗ ಚಾರಿತ್ರ ಮತ್ತು ಪುನರ್ದೀಕ್ಷಾರಗಳಿಗಳೆಂಬ ಗ್ರಂಥಗಳಿವೆ.

1769

ಕೆ.ಎ. ೧೦೧	**ಶುಕಸಪ್ತತಿ**	ಗದ್ಯ
೧೨.೬"×೪.೧"	ಚಿಕ್ಕುಪಾಧ್ಯಾಯ	೧೭೦೦
೧–೩೫೭ ಪತ್ರ	೧೯ ಪಂಕ್ತಿ	೨೪ ಅಕ್ಷರ

ಆದಿ: ಸುಖಸಪ್ತತಿ । ದೇವದಾಸನಕಥೆ.

ವೃತ್ತ—ಶ್ರೀರಮಣನಂ ಕರಿಪ್ರವರನಂ ಪೊರೆಯುಲ್ ಖಗರಾಜವೇಗಮಂ
ಪಾರದೆ ಭಾಸ್ವದೂರುಯುಗದಂದವನಂದಲಿರುಂಕಿಬಂದತಿ
ಕ್ರೂರವೆನಿಪ್ಪನಿರಚರಮುಂಮ್ಮಗೆ ಮರ್ಧಿಸಿ ಭಕ್ತಾಜಾಲಮಂ
ದಾರನೆನಿಪ್ಪ ಹಸ್ತಿಗಿರಿವಲ್ಲಭನಿಗೆ ಭವಪಂಕಜಾತ ಭವ
ಮುಖ್ಯಸುರೇಶ್ವರ ನುತ ಚರಣಾಂಬುಜಮಂ
ಹರಿರಾಣಿಯನಬ್ಜಪಾಣಿಯಂ ನುತಿಗೆಯ್ವಂ ॥ ೧ ॥

X X X X

ಬಗೆಗೊಂಬೀ ಪುರಕುತ್ಸಗೋತ್ರಭವನಾರ್ಯ್ಯಂ ತಾಂ ಯಜುರ್ವೇಧಿ ಸಾ
ತ್ವಾಗುಣಂ ಸನ್ಮತಿರಂಗರಾಜನುದರಾಂಭೋರಾಶಿಸಂಜಾತನೀ
ಜಗದೊಳ್ ತೀವಿರೆ ಕೀರ್ತಿಕಾಮುದಿಯನಲಂಪಿಂ ಚಿಕ್ಕುಪಾದ್ಯಾಯ ಸಂ
ನ್ಮೃಗಲಕ್ಷ್ಮಂ ಘನ ಸಂಸ್ಕೃತೋಕ್ತಿಗಳೆನೆಲ್ಲನೊರ್ೞ್ಪಿನಂ ಮಾಡಿದಂ॥೨೧॥

ಕಂ ॥ ಸುಖಸಪ್ತತಿಯಂ ಪದೆದಾ
ಸುಕವಿತ್ವದುರೀಣ ಚಿಕ್ಕುಪಾದ್ಯಾಯಸುದೀ
ಮುಕರಂ ಕಂನ್ನಡದಿಂದಾ
ರ್ಯಕದಂಬಂ ಮೆಚ್ಚಿ ಪೇಳಲುದ್ಯೋಗಿಸಿದಂ ॥ ೨೨ ॥

ಅಂತ್ಯ: ಹೀಗೆಂದು ವಶಿಷ್ಟರು ಪೇಳುತ್ತಿರಲು ದೇವರ್ಕ್ಕಳ ಮಧ್ಯದಲ್ಲಿ ಗುರುವುಯದ್ದು ನಮಸ್ಕರಿಸಿ ಶೀಗ್ರಶೀಗ್ರವಾಗಿ ಜಾಂನವಿನಯ ತೀರವನ್ನೈದಿದನೂ X X X X ಯೀ ಗ್ರಂತವಂ ಸಮಾಪ್ತಿಹಿತಚಿತ್ತನಾಗಿ ಕೇಳುತ್ತಾಯಿದ್ದಾನೆ ಅವರು ಸರ್ವ್ವಪಾಪ ವಿಮೋಚನನಾಗಿ ಪರಮಪದವಾದ ವಿಷ್ಣುಸ್ಥಾನವ ನೈದುವರೂ ಯಂದು ಪೇಳ್ದಲ್ಲಿಗೆ ಯಪ್ಪತ್ತನೆಕಥೆ ಸಮಾಪ್ತ ಮಂಗಳ

ಮಹಾಶ್ರೀ x x x x ಶ್ರೀ ಚಿಕ್ಕುಪಾಧ್ಯಾಯವಿರಚಿತಮಾದ ಸುಖ ಸಪ್ತತಿಯೊಳೆಪ್ಪತ್ತನೆ ದಿವಸದ ಕಥೆ ಸಮಾಪ್ತಮಂಗಳಮಹಾಶ್ರೀ ||

ವಿಷಯ : ನೀತಿ ಕಥೆಗಳು.

ವಿಶೇಷ : ೨೫೭ನೆಯ ಕ್ರಮಸಂಖ್ಯೆಯ ಎರಡು ಪತ್ರಗಳಿವೆ. ೩೦೫ನೆಯ ಪತ್ರದ ಒಂದು ಭಾಗ ಬರಿದಾಗಿದೆ. ಪತ್ರ ಸಂಖ್ಯೆ ಕೆಲವುಕಡೆ ತಪ್ಪಾಗಿ ಹಾಕಿದೆ.

1770

ಕೆ.ಎ. ೧೫೩	**ಶುಕಸಪ್ತತಿ**	ಗದ್ಯ
೧೨.೫" × ೭.೮"	ಚಿಕ್ಕುಪಾಧ್ಯಾಯ	೧೭೦೦
೧-೨೦೮ ಪತ್ರ	೨೫ ಪಂಕ್ತಿ	೩೨ ಅಕ್ಷರ

ಆದಿ : ಶ್ರೀ x x ಶುಕಸಪ್ತತಿಕಥೆ ಬರೆಯುವದಕ್ಕೆ ಶುಭಮಸ್ತು x x

ಪದನೂ || ಶ್ರೀಶಿವನಸುಕುಮಾರ ಸಕಲ ಸು
ರಾಸುರಾರ್ಚಿತಪಾದಪದ್ಮ ವಿ
ಶೇಷಗುಣಮತಿ ವಿಮಲಗಾತ್ರ ವಿಚಿತ್ರಚಾರಿತ್ರಾ
ಮೂಷಕಪ್ರಿಯ ಮುದದಿಮರ್ದನ
ಪಾಶುಮೋದಕ ಪರಶುಧರ ವಿ
ಘ್ನೇಶ ದಯದಿಂದೊಲಿದು ಕರುಣಿಸು ಮತಿಗೆ ಮಂಗಳವಾ || ೧ ||

x x x x

ಹರಕವಿಗಳಂಘ್ರಿಯನು ಧ್ಯಾನಿಸಿ
ಹರಿಕವಿಗಳಡಿಗೆರಗಿ ಮತ್ತಾ
ವರಕವಿಗಳಿಗೆ ನಮಿಸಿ ಗುರುಹಿರಿಯರ ಕಟಾಕ್ಷದಲೀ
ಹರುಷದಿಂ ಶುಕನಗ್ನಿಭೂಭುಜ
ಗರುಹಿದರೆ ಕೌಶಲ್ಯಕಥೆಯನು
ವಿರಚಿಸುವೆನಿನ್ನಾದರದಿ ಲಾಲಿಪುದು ಸಜ್ಜನರೂ || ೧೪ ||

ಅಂತ್ಯ : ಯಂಬದಾಗಿ ವಸಿಷ್ಟರಾದಂಥಾ ಋಷಿಯು ಪೇಳುತ್ತಿರಲಾ ಸಮಯದಲ್ಲಿ ದೇವರ್ಕಳ ಮಧ್ಯದಲ್ಲಿ ಯಿದ್ದಂಥಾ ಗುರುವು ಯೆದ್ದು ನಮಸ್ಕರಿಸಿ ಅಲ್ಲಿಂದಾ ಗಂಗಾತೀರವಂನ್ಯೆದಿದಂಥಾವನಾದನೂ । ಯಿತ್ತಲಾ ಯಿಂದ್ರಾದಿಸಕಲ ದೇವರ್ಕಳೂ ತಂಮ ತಂಮ ಸ್ಥಾನಂಗಳಿಗೆ ಬಿಜಯಂಗೈದರೂ । ಯಾವ

ವನು ಯೀ ಗ್ರಂಥವಂನು ಸವಾಹಿತಚಿತ್ತನಾಗಿ ಕೇಳುತ್ತಾಯಿದ್ದಾನೋ x x x ಶ್ರೀ ಮಹಾವಿಷ್ಣುವಿನ ಸ್ನಾನವಂನೈದುವರೂ ಯಂಬದಾಗಿ ಪೇಳ್ದಲ್ಲಿಗೆ ಇಂತು ಕರ್ನಾಟಕಭಾಷಾವಿರಚಿತವಾದ ಶುಕಸಪ್ತತಿಯಲ್ಲಿ ಯಪತ್ತೊಂದನೆ ದಿವಸದ ಕಥೆಗೆ ಜಯಮಂಗಳಾ। ಗದ್ಯಾ ॥ ಚತುರ್ಮುಖ ಶಂಕರಪುರಂಧರಪ್ರಮುಖ x x x ಚಿಕ್ಕುಪಾಧ್ಯಾಯ ವಿರಚಿತಮಪ್ಪ ಶುಕಸಪ್ತತಿಯೊಳ್ ಯೆಪತ್ತು ಕಥೆಯಂನ್ನು ಸವಿಸ್ತಾರವಾಗಿ ಸಂಪೂರ್ನ ವಾಗಿಯಿಥೆ ಜಯಮಂಗಳಾ ॥

ವಿಷಯ : ನೀತಿ ಕಥೆಗಳು.

ವಿಶೇಷ : ಕೆಲವುಕಡೆ ಚಿತ್ರಗಳಿವೆ.

1771

ಕೆ. ೨೭೭	**ಶುಕಸಪ್ತತಿ**	**ಭಾಮಿನೀಷಟ್ಪದಿ**
೧೩"×೧.೯"	?	?
೧-೨೧೩ ಪತ್ರ	೯ ಪಂಕ್ತಿ	೬೨ ಅಕ್ಷರ

ಆದಿ : ಶುಕಸಪ್ತತಿಯ ಪುಸ್ತಕವ ಬರೆವದಕ್ಕೆ ಶುಭಮಸ್ತು!'

ಶ್ರೀ ಶಿವನ ಸುಕುಮಾರ ಸಕಲ ಸು
.... ರಾರ್ಚಿತ ಪಾದಪದ್ಮ ವಿ
ಶೇಷಗುಣಯುತ ವಿಮಲಗಾತ್ರ ವಿಚಿತ್ರ ಚಾರಿತ್ರಾ
ಮೂಷಕಪ್ರಿಯ ಮುದವಿವರ್ಧನ
ಪಾಶುಮೋದಕ ಪರಸುಧರ ವಿ
ಘ್ನೇಶ ದಯದಿಂದೊಲಿದು ಕರುಣಿಸು ಮತಿಗೆ ಮಂಗಳವಾ ॥ ೧ ॥

ಅಂತ್ಯ : ಅನಲನೃಪನಾ ಕ್ಷತ್ರಿಯಾಂಗವೆ
ವಿನುತ ಯಜ್ಞೇಶ್ವರನವೋಲ್ ಮಿಗೆ
ಮಿನುಗುತ್ತತಿವೇಗದಲಿ ತಗರಿನ ಮೇಲೆಲೆ ಕಳದೂ
ಘನಹರುಷದಿಂ ತನ್ನ ಲೋಕದ
ನೆನಹಿಗಿಂದ್ಯೆದಿದನು ಕೇಳಿರೆ
ಯನಲು ಸಜ್ಜನರದಿಕ ಹರುಷವ ತಾಳಿ ನುತಿಸಿದರೂ ॥ ೩೬ ॥

ವೇದಶಾಸ್ತ್ರಪುರಾಣದರ್ಥಗ
ಳಾದಿಗೊಂಡಿಹವೀ ಕೃತಿಯೊಳದ
ನಾದರಿಸಿ ಕೇಳ್ದವರಭೀಷ್ಟಸಿಧಿಯಾದಪುದೂ
ಸಾಧರಧಿ ಕೇಳ್ವರಿಗೆ ಪರಮ ವಿ
ನೋದವಾಗಿಹುದೀ ಕೃತಿಗೆ ಸಮ
ವಾದ ಕಥೆವಿಲ್ಲೆಂದು ಕೊಂಡಾಡುವರು ಕೋವಿದರೂ ॥ ೩೭ ॥

ಅಂತೂ ಸುಕಸಪ್ತತಿ ಸಂಧಿ ೭೦ಕ್ಕಂ ಪದನೂ ಸಾ ೪೯೩೧ಕ್ಕಂ ಜಯಮಂಗಳ ಮಹಾಶ್ರೀ ॥ x x ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷ ೧೬೬೫ನೆ ಸಂದ ರುಧಿರೋದ್ಗಾರಿ ಸಂವತ್ಸರದ ಬ ೧೨ಲ್ಲೂ x x x ಹರದನಹಳ್ಳಿಯ ಸ್ಥಳದಲು x x ದೇವೈಯನವರ ಪುತ್ರನಾದ ಅಕ್ಕರಸೈಯನು ಬರದ ಸುಕಸಪ್ತತಿಯ ಪುಸ್ತಕ ಸಮಾಪ್ತ ಸಂಪೂರ್ಣ.

ವಿಷಯ : ನೀತಿ ಕಥೆಗಳು.

ವಿಶೇಷ: ಪುಸ್ತಕ ಶಿಥಿಲ. ೧೭,೧೨೨ನೆಯ ಕ್ರಮ ಸಂಖ್ಯೆಯ ಎರಡೆರಡು ಪತ್ರಗಳಿವೆ. ೧೯ನೆಯ ಪತ್ರ ಲುಪ್ತ.

1772

ಕೆ. ೩೪೪	ಶುಕಸಪ್ತತಿ	ಭಾಮಿನೀಷಟ್ಪದಿ
೧೩.೩"×೨.೧"	?	?
೧-೨೯೪ ಪತ್ರ	೯ ಪಂಕ್ತಿ	೫೦ ಅಕ್ಷರ

ಆದಿ : ಶ್ರೀ x x ಶುಕಸಪ್ತತಿ ಕಥೆ
ಶ್ರೀ ಶಿವನ ಕುಮಾರ ಸಕಲ ಸು
ರಾಸುರಾರ್ಚಿತ ಪಾದಪದ್ಮ ವಿ
ಶೇಷಗುಣಯುತ ವಿಮಲದಾತ್ರ ವಿಚಿತ್ರ ಚಾರಿತ್ರಾ
ಮೂಷಕಪ್ರಿಯ ಮುದವಿವರ್ಧನ
ಪಾಶಮೋದಕಪರಶುಧರ ವಿ
ಘ್ನೇಶ ದಯದಿಂದೊಲಿದು ಕರುಣಿಸು ಮತಿಗೆ ಮಂಗಳವಾ ॥ ೧ ॥

x x x x

ಹರಕವಿಗಳಂಘ್ರಿಯನು ಧ್ಯಾನಿಸಿ
ಹರಿಕದಗಳಡಿಗೆರಗಿ ವತ್ತಾ
ವರಕವಿಗಳಿಗೆ ನಮಿಸಿ ಗುರುಹಿರಿಯರ ಕಟಾಕ್ಷದಲಿ

ಹರುಷದಿಂ ಶುಕನಗ್ನಿಭೂಭುಜ
ಗರುಹಿದತಿ ಕೌಸಲ್ಯ ಕಥೆಯನು
ವಿರಚಿಸುವೆನಿದನಾದರದಿ ಲಾಲಿಪುದು ಸಜ್ಜನರೂ ॥ ೧೪ ॥

ಅಂತ್ಯ : ವೇದ ಶಾಸ್ತ್ರ ಪುರಾಣದರ್ತ್ಥಗ
ಳಾದಿಗೊಂಡಿಹದೀ ಕೃತಿಯೊಳಿದ
ನಾದರಿಸಿ ಕೇಳ್ದವರಭೀಷ್ಟ ಸಿದ್ಧಿಯಾದಪುದೂ
ಹಾದರದ ಕಥೆಯಲ್ಲ ಪರಮ ವಿ
ನೋದವಾಗಿಹದೀ ಕೃತಿಗೆ ಸಮ
ವಾದ ಕೃತಿಯಿಲ್ಲೆಂದು ಕೊಂಡಾಡುವರು ಕೋವಿದರೂ ॥ ೩೭ ॥

ಅಂತೂ ಸಂಧಿ ೭೦ಕ್ಕಂ ಪದನೂ ೩೦೮೩ಕ್ಕಂ ಮಂಗಳಮಹಾಶ್ರೀ

ವಿಷಯ : ನೀತಿ ಕಥೆಗಳು.

ವಿಶೇಷ : ಪುಸ್ತಕ ಸ್ವಲ್ಪ ಶಿಥಿಲ. ೧೮೯ನೆಯ ಕ್ರಮಸಂಖ್ಯೆಯ ಎರಡು ಪತ್ರಗಳಿವೆ. ಒಂದು ಪತ್ರ ಮುರಿದುಹೋಗಿರುವುದರಿಂದ ಮತ್ತೊಂದನ್ನು ಪ್ರತಿಮಾಡಿ ಹಾಕಿದೆ. ೨೨೧ನೆಯ ಪತ್ರ ಲುಪ್ತ.

1773

ಕೆ.ಬಿ. ೨೭	**ಶುಕಸಪ್ತತಿ** (ಭಾಗ ೧)	ಭಾಮಿನೀಷಟ್ಪದಿ
೭.೭″ × ೬.೨″	?	?
೧-೩೧೦ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ : ಶುಕಸಪ್ತತಿ ಬರಿಯುುವದಕ್ಕೆ ಶುಭಮಸ್ತು X X X
ಶ್ರೀ ಶಿವನಕುಮಾರ ಸಕಲ ....
....ಸುರಾರ್ಜಿತಪಾದಪದ್ಮ ವಿ
ಶೇಷ ಗುಣಯುತ ವಿಮಲಗಾತ್ರ ವಿಚಿತ್ರಚಾರಿತ್ರಾ
ಮೂಷಕಪ್ರಿಯ ಮುದವಿವರ್ಧನ
ಪಾಶವೋದಕಪರಶುಧರ ವಿ
ಘ್ನೇಶ ದಯದಿಂದೊಲಿದು ಕರುಣಿಸು ಮತಿಗೆ ಮಂಗಳವಾ ॥ ೧ ॥

X X X X

ಹರಕವಿಗಳಂಘ್ರಿಯನು ಧ್ಯಾನಿಸಿ
ಹರಿಕವಿಗಳಡಿಗೆರಗಿ ಮತ್ತಾ
ವರಕವಿಗಳಿಗೆ ನಮಿಸಿ ಗುರುಹಿರಿಯರ ಕಟಾಕ್ಷದಲೀ
ಹರುಷದಿಂ ಶುಕನಗ್ನಿ ಭೂಭುಜ
ಗರುಹಿದರೆ ಕೌಸಲ್ಯ ಕಥೆಯನು
ವಿರಚಿಸುವೆನಿದನಾದರದಿ ಲಾಲಿಪುದು ಸಜ್ಜನರೂ ॥ ೧೪ ॥

ಅಂತ್ಯ : ಅಂತೂ ಸಂಧಿ ೩೪ಕ್ಕಾಂ ಪದನು ೧೬೪೦ಕ್ಕಾಂ ಮಂಗಳಮಹಾಶ್ರೀ
ಪ್ರಯಾಗದ ಮಹಾತ್ಮೆ
ಸೂಚನೆ॥ ದಿವಸಮೂವತ್ತೇಳರಲಿ ನೃಪ ಬರ
ಲವಿರಳದಿ ಶುಕನೊಂದು ಕಥೆಯನು
ವಿವರಿಸಲು ಬೆಳಗಾಗಿ ಬಂದನು ತನ್ನ ಅರಮನೆಗೆ ॥
ಪದನೂ ॥

ವಿಷಯ : ನೀತಿ ಕಥೆಗಳು.

ವಿಶೇಷ : ಇದರ ಉತ್ತರಭಾಗ ಕೆ.ಬಿ. ೩೪ನೆಯ ಪುಸ್ತಕದಲ್ಲಿದೆ.

1774

ಕೆ.ಬಿ. ೩೪	**ಶುಕಸಪ್ತತಿ** (ಭಾಗ ೨)	**ಭಾಮಿನೀಷಟ್ಪದಿ**
೭.೭″ × ೬.೨″	?	?
೧—೨೧೬ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ : ಕೇಳಠೈ ಸಜ್ಜನರು ವಹ್ನಿ ನೃ
ಪಾಲಕನು ಖತಿಯಿಂದ ಸೇವಕ
ನಾಲಯಕೆ ಬರಲಾಕ್ಷಣದಿ ಶುಕ ನುಡಿದನಿಂತೆಂದೂ
ಶೂಲಿಯನು ಭಜಿಸುತ್ತಯೋಧಿಯ
ಮೇಲೆನಿಪಪಟ್ಟಣದಧಿರೆಯನು
ಪಾಲಿಸುತಸತ್ಯಧ್ವಜಾಖ್ಯ ನೃಪಾಲನಿಹನೆಂದಾ ॥ ೧ ॥

ಅಂತ್ಯ : ವೇದಶಾಸ್ತ್ರಪುರಾಣದರ್ಥಗ
ಳಾದಿಗೊಂಡಿಹದೀ ಕೃತಿಯೊಳಿದ
ನಾದರಿಸಿ ಕೇಳ್ದವರಭೀಷ್ಟವು ಸಿದ್ಧಿಯಾದಪುದೂ

ಹಾದರದ ಕಥೆಯಲ್ಲ ಪರಮ ವಿ
ನೋದವಾಗಿಹದೀಕೃತಿಗೆ ಸಮ
ವಾದ ಕೃತಿಯಿಲ್ಲೆಂದು ಕೊಂಡಾಡುವರು ಕೋವಿದರೂ ॥ ೩೭ ॥
ಅಂತೂ ಸಂಧಿ ೭೦ಕ್ಕಾಂ ಪದನು ೩೦೪೯ಕ್ಕಾಂ ಮಂಗಳಮಹಾಶ್ರೀ ॥
ಶುಕಸಪ್ತತಿಕಥಾ ಸಂಪೂರ್ಣಾ ॥

ವಿಷಯ : ನೀತಿ ಕಥೆಗಳು.

ವಿಶೇಷ : ಇದರಲ್ಲಿ ೩೯ನೆಯ ಸಂಧಿಯಿಂದ ಮುಂದುವರಿದಿದೆ. ಇದರ ಪೂರ್ವ ಭಾಗ ಕೆ. ಬಿ ೨೭ರಲ್ಲಿದೆ.

1775

ಕೆ. ಎ. ೧೦೫	**ಶೂನ್ಯಸಂಪಾದನೆ**	ವಚನ
೧೨.೪″ × ೭.೬″	ಕೆಂಚವೀರಣ್ಣೊಡೆಯಾದಿಗಳು	ಸು. ೧೬೦೦
೧-೨೫೫ ಪತ್ರ	೨೦ ಪಂಕ್ತಿ	೩೩ ಅಕ್ಷರ

ಆದಿ : ಶ್ರೀ ಶಿವಲಿಂಗಾಂಗ ಸಮರಸ ಭಕ್ತ್ಯಾಚಾರಪ್ರತಿಷ್ಠಮಲ ಮಾಯಾಕರ್ಮತನು ಕರಣೇಂದ್ರಿಯ ವಿಷಯ ಪ್ರಾಣಾದಿಗುಣ ಧರ್ಮಕರ್ಮ ನಿರಸನ ಶೂನ್ಯ ಸಂಪಾದನೆ ಪ್ರಾರಂಭಃ ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತ ಶ್ರೀ ಬಸವೇಶ್ವರ ಚನ್ನಬಸವಣ್ಣ ಪ್ರಭುದೇವರು ಮಡಿವಾಳಯ್ಯ ಮರುಳಶಂಕರದೇವರು ಮುಖ್ಯವಾದ ಶರಣರಿಗೆ ಗುರುಲಿಂಗ ಜಂಗಮಪ್ರಸಾದ ಪಾದತೀರ್ಥ ವಿಭೂತಿ ರುದ್ರಾಕ್ಷಿ ಷಡಕ್ಷರವೆಂಬೀಯಂಟು ವಂದಂಗವಾದ x x x ಕೆಂಚವೀರಣ್ಣೊಡೆಯರ ದೇವರು ಮೊದಲಾದ ಶರಣರು ವಿಚಾರಿಸಲು x x x ಅಂಗಲಿಂಗಸಂಗಸಮರಸವಾದ ಸಂಪಾದನೆಯ ವಚನ ಬರವ ದಿನ। ಶಕವರುಷ ಶಾಲಿವಾಹನ ೧೫೦೭ ತಾರಣ ಸಂವತ್ಸರದ ಮಾರ್ಗಶಿರ ಬಹುಳ ೧ ಲ್ಲೂ ಆದಿತ್ಯವಾರ ಪುನರ್ವಸು ನಕ್ಷತ್ರ ಸುಕರ್ಮ ಯೋಗದಲ್ಲಿ ಶೂನ್ಯಸಂಪಾದನೆಯ ವಚನವ ಬರೆಯತೊಡಗಿದೆವು. ಪ್ರಥಮದಲ್ಲಿ ಪ್ರಭುದೇವರ ಗದ್ಯ, ಶ್ರೀಮತ್ಪರಮತತ್ವ ಪರಮಾನಂದ ಪರಂಜೋತಿ

ಅಂತ್ಯ : ಬಸವಪ್ರಭು ಚನ್ನಬಸವರಾಜದೇವರು ಮುಖ್ಯವಾದ ಅಸಂಖ್ಯಾತ ಪ್ರಮಥಗಣಂಗಳ ಅಂಗ ಮನ ಪ್ರಾಣಾದಿಗಳನೊಳಕೊಂಡ ಗುರುಲಿಂಗ ಜಂಗಮರೂಪಪ್ಪ ಇಷ್ಟಪ್ರಾಣಭಾವವೇಕವಪ್ಪ ಷಡ್ವಿಧಲಿಂಗಮುಖ

ನಾಗಿಪ್ಪ ಷಟ್ತ್ರಿಂಶ ತತ್ವಾತೀತಮಪ್ಪ ಶೂನ್ಯ ಲಿಂಗಾಂಗ ಸಂಗ ಸಮರಸ ಸಂಪಾದನೆ ಸಮಾಪ್ತ. ಮಂಗಳಮಹಾ ಮಾಯಸೃಷ್ಟಿಯದ್ಯ ಷಟ್ತ್ರಿಂಶ ತತ್ವಾತೀತಮಪ್ಪ ಶೂನ್ಯಲಿಂಗಾಂಗ ಸಮರಸ ಸಂಪಾದನೆ ಸಮಾಪ್ತ.

ವಿಷಯ : ವೀರಶೈವ ತತ್ತ್ವ.

ವಿಶೇಷ : ಅಕ್ಷರ ಸಣ್ಣದಿದ್ದರೂ ಮುದ್ದಾಗಿವೆ.

1776

ಕೆ.ಬಿ. ೪೧೦/೩	**ಶೂನ್ಯಸಿಂಹಾಸನ ನಿರ್ಮಾಣ**	**ಗದ್ಯ**
೭.೬″ × ೬.೧″	**ಭಾಗವತ ನಂಜುಂಡ**	**ಸು. ೧೮೮೩**
೬೯-೧೦೬ ಪುಟ	**೧೨ ಪಂಕ್ತಿ**	**೨೬ ಅಕ್ಷರ**

ಆದಿ : ಶೂಂನ್ಯ ಸಿಮ್ಹಾಸನ ನಿರ್ಮಾಣವೆಂಬ ಗ್ರಂಥ ಬರಿಯುವದಕ್ಕೆ ಶುಭಮಸ್ತು॥ ಶ್ರೀಮತ್ಸಚ್ಚಿದಾನಂದ ಸ್ವರೂಪನಾದ ಶ್ರೀಗುರು ಸಂಗಮನಾಥನ ಕರುಣ ಪ್ರಸಾದಮಂ ಪಡೆದ ಶಿವಚೇತನ ಕಳಾತ್ಮಕ ಸ್ವರೂಪನಾದ ಶ್ರೀಮನ್ಮಹಾ ಸಿದ್ಧನಾದ ಬಸವೇಶ್ವರನು ಭೂಕೈಲಾಸ ಕಲ್ಯಾಣ ನಗರದೊಳ್ ಪೃಥ್ವಿ ಅಪ್ಪು ತೇಜ ವಾಯು ಆಕಾಶ ಸೂರ್ಯ ಚಂದ್ರ ಆತ್ಮನೆಂಬವೇ ಶಿವನಿಗೆ ಅಷ್ಟತನುವೆಂದು ಕೆಲರ ಮತವು । ಸ್ಥೂಲ ಸೂಕ್ಷ್ಮಕಾರಣ ಮಹ ಕಾರಣ ವೆಂಬ ಜೀವತನು ಚತುಷ್ಟಯವೂ ವಿರಾಟು ಹಿರಣ್ಯಗರ್ಭ ಮಹದಾತ್ಮಿಕ ಹವ್ಯಾಕೃತವೆಂಬ ಶಿವತನು ಚತುಷ್ಟಯವೂ ಸಹಿತಮಾದುದೇ ಶಿವನ ಅಷ್ಟತನುವೆಂದು ಕೆಲವರ ಮತವೂ॥

ಅಂತ್ಯ : ಪೂರ್ವೋಕ್ತಮಾದ ನೃತ್ಯವಾದ್ಯಾದಿ ದಶನಾದ ಘೋಷಂಗಳಿಂದು ದ್ಘೋಷಂಗೊಳಿಸಿ ಕರತಂದು ಶೂಂನ್ಯಾತೀತನಾದಲ್ಲಮಾಪ್ರಭುವಂ ತಾಂ ಗೈದ ಶೂನ್ಯ ಸಿಂಹಾಸನದಲ್ಲಿ ಕುಳ್ಳಿರಿಸಿ ಹಿಂದೆ ಪೇಳಿದ ಧೂಪದೀಪಾದಿ ಭಕ್ತ್ಯೋಪಚಾರದಿಂ ಪೂಜಿಸಿ ಐಕ್ಯಭಕ್ತಿಯಿಂ ಸರ್ವವಂ ಸಮರ್ಪಣೆ ಗೈಯಲು ಮತ್ತಮಲ್ಲಮಾಪ್ರಭುವು ಅನುಪಮಾನಂದರಸದೊಳೋಲಾಡಿ ಬಸವೇಶಂಗೆ ಗುಂಹೇಶ್ವರಲಿಂಗದೊಳೈಕ್ಯತ್ವಂ ಸಿದ್ಧಿಸಲೆಂದಾಶೀರ್ವಾದವಂ ಗೈದನೂ॥—॥ ಯಿಂತೀವಚನೋಪರಚಿತಮಾದ ಶೂನ್ಯ ಸಿಂಹಾಸನ ನಿರ್ಮಾಣವೆಂಬ ಗ್ರಂಥವಂ ಶ್ರದ್ಧೆಯಿಂ ಬರದೋದಿ ಕೇಳಿದವರ್ಗೆ ಕಪ್ಪಡಿಯ ಕೂಡಲಸಂಗನ ಬಸವನು ತತ್ಶೂನ್ಯಗತಿಯಂ ಕೊಡುವನೆಂದು ಯಲ್ಲರೊಳಿರುವಲ್ಲಮಾಪ್ರಭುವು ನಿರೂಪಸಿದರಿಂತೀಚಾರ್ಯ ಪ್ರಭುವ ರ್ಯ

ಚರಣಭಕ್ತಿರಸಾಸ್ವಾದಕಂ ಸಹಜಾನಂದ ತತ್ವಬೋಧೆ ಸ್ವರೂಪನಾದ ಬಾಳಾರ್ಯದೇಶಿಕೇಂದ್ರರ ಹಸ್ತಮಸ್ತಕ ಪ್ರಶಸ್ತನಾದ ಕುಡುಮಪುರೇಶನ ನಿಜಭಕ್ತಂ ಭಾಗವತ ನಂಜುಂಡ ನಾಮಧೇಯಕಂ ಕಲಿವತ್ಸರ ನಾಲ್ಕು ಸಾವಿರದ ವಂಭೈನೂರು ಯಂಭತ್ತನಾಲ್ಕನೆ ಸ್ವಭಾನು ಸಂವತ್ಸರ ಮಾಘ ಬಹುಳ ಪಾಡ್ಯ ಕುಜವಾರದೊಳ್ ಲೋಕೋಪಕಾರಾರ್ಥವಾಗಿ ರಚನೆ ಯಂ ಗೈದನೆಂಬಲ್ಲಿಗೆ ಮಂಗಳ ಮಹಾಶ್ರೀ ||

ವಿಷಯ : ವೀರಶೈವ ತತ್ತ್ವ.

ವಿಶೇಷ : ಇದೇ ಪುಸ್ತಕದಲ್ಲಿ ತತ್ತ್ವಚಿಂತಾಮಣಿ. ಗುರುಶಿಷ್ಯ ಬೋಧಾಮೃತ ಎಂಬ ಎರಡು ಕೃತಿಗಳಿವೆ. ಆರಂಭದ ೧೮ ಪುಟಗಳು ಮತ್ತು ೫೩ರಿಂದ ೬೮ರ ವರೆಗಿನ ಪುಟಗಳಲ್ಲಿ ಕೆಲವು ದೇವರ ನಾಮಗಳಿವೆ.

1777

ಕೆ. ೧೩೯/೧	**ಶೃಂಗಾರ ರತ್ನಾಕರ**	ಕಂದ, ವೃತ್ತ
೧೪.೫" × ೧.೩"	ಕವಿಕಾಮ	ಸು. ೧೨೦೦
೧-೩೨ ಪತ್ರ	೬ ಪಂಕ್ತಿ	೬೫ ಅಕ್ಷರ

ಆದಿ : ಶ್ರೀ x x x x ಕವಿಕಾಮನ ಪುಸ್ತಕಾ

ಶ್ರೀರಾಮಾನಂದನಂ ವಿಶ್ರುತವಿಶದ ಯಶೋರಂಜಿತಂ ಪ್ರೋಲ್ಲಸತ್‌ಶ್ರುಂ
ಗಾರೋದಾರಾತ್ಮನುದ್ಯದ್ಗುಣ ವಿಲಸಿತ ಧರ್ಮಂ ಜಗತ್ಸೇವ್ಯರಂಮ್ಯಾ
ಕಾರಂ ರಾಜಪ್ರಿಯಂ ಪ್ರೇಮದಿನತನು ವಿಳಾಸಾಸ್ಪದಂ ಕಾಮಿನೀವ್ಯಂ
ದಾರಾಧ್ಯಂ ಕಾಮದೇವಂ ಪೊಸಇಸುಗೆ ಜಗಕ್ಕೈದೆ ಶ್ರಿಂಗಾರದೊಳ್ಪಂ||೧||

x x x x

ಕಂ || ಮೃದುಮಧುರ ವಚನರಚನೆಯಿ
ಮುದಾತ್ತ ಕವಿವೃಷಭ ಕವಿಕದಂಬ ವಿಪಶ್ಚಿ
ದ್ಧೃದಯಮನಿರ್ಕುಳಿಗೊಳುತಿ
ರ್ಪುದರಿಂ ಕವಿಕಾಮನಿಂತು ದೆಸೆದೆಸೆಗೆಸದಂ || ೧೧ ||

ಅಂತ್ಯ : ಅಮಳಿನಚರಿತಂ ವಿದ್ಯಾ
ರಮಣಂ ಮಣಿಪ್ರತಾನ ಮದನಂ ಮದನಾ
ಗಮ ಸೂತ್ರಧಾರಿ ಬುಧಜನ
ಕುಮುದ ಶರಚ್ಚಂದ್ರ ಸುಕವಿಮಣಿಮುಖ ಮುಕುರಂ || ೯೦ ||

ಆವದಾತ ಕೀರ್ತ್ರಿ ವಿದ್ಯಾ
ಭವನಂ ನವರಸ ವಿಭಾಸಿ ವಾಗ್ದೇವಿ ಲ
ಬ್ಧವರ ಪ್ರಸಾಥ ವಿಭವಂ
ಕವಿಕಾಮಂ ಸುಜನವನಜ ವನ ಮಾರ್ತ್ರಾಂಡಂ ॥ ೯೧ ॥

ಗದ್ಯ ॥ ಯಿದು ವಿನಮದಮರ ನಿಕರ ಮಕುಟಮಣಿಗಣ ರಮಣೀಯ್ಯ ಚರಣ ಸರಸೀರುಹ ಶಿವಪದಾಂಬುಜ ಭೃಂಗಾಯಮಾನ ಸರಸ್ವತೀ ಪ್ರಸಾದಾಸಾಧಿತ ಕವಿಕಾಮದೇವ ವಿರಚಿತಮಪ್ಪ ರಸವಿವೇಕ ಶೃಂಗಾರ ರತ್ನಾಕರದೊಳ್ಸಖ ಸಖಿಸಂಭೋಗ ವಿಪ್ರಲಂಭ ಪ್ರಮಾವಸ್ಥಾಂ ವಿಸ್ತರಂ ಚತುರ್ಥ ಪರಿಚ್ಛೇದಃ। ಅಂತ್ತು ಪರಿಚ್ಛೇದ ೪ಕ್ಕೆ ಕಂದ ವೃತ್ತ ಸಹಾ ೩೭೧ಕ್ಕಂ ದುಗಲಂ ಶುಭಂ ಶ್ರೀ.

ವಿಷಯ : ರಸವಿವೇಕ.

ವಿಶೇಷ : ಇದೇ ಕಟ್ಟಿನಲ್ಲಿ ಸಭಾಪತಿ ಲಕ್ಷಣ (ತೆಲುಗು), ವಿರೂಪಾಕ್ಷಾಸ್ಥಾನ ವರ್ಣನೆ, ಸಭಾಪತಿಲಕ್ಷಣ, ಸುಳಾದಿ ಮೊದಲಾದ ಗ್ರಂಥಗಳಿವೆ.

1778

ಕೆ ೨೩೧/೩	**ಶೃಂಗಾರ ರತ್ನಾಕರ**	ಕಂದ, ವೃತ್ತ
೧೦" × ೧.೪"	ಕವಿಕಾಮ	ಸು. ೧೨೦೦
೧೪೮-೧೭೮ ಪತ್ರ	೯ ಪಂಕ್ತಿ	೫೨ ಅಕ್ಷರ

ಆದಿ : ಕವಿಕಾಮ ॥

ಶ್ರೀರಾಮಾನಂದನಂದಿಶ್ರುತ ವಿಶದಯಶೋರಂಜಿತಂ ಪ್ರೋಲ್ಲಸತ್ಶೃಂ
ಗಾರೋದ್ಧಾರಾತ್ಮನುದ್ಯದ್ಗುಣ ವಿಲಸಿತಧರ್ಮಂ ಜಗತ್ಸೇವ್ಯ ರಮ್ಯಾ
ಕಾರಂ ರಾಜಪ್ರಿಯಂ ಪ್ರೇಮದಿನತನುವಿಳಾಸಾಸ್ಪದಂ ಕಾಮಿನೀವೃಂ
ದಾರಾಧ್ಯಂ ಕಾಮದೇವಂ ಸೊಗಯಿಸುಗೆ ಜಗಕ್ಕೆಯ್ದೆ ಶೃಂಗಾರದೊಳ್ಪಂ
॥ ೧ ॥

ಅಂತ್ಯ : ಅವಧಾತ ಕೀರ್ತ್ರಿವಿದ್ಯಾ
ಭವವಂ ನವರಸವಿಭಾಸಿ ವಾಗ್ದೇವೀ ಲ
ಬ್ಧವರ ಪ್ರಸಾದ ವಿಭವಂ
ಕವಿಕಾಮಂ ಸುಜನವನಜ ನವ ಮಾರ್ತ್ರಂಡಂ ॥ ೯೧ ॥

ಗದ್ಯ . ಇದು ವಿನದುದವುರ ನಿಕರ ಮುಕುಟ ಮಣಿಗಣ ಕಿರಣ ರಮಣೀಯ್ಯಾವಧಾತಕೀರ್ತಿ ಶಿವಪದಾಂಭೋಜ ಶೃಂಗಾಯಮಾನ ಸರಸ್ವತೀ ಪ್ರಸಾದ ಸಾದಿತ ಕವಿಕಾಮದೇವ ವಿರಚಿತಮಪ್ಪ ರಸವಿವೇಕ ಶೃಂಗಾರರತ್ನಾಕರದೊಳ್ ಸಖಸಖೀ ಸಂಭೋಗ ವಿಪ್ರಲಂಭ ಪ್ರೇಮಾವಸ್ಥಾಂ ಲಿಸ್ಥಾರ ಚತುರ್ಥ ಪರಿಚ್ಛೇದಂ ॥ ಶ್ರೀ ॥ ರಸವಿವೇಕ ಶೃಂಗಾರ ರತ್ನಾಕರದೊಳ್ ॥ ೪ ॥

ಪರಿಚ್ಛೇದಕ್ಕಂ ಕಂದವೃತ್ತ ಸಹ ೩೭೪ಕ್ಕಂ ಮಂಗಳಮಹಾಶ್ರೀ ॥

ವಿಷಯ : ರಸವಿವೇಕ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಶಕಟರೇಫ ಮತ್ತು ಱ ಈ ಲಿಪಿಗಳ ಪ್ರಯೋಗವಿದೆ. ಇದೇ ಕಟ್ಟಿನಲ್ಲಿ ಶಬ್ದಮಣಿ ದರ್ಪಣ, ಛಂದೋಂಬುಧಿ, ರಸರತ್ನಾಕರ, ಉದಯಾದಿತ್ಯಾಲಂಕಾರ ಎಂಬ ನಾಲ್ಕು ಕೃತಿಗಳೂ ಇವೆ. ೧೪೫ನೆಯ ಪತ್ರಸಂಖ್ಯೆ ಬಿಟ್ಟುಹೋಗಿದ್ದರೂ ವಿಷಯ ಲೋಪವಿಲ್ಲ. ೧೭೭ನೆಯ ಪತ್ರದನಂತರವಿರುವ ಒಂದು ಪತ್ರಕ್ಕೆ ಸಂಖ್ಯೆಯಿಲ್ಲ. ಈ ಪತ್ರದಲ್ಲಿಯೇ ಈ ಗ್ರಂಥ ಕೊನೆಗೊಂಡಿದೆ.

1779

ಕೆ.ಎ. ೪೩	ಶೃಂಗಾರ ರತ್ನಾಕರ	ಕಂದ, ವೃತ್ತ
೧೩″ × ೮″	ಕವಿಕಾಮ	ಸು. ೧೨೦೦
೧-೬೯ ಪತ್ರ	೧೮ ಪಂಕ್ತಿ	೨೨ ಅಕ್ಷರ

ಆದಿ : ಶೃಂಗಾರ ರತ್ನಾಕರ.

ಶ್ರೀರಾಮಾನಂದನಂ ವಿಶ್ರುತ ವಿಶದಯಶೋರಂಜಿತಂ ಪ್ರೋಲ್ಲಸತ್‌ಶ್ರುಂ
ಗಾರೋದಾರಾತ್ತ್ರನುದ್ಯದ್ಗುಣ ವಿಲಸಿತ ಧರ್ಮಂ ಜಗತ್ಸೇವ್ಯರಂಮ್ಯಾ
ಕಾರಂ ರಾಜಪ್ರಿಯಂ ಪ್ರಮುದಿನತನು ವಿಳಾಸಾಸ್ಪದಂ ಕಾಮಿನಿವೃಂ
ದಾರಾಧ್ಯಂ ಕಾಮದೇವಂ ಪೊಸಯಿಸುಗೆ ಜಗಕ್ಕೈದೆ ಶ್ರಿಂಗಾರದೊಳ್ಪಂ
॥ ೧ ॥

ಅಂತ್ಯ : ಅವದಾತ ಕೀರ್ತಿ ವಿದ್ಯಾ
ಭವನಂ ನವರಸ ವಿಭಾಸಿ ವಾಗ್ದೇವಿ ಲ
ಬ್ಧವರ ಪ್ರಸಾದ ವಿಭವಂ
ಕವಿಕಾಮಂ ಸುಜನವನಜವನಮಾರ್ತ್ತಾಂಡಂ ॥ ೯೧ ॥

ಗದ್ಯ || ಯಿದು ವಿನಮದಮರ ನಿಕರ ಮುಕುಟಮಣಿಗಣ ಕಿರಣ ರಮಣೀಯನ x x ಕವಿಕಾಮದೇವ ವಿರಚಿತಮಪ್ಪ ರಸವಿವೇಕ ಶೃಂಗಾರ ರತ್ನಾಕರದೊಳ್ಸಖಸಖಿ ಸಂಭೋಗ ವಿಪ್ರಲಂಭ ಪ್ರಮಾದಸ್ಥಾಂ ವಿಸ್ತರಂ ಚತುರ್ಥ ಪರಿಚ್ಛೇದಃ || ಅಂತ್ತು ಪರಿಚ್ಛೇದ ೪ಕ್ಕೆ ಕಂದ ವೃತ್ತ ಸಹಾ ೩೭೧ಕ್ಕಂ ಮಂಗಲಂ ಶುಭಂ ಶ್ರೀ.

ವಿಷಯ : ರಸವಿವೇಕ.

ವಿಶೇಷ : ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಈ ಪ್ರತಿಯ ಜೊತೆಗೆ ಗ್ರಂಥದ ಮೊದಲ ೬ ಪತ್ರಗಳಲ್ಲಿ ೫೦ ಪದ್ಯಗಳನ್ನು ಬರೆದ ಮತ್ತೊಂದು ಪ್ರತಿಯೂ ಇದೆ. ಅನಂತರ ೨ ಪತ್ರಗಳಲ್ಲಿ ವಿಷಯಸೂಚಿಯಿದೆ.

1780

ಕೆ.ಎ. ೨೯	**ಶೃಂಗಾರ ರತ್ನಾಕರ**	ಹಾಡು
೧೩" × ೮.೧"	ಕೃಷ್ಣವೀರ	?
೧-೧೦ ಪತ್ರ	೨೧ ಪಂಕ್ತಿ	೨೩ ಅಕ್ಷರ

ಆದಿ : ಕಾಂಬೋದಿರಾಗಾ || ಅಟತಾಳಾ ||

ಪರಮಮಂಗಳ ದಶಾವರಣರಾಜಿತಮಾದ
ಗುರುತರ ಬ್ರಹ್ಮಾಂಡದೊಳಾಗೆಲ್ಲಿಯುಂ
ನಿರತವ್ಯಾಪ್ತಿಯಾಗಿರ್ಪ್ಪ ಹರಿಯ ಚರಣಾಯುಗ್ಮ
ಸರಸಿಜಂಗಳಂ ಬಿಡದೆ ವರಭಕ್ತಿಯಿಂ
ಪರಿಶೋಭಿಸುತ ಯಿಂದಿರೆಗೆ ನಂದನನಾಗಿ
ಅರವಿಂದಭವ ಸಹೋದರನೆನಿಸಿ
ನಿರುಪಮ ಭಾರತಿಯರಸಿಯಾಗಿರೆ ಭಜಿಸೆ
ಗರುಡ ಶೇಷ ರುದ್ರೇಂದ್ರರ ಪಡದು
ಸುರತತಿಯನಾಳುವ ದೊರೆಯಾಗಿ ರಿಷಿಗಳ್ಗೆ
ವರ ಮಂತ್ರೋಪದೇಶಂಗಳನೆ ಮಾಡುತ್ತಾ
ಚಿರಪಿತೃಗಂಧರ್ವನರಪತಿವಂದ್ಯನಾಗಿ
ಮೆರದೆಯೊ ಹನುಮತ್ಪುರದ ಹನುಮಂತ || ೧ ||

ಅಂತ್ಯ : ದೀರ ಲಲಿತಾ ಖ್ಯನೆ ತಾರನೆ ನಿಂಮ ಮಹೋಧಾರಗುಣನಸಹಾಯ ಶೂರಂ ವಾರಿಧಿ ಸಮಾನ ಗಂಭೀರ ರಿಪುವಾರ ಕಾಂತಾರವಿಲುಠತ್ಕುಠಾರಂ

ಮಾರನುಪಮೋಪ ಮಾಕಾರಯುತ ಚಾರುಬುಧವೃಂದ ಮಂದಾರನಿಭನಿವ ಮೇರುಧೀರಂ ದಾರುಣಿಯೊಳೀತ ಶೃಂಗಾರಕಾಯೂರ ನರಪತಿ ಕೃಷ್ಣ ವೀರಂ ॥ x x x x

ಆರ್ಯಾಗೀತಿ॥ ಆಹ ಮಹಾಹವಶೂರಂ ಬೇಹಭಟಂ x x x ದ್ವಿಜನೃವಾಚಾ ಶೂರಂ ॥ ಶೃಂಗಾರ ರತ್ನಾಕರಾದಿ ಗ್ರಂಥಂಗಳುಳ್ಳ ಪುಸ್ತಕ ಸಮಗ್ರವಾಗಿ ಮುಗಿಯಲ್ಪಟ್ಟಿದೆ.

ವಿಷಯ : ಅಲಂಕಾರ ಶಾಸ್ತ್ರ.

ವಿಶೇಷ : ಪತ್ರದ ಒಂದುಕಡೆ ಮಾತ್ರ ಬರೆದಿದೆ.

1781

ಕೆ.ಬಿ. ೧	**ಶೃಂಗಾರ ಸಾರ**	**ಚಂಪು**
೭.೫″ × ೬ ೧″	ಸೋಮರಾಜ	ಸು. ೧೨೨೨
೧-೩೨೦ ಪತ್ರ	೧೨ ಪಂಕ್ತಿ	೧೮ ಅಕ್ಷರ

ಆದಿ : ಶುಭಮಸ್ತು–ಉದ್ಭಟ ಕಾವ್ಯ– ಪ್ರತಿನಾಮಧೇಯ ಶೃಂಗಾರಸಾರ ॥
ಸ್ರ॥ ವೃ॥ ಶ್ರೀನೀಹಾರಾಚಳಾಧೀಶ್ವರ ದುಹಿತೃ ಮುಖಾಂಭೋಜ ಸೂರ್ಯಂ ಮಹತ್ಸ
ಜ್ಞಾನಾನಂದ ಸ್ವರೂಪಂ ನಿಗಮತತಿನುತಂ ಚಂದ್ರಲೇಖಾವತಂಸಂ
ಭಾನು ಗ್ಲೌ ವಹ್ನಿ ನೇತ್ರಂ ತ್ರಿಪುಟಿ ವಿರಹಿತಂ ನಿರ್ವಿಕಲ್ಪಂ ಶಿವಂ ಸಂ
ನ್ಮಾನಂಬೆತ್ತೀವುಗೆನ್ನಂ ಪರಮಗುರು ವಿರೂಪಾಕ್ಷಲಿಂಗಂ ಸಿತಾಂಗಂ ॥ ೧ ॥

ಅಂತ್ಯ : ಮತ್ತೇಭವೃತ್ತಂ ॥
ಜನನಾಥೋತ್ತಮ ಸೋಮರಾಜನುಸುರ್ದೀಕಾವ್ಯಂ ವಲಂ ಶಾಲಿವಾ
ಹನ ಶಕಾಬ್ಧಿಮದ್ಯೆದೆ ಸಾಸಿರದನೂರ್ಸಂದ ನಾಲ್ವತ್ತ ನಾ
ಲ್ಕನೆಯಾ ರಂಜಿತ ಚಿತ್ರಭಾನುವವರಾಶ್ವೀಜೋಚ್ಛೈತ್ರೈಕಾದಶೀ
ವನಜಾರಾತಿ ತನೂಜ ವಾಸರದೊಳಾದತಲ್ಲಮಂಗರ್ಪಿತಂ ॥ ೧೬೩ ॥

ಸಾಂಬಾಶಿವಾಯನಮಃ ಗದ್ಯ ॥ ಇದು ಸಮಸ್ತ ಸುರಕದಂಬ ವಿಜೃಂಭಿತ ಮಕುಟ ತಟ ಘಟಿತಂ ನವರತ್ನ ಪುಂಜ ಸಂಜಾತ ಪಿಂಜರಿತ ಮಂಜುಳ ಮಯೂಖ ಮಂಜರೀ ರಂಜಿತ ಶ್ರೀಗುರು ವಿರೂಪಾಕ್ಷ ಪಾವನ ಪದ x x x ಶ್ರೀ ಸೋಮರಾಜೇಂಧ್ರ ವಿರಚಿತಮಪ್ಪ ಕರ್ನಾಟಕ ಶೃಂಗಾರ

ಸಾರ ಮಹಾ ಪ್ರಬಂಧದೊಳ್ ಶಿವಗಣ ಕೈಲಾಸ ವರ್ನ್ನನಂ ದ್ವಾದಶಾ ಶ್ವಾಸಂ ಸಂಪೂರ್ಣಂ ||

ಅಂತು ಆಶ್ವಾಸ ೧೨ಕ್ಕಂ ವೃತ್ತ ಕಂದ ವಚನ ಸಹಿತ .. ಕ್ಕಂ ಮಂಗಳ ಮಹಾ ಗ್ರಂಥ ಸಂಪೂರ್ಣಂ

ವಿಷಯ : ಪುರಸಹಿತ ಕೈಲಾಸಕ್ಕೆ ಹೋದ ಉದ್ಭಟನ ಚರಿತ್ರೆ.

ವಿಶೇಷ : ಆದಿಯ ಎರಡು ಪತ್ರಗಳ ತುದಿ ಮುರಿದಿದೆ. ಗ್ರಂಥ ರಚನೆಯಕಾಲ 'ಶಾಲಿವಾಹನಶಕಾಬ್ಧಮದ್ಯೆದೆ ಸಾವಿರದ ನೂರ್ಸಂದ ನಾಲ್ವತ್ತ ನಾಲ್ಕನೆಯಾ ರಂಜಿತ' ಎಂದು ಹೇಳಿರುವುದರಿಂದ ಕ್ರಿ. ಶ. ೧೨೨೨ ಎಂದು ತಿಳಿದುಬರುತ್ತದೆ. ಪಾಠಗಳನ್ನು ಕೆಂಪು ಮಸಿಯಿಂದ ತಿದ್ದಿದೆ. ಇದನ್ನು ಉದ್ಭಟ ಕಾವ್ಯವೆಂದೂ ಕರೆಯುತ್ತಾರೆ.

1782

ಕೆ.ಎ. ೩೩೩	**ಶೇಷಧರ್ಮ**	**ಶ್ಲೋಕ, ಟೀಕು**
೧೧.೫" × ೭.೬"	?	?
೧–೨೧೨ ಪತ್ರ	೨೦ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ಲಕ್ಷ್ಮೀನಾರಾಯಣಾಯ ನಮಃ || ಶುಭಮಸ್ತು || ಅವಿಘ್ನಮಸ್ತು || ಶ್ರೀರಸ್ತು ||

ಶುಕ್ಲಾಂಬರದರಂ ವಿಷ್ಣುಂ ಶಶಿವರ್ನಂ ಚತುರ್ಭುಜಂ |
ಪ್ರಸಂನ ವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ ||
X X X X ಯಿತಿ ಸೂತಃ ||

ಸ್ವ_ ಸ್ಯ_ ಸ್ತು ಸತಾಂ ನಿಖಿಳ ಸನ್ಮಂಗಳಾನೀ ಭವಂತು
ಕೃ_ಶ್ಚ ಶ್ರೋತೃಣಾಂ ಧರ್ಮಾದಿ ನಿಖಿಲ ಪುರುಷಾರ್ಥಪದೇ |
ಸಮಸ್ತಕಲಿ ಕಲ್ಮಷಾಪನೋದನ ಪಟುತರೇ
ಶ್ರೀಮನ್ಮಹಾಭಾರತೇ ಹರಿವಂಶೇ ಶೇಷಧರ್ಮೇ ||

ವುಪರಿ ಕಥಾಯಾಂ ಪ್ರಸಕ್ತಾಯಾಂ ಪೂರ್ವಕಥಾ ವೃತ್ತಾಂತ್ತಃ ||
ಮಹಾಭಾರತ || ಹದಿನೆಂಟು ಪರ್ವ ಶ್ರವಣಾನಂತರದಲ್ಲಿ || ಮಹಾ ತ್ತೇಜೋವಂತರಾದ ಸಮಸ್ತ ಶೌನಕಾದಿ ರುಷಿಗಳು ಧರ್ಮವೆತ್ತುಗಳಲ್ಲಿ ಶ್ರೇಷ್ಠರಾದ ಸೂತ ಪೌರಾಣಿಕರಂ ಕುರಿತೂ ಆದರದಿಂದಾ ಯಿಾ ಮಾತಂ ಹೇಳಿದರೂ X X X X

ಹೀಗೆಂದು ರುಷಿಗಳು ಪಸ್ನೆ ಮಾಡಲೂ || ಸೂತರು ಹರಿವಂಶ ಹೇಳಿದ ಮೇಲೆ ಶೇಷಧರ್ಮದ ಕಥೆಯಂ ಹೇಳುವದಕ್ಕೆ ಪ್ರಾರಂಭಾ ಮಾಡಿದರ್ರೂ ||

ಯೇತದರ್ಥಂ ಮಹಾ ಪ್ರಾಜ್ಞೋ ಜನಮೇಜಯ ಭೂಪತಿಃ |
ಪೃಷ್ಟ್ಯಾವಾನ್ಮುನಿಶ್ಯಾರ್ದೂಲಂ ವೈಶಂಪಾಯನಮರ್ಥವಿತ್ ||

ಯಿದೇ ಅರ್ಥವಂನ್ನೂ ಮಹಾಪ್ರಾಜ್ಞನಾದ ಅರಸು ಜನಮೇಜಯ ರಾಯನು ಕೇಳಿದನೂ ||

ಅಂತ್ಯ : ಶ್ಲೋಕಾ || ಯಯಿದಂ ಪುಂಣ್ಯಮಾಖ್ಯಾನಂ ನಾರದೇನ ಪ್ರಭಾಷಿತಂ |
ಶ್ರುತ್ವಾ ಪಾಪ ನಿವಿರ್ಮುಕ್ತೋ ಬ್ರಂಹ್ಮಲೋಕಂ ಸ ಗಛತೀ ||

ಟೀಕೂ || ಯಲ್ಲೈ ಜನಮೇಜಯರಾಯನೇ ಕೇಳೂ | ನಾರದರಿಂದಾ ಹೇಳಲು ಪಟ್ಟ ಯಿಾ ಧರ್ಮ ಕಥೆಯಂನ್ನೂ ಯಾವ ಪುರುಷ ಕೇಳುವನೋ ಆತನು ಸಕಲ ಪಾಪಂಗಳಿಂದಲೂ ಮುಕ್ತನಾಗಿ ಬ್ರಂಹ್ಮಲೋಕವಂ ಪಡೆಯುವನೂ |

X X X X

ವೈಶಂಪಾಯನರೂ ಜನಮೇಜಯರಾಯನಿಗೆ ಬುಧಿಗಲಿಸಿದರೂ ಯಂಬ ಕರ್ನಾಟಕ ಭಾಷಾ ವಿರಚಿತವಾದ ಶ್ರೀಕೃಷ್ಣರಾಜ ವಿಲಾಸೋಕ್ತಿ ಟೀಕೂ|| ಮಹಾಭಾರತದಲ್ಲಿ ಆಶ್ಚರ್ಯ ಪರ್ವದಲ್ಲಿ ಶೇಷಧರ್ಮದ ಮೂವತ್ತೆರಡನೆಯ ಅಧ್ಯಾ ಮಂಗಳ ಮಹಾಶ್ರೀ ||

ಶ್ರೀ ವೈಶಂಪಾಯ ನಮಃ ||

ಶಂಖ ತೀರ್ಥಸ್ಯ ಮಹಾತ್ಮ್ಯಾ ಕಾವೇರ್ಯಾ ಸ್ನಾನವೈಭವಂ |
ಶ್ರುತ್ವಾ ಧರ್ಮಸುತಃ ಶ್ರೀಮಾನ್ ಗಾಂಗೇಯಂ ಪುನರಬ್ರವೀತ್ ||

ವಿಷಯ : ಧರ್ಮಕಥೆ.

ವಿಶೇಷ : ಬರಹ ಸುಂದರ. ೭,೮ನೆಯ ಪತ್ರ ಸಂಖ್ಯೆಗಳು ಒಂದೇ ಪತ್ರದ ಎರಡು ಕಡೆಗಳಲ್ಲಿಯೂ ಇದ್ದು, ೮ನೆಯ ಪತ್ರ ಬೇರೆ ಇಲ್ಲ. ೧೨೦-೧೨೩ ಪತ್ರಗಳು ಖಾಲಿಯಿವೆ.

1783

ಕೆ.ಎ. ೧೩೩ | ಶೇಷಧರ್ಮ ಪುರಾಣ | ಗದ್ಯ
೧೩.೨" × ೮ ೨" | ಚಿಕ್ಕುಪಾಧ್ಯಾಯ | ೧೬೮೦
೧-೩೩ ಪತ್ರ | ೩೫ ಪಂಕ್ತಿ | ೩೦ ಅಕ್ಷರ

ಆದಿ : ಶೇಷಧರ್ಮ ಚಿಕ್ಕುಪಾದ್ಯಾಯ ವಿರಚಿತ x x

ವೃತ್ತಾ || ಶ್ರೀ ನಾರೀನಯನಾಬ್ಜ ಲಾಲಿತದಿನಾಧಿನಂ ಜಗತ್ಪಾವನಂ
ನಾನಾಭೀಷ್ಮ ಫಲಪ್ರದಂ ನಿರುಪಮಂ ನಿತ್ಯಂ ಪರಂ ಶಾಶ್ವಿತಂ ಜ್ಞಾ
ನಾನಂದಮಯಂ ಶಿವಾದಿ ದೇವತತಿ ವಂದ್ಯಂ ಸರ್ವಲೋಕೇಶ್ವರಂ
ಭೂನಾಥಾಗ್ರಿಣಿ ಚಿಕ್ಕದೇವನೃಪನಂ ರಕ್ಷಿಸುಗೆ ಕಾರುಣ್ಯದಿಂ || ೧ ||

ಕಂದ || ಶೇಷಧರ್ಮಕ್ಕೆ ಟೀಕನ
ಶೇಷಜನಂ ತಿಳಿವ ತೆರದೆ ಚಿಕುಪಾಧ್ಯಾಯಂ
ತೋಷಿಸೆ ಚಿಕದೇವೇಂದ್ರಂ
ಬಾಷಾಭೂಷಣದ ಕಂನಡದೆ ರಚಿಸಿದಂ || ೨ ||

X X X X

ಶ್ಲೋಕೈಕ ಶ್ರವಣತಾವನ್ಮಾತ್ರದಿಂದ ಸಕಲ ಕವಿಕಲ್ಮಷಾಪನೋದನ ಪಟುತರವಾದ ಧರ್ಮಾರ್ಥ ಕಾಮುಮೋಕ್ಷಂಬಳೆಂಬ

ಅಂತ್ಯ : ಸೂತ ಪೌರಾಣಿಕರು ನೈಮಿಷಾರಂಣ್ಯ ವಾಸಿಗಳಾದ ಶೌನಕಾದಿ ರುಷಿಗಳ ಕುರಿತು ಪೇಳಿದ ಕಥೆಯಂನ್ನು ಭಕ್ತಿಯಿಂದ ಕೇಳಿದವರಿಗೆ ಪಟಿಸಿದವರಿಗೆ ಯಿಹದಲ್ಲಿ ಸೌಖ್ಯ ಆರೋಗ್ಯ ಭಾ ಗ್ಯ ವ ಂ ನು ಪರದಲ್ಲಿ ಶ್ರೀಮ್ಮ ನಾರಾಯಣನು ತಂನ ಸಂನಿಧಿಯಲ್ಲಿ ನಿರತ ಸೌಖ್ಯ ಕೊಡುವನೆಂಬ ಯಿತಿ ಹರಿವಂಶೆ ಶೇಷದರ್ಮ ಪುರಾಣೆ ಚಿಕದೇವರಾಜನಾಮಾತ್ಯ ಲಕ್ಷ್ಮೀಶ ಕವಿ ವಿರಚಿತಮಪ್ಪ ಯಿತಿಹಾಸ ಕರ್ನಾಟಕ ಭಾಷಾ ಸಂದಿ ೨೫ಕಾಂ ಮಂಗಳ ಮಹಾಶ್ರೀ

ವಿಷಯ : ಧರ್ಮಬೋಧೆ.

ವಿಶೇಷ : ಪ್ರತಿ ಸಮಗ್ರವಾಗಿದೆ. ಸಣ್ಣಕ್ಷರ.

1784

ಕೆ.ಎ. ೩೨೪ | ಶೈವಸಂಜೀವಿನಿ | ಶ್ಲೋಕ, ಟೀಕು
೧೩" × ೮.೧" | ತೋಂಟದ ಸಿದ್ಧಲಿಂಗದೇವ | ?
೧-೯೨ ಪುಟ | ೨೮ ಪಂಕ್ತಿ | ೧೮ ಅಕ್ಷರ

ಆದಿ : ಶೈವಸಂಜೀವಿನಿ.

ಶ್ರೀಮತ್ಸಷ್ಟ್ರ_ಲನಿಷ್ಠಯೋಗಿ ಹೃದಯ ಧ್ಯೇಯಂ ನಿಜಾನಂದಕಂ
ವ್ಯೋಮಾತೀತಮಖಂಡ ನಿತ್ಯಸುಖ ಸಚ್ಚಿದ್ರೂಪಮೇಕಂ ಪರಂ
ನಿರ್ದ್ವಂದ್ವಂ ನಿರವದ್ಯಮೋಮಿತಿ ಲಸನ್ಮಂತ್ರಾತ್ಮಕಂ ನಿಷ್ಕಳಂ
ಜ್ಯೋತಿರ್ಮಾತ್ರ ನಿರಂಜನಾಹ್ವಯ ಮಹಾಲಿಂಗಂ ಜಗದ್ರಕ್ಷತು ||
x x x ಯೆಂದು ವೀರತಂತ್ರ ಮುಂತಾಗಿ ಇಪ್ಪತ್ತೆಂಟು ಶೈವಂಗಳ

ಅಂತ್ಯ : ಯೇರುದ್ರಲೋಕಾದವತೀರ್ಯರುದ್ರಾ
ಮಾನುಷ್ಯಮಾಶ್ರಿತ್ಯಜಗದ್ಧಿತಾಯ ||
ಚರಂತಿ ನಾನಾವಿಧ ಚಾರು ಚೇಷ್ಟಾ
ಸ್ತೇಭ್ಯೋನಮಸ್ತ್ರ್ಯಂಬಕ ಪೂಜಿತೇಭ್ಯಃ ||
ಚಿದಂಬರ ಪ್ರಣವಯೋ ಸ್ಕಂಘಟಂ ಜಗದಿತ್ಯರ್ಟ
ದಿಶತಿಬ್ರಹ್ಮನಿಷ್ಠಾಧ್ವಂ ತೋಂಟದಾಹ್ವಯದೇಶಿಕಃ ||

ಇತಿ ಪರಮ ಶಿವಯೋಗಿರಾಟ್ಪರಿವ್ರಾಜಕಾಚಾರ್ಯ ಶ್ರೀಮತ್ತೋಂಟದ ಸಿದ್ಧ ಲಿಂಗ ಶಿವಯೋಗೀಂದ್ರ ವಿರಚಿತೇ ಶ್ರೀಶೈವ ಸಂಜೀವನೇ ಕ್ರಿಯಾಶೈವ ವಿಚಾರೇ ವೀರಶೈವ ನಿರ್ಣಯೇ ನಿರಾಭಾರಿ ವೀರಶೈವಂ ನಾಮ ದಶಮ ಪರಿಚ್ಛೇದಃ ಶೈವ ಸಂಜೀವಿನಂ ಸಂಪೂರ್ಣಂ.

ಶ್ರೀ ಶುಕ್ಲ ಸಂವತ್ಸರದ ಪಾಲ್ಗುಣ ಶುದ್ಧ ೧೦ರಲ್ಲಿಯು ಸೋಮವಾರ ರಾತ್ರೆ ೧೫ನೇ ಘಳಿಗೆಯಲ್ಲಿ ಈ ಪ್ರತಿಯನ್ನು ಕಲ್ಲುಕುಣಿಯ ಸ್ಥಳದ ಬಸವಾ ಜಮ್ಮನ ಕುಮಾರರು ರಾಜ ಶ್ರೀ|| ಚೆನ್ನ ವೀರಸ್ವಾಮಿಯವರ ಅನುಜ ರಾದಂಥಾ ನಿಜಗುಣಸ್ವಾಮಿಯವರಿಗೆ ಸತ್ಯಾಗಾಲದ ಸ್ಥಳದ ವಡೇರ ಹಾಳ್ಯದ ಸಿದ್ದನಂಜಯ್ಯನವರ ಕುಮಾರ ಶಿವಲಿಂಗೈಯ್ಯನು ತನ್ನ ಸ್ವಹಸ್ತಾಕ್ಷರದಲ್ಲಿ ಬರದು ಈ ಶೈವ ಸಂಜೀವನೀ ಶಾಸ್ತ್ರವನ್ನು ಸಂಪೂರ್ಣ ಮಾಡಿ ಬರೆದು ವಪ್ಪಿಸಿದ್ದರಿಂದ ಈ ಪ್ರತಿ ಸಂಪೂರ್ಣ ಮಂಗಳ ಮಹಾ.

ವಿಷಯ : ವೀರಶೈವ ಆಚಾರ ಇತ್ಯಾದಿ ನಿರ್ಣಯ.

ವಿಶೇಷ : ಪ್ರತಿ ಸಮಗ್ರವಾಗಿದೆ.

1785

ಕೆ. ೪೪೫	**ಶೋಭಾನೆ ಪದಗಳು**	ಹಾಡು
೯″ × ೨.೨″	?	?
೧-೭೮ ಪತ್ರ	೮ ಪಂಕ್ತಿ	೩೫ ಅಕ್ಷರ

ಆದಿ: ನಾಗ ಕುಮಾರನ ಹಸೆಗೆ ಕರೆದ ಶೋಭಾನೆ। ಮೋಹನ ಮತ್ತು ಕಾನಡಯಿ ರಾಗಗಳಲ್ಲಿ ಹೇಳಬಹುದು ಶ್ರೀ × × × × ನಾಗ ಕುಮಾರನ ಶೋಬಾನೆಯನ್ನು ಬರೆಯುವುದಕ್ಕೆ ನಿರ್ವಿಘ್ನಮಸ್ತು

ಶ್ರೀ ನಾಭೆಯಾದಿ ಸಕಲ ಜಿನರಿಗಭಿದಾನಂದದಿಂದೆರಗಿ। ಶಾರದಾದೇವಿ ಗಾನತನಾಗಿ। ಪೇಳುವೆನ್ ಹಸೆಗೆ। ಜೈನ ಸಮಯಾಂಭೋನಿಧೀಂದುವ ದಿನಜನ ಸಂತಾನ ಸನ್ನಿಭ। ದಾನಿ ಫಣಿಪನ ಸೂನುವನು ಕರೆದಾನವಿನ ಶೋಬಾನೆಯನು ಕೇಳಿ ಜನರೆಲ್ಲ ॥ ೧ ॥

ವರ ಜಂಬೂದ್ವೀಪದ ಭರತಕ್ಷೇತ್ರದೊಳ್ ಮೆರೆವ ಆರ್ಯ್ಯಾಖಂಡದ ಮಗಧ ದೇಶದೊಳಿರುವ ಕನಕಪುರದ ಜಯಂಧರನರಸಿ ಪೃಥ್ವೀವರ ಸುದೇವಿಗೆ ಯಿರದೆ ಬಂದವತರಿಸಿ ದಿವಸೇಶ್ವರನ ತೇಜವ ಮರಸುವ ಮಲಾಕರದ ವಿಕ್ರಮಂಧರನೆ ಬಾ ಹಸೆಗೆ ಕರದರು ॥ ೨ ॥

ಅಂತ್ಯ: ಶ್ರೀಮಲಯಪುರಕೆ ಬಂದು ನಿಂದು
ಕೋಮಲಾಶ್ವ ಯುಗದಿ ತೆಂದು
ಭೂಮಿದೇವರೆಲ್ಲ ಕೂಡಿ
ಸ್ವಾಮಿಪೂಜೆ ಮಾಳ್ಪರೆಂದು ಯಕ್ಷ ॥ ೫ ॥

ವಿಷಯ: ಹಸೆಗೆ ಕರೆಯುವ ಹಾಡುಗಳು.

ವಿಶೇಷ: ಕೆಲವು ಪತ್ರಗಳ ಅಂಚು ಮುರಿದಿದೆ.

1786

ಕೆ.ಎ. ೧೯೮/೩	**ಶ್ರಾವಕಾಚಾರ**	ಸಾಂಗತ್ಯ
೧೨.೮″ × ೮″	?	?
೧೯-೨೮ ಪತ್ರ	೩೦ ಪಂಕ್ತಿ	೨೦ ಅಕ್ಷರ

ಆದಿ: ಮತ್ತೊಂದು ಶ್ರಾವಕಾಚಾರ.

ಶ್ರೀಮದಮರಪತಿ ವಂದಿತ ಚರಣನು
ಕಾಮಮುಹರಿ ಭಂಜನನೂ
ಸೋಮಸೂರ್ಯಕೋಟಿ ತೇಜ ಶಾಂತೀಶನು
ಕ್ಷೇಮಪಡವನೀ ಯಮಗೆ ॥ ೧ ॥

ಕಷ್ಟಕರ್ಮ್ಮಗಳಿಂದ ಮಾಡಿದ ತ್ರಿಪುರವ
ಶಿಷ್ಟಧ್ಯಾನಾಗ್ನಿಯಿಂ ಸುಟ್ಟೊ
ಅಷ್ಟಮಭೂಮಿಯ ಗ್ರಹದೊಳಿಪ್ಪ ಸಿದ್ಧರು
ಯಿಷ್ಟಪದವನೀಗೆಮಗೆ ॥ ೨ ॥

ಅಂತ್ಯ : ಅದು ಕಾರಣದಿಂದ ಬಹುದೋಷಗಳನು
ಪೊದವಿ ವಿಚಾರಗಳಿಂದಾ
ಸುದತಿ ತನಗೆ ಮುಂದೆ ಪುಣ್ಯವಹುದು ನೋಡಿ
ಮುದದಿ ಮಾಡೂದು ಕಾರ್ಯ್ಯವನೂ ॥ ೯೨ ॥
ತನ್ನ ಮಾಡಿದ ಪುಣ್ಯಪಾಪದ ಫಲಗಳು
ಉನ್ನತ ಜಿನಶಾಸ್ತ್ರದೊಳೂ
ಕನ್ನಡಿಯೊಳಗವಯಗಳು ತೋರ್ಪ್ಪಂತೆ
ಇನ್ನು ನೋಡಿ ಭವ್ಯಜನರೂ ॥ ೬೩ ॥
ಶ್ರಾವಕಾಚಾರಸಮಾಪ್ತ

ವಿಷಯ : ಜೈನಧರ್ಮ ಮತ್ತು ಆಚಾರಗಳು.

ವಿಶೇಷ : ಪತ್ರದ ಒಂದುಕಡೆ ಮಾತ್ರ ಬರೆದಿದೆ. ಪ್ರತಿಯಕಾಲ ಕ್ರಿ. ಶ. ೧೮೯೫. ಪ್ರತಿಕಾರರು ನರಸಿಂಹಶಾಸ್ತ್ರಿಗಳು. ಇದೇ ಪುಸ್ತಕದಲ್ಲಿ ಮುನಿವಂಶಾಭ್ಯುದಯ, ಶ್ರಾವಕಾಚಾರ, ಜ್ಞಾನಸಾರ ಎಂಬ ಕೃತಿಗಳಿವೆ.

1787

ಕೆ.ಬಿ. ೯೬	**ಶ್ರಾವಕಾಚಾರಸಾರಂ**	ಗದ್ಯ
೯.೬"×೭.೫"	ಮಾಘನಂದಿ	ಸು. ೧೨೬೦
೧–೧೮೦ ಪತ್ರ	೨೩ ಪಂಕ್ತಿ	೧೯ ಅಕ್ಷರ

ಆದಿ : ಶ್ರೀ ವೀರಜಿನಮಾನಮ್ಯವಸ್ತು ತತ್ವೋಪದೇಶಕಂ ।
ಶ್ರಾವಕಾಚಾರಸಾರಾಖ್ಯಂ ವಕ್ಷ್ಯೇ ಕರ್ಣಾಟ ಭಾಷಯಾ ॥
ಇಂತು ಮಂಗಳಾದ್ಯರ್ತ್ಥಂ ವಿಶಿಷ್ಟದೇವತಾನಮಸ್ಕಾರಮಂ ಮಾಡಿದಪರೂ ಶ್ರಾವಕಾಚಾರಸಾರಮಂ ದಶಾಧ್ಯಾಯದಿಂ ಪೇಳ್ವಿನಲ್ಲಿ ಮಂಗಳ ನಿಮಿತ್ತ ಹೇತು ಪರಿಣಾಮು ನಾಮುಕರ್ತೃಗಳೆಂಬ ಷಡಾಧಿಕಾರಂಗಳಂ ಮುಂಪೇಳ್ದು ಬಳಿಕ್ಕ ಶಾಸ್ತ್ರಮಂ ವ್ಯಾಖ್ಯಾನಂ ಮಾಳ್ಕೆಂಬೀ ನ್ಯಾಯಮಂ

ಮನದಲ್ಲಿ ತಾಗಿ ಮೋಕ್ಷಸುಖಾಪೇಕ್ಷೆಯಿಂ ಮಂಗಳಾದಿಗಳಂ ಪೇಳ್ವಿನಲ್ಲಿದ ಲೋಕೋತ್ತರಮೆಂಬಷ್ಟ ವಿಧ ಮಂಗಳಂಗಳೊಳು ಸಿದ್ಧಾರ್ಥಪೂರ್ಣಕುಂಭ ವಂದನ ಮಾಲಾಧವಲಛತ್ರ x x x x ಶ್ರಾವಕಾಚಾರಮೆಂಬುದು ನಾಮಂ ಮೂಲೋತ್ತರೋತ್ತರೋತ್ತರ ಭೇದದಿಂ ಕರ್ತೃತ್ವಂ ತ್ರಿವಿಧಮಲ್ಲಿ। ಶ್ರೀ ವರ್ಧಮಾನಸ್ವಾಮಿ ಮೂಕರ್ತೃ। ಗೌತಮಗಣಧರಸ್ವಾಮಿ ಉತ್ತರಕರ್ತೃ। ಗಳು। ಉತ್ತರೋತ್ತರ ಕರ್ತೃಗಳು ಅನೇಕರು ಅವರೊಳು ಯಿಾಗ್ರಂಥಾಪೇಕ್ಷೆಯಿಂ। ಸಾರೋದ್ಧಾರತರು ಮಾಘಣಂದಿ ಸಿದ್ಧಾಂತ ಚಕ್ರವರ್ತ್ತಿ ದ್ದೇವರು ಇಂತು ಮಂಗಳಾದಿ ಷಡಾಧಿಕಾರಂಗಳು ಪೇಳಿಪಟ್ಟವಲ್ಲಿ ಸಕಲದುರಿತ ವಿಳಯನ

ಅಂತ್ಯ: ಅಂತು ಧರ್ಮಾಮೃತವೃಷ್ಟಿ ಸೇಕದಿಂ ಭವ್ಯಸಸ್ಯ ಸಂಪತ್ತಿಯಂ ಮಾಡುತ್ತಂ। ವುತ್ಕೃಷ್ಟ ದೇವಾನ ಕೊಜಕಾಲಂ। ವಿಹಾರಿಸಿ ಬಳಿಯರಿ। ವಿಹಾರಾದಿಕ್ರಿಯೆಯಂ ಮಾಣ್ದು ಅಂತರ್ಮುಹೂರ್ತ್ತಂ। ಶೇಷಾಯುಷ್ಯಂ। ಸ್ಥಿತಿಯಂ। ನೋಡೆ ವೇದನೀಯ ನಾಮ ಗೋತ್ರಂಗಳ ಸ್ಥಿತಿಗಳ ಮಿಕ್ಕೆದ್ದುವಾದಡೆ ಪ್ರದೇಶವಿಸರ್ಪ್ಪಣ ಸಾಮಾರ್ತ್ಥ್ಯದಿಂ। ದಂಡಕವಾಟಪ್ರತರ ಜಗತ್ಪೂರಣಮೆಂಬ ಸಮುದ್ಘಾತಂಗಳಂ

ವಿಷಯ: ಶ್ರಾವಕಾಚಾರಸಾರ, ವಸ್ತು ತತ್ತ್ವೋಪದೇಶ.

ವಿಶೇಷ: ಅಸಮಗ್ರ, ಪುಸ್ತಕದ ಮಧ್ಯದಲ್ಲಿ ಎರಡುಕಡೆ ನೀಲಿಹಾಳೆಗಳಲ್ಲಿ ಬರೆದಿದೆ.

1788

ಕೆ. ೩೫/೫	**ಶ್ರೀಕಂಠಸೋಮೇಶ್ವರ ಶತಕ**	ವೃತ್ತ
೧೨″ × ೧.೪″	ವೀರಭದ್ರರಾಜ	ಸು. ೧೫೩೦
೩೬—೪೯ ಪತ್ರ	೭ ಪಂಕ್ತಿ	೬೦ ಅಕ್ಷರ

ಆದಿ: ಶ್ರೀಕಂಠಸೋಮೇಶ್ವರ ಶತಕ.
ಶ್ರೀ ಮತ್ಪರ್ವತಕಂನ್ಯಕಾಧವ ಸುರಾವಾಸಾದ್ರಿಕೊಂದಂಡ ಪೌ
ಲೋಮಿಾವಲ್ಲಭ ವಿಷ್ಣುಕಂಜ ಜನಕ ಶ್ರೀಪಾದ ಪಂಕೇಜಭೂ
ಮೋಮಾರ್ಕ್ಕನಲಗಂಧವಾಹ ಶಶಿ ತೋಯಾತ್ಮಾಂಗ ಸರ್ವ್ವಜ್ಞನಿ
ಷ್ಕಾಮಾ ನೀನಿರದೆಂದ ರಕ್ಷಿಸಮಲ ಶ್ರೀಕಂಠ ಸೋಮೇಶ್ವರಾ ॥ ೧ ॥

ಅಂತ್ಯ: ಕ್ರತುವಿಧ್ವಂಸಿ ಪದಾಂಬುಜಾಳಿ ವಿಲಸತ್ ಶ್ರೀಕಂಠವಂಶಾರ್ನ್ನವಾ
ಮೃತ ಹಸ್ತಂ ವಿರುಪೇಂದ್ರನಾತ್ಮಜವರ ಶ್ರೀ ವೀರಭದ್ರಾಖ್ಯನಿಂ

ನುತಮಾದಿ ಶತಕಂ ಭವತ್ಪದ ಯುಗಾಬ್ಜತ್ಕಾರಯಲ್ಸಂತತಂ
ಸತಪದ್ಮಕ್ಕೆಣೆಯಾಗದಿರ್ಪುದೆಸದಾ ಶ್ರೀಕಂಠಸೋಮೇಶ್ವರಾ ॥ ೧೦೧ ॥
ಶ್ರೀಕಂಠಸೋಮೇಶ್ವರ ಶತಕ ಸಮಾಪ್ತಂ ಮಂಗಳ ಮಹಾ ಶ್ರೀ.

ವಿಷಯ: ನೀತಿ ಹಾಗೂ ಶಿವಸ್ತುತಿ.

ವಿಶೇಷ: ಶಕಟರೇಫವಿದೆ. ಇದೇ ಕಟ್ಟನಲ್ಲಿ ಮಲ್ಲೇಶ್ವರ ಶತಕ, ಪಾರ್ವತೀ ವಲ್ಲಭ ಶತಕ, ಉಮಾಮಹೇಶ್ವರ ಶತಕ, ಪ್ರಾಣನಾಥ ಶತಕ, ಕಂದಶತಕ, ಪ್ರಭುದೇವರ ಪುರಾಣದ ನಾಂದ್ಯಗಳು, ಮಹಿಮ್ನಸ್ತೋತ್ರದ ಟೀಕು, ಶಿವಪೂಜಾವಿಧಾನ, ಚೇರಮ ಕಾವ್ಯವೆಂಬ ಗ್ರಂಥಗಳಿವೆ.

1789

ಕೆ.ಎ. ೩೩೬/೧	**ಶ್ರೀ ಕೃಷ್ಣ ಕಥಾ ಸಾರಸಂಗ್ರಹ (ಭಾಗ ೧)**	ಗದ್ಯ
೧೧.೫″ × ೭.೭″	ಮುಮ್ಮಡಿ ಕೃಷ್ಣರಾಜ	೧೮೦೦
೧-೪೭೬ ಪತ್ರ	೧೭ ಪಂಕ್ತಿ	೨೦ ಅಕ್ಷರ

ಆದಿ: ಶ್ರೀ ಕೃಷ್ಣ ಕಥಾಸಾರ ಸಂಗ್ರಹ ಗ್ರಂಥದೊಳ್ ಮೊದಲನೆ ಉತ್ಪತ್ತಿ ಕಾಂಡ ಪ್ರಾರಂಭಃ। ಶ್ರೀ ಗಣಾಧಿಪತಯೇ ನಮಃ॥ ಶುಭಮಸ್ತು,

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ।
ಪ್ರಸನ್ನವದನಂ ಧ್ಯಾಯೇ ಸರ್ವವಿಘ್ನೋಪಶಾಂತಯೇ॥

x x x (೨ನೇ ಪತ್ರದಲ್ಲಿ) ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿ ವಾಹನಶಕ ವರ್ಷಂಗಳು ೧೭೬೧ ಸಂದ ವರ್ತಮಾನ ವಿಕಾರಿನಾಮ ಸಂವತ್ಸರದ ಮಾಘ ಶುದ್ಧ ೧ ಮಂಗಳವಾರ ಯಿ ಶುಭದಿವಸದಲ್ಲೂ x x x x (೩ನೇ ಪತ್ರದಲ್ಲಿ) ಶ್ರೀಮನ್ಮಹೀಶೂರ ಪುರವರಾಧೀಶದ ಶೀ ಕೃಷ್ಣರಾಜ ವಡಯುರವರು॥ ಲೋಕೋಪಕಾರಾರ್ಥವಾಗಿ ರಚಿಸುವ ಶ್ರೀ ಕೃಷ್ಣ ಕಥಾಸಾರ ಸಂಗ್ರಹವೆಂಬ ಗ್ರಂಥವು ನಿರ್ವಿಘ್ನದಿಂನ ಬೆಳದು x x x (೨೧ನೇ ಪತ್ರದಲ್ಲಿ) ಶ್ರೀಕೃಷ್ಣ ಕಥಾಸಾರ ಸಂಗ್ರಹವೆಂಬ ಆ ಗ್ರಂಥ ದೊಳ್ ಸೃಷ್ಟಿಪ್ರಕರಣ ಮೊದಲಾಗಿ ಶ್ರಿ ಕೃಷ್ಣೋತ್ಪತ್ತಿ ನಿರೂಪಣ ಪರ್ಯಂತವಾದ ಕಥೆಗಳಿಂದ ಯುಕ್ತಮಾಗಿ ಮೊದಲನೆಯದಾದ ಉತ್ಪತ್ತಿ ಕಾಂಡವಂ ವಿರಚಿಸುವ ಪರಿಯೇನೆಂದರೆ ಪೂರ್ವದಲ್ಲಿ ನೈಮಿಶಾರಣ್ಯ ವಾಸಿಗಳಾದ ಶೌನಕಾದಿ ಋಷಿಗಳು ಸೂತ ಪೌರಾಣಿಕನಂ ಕುರಿತು

ಅಂತ್ಯ : ತಾವು ವಸುದೇವನ ಮನೆಗೆ ಹೋಗಿ ಅಲ್ಲಿ ಸುಖದಿಂದಿರುತ್ತಿದ್ದರು ಯೆಂದು ಸೂತ ಪೌರಾಣಿಕನು ಶೌನಕಾದಿ ರುಷಿಗಳಿಗೆ ನಿರೂಪಿಶಿದ ಅರ್ಥವಂ ತತ್ತತ್ಪುರಾಣಗಳಲ್ಲಿ ಸಂಗ್ರಹಿಶಿದಲ್ಲಿಗೆ ॥ ಗದ್ಯ ॥ x x x x ಕೃಷ್ಣ ಕಥಾಸಾರಸಂಗ್ರಹವೆಂಬ ಗ್ರಂಥದೊಳ್ ವಿಲಾಸಕಾಂಡದಲ್ಲಿ ಮುಷ್ಟಿಕ ಚಾಣೂರ ಕಂಸಸಂಹಾರ ಕಥನವೆಂಬ ನಾಲ್ವತ್ತೆರಡನೆ ಅಧ್ಯಾಯಕೆ ಮಂಗಳ ಮಹಾ ಶ್ರೀ

ವಿಷಯ : ಕಂಸವಧೆಯವರೆಗಿನ ಶ್ರೀಕೃಷ್ಣನ ಚರಿತ್ರೆ.

ವಿಶೇಷ : ಸುಂದರ ಬರಹ. ಈ ಗ್ರಂಥದ ಮುಂದಿನ ಭಾಗ ಕೆ.ಎ. ೩೩೬/೨ ರಲ್ಲಿದೆ.

1790

ಕೆ.ಎ. ೩೩೬/೨	**ಶ್ರೀಕೃಷ್ಣಕಥಾ ಸಾರಸಂಗ್ರಹ** (ಭಾಗ ೨)	**ಗದ್ಯ**
೧೧.೫"×೭.೭"	**ಮುಮ್ಮಡಿ ಕೃಷ್ಣರಾಜ**	**೧೮೦೦**
೪೭೭-೯೦೮ ಪತ್ರ	**೧೭ ಪಂಕ್ತಿ**	**೨೦ ಅಕ್ಷರ**

ಆದಿ : ಶ್ರೀ ಗಣಾಧಿಪತಯೇ ನಮಃ ॥ ಅನಂತರದಲ್ಲಿ ಸೂತಪೌರಾಣಿಕನು ಶೌನಕಾದಿ ರುಷಿಗಳಂ ಕುರಿತು ಕೇಳಿರೈ ರುಷಿಗಳಿರಾ ಆ ಬಳಿಕ ಅಸ್ತಿ ಪ್ರಸ್ತಿಯರೆಂಬ ಕಂಸನ ಪತ್ನಿಯರೀರ್ವರೂ ಯೀ ವರ್ತಮಾನವಂ ಕೇಳಿ ಶೋಕ ಪರವಶರಾಗಿ ಅಂತಃಪುರದಿಂದ ಹೊರಕ್ಕೆ ಬಂದು ಊರಂಗಸ್ಥಲವಂ ಪೊಕ್ಕು ಅಲ್ಲಿ ಸಂಹೃತನಾಗಿ ಬಿದ್ದಿರುವ ಕಂಸನ ಶರೀರವಂ ನೋಡಿ ಬಹು ದುಃಖಿತರಾಗಿ

ಅಂತ್ಯ : ಅವನು ಸಮರ್ಪಿಶಿದ ಕಿರೀಟ ಕುಂಡಲ ವೊದಲಾದ ಆಭರಣವಂ ಧರಿಶಿ ಅಲ್ಲಿಂದ ಪೊರಮಟ್ಟು ದೇವ ಕಿನ್ನರ ಗಂಧರ್ವ ಮೊದಲಾದವರಿಂದ ಸ್ತುತಿಯಂ ಮಾಡಿಸಿಕೊಳ್ಳುತ್ತಾ ಬಂದು ದ್ವಾರಕಾನಗರವಂ ಪ್ರವೇಶಿಶಿ ಯಾದವರಿಂದಲೂ ಪೂಜಿತನಾಗಿ ತನ್ನ ಅರಮನೆಯಂ ಪೊಕ್ಕು ರುಕ್ಮಿಣೀ ಸತಭಾಮೆ ಮೊದಲಾದವರಂ

ವಿಷಯ : ಕಂಸವಧೆಯಿಂದ ರುಕ್ಮಿಣೀಭಾಮೆಯರ ಕಲಹ ನಿವಾರಣೆಯವರೆಗಿನ ಶ್ರೀಕೃಷ್ಣ ಚರಿತ್ರೆ.

ವಿಶೇಷ : ಸುಂದರ ಬರಹ. ಇದರ ಮೊದಲಭಾಗ ಕೆ.ಎ ೩೩೬/೧ರಲ್ಲಿದೆ. ಕೆ.ಎ. ೩೩೬/೧ ಮತ್ತು ಕೆ.ಎ. ೩೩೬/೨ ಈ ಎರಡು ಗ್ರಂಥಗಳಲ್ಲೂ ಶ್ರೀಕೃಷ್ಣಕಥಾಸಾರ ಸಂಗ್ರಹದ ಪೂರ್ವಭಾಗದ ಕಥೆಯಿದೆ.. ಈ ಗ್ರಂಥದ ಉತ್ತರಭಾಗವು ಕೆ.ಎ. ೩೩೭ ಭಾಗ ೧,೨ರಲ್ಲಿ ದೊರೆಯುತ್ತದೆ.

1791

ಕೆ.ಎ. ೩೩೭/೧	**ಶ್ರೀಕೃಷ್ಣಕಥಾಸಾರ ಸಂಗ್ರಹ (ಭಾಗ ೧)**	ಗದ್ಯ
೧೧.೬" × ೭.೯"	ಮುಮ್ಮಡಿ ಕೃಷ್ಣರಾಜ	೧೮೦೦
೧-೪೮೨ ಪತ್ರ	೧೮ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ಕೃಷ್ಣಕಥಾ ಸಾರಸಂಗ್ರಹವೆಂಬ ಗ್ರಂಥದೊಳ್ ನಾಲ್ಕನೆ ಸಂತಾನ ಕಾಂಡ ಪ್ರಾರಂಭ ಶ್ರೀ ॥ ಶ್ರೀ ॥ ಶ್ರೀ ಗಣಾಧಿಪತಯೆ ನಮಃ ॥ ಯಃ ಕೈಲಾಸ ಗಿರೀಶ ತೋಷಣವಶಾತ್ಪ್ರದ್ಯುಮ್ನಮತ್ಯಾಜಸಂ । ಹತ್ವಾ ಷಟ್ಪುರಪೌಂಡ್ರ ಹಂಸ ಡಿಬಿಕಾಂಶ್ಚೈದ್ಯಂ ಚ ಬಾಣಾಸುರಂ । ಜಿತ್ವಾ ಪಾಂಡುಸುತಾನಪಾಲಯದಸೌ ಕೃಷ್ಣಸ್ಸ ಪುಷ್ಣಾತು ನಃ ॥ ಶ್ರೀಮತ್ಸಮಸ್ತಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ ಕರ್ನಾಟಕ ಜನಪದ ಸಂಪದಧಿಷ್ಠಾನ ಭೂತ ಶ್ರೀಮನ್ಮಹೀಶೂರ x x x ಪುರವರಾಧೀಶರಾದ ಶ್ರೀಕೃಷ್ಣರಾಜ ವಡಯುರವರು x x x x ಶ್ರೀ ಕೃಷ್ಣಕಥಾಸಾರಸಂಗ್ರಹವೆಂಬ ಗ್ರಂಥದೊಳ್ ಕೈಲಾಸ ಯಾತ್ರಾ ವೃತ್ತಾಂತ ಮೊದಲುಗೊಂಡು ಶ್ರೀಕೃಷ್ಣನ ಗ್ರಹಸ್ಥಾಶ್ರಮ ಧರ್ಮನಿರೂಪಣ ಪರ್ಯಂತವಾದ ಕಥೆಯಿಂ ಯುಕ್ತವಾಗಿ ನೂರು ಅಧ್ಯಾಯಗಳಿಂದೊಡ ಗೂಡಿದ ನಾಲ್ಕನೆಯದಾದ ಸಂತಾನ ಕಾಂಡವಂ ವಿರಚಿಸುವ ಪರಿಯೇ ನೆಂದರೆ ॥ ಅನಂತರದಲ್ಲಿ ನೈಮಿಶಾರಣ್ಯವಾಸಿಗಳಾದ ಶೌನಕಾದಿ ಋಷಿಗಳ ಸೂತಪುರಾಣೀಕನಂ ಕುರಿತು

ಅಂತ್ಯ : (೪೭೭ ನೇ ಪತ್ರ)

ಸಮಸ್ತ ಪತ್ನೀ ಪುತ್ರ ಪೌತ್ರ ಸುಹೃದ್ಬಂಧುಗಳಿಂದೊಡಗೂಡಿ ಸಂಸಾರಿಯಂತೆ ನಟಿಸುತ್ತಾ ಸುಖದಿಂದಿರುತ್ತಿದ್ದನೆಂದು ಸೂತ ಪುರಾಣೀಕನು ಶೌನಕಾದಿ ಋಷಿಗಳಿಗೆ ನಿರೂಪಿಶಿದ ಅರ್ಥವಂ ತತ್ತತ್ಪುರಾಣಗಳಲ್ಲಿ ಸಂಗ್ರಹಿಶಿದಲ್ಲಿಗೆ ಗದ್ಯ ॥ x x x ಸಂತಾನ ಕಾಂಡದಲ್ಲಿ ಶ್ರೀಕೃಷ್ಣನ ಪುತ್ರರುಗಳ ವಿವರ ನಿರೂಪಣವೆಂಬ ನೂರನೆ ಅಧ್ಯಾಯಕ್ಕೆ ಮಂಗಳ ಮಹಾಶ್ರೀ

ಸಂತಾನಕಾಂಡ ಸಮಾಪ್ತಃ—x x x (೪೮೨ನೇ ಪತ್ರ) ಸೂರ್ಯನಿಗೆ ಪುತ್ರನಾಗಿ ಜನಿಸಿ ವೈವಸ್ವತ ಮನುವೆಂದು ಪ್ರಖ್ಯಾತನಾಗಿ ಮನ್ವಂತರಾಧಿಪತ್ಯವಂ ಮಾಡಿದನು ಯಂದು ಸೂತಪುರಾಣೀಕನು ಶೌನಕಾದಿ ರೃಷಿಗಳಿಗೆ ನಿರೂಪಿಸಿದ ಅರ್ಥವಂ ತತ್ತತ್ಪುರಾಣಗಳಲ್ಲಿ ಸಂಗ್ರಹಿಸಿದಲ್ಲಿಗೆ ಗದ್ಯ

ವಿಷಯ : ಸಂತಾನಕಾಂಡದಲ್ಲಿ ಶ್ರೀಕೃಷ್ಣ ಪುತ್ರರುಗಳ ವಿವರಣೆಯು ಮುಗಿದು ಮತ್ಸ್ಯಾವತಾರದ ಕಥೆಯ ಆರಂಭದವರೆಗಿನ ಅಧ್ಯಾಯಗಳು (ಶ್ರೀ ಕೃಷ್ಣನ ಚರಿತ್ರೆ)

ವಿಶೇಷ : ಸುಂದರ ಬರಹ. ಈ ಉತ್ತರಭಾಗದ ಮುಂದಿನ ಗ್ರಂಥವು ಕೆ.ಎ. ೩೩೭/೨ ರಲ್ಲಿದೆ. ಪೂರ್ವಭಾಗದ ಗ್ರಂಥವು ಕೆ.ಎ. ೩೩೬/೧ ಮತ್ತು ಕೆ.ಎ. ೩೩೬/೨ ರಲ್ಲಿದೆ. ಈ ನಾಲ್ಕು ಗ್ರಂಥಗಳೂ ಶ್ರೀಕೃಷ್ಣ ಚರಿತ್ರೆಯ ಭಾಗಗಳು.

1792

ಕೆ. ೩೩೭/೨	**ಶ್ರೀಕೃಷ್ಣಕಥಾ ಸಾರಸಂಗ್ರಹ (ಭಾಗ ೨)**	ಗದ್ಯ
೧೧.೬″ × ೮″	ಮುಮ್ಮಡಿ ಕೃಷ್ಣರಾಜ	೧೮೦೦
೪೮೩-೯೩೧ ಪತ್ರ	೧೭ ಪಂಕ್ತಿ	೨೦ ಅಕ್ಷರ

ಆದಿ : ತ್ರಿಭುವನ ಭೀಷಣ ಶುಂಭ ನಿಶುಂಭ ಕುಂಭಿನೀಧರ ದಂಭಸಂಭೇದ ದಂಭೋಳಿ ನಿಭ ದೋರ್ದಂಡ ಮಂಡಿತ x x x x (೪೮೪ನೆಯ ಪತ್ರ) ಶ್ರೀ ಮಹಾಗಣಪತಯೇ ನಮಃ ॥ ಅನಂತರದಲ್ಲಿ ಶೌನಕಾದಿ ರ‍್ರಷಿಗಳು ಸೂತ ಪೌರಾಣೀಕನಂ ಕುರಿತು ಯಲ್ಯೆ ಸೂತ ಮುನಿಯೆ ಶ್ರೀಕೃಷ್ಣನು ಮಾಡಿದ ಮತ್ಸ್ಯಾವತಾರ ಕಥೆಯಂ ಕೇಳಿ ಸಂತುಷ್ಟರಾದೆವು ಕೂರ್ಮಾವತಾರ ಕಥೆಯನ್ನು ಪೇಳಬೇಕೆಂದು ಬೆಸಗೊಳ್ಳಲು ಆ ಸೂತಮುನಿಯು ಆ ರೃಷಿಗಳಂ ಕುರಿತು ಕೇಳಿರೈ ರೃಷಿಗಳಿರಾ ಪೂರ್ವದಲ್ಲಿ ಬಾಳೋಬ ವಿದ್ಯಾಧರ ನಾರಿಯು ಜಗಜ್ಜನನಿಯಾದ ಪಾರ್ವತಿಯಂ ಕುರಿತು

ಅಂತ್ಯ : (೯೨೮ನೆಯ ಪತ್ರ) ಸೂತ ಪೌರಾಣೀಕನು ಶೌನಕಾದಿ ರ‍್ರಷಿಗಳಿಗೆ ನಿರೂಪಿಸಿದ ಅರ್ಥವನ್ನು ತತ್ತತ್ಪುರಾಣಗಳಲ್ಲಿ ಸಂಗ್ರಹಿಸಿದಲ್ಲಿಗೆ ॥ ಗದ್ಯ ॥ ತ್ರಿಭುವನ ಭೀಷಣ ಶುಂಭ ನಿಶುಂಭ x x x x ಕೃಷ್ಣಕಥಾಸಾರ ಸಂಗ್ರಹವೆಂಬ ಗ್ರಥದೊಳ್ ಅವತಾರ ಕಾಂಡದಲ್ಲಿ ಶ್ರೀಕೃಷ್ಣನ ಅವತಾರ ಭೇದ ನಿರೂಪಣ ಕಥಾಶ್ರವಣಫಲಕಥನವೆಂಬ ನೂರನೇ ಅಧ್ಯಾಯಕ್ಕೆ ಮಂಗಳ

ಮಹಾ ಶ್ರೀ। ಅವತಾರಕಾಂಡ ಸ್ಸಮಾಪ್ತಃ ಶ್ರೀ॥ ಆಳಿದ ಮಹಾಸ್ವಾಮಿಯವರ ಅಪ್ಪಣೆಮೇರಿಗೆ ಚಂದ್ರವಿಲಾಸ ಸನ್ನಿಧಾಸಕ್ಕೆಸನ್ನಿಧಾನದ ರಾಯಸದ ಭಾಗವತ ಕೃಷ್ಣಪ್ಪನು ಬರದು ವಪ್ಪಿಶಿದ ಶ್ರೀಕೃಷ್ಣಕಥಾಸಾರ ಸಂಗ್ರಹ ಗ್ರಂಥದ ಸಂತಾನ ಕಾಂಡ ಅವತಾರ ಕಾಂಡಗಳ ವಹಿಗೆ ಶ್ರೀರಸ್ತು॥ x x x x (೯೩೧ನೆಯ ಪತ್ರ) ಅಂತು ಐದು ಕಾಂಡಗಳಿಂದ ಯರಡು ವಹಿಗಳನ್ನು ವಪ್ಪಿಶಿರುವದಕ್ಕೆ ಶ್ರೀರಸ್ತು॥ ಮಂಗಳಾನಿ ಭವಂತು.

ವಿಷಯ : ಅವತಾರಗಳ ವಿವರಣೆ (ಶ್ರೀ ಕೃಷ್ಣಚರಿತ್ರೆ).

ವಿಶೇಷ : ಸುಂದರ ಬರಹ. ಈ ಉತ್ತರ ಭಾಗದ ಮೊದಲ ಭಾಗವು ಕೆ.ಎ. ೩೩೭/೧ ರಲ್ಲಿದೆ.

1793

ಕೆ.ಬಿ. ೩೮೯	**ಶ್ರೀನಿವಾಸ ಕಲ್ಯಾಣ**	ಯಕ್ಷಗಾನ
೭.೮″ × ೬″	?	?
೧-೪೧ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ : ಶ್ರೀನಿವಾಸ ಕಲ್ಯಾಣ ॥ ಶ್ಲೋಕಾ ॥

ಕಥಿತಂ ರಂಗಮಹಾತ್ಮ್ಯಂ ತ್ವಯಾ ಹಸ್ತಿಗಿರೀಶತುಃ।
ಜಗಂನಾಥಸ್ಯ ವಿಷ್ಣೋರ್ಮಹಾತ್ಮ್ಯಂಮತುಳಂ ಮುನೇ।
ಯಿದಾನೀಂ ಶ್ರೋತುಮಿಛಾಮಿ ಮಾಹಾತ್ಯ್ಮಂ ವೆಂಕಟೇಶತುಃ ॥೧॥
ನೈಮಿಷಾರಂಣ್ಯದಲ್ಲಿ ಸೂತರಂನ ಕುರಿತು ಶೌನಕಾದಿಗಳು ಪ್ರಸ್ನೆ ಮಾಡುತ್ತಾರೆ.

ಭಾಮಿನಿ॥ ಶ್ರೀನಿವಾಸನ ಚರಿತೆ ನಿಂಮಿಂ
ದಾನುಪೂರ್ವಕ ಕೇಳಲಿಲ್ಲವು
ಸಾನುರಾಗದಿ ಪೇಳಬೇಕೆಂದನುತ ಬೆಸಗೊಳಲೂ
ಶೌನಕರ ನುಡಿ ಕೇಳಿ ಸೂತರು
ಗ್ನ್ಯಾನಿ ಮುನಿವ್ಯಾಸರ ಮುಖೋದ್ಗತ
ನಾನು ಕೇಳಿದ ತೆರದಿ ಪೇಳ್ವೆನು ಕೇಳಿ ನೀವೆಂದು ॥೧॥

ಅಂತ್ಯ : ಯಿಾಪರಿ ನರಲೀಲೆಯೊಳತಿಪ್ರೇಮದಿ
ಶ್ರೀಪತಿ ನಟಿ ...ಶಿವ ಮಹಿಮೆಯನು
ತಾಪಸ ಸೂತರಿಗೆ ಶುಕಮುನಿಶೌನಕಾದಿಗಳಿಗೆ
ತಾ ಪೇಳಿದನೀ ಕಥೆಯನ್ನು ॥ ೨ ॥

X X X X

ಪರಮ ಪುರುಷನಿಗೆ ಪಾಂಡವ ಪ್ರಿಯ್ಯಗೆ
ಕರಿಯ ಪೊರದವಗೆ ಕಂಜನಾಭನಿಗೆ
ತರುಣಿ ದ್ರೌಪತಿ ಅಭಿಮಾನ ರಕ್ಷಕನಿಗೆ
ಕರುಣಾಕರ ನಂಮ್ಮ ಗುರುರಂಗವಿಠಲಗೆ ॥ ೩ ॥
ಮಂಗಳ ಮಹಾ ॥ ಶ್ರೀನಿವಾಸಕಲ್ಯಾಣದ ಕಥೆ ಸಂಪೂರ್ಣಂ ॥

ವಿಷಯ : ಶ್ರೀನಿವಾಸ ಕಲ್ಯಾಣದ ಕಥೆ.

ವಿಶೇಷ : ಕಾಗದ ತೆಳುವು. ಪತ್ರಗಳ ಎರಡು ಪಾರ್ಶ್ವಗಳಲ್ಲೂ ಬರೆದಿದೆ.
ಪತ್ರಗಳಿಗೆ ಕ್ರಮಾಂಕವಿಲ್ಲ.

1794

ಕೆ.ಎ. ೨೮೪/೩	**ಶ್ರೀಪದಾಶೀತಿ**	ಕಂದ
೧೨.೯"X೮.೨"	ಅಚಣ್ಣ	ಸು. ೧೫೧೯
೧–೧೦ ಪತ್ರ	೨೨ ಪಂಕ್ತಿ	೨೨ ಅಕ್ಷರ

ಆದಿ : ಶ್ರೀಪದಾಶೀತಿ

ಶ್ರೀಮತ್ಪಂಚಪದಂ ಗುರು
ನಾಮಾದಿತ್ರಿಕಳನುತುಳರಮ್ಯಂ ಹರ್ಮ್ಯಂ
ಧಾಮಮಯಂ ಸುಖ ಕಲಶೋ
ದ್ದಾಮಂ ವಿಶ್ರಾಮಧಾಮಮುಕ್ಕೆಮಗನಿಶಂ ॥ ೧ ॥

ಅಂತ್ಯ : ಭೂತಳದೊಳ್ ಶ್ರೀಪದಾ

ಶೀತಿ ಸುಧಾವೃಷ್ಟಿ ಸಕಳಜನತಾ ಸಸ್ಯ
ಬ್ರಾತಕ್ಕೆ ತಣಿಯೆ ಕಱೆದು ನಿಜಾ
ಕತ ಸುಖಫಲ ಸಮೃದ್ಧಿಯಂ ಮಾಳ್ಕನಿಶಂ ॥ ೯೧ ॥

X X X X

ಜಿನಸಮಯ ಸಮುದ್ಧರಣಂ
ಜಿನಮತ ಸಿದ್ಧಾಂತ ವಾರ್ಧಿವರ್ಧನ ಚಂದ್ರಂ
ಜಿನರಂತೆ ಭವ್ಯಸೇವ್ಯಂ
ಜಿನಮುನಿಯಾಚಣ್ಣನಮಳಗುಣಗಣನಿಳಯಂ ॥ ೯೪ ॥

ವಿಷಯ : ಪಂಚಪರಮೇಷ್ಠಿಗಳ ಮಹತ್ವ.

ವಿಶೇಷ : ಪತ್ರದ ಒಂದು ಕಡೆ ಬರೆದಿದೆ. ಶಕಟರೇಫ ಪ್ರಯೋಗವಿದೆ. ಇದರಲ್ಲಿ 'ಪಂಚಪರಮೇಷ್ಟಿಗಳ ಬೊಲ್ಲಿ' ಯೇ ಮೊದಲಾದ ಇತರ ೧೧ ಗ್ರಂಥಗಳಿವೆ.

1795

ಕೆ. ೫೭೬	**ಶ್ರೀಪಾಲಚರಿತೆ**	**ಸಾಂಗತ್ಯ**
೧೩.೨ × ೧.೯"	ಮಂಗರಸ	೧೫೦೮
೧-೮೧ ಪತ್ರ	೭ ಪಂಕ್ತಿ	೬೫ ಅಕ್ಷರ

ಆದಿ : ಶ್ರೀಪಾಲನ ಚರಿತೆ ಬರೆವುದಕ್ಕೆ ಶುಭಮಸ್ತು, ಶೋಭನಮಸ್ತೂ
ಶ್ರೀಮದಮರಪತಿ ಮುಕುಟ ರಂಜಿತ ರತ್ನ
ಮಾಂಬುದಾರಾವುತ್ತಾ
ತಾಮರಸಾಂಘ್ರಿಯುಗಲ ವೀರನಾಥನು
ದ್ದಾಮ ಸುಖವನೀವುದೆಮಗೆ ॥ ೧ ॥

ಅಂತ್ಯ : ಜಿನಮತ ವಾರ್ಧಿವರ್ಧನ ಚಂದ್ರನೆನಿಸಿದ
ವಿನುತ ವಿಜಯ ಭೂವರನಾ
ತನುಜ ಮಂಗರಸನಿಂತಿದನೊರದೆನು ಭವ್ಯ
ಜನರು ಮುದದಿ ಕೇಳೂದೂ ॥ ೧೦೩ ॥

x x x x

ಯಿದು ಭಾವಕಜನ ಕರ್ನ್ನವಿಭೂಷಣ
ಮಿದು ರಸಿಕರ ಚಿತ್ತದೆಱಕಾ
ಯಿದು ವಾಣೀಮುಖ ಮಾಣಿಕ್ಯಮುಕುರ ಮ
ತ್ತಿದು ಶೃಂಗಾರ ಸುಧಾಬ್ಧಿ ॥ ೧೦೬ ॥

ಅಂತ್ತು ಸಂಧಿ ೧೪ ಕ್ಕಂ ಪದನೂ ೧೫೦೦ ಕ್ಕಂ ಮಂಗಲ ಮಹಾಶ್ರೀ

ವಿಷಯ : ಶ್ರೀಪಾಲರಾಜನ ಕಥೆ.

ವಿಶೇಷ : ಪ್ರತಿಯ ಕೊನೆಯಲ್ಲಿ 'ಸ್ವಸ್ತಿ ಶ್ರೀವಿಜಯಾಭ್ಯುದೆಯ ಶಾಲಿವಾಹನ ಶಕ ವರುಷ ೧೬೪೭ ನೆಯ ಜಯನಾಮ ಸಂವತ್ಸರದ ಜ್ಯೇಷ್ಠ ಶುದ್ಧ ೫ ಯಿಂದು ವಾರದಲ್ಲು ಹಾಸನದ ಶ್ರೀ ಪಾರೀಶ್ವನಾಥಸ್ವಾಮಿಯ ಸಂನಿಧಿಯಲ್ಲಿ ದೊಡು ಹೊಂನಂಣ ಸೆಟ್ಟರಿಗೆ ವುಪಾದ್ಯ ಚಿಕ್ಕಂಣನು ಆಯುರಾರೋಗ್ಯ ಅಯಿಶ್ವ ರ್‍ಯ್ಯಾಭಿವೃದ್ಧಿಯಾಗಲೆಂದು ಬರಕೊಟ್ಟಂಥಾ ಶ್ರೀಪಾಲನ ಚರಿತೆ ಪುಸ್ತಕಕ್ಕೆ ಮಂಗಲ' ಎಂದಿದೆ. ಕೆಲವು ಪತ್ರಗಳ ಅಂಚು ಮುರಿದಿದೆ.

1796

ಕೆ.ಎ. ೨೧೦	**ಶ್ರೀಪಾಲಚರಿತೆ**	ಸಾಂಗತ್ಯ
೧೩" × ೭.೯"	ಮಂಗರಸ	೧೫೦೮
೧-೨೦೫ ಪತ್ರ	೨೩ ಪಂಕ್ತಿ	೧೮ ಅಕ್ಷರ

ಆದಿ : ಶ್ರೀಪಾಲ ಮಹಾರಾಜ ವ್ಯಾವರ್ನಕ ಕಥಾ ||
ಶ್ರೀಮದಮರಮಣಿಮುಕುಟರಂಜಿತ ರತ್ನ
ದಾಮಾಂಬು ಧಾರಾಧೌತಾ
ತಾಮರಸಾಂಘ್ರಿಯುಗಲ ವೀರನಾಥನು
ದ್ದಾಮ ಸುಖವನೀವುದೆಮಗೆ || ೧ ||

X X X X

ಸುರಭಿಸದೃಶ ದಾನಿ ಸುರುಚಿರ ಗುಣನಿಧಿ
ಯುರುತರ ಭೋಗಸಂಯುತನೂ
ಸೂರಪುರಕ್ಕೆಣೆಯನಿಸುವ ಕಲ್ಲಹಳ್ಳಿಯ
ಗರುವ ವಿಜಯಭೂವರನಾ || ೧೫ ||

ಆತನ ನಿಜನಂದನನಭಿನವ ಚಿತ್ರ
ಜಾತನುಜ್ವಲ ಕೀರ್ತಿಯುತನೂ
ಭೂತಳಪತಿ ಜಿನಭಕ್ತ ಮಂಗರಸ ತಾ
ನೋತು ಪೇಳಿದೆನೀ ಕೃತಿಯಾ || ೧೬ ||

ಅಂತ್ಯ : ಇದು ಭಾವಕಜನ ಕರ್ನ್ನವಿಭೂಷಣ
ಮಿದು ರಸಿಕರ ಚಿತ್ತದೆರಕಾ
ಯಿದು ವಾಣೀಮುಖ ಮಾಣಿಕ್ಯ ಮುಕುರ ಮ
ತ್ತಿದು ಶೃಂಗಾರ ಸುಧಾಬ್ಧಿ || ೧೦೭ ||

X X X X

ಅಂತು ಸಂಧಿ ೧೪ ಕ್ಕಂ ಪದನು ೧೫೨೭ ಕ್ಕಂ ಮಂಗಳ ಮಹಾಶ್ರೀ x x ಶ್ರೀಮತ್ಕನಕಾಚಲದ ಗುಂಡಿನ ಬ್ರಹ್ಮದೇವಾಯ ನಮಃ ॥ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ೧೭೬೩ ನೆಯ ವಿಕ್ರಮನಾಮ ಸಂವತ್ಸರದ ಮಾರ್ಗ್ಗಶಿರ ಶು ೧೫ ಆದಿವಾರ ಯೇಚಿಗಹಳ್ಳಿ ದೇವರಸಯ್ಯನ ಮಗನು ಬೊಂಮರಸೈಯ್ಯಗೆ ಮಲೆಯೂರ ದೇವೈಯ್ಯನ ಮಗನು ಬೊಂಮರಸೈಯ್ಯನ ಶ್ರೀಪಾಲ ಚರಿತೆಯನ್ನು ಪ್ರತಿ ಸಮಾನವಾಗಿ ಬರದನು । ಭದ್ರಂ ಶುಭಂ ಮಂಗಳಂ ॥ ಶ್ರೀ ॥

ವಿಷಯ : ಶ್ರೀಪಾಲರಾಜನ ಕಥೆ.

ವಿಶೇಷ : ಗ್ರಂಥಪ್ರಾರಂಭಕ್ಕೆ ಮೊದಲು ಬೇರೆರಡು ಪತ್ರಗಳಲ್ಲಿ ವಿಷಯ ಸೂಚಿ ಇದೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

1797

ಕೆ.ಬಿ. ೪/೨	**ಶ್ರೀಪಾಲಚರಿತೆ**	ಸಾಂಗತ್ಯ
೮.೩″×೫.೭″	ಮಂಗರಸ	೧೫೦೮
೨೭೫-೨೮೮ ಪತ್ರ	೧೫ ಪಂಕ್ತಿ	೨೭ ಅಕ್ಷರ

ಆದಿ : ಗೊವೆ ಶ್ರೀಪಾಲನ ಚರಿತೆ ಬರವುದಕ್ಕೆ ಶುಭಮಸ್ತು।

ಶ್ರೀಜಿನಸಿದ್ಧರು ಸೂರಿದೇಶಕ ಸಾಧು
ರಾಜಿಪ ಪದಪಂಕಜವನೂ ।
ಮೂಜಗನುತೆ ಶಾರದೆ ನಿಂನ ಚರಣವ
ನೋಜೆಯಿಂದಲಿ ಭಜಿಸುವೆನೂ ॥ ೧ ॥

x x x x

ಧರೆಗತಿಶಯ ಶ್ರೀಪಾಲನ ಚರಿತೆಯ
ವರ ಕವಿಗಳು ಮುಂನ ಪೇಳ್ದಾ
ನಿರುತದಿ ಆ ವಂಶದೊಳೇಕದೇಶವ ನಾನು
ಹರುಷದಿಂದಲಿ ಪೇಳುವೆನೂ ॥ ೭ ॥

ಅಂತ್ಯ : ಆ ಮಾತನು ಕೇಳದ ಮೇಘರಥನಾ ಗಮನದ
ಲೀ ಮಿಗೆ ಸಂತಸ ತಾಳಿ
ಕಾಮನ .... ದಿಯ ಸಮವೆನಿಸುವ
ಕಾಮಿನಿ ರತ್ನಾವಳಿ ಸಹವಾಗಿ ॥ ೯೭ ॥

ವಿಷಯ : ಶ್ರೀಪಾಲರಾಜನ ಕಥೆ.

ವಿಶೇಷ : ಅಸಮಗ್ರವಾಗಿದೆ. ಇದೇ ಪುಸ್ತಕದಲ್ಲಿ ನೇಮಿಜಿನೇಶಸಂಗತಿ ಎಂಬ ಕೃತಿ ಇದೆ.

1798

ಕೆ.ಬಿ. ೭೦	**ಶ್ರೀಪಾಲಚರಿತೆ**	ಸಾಂಗತ್ಯ
೭.೮"X೬.೩"	ಮಂಗರಸ	೧೫೦೮
೧–೧೩೪ ಪತ್ರ	೧೨ ಪಂಕ್ತಿ	೨೪ ಅಕ್ಷರ

ಆದಿ : ಶ್ರೀಪಾಲ ಚರಿತ್ರೆ ಬರಿಯುವದಕ್ಕೆ ಪ್ರಾರಂಭ X X
ಶ್ರೀಮದಮರ ಮಣೀಮುಕುಟರಂಜಿತ ರತ್ನ
ತಾಮರಸಾಂಘ್ರಿಯುಗಲವೀರನಾಥನು
ದ್ಧಾಮಸುಖವನೀವುದೆಮಗೆ ||

ಯಸಳ್ವಳೆಯಲ್ಲಾ ನುಡಿ ಸಿಂಗವಣೆ ಝುಲ್ಲಿ
ಯಸುಗೆ ಮುತ್ತಳೆಹಬೆವೆಳಸೂ
ಮಿಸುಗುವಚ್ಚರೆವರೆಸೆವ ಭವನಪಾದ
ಬಿಸರುಹಕಾನೆರಗುವೆನೂ || ೧ ||

ಅಂತ್ಯ : ಜಿನಮತ ವಾರ್ಧಿವರ್ಧನ ಚಂದ್ರನೆನಿಸಿದ
ವಿನುಜವಿಜೇಯ ಭೂವರನಾ
ತನುಜ ಮಂಗರ ನಿಂತಿದನುಸುರಿದೆ ಭವ್ಯ
ಜನರು ಮುದದಿ ಕೆ ಳುವದು || ೧೦೪

X X X X

ಯಿದು ಭಾವಕಜನ ಕರ್ನ್ನ ವಿಭೂಷಣ
ವಿದು ರಸಿಕರ ಚಿತ್ತದೆರಕ
ಯಿದು ವಾಣೀಮುಖಮಾಣಿಕ್ಯ ಮುಕುರ ಮ
ತ್ತಿದು ಶೃಂಗಾರಸುದಾಬ್ಧಿ || ೧೦೭ ||
ಶ್ರೀಮದಮರಮಣಿಮುಕುಟರಂಜಿತರತ್ನ
ಧಾಮಾಂಬುಧಾರಾಧೌತ
ತಾಮರಸಾಂಘ್ರಿಯುಗಳ ವೀರನಾಥನು
ದ್ದಾಮ ಸುಖವನೀವುದೆಮಗೆ || ೧೦೮ ||

ಅಂತೂ ಸಂಧಿ ೧೪ ಕ್ಕಾಂ ಪದನೂ ೧೫೨೭ ಕ್ಕಾಂ।' ಮಂಗಳ ಮಹಾಶ್ರೀ ಗ್ರಂಥಪ್ರಮಾಣ ೨೬೦೦ ಕ್ಕಾಂ ಮಂಗಳ ಮಹಾಶ್ರೀ

ವಿಷಯ : ಶ್ರೀಪಾಲರಾಜನ ಚರಿತ್ರೆ.

ವಿಶೇಷ : ಅಕ್ಷರಗಳು ವಿರಳವಾಗಿಯೂ, ಸ್ಫುಟವಾಗಿಯೂ ಇವೆ.

1799

ಕೆ.ಬಿ. ೮೬/೪	**ಶ್ರೀ ಪ್ರಸನ್ನಕೃಷ್ಣ ಕೊರವಂಜಿ ಕಥೆ**	ಯಕ್ಷಗಾನ
೮.೨" × ೬.೫"	ಕೃಷ್ಣರಾಜ	೧೯ನೆಯ ಶತಕ
೭೩-೮೫ ಪತ್ರ	೧೭ ಪಂಕ್ತಿ	೨೨ ಅಕ್ಷರ

ಆದಿ : ಶ್ರೀಪ್ರಸಂನಕೃಷ್ಣ ಕೊರವಂಜಿ ಕೊರವಂಜಿ ಕಥೆಯಂ ಬರಯುವದಕ್ಕೆ ನಿರ್ವಿಘ್ನಮಸ್ತು ॥

ಕಂ ॥ ಶ್ರೀಕರಗುಣಗಣರಾಜಿತೆ
ನಾಕಾಧಿಪ ಮುಖ್ಯವಿಬುಧನಮಿತಪದಾಂಭೋ
ಜಾಕಲಿತೆ ಲಲಿತೆಯಂನಂ
ಬೇಕಾದರ್ಥಗಳನಿತ್ತು ವಿಭವದಿ ಸಲಹೇ ॥ ೧ ॥

X X X X

ನರಪತಿ ಕೃಷ್ಣಧರಾಧಿಪ
ವಿರಚಿತ ನವಪಾರಿಜಾತ ವಿಮಲಸುಕಥೆಯೊಳ್
ಮುರರಿಪು ಧರಿಶಿದ ವೇಷದ
ಕೊರವಂಜಿಯ ಕಥೆಯ ನಾನು ಕುಶಲದಿ ಪೇಳ್ವೆ ॥ ೩ ॥

ಅಂತ್ಯ: ಹರಿಯು ನಿಂನನು ಪೆರದೂ ಕೋಪಗಳೆಲ್ಲ ಭರದಿ ಜಾರಲು ವಲಿದು ಪರಿಪರಿ ಭೋಗದಿ ಮೆರದು ಪೊದವಪೊಂದಿ । ಸರಸವನಾಡುತ್ತ । ಹರುಷವ ಮಾಡುವ । ಭಾಮೆ ॥ ೩ ॥ ಕೊರವಂಜಿ ಕಥೆಯು ಸಂಪೂರ್ಣಂ ಮಂಗಳ ಮಹಾಶ್ರೀ ॥

ವಿಷಯ : ಶ್ರೀಕೃಷ್ಣನು ಕೊರವಂಜಿ ವೇಷವನ್ನು ಧರಿಸಿದ ಕಥೆ.

ವಿಶೇಷ : ಇದೇ ಪುಸ್ತಕದಲ್ಲಿ ಪ್ರಹ್ಲಾದ ಚರಿತ್ರೆ, ದಾನವ್ರತ, ಸಮುದ್ರ ಮಥನದ ಕಥೆಗಳಿವೆ.

1800

ಕೆ.ಬಿ. ೨೪೨ **ಶ್ರೀಮತ್ತೆನ್ನಾಚಾರ್ಯ ಪ್ರಭಾವ ದೀಪಿಕಾ** ಗದ್ಯ

೭.೯" × ೬.೧" ? ?

೧-೮೯ ಪತ್ರ ೨೨ ಪಂಕ್ತಿ ೨೦ ಅಕ್ಷರ

ಆದಿ : ಅವತಾರಿಕೆ ಶ್ರಿಯಃ ಪತಿಯಾದ ಸರ್ವೇಶ್ವರನು ತನ್ನ ನಿರ್ಹೇತುಕ ಕೃಪೆಯಿಂದ ಆತ್ಮಗಳಿಗೆ ಕರಚರಣ ಮೊದಲಾದ ಅವಯವಗಳನ್ನೂ (ಹರ್ತುಂ ತಮುಸ್ಸದಸದೀ ಚ ದಿವೇತ್ತುಮಿಶೇಂ ಮಾನಂ ಪ್ರದೀಪಮಿವ ಕಾರುಣಿಕೋ ದದಾತಿ) ಎಂಬಂತೆ ಅಜ್ಞಾನವನ್ನ ಹೋಗಲಾಡಿಸಿ ಭಗವ ದ್ವಿಷಯವು ಸತ್ತೆಂದೂ ಸಂಚಾರವು ಅಸತ್ತೆಂದೂ ತಿಳಿಸುವದಕ್ಕೋಸ್ಕರ ವೇದಂಗಳೆಂಬ ದೀಪವನ್ನು ಕೊಟ್ಟನು.

ಅಂತ್ಯ : ಉಭಯವೇದ ಸಾಧಾರಣವಾದ ಇದರಲ್ಲಿ ವಿಶ್ವಾಸವುಂಟಾಗಿ ವೋದಿದವರಿಗೆ ಆಳ್ವಾರ್ರು (ವೇರಿಮಾರಾದ ಪೂಮೇಲಿರುಪ್ಪಾಳ್‌ವಿನ್ನೈತಿರ್ರುಮ್) ಯೆಂಬ ಹಾಗೆಯೆ ಶ್ರೀ ಲಕ್ಷ್ಮೀ ಅನುಗ್ರಹದಿಂದ ಸಕಲ ಹಣೇಬರಹವೂ ಹೋಗಿ (ನಲ್ಲಪದತ್ತಾರ್ ಮಳೆವಾಳ್ವಾರ್ ಕೊಂಡಪೆಂಡಿರ್ ಮಕ್ಕಳ್) ಯೆಂಬ ಹಾಗೇಯೆ ವೊಳ್ಳೇ ಸಂಪತ್ತಿನೊಡನೆಯೂ ಕೊಂಡ x x x ಯೆಂದು ತಿರುಮಂಗೈಯಾಳ್ವಾರ್ರು ಹೇಳಿದ ಮೇರೆಗೂ ಉಭಯ ವಿಭೂತಿಯನ್ನು ಆಳ್ವಾರ್ರ ಅನುಗ್ರಹದಿಂದ ಆಳಲು ಹೊಂದುವರು. ಜ್ಞಾನಕಾಂಡ ಸಂಪೂರ್ಣವು.

ವಿಶೇಷ : ವಿಶಿಷ್ಟಾದ್ವೈತ ಸಿದ್ಧಾಂತ (ತೆನ್ನಾಚಾರ್ಯ ಪ್ರಭಾವ).

ವಿಷಯಃ ಶಿಥಿಲ ಪ್ರತಿ. ವೋಡಿ ಅಕ್ಷರ. ಮೊದಲ ನಾಲ್ಕು ಪತ್ರಗಳಲ್ಲಿ ಗ್ರಂಥ ಪ್ರತಿ ಪಾದ್ಯ ವಿಷಯ ಸಂಗ್ರಹವಿದೆ ೫-೭೦ ಪತ್ರಗಳಲ್ಲಿ ಕರ್ಮಕಾಂಡ ವಿಚಾರವೂ ೭೧ ನೆಯ ಪತ್ರದಲ್ಲಿ ಒಂದು ಚಿತ್ರವೂ ೭೨ ರಿಂದ ಮುಂದೆ ಜ್ಞಾನಕಾಂಡ ವಿಚಾರವೂ ಇದೆ.

1801

ಕೆ.ಬಿ. ೨೫।೧ **ಶ್ರೀರಂಗಪಟ್ಟಣದ ಚರಿತ್ರೆ.** ಗದ್ಯ

೯.೫" × ೭" ? ?

೧_೮ ಪತ್ರ ೧೧ ಪಂಕ್ತಿ ೨೦ ಅಕ್ಷರ

ಆದಿ: ಶ್ರೀರಂಗಪಟಣದ ವಿಸ್ತಾರವೇನೆಂದರೆ। ಪೂರ್ವದಲ್ಲಿ ಗೌತುಮರು ಶ್ರೀರಂಗಪಟಣದಲ್ಲಿ ಬಹುತರ ತಪಸು ಮಾಡಿ ರಂಗನಾಥನಂನು ಪ್ರತ್ಯಕ್ಷ ವಂನ್ನು ಮಾಡಿಕೊಳಿ ಕೊಂಡದ್ದು ಯೇನೆಂದರೆ। ನಿಂಮ ಪೂಜೆಯಂನು ಸಾರ್ವಕಾಲದಲ್ಲು ಮಾಡಿಕೊಂಡು ಯಿರಬೇಕೆಂದು ಕೇಳಿದಕ್ಕೆ ರಂಗನಾಥ ಹೇಳಿದ್ದೇನೆಂದರೆ ನಾವು ವಂದು ಕಳೆಯಿಂದ್ದಾ ಪಶ್ಚಿಮರಂಗಾಯಂದಾಗಿ ಪಶ್ಚಿಮ ದಿಕ್ಕಿನಲ್ಲಿ ಅವತರಿಸುತ್ತೇನೆ.

ಅಂತ್ಯ: ಅಗಸ್ತ್ಯರಿಂದಾ ಪ್ರತಿಷ್ಠೆಯಾದಂತ್ಥಾ ಲಿಂಗಕ್ಕೆ ಪ್ರತಿಯುಗದಲ್ಲು ವಂದು ವಂದು ಹೆಸರು ಆಗತಲಿಥೆ. ಅಸ್ಯಾರ್ಥಃ ಶಂಕರಃ ಯೆಂತೆಂದ್ದು ಶಂಭು ಯಂತೆಂದ್ದು ಶಿತಿಕಂಠನೆಂದ್ದು ಗಂಗಾಧರನೆಂದ್ದು ನಾಲ್ಕು ಹೆಸರು ಆಗತಲಿಥೆ ಯಿಾ ಪ್ರಕಾರ ಶ್ರೀರಂಗಪಟ್ಣದ ಮಹಿಮೆಗಳು ಪೂರ್ವ ಪುಸ್ತುಕಗಳಲ್ಲಿ ಬರದ್ದು ಯಿದದ್ದು ಯತ್ತಿ ಪ್ರತಿ ಬರದುಯಿಥೆ ॥

ಅನಂತರ ಆನೇಗೊಂದೀಯಿಂದ ಬಂಧ ರಂಗರಾಯನು ಯಿಾಕೋಟೆಕಟ್ಟ॥ ಶ್ರೀರಂಗನಾಥ ದೇವರಿಗೆ ದೇವಸ್ಥಾನ ಕಟ್ಟಿಸಿ ಕೆಲವು ದಿನ ಯಿಾ ಸಂಸ್ಥಾನ ವನ್ನು ಆಳುತ್ತಾಯಿದ್ದನು ॥ x x x x ಶ್ರೀ ಕೃಷ್ಣ ವೈಕುಂಠಕ್ಕೆ ಹೋಗುವೆಡೆಯೊಳ್ ತಂನಾ ತಂಗಿಯಾದ ವೈಷ್ಣವಿಯನಿಪ ತಂಗಿಯಂ ಕರದು ನೀನು ನಂಮ ವಂಶದ ಕುಮಾರರಂ ಕರ್ನಾಟಕಭೂಮಿಯ ಸೇರಿಸಿ ನೀನು ಅವರಿಗೆ ಕುಲದೇವತೆಯಾಗಿ ನಿಂತು ರಾಜ್ಯವಂನ್ನು ಆಳುವಂತೆ ಯಸಗೂ ಯಂದು ಚಾಮುಂಡೀನಾಮದಿಂ ಮಹಿಶಿರಸ್ಸು ನಾಡಾದ ಮಹೀಶೂರ ಬಳಿಯಣ ಮಹಾಚಲದಲ್ಲಿ ಮನೆದೇವತೆಯಾಗಿ ನೆಲಶಿ ಆ ಸಮಿಾಪದ ಮಹೀಶೂರಪುರದಲ್ಲಿ ಆಯಾಯಾಥೊರೆಗಳಂ ತಾವು ಯಿಟ್ಟು ಕೊಂಡು ಯಿರುತ್ತಿರೆ ಪರಂಪರೆಯಲ್ಲಿಯ ಪರಿಯ ಬೆಟ್ಟದ ಚಾಮರಾಜ ವೊಡಯರು ಯಂದ್ದು ॥

ವಿಷಯ: ಶ್ರೀರಂಗಪಟ್ಟಣದ ಇತಿಹಾಸ ಮತ್ತು ಮೈಸೂರು ಅರಸರ ವಂಶಾವಳಿ.

ವಿಶೇಷ: ಅತ್ಯಂತ ಶಿಥಿಲಪ್ರತಿ. ಪತ್ರಗಳನ್ನು ಹುಳು ಹೊಡೆದಿದೆ. ಪುಸ್ತಕದ ಕೊನೆಯಲ್ಲಿ ೨೩ನೆಯ ಪತ್ರದಿಂದ ಮೂರು ಪತ್ರಗಳಲ್ಲಿ ಮತ್ತೆ ಶ್ರೀರಂಗ ಪಟ್ಟಣದ ಚರಿತ್ರೆ ಪುನರುಕ್ತವಾಗಿದೆ. ಮಧ್ಯದಲ್ಲಿ ಪ್ರಹ್ಲಾದ ಚರಿತ್ರೆಯ ಟೀಕು ಇದೆ. ಮೊದಲನೆಯ ಪತ್ರದಲ್ಲಿ ನಾಗರಿಲಿಪಿಯ ಒಂದು ಜಾತಕವೂ ಸುಂದರಕಾಂಡ ಸಪ್ತಸರ್ಗೀ ಪಾರಾಯಣದ ಸರ್ಗಸಂಖ್ಯೆಯೂ ಇದೆ.

1802

ಕೆ.ಬಿ. ೨೭೦ ಶ್ರೀರಂಗಮಾಹಾತ್ಮ್ಯ ಚಂಪು
೮.೨" × ೬.೬" ಚಿಕ್ಕುಪಾಧ್ಯಾಯ ಸು. ೧೬೭೨
೧-೨೪ ಪತ್ರ ೨೫ ಪಂಕ್ತಿ ೩೨ ಅಕ್ಷರ

ಆದಿ : ಶ್ರೀರಂಗಮಹಾತ್ಮೆ ಬರೆವರೆ ಶುಭಮಸ್ತು॥ X X X
ಶ್ರೀಕಾಂತಂ ಶೃತರಕ್ಷಣಾಂ ನಿರತನಂಭೋಜಾತಪತ್ರೇಕ್ಷಣಂ
ನಾಕಾಧೀಶ್ವರ ಮುಖ್ಯದೇವಗಣವಂದ್ಯಂ ರಾಕ್ಷಸಾರಾತಿ ದಿ-
ಶ್ಯಾಕಾರಂ ಪಣಿರಾಜತಲ್ಪಶಯನಂ ಸಂಹ್ಮಾತ್ರಗಾಮದ್ಯಗಂ
ಲೋಕೇಶಂ ವರದಾತನಕ್ಕೆಮಗೆ ಶ್ರೀರಂಗೇಶನೊಲ್ದಾವಗಂ ॥ ೧ ॥

X X X X

ವರದಂ ದೀನರ್ಗೆ ಮಾತಾಪಿತ್ರುಗಳಿಗುರುಭಕ್ತಂ ಪಿತಂ ಸೇವಕರ್ಗೆ
ಪರಮೈಶ್ವರ್ಯಕ್ಕೆ ರಾಮಕೃತಿ ಶೃತತತಿಗಬ್ಜಾಂಬಕಂಗಾನತಂ ಬಂ
ಧುರರತ್ನಂ ಕೋವಿದವ್ರಾತಕೆ ಮಿಗೆ ತಿಲಕಂ ಮಂತ್ರಿಗಳೆಂದೆನಲ್ ಶ್ರೀ
ಕರನಾಚಂದ್ರಾರ್ಕಮಿಂತಿರ್ದಪನುರೆ ಚಿಕುಪಾಧ್ಯಾಯವೀರಾಗ್ರಗಂಣ್ಯಂ॥೬॥

ಯಿಂದು ಸರ್ವೋತ್ಕೃಷ್ಟ ಪುಂಣ್ಯಚರಿತನಾದ ಚಿಕುಪಾಧ್ಯಾಯಂ ಚಿಕದೇವ
ರಾಯನನುಗ್ನೆಇಂ ಸರ್ವಲೋಕಹಿತಾರ್ಥಮಾಗಿ ರಂಗಮಹಾತ್ಮೆಯ ಕಂ
ನಡಿಸಿದನದೆಂತೆನೆ ॥

ಅಂತ್ಯ : ಯಿಾ ಮಹಾತ್ಮ್ಯವಂ ಆವವಂ ಕೇಳುತಿದ್ದನು। ಆವನಂ ಬರಿಯತಿದ್ದಾನೊ
ಅವವಂ ಪಾಪವಂ ಮಾಡುತಿದ್ದಾನೊ ಅತಂ ಯಿಾಲೋಕದಲ್ಲಿ ಸಕಲ
ಸುಖ ಸವುಖ್ಯಮಂ ಅನುಭವಿ ಅಂತ್ಯದಲ್ಲಿ ವಿಷ್ಣುಸಾಯುಜ್ಯವಂನೆ ಪಡೆವ
ನೆಂಬ ಕಥಾಸಂಗತಿಯಂ ನಾರದಂಗೆ ಪರಮೇಶ್ವರಂ ಬೋದಿಸುತಿರ್ದ
ನೆಂಬ ಕಥಾಸಂಗತಿಯಂ ಸರ್ವಜನರ್ಗೆ ಸುಲಭಮಾಗಿ ತಿಳಿವಂತೆ ಕರ್ನಾಟಕ
ಭಾಷಾರಚನೆಯಿಂ.

ಗದ್ಯ—ಯಿದುಸಕಲನೃಪಮುಕುಟಮಣಿಗಣ X X X X
ಕರ್ನಾಟಕಭಾಷ್ಯಕಾರ ಚಿಕುಪಾಧ್ಯಾಯವಿರಚಿತ ಶ್ರೀರಂಗಮಹಾತ್ಮೆ
ದಶಮಸರ್ಗಕ್ಕೆ ಸಮಾಪ್ತ ॥ ಮಂಗಳಂ ॥ ಶ್ರೀ ॥

ವಿಷಯ : ಶ್ರೀ ರಂಗಕ್ಷೇತ್ರ ಮತ್ತು ರಂಗೇಶ್ವರಮಾಹಾತ್ಮ್ಯ.

ವಿಶೇಷ : ಮೋಡಿ ಲಿಪಿ.

1803

ಕೆ.ಎ. ೫೨ | ಶ್ರೀರಂಗಮಾಹಾತ್ಮ್ಯ | ಚಂಪು
೭.೬" × ೬.೩" | ಮಲ್ಲಿಕಾರ್ಜುನ | ೧೭೦೦
೧-೧೧೬ ಪತ್ರ | ೧೧ ಪಂಕ್ತಿ | ೨೫ ಅಕ್ಷರ

ಆದಿ : ಶ್ರೀರಂಗಮಾಹಾತ್ಮ್ಯ ಬರೆಯುವುದಕ್ಕೆ ಶುಭಮಸ್ತು ॥ x x x

ವೃತ್ತ॥ ಶ್ರೀಕಾಂತಾಪತಿಯಬ್ಜನೇತ್ರವಹಿತಾಟೋಪಾಪಹಂ ವಿಶ್ವಹೃ
ದ್ಯಾ ಲ್ಪಾರ್ಚಿತ ವೈಭವಂ ಪರಗತಿ ಪ್ರೇಂಖದ್ವಿ ಭೇಂದ್ರಾಶ್ರಯಂ
ಸೌಕರ್ಯಾಕೃತಿ ಸಜ್ಜನಪ್ರಿಯನನಂತಾಭೋಗಭೋಗಾವಹಂ
ಲೋಕಾರಾಧ್ಯನುಪಾತ್ತಚಕ್ರನೆಮಗೀಗಾನಂದ ಸಂದೋಹಮಂ ॥ ೧ ॥

ಶ್ರೀ ಕಲ್ಯಾಣಪರಂಪರಾ ವಿಲಸಿತೋದ್ಯದ್ಭವ್ಯಧಾಮಂ ಕಳಾ
ನೀಕೋದಂಚಿತ ದಿವ ಮೂರ್ತಿ ಮಧುರಾವಾಸಪ್ರಿಯಂ ಸಂತತಂ
ಲೋಕಾರಾಧ್ಯನಜೇಯನುದ್ಧವ ಬಲಪ್ರೇಮಂ ಯಶೋದೋತ್ಸವಂ
ಶ್ರೀಕಾಂತಂ ಪುರುಷೋತ್ತಮಂ ಸಲಹ ಗೆಂಮಂ ಯಾದವಂ
ಮಾಧವಂ ॥ ೨ ॥

ಅಂತ್ಯ : ರಂಗೇಶ್ವರನ ವಿಮಾನದ
ಸಂಗತಿಯಂ ವರ್ಣಿಸಿದ ಮಹಾಕೃತಿಯಂ ಕೇ
ಳ್ವಂಗಂ ಪೇಳ್ವಂಗಂ ಜಯ
ಮಂಗಳಮಭಿವರ್ಧಿಕಚ್ಯುತಾನುಗ್ರಹದಿಂ ॥ ೬೫ ॥

ಶ್ರೀರಾಮಾನುಜಯೋಗಿ ಸ
ಮಾರಾಧಿತ ಪಾದಕಮಲ ಕಮಲಾನೀಳಾ
ಭೂರಮಣಿ ಕೇಕರರು
ಚಿರಜ್ಯೋತ್ಸ್ನಾ ಚಕೋರ ರಕ್ಷಿಪುದೆಮ್ಮಂ ॥ ೬೬ ॥

ಗದ್ಯ॥ ಇದು ಸಮಸ್ತ ಸಹೃದಯ ಹೃದಯಾಹ್ಲಾದಕಾರಿ ಶ್ರೀಮದ್ರಂಗನಾಥ ಚರಣಾರವಿಂದ ಮಕರಂದ ಪಾನಾಸಕ್ತ ಮಿಳಿಂದ ಕಲ್ಪಸಂಕಲ್ಪ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರಾಪ್ರತಿಮ ಪ್ರೌಢಪ್ರತಾಪ ಶ್ರೀ ಚಿಕ್ಕದೇವರಾಜ ಕಾರ್ಯಧುರಂಧರ ಮಂತ್ರಿಪ್ರಧಾನ ವಿನಯ ವಿಧೇಯ ಶ್ರೀ ಚಿಕ್ಕುಪಾಧ್ಯಾಯಪ್ರೇರಿತ ಮಲ್ಲಿಕಾರ್ಜುನಪ್ರಣೀತಮಪ್ಪ ಶ್ರೀರಂಗಮಾ

ಹಾತ್ಮ್ಯೆಯೊಳ್ ರಂಗೇಶ್ವರಮಹಿಮಾಸ್ಥಲ ಮಾಹಾತ್ಮ್ಯತೀರ್ಥ ಮಾಹಾತ್ಮ್ಯಾದಿವರ್ನನಂ ದ್ವಾದಶಾಶ್ವಾಸಂ ಸಂಪೂರ್ಣಂ। ಅಂತೂ ಆಶ್ವಾಸ ೧೨ ಕ್ಕಾಂ ಪದನೂ....ಕ್ಕಾಂ ಮಂಗಳ ಮಹಾಶ್ರೀ ॥

ವಿಷಯ : ಶ್ರೀರಂಗಕ್ಷೇತ್ರ ಮತ್ತು ರಂಗೇಶ್ವರಮಾಹಾತ್ಮ್ಯೆ.

ವಿಶೇಷ : ಸ್ಫುಟ ಮತ್ತು ಸುಂದರಾಕ್ಷರ.

1804

ಕೆ.ಎ. ೧೯೪	**ಶ್ರೀರಂಗಮಾಹಾತ್ಮ್ಯೆ**	ಗದ್ಯ
೧೩" × ೮"	ಸಿಂಗರಾರ್ಯ	ಸು. ೧೭೭೦
೧-೫೭ ಪತ್ರ	೨೭ ಪಂಕ್ತಿ	೨೪ ಅಕ್ಷರ

ಆದಿ : ಶ್ರೀರಂಗ ಮಾಹಾತ್ಮ್ಯಂ ॥ ವೃತ್ತಂ ॥

ಭೂಭೃದ್ವರ್ಯ್ಯಕದಂಬವಂದಿತ ಪದದ್ವಂದ್ವಾರವಿಂದೋಲ್ಲಸಂ
ಶ್ರೀಭೃದ್ವೆಟ್ಟದ ಚಾಮಭೂಪನ ಮಹದ್ವಂಶಾವಳೀಸಂಶ್ರುತಂ
ಸಭ್ಯಂ ಸಂಪ್ರತಿ ಸಿಂಗರಾರ್ಯ ಕವಿರಾಡಧ್ಯಾಪಕಂ ಕಂನಡ
ಶ್ರೀ ಭಾಷಾತತಿಯಿಂ ಬುಧಂ ರಚಿಸಿದಂ ಶ್ರೀರಂಗಮಾಹಾತ್ಮ್ಯಮಂ ॥೧॥

x x x x

ವಚನಂ ॥ ದೇವ ಋಷಿಯಾದ ನಾರದನು ಯಿಾ ಪ್ರಕಾರವಾಗಿ ಪರಮೇಶ್ವರನಂನ್ನು ಪ್ರಶ್ನೆಯಂ ಮಾಡಿದನದೆಂತೆನೆ ॥ ಎಲೆ ಯಿಾಶ್ವರನೆ। ಸ್ವರ್ಗ ಮರ್ತ್ಯಪಾತಾಳಗಳೆಂಬ ಮೂರುಲೋಕಂಗಳಲ್ಲಿಯೂ ಯಿಾವ ಸಾತ್ವಿಕ ರಾಜ ತಾಮಸ ಮೊದಲಾದ ಸಮಸ್ತ ಸದ್ಧರ್ಮವು x x x x ಕಾವೇರಿ ಮಧ್ಯದಲ್ಲಿಯಿರುವಂಥ ಚಂದ್ರಪುಷ್ಕರಣೀ ತೀರ್ಥದ ತಡಿಯಲ್ಲಿ ಯಿರುವಂಥ ಶ್ರೀರಂಗ ಮಹಿಮೆಯಂ ಪಾಪಕ್ಷಯಕ್ಕೂ ಪುಣ್ಯವರ್ಧಿಸುವದಕ್ಕೋಸ್ಕರಲು ಯಿಾಗ ಹ್ಯಾಗೆ ವಿಸ್ತಾರವಾಗಿ ಕೇಳುವುದಕ್ಕೆ ಯಿಚ್ಚೈಸುತ್ತಲಿಧೇನೆ। ಯಂದು ಯಿಾ ಪ್ರಕಾರವಾಗಿ ನಾರದನಿಂದ ಕೇಳಲ್ಪಟ್ಟ ಯಿಾಶ್ವರನು.

ಅಂತ್ಯ : ಯಿಾ ಶ್ರೀರಂಗ ಮಹಾತ್ಮ್ಯವು ನಂನಿಂದ ಹೇಳಲ್ಪಟ್ಟಿತು। ಎಲೆ ನಾರದನೆ ಯಿಷ್ಟುಮಾತ್ರ ಹೇಳಬಹುದು। ನಿಂನಿಂದ ಕೇಳಲೂ ಬಹುದು। ಶ್ರೀರಂಗವು ಭೂಲೋಕಕ್ಕೆ ಬಂದದ್ದು ಕಲ್ಪಾಂತರದಲ್ಲಿ ಸತ್ಯಲೋಕವಂನ್ನೈದುವದು। ಯಿದೆ ಶ್ರೀರಂಗ ಮಹಿಮೆಯು। ನನ್ನಿಂದ ನಿನಿಗೆ ಹೇಳಲ್ಪಟ್ಟಿತು ॥

x x x x ಕೇಳಿದವರು ಸಮಸ್ತ ಪುಣ್ಯಪಾಪಂಗಳಂ ಬಿಟ್ಟು ಯಿಹದಲ್ಲಿ ಸಕಲ ಬಾಗ್ಯಭೋಗಂಗಳಂ ಅನುಭವಿಶಿ ಶರೀರಾವಸಾನದಲ್ಲಿ ಮೋಕ್ಷ ಸಾಮ್ರಾಜ್ಯಮಾದ ಪರಮಪದವಂನೈದುವರೆಂದು ಬ್ರಹ್ಮಾಂಡ ಪುರಾಣದಲ್ಲಿ ಯಿಶ್ವರನು ನಾರದನಿಗೆ ನಿರೂಪಿಸ್ತನೆಂಬಲ್ಲಿ ||

ಶ್ರೀಮದ್ರಾಜಾದಿರಾಜ ರಾಜಪರಮೇಶ್ವರ ಪ್ರೌಢ ....ಯದುಕುಲ ಪಯಃ ಪಾರಾವಾ ಕಲಾನಿಧಿ ಬಿರುದಾಂತೆಂಬರಗಂಡ ಲೋಕೈಕ ವೀರ ಶ್ರೀ ನ ಪತಿ ಬೆಟ್ಟಚಾಮುಮಹಾರಾಯನ ವುಪಾಧ್ಯಾಯ ಶಿಂಗರಾಚಾರ್ಯ ವಿರಚಿತಮಪ್ಪ ಶ್ರೀರಂಗ ಮಹಾತ್ಮ್ಯದೊಳ್ ತೀರ್ಥವಿಶೆ ....ಮಮಾದ ಪತ್ತನೆ ಅಧ್ಯಾಯಕ್ಕಂ ಮಂಗಳಮಹಾಶ್ರೀ ||

ವಿಷಯ : ಶ್ರೀರಂಗಕ್ಷೇತ್ರ ಮತ್ತು ರಂಗೇಶ್ವರ ಮಾಹಾತ್ಮ್ಯೆ.

ವಿಶೇಷ : ಸ್ಫುಟಾಕ್ಷರ, ಗ್ರಂಥಾರಂಭಕ್ಕೆ ಮೊದಲು ಬೇರೊಂದು ಪತ್ರದಲ್ಲಿ ವಿಷಯಾನುಕ್ರಮಣಿಕೆ ಇದೆ. ಪ್ರತಿಯ ಕಾಲ ೧೮೯೫.

1805

ಕೆ.ಬಿ. ೩೨೪/೨	**ಶ್ರೀರಂಗಮಾಹಾತ್ಮ್ಯೆ**	ಗದ್ಯ
ಅ.೩"×೬.೫"	**ಹೆಪ್ಪಳಾಚಾರ್ಯ**	೧೯ನೆಯ ಶತಕ
೧—೩೨ ಪತ್ರ	೧೮ ಪಂಕ್ತಿ	೨೫ ಅಕ್ಷರ

ಆದಿ : ಶ್ಲೋಕಾ || ಶುಕ್ಲಾಂಬರಧರಂ ವಿಷ್ಣುಂ ಶಶಿವರ್ನಂ ಚತುರ್ಭುಜಂ |
ಪ್ರಸನ್ನಾವದನೋ ಧ್ಯಾಯೇ ಸರ್ವವಿಘ್ನೋಪಶಾಂತಯೇ ||
ತಸ್ಮೈ ಶ್ರೀ ಗಣಾಧಿಪತಯೇ ನಮಃ ||
ಗುರುಬ್ರಹ್ಮ ಗುರುರ್ವಿಷ್ಣುಂ ಗುರುರ್ದೇವೋ ಮಹೇಶ್ವರಃ |
ಗುರು ಸಾಕ್ಷಾತ್ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ ||

ಶ್ರೀರಂಗ ಚರಿತ್ರೆ ಬರೆಯುವದಕ್ಕೆ ಶುಭಮಸ್ತು |

ಶ್ಲೋ || ಕಾವೇರಿ ಗಿರಿಜಾತೋಯಂ ವೈಕುಂಠ ರಂಗಮಂದಿರಂ |
ಪರವಾಸುದೇವೋ ರಂಗೇಶಂ ಪ್ರತ್ಯೇಕ್ಷಂ ಪರಮಂಪದಂ ||

ಶ್ರೀರಂಗನಾಥ ಚರಿತ್ರೆ.

ಶ್ರೀ ಕೈಲಾಸವಾಸನಾದ ಪರಮೇಶ್ವರನೂ ತನ್ನ ಪ್ರಮಥ ಗಣಂಗಳೂ ನಂದೀಶ್ವರಾ | ಗುಂಹೇಶ್ವರಾ| ವೀರಭದ್ರಾ| ಕುಮಾರಸ್ವಾಮಿ| ಗಣಪತಿ|

ಯಿನ್ನು ಮುಂತಾದ ಪ್ರಮಥಗಣಂಗಳು ಕೂಡಿಯಿರುವಂಥ ಕೈಲಾಸಕ್ಕೆ ತಪಸ್ಸಿನಲ್ಲಿ ಪ್ರಬಲವಾಗಿ ಯಿರುವಂಥಾ। ನಾರದಾ। ಪ್ರಹಲ್ಲಾದ। ಪರಾಶರಾ। ಪುಂಡರೀಕ। ಅಂಬರೀಷ। ಭೀಷ್ಮ। ವ್ಯಾಸ। ರುಕ್ಮಾಂಗದ। ಅರ್ಜುನ। ವಸಿಷ್ಠ। ಮಹಾಬಲಿ। ವಿಭೀಷಣಾ। ಯಿವರು ಪರಮಭಾಗವತರು। ಅಂಥಾ ಪರಮ ಭಾಗವತರಲ್ಲಿ ಶ್ರೇಷ್ಠವಾಗಿ ಯಿರುವಂಥಾ ನಾರದಮಹಾಮುನಿಯು ಕೈಲಾಸಕ್ಕೆ ಬಂದು ಪರಮೇಶ್ವರನಿಗೆ ಸಾಷ್ಟಾಂಗ ವಂದನೆಯಂ ಮಾಡಿ x x x x ವೋ ನಾರದಮುನಿಯೆ ಯಿಾ ಶ್ರೀರಂಗ ಮಹಾತ್ಮೆಯು ಆದಿವೇದದಲ್ಲಿ ಯಿರುವ ಸಾರವನ್ನು ತೆಗದು ನಿನಗೆ ವಿಸ್ತಾರವಾಗಿ ಹೇಳಬೇಕೆಂದರೆ ಹತ್ತು ಸಾವಿರ ವರುಷ ಪರಿಯಂತ್ರ ವಾದರೂ ತೀರುವದಿಲ್ಲ। ಆದರೆ ಸ್ವಲ್ಪವಾಗಿ ಹೇಳುವಂಥಾವನಾಗುತ್ತೇನೆಂದು ಪರಮೇಶ್ವರನು ಹೇಳುವಂಥಾವರಾದರೂ ॥ ಅದೆಂತೆನೆ ॥

ಅಂತ್ಯ: ಶ್ರೀರಂಗ ಸ್ಥಳದಲ್ಲಿ ವಂದು ಪಶುವಿಗೆ ವಟ್ಟೆ ತುಂಬಾ ಹುಲ್ಲು ಹಾಕಿ ತೃಪ್ತಿ ಪಡಿಸಿದರೆ ಅವನ ಪಿತೃಗಳೆಲ್ಲಾ ಗಯಾಶ್ರಾದ್ಧ ಮಾಡಿದರೆ ಯಷ್ಟು ಸಂತೋಷವೋ ಅಷ್ಟು ಸಂತೋಷ ಹೊಂದುವಂತಾವರಾಗುವರು॥ ಯಿಂತು ಶ್ರೀರಂಗ ಮಹಾತ್ಮೆಯನ್ನು ನಿನಗೆ ಹೇಳುವಂತಾವರಾದೆವೆಂದು ನಾರದರಿಗೆ ಪರಮೇಶ್ವರನು ಹೇಳುವಂತಾವರಾದರು ॥ x x x x ಯಿಾ ಶ್ರೀರಂಗ ಮಹಾತ್ಮೆಯು ಬ್ರಹ್ಮಾಂಡ ಪುರಾಣದಲ್ಲಿ ಪರಮೇಶ್ವರನಿಗೂ ನಾರದರಿಗೂ ಸಂವ್ವಾದದಲ್ಲಿ ಶ್ರೀರಂಗ ಮಹಾತ್ಮೆಯು ಯಾವಾಗಲು ತೀರದ ವೈಭವವನ್ನು ಹಪ್ಪಳಾಚಾರ್ಯರು ಯಿಾ ಗ್ರಂಥವನ್ನು ಅರುಹುಮಾಡಿದಂತಾವರಾದರು॥ ಯಿಾ ಅರುಹು ಭಾಷೆಯಲ್ಲಿಯಿದ್ದ ಶ್ರೀರಂಗ ಮಹಾತ್ಮೆಯನ್ನು ಕಂನ್ನಡ ಭಾಷೆಯಲ್ಲಿ ವಿರಚಿಶಿದರೆಂಬಲ್ಲಿಗೆ ಅಧ್ಯಾಯ ೧ಂಕ್ಕಂ ಮಂಗಳಂಮಹಾಶ್ರೀ ಶ್ರೀರಂಗ ಚರಿತ್ರೆ ಸಂಪೂರ್ನಂ ॥

ವಿಷಯ: ಶ್ರೀರಂಗ ಕ್ಷೇತ್ರ ಮತ್ತು ರಂಗೇಶ್ವರ ಮಾಹಾತ್ಮ್ಯ.

ವಿಶೇಷ: ಸುಂದರಾಕ್ಷರ. ಇದೇ ಪುಸ್ತಕದಲ್ಲಿ ಪಂಚವಿಶತಿ ಪದ್ಧತಿ ವ್ಯಾಖ್ಯಾ, ಜ್ಞಾನೋಪದೇಶ, ಶನೈಶ್ಚರದಂಡಕ ಎಂಬ ಕೃತಿಗಳಿವೆ. ಕೊನೆಯ ಪುಟದಲ್ಲಿ ಒಂದೆರಡು ಔಷಧಗಳ ವಿವರವಿದೆ.

1806

ಕೆ. ೩೫೫/೮ ಶ್ರೀರುದ್ರಭಾಷ್ಯ ಟೀಕು ಶ್ಲೋಕ, ಟೀಕು

೮.೫" × ೧.೯" ಸೋಸಲೆ ರೇವಣಾರ್ಯ ೧೬೨೩

೮೬–೧೧೫ ಪತ್ರ ೧೨ ಪಂಕ್ತಿ ೫೦ ಅಕ್ಷರ

ಆದಿ: ಶ್ರೀರುದ್ರಭಾಷ್ಯದ ಟೀಕು

ಕ್ಷೇತ್ರಾಣಾಮವಿಮುಕ್ತ ವತ್ಸರತರಂ ಮಧ್ಯೇ ಶ್ರುತೀನಾಂ ವರಂ
ಭಾಷ್ಯಂ ಭಾಸುರಮುಕ್ತಿದಂ ಪುನರಿದಂ·ಕರ್ನ್ನಾಟಭಾಷಾಹ್ವಯಂ
ಯಾ ತನ್ಮಧ್ಯಸ್ಥಿತ ಪಂಚಕಾರ್ನ ಮಧುನಾ ಮಾಹಾತ್ಮ್ಯ ಭೂತಂ ಪರಂ
ಶ್ರೋತವ್ಯಂ ಮಹನೀಯ್ಯ ವಾಚಕಮಹೋ ಶ್ರೀರುದ್ರಮಂ ಸ್ಫುಟಂ ||

X X X X

ರುದ್ದುಃಖಂ ದುಃಖ ಹೇತುರ್ವಾ | ತಂ ದ್ರಾವಯತಿ ನಃ ಪ್ರಭುಃ |
ರುದ್ರಣತ್ಯುಚ್ಯತೇ ಸದ್ಭಿಃ | ಶಿವ ಪರಮ ಕಾರಣಂ ||
ಟೀ || ರುತ್ | ಯಂದಡೆ ದುಃಖ ವಾ | ಅಲ್ಲಾ | ಮತ್ತೆ | ದುಃಖಹೇತುಃ |
ದುಃಖಕ್ಕೆ ಕಾರಣವಾದರೂ ಆಗಲಿ

ಅಂತ್ಯ: ತೇಭ್ಯೋ ನಮಸ್ತೇ ನೋ ವೃಡಯಂ ಮತೆ ಯಂದಿಷ್ಮೋ
ಯಶ್ಚ ನೋ ದ್ವೇಷ್ಟಿತಂ ಬಜಂಭೇ ದಧಾಮಿ ||
ಈ ಪ್ರಕಾರವಾಗಿ ದಿಕ್ಕುಗಳನು ಕುರಿತು ಹತ್ತು ಅಂಜುಲಿಗಳಿಂದೆ | ಯಃ |
ಆವಾತನು | X X X X
ಇತಿ ಶ್ರೀರುದ್ರಭಟ್ಟ ಭಾಸ್ಕರ ವಿರಚಿತೆ ಯಜುರ್ವೇದ ಭಾಷ್ಯೇ ಜ್ಞಾನ
ಯಜ್ಞಾಖ್ಯೇ ಅಗ್ನಿಕಾಂಡೇ ಪಂಚಮಪಾಠಕೆ ಶ್ರೀರುದ್ರಭಾಷ್ಯೇ ಕರ್ನಾಟ
ಭಾಷಾ ವಿವೃತೋ ಯೇಕಾದಶೋನುವಾಕಃ || ೧೧ || ಶ್ರೀರುದ್ರ ಭಾಷ್ಯದ
ಟೀಕು ಸಂಪೂರ್ಣ || ಫಲಶೃತಿ || ಶಾತಾತಪಶ್ರುತೌ | ಸ್ತೇಯಂ ಕೃತ್ವಾ
ಗುರುಧಾರಾಂಶ್ಚ ಗತ್ವಾ ಸುರಾಂಪೀತ್ವ ಬ್ರಹ್ಮಹತ್ಯಾಂ ಚ ಕೃತ್ವಾ ಭಸ್ಮಚ್ಛಂ
ನೊ ಭಸ್ಮಶಯ್ಯಾಚ್ಛಯಾನೋ ರುದ್ರಾಧ್ಯಾಯಿಾ ವ ಎಚ್ಯತೇ ಸರ್ವಪಾಪ್ಯೈ||

X X X X

ವೃ|| ಅರಿಸದೃಶಮತಿಸಾರಂ ಭಕ್ತಿಗಮ್ಯಂ ಪುನೀತಂ
ರುಜಿನವನ ಕುಠಾರ ಶಾಂಕರಂ ಸೋ ಮುಕ್ತಂ
ಪಠತಿ ನಿಗಮಸಾರಂ ಯಃ ಪುಮಾನ್‌ಸ್ತೌತಿ ನಿತ್ಯಂ
ಪ್ರಚುರವರ್ನ್ನ ಶ್ರೀ ರುದ್ರಮಂತ್ರಂ ಶ್ರೀಯಾಢ್ಯಂ
ಇತಿ ಶ್ರೀರುದ್ರ ಸಂಪೂರ್ಣಂ ಮಂಗಳ ಮಹಾಶ್ರೀ

ವಿಷಯ : ವೇದಾಂತ.

ವಿಶೇಷ : ಶಕಟರೇಫ ಇದೆ. ಇದರಲ್ಲಿ ತತ್ತ್ವಪ್ರಕಾಶಿಕಾಟೀಕ. ಮೊದಲಾದ ಇತರ ಹದಿನಾರು ಗ್ರಂಥಗಳಿವೆ.

1807

ಕೆ. ೫೩೫ | ಶ್ರೀರುದ್ರಭಾಷ್ಯ ಟೀಕು | ಶ್ಲೋಕ, ಟೀಕು

೧೩.೯″×೧.೯″ | ಗುರುನಂಜ | ಸು. ೧೫೦೦

೪–೩೧ ಪತ್ರ | ೧೦ ಪಂಕ್ತಿ | ៦೫ ಅಕ್ಷರ

ಆದಿ : ಶ್ರೀರುದ್ರಭಾಷ್ಯಕ್ಕೆ ಟೀಕು ॥

ಕ್ಷೇತ್ರಾಣಮವಿಮುಕ್ತವತ್ಪರತರಂ ಮಧ್ಯೇ ಶ್ರುತೀನಾಂ ವರಂ
ಭಾಷ್ಯಂ ಭಾಸುರ ಮುಕ್ತಿದಂ ಪುನರಿದಂ ಕರ್ಣಾಟ ಭಾಷಾಹ್ವಯಾ
ತನ್ಮಧ್ಯಸ್ಥಿತ ಪಂಚಕಂರ್ಣಾ ಮಧು ನಾಮಾತ್ಮಹುಭೂತಂ ಪರಂ
ಶ್ರೋತವ್ಯಂ ಮಹನೀಯ ವಾಚಕಮಹೋ ಶ್ರೀರುದ್ರಮಂತ್ರಂ ಸ್ಫುಟಂ ॥

X X X X

ಟೀಕು ॥ ರುತುಯೆಂದೊಡೆ ದುಃಖದಾ । ಅಲ್ಲಾ ಮತ್ತೆ । ದುಃಖಹೇತುಃ । ದುಃಖಕ್ಕೆ ಕಾರಣವಾದರೂ ಆಗಲಿ । ಪ್ರಭುಃ ಸ್ವತಂತ್ರ ಕರ್ತೃವಾದ ಪರಮೇಶ್ವರನೂ । ನಃ ನಂಮ । ತಂ ಆ ದುಃಖವನು । ದ್ರಾವಯೆತಿ ತೊಲಗಿಸುತ್ತಿದ್ದಾತನು । ಇತಿ ಹೇತೋಃ ಇದು ಕಾರಣವಾಗಿ । ಪರಮ ಕಾರಣಂ ಬಿಂದು ಮಾಯೆ ಪ್ರಕೃತಿಗಳು ಕಾರಣಂಗಳು ॥

ಅಂತ್ಯ : ೧೦ ॥ ವಿಕಿರಿತ ವಿಲೋಹಿತ । ನಮಸ್ತೇ ಅಸ್ತು ಭಗವಃ ಯಾಸ್ತೇ ಸಹಸ್ರಂ ಹಿ ಯೋನ್ಯವಸ್ಮಿ ತನಿವಪಂತುತಾಃ ॥ ವಿಕಿರಿತ ಯಂಬ ಮಂತ್ರಕ್ಕೆ ಪುಲ ಹರುಷಿಃ । ಅನುಷ್ಟು ಪುಚ್ಛಂದಸ್ಸು ಶಂಭುವೇ ಅಧಿದೇವತೆ । X X X X ೧॥ ಸಹಸ್ರಾಣಿ ಸಹಸ್ರಧಾ ಬಾಹವಸ್ತು ವಹೇತಯಃ । ತಾಸಾಮಿಶಾನೋ ಭಗ ...... ಯಂಬ ಮಂತ್ರಕ್ಕೆ ನಾರದರುಷಿಃ । ಅನುಷ್ಟುಪು ಚ್ಛಂದಸ್ಸು । ರುದ್ರನೆ ಅಧಿದೇವತೆ । ಸಹಸ್ರಾಣಿ । ಅತ್ಯಂತ ಬಹಳಗಳಾದ । ಸಹಸ್ರದಾ ಸಾವಿರ ಪ್ರಕಾ .... ಯು ... ...

ವಿಷಯ : ವೇದಾಂತ.

ವಿಶೇಷ : ನಾಲ್ಕನೆಯ ಪತ್ರದ ಮೂರನೆಯ ಪಂಕ್ತಿಯಲ್ಲಿ ಕಅಕ್ಷರಾಂಕ ಗದ್ಯಸಮಾಪ್ತ ಮಂಗಳಮಹಾಶ್ರೀ' ಎಂದಿದ್ದು ಬಳಿಕ ರುದ್ರಭಾಷ್ಯಕ್ಕೆ ಟೀಕು ಬರೆಯಲು ಪ್ರಾರಂಬಿಸಿರುವುದರಿಂದ ಈ ಕಟ್ಟಿನ ೧ರಿಂದ ೩ ಪತ್ರಗಳಲ್ಲಿ ಅಕ್ಷರಾಂಕ ಗದ್ಯವಿದ್ದಿತೆಂದು ತಿಳಿದುಬರುತ್ತದೆ. ಅಸಮಗ್ರ ಪ್ರತಿ. ೪, ೫, ೬, ೩೧ನೆಯ ಪತ್ರಗಳ ಅಂಚು ಮುರಿದು ಶಿಥಿಲವಾಗಿವೆ.

1808

ಕೆ. ೨೨೫/೫	ಷಟ್ಚಕ್ರ (ಮೇಘಚಕ್ರ ಇತ್ಯಾದಿ)	ಗದ್ಯ
೧೩" × ೧.೫"	?	?
೮೬-೧೦೭ ಪತ್ರ	೧೨ ಪಂಕ್ತಿ	೪೦ ಅಕ್ಷರ

ಆದಿ : ಶ್ರೀ x x ಶಡುಚಕ್ರ ಬರೆಯುದಕ್ಕೆ ನಿವಿಘ್ನಮಸ್ತೂ x x x ಬ್ರಹ್ಮಾಂಡ ಚಕ್ರದಂಡ | ಚಿತ್ತ ಚಿತ್ತ ಭೂತನಾಳದಂಡ | ಜೋತಿನಾಂ ಹಪದಂಡ | ತ್ರ್ಯನತ್ರ್ಯೋಸ್ತಲಿತ : ಶಿಕಭೂತಾದ್ವಿ....ಕಾಲದಂಡ | ಧರೆಯಿಂದಂ ಮೇಲೆ ಹಂನೆರಡು ಯೋಜನದ ಪ್ರಮಾಣದಲ್ಲಿ ಶಿಡಿಲು ಮಿಂಚುಗಳಿಹವು.

ಅಂತ್ಯ : ಅಂತಾ ವರುಷ ಅರುವತ್ತು ಕೂಡಲು ವಂದು ಸಂತ್ಸರಾ | ಅಂತಾ ಸಂವತ್ಸರ ನೂರಿಪ್ಪತ್ತಾದರೆ ಬ್ರಹ್ಮಂಗೆ ಪರಮಾಯು | ಅಂತಾ ಬ್ರಹ್ಮಂನು ಅರವತುನಾಲ್ಕು ವೇಳೆ ತಿರುಗಿದರೆ ಚಿಪ್ಪಜನೆಂಬ ಮುನಿಗೆ | ವಂದಾ ಚಿಪ್ಪು ಸಡಿಲುದು| ಅಂತಾ ಬ್ರಂಹ್ಮಸಹಾಸ್ತ್ರವೇಳೆ ತಿರುಗಿದರೆ | ಚಿಪ್ಪಜಂಗೆ

ವಿಷಯ : ಲೋಕಸ್ವರೂಪ, ಇತ್ಯಾದಿ.

ವಿಶೇಷ : ಈ ಷಟ್ಚಕ್ರಗಳಲ್ಲಿ ಮೇಘಚಕ್ರ, ಘಟಚಕ್ರ, ಚಂನಡಣಾಯಕರ ನಿರೂಪ ವಚನ, ಭೂಚಕ್ರ, ಬ್ರಹ್ಮಾಂಡಚಕ್ರ, ಕಾಲಚಕ್ರ ಮೊದಲಾದುವು ಇವೆ. ಈ ಕಟ್ಟಿನಲ್ಲಿ ಹೋಳಿನ ಹಂಪಯ್ಯನ ಸ್ತುತಿ, ಸುಭಾಷಿತ ಟೀಕು ಮೊದಲಾದ ಇತರ ಗ್ರಂಥಗಳಿವೆ.

1809

ಕೆ. ೬೧೭	ಷಟ್‌ಪಂಚಾಶತ್ಸಿೀಕಾ	ಟೀಕು
೧೪.೩" × ೧.೫"	?	?
೧-೧೯ ಪತ್ರ	೭ ಪಂಕ್ತಿ	೫೨ ಅಕ್ಷರ

ಆದಿ : ಕೇಶಾಜಾಕ್ಷನಿಶಾಕರ ಕ್ಷಿತಿಜವಿಟ್‌ಜೀವಾಸ್ಪುಜಿತ್ಸೂರ್ಯಜಾನ್
ವಿಘ್ನೇಶಂ ಸ್ವಗುರುಂ ಪ್ರಣಮ್ಯ ಶಿರಸಾ ದೇವೀಂ ಚ ವಾಗೀಶ್ವರೀಂ
ಪ್ರಶ್ನಜ್ಞಾನವಿಧೌ ವರಾಹಮಿಹಿರಾಪತ್ಯಸ್ಯತದ್ವಸ್ತುನೋ
ಲೋಕಾನಾಂ ಹಿತಕಾಮ್ಯಯಾ ದ್ವಿಜವರಃ ಟೀಕಾಂ ಕರೋಮ್ಯುತ್ಪಲಃ ॥೧॥

x x x x

ಚ್ಯುತಿರ್ವಿಲಗ್ನಾದ್ಧಿಬುಕಾಚ್ಚ ವೃದ್ಧಿ
ವ ಸ್ಥ್ಯಾತ್ಪ್ರವಾಸೋಸ್ತಮಯಾನ್ನಿವೃತ್ತಿಃ
ವಾಚ್ಯಂ ಗ್ರಹೈಃ ಪ್ರಶ್ನವಿಲಗ್ನಕಾಲೇ
ಗೃಹಂ ಪ್ರವಿಷ್ಟೋಹಿ ಬುಕೇಪ್ರವಾಸೀ ॥ ೩ ॥

ಈ ಶ್ಲೋಕದ ಅಭಿಪ್ರಾಯ । ಚ್ಯುತಿರ್ವಿಲಗ್ನಾತ್ ಯಂದು । ಪ್ರಶ್ನೆಯ ಕೇಳುವ ಪುರುಷನು ತಾನಿದ್ದ ಸ್ಥಾನ ಸ್ಥಿರವೋ ಅಸ್ಥಿರವೋ ಯಂದು ಕೇಳಲು ಆರೂಢೋದಯಗಳು ಚರರಾಶಿಯು ಆಗಿ ಪಾಪಗ್ರಹಯುತದೃಷ್ಟಿ ಉಂಟಾದರೆ ಇರುವ ಸ್ಥಾನ ಸ್ಥಿರವಲ್ಲ ಯಂದು ಹೇಳುವದು.

ಅಂತ್ಯ : ಗ್ರಹ ನವಮುದಲ್ಲಿ ಯೆಷ್ಟನೆಯ ನವಾಂಶ ಮೀರಿಹುದು ಅಷ್ಟು ಯೋಜವಾತನು ಮೊದಲು ಕಂಡ ದಿಕ್ಕಿಗೆ ಹೋಗು..........ಂಭತ್ತನೆಯ ರಾಶಿಯಾಗಲು ಒಂಭತ್ತನೆಯ ರಾಶಿಯಲ್ಲಿ ಎಷ್ಟನೆಯ ಭಾಗೆಯಲ್ಲಿತ್ತು ಅಷ್ಟು ಕೈಯ್ಯಂ ಹೋಗುವದೆ .... ಒಂಭತ್ತನೆಯ ರಾಶಿಯ ಗ್ರಹಕ್ಕೆ ಎಷ್ಟು ದ್ವಾದಶ ಭಾಗೆಗಳು ಸಂದುದು ಅಷ್ಟು ಕೂಗಳತೆಯಂ ಕೊಂಬುದು ॥

ವಿಷಯ : ಜ್ಯೋತಿಷ (ಪ್ರಶ್ನವಿಚಾರ)

ವಿಶೇಷ : ಗ್ರಂಥಲಿಪಿ. ಪುಸ್ತಕ ಸ್ವಲ್ಪ ಶಿಥಿಲ. ಗ್ರಂಥಕ್ಕೆ ಮೊದಲು ಕ್ರಮಾಂಕವಿಲ್ಲದ ಸಂಸ್ಕೃತ ಶ್ಲೋಕಗಳಿರುವ ಬೇರೊಂದು ಪತ್ರವಿದೆ.

1810

ಕೆ. ೧೭೭/೧	ಷಟ್ಪ್ರಕಾರ ಸಂಗ್ರಹ	ಶ್ಲೋಕ, ವಚನ
೧೨.೯″ × ೨.೧″	ಶಾಂತದೇವರು	?
೪೧-೧೨೬ ಪತ್ರ	೧೪ ಪಂಕ್ತಿ	೮೦ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ನಿಜಭಕ್ತಿಸಂಬಂಧವಾದ ಶರಣನು ಪ್ರಸಾದವ ಸ್ವೀಕರಿಸಬೇಕೆಂದು ಮುಂದೆ ನಿಜಪ್ರಸಾದ ಸಂಬಂಧವು

ಹೇಳಲ್ಪಡುತ್ತಿದ್ದೂದು॥ ಪ್ರಸಾದಾನುಭವಸ್ಸೇವಾ ಮಹತ್ವಂಪ್ರತಿಪಾದಿತಂ। ಯಿದಂ ಪವಿತ್ರಾತ್ ಪರಮಂ। ಅಖಿಲಾಗಮ ಕೋಟಿತಃ ॥ ಪ್ರಸಾದಂ। ಪ್ರಸಾದವ। ಅನುಭವ। ಅನುಭವಿಸುವ। ಸೇವ। ಭೋಗದ। ಮಹತ್ವಂ। ಮಹತ್ವಲು। ಪ್ರತಿಪಾದಿಸಲ್ಪಟ್ಟುದೂ। ಯಿದಂ। ಯೀ ಪ್ರಸಾದ ಭೋಗಲು। ಪವಿತ್ರಾತ್। ಪವಿತ್ರವಾಗಿಯು। ಪರಮಂ। ವುತ್ಕೃಷ್ಟವ ಗಿಯು ಅಖಿಲಾಗಮಂ। ಸಮ-ಸ್ತಾಗಮಂಗಳು। ಕೋಟಿತಃ। ಕೋಟಿಗಳಿಂದವು ನುಡಿಯಲ್ಪಟ್ಟುದೂ ॥ ೧॥

ಅಂತ್ಯ : ॥ ೧೧ ॥ ಯುಗಜುಗಮಡಿಯಲ್ಲಿ ಬ್ರಹ್ಮಾಂಡಂಗಳಳಿವಲ್ಲಿ। ಲಿಂಗವೆಂದರಿದವರಾರೊ ಶಿವ ಶಿವಾ ವಾಯದಲೊದಗಿದ ಮಾಯವಾದಿಗಳು ದೇವನೆಂದರಿದವರಾರೊ। ಶಿವಶಿವಾ ಅಗ್ನಿತೃಣದೊಳಗಡಗಿ ಲೀಯ್ಯವಾದಂತೆ ಗೊಹೇಶ್ವರಾ ನಿಂಮ ಶರಣನಿರವೂ ॥ ೧೨ ॥ ಶಿವಲಿಂಗೈಕ್ಯಸ್ಥಲ ಸಮಾಪ್ತ ಶ್ರೀಶ್ರೀ॥ ಯಿಂತೀ ಪ್ರಕಾರವಾದ ಶಿವಾಚಾರ–ಲಿಂಗಾಚಾರ–ನಿಜಲಿಂಗಾಚಾರ–ನಿಜಾಚಾರ ಸಂಬಂಧ। ಸಹಜ ಸಂಬಂಧ। ಘನಸಂಬಂಧವೆಂಬ ಷಟ್ಪ್ರಕಾರದೊಳು ವುತ್ತರೋತ್ತರವೆಂಬುದುಂಟು ತಿಳಿದು ನೋಡುವಲ್ಲಿ ಸೂತ್ರಗ್ರಂಥ ವಚನಂಗಳ ಸೇರುವೆಯ ಮಾಡಿದವರೊಳು ಯೆಡರಾಗಿದ್ದರ್ಡಂ ಬಲ್ಲವರುಗಳಾದ ಶರಣಗಣಂಗಳು ತಿದ್ದಿ ಸಮಾನಂ ಬರಿಸಿ। ವೋದಿ ಕೇಳಿ ವಿವೇಕಿಸಿ। ಪರಿಣಾಮಿಸಿಕೊಂಬುದು। ಗುರುಚರಣ ಸದ್ಭಕ್ತರ ಕಾರುಂಣ್ಯ ಪ್ರಸಾದಾರ್ಹನಪ್ಪ ಶಾಂತದೇವರು ಸೇರುವೆಯ ಮಾಡಿದ ಗ್ರಂಥ ೧೦೫೪ ವಚನ ೧೦೯೬ ॥ ಅಂತು ವುಭಯಂ ೨೧೫೦ನು ಕೂಡಿಸಿ. ಷಟ್ಪ್ರಕಾರ ಸಂಗ್ರಹ ಸಂಪೂರ್ನವಾಯಿತ್ತೂ ॥ ಶ್ರೀ

ವಿಷಯ : ಷಟ್ಪ್ರಕಾರವಾದ ಆಚಾರ ಸಂಬಂಧ ಸಂಗ್ರಹ.

ವಿಶೇಷ : ಸಮಗ್ರ. ಇಲ್ಲಿ 1. ಶಿವಾಚಾರ ಸಂಬಂಧ 2. ಲಿಂಗಾಚಾರ ಸಂಬಂಧ 3. ನಿಜಲಿಂಗಾಚಾರ ಸಂಬಂಧ, 4. ನಿಜಾಚಾರ ಸಂಬಂಧ, 5. ಸಹಜ ಸಂಬಂಧ, 6. ಘನಸಂಬಂಧಗಳೆಂಬ ಷಟ್ಪ್ರಕಾರ ಸಂಬಂಧಗಳ ಸಂಗ್ರಹವಿದ್ದು 1054 ಸಂಸ್ಕೃತಾಧಾರ ಗ್ರಂಥಗಳೂ 1096 ವಿವಿಧ ವಚನಕಾರರ ವಚನಗಳೂ ಇದ್ದು ಸಂಗ್ರಹಿಸಲ್ಪಟ್ಟ ಬೃಹದ್ಗ್ರಂಥವಿದಾಗಿದೆ. ಈ ಕಟ್ಟು ೪೧ನೆಯ ಪತ್ರದಿಂದ ಆರಂಭವಾಗುವುದರಿಂದ ಮೇಲ್ಕಂಡ ಷಟ್ಪ್ರಕಾರ ಸಂಬಂಧ ಸಂಗ್ರಹಗ್ರಂಥದ ಆದಿಮಭಾಗವು ಲುಪ್ತವಾಗಿದೆ. ಇದರೊಂದಿಗೆ ಮೂರೇಳು ದೀಕ್ಷಾಪದ, ಗಣಭಾಷ್ಯ ರತ್ನಮಾಲೆ ಮೊದಲಾದ ಇತರ ೩ ಗ್ರಂಥಗಳಿವೆ.

1811

ಕೆ. ೬೨೬ ಷಟ್ಪ್ರಕಾರ ಸಂಗ್ರಹ ಶ್ಲೋಕ, ಟೀಕು, ವಚನ

೧೩.೭" × ೨.೧" ? ?

೧-೧೯೭ ಪತ್ರ ೧೧ ಪಂಕ್ತಿ ೨೨ ಅಕ್ಷರ

ಆದಿ: ಶ್ರೀಗುರುಬಸವಲಿಂಗಾಯನಮಃ। x x x x ಷಟ್ಪ್ರಕಾರ ಸಂಗ್ರಹ ಶಾರ್ದೂಲವಿಕ್ರೀಡಿತ ವೃತ್ತ ॥

ಆರಾಧ್ಯಾತ್ಸವೊ॰ೀತ್ಕೃಷ್ಟಮಸಂಖ್ಯಾತಾರಾಧ್ಯ ವರ್ತ್ತನಾತೀತಂ
ಘನಗುರು ಶಾಂತ ವೃಷಭಮಾರಾಧ್ಯರ್ವಣ್ಮಖಂಡ ಘನಾ
ಪರಿಪೂರ್ನ್ನವಿಸಾಭಾಷಕೋ ಕಾರುಣ್ಯಾಕ್ಷತ್ಪರ್ನದ್ರುಷ್ಟಿಕ್ಷಣೇ
ಕ॰ಸ್ಪರ್ಶಜಃ ಶಾಂತಾರ್ಯಸಮಾಂ ಘನ ಸಂಬಂಧೋಪದೆಸೇ

ವೃತ್ತ ॥ ಮಾಂಘೆದ ಸಹಜ ನೈಜಭಕ್ತಿರ್ವ್ವಿಭಾಜ ಪ್ರಸಾಸ್ಥಿಸ್ವಕುರ್ಯಾತ್
ಘನದೇಕಸಂಬಂಧಂ ಚ ವೃತ್ತೇನ ತತ್ಕರುಣಾದ್ಯಮೇ
ಷಡೂ ಪ್ರಕಾರೋಕ್ತಂ ತತ್ಕ್ಯಾಸ್ತ್ರಾಗಮ ಸಂಮುಂಧಾತ್
ಕರ್ನಾಟಭಾಷಾ ಭೂಪೋಂನತ ವ್ಯಾಖ್ಯಾನರಚಿತೇ ಮಯಾಧುನಂ
ಕ್ರೀಯ್ಯತೇ ॥

ಆರಾಧ್ಯಾತ್। ಗುರುಗಳಾದವರೂ। ಸರ್ವಂ ಸಮಸ್ತರಾಗಿ। ವುತ್ಕೃಷ್ಟಂ ವೆಗ್ಗಳವಾದವರಾಗಿ। ಅಸಂಖ್ಯಾತಂ। ಲೆಕ್ಕಿಸಲ್ಪಡದವರಾದ। x x x x ವುಂನತ। ಅಧಿಕವಾಹಂಥಾ। ಭೂಷಾ। ಕರ್ನ್ನಾಭರಣವಾಗಿ। ವ್ಯಾಖ್ಯಾನಂ। ಸಂಸ್ಕೃತ ವ್ಯಾಖ್ಯಾನ ವಚನಂಗಳಿಂದ। ರಚಿತೇ। ವೊಪ್ಪುವದಾಗಿ। ಅದು ನಾ। ಯೀಗಳೂ ಮಯಂ। ಯೆಂನಿಂದವು। ಕ್ರೀಯತೇ ಮಾಡಲ್ಪಡುತಿದ್ದುದೂ ॥ ೨ ॥

ಅಂತ್ಯ: ಯುಗಜುಗ ಮಡಿವಲ್ಲಿ ಬ್ರಹ್ಮಾಂಡಂಗಳಳಿವಲ್ಲಿ ಲಿಂಗವೆಂದರಿದವರಾರೊ। ಶಿವಶಿವಾ ವಾಯ॰ದಲೊದಗಿದ ಮಾಯವಾದಿಗಳು ದೇವನೆಂದರಿದವರಾರೊ ಶಿವಶಿವ ಅಗ್ನಿ ತ್ರುಣದೊಳಗಡಗಿ ಲೀಯ್ಯ। ವಾದಂತೆ ಗೊಹೇಶ್ವರ ನಿಂ॰ ಶರಣಸಿರವು ॥ ೧೨ ॥ ಶಿವಲಿಂಗೈಕ್ಯಸ್ಥಲ ಸಮಾಪ್ತ ॥ x x x ಗುರು ಚರಶರಣಸದ್ಭಕ್ತರು ಕಾರುಂಣ್ಯ ಪ್ರಸಾದರ್ಷನಪ್ಪ ಶಾಂತದೇವರು। ಸೇರುವೆಯ ಮಾಡಿದ ಗ್ರಂಥ ೧೦೫೪ ವಚನ ೧೯೦೬ ಅಂತು ವುಭಯ ೨೧೫೦ನೂ ಕೂಡಿಸಿ ಷಟ್ಪ್ರಕಾರ ಸಂಗ್ರಹ ಸಂಪೂರ್ಣವಾಇತ್ತು ಷಟ್ಪ್ರಕಾರ ಸಂಗ್ರಹ ಸಂಪೂರ್ನ್ನ ಮಂಗಳಮಹಾಶ್ರೀ.

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಆಯಾಯ ಸಂಧಿಯ ಪ್ರಾರಂಭದಲ್ಲಿ ವಿಷಯಸೂಚಿ ಇದೆ.

1812

ಕೆ. ೩೨೩/೧೨	ಷಟ್ಸ್ಥಲ ಗದ್ಯ	?
೫.೪″ × ೨″	?	?
೯೭-೧೦೦ ಪತ್ರ	೧೦ ಪಂಕ್ತಿ	೨೬ ಅಕ್ಷರ

ಆದಿ : ಶ್ರೀ ಗುರು ಬಸವಲಿಂಗಾಯ ನಮಃ || ಷಟ್ಸ್ಥಲ ಗದ್ಯ.

ಸ್ರ || ಸ್ವಸ್ತಿ ಶ್ರೀ ಷಡ್ವಿಧಾಂಗ ಸ್ಥಲವೆನಿಪಲದ ಸದ್ಭಕ್ತಮಾಹೇಶ್ವರಾಪ್ತಂ
ಹಸ್ತಾವಾಪ್ತಿಪ್ರಸಾದಿ ಪ್ರವಿಮಲ ಹೃದಯ ಪ್ರಾಣಲಿಂಗಿಸ್ವಯಂಜ್ಯೋ
ತಿಸ್ತತ್ವಾವಾಸ ಭೂತಪ್ರಬಲ ಶರಣಲಿಂಗೈಕ್ಯತಾದೀಯ್ಯ ಮಾಹಾ
ತ್ಮ್ಯ ಸ್ತೋತ್ರಂ ಮಾಳ್ಪೆನಾಹಾ ಕರುಣಿಸೆನಗೆ ನೀನೊಲ್ದು ಸೋಮೇಶ
ಲಿಂಗಾ ||

ಗದ್ಯ|| ಶ್ರೀಮದನಾದಿ ವಿಮುಕ್ತಂ ಭಕ್ತಂ
ಪ್ರೇಮಕಲಾ ಸಂಯುಕ್ತಂ ಭಕ್ತಂ
ಉತ್ಸಾಹ ಗುಣಾಸಕ್ತಂ ಭಕ್ತಂ
ಕುತ್ಸಿತ ಕರ್ಮ್ಮವಿರಕ್ತಂ ಭಕ್ತಂ

X X X X

ಆಚಾರಾಶ್ರಿತ ಚಿತ್ತಂ ಭಕ್ತಂ
ಶ್ರೀ ಚರತುಷ್ಟಿತವಿಕ್ತ ಭಕ್ತಂ || ೧ ||

ಅಂತ್ಯ : ಕಂದ|| ಅಷ್ಟೋತ್ತರ ಶತವಿಧದಿಂ
ದಿಷ್ಟ ಸುಷಟ್ಸ್ಥಲದ ಸುಪ್ರಸಂಗವನೊರದೇಂ
ಸ್ಪಷ್ಟತರೋಕ್ತಿಗಳಿಂದಂ
ಶಿಷ್ಟಂ ಶ್ರೀ ಸೋಮನಾಥ ಸದ್ಗುಣಾಯೂಥಂ ||
ಷಟ್ಸ್ಥಲ ಗದ್ಯ ಸಮಾಪ್ತ ಮಂಗಳಮಹಾ ಶ್ರೀ.||

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಇದೇ ಕಟ್ಟಿನಲ್ಲಿ ಉದಾಹರಣಗದ್ಯ (ಸಂ), ಅಕ್ಷರಾಂಕ ಗದ್ಯಗಳೆಂಬ ಇತರ ೧೬ ಗ್ರಂಥಗಳಿವೆ. ಇದರಲ್ಲಿ ಕೆಲವು ಸಂಸ್ಕೃತ ಗ್ರಂಥಗಳಾಗಿವೆ.

1813

ಕೆ.ಎ. ೧೩೮ ಷಟ್ಸ್ಥಲಜ್ಞಾನ ಸಾರಾಮೃತ ವಚನ

೧೨.೬" × ೭.೮" ತೋಂಟದ ಸಿದ್ಧೇಶ್ವರ ೧೪೭೦

೧-೧೦೧ ಪತ್ರ ೨೦ ಪಂಕ್ತಿ ೨೮ ಅಕ್ಷರ

ಆದಿ : ತೋಂಟದ ಸಿದ್ಧೇಶ್ವರನು ನಿರೂಪಿಸಿದ ಷಟ್ಸ್ಥಲಜ್ಞಾನಸಾರಾಮೃತ ಪ್ರಥಮದಲ್ಲಿ ಸಾತ್ತ್ವದ ವಚನ ॥ ನಿರಾವಯಂ ನಿರಾಮಯಂ ನಿರಾಕುಳಂ ನಿರ್ದ್ವಂದ್ವಂ ನಿರ್ಮಲಂ ನಿಜಸ್ವರೂಪಂ। ನಿರ್ಭಾವ ನಿಃಪ್ಪುರುಷ ನಿರಂಜನ ನಿರಾಕಾರ ನಿರಾವರಣ ನಿರುಪಮ ನಿರ್ಗುಣ ನಿರಾಧಾರ ನಿರಾಲಂಬ ಸರ್ವಾಧಾರ ಸದಾಶಿವಂ। ಅತ್ಯತಿಷ್ಠದ್ದಶಾಂಗುಲಂ ನಿತ್ಯನಿಶ್ಚಿಂತ ನಿರ್ಮಲ ನಿರ್ಮಾಯ, ನಿರಾಕುಳಂ। ಹರಹರಾ ಶಿವಶಿವಾ ಜಯಜಯತು ಶರಣ ಕರುಣಾಕರ ತ್ರಾಹಿ ಮಾಂ ಭಕ್ತವತ್ಸಲ ¦ಮತ್ಪ್ರಾಣನಾಥ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೆ ॥ ೧ ॥

ಅಂತ್ಯ : ಭಕ್ತಿಸ್ಥಲ ಮಹೇಶ್ವರಸ್ಥಲದಲ್ಲಿ ಅಡಗಿತ್ತು। ಮಹೇಶ್ವರಸ್ಥಲ ಪ್ರಸಾದಿ ಸ್ಥಲದಲ್ಲಿ ಅಡಗಿತ್ತು ಪ್ರಸಾದಿಸ್ಥಲ ಪ್ರಣಲಿಂಗಿಯ ಸ್ಥಲದಲ್ಲಿ ಅಡಗಿತ್ತು। ಪ್ರಾಣಲಿಂಗಿಯ ಸ್ಥಲ ಶರಣಸ್ಥಲದಲ್ಲಿ ಅಡಗಿತ್ತು। ಶರಣಸ್ಥಲ ಐಕ್ಯಸ್ಥಲದಲ್ಲಿ ಅಡಗಿತ್ತು। ಐಕ್ಯಸ್ಥಲ। ಇಂತೀ ಷಡಂಗಯೋಗ ಸಮರಸವಾಗಿ ಷಟ್ಸ್ಥಲವ ಮೀರಿ ನಿರವಯವ ಸ್ಥಲವನೈದಿ। ಆ ನಿರವಯವ ಸ್ಥಲ ನಿರಾಳಸ್ಥಲದಲ್ಲಿ ಅಡಗಿ ನಿರಾಳ ನಿತ್ಯನಿರಂಜನ ಪರವಸ್ತುವಾಗಾಯಿತಾಗಿ ಕ್ರಿಯಾನಿಷ್ಪತ್ತಿ ಜ್ಞಾನನಿಷ್ಪತ್ತಿ ಭಾವನಿಷ್ಪತ್ತಿಮಾಡು ವ ಕ್ರಿಯೆಗಳೆಲ್ಲಾ ನಿಷ್ಪತ್ತಿಯಾಗಿ। ಅರಿವಅರುಹೆಲ್ಲಾ ಅಡಗಿ ಭಾವಿಸುವಭಾವವೆಲ್ಲ ನಿರ್ಭಾವವಾಗಿ ನಿರ್ಲೇಪಕ ನಿರಂಜನ ಪರವಸ್ತು ತಾನೆ ತಾನಲ್ಲದೆ ಧ್ಯಾನಿಸಲೇಕೆಯೆನು ಇಲ್ಲ ಮಹಾ ಲಿಂಗಗುರು ಶಿವಸಿದ್ಧೇಶ್ವರ ಪ್ರಭು ತಾನೆ ಷಟ್ಸ್ಥಲಜ್ಞಾನ ಸಾರಾಯ ಸ್ವರೂಪನೆಂದು ಹೇಳಲ್ಪಟ್ಟನು ॥ ೧೫ ॥ಶ್ರೀರಸ್ತು ಸೂತ್ರದ ವಚನ ॥ ೯ ॥ ಸರ್ವಶೂನ್ಯ ನಿರಾಲಂಬಸ್ಥಲಕ್ಕೆ ಸೇರಿದ ವಚನ॥ ೭ ॥ ಶೂನ್ಯಲಿಂಗ ಸ್ಥಲಕ್ಕೆ ಸೇರಿದ ವಚನ ॥ ೫ ॥ x x x x ಶರಣಸ್ಥಲಕ್ಕೆ ಸೇರಿದ ವಚನ ॥೧೩೪॥ ಐಕ್ಯಸ್ಥಲಕ್ಕೆ ಸೇರಿದ ವಚನ ॥ ೧೧೦ ॥ ನಿರವಯವ ಸ್ಥಲಕೆ ಸೇರಿದ ವಚನ ॥ ೧೫ ॥ ಅಂತು ಸ್ಥಲ ॥೨೧॥ ಕ್ಕೆ ಸೇರಿದ ವಚನ ॥೭೦೧॥ ಕ್ಕಾಂ ಮಂಗಳಮಹಾಶ್ರೀ

ಶ್ರೀ ತೋಂಟದ ಸಿದ್ಧಲಿಂಗದೇವರು ನಿರೂಪಿಸಿದ ಷಟ್ಸ್ಥಲಜ್ಞಾನ ಸಾರಾ ಮೃತಂ ಸಮಾಪ್ತಂ ॥

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ೭೮ ಮತ್ತು ೮೨ನೆಯ ಪತ್ರಗಳಲ್ಲಿ ಮಾತ್ರ ಒಂದೇ ಕಡೆ ಬರವಣಿಗೆಯಿದ್ದು ಕೆಲವು ವಚನಗಳು ಲುಪ್ತವಾಗಿವೆ.

1814

ಕೆ. ಎ. ೧೫೯ **ಷಟ್ಸ್ಥಲಜ್ಞಾನ ಸಾರಾಮೃತ** **ವಚನ**

೧೦.೨" × ೪.೧" ತೋಂಟದಸಿದ್ಧೇಶ್ವರ ೧೪೭೦

೧೨೦ ಪತ್ರ ೨೦ ಪಂಕ್ತಿ ೨೫ ಅಕ್ಷರ

ಆದಿ . ಶ್ರೀ x x ತೋಂಟ್ಟದ ಸಿದ್ಧಲಿಂಗಸ್ವಾಮಿ ನಿರೂಪಿಶಿದ ಷಟುಸ್ಥಲಗ್ನಾನ ಸಾರಾಂಮೃತದ ವಚನಾ । ನಿರವಯಂ । ನಿರಾಮಯಂ । ನಿರಾಕುಳಂ । ನಿರ್ದ್ವಂದಂ । ನಿರ್ಮಳ ನಿಜಸ್ವರೂಪಂ । ನಿರ್ಭಾವ ನಿಷ್ಪ್ರುಷಂ । ನಿರಂಜನ । ನಿರಾಕಾರ ನಿರಾವರಣ ನಿರುಪಮ । ನಿರ್ಗುಣ । ನಿರಾಧಾರ । ನಿರಾಲಂಬ । ಸರ್ವಾಧಾ............... ದಶಾಂಗುಲಂ । ನಿತ್ಯ ನಿಶ್ಚಿಂತ । ನಿರ್ಮಲ । ನಿಮಾ ಯ । ನಿರಾಳಕಂ । ಹರಹ .... ಶಿವಶಿವಾ ಜಯ ಜಯ ಜಯತು ಶರಣ ಕರುಣಾಕರ ತ್ರಾಹಿ ಮಾಂ ಭಕ್ತಿವತ್ಸಲ । ಮತ್ಪ್ರಾಣನಾಥ ಮಹಾಲ್ಲಿಂಗ ಗುರು ಶಿವಶಿದ್ಧೇಶ್ವರ ಪ್ರಭುವೇ ॥ ೧ ॥

ಅಂತ್ಯ : ಭಕ್ತಿಸ್ಥಲ ಮಾಹೇಶ್ವರಸ್ಥಲದಲ್ಲಿ ಅಡಗಿ ಮಾಹೇಶ್ವರಸ್ಥಲ ಪ್ರಸಾದಿಸ್ಥಲದಲ್ಲಡಗಿ x x x x ಮಹಾಲ್ಲಿಂಗ ಗುರುಶಿವ ಶಿದ್ಧೇಶ್ವರ ಪ್ರಭುವೇ ॥ ೧೫ ॥ ತಾನೆ ಷಟ್ಸ್ಥಲಗ್ನಾನ ಸಾರಾಯ ಸ್ವರೂಪನೆಂದು ಹೇಳಲ್ಪಟ್ಟನೂ ॥ ಸ್ತೋತ್ರದ ವಚನಾ ॥ ೮ ॥ ಸರ್ವಶೂಂನ್ಯ ನಿರಾಲಂಭಸ್ಥಲಕ್ಕೆ ಶೇರಿದ ವಚನ ॥ ೭ ॥ x x x x ಐಕ್ಯಸ್ಥಂಕ್ಷೆ ಶೇರಿದ ವಚನ ೧೧೦ ನಿರವಯಸ್ಥಲಕ್ಕೆ ಶೇರಿದ ವಚನ ೧೫ ಅಂತು ಸ್ಥಲ ೨೧ ಕಂ ಶೇರಿದ ವಚನ ೭೦೧ ಕಂ ಮಂಗಳಮಹಾಶ್ರೀ ವಿಖಾರಿ ಸಂವತ್ಸರದ ಮಘ ಶು ೩ ಬೆ ಪ್ರಭುದೇವರು ನಿರುಪಿಸಿದ ಟೀಕುನ ವಚನಂಗಳು ಬರಿಯುದಕ್ಕೆ ಶುಭಮಸ್ತು ನಿರ್ವಿಘ್ನಮಸ್ತು ಆಯಿರೋಗ್ಯಮಸ್ತು.

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಹುಳುತಿನ್ನದಿರುವ ಪತ್ರಗಳೇ ಈ ಗ್ರಂಥದಲ್ಲಿಲ್ಲ, ಅತ್ಯಂತ ಶಿಥಿಲ, ಕ್ರಮಸಂಖ್ಯೆ ಸರಿಯಾಗಿಲ್ಲ.

1815

ಕೆ. ೪೯೨ ಷಟ್ಸ್ಥಲತಿಲಕ ವಾರ್ಧಕ ಷಟ್ಪದಿ, ಕಂದ, ವೃತ್ತ
೧೪.೬″ × ೨″ ಮುಖಬೋಳು ಸಿದ್ಧರಾಮ ೧೬೫೬
೬೫-೧೨೨ ಪತ್ರ ೧೦ ಪಂಕ್ತಿ ೧೦೦ ಅಕ್ಷರ

ಆದಿ : ಷಟ್ಸ್ಥಲತಿಲಕಮಾಲಿಖಿತುಮವಿಘ್ನಮಸ್ತು ॥ ವಾರ್ಧಿಕ ಷಟ್ಪದಿ ॥
ಪಲ್ಲವ ॥ ವಲ್ಲಕೀ ಮೃದಂಗಾದಿ ವಾದ್ಯಭೇದಂಗಳಂ
ಬಲ್ಲ ಜಾಣನ್ರ್ನುಡಿಸೆ ನುಡಿವಂತೆ ಮನ್ಮನೋ
ವಲ್ಲಭಂ ವೃಷಲಿಂಗ ನುಡಿಸಲೀಕೃತಿಯ ಮಾಡುವೇ ಕೇಳಿ ಶರಣಜನರು ॥
ಪದ ॥ ಶ್ರೀಗುರುವೆ ವಿಪುಲಾಮೃತಾಗರವೆ ಗ್ನಾನಕ್ರಿ
ಯಾಗುರುವೆ ಭೋಗಪ್ರದಾ ಗುರುವೆ ನತನ್ಪರ
ಕ್ಷಾಗುರುವೆ ದುರಿತ ಶಿಕ್ಷಾ ಗುರುವೆ ಶಿಷ್ಯದೀಕ್ಷಾಗುರುವೆ ನೈಜಮುಕ್ತಿ
ತ್ಯಾಗ ಗುರುವೆ ಲಿಂಗಯೋಗಗುರುವ ಭವವಿ
ಯೋಗ ಗುರುವೆ ಶಿವಶಿವರೆಕಸಮರಸವಿ
ದಾಗುರುವೆ ಪರಿಪೂರ್ಣ ಧೀಗುರುವೆ ವೃಷಲಿಂಗ ಭೋ ಗುರುವೆ
x x x x ಶರಣು ನಿಮಗೆ ॥ ೧ ॥
ಕಂ॥ ಶ್ರೀ ನಿಜ ಭಕ್ತಿವಿರಾಗಂ
ಭೂನುತ ಸುಗ್ನಾನ ಯುಕ್ತ ತತ್ವ ವಿದಗ್ಧರು
ಸ್ವಾನುಭವವೆಂಬ ಪಣೆಯೊಳ
ನೂನತೆಯಿಂ ದೊಪ್ಪುತಿರಲೀ ಷಟ್ಸ್ಥಲತಿಲಕಂ ॥ ೩೨ ॥
ಸ್ವಸ್ಥ ಶಿವಶರಣರುಗಳಂ
ತಸ್ಥನುಭವವಾಕ್ಯ ಭೂಷಣಂಗಳ ಮುದದಿಂ
ನ್ಯಸ್ತವ ಮಾಡೀ ಕೃತಿಗಂ
ಷಟ್ಸ್ಥಲ ತಿಲಕಾಖ್ಯ ಸಿದ್ಧರಾಮ ರಚಿಸಿದಂ ॥ ೩೩ ॥

ಅಂತ್ಯ : ಪರಮ ವೇದಾಗಮ ಪುರಾಣ ಘನಉಪನಿಷ
ದ್ವರತರ್ಕ ವೈಯಾಕರಣ ಛಂದ ಸ್ಮೃತಿಯು ನಿ
ರ್ಧರ ಸಕಲಶಾಸ್ತ್ರೋತ್ತರದ ವೀರಶೈವಸಿದ್ಧಾಂತಮೆಂಬತ್ಯನುಪಮ
ಕರಷಟ್ಸ್ಥಲ ಬ್ರಂಹಸಾಕಾರ ಶಿವಮಂತ್ರ
ದುರು ಮೂರ್ತಿ ಗುರುಕುಲೋದ್ಧಾರ ಶಿವಚರಿತವಿ
ಸ್ತರ ಚಂನಮಲ್ಲೇಶನಮಲಕರಸಂಭವಂ ಸಿದ್ಧರಾಮೇಶನೊರೆದಂ ॥ ೨೬ ॥

x x x x

ದುರುಲ ಪನಿವತ್ಸರದ ಮಾರ್ಗಮಸ್ತಕ ಮಾಸ
ವರಶುದ್ಧ ಪೌರ್ಣೋಮಿ ಸೌಮ್ಯವಾರದಿ ಬಳಿಕ
ಕರಿಶತೋಪರಿ ಚತುಃಷಷ್ಠಿ ಸಂಖ್ಯೆಗಳಿಂದ ವಿಂಶತಿಸ್ಥಳಗಳಿಂದ
ಪರಿಪೂರ್ಣವಾದೀ ಕೃತಿ ಚಂದ್ರತಾರಾರ್ಕಂ
ಬರ ಮಹೇಶ್ವರಭಕ್ತರೊಳ್ ಪೂಜ್ಯವಾಗಿ ನಿಜ
ದಿರಲಿ ನಿಜ ಶರಣರ್ಗೆ ಶುಭಮಸ್ತು ಶಿವಭಕ್ತಿರಸ್ತು ಸುಗ್ನಾನಮಸ್ತು
|| ೨೯ ||

ಅಂತು ಸ್ಥಲ ೨೦ ಕ್ಕಂ ಪದನು ೮೬ಳ ಕ್ಕಂ ಬಸವಲಿಂಗದೇವರ ಷಟ್ಸ್ಥಲ ತಿಲಕದ ಪುಸ್ತಕ ಸಂಪೂರ್ಣ ಮಂಗಳ ಮಹಾಶ್ರೀ.

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಶಕಟರೇಫದ ಬಳಕೆಯಿದೆ. ಇದೇ ಕಟ್ಟಿನಲ್ಲಿ ಕೆ ೪೯೬ ನೆಯ ನಂಬರಿನ ಶತಕತ್ರಯ (ಸಟೀಕಾ) ಎಂಬ ಗ್ರಂಥವಿದೆ.

1816

ಕೆ. ೧೬೯/೨೩	**ಷಟ್ಸ್ಥಲತಿಲಕದ ನಾಂದ್ಯ**	**ವಾರ್ಧಕಷಟ್ಪದಿ**
೯.೬″ × ೨′	?	?
೧೧೯-೧೨೫ ಪತ್ರ	೧೦ ಪಂಕ್ತಿ	೫೦ ಅಕ್ಷರ

ಆದಿ : ಷಟ್ಸ್ಥಲದ ತಿಲಕದ ನಾಂದ್ಯ || ವಾರ್ಧಿಕ ||

ಪಲ್ಲ || ವಲ್ಲಕಿ ಮೃದಂಗಾದಿವಾಂದ್ಯಭೇದ್ಯಂಗಳಂ
ಬಲ್ಲ ಜಾಣರ್ನುಡಿಸಿ ನುಡಿವಂತೆ ಮನ್ಮನೋ
ವಲ್ಲಭಂ ವೃಷಭಲಿಂಗ ನುಡಿಸಲೀಕೃತಿಯ ಮಾಡುವೆ ಕೇಳಿ ಶರಣಜನರೂ||

ಪದ || ಶ್ರೀ ಗುರುವೆ ವಿಪುಲಾಮೃತಾಗುರುವೆ ಜ್ಞಾನ ಕ್ರಿ
ಯಾ ಗುರುವೆ ಭೋಗಪ್ರದಾಗುರುವೆ ನತನೃರ
ತ್ನಾಗುರುವೆ ದುರಿತ ಸಿಕ್ಷಾಗುರುವೆ ಶಿಷ್ಯಾದೀಕ್ಷಾಗುರುವೆ ನೈಜ ಮುಕ್ತಿ
ತ್ಯಾಗ ಗುರುವೆ ಲಿಂಗಯೋಗಗುರುವೆ ಭವವಿ
ಯೋಗಗುರುವೆ ಜೀವಶಿವರೇಕ ಸಮರಸ ವಿ
ಧಾಗುರುವೆ ಪರಿಪೂರ್ಣ್ನರ್ಥಿ ಗುರುವೆ ವೃಷಭಲಿಂಗ ಭೋಗಗುರುವೆ
ಶರಣು ನಿಮಗೆ || ೧ ||

ಅಂತ್ಯ ; ಯಿದು ಬಸವಲಿಂಗೇಶನಳಿಕ ಷಟ್ಸ್ಥಲತಿಲಕ
ಮಿದು ನಿಜಾನಂದರಸ ಚುಳಕ ಶರಣರ ಪುಳಕ
ಮಿದು ಮುಕ್ತಿ ಕರತಳಾಮಳಕ ವಿರಚಿತ ಕುಳಕ ವಿಮಲ ವಚನದ
ರಚನೆಯೂ
ಯಿದು ಭಕ್ತಿ ಸುಜ್ಞಾನ ದೀರ ಸಾರೋದ್ಧಾರ
ಮಿದು ಲಿಂಗವಂಗ ಸಮರಸಪೂರ ವಿಸ್ತಾರ
ಮಿದು ಮಹಾಲಿಂಗೈಕ್ಯನಮಳ ಪೂರ್ನ್ನಸ್ಥಳಂ ವಿಂಶತಿವಿರಾಜಸ್ಥಳಂ ||೩೫||
ಷಟ್ಸ್ಥಲದನಾಂದ್ಯ ಸಂಪೂರ್ನ್ನಂ ಮಂಗಳಮಹಾಶ್ರೀ.

ವಿಷಯ : ವೃಷಭಸ್ಥಲ ತಿಲಕದ ನಾಂದೀ ಪದ್ಯಗಳು.

ವಿಶೇಷ : ಇದೇ ಕಟ್ಟಿನಲ್ಲಿ ವೈರಾಗ್ಯಷಟ್ಪದಿ, ನೀಲಾಂಬಿಕ ಲಲಿತಸ್ತೋತ್ರ ಮೊದಲಾದ ಇತರ ೨೩ ಗ್ರಂಥಗಳಿವೆ.

1817

ಕೆ. ೪೬೮/೧	ಷಟ್ಸ್ಥಲತಿಲಕ ಪ್ರಸ್ತಾವದ ಷಟ್ಪದಂಗಳು	ವಾರ್ಧಕಷಟ್ಪದಿ
೧೫.೩" × ೧"	?	?
೧-೬ ಪತ್ರ	೫ ಪಂಕ್ತಿ	೭೦ ಅಕ್ಷರ

ಆದಿ: ಷಟ್ಸ್ಥಲತಿಲುಕ ಪ್ರಸ್ತಾವದ ಷಟ್ಪದಂಗಳು ||
ಗುರುವೆಯಾಚಾರ ಚ ್ರಶನೇ ಯಿಾಶನೇ
ಗುರುವೆ ಜಗಹಿತ ಸುಚಾರಿತ್ರನೇ ಮಿತ್ರನೇ
ಸಕಲ ಸದ್ಭಕ್ತ ಜನರಾ ....
ಗುರುವೆ ನಾನೀ ಜಗದಿ ನಿತ್ಯದಿಂ ಸತ್ಯದಿಂ
ಚರಿಸುತ್ತಿಹ ಪರಮನೀತಿಗಳ ಬಾತೆಗಳ
ಕರುಣಿಸುಮೆನಲ್ ಜ್ಞಾನ ಸಂಸಾರ ಸಾರದಿಂ ಚರಿವುದೆಂತೆಂದೊಡೆ || ೧ ||

ಅಂತ್ಯ : ಯಿಂತಪ್ಪ ಲೌಕಿಕರ ಸಂಗಮಂ ಬಿಟ್ಟು ಘನ
ಶಾಂತ ಶರಣರ ಸಂಗಮಂ ಭಜಿಸಿ ಭಾವಂನ
ಮಂ ತೀವಿ ಬಳಸಿಪ್ಪರ್ ನೆವದಿ ಬೊಬ್ಬುಲಿತಾರಿಯಲವ ಕಗ್ಗಲಿಗೆ ಗಂಧಂ
ಅಂತು ವೇದಿಸಲಿಕವು ದೇವತಾಯೋಗ್ಯಮಾ
ದಂತೆ ಪುಷ್ಪವ ಬಂಧಿಸಿದ ನೆವದೊಳಾ ರಜ್ಜು
ವೆಂತು ಶಿವಗೋಗ್ಯಮಾದಂತೆ ಶರಣರ ಸಂಗ ತಂಮಂತೆ
ಮಾಳ್ಪರದರಿಂ || ೩೧ ||

ವಿಷಯ : ವೀರಶೈವಧರ್ಮ–ಶಿವಭಕ್ತಿ–ಶರಣಸಂಗದ ಹಿರಿಮೆ ಇತ್ಯಾದಿ.

ವಿಶೇಷ : ಒಟ್ಟು ೬ ಪತ್ರಗಳಲ್ಲಿ ೩೧ ಪದ್ಯಗಳಿವೆ. ೧ ನೆಯ ಪತ್ರ ಎರಡು ತುದಿಗಳಲ್ಲಿ ಮುರಿದು ಲುಪ್ತವಾಗಿದ್ದರೂ ಓಲೆಯ ಮಧ್ಯಭಾಗದಲ್ಲಿ ಮಾತ್ರವೇ ಪ್ರತಿ ಮಾಡಿರುವುದರಿಂದ ವಿಷಯಲೋಪವಿಲ್ಲ. ೨ ನೆಯ ಕ್ರಮ ಸಂಖ್ಯೆಯ ಪತ್ರ ಮುರಿದು ತುಂಡಾಗಿದ್ದರೂ ಕಟ್ಟಿನಲ್ಲಿಯೇ ಬಿಡಿಯಾಗಿರುತ್ತದೆ. ಈ ಕಟ್ಟಿನಲ್ಲಿ ಹಾಡುಗಳು, ಹರಗಣಮಾಲೆ ಇತ್ಯಾದಿ ಗ್ರಂಥಗಳಿವೆ.

1818

ಕೆ. ೪೮೬	**ಷಟ್ಸ್ಥಲವಲ್ಲಭ**	ಚಂಪು
೨೦.೪″ × ೨.೨″	ಚೆನ್ನವೀರ ಜಂಗಮದೇವ	ಸು. ೧೫೦೦
೧-೫೫ ಪತ್ರ	೧೪ ಪಂಕ್ತಿ	೧೨೦ ಅಕ್ಷರ

ಆದಿ : ಷಟ್ಸ್ಥಲ ವಲ್ಲಭಾ ॥ ಕಾವ್ಯ ಸ್ರಗ್ಧರ ವೃತ್ತಂ ॥

ಶ್ರೀಮಚ್ಛೈಳೇಂದ್ರಪುತ್ರೀ ಮುಖಸರಸಿಜವಾಸಂತ ಹೇರಂಬತಾತರ
ಸೋಮಂ ಶೈವಾಗಮಾಮ್ನಾಯೆನುತ ಮಹಿಮಾದಮಂ ಮಹಾದೇವೇಶಂಭುಂ
ಹೈಮಾದ್ರೀಶಂ ವಿರೂಪಾಕ್ಷನ .... ನಿಸ್ಸೀಮನಾಮಂ
ರಾಮಂ ಭೂತೇಶ ರಕ್ಷಿಕ್ಕನವರತ ಶಿವಾದ್ವೈತವಿತ್ತೆಂನುವಂ ನೀಂ ॥ ೧ ॥

ಷಟ್ಸ್ಥಲ ವಲ್ಲಭವೆಂಬುದ
ಷಟ್ಸ್ಥಳಿಗಳಿಚ್ಛೆ ಪೇಳ್ವೆ ಪಿರಿಯರ್ಸುಜನರ್
ಷಟ್ಸ್ಥಲದಾಗಮವಂತರ್
ಷಟ್ಸ್ಥಲಿಗಳು ಕೇಳ್ವುದೀ ಪ್ರಭಂದೋನತಿಯಂ ॥ ೧೮ ॥

ಅಂತ್ಯ : ಮುಕರದ ಬಿಂಬರಂತೆ ಸುರಚಾಪ ತಟಿಲತೆ ವಾರಿಕಲ್ಲಿನೊಳ್
ಪ್ರಕಟಿಪ ಭಾವದಂತೆ ಘನದೊಡ್ಡಣೆಯಂತೆ ಮರೀಚಿಯೆಂತೆಯುಂ
ಸಕಲವು ನಿಃಷ್ಕಲಾಂಸ ಪರಿಪೂರ್ನ್ನ ಚಿದಾಮ್ರುತ ಮಂತ್ರರೂಪದಿಂ
ಅಕುಟಿಲದಿಂ ಪ್ರಕಾಶಿಸುವ ಸಿದ್ಧಸದಾಶಿವ ರೂಪ ಪಾಹಿ ಮಾಂ ॥ ೧೧೦ ॥

ಮೌಕ್ತಿಕ ಗಂಧ ಕಸ್ತುರಿಯಯು ಕರ್ಪೂರರ ಮುಖ್ಯವು ತೋರುವಂತೆಯುಂ
ವ್ಯಕ್ತಮುದಾಗಿ ಹಸ್ತದೊಳು ದ್ರುಷ್ಟಿಗೆ ಕಾಣಿಪ ಯಿಷ್ಟಲಿಂಗ ಸು
ವ್ಯಕ್ತಮುದಾದ ಭಾಸುರ ಮಹೇಶ್ವರ ರೂಪಿನ ಸಿದ್ಧಲಿಂಗನಿಂ
ಭಕ್ತಿಯ ಮಾರ್ಗ್ಗವಿತ್ತು ಪರರಕ್ಷಿಸಿದಾತನೆಯೆಂದು ವಂದ್ನಿದಂ ॥ ೧೧೧ ॥

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಸಣ್ಣಕ್ಷರವು. ಕೆಲವು ಗರಿಗಳ ಅಂಚು ಮುರಿದಿದೆ. ಆಶ್ವಾಸಾಂತ್ಯದಲ್ಲಿ 'ಇದು ಸಕಲ ಸುರಗಣ ಮಣಿಮುಕುಟ ರಚಿತ ದ್ಯುಮಣಿ ಪ್ರಭಾದಿಕ್ಯ ಮಾಣಿಕ್ಯ ದ್ಯುತಿಪುಂಜ ಮಂಜ್ರುಲರಂಜಿತ ಚರಣನೆನಿಪ ಭೂತೇಶ್ವರ ಶ್ರೀಪಾದ ಪಯೋಜ ಮಕರಂದಲೋಲಂಬಮಾನ ಚೆಂನ ವೀರೇಶ್ವರಾಭಿಧೇಯ ವರ ಜಂಗಮದೇವ ವಿರಚಿತಮಪ್ಪ ಷಟ್ಸ್ಥಲ ವಲ್ಲಭ ಮಹಾಪ್ರಭಂದದೊಳು ಸಿದ್ಧಲಿಂಗೇಶ್ವರಂ ಕಥನಂ x x x ಆಶ್ವಾಸಂ ಸಮಾಪ್ತಂ ॥' ಎಂದಿದೆ. ವೃತ್ತಾರಂಭಕ್ಕೆ ಮೊದಲು ಆಯಾ ವೃತ್ತದ ಹೆಸರನ್ನು ಬರೆದಿದೆ.

1819

ಕೆ. ೮೯/೨	**ಷಡಕ್ಷರಮಹಿಮೆ, ಇತ್ಯಾದಿ**	ಭಾಮಿನೀಷಟ್ಪದಿ
೧೦.೮″ × ೧.೮″	?	?
೨-೧೨ ಪತ್ರ	೯ ಪಂಕ್ತಿ	೫೨ ಅಕ್ಷರ

ಆದಿ : ಷಡಕ್ಷರ ಮಹಿಮೆ
ಪಲ್ಲಾ ॥ ಸಕಲ ಮುನಿಜನ ಸಹಿತಲಾ ಶೌ
ನಕನು ಕೇಳ್ವಡೆ ಸೂತ ತ್ವಾರಾ
ಣಿಕನು ವಿಸ್ತರಿಸಿದನು ಶಿವನ ಷಡಾಕ್ಷರದ ಘನಪಾ ॥
ಪದನೂ ॥ ಯಿಾ ಕಥೆಗೆ ಮೊದಲಾವುದೆನಲಿಯ
ನೇಕ ಥೆರೆಮೊರೆಗಳ ಪೊಯಿಲಿಂ
ದೋಕರಿಪ ಡಿಂಡಿರಪಿಂಡದೆ ನಿಕರೋತ್ಕರದೀ
ನಾಕದತ್ಯವ್ಸಳಿಪ ....
ದಾ ಕಮ........ನಾ ತಿಳಿದ ... ನ
ನೇಕ ವಿಭವದಿ ಘೊಳುಘೊಳುಸಿ ಶರನಿಧಿಯು ರಂಜಿಪುದೂ ॥ ೧ ॥

ಅಂತ್ಯ : (೧೦ ನೆಯ ಪತ್ರ)
ಯಿಂತು ಸಮರತಿ ಸೌಖ್ಯದಿಂದೋ
ರಂತೆ ತಣಿವಾದಂದತಿಗಳುಶೆ
ಮುಂತೆ ಬೆಳಗಿಹ ಜಾವದೊಳು ಮಜ್ಜನವನನುಗೈದೂ

ಅಂತಕಾಂತಕನೆನೆಪ ವರಗುರು
ಶಾಂತಲಿಂಗನನರ್ಚಿತ್ತುತಿ
ಸಂತಸದಿ ರಾಜ್ಯವನು ಪಾಲಿಸುತಿರ್ದನೊಲವಿನಲೀ || ೬೭ ||
ಅಂತೂ ಸಂಧಿ ೭ ಕ್ಕಂ ಪದನೂ ೧೧೪ ಕ್ಕಂ ಮಂಗಳಂ ಮಹಾಶ್ರೀ

X X X X

ಅರಸನುಗಿದನು ಬತ್ತಳಿಕೆಯಿಂ
ದುರುತರ ಬ್ರಂಹ್ಮಾಸ್ತ್ರವನು ಮುಂ
ಬರಿದೆ ಸಲ್ವಾರಾಸಿ ತುಳುಕಲು ಧಾತ್ರಿ ಕಂಪಿಸಲೂ
ಬರುವ ಶೂಲವ ಶಳದು ರಕ್ಕಸ
ನುರದೊಳಾಳ್ದುದು ಬಾಣ ನೆಲದೊಳ
ಗುರುಳಿ ಹಶಣವ ಕಳದನಮರರು ನೃಪನ ಕೊಂಡಾಡೆ || ೩೧ ||

ವಿಷಯ : ಷಡಕ್ಷರಿ ಪಂಚಾಕ್ಷರಿ ಮತ್ತು ಶಿವರಾತ್ರಿಗಳ ಮಹಿಮೆ.

ವಿಶೇಷ : ೧ ರಿಂದ ೩ ಪತ್ರಗಳಲ್ಲಿ ಷಡಕ್ಷರಿ ಮಹಿಮೆಯಿದೆ. ಇದು ಅಸಮಗ್ರ. ೪ನೆಯ ಪತ್ರದಲ್ಲಿ ಪಂಚಾಕ್ಷರೀಮಹಿಮೆ ಪ್ರಾರಂಭವಾಗಿ ೧೦ನೆಯ ಪತ್ರದಲ್ಲಿ ೭ನೆಯ ಸಂಧಿ ಮುಗಿದಿದೆ. ೧೦ನೆಯ ಪತ್ರದಲ್ಲೇ ಶಿವರಾತ್ರೆ ಮಹಿಮೆ ಪ್ರಾರಂಭವಾಗಿದೆ. ಇದೂ ಅಸಮಗ್ರ. ಇದೇ ಕಟ್ಟಿನಲ್ಲಿ ಬ್ರಹ್ಮೋತ್ತರಖಂಡವೆಂಬ ಕೃತಿ ಇದೆ.

1820

ಕೆ.ಬಿ ೮೭/೩	**ಷಡಕ್ಷರಿಯ ಕಂದ**	ಕಂದ
೭ ೯" × ೬.೪"	ಕೊಂಡಗೂಳಿ ಕೇಶಿರಾಜ	?
೧–೧೦ ಪತ್ರ	೧೨ ಪಂಕ್ತಿ	೨೪ ಅಕ್ಷರ

ಆದಿ : ಶ್ರೀರಸ್ತು || ಷಡಾಕ್ಷರಿಯ ಕಂದ ಬರೆಯುವದಕ್ಕೆ ಶುಭಮಸ್ತು||

ಕಂದ|| ಶ್ರೀಯಂ ಪಡವಡೆ ಶಾಶ್ವತ
ದಾಯುಷ್ಯದಾಪೇಕ್ಷೆ ತನಗೇಕೆ ಕೈಗೂಡುವಡೀ
ಮಾಯಕೊಗಾಗದಿರ್ಪ್ಪಡೆ
ಜೀಯ್ಯನ ಜಪ ಓಂ ನಮಃ ಶಿವಾಯಂಬ ಪದಂ || ೧ ||

ಅಂತ್ಯ : ಆರಕ್ಕರದಿಂ ಮಂತ್ರಂ
ಮೂರುಕಣ್ಣ ಭವನಿಂದ ವೆಗ್ಗಳದೈವಂ

ಬೇರಿಲ್ಲವೆಂದು ಧರಿತ್ರಿಗೆ
ಸಾರಿದನಾ ಕೇಶಿರಾಜ ದಂಡಾಧೀಶಂ ‖ ೧೧೦ ‖

ಷಡಾಕ್ಷರಿಯ ಕಂದ ಸಮಾಪ್ತ ಮಂಗಳಮಹಾಶ್ರೀ.

ವಿಷಯ : ಓಂ ನಮಶ್ಶಿವಾಯವೆಂಬ ಷಡಕ್ಷರ ಮಂತ್ರದ ಮಹಿಮೆ.

ವಿಶೇಷ : ಸುಂದರ ಬರಹ. ಇದೇ ಪುಸ್ತಕದಲ್ಲಿ ಮರುಳದೇವರ ಕಂದ, ಲಿಂಗ ಸ್ತೋತ್ರದ ಷಟ್ಪದಿ, ಮಿಶ್ರಸ್ತೋತ್ರ, ಶಂಕರದೇವರ ಕಂದ, ಬಸವ ಸ್ತೋತ್ರದ ಗದ್ಯ, ಇತ್ಯಾದಿ ಗ್ರಂಥಗಳಿವೆ.

1821

ಕೆ. ೩೬೯/೨	**ಷಡಾಕ್ಷರಿ ರಗಳೆ**	ರಗಳೆ
೮″ × ೧.೮″	ಶಂಕರದೇವ	ಸು. ೧೬೨೦
೨-೬ ಪತ್ರ	೯ ಪಂಕ್ತಿ	೪೧ ಅಕ್ಷರ

ಆದಿ : ಕಂದ‖ ಭದ್ಯತಿಮಿರ ಕಮಲ ಮಿತ್ರ
ಭದವಾರುದಿ ವಡಭವನ್ನಿಭವ ತರುದರುಶಂ
ಶಿವಷಡಾಕ್ಷರಿಯ ಮಂತ್ರಂ
ಭವಗಿರಿವ ಓ್ರೀ ಪ್ರಸನ ಶಂಕರಲಿಂಗ ‖

ಉತ್ಸಾಹರಗಳೆ ‖ ಶ್ರೀಗುರುಮೂರ್ತಿ ದಶದಿಶಾಮಯ ಪ್ರಕೀರ್ತಿ
ನಾಗರಾಜ ಕಟಕ ಶಂಕರಾಯ ಓಂ ನಮಃ ಶಿವಾಯ ‖ ೧ ‖

ಅಂತ್ಯ : ಕಂದ‖ ಈ ಶಿವ ಷಡಕ್ಷರಿಯ ಮಂತ್ರವ
ನೋಸರಿಸದೆ ಪೇಳ್ದ ಶಿವಭಕ್ತರ್ಗಂ
ದಾಸಭಾವದೊಳು ನಿತ್ತ್ಯ ನಾಂ
ಶರಣೆಂದು ಬದುಕಿದೆನು ಗುರು ಪ್ರಸಂನಶಂಕರಲಿಂಗ ‖

ಷಡಾಕ್ಷರಿರಗಳೆ ಸಮಾಪ್ತ ಮಂಗಳಮಹಾ ಶ್ರೀ ಶ್ರೀ ಶ್ರಿ.

ವಿಷಯ : ಷಡಕ್ಷರ ಮಂತ್ರದ ಮಹಿಮೆ.

ವಿಶೇಷ : ಗ್ರಂಥವು ಶಿಥಿಲವಾಗಿದ್ದು ಪತ್ರಗಳ ಅಂಚುಗಳೂ ಹರಿದಿವೆ. ಸಮಗ್ರ.

ಈ ಕಟ್ಟಿನಲ್ಲಿ ಷಡಾಕ್ಷರಿ ರಗಳೆಯೊಂದಿಗೆ ಗುರು ಬಸವ, ಮನೋವಿಕಾರ ಸಿರಸನ, ಭಕ್ತಿ ಬಿನ್ನಹ ರಗಳೆಗಳೂ; ಬಸವಸ್ತೋತ್ರ ಮಿಶ್ರಸ್ತೋತ್ರ, ಅಷ್ಟಾವರಣ, ಶೀಲವಂತನ ತ್ರಿವಿಧಿಗಳೂ, ಶಂಕರದೇವ, ಮಂತ್ರಮಹತ್ವ, ಮರುಳುದೇವ, ಪ್ರಭುಲಿಂಗ ಕಂದಗಳೂ, ಅಕ್ಷರ ಮಾಲಿಕ, ನಮಸ್ಕಾರ, ಷಟ್ಸ್ಥಲ, ಅಕ್ಷರಾಂಕನ ಗದ್ಯಗಳೂ, ಶತಕ ತ್ರಯವೂ, ಮಲ್ಹಣಸ್ತೋತ್ರವೂ ಇವೆ.

1822

ಕೆ ೧೭೭/೪	**ಷಡುಸ್ಥಲತಾಮಸಗುಣದ ಅನುಭಾವದ ವಚನ**	ವಚನ
೧೨.೯" × ೨.೧"	ಚನ್ನಬಸವರಾಜದೇವರು	?
೧೬ ಪತ್ರ	೧೫ ಪಂಕ್ತಿ	೮೦ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ಚಂನಬಸವರಾಜದೇವರು ನಿರೂಪಿಸಿದ ಷಡುಸ್ಥಲ ತಾಮಸಗುಣದ ಅನುಭಾವದ ಷದಕ್ಕೆ ಅನುಭಾವವೆಂತೆಂದರೆ ॥

ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ
ಮೆಲ್ಲಮೆಲ್ಲನೆ ಮಹೇಶ್ವರನೆನಿಸಿಕೊಂಬೆ
ಮೆಲ್ಲಮೆಲ್ಲನೆ ಪ್ರಸಾದಿಯೆನಿಸಿಕೊಂಬೆ
ಮೆಲ್ಲಮೆಲ್ಲನೆ ಪ್ರಾಣಲಿಂಗಿಯೆನಿಸಿಕೊಂಬೆ
ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ
ಮೆಲ್ಲಮೆಲ್ಲನೆ ಷಡುಸ್ಥಲವ ಮೀರಿ ನಿರವಯಸ್ಥಲ
ದಲ್ಲಿ ಯಿರುವೆ ಕೂಡಲ ಚಂನಸಂಗಮದೇವಾ ॥ ೧ ॥

ಅಂತ್ಯ : ಇಂತು ಷಷ್ಟಮಸ್ಥಲಕ್ಕೆ ಸೇರಿದ ವಚನ ೩೨೧ಕ್ಕಂ ಮಂಗಳಮಹಾಶ್ರೀ ॥ ಇಂತು ಚಂನಬಸವರಾಜದೇವರು ನಿರೂಪಿಸಿದ ಅನುಭಾವವೂ ಆಚಾರ್ಯ್ಯಂಗೆ ಆಚಾರ್ಯ್ಯನ ಭಾವ ಹೇಳಿಹುದು । ಶಿಷ್ಯಂಗೆ ಶಿಷ್ಯಾಷೆ ಯನುಭಾವ ಹೇಳಿಹುದು । ಜಂಗಮಕ್ಕೆ ಚರಾನುಭಾವ ಹೇಳಿದುದು । ಭಕ್ತಂಗೆ ಭೃತ್ಯಾನುಭಾವ ಹೇಳಿಹುದು । ಯೋಗಿಗೆ ಯೋಗಾನುಭಾವ ಹೇಳಿಹುದು । ಭೋಗಿಗೆ ಅರ್ಪ್ಪಣಾನುಭಾವ ಹೇಳಿಹುದು । ಅದುಕಾರಣ ಅನುಭಾವಸ್ಥಲವೆಂಬ ನಾಮವಾಯಿತ್ತು । ಯೀ ವಚನಂಗಳೂ ಅಂಗ ಸ್ಥಲಕ್ಕೆ ಭಿಂನವಾಗಿ ಹೇಳಿಬಂದಿದಿಲ್ಲ । ಷಡುಸ್ಥಲಸಂಯೋಗ ಬ್ರಹ್ಮದ ನೆಲೆಯನಱಿದ ನಿಲಬೇಕಾಗಿ । ನಾಮರೂಪಾಯಿತ್ತೆಂದರಿದು । ಯಿದೇ ಉಪದೇಶವೆಂದು ಗ್ರಹಿಸುವುದು ॥ ಇಂನು ಕೋಟಾನುಕೋಟಿ ವಚನಂ

ಗಳಿರ್ದಡೆಯಂ । ಈ ಅನುಭಾವಸ್ಥಲದೊಳಗಿರ್ದ್ದವಲ್ಲದೆ । ಬೇಱೆ ಮತ್ತೊಂದು ಸ್ಥಲಪರಿಯಾಯವಲ್ಲೆಂದಱಿವುದು । ಇಂತಪ್ಪ ಅನುಭಾವ ಸ್ಥಲದನು ಶ್ರೀಗುರುರಾಯ ಶಿಷ್ಯಂಗೆ ಬೋಧಿಸಲು। ಆತಶ್ಶಿಷ್ಯನು ಮಹಾ ಪ್ರಸಾದವೆಂದು ಕೈಕೊಂಡು। ಆ ಶ್ರೀ ಗುರುಲಿಂಗಮಂ ಸ್ತುಉತ್ಯಮಂ ಮಾಡಿದ ಪದಂಗಳೂ ॥

ರಾಗ ಶಾಂತಮುಲಹರಿ॥
ಸ್ಥಳಕುಳದೊಳಗಣ ಹೊಳಹ ತಿಳುಹಿ
ಕಳವಳವಳಿದ ಬೆಳಗಿದ ಶ್ರೀಗುರುವೆ

ಪದನು ॥ ಅಂಗಲಿಂಗ ಲಿಂಗಾಂಗವೆಂಬ ರತಿ
ಹಿಂಗದ ಸುಖಸಂಯೋಗಶರಣರು
ಸಂಗಚಂನಬಸವೇಶ್ವರನನುಭಾವ
ಲಿಂಗವ ಕರುಣಿಸಿದಾ x x x ಶ್ರೀಗುರುವೆ ॥ ೧ ॥

ಆ ರಂಗಸ್ಥಲದೊಳು ವಿವರಿಸಿಯಾ
ಱಾಱುಲಿಂಗ ಮೂವತ್ತಾಱುವನೂ
ತೋಱಿ ಶ್ರೀಬಸವಸಂಗಸದಾಶಿವನನೂ
ಬೇಱೆನಿಸಿದ ಶ್ರೀಗುರುವೆ ॥ ೫ ॥

ಈ ಅನುಭಾವಸ್ಥಲಕ್ಕೆ ಸೇರಿದ ವಚನ ೩೨೧ ಗ್ರಂಥ ೧೬೫ಕ್ಕಂ ಮಂಗಳ ಮಹಾಶ್ರೀ ॥

ವಿಷಯ : ಆಚಾರ್ಯಾದಿ ಷಡನುಭಾವ ವಿವರಣೆ.

ವಿಶೇಷ : ಪತ್ರಸಂಖ್ಯೆ ೧೩೬ರಿಂದ ೧೩೮ ಪೂರ್ತಿ ಭಕ್ತ–ಮಹೇಶಸ್ಥಲಗಳು ಪೂರ್ಣ ವಾಗಿವೆ. ಮುಂದೆ ಪತ್ರಸಂಖ್ಯೆ ೧೨೩ರಿಂದ ೧೩೫ರವರೆಗೂ ಇದ್ದು ಮಿಕ್ಕ ಸ್ಥಲದ ವಚನಗಳು ಮುಕ್ತಾಯವಾಗಿವೆ. ಸಮಗ್ರವಾಗಿದೆ. ಇದರೊಂದಿಗೆ ಷಟ್ಪ್ರಕಾರಸಂಗ್ರಹ, ಮೂರೇಳು ದೀಕ್ಷೆಪದ-ವಚನಗಳು, ಗಣಭಾಷ್ಯರತ್ನ ಮಾಲೆ ಈ ಗ್ರಂಥಗಳೂ ಇರುತ್ತವೆ. ಶಕಟರೇಫ ಪ್ರಯೋಗವಿದೆ. ಪ್ರತಿ ಸುಸ್ಥಿತಿಯಲ್ಲಿದೆ. ಅಕ್ಷರಗಳು ಚಿಕ್ಕವಾದರೂ ಸ್ಫುಟವಾಗಿವೆ.

1823

ಕೆ. ೩೪೩/೬	ಷಡ್ಚಕ್ರಸ್ತೋತ್ರ (ಸಟೀಕು)	ಶ್ಲೋಕ, ಟೀಕು
೧೨.೨″ × ೨.೩″	?	?
೩ ಪತ್ರ	೧೧ ಪಂಕ್ತಿ	೬೦ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯ ನಮಃ || ಷಡ್ವಕ್ತ್ರ||
ಪ್ರಾಲೇಯಾಮಲಮಿಂದು ಕುಂದಧವಲಂ ಗೋಂ ಕ್ಷೀರ ಪೇನಪ್ರಭಃ
ಭಸ್ಮಾಭ್ಯಂಗಮನಂಗದೇಹದಹನಂ ಜ್ವಾಲಾವಲೀಲೋಚನಂ
ಬ್ರಮ್ಹೇಂದ್ರಾದಿ ಮರುದ್ಗಣೈಸ್ತುತಿಪದಂ ರುಗ್ವೇದಶಾಖಾಮಯಂ
ಸದ್ಯೋಜಾತಮಿದಂ ಕಲಂಕರಹಿತಸ್ಥಾರ್ಣೋರ್ಮುಖಂ ಪಶ್ಚಿಮಂ ||

ಟೀ|| ಪ್ರಾಲೇಯ—ಹಿಮವದೋಪಾದಿಯ ಅಮಲ—ನಿರ್ಮಲವಾಗಿರ್ದಂಥ ಕುಂದ—ಕಲಂಕುವಿಲ್ಲದಂಥಾ ಇಂದು ಚಂದ್ರನೋಪಾದಿಯ ದವಲಂ—ಬಿಳಿದಾದಂಥಾ x x x x ಕಲಂಕರಹಿತಂ—ಕಪ್ಪುಯಿಲ್ಲದಂಥಾ | ಸದ್ಯೋಜಾತವೆಂಬ ಹೆಸರನುಳ್ಳಂಥಾ ಪಶ್ಚಿಮಮುಖಂ—ಪಡುವಳಮುಖವನು ನಮಾಮಿ—ನಮಸ್ಕಾರವ ಮಾಡುತಿದ್ದೇನೆ || ೧ ||

ಅಂತ್ಯ : || ೮ || ಯೇತಾನಿ ಷಟ್ವವಾದನಾನಿ ಮಹೇಶ್ವರಸ್ಯ
ಯೇ ಕೀರ್ತ್ಯಯಂತಿ ಮನುಜಾಃ ಸತಂ ಪ್ರುಭಾತೇ
ತೇ ದೌತಪಾದಪ ಪರಿಪಾಂಡುರ ರಾಜಹಂಸಾ
ಸ್ಸಂಸಾರಸಾಗರಮತೀವರತರಂ ಕಿರಸ್ಯ ||

ಟೀ|| ಅರುಕೆಲಂಬರು ಮನುಜಾಃ—ಮನುಷ್ಯರುಗಳು ಸತತಂ ಅವಾಗಲೂ ಪ್ರಭಾತೇ—ವುದಯಕಾಲದಲ್ಲಿ ಮಹೇಶ್ವರಸ್ಯ—ಪರಮೇಶ್ವರನ x x x x ಸಂಸಾರಸಾಗರಪಾರಂ—ಸಂಸಾರಸಮುದ್ರದ ಕಡೆಯಲ್ಲಿದಂಥಾ ಪಾರ—ದಡವನು ಅತೀವ ಶೀಗ್ರದಿಂ ತರಂತಿ—ದಾಟುತ್ತುಂವಿಹರು || ೯ || ಷಡ್ವಕ್ತ್ರದ ಸ್ತೋತ್ರ ಸಂಪೂರ್ನ ಮಂಗಳಮಹಾಶ್ರೀ ||

ವಿಷಯ : ಪರಶಿವನ ಸದ್ಯೋಜಾತಾದಿ ಷಡ್ವಕ್ತ್ರಗಳ ಸ್ತುತಿ.

ವಿಶೇಷ : ಸಮಗ್ರ. ಪತ್ರಗಳಿಗೆ ಕ್ರಮಸಂಖ್ಯೆಯಿಲ್ಲ. ಕನ್ನಡ ಟೀಕಿನೊಂದಿಗೆ ಇದೆ. ಇದರೊಂದಿಗೆ ವೈರಾಗ್ಯಷಟ್ಪದಿ, ಲಿಂಗಸ್ತೋತ್ರಷಟ್ಪದಿ, ಶಿವಲಿಂಗಷಟ್ಪದಿ, ಶಿವಮಹಿಮಾ ಶತಕ, ಪಂಚವಿಂಶತಿನುತಿ ಎಂಬ ಇತರ ಗ್ರಂಥಗಳು ಇವೆ.

1824

ಕೆ. ೧೮೮/೮	**ಷಡ್ವಕ್ತ್ರಸ್ತೋತ್ರದ ಟೀಕೆ**	ಟೀಕು
೧೭.೬"X೨"	?	?
೫೭—೫೮ ಪತ್ರ	೧೦ ಪಂಕ್ತಿ	೯೨ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯ ನಮಃ ॥ ಷಡ್ವಕ್ತ್ರಸ್ತೋತ್ರದ ಟೀಕೆ ॥
ಪ್ರಾಲೇಯ । ಹಿಮದೋಪಾದಿಯಲ್ಲಿ । ಅಮಲಂ । ಕಲಂಕವಿಲ್ಲದಂಥಾ । ಯಿಂದು । ಚಂದ್ರನೋಪಾದಿಯ । ಧವಲಂ । ಬಿಳಿದಾದಂಥ । ಗೋಕ್ಷೀರ ಪೇನಪ್ರಭಂ । ಗೋಕ್ಷೀರ । ಆವಿನ ಹಾಲಿನ । ಫೇನಪ್ರಭಂ । ನೊರೆಯೋಪಾದಿಯ ಕಾಂತಿಯನುಳ್ಳಂಥ । ಅನಂಗದೇಹದಹನಂ । ಅ೯ ಂಗ ।ಕಾಮನ ದೇಹ । ಶರೀರವನು । ದಹನಂ । ಸುಟ್ಟು । ಭಸ್ಮಾಭ್ಯಾಂಗಂ । ವಿಭೂತಿಯಿಂದ ಸ್ನಾನವನುಳ್ಳಂಥ ।

ಅಂತ್ಯ : ॥೮॥ ಟೀಕೆ ॥ ಯೇ । ಆರುಕೆಲಂಬರು । ಮನುಜಾಃ । ಮನುಷ್ಯರುಗಳು । ಸತತಂ । ಆವಾಗಲೂ ಪ್ರಭಾತೇ । ವುದಯ ಕಾಲದಲ್ಲಿ । ಮಹೇಶ್ವರಸ್ಯ । ಪರಮೇಶ್ವರನ । ಯೇತಾನಿ । ಆವು ಕೆಲವಾದಂಥಾ । ಶಷ್ಟವದನಾನಿ । ಈ ಆಱು ಮುಖಂಗಳನು । ಯೇ ಕೀರ್ತಯಂತಿ । ಆರುಸ್ತೋತ್ರವಮಾಡುತ್ತಂ ವಿದ್ಧಾರು । ತೇ। ಅವರುಗಳು । ದೌತಪಾಪ । ತೊಳೆಯಲುಪಟ್ಟ ಪಾಪವುಳ್ಳವರುಗಳಾಗಿ । ಪರಿಪಾಂಡುರ ರಾಜಹಂಸಾಃ । ಯಲ್ಲ ಕಡೆಯಲ್ಲಿ ಬಿಳಿದಾವ ರಾಜಹಂಸೆಗಳಳ್ಳಂಥಾ । ಸಂಸಾರಸಾಗರಂ । ಸಂಸಾರವೆಂಬ ಸಮುದ್ರವನು ! ಆತೀವ । ಮೀರಲಾಗಿ । ತರಂತಿ । ದಾಂಟುತ್ತಿಹರಲಾ ಯೆಂಬುದರ್ಥ ॥ ೯ ॥ ಷಡ್ವಕ್ತ್ರಸ್ತೋತ್ರ ಸಮಾಪ್ತ ಮಂಗಳಮಹಾಶ್ರಿ .

ವಿಷಯ : ಪರಶಿವನ ಪಂಚಮುಖಗಳು ಮತ್ತು ಗುಪ್ತಮುಖ ಈ ಆರರಸ್ತೋತ್ರ.

ವಿಶೇಷ : ಶಕಟರೇಫ ಪ್ರಯೋಗವಿದೆ. ಸಮಗ್ರ. ಸ್ತೋತ್ರ ಸಂಸ್ಕೃತಭಾಷೆಯಲ್ಲಿದ್ದು ಮೂಲವಿಲ್ಲದೆ ಕೇವಲ ಪ್ರತಿಪದ ಕನ್ನಡ ಟೀಕೆಯಿಂದ ಕೂಡಿದೆ. ಇದರೊಂದಿಗೆ ಬಸವಸ್ತೋತ್ರದ ತ್ರಿವಿಧಿಯ ಟೀಕೆ, ಕರಸ್ಥಲದ ನಾಗಲಿಂಗದೇವರ ತ್ರಿವಿಧಿಗಳೇ ಮೊದಲಾದ ಇತರ ೧೫ ಗ್ರಂಥಗಳಿವೆ.

1825

ಕೆ. ೫೪	**ಸಂವತ್ಸರಫಲ**	**ಗದ್ಯ**
೭.೪ × ೨"	?	?
೧-೧೫ ಪತ್ರ	೧೧ ಪಂಕ್ತಿ	೩೦ ಅಕ್ಷರ

ಆದಿ : ಶ್ರೀ x x ಸಂವತ್ಸರಫಲ ಬರೆವುದಕ್ಕೆ ಶುಭಮಸ್ತು ॥
ಪ್ರಭವ ಸಂವತ್ಸರಕ್ಕೆ ಮಳೆ ಅಲ್ಪ । ಕಾರುಮಳೆಯಕ್ಕು। ಅತಿರೋಗದಿಂದ ಪ್ರಜೆಗೆ ಕಂಟಕವಕ್ಕು । ಉಪಹತಿ । ಅರಗು ಸಂಗ್ರಹಾ ಮಾಡಿಕೊಳ್ಳುವದು।

ಅರಸುಗಳಿಗೆ ಕಲಹ। ಯಿನು ವಿಪರೀತಕಾಲವೆನಿಸುವದು। ಮೃಗಜಾತಿಗಳಿಗೆ ಲೇಸು। ರತ್ನಸ್ವರೂಪುಗಳಿಗೆ ಅಧಿಕಲಾಭಉಂಟು। ಗಜ ಅಶ್ವ ವಂಟಿಗೆ ನಿಲಕಡೆಯಿಂದ ಮಾರಕ್ಕು। ಝುಲ್ಲಿಪಟ್ಟೆ ಪರಿಮಳದ್ರವ್ಯಂಗಳು ತಗ್ಗಿ ಮಾರ್‍ಯಾಲು। ಹೊಗುಯಲೆ ಮೆಣ್ಸು ಮದ್ಯಗತಿಯಲ್ಲಿ ಮಾರ್‍ಯಾಲು। ಜೀವದನಗಳಿಗೆ ರೋಗಮುಕ್ಕು।.ವ್ಯವಹಾರಕ್ಕೆ ಅಧಿಕಲಾಭ ॥ ೧ ॥

ಅಂತ್ಯ : ಅಕ್ಷಯುಸಂ॥ ಮುಂಗಾರುಮಳೆ ಬೆಳೆ ಮದ್ಯಮ। ಹಿಂಗಾರು ಮಳೆಯಲ್ಲಿ ಕೆರೆ ಕುಂಟೆ ತುಂಬಿ ಫಲವಾದೀತು। ಮುಂಗಾರುಧಾಂನ್ಯ ಕುಂದುಗ। ಹಿಂಗಾರುಧಾಂನ್ಯ ಆರ್ಘ್ಯಮುಕ್ಕು। ಚೋರಭಯಮುಕ್ಕು। ಅಸತ್ಯವ್ಯಾದಿ ಬಹಳಮುಕ್ಕು। ಅಗ್ನಿಭಯವಕ್ಕು। ಪಶುಗಳಿಗೆ ವ್ಯಾಧಿಯಕ್ಕು। ಮನ್ನೆಯರಿಗೆ ಚಿಂತೆಯಕ್ಕು ಸಕಲರ ಸವರ್ಗಂಗಳಿಗೆ ಮಾರು ಮದ್ಯಮ। ಬ್ಯಾಹಾರಿಗಳಿಗೆ ನಷ್ಟಮುಕ್ಕು। ಸಕಲಧಾಂನ್ಯರಸವರ್ಗಂಗಳನು ಸಂಗ್ರಹಾಮಾಡಿಕೊಳ್ಳುವದು ಮುಂದಣಸಂವತ್ಸರಕ್ಕೆ ಲಾಭ ಘನಮುಕ್ಕು ॥ ೬೦ ॥ ಶ್ರೀಃ ॥

ಶಾಲಿವಾಹನ ವರ್ಷ ೧೭೫೮ ದುರ್ಮ್ಮುಖಿ ಸಂ॥ ಶ್ರಾವಣ ಶು ೨ ಭಾನುವಾರ ಘಳಿಗೆ ಸೂರ್‍ಯ್ಯ ಉದಯವಾದ ೫ ನೆ ವ್ಯಾಳ್ಯದಲ್ಲು ಮುಸುಗೊಂಡಲಿ ನಾ.ಮಯ್ಯನಕುಮಾರ ಜಕ್ಕಪ್ಪನಿಗೆ ಹುಲಿಗೆ ಪದ್ಮಣನ ಕುಮಾರ ಗಟ್ಟಿರಾಯ ಬರಕೊಟ್ಟ ಸಂವತ್ಸರ ಫಲ x x ಸಂಪೂರ್ನ ಮಂಗಳ ಮಹಾಶ್ರೀ

ವಿಷಯ : ಪ್ರಭವಾದಿ ಸಂವತ್ಸರಗಳ ಫಲ.

ವಿಶೇಷ : ಶಿಥಿಲ ಪ್ರತಿ.

1826

ಕೆ. ೨೪೩	ಸಕಲವೈದ್ಯ ಸಂಹಿತಾಸಾರಾರ್ಣವ	ಗದ್ಯ
೨೫"×೨"	ವೀರರಾಜೇಂದ್ರ	ಸು ೧೭೭೦
೧-೨೦೩ ಪತ್ರ	೧೪ ಪಂಕ್ತಿ	೧೩೦ ಅಕ್ಷರ

ಆದಿ : ....ತೂಳ್ದೆ ಲಬ್ಧೋದಾರ ಶ್ರೀಕಲ್ಪ ಭೂಜಾದಿಗಳೇನಖಿಳ ದೇವ ರ್ಕಳಂ ಸಂತವಿಟ್ಟಾಧೌರೇಯಂ ದೇವದೇವಂ ತ್ರಿಜಗದೋಳೆನೆ ವಿಖ್ಯಾತಿಯಂ ತಾಳ್ದ ನಿತ್ಯ ಶ್ರೀರಮ್ಯಾವಾಸನಾದಂ ಸಲಹುಗೆ ಕೃಪೆಯಿಂದ.......... ॥ ಹೃಷ್ಟಂ ಕೃಪಾಸಾರಂ ಚಿತ್ತ ಕಟಕ್ಷದಿಂ ಪೊರೆಯಲೀ ಭೂಲೋಕಮಂ ಪಶ್ಚಿಮಶ್ರೀ ರಂಗಾಧಿಪನಾದನೆಮ್ಮನೊಲವಿಂ ರಕ್ಷಿಕ್ಕೆ ನಾರಾಯಣಂ ॥೨॥

ಅಂತ್ಯ: ಮಟ್ಟಿನ ಛರ್ಧಿಕೇ॥ ಯಾಲಕ್ಕು। ದ್ರಾಕ್ಷಿಪಂಡೂ। ಖಜೋರಂ।ತಾಳೀಶಪತ್ರೀ ಪಿಪ್ಪಲಿವಮೂಲಂ । ಶುಂಟೀ । ಯಿವಿಂನ್ನೀ । ಚಗಚಕ್ಕಂಟಿಕಿಗ ॥ ಕೂರ್ಚಿ ವೆಲಗಪಂಟರ ಸಾನಕೂರ್ಚಿ ಕಲಪಿಯಿಸಾಯ್ಯನೂ ಗರ್ಭಿಣಿ ಛರ್ಧಿ ಅರೋಚಕಂ ಮೊದಲೈನಛೆರ್ದುಲು ಸಿಲುಚುನು ಶ್ರೀ ॥ ಶ್ರೀ ॥ ಶ್ರೀ ॥ ವೆಣಸಿಗೆ ಬೆ.... ....ಕ ತೆಗದು ನಿಂಬೆಹುಳಿಯಿಂದಾ ಅರದು। ನೆಲ್ಲಿಕಾಯಷ್ಟು ಉಂಡೆಯ ಮಾಡಿ ಹಿಪ್ಪಲಿ ಗ ೩ ತೂಕಾ । ಯಾಲಕ್ಕಿ ಗ ೩ ತೂಕಾ । ಮೆಣಸೂ ಗ ೩ ತೂಕಾ । ನೆಲ್ಲಿ ಚೆಟ್ಟು ಗ ೩ ತೂಕಾ । ವಾಯುವಿಳಂಗಾಗ ॥ ತೂ ಯಿಪ್ಪನೂ ಚೂರ್ನವ ಮಾಡಿ ಹೊಂನ್ನಗಂನ್ನೆ ಸೊ.......... ಮೇಲೆ ಸೇ ೧ ಹಸುವಿನ ಬೆಂಣೆಯ ಹಾಕಿಯರದು ಮೂರು ವೇಳೆ ತೊ.......ಕ ಜಾಯಿಕಾಯಿಾ ೧ ನೂ ಪುಡಿಮಾಡಿ ಹಾಕಿ ವಂದು ...

ವಿಷಯ : ವೈದ ಶಾಸ್ತ್ರ.

ವಿಶೇಷ : ಶಿಥಿಲಪ್ರತಿ. ಇದರಲ್ಲಿ ಅರ್ಧಭಾಗ ಮಾತ್ರ ಅಚ್ಚಾಗಿದೆ. ಅಸವ ಗ್ರಪ್ರುತಿ ಪ್ರತಿ ಪತ್ರದಲ್ಲೂ ಪಂಕ್ತಿಗಳಿಗೆ ಕ್ರಮಾಂಕವಿ . ೭, ೪೨, ೪೩, ೪೪, ೫೫, ೬೩, ೭೮, ೭೯–೯೪ ಪತ್ರಗಳು ಲುಪ್ತ. ಕೆಲವು ಪತ್ರಗಳು ಮುರಿದು ಹೋಗಿವೆ.

1827

ಕೆ.ಎ. ೯೭	**ಸಕಲವೈದ್ಯಸಂಹಿತಾಸಾರಾರ್ಣವ**	ಗದ್ಯ
೧೨.೩″ × ೭.೮″	ವೀರರಾಜೇಂದ್ರ	ಸು. ೧೭೦೦
೧-೩೩೦ ಪತ್ರ	೨೫ ಪಂಕ್ತಿ	೨೫ ಅಕ್ಷರ

ಆದಿ : ಶ್ರೀ x x ವೀರರಾಜೇಂದ್ರೋಕ್ತಿ ವಿಲಾಸ ವೈದ್ಯಂ ಪೀಠಿಕಾ ಪ್ರಕರಣಂ ॥

ವೃ॥ ಕ್ಷೀರಾಂಭೋರಾಶಿಗಾಢ ಪ್ರಮ ನ ಜನಿಕೋತ್ಪಾತಮಂ ತೂಳ್ದುಲಭ್ಧೋ
ದಾರಶ್ರೀಕಲ್ಪಭೂಜಾದಿಗಳಿನಖಿಳ ದೇವರ್ಕಳಂ ಸಂತವಿಟ್ಟಾ
ಧಾರೇಯಂ ದೇವದೇವಂ ತ್ರಿಜಗದೊಳೆನೆ ವಿಖ್ಯಾತಿಯಂ ತಾಳ್ದು ನಿತ್ಯ
ಶ್ರೀರಮ್ಯಾವಾಸನಾದಂ ಸಲಹುಗೆ ಕೃಪೆಯಿಂದೆಮ್ಮನೆಂದುಂ ಮ .... ॥

ವೃ॥ ಇಂತು ಮರಾಟರೊಳ್ಪ್ರಸಿದ್ಧರಾಗಿರ್ದ ಜೆಜೆಗಾಟ ಮುಂತಾದ ಮಹಾ ಶೂರರಂ ಕಡಿದ ವರಾಸಿ ಕು ರೆ ಬೊಕ್ಕಸ x x x x ಕರ್ಣಾಟಕ ಚಕ್ರವರ್ತಿ ಚಿಕ್ಕದೇವೇಂದ್ರಂಗೆ ದಕ್ಷಿಣ ಭುಜಾದಂಡಮೆನಿಸಿ ಕೀರ್ತಿವಡೆದ ದಳವಾಯ್ದೊಡ್ಡೇಂದ್ರನ ಕುಮಾರಂ ವೀರರಾಜೇಂದ್ರನೆಳಮೆ ಯೊಳ್ x x x x ವಿದ್ವತ್ಸಮಾಜದೊಳ್ಕಾವ್ಯ ನಾಟಕಾ

ಲಂಕಾರ ತರ್ಕ ಶಬ್ದವಿಚಾರಂ ಗೆಯ್ವುತ್ತೊಂದು ದಿನಮಾಯುರ್ವೇದಮಂ ವಿಚಾರಿಸುತಿರ್ದು—

ವೃ॥ ಧರೆಯೊಳ್ ಭೈಷಜ್ಯ ಶಾಸ್ತ್ರಂ ಸುಖಕರಮಖಿಳರ್ಗಾದೊಡಂ ವೈದ್ಯಬೋಧಂ
ತರದಿಂ ತಳ್ತುತ್ತೆ ಬಂದತ್ತವನಿಯೊಳೆನುತ್ತಾ ವೈದ್ಯಶಾಸ್ತ್ರಕ್ಕೆ ಟೀಕಂ
ಬರೆದಂ ವೈದ್ಯ ಪ್ರವೀಣರ್ಪೊಗಳುತಿರೆ ಮಹಾ ಸಂಹಿತಾದುಗ್ಧರತ್ನಾ
ಕರದಿಂದೆತ್ತುತ್ತೆ ಸಾರಾಂಶಮನೊಡನೊಲವಿಂ ವೀರರಾಜಕ್ಷಿತೀಂದ್ರಂ ॥

ಅಂತ್ಯ : ಗರ್ಭಿಣಿ ಶೂಲೆ ರೋಗದ ಕುಳ ೧ ಕ್ಕೆ ಗರ್ಭಶೂಲೆಯ ಬಗೆ ಗರ್ಭಿಣಿಯರ ಅಕಾಲದ ರಕ್ತದಬಗೆ ೧ ಯೋನಿಕವಳದ ಬಗೆ ೧ x x x x ಗರ್ಭಸ್ರಾವದ ಬಗೆ ೧ ಅಂತು ಬಗೆ ೨೫ಕ್ಕೆ ಚಿಕಿತ್ಸೆ ಸಂಹಿತೆಗಳು ೫೭ ಕಲ್ಕ ೧೮ ಕಷಾಯ ೭೨ ಲೇಹ್ಯ ೧ ವಟಕ ೧ ಚೂರ್ಣ ೯೧ ತುಪ್ಪ ೧ ಲೇಪ ೫ ಕವಳ ೪ ತೈಲಗಿಸಹಸ್ರಯೋಗ ೧೭೯ಕ್ಕಂ ಶ್ರೀ

ಗದ್ಯ ॥ ಇತಿ ಶ್ರೀವಾಗೀಶಾದ್ಯಮರ ಪರಿವೃಢ ಸುರುಚಿರ ಮಣಿಮುಕುಟನೂತ್ನ ರತ್ನಪ್ರಭಾತಿಮಿರ x x x ಶ್ರೀಮದ್ವೀರರಾಜೇಂದ್ರಪ್ರಣೀತಮಪ್ಪ ಸಕಲವೈದ್ಯ ಸಂಹಿತಾಸಾರಸಮುದ್ರದೊಳ್ ಕ್ರಿಮಿರೋಗ ವಾತರೋಗ ಪೈತ್ಯ ಗರ್ಭರೋಗ ನಿರೂಪಣತರಂಗ ಗ್ರಂಥ ಮಂಗಳ ಮಹಾಶ್ರೀ ಸಂಪೂರ್ಣಂ ॥

ವಿಷಯ : ವೈದ್ಯ ಸಂಗ್ರಹ.

ವಿಶೇಷ : ಶಿಥಿಲಪ್ರತಿ.

1828

ಕೆ.ಎ. ೮೯	**ಸಕಲಸಂಹಿತಾಸಾರಸಮುದ್ರ**	ಗದ್ಯ
೧೩.೧" × ೮"	ವೀರರಾಜೇಂದ್ರ	೧೭೦೦
೭–೧೪೯ ಪತ್ರ	೩೪ ಪಂಕ್ತಿ	೨೦ ಅಕ್ಷರ

ಆದಿ : ವಲವಣ—ಸಾವರ್ಚಲವಣ—ಬಿಡಾಲ್ಲವಣ—ಯಿವಂ—ರ್ಣವಂ ಮಾಡಿ ತುಪ್ಪದಿಂದಾ ಸೇವಿಸೆ ಸರ್ಪ್ವಗ್ರಪಾಣೀ—ಪಾಂಡು—ಗ ಗುಲ್ಮಶೂಲೆ—ಹರಮುಕ್ಕುಂ ॥ ಶ್ರೀ ॥ ೭ ॥ ಪಾಪ್ಪಲೀ ಪಾಪ್ಪಲೀಮೂಲ ಆಳಲೆಕಾಯಿ—ವಾಯುವಿಳಂಗ–ಯಿವಂನರದು ಮಡಿಕೆ ವಳಮುಖಕ್ಕೆ ತೊಡದು ಅರಶಿನ

ಮಜ್ಜಿಗೆ ಹುಯಿದು ಕಾಶಿ ಪಳದ್ಯವಂ ಮಾಡಿ ಭೋಜನದಲ್ಲಿ ಆಪಾಂಶಿ ಕ್ಕೊಳ್ಳಲೂ ಸಂದ್ರು ಮೂಲರೋಗ ಶ್ವಾಸರೋಗ–ಗುಲ್ಮ–ಕ್ರಿಮಿಸಹಾ ಪರಿ ಹಾರವಕ್ಕುಂ ॥ ಶ್ರೀ ॥ ೮ ॥

ಅಂತ್ಯ : ಪೊಡಪತ್ರಾಕು ಸೂರ್ಯಗ್ರಹಣಂ ನಾಡು ತಿಚ್ಚಿ ಚೂರ್ಣಂ ಚೇಶಿ ಆ ಚೂರ್ಣಂ ಪಾಲಿ—ಸಮುಲೊಲೇಸುಕೊನಿ ಕಾಲುಮಂಡಲಂ ತಿನನೂತೆ ಯಿಪಾಮು ವಿಷಾಯವಿರುಗುನು ೨ ಯಿ ಕಿರುಕುಮರ ಅಮುಳನಿಗುಕೂಸ್ತ ಮೊಘ ಮೆಣಸಿಗೆ ಬೇರ್ರು ಯಕ್ಕದಬೇರು–ಡು.

ವಿಷಯ : ವೈದ್ಯ ಸಂಗ್ರಹ.

ವಿಶೇಷ: ಗ್ರಂಥದ ಆದಿಯಲ್ಲಿ ೩ರಿಂದ ೧೬ ಬೇರೆ ಪತ್ರಗಳಲ್ಲಿ ವಿಷಯಾನುಕ್ರಮಣಿಕೆ ಯಿದೆ. ಮೋಡಿಯಕ್ಷರ. ಅಸಮಗ್ರಪ್ರತಿ.

1829

ಕೆ.ಎ. ೩೧೭	**ಸಕಲಾಗಮ ಶಿಖಾಮಣಿ**	ವಚನ
೧೩.೨" × ೮.೪"	ಬಾಲಸಂಗಯ್ಯ ?	ಸು. ೧೧೬೦
೧-೩೬೨ ಪತ್ರ	೨೧ ಪಂಕ್ತಿ	೨೦ ಅಕ್ಷರ

ಆದಿ : ಸಕಲಾಗಮ ಶಿಖಾಮಣಿ ॥

ಶ್ರೀ ಬಸವೇಶ್ವರ ಚೆನ್ನಬಸವೇಶ್ವರ ಪ್ರಭುದೇವರು ಸಿದ್ಧರಾಮಯ್ಯದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳ ಪಾದಕೆ ಶರಣು ॥ ಶ್ರೀಮನ್ನಿ ರಾ ಲಂ ಬ ನಿ ರಂ ಜ ನ ನಿರಾಮಯ ನಿರಾಮಯಾತೀತ ಪರಮಪರಮ ಪರಮಾನಂದ ಪರಮಾರ್ಥ ಪರಮೇಶ ಪರಾತ್ಪರ ಪರಬ್ರಹ್ಮವನುಪಮ ತೇಜೋಮಯ x x x x ನೋಡಾ ನಮ್ಮ ಅಪ್ರಮಾಣ ಕೂಡಲ ಸಂಗಮದೇವನು ॥ ೧ ॥

ಅಂತ್ಯ : ಹೀಗೆಂದು ಮೂವತ್ತಾಱು ತತ್ತ್ವಂಗಳ ನಿವೃತ್ತಿಯನು ಷಡಂಗ ನಿವೃತ್ತಿ ಯನು ಷಡುಶಕ್ತಿಗಳ ನಿವೃತ್ತಿಯನು ನಿರೂಪಿಸಲು ಪರಮ ಹರುಷಿತನಾಗಿ ಮತ್ತಂ ಆ ಶಿಷ್ಯನು ಎಲೆ ಸದ್ಗುರುಸ್ವಾಮಿ ಮೂವತ್ತಾಱು ತತ್ತ್ವಂಗಳ ನಿವೃತ್ತಿಯನು ಷಡಂಗನಿವೃತ್ತಿಯನು ಪರಶಕ್ತಿಗಳ ನಿವೃತ್ತಿಯನು ನಿಮ್ಮ ಮಹಾ ವಾಕ್ಯಂಗಳಿಂದ ನಿರೂಪಿಸಿ ತೋರಲು ಕಂಡು ಪರಮಸುಖಿ ಯಾದೆನು ಇನ್ನು ಷಡ್ಭೂತಾಂಗ ಮೊದಲಾಗಿ ಪರಿಣಾಮ ಕಡೆಯಾಗಿ

ಎಲ್ಲಾ ನಿವೃತ್ತಿಮಾರ್ಗಂಗಳೆ ನಿರೂಪಿಸೆಂದು ಬಿನ್ನೈಸಲು ಆ ಸದ್ಗುರು ಸ್ವಾಮಿ ನಿರೂಪಿಸಿದರದೆಂತೆಂದಡೆ x x x x ಆ ಪ್ರಣವದ ಜ್ಯೋತಿ ಸ್ವರೂಪದಲ್ಲಿ ಆತ್ಮನೆಂಬ ಮಹಾಭೂತವಡಗಿತ್ತು ನೋಡ। ಇದಕ್ಕೆ ಮಹಾವಾತೂಲಾಗಮೇ। ಪೃಥ್ವೀಚಾಪಸ್ತಥಾ ತೇಜಃ ವಾಯುಶ್ಚಾಕಾಶ.... ತನಃ। ಇತಿ ಷಷ್ಠಭೂತಂದೇವಿ। ಓಂಕಾರ ಗರ್ಭೇ ಲೀಯತೇ। ಇತೆಂದುದಾಗಿ ಅಪ್ರಮಾಣ ಕೂಡಲಸಂಗಮದೇವಾ ॥ ೭೬೦ ॥

ವಿಷಯ : ಶಿವಯೋಗ ವಿಚಾರ.

ವಿಶೇಷ : ಇದರಲ್ಲಿ ಪ್ರತಿವಚನವೂ 'ಅಪ್ರಮಾಣ ಕೂಡಲಸಂ ಮದೇವಾ' ಎಂದು ಮುಗಿಯುತ್ತದೆ. ಅಕ್ಷರಗಳು ವಿರಳವಾಗಿವೆ.

1830

ಕೆ. ೧೨೨/೧	**ಸಕಲಾಗಮ ಸಿದ್ಧಾಂತ ಶಿಖಾರತ್ನ**	**ವಚನ**
೫" × ೧.೬"	**ಅಲ್ಲಮಪ್ರಭು**	**ಸು. ೧೧೬೦**
೧-೩೪ ಪತ್ರ	**೭ ಪಂಕ್ತಿ**	**೨೦ ಅಕ್ಷರ**

ಆದಿ : ಆಲಮಹಪ್ರಭುಸ್ವಮ್ಮಿಯವರ್ರು। ನಿರ್ರುಫಿಸಿದಾ ಸಕಲಗಮ ಸಿದ್ಧಾಂತ್ರಸಿಕರಂತತ್ನದ ಗಂತ್ರ ॥ ಆಧಿಸದಾಸಿವತತ್ವ। ಅನಧಿಯು ಸ್ವರತತ್ವ। ಲೀಲಿಂಥತ್ತ। ಮಹೇಶ್ವರ ತತ್ವಯೆಂಬಾ ಅದಿತ್ತಿ ತತ್ವಂಗಳು ತಾನಲ। ಶಂಕರಾ। ಶೆಶಿದಾರಾ ಗಂಗದರಾ। ಗವುರೀಶ ಕಾಲತಂಟ್ಟು। ಕಾಪಾಲ ಮಾಲದರಾ। ಕಲಗ್ನಿರುದ್ರ।

ಅಂತ್ಯ : ಬಸವಾದ ಪ್ರಮತ್ತರಲರ್ಗೆ ಅಲ್ಲಾಮಹಪ್ರಬು। ಬಿಂನಗ್ನಾನದಲ್ಲಿ। ಮೋಕ್ಷವಿಲ್ಲೆಂದು ಸಹುಮ್ಯೆಗ್ನಾನಯುತ್ತನಾಗಿ। ನೀರ್ರುಪಿಸಿಥ ಸಕಲಗಮ। ಸಿದ್ಧಂತಸಿಖಾರಂತ್ರ ॥ ಸಂಪುರ್ನ ಶ್ರೀ

ವಿಷಯ : ಶಿವ ತತ್ವ.

ವಿಶೇಷ : ಇದೇ ಕಟ್ಟಿನಲ್ಲಿ ನವಚಕ್ರದ ವಚನವೆಂಬ ಇನ್ನೊಂದು ಗ್ರಂಥವಿದೆ.

1831

ಕೆ. ೬೨೭	**ಸಂಕ್ಷೇಪಭಕ್ತವಿಲಾಸ**	ಗದ್ಯ
೮.೯″ × ೧.೩″	?	?
೩-೬೬ ಪತ್ರ	೭ ಪಂಕ್ತಿ	೩೨ ಅಕ್ಷರ

ಆದಿ : ಭಕ್ತವಿಲಾಸ ಬರೆವದಕ್ಕೆ ನಿರ್ವಿಘ್ನಮಸ್ತು ॥ ಸುಂದರಮೂರ್ತಿ ಕಥೆ। ಸತ್ರಯಾಗ...ನ್ನು ಮಾಡುತಾ ನೈಮಿಶಾರಂ...ಕ್ಷೇತ್ರದಲ್ಲಿ ಯಿರುವ ಖುಷಿಗಳು ಸೂತ ಪೌರಾಣಿಕರ ಕುರಿತು ಮುಕ್ತಿಯನ್ನು ಕೊಡು...... .... ನ್ನುಕೆ..... .. ಲಾಗಿ ಆ ಸೂತಪುರಾಣಿಕರು ಗುರುದೇವತಾ ನಮಸ್ಕಾರ ವಂನ್ನು ಮಾಡಿ ರಿಷಿಗಳ ಕುರಿತು ಯೆಲೆ ರಿಷಿಗಳಿರಾ ಸಕಲವಾದ ವೇದಂ ಗಳಿಂದಾ ಪ್ರತಿಪಾದ್ಯತರಾದ ಶ್ರೀ ಸಾಂಬಸದಾಶಿವಸ್ವಾಮಿಯ ವರ ಚರಣಾರವಿಂದಂಗಳಲ್ಲಿ ಭಕ್ತಿಯನ್ನು ಮಾಡಿ ಪೂಜಿಸಿ ಮುಕ್ತಿಯನ್ನು ಪಡೆದ ಭಕ್ತರ ಚರಿತ್ರೆಗಳಂನ್ನು ವ್ಯಾಸಮುನೀಂದ್ರರು ಸ್ಕಂದೋಪಪುರಾಣ ದಲ್ಲಿ ವಿವರಿಸಿ ಯಿಧಾರೆ। ಆ ಚರಿತ್ರೆಗಳಂನ್ನು ನಿಮಗೆ ವಿವಂಸುತ್ತೆಯಿಧೇವೆ।

ಅಂತ್ಯ : ಅಂತ್ಯಜರಲ್ಲೂ ಶ್ರೇಷ್ಠರು ನಿತಾಕರರೆಂಬವರ ಕಥೆ । ಚೋಳದೇಶದಲ್ಲಿ ಯಿರುವ ತಂಪುಲಿಯೂರೆಂಬ ಗ್ರಾಮದಲ್ಲಿ ಶೈವರಲ್ಲಿ ಶ್ರೇಷ್ಠರಾಗಿರುವ ಶಿವ ಜ್ಞಾನ ಸಂಮುಂಧಿಗಳು ಹೇಳಿದ ದ್ರಾವಿಡ ಪ್ರಬಂಧಗಳಂನ್ನು ಸಕಲ ಶಿವ ಸ್ಥಳಂಗಳಲ್ಲಿಯೂ ವೀಣೆಯಲ್ಲಿ ನುಡಿಸುತ್ತಾ ಮಧುರಾಃಪಟ್ಟಣಕ್ಕೆ ಬಂದು ವಿದ್ವತ್ಪೀಠದಲ್ಲಿ ಕುಳಿತುಕೊಂಡು ಬಹುಮಾನವಂನ್ನು ಪಡೆದು ಶಿವಜ್ಞಾನ ಸಂಬಂಧಿಗಳ ಕಲ್ಯಾಣ ಮಹೋತ್ಸವದಲ್ಲಿ ಅವರು ಸಹಿತವಾಗಿ ಮುಕ್ತರಾದರೂ । ಸಂಕ್ಷೇಪ ಭಕ್ತವಿಲಾಸಂ ಸಂಪೂರ್ಣ ॥

ವಿಷಯ : ಶಿವಭಕ್ತರ ಕಥೆ.

ವಿಶೇಷ : ಪುಸ್ತಕ ಸ್ವಲ್ಪ ಶಿಥಿಲ.

1832

ಕೆ. ೨೪೪/೨	**ಸಂಕ್ಷೇಪಭಾಗವತ**	ಭಾಮಿನೀಷಟ್ಪದಿ
೧೬.೯″ × ೧.೫″	ಹರಿದಾಸ	ಸು. ೧೭೫೦
೧-೫ ಪತ್ರ	೮ ಪಂಕ್ತಿ	೫೮ ಅಕ್ಷರ

ಆದಿ : ॥ ಶುಭಮಸ್ತು ॥ ಸಂಕ್ಷೇಪ ಭಾಗವತಾ ॥ ಶ್ರೀಗಣಾಧಿಪತಯೇಂ ನಮಃ ॥
ದೇವತಾನಾಂದಿ
ಶ್ರೀ ರುಕುಮಿಣಿರಮಣ ಪಾಂಡುಕು
ಮಾರ ಪಂಚಪ್ರಾ ವಿದುರಾ
ಕ್ರೂರ ವಂಧಿತ ಚರಣವರ ಗೋವರ್ದನೋದ್ಧರಣಾ
ಚಾರು ವೀಣಾಗಾನ ಗೋವಿ
ಚಾರ ಸುರ ಸಂಧಾನ ವಿಗ್ರಹ
ಕ್ಷೀರವಾರುಧಿಶಯನ ರಕ್ಷಿಸು ಲಕ್ಷುಮಿ ನಾರಯಣಾ ॥ ೧ ॥

ಅಂತ್ಯ : ಮದ್ವಮುನಿ ಸದುಹೃದಯ ಸರಸಿಜ
ಮದ್ಯ ಕರ್ನಿಕೆ ಸಿಂಹ್ರ ಪೀಠದೊ
ಳಿದ್ದು ಬೊಂಮಾಂಡಗಳ ಹೊರಗೊಳ ಪೂರ್ಣನಾಗಿಪ್ಪಾ ॥
ಭದ್ರಮೂರ್ತ್ರಿ ಚೆರಿತ್ರೆಯೊ ದುವ
ಬುದ್ಧಿಯುತರಿರೆತಪ್ಪ ತಿದ್ದುವ
ಬುದ್ಧಿ ಬರಡನು ಪೇಳ್ದುದೆಂದೆಂನ ಬಯ್ಯದಿರಿ ಶರಣೂ ॥ ೪೨ ॥
ತಂದೆ ಕುಂಬ ರಮಲ್ಲಕಾಯಿ ಮಾಲಾದೇವಿ
ಯಿಂದೂಶೇಖರನ ವರಪುತ್ರ ಧರಣಿಗೆ
ಬಂದು ಜನಿಸಿದ ಸರ್ವೆಜ್ಞ ॥ ತಂದಂನ್ನ ॥ ೧ ॥

ಅಂತ್ಯ : ಬಟ್ಟೆಗೆಯಿರುವದು ಬೊಟ್ಟೆಲಿರುವದು
ಕುಟ್ಟೆದ್ರೆ ಬೋರು ಮೊರವುದು ಯೀ
ಗುಟ್ಟು ಕವಿಯುಂಬ ಶಟ್ಟರು ಪೇಳೆಂದ ಸರ್ವೆಜ್ಞ ॥

ವಿಷಯ : ನೀತಿಜ್ಞಾನ

ವಿಶೇಷ : ಅಸಮಗ್ರ. ಈ ಕಟ್ಟಿನಲ್ಲಿ ಸುಭಾಷಿತ ಗ್ರಂಥ, ಕಿಂಚಿತ್ ರಾಮಾಯಣ ಮೊದಲಾದ ಇತರ ನಾಲ್ಕು ಗ್ರಂಥಗಳಿವೆ.

1884

ಕೆ. ಎ. ೩೫	**ಸರ್ವಜ್ಞನ ಪದಗಳು**	ತ್ರಿಪದಿ
೧೩.೨″ × ೮.೧″	ಸರ್ವಜ್ಞ	ಸು. ೧೬೦೦
೧-೩೬ ಪುಟ	೩೦ ಪಂಕ್ತಿ	೨೦ ಅಕ್ಷರ

ಆದಿ : ಪರಮಾರ್ಥ ಗುರುವರ್ಗ ಶ್ರೀ x x
ಅಲಸದಿರು ಗುರುಭಕ್ತಿಗೆ ಹುಲುಸುಂಟು ಶಿವನಾಣೆ
ಆಲಸದೆ ಶಿವನ ನೆನದರೆ ಬೇರೆಂದ
ಹಲಸು ಕಾಡಂತೆ ಸರ್ವಜ್ಞಾ ॥ ೧ ॥

ಅಂತ್ಯ : ಯೆತ್ತು ಗಾಣನ ನುಂಗಿ ಕತ್ತರೆಯ ಕಣೆ ನುಂಗಿ
ಸುತ್ತಿ ಬರುವನ ನೊಗ ನುಂಗಿ ಲೋಕಕ್ಕೆ
ಕತ್ತಲೆಯಾಯಿತ್ತು ಸರ್ವಜ್ಞಾ ॥ ೫೨೧ ॥

ವಿಷಯ : ನೀತಿ ಜ್ಞಾನ.

ವಿಶೇಷ : ಸರ್ವಜ್ಞನ ಕೆಲವು ಪದ್ಯಗಳು ಮಾತ್ರ ಇಲ್ಲಿವೆ.

1885

ಕೆ. ೫೯೦	**ಸರ್ವಪುರಾತನರ ಪುರಾಣ**	ಸಾಂಗತ್ಯ
೮.೪"×೧.೮"	ವೀರ	?
೧೨೦-೧೭೩ ಪತ್ರ	೯ ಪಂಕ್ತಿ	೪೦ ಅಕ್ಷರ

ಆದಿ : ಯೆಲ್ಲಾ ಪುರಾತರ ಪೂರಾಣವ ಭರವುದಕ್ಕೆ ಸುಬಮಸ್ತು x x x
ಕಂದಾ ॥ ಶ್ರೀಗುರುವನುಪದೇಶಿಸಿದ
ಘನಮಾರ್ಗವಿಡಿದು ನಡದ ಶಿವೈಕ್ಯಾಗಮಾ
ಹಾರಗಣದತಿಸಯಮಂ
ಮನೋನುರಾಗದಿ ಬಂಣಿಸುವೆ ಸುಜನರಾಲಿಸಿ ಮುದಧಿಂ ॥

ಪದ ॥ ಶ್ರೀಗಿರಿಜೆಯ ಉರಗಿರಿ ರಾಜಹಂಸನೆ
ಶ್ರೀಗೌರೀಶ ಸರ್ವೇಶಾ
ಪೂಗೊಲನಂಗಭಂಗ ನೀ ಸಲಹು ಮಾ
ಹಾಘನ ಕರುಣದಿಂದೆಂನ್ನಾ ॥ ೧ ॥

ಅಂತ್ಯ : ತ್ರಿವಿದ ಲಿಂಗಗಳ ತ್ರಿವಿದ ಪ್ರಾಸಾದವ
ಸವಿವ ತ್ರಿಗುಣಭರಿತರಿಗೆ
ಅವಿರಾಳ ಭಕ್ತತತಿಗೆ ತವುರೆನಿಸೂವ
ವರಗುರು ಶರಣರ ಕ್ರುತಿಯಾ ॥ ೨೩೯ ॥
ಅಂತ್ತು ಸಂಧಿ ೩೫ಕ್ಕಂ ಕಂದ ಸಹ ಪದ ೬೯೩ ಕಂ ಮಂಗಳ ಮಹಾಶ್ರೀ.

ವಿಷಯ : ವೀರಶೈವ ಪುರಾತನರ ಕಥೆ.

ವಿಶೇಷ : ಪ್ರತಿಯ ಕೊನೆಯಲ್ಲಿ ‹ ಪ್ರಜೋರ್ಪತಿ ಸಂಹ್ವಶ್ಚರದ ಆಸ್ವಿಜ ಭಹುಳ ಶು
೧ಳ ಲ್ಲೂ ಸಿಂಗಿಟಿಗೆರೆಯ xxxx ಬರಕೊಟ್ಟ ಯೆಲ್ಲಾ ಪೂರಾತರ ಕಾವ್ಯ

ರೇವಂಣನ ಕಾವ್ಯ ಯರಡನು ಸಂಪ್ರೀತಿಯಿಂದ ಬರದು ಮೂಕ್ಷವಾಯಿತು' ಎಂದಿದೆ.

1886

ಕೆ ೨೫೯|೪	**ಸರ್ವಾಂಗಲಿಂಗಸ್ಥಲದ ವಚನ**	ವಚನ
೯.೫" × ೧.೭"	ಚನ್ನಬಸವೇಶ್ವರ	೦೧೬೦
೫ ನೆಯ ಪತ್ರ	೧೫ ಪಂಕ್ತಿ	೬೬ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯೇ ನಮಃ || ಸರ್ವಾಂಗಲಿಂಗಸ್ತ್ಲವಚನಾ || ಶರಣನ ಸರ್ವಾಂಗವೆಲ್ಲಉ ಲಿಂಗವಾದ ಕ್ರಮುವೆಂತೆಂದೊಡೆ || ಶ್ರೀಗುರುನಾಥನು ಉಪದೇಶಿಸಿದ ಯಿೞ್ಟಲಿಂಗವೆ ತನ್ನ ಸರ್ವಾಂಗದಲ್ಲಿ ಬಿಂನನಾಮುಂಗಳಿಗೆ ಪ್ರಕಾಶಿಸುತಿಹುದು |

X X X X

ಅಂತ್ಯ : ಉಪ್ಪು ನೀರಾದಂತೆ | ವಾರಿಕಲ್ಲು ಅಂಭುದಿಯೊಳು ಬಿದಂತೆ ಸಸಿ ತೆಗದಂತೆ ಆದೆನ್ಯೆಯ್ಯ ಕೂಡಲ ಚೆಂನಸಂಗಮದೇವ। ಸರ್ವಾಂಗ, ಲಿಂಗಸ್ತ್ಲದ ವಚನ ಸಮಾಪ್ತ ಮುಂಗಳ ಮುಹಾಶ್ರೀ ಶ್ರೀ ಶ್ರೀ || ವಿಕ್ರುತು ಸಂವತ್ಸರದ ಜೇಷ್ಠ ಬ ೧೧ ಗುರುವಾರ ಗಳಿಗೆ ೨೧ ಕ್ಕಂ ಹುಳಿಯಾರ ಯಲಿಸಂಕನ ಮ ಕೆಂಚವೀರ್ರೈಯ್ಯನು ತಾ॰ ು ತಂನ ಪ್ರೀತಿಯಿಂದ | ಸರ್ವಾಂಗಸ್ತ್ಲದ ವಚನಾ || ಶ್ರೀಗು-ುವೆ ಗತಿ ||

ವಿಷಯ : ಸರ್ವಾಂಗಲಿಂಗಸ್ಥಲದ ವಿವರ.

ವಿಶೇಷ : ಕೂಡಲ ಚೆಂನಸಂಗಮಾಂಕಿತದ ಒಂದು ವಚನ. ಪತ್ರ ಸ್ವಲ್ಪ ತ್ರುಟಿತ. ಪತ್ರಸಂಖ್ಯೆ ಸ್ಪಷ್ಟವಿಲ್ಲ. ಈ ಕಟ್ಟಿನಲ್ಲಿ ಗುರುಭಕ್ತನ ಕಾವ್ಯ, ಪ್ರಾಣಲಿಂಗ ಜ್ಞಾನ ದರ್ಪಣ, ಅಕ್ಕಗಳ ಸೃಷ್ಟಿ, ಸ್ವತಂತ್ರ ಸಿದ್ಧಲಿಂಗೇಶ್ವರನ ವಚನಗಳೂ ಇವೆ.

1887

ಕೆ. ೫೫೦ ಸಹ್ಯಾದ್ರಿಖಾಂಡ ಭಾಮಿನೀಷಟ್ಪದಿ

೮.೮″ × ೨.೪″ ಬಾಲಭಾಸ್ಕರ ? ?

೨೩೯ ಪತ್ರ ೧೦ ಪಂಕ್ತಿ ೪೨ ಅಕ್ಷರ

ಆದಿ : ಸಹ್ಯಾದ್ರಿಖಾಂಡ ಬರವುದಕ್ಕೆ ಶುಭಮಸ್ತು

ಪದ || ಶ್ರೀಮದಮರೇಂದ್ರಾದಿ ವಂದಿತ
ಸಾಮಜಾಸ್ಯ ಕಪೋಲ ಮದಜಲ
ಕಾಮಿತಾಳಿ ಸಮೂಹ ಝೇಂಕ್ರುತಿ ವರ ನಿವಾರಣದಾ
ಚಾಮರಾಂನ್ವಿತ ಶೂರ್ಪಖರ್ನ ಸು
ಕೋಮಲಾರುಣ ಗಿರಿನಿಭಾಂಗದ
ಕಾಮಿತದ ಕರಕಲಿತಪಶಾಂಕುಶಗೆ ವಂದಿಸುವೆ || ೧ ||

x x x x

ಬಾಲಕರು ಕಂನಡಿಯ ಪಿಡಿದರೆ
ಬಾಲಭಾಸ್ಕರನಲ್ಲಿ ಪೊಳವತಿ
ಯಿಾ ಲಲಿತ ಶಾಸ್ತ್ರವನು ಕಂನಡದಲ್ಲಿ ವಿವರಿಸುವೇ
ಪೇಳಿದೀ ಪದದರ್ತವೆಲ್ಲವು
ಮೂಲಕಾವ್ಯದಲಿದ್ದ ತೆರದಲಿ
ಲಾಲಿಪರ ಮನಸೌಖ್ಯವಾಗಲಿ ಗುರುಕಟಾಕ್ಷದಲೀ || ೮ ||

ಅಂತ್ಯ : ಮೆರವ ಸಹ್ಯಾಛಲದ ಪಾರ್ಶದ
ಲಿರುವ ಪುಂಣ್ಯಕ್ಷೇತ್ರ ನಧಿಗಳ
ಹರಿಹರಾ ಬ್ರಂಹ್ಮಾದಿ ದೇವರ ದಿವ್ಯ ಮಹಿಮೆಗಳಾ
ವಿರಚಿಃದ ಸಂಹ್ಯಾದ್ರಿಖಾಂಡದ
ಪರಮ ಪಾವನ ಕಥೆಯ ಕೇಳಿದ
ನರರ ಸಲಹುವಳೊಲಿದು ಮೂಖಾಂಬಿಕೆಯು ಕರುಣದಲೀ || ೨೩ ||

ಅಂತು ಸಂಧಿ ೮೯ ಕಂ ಪದ ೨೨೭೦ ಕಂ ಮಂಗಳ ಮಹಾಶ್ರೀ.

ವಿಷಯ : ಸಹ್ಯಾದ್ರಿ ಮಹಿಮೆ.

ವಿಶೇಷ : ಪ್ರತಿಯು ಸಮಗ್ರವಾಗಿದೆ. ಕೊನೆಯಲ್ಲಿ "ಧಾತು ನಾಮ ಸಂವತ್ಸರದ ಚೈತ್ರ ಬ ೧೧ ಬೃಹಸ್ಪತಿವಾರ ದಿವಸ ತಾಸು ೫ಕ್ಕೆ ಬರದು ಸಂಪೂರ್ನವಾಯ್ತು. ಈ ಪುಸ್ತಕವನ್ನು ಬರದಾತ ಕಂನಡ ಜಿಲ್ಲಾ ಜೋರಾಡಿ ಕ್ರಿಷ್ಣಶೆಟ್ರ ಪೌತ್ರ ಅಂತೈಯ ಕುಪ್ಪಳಿಯಲ್ಲು ಯಿರುವಾಗ್ಗೆ ಬರೆದ ಪುಸ್ತಕಕ್ಕೆ ಶುಭಮಸ್ತು" ಎಂದಿದೆ.

1888

ಕೆ. ಬಿ. ೪೪.	ಸಾತ್ವಿಕ ಬ್ರಹ್ಮವಿದ್ಯಾವಿಲಾಸ	ಶ್ಲೋಕ, ಪದ್ಯ, ಗದ್ಯ
೭.೭"×೬.೨"	ಚಿಕ್ಕುಪಾಧ್ಯಾಯ	ಸು. ೧೬೮೦
೧-೨೪೪ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ : ಸಾತ್ವಿಕಬ್ರಹ್ಮವಿದ್ಯಾವಿಲಾಸ ಬರೆಯುವದಕ್ಕೆ ಶುಭಮಸ್ತು || ನಿರ್ವಿಘ್ನಮಸ್ತು ||

ವೃ|| ಶ್ರೀಯುತನಂ ಚಿರಂತನ ವಚೋರತನಂ ಪಟುಹಂಸರಾಜಸಂ
-ಸ್ಥಿಯಿ ವಿಹಾರಿಯಂ ವಿಭುವನಪ್ರತಿಮಾಂಹ್ವಯನಂ ಪ್ರರೂಢಪಂ
ಚಾಯುಧನಂ ಭಜಿಪ್ಪೆನನಿಶಂ ಪುರುಷೋತ್ತಮನಂ ಶ್ರಿತರ್ಗ್ಗೆಸಂ
ಶ್ರೀಯಮನಿವನಂ ಕೃತಸಮಸ್ತಜಗತ್ಸ್ಥಿತಿಯಂ ಮುಕುಂದನಂ || ೧ ||

ಅಂತ್ಯ : ಮುಕ್ತಿಸ್ವರೂಪಮಿದು ತಾನುಕ್ತಂ ರಾಮಾನುಜೈಕ ದರ್ಶನದೊಳ್ ಸುವ್ಯಕ್ತಂ ತತ್ವಹಿತಂಗಳು ಮುಕ್ತಿಸ್ಫುಟಪೂರುಷಾರ್ಥಮುಂ ಕ್ರಮದಿಂದ || ೨೪೬ ||

X X X X

ಗದ್ಯ|| ಇದಾನಮುತ್ಕಾಮರಿಪುತಾಮರಸ ಜನ್ಮಪುಲೋಮ ಜಾಪತಿ ಪ್ರಭೃತಿ ಸುರವಿತತಿ ವಿತತರುಚಿ X X X ಶ್ರೀಮದ್ರಾಜಾಧಿರಾಜ ಪರಮೇಶ್ವರಾಪ್ರತಿಮಪ್ರೌಢಪ್ರತಾಪ ಬಿರುದಂತೆಂಬರಗಂಡ ಯದುಕುಲ ಕಲಶನಿಧಿರಾಕಾಸುಧಾಕರ ಶ್ರೀ ಚಿಕ್ಕದೇವರಾಜ ನಿಜದಯಾರಸವಿಸರ ವಿಸ್ಮಮರತಾಸಂವರ್ಧಿತ ಧರ್ಮಸಂತಾನ ಶ್ರೀ ಚಿಕ್ಕುಪಾಧ್ಯಾಯ ಮಂತ್ರಿಮಣಿ ವಿರಚಿತ ಸಾತ್ವಿಕಬ್ರಹ್ಮವಿದ್ಯಾವಿಲಾಸದೊಳ್ ಸಕಲಮತ ಸ್ವರೂಪ ಕಥನಂ ರಾಮಾನುಜಮತ ಸರ್ವೋತ್ಕರ್ಷತ್ವನಿರ್ಣಯ ಪ್ರಣೀತನಂ ನವಮಾಶ್ವಾಸಂ ಸಂಪೂರ್ಣಂ || ಮಂಗಳಮಹಾಶ್ರೀ ||

ವಿಷಯ : ವಿಶಿಷ್ಟಾದ್ವೈತ ವೇದಾಂತ.

ವಿಶೇಷ : ಸಮಗ್ರ. ಅಕ್ಷರಗಳು ಬಹಳ ಚೆನ್ನಾಗಿವೆ.

1889

ಕೆ.ಬಿ. ೧೦೯	**ಸಾತ್ವಿಕ ಬ್ರಹ್ಮ ವಿದ್ಯಾ ವಿಲಾಸ**	**ಶ್ಲೋಕ, ಪದ್ಯ, ಗದ್ಯ**
೭.೩" × ೬.೨"	ಕಂದಾಡೆ ನರಸಿಂಹಾಚಾರ್ಯ.	?
೧-೧೨೯ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ : ಸಾತ್ವಿಕ ಬ್ರಹ್ಮಾ ವಿದ್ಯಾ ವಿಲಾಸಃ X X X
ವೇದಸ್ಯವೇದ ವೇದ್ಯಸ್ಯ ಪರತ್ವಂ ಕಥಯನ್ ಹರೇಃ ।
ಪಾರಾಶರ್ಯಸ್ತಬ್ಧಭುಜಾಯದಿದಂ .. ..ನಕಿಂ ॥
ಕ ಇತಿಬ್ರಹ್ಮಣೋನಾಮುಏವಂ ಶ್ಲೋಕಂ ವದನ್ ಹರೇಃ ।
ಆವಾಂತವಾಂಗ ಸಂಭೂತಾವಿತ್ಯೂಚೆ ಸಶಿವೋ ನಕಿಂ ॥
ಸಾತ್ವಿಕ ಬ್ರಹ್ಮವಿದ್ಯಾದಿ ವಿಲಾಸಂ ನಾಮವಿಶ್ರುತಂ ।
ವೈದಿಕಾವೈದಿಕಾನೇಕ ಮತತತ್ವ ವಿನಿರ್ಣಯಃ ॥
ವೇದವೇದಾಂತಶಾಸ್ತ್ರಾದಿ ತಾತ್ಪರ್ಯಾರ್ಥವಿನಿರ್ಣಯಃ ।
ಸಂದೇಹಾಂಧ್ಯತಮೋಭಾನುರ್ಜಿಜ್ಞಾಸು ಜನಜೀವನಂ ॥

ಕಂ ॥ ಸಿರಿಯರಸನ ಚರಣಂಗಳೊ
ಳುರುಭಕ್ತಿನೀವನೆಂದು ಗುರುತತಿಗೆರಗಿಯೆ
ಒರೆವೆನು ಕನ್ನಡದಿಂದಂ
ವರಸಾತ್ವಿಕ ಬ್ರಹ್ಮವಿದ್ಯಾವಿಲಾಸಿತಮಂ ॥

ಶ್ರೀ ಮದ್ವೇದವೇದಾಂತ ಶಾಸ್ತ್ರ ಧರ್ಮಶಾಸ್ತ್ರ ಪುರಾಣಾಗಮಸಂಹಿತೇತಿಹಾಸಾದಿ ಪ್ರಮಾಣ ಪಾರಂಗತನುಮಾಗಿ

ಅಂತ್ಯ : ತದನುಜ್ಞೆಯಿಂದ ಶ್ರೀಮನ್ನಾರಾಯಣನ ನಿರ್ಹೇತುಕ ಪೂರ್ಣ ಕೃಪೆಗೆ ಪಾತ್ರಭೂತನಾಗಿ ಜೀವನ್ಮುಕ್ತನಾಗಿ ಜಿಜ್ಞಾಸುಗಳಿಗೆ ಪರಮೋಪಕಾರಿಯಾಗಿ ಭಗವತ್ಕಲ್ಯಾಣ ಗುಣಾರ್ಣವಾನ್ತರ್ನಿಮಗ್ನನಾ ಗುರುಚರಣ ನಳಿನಸತತಪರಿಚರ್ಯಾಪರನುಮಾಗಿ ನಿತ್ಯಾನಂದ ಸಂದೋಹಕಂದಳಿತ ಹೃದಯಾರವಿಂದನಾಗಿ ಇದ್ದನುಯೆಂದದಾಯಿತು. ಶ್ರೀ ಸಾತ್ವಿಕ ಬ್ರಹ್ಮ ವಿಲಾಸ ಸಂಪೂರ್ಣವು ॥

ವಿಷಯ : ವೇದಾಂತ.

ವಿಶೇಷ : ಗ್ರಂಥಾರಂಭಕ್ಕೆ ಮೊದಲು ಒಂದು ಸಂಗ್ರಹ ನರಸಿಂಹಸ್ತುತಿ ಬರೆಯಲ್ಪಟ್ಟಿದೆ. ೬೩ ನೆಯ ಪತ್ರದ ಹಿಂಭಾಗ ಖಾಲಿಯಾಗಿದ್ದರೂ ಗ್ರಂಥಲೋಪವಿದ್ದಂತೆ ಕಂಡುಬರುವುದಿಲ್ಲ.

1890

ಕೆ. ೪೦೭	ಸಾತ್ವಿಕ ಬ್ರಹ್ಮ ವಿದ್ಯಾವಿಲಾಸ	ಶ್ಲೋಕ, ಪದ್ಯ, ಗದ್ಯ
೧೭.೩" × ೧.೫"	ಕಂದಾಡೆ ನರಸಿಹ್ಮಾಚಾರ್ಯ	?
೧–೬೩ ಪತ್ರ	೭ ಪಂಕ್ತಿ	೧೦೦ ಅಕ್ಷರ

ಆದಿ : ವೇದಸ್ಯ ವೇದ ವೇದ್ಯಸ್ಯ ಪರತ್ವಂ ಕಥಯನ್ ಹರೇಃ
ಪಾರಾಶರ್ಯಸ್ತಬ್ಧ ಭುಜೋಯವಿದಂ ಡ್ಯಾಶಿವೋನ ಕಿಂ ।
ಕ ಇತಿ ಬ್ರಹ್ಮಣೋ ನಮೇತಿಮಂ ಶ್ಲೋಕಂ ವದನ್ ಹರೇಃ
ಆವಾಂತ ವಾಂಗೆ ಸಂಭೂತಾ ಪಿತ್ಯ್ರಚೇ ಸಶಿವೋನಕಿಂ ॥

X X X X

ಶಿರಿಯರಸನ ಚರಣಂಗಳೊ
ಳುರು ಭಕ್ತಿಯನೀವ ನಂಮು ಗುರುತತಿಗೆರಗಿಯೆ
ವೊರೆವೆನು ಕಂನಡದಿಂದಂ
ವರಸಾತಿಕ ಬ್ರಹ್ಮ ವಿದ್ಯಾ ವಿಲಸಿತಮಂ ॥

ಶ್ರೀಮದ್ವೇದ ವೇದಾಂತ ಶಾಸ್ತ್ರ ಧರ್ಮಶಾಸ್ತ್ರ ಪುರಾಣಾಗಮಸಂಹಿತೇತೀತಿಹಾಸಾದಿ ಪ್ರಮಾಣ

ಅಂತ್ಯ : ಕರ್ಪೂರ ತಾಂಬೂಲಾದಿ ಷೋಡಶೋಪಚಾರಂಗಳಿಂದಲುಂ ಆರಾಧಿಸಿ ತದನುಜ್ಞೆಯಿಂದ ಶ್ರೀಮನ್ನಾರಾಯಣ ಷಿರ್ಹೇತುಕ ಪೂರ್ಣ ಕೃಪೆಗೆ ಪಾತ್ರನಾಗಿ X X X ಹೃದಯಾರವಿಂದನಾಗಿ ಯಿರುತ್ತಿದ್ದನು. ಇದು ವಿದ್ವತ್ ಕುಲತಿಲಕ ಕೌಶಿಕೇಶವ ಗುರುವರಸುತ ಕೌಶಿಕ ಕಿದಾಳ ನೃಸಿಂಹಾಚಾರ್ಯ ವಿರಚಿತವಾದ ಕರ್ನಾಟಜನಾನಂದಕರವಾದ ಕಂನಡ ಸಾತ್ವಿಕ ಬ್ರಹ್ಮ ವಿದ್ಯಾವಿಲಾಸಂ ಪರಿಸಮಾಪ್ತಂ ॥

ವಿಷಯ : ವೇದಾಂತ.

ವಿಶೇಷ : ಗ್ರಂಥದ ಕೊನೆಯಲ್ಲಿ ಮತ್ತೆರಡು ಬೇರೆ ಪತ್ರಗಳಿದ್ದು ಅವುಗಳಲ್ಲಿ ನೃಸಿಂಹ ಪುರಾಣಕ್ಕೆ ಸಂಬಂಧಿಸಿದ ಸಂಸ್ಕೃತ ಶ್ಲೋಕಗಳಿವೆ.

1891

ಕೆ. ೩೩೮ **ಸಾನಂದಗಣೇಶ್ವರ ಸಾಂಗತ್ಯ** ಸಾಂಗತ್ಯ

೬.೭" × ೧.೬" ಓದುವ ಗಿರಿಯ ಸು. ೧೫೩೫

೧-೪೯ ಪತ್ರ ೭ ಪಂಕ್ತಿ ೩೩ ಅಕ್ಷರ

ಆದಿ : ಸಾನಂದಗಣೇ ್ವರನ ಸಂಗೀತವ ಬ ವುದಕ್ಕೆ ಶುಭಮಸ್ತು x x
ಶ್ರೀಮದಮರಗಣ ಮಕುಟಸುರಂಜಿತ
ತಾಮರಸಾಂಘ್ರಿಯುಗಳಕೆ
ಪ್ರೇಮದಿ ನಾನೆರಗುವೆ ಗಿರಿಜಾವರ
ಸ್ವಾಮಿ ಸಲಹು ಶಶಿಧರನೆ ‖ ೧ ‖

ಕೃತಿನಾಮವೆಂತೆನೆ ಪೆಳ್ವೆನು ನಿರಯಾದಿ
ಪತಿಯಪಟ್ಟಣವ ಕೋಳ್ಗೊಂಡು
ಸಿತನಿಪ್ಪ ಕೈಲಾಸಕೊಂಡೊಯ್ದ
ಯತಿಸಾನಂದ ಚರಿತೆಯಾ ‖ ೧೦ ‖

ಅಂತ್ಯ : ಧರೆಯೊಳಪ್ರತಿಮ ಶ್ರೀಗಿರಿಯ ಮಲ್ಲೇಶನ
ಚರಣಕಮಲ ಮಧುಕರನು
ವರಕವಿ ಶರಧಿ ಚಂದ್ರಮ ನೆರೆವೋದುವ
ಗಿರಿಯ ಪೆಳಿದನೀ ಕ್ರುತಿಯಾ ‖ ೭೨ ‖
ಯಿಂದ್ರನ ಭೋಗ ಮುಕುಂದನ ಸೊ ಗರ
ವಿಂದ ಗರ್ಭನ ಐಶ್ವರಾ
ಚಂದ್ರನಕಾಂತಿಯಹುದು ಕೇಳಿದವರಿಗೆ
ಸಂಧಿಯಾರಾಯಿತೀ ಕ್ರುತಿಗೆ ‖ ೭೫ ‖

ಅಂತು ಸಂಧಿ ೭ ಕ್ಕಂ ಪದನು ೪೭೮ ಕ್ಕಂ ಮಂಗಳ ಮಹಾಶ್ರೀ । x x x
ಮಂಟಿದಯಡೆ ಲಿಂಗರಾಜೈಯನವರ ಮಗ ಚಿಕ್ಕಯ ಬರದ ಸಾನಂದ
ಗಣೇಶ್ವರ ಸಂಗೀತ ಪುಸ್ತಕಕ್ಕೆ ಶುಭಮಸ್ತು ।'

ವಿಷಯ : ಸಾನಂದಗಣಾಧಿಪತಿಯ ಚರಿತ್ರೆ.

ವಿಶೇಷ : ೩೩, ೩೮, ೩೫ ನೆಯ ಓಲೆಗಳು ಎರಡೆರಡು ಇವೆ.

1892

ಕೆ. ೩೫೩	**ಸಾನಂದ ಗಣೇಶ್ವರ ಸಾಂಗತ್ಯ**	ಸಾಂಗತ್ಯ
೯.೪" × ೧.೬"	ಓದುವ ಗಿರಿಯ	ಸು. ೧೫೨೫
೧—೧೦೦ ಪತ್ರ	೮ ಪಂಕ್ತಿ	೪೨ ಅಕ್ಷರ

ಆದಿ: ಸಾನಂದಗಣೇಶ್ವರನ ಸಾಂಗತ್ಯ । ಈಶ್ವರನಾಮ ಸಂವತ್ಸರದ ಆಶ್ವೀಜ
ಬಹುಳ ೨ ಕುಜವಾರ ಪ್ರಾರಂಭಿಸಿತು
ಶ್ರೀ ಗುರುವರ್‍ಯ್ಯಾನಂ ಘ್ರಿಗಳೆರಾಡನು ನೀಗಾ
ಮಾಗಾಮೋಕ್ತಿಯೊಳೂಪಾಚರಿಸಿ
ಬಾಗೀ ಮಸ್ತಕವಾಸಾಸಲಸೋಮಾಥರಗಾನು
ರಾಗದಿಂದೆರಗಿ ಭಕ್ತಿಯಲಿ ॥ ೧ ॥

ಅಂತ್ಯ: ಸಾಸಾಲಪುರವೀರಧೀಶನೀಕೃತಿಗೆ ಸಂ
ತೋಷವ ಕೂಡಲೆಂನಾ ಕವಿಗೆ
ದೋಷವೆಳ್ಳೆನಿತಿಲ್ಲಾದಂತೆ ಮಾಡಲಿಯಂದೆಂ
ಬಾಸೆಯಲಿ ಸ್ವಶ್ರೇಯಸನು ॥ ೨೧ ॥

ಅಂತು ಸಂಧಿ ೧೧ ಕ್ಕಾಂ ಪದನು ೧೦೨೨೩ ಕ್ಕಂ ಮಂಗಳ ಮಹಾಶ್ರೀ ॥
ಬಹುಧಾನ್ಯಸಂವತ್ಸರದ ಮಾಘ ಶುದ್ಧ ೨ ಯಲ್ಲಿ ರಾಮೈಯನಿಗೆ ಬರೆದು
ಕೊಟ್ಟ ಸಾನಂದಗಣೇಶ್ವರನ ಸಾಂಗತ್ಯ ಮುಗಿದುದು ಶ್ರೀ ॥

ವಿಷಯ: ಸಾನಂದ ಯತಿಯ ಚರಿತ್ರೆ.

ವಿಶೇಷ: ೩೮, ೯೨ ನೆಯ ಪತ್ರಗಳು ಶಿಥಿಲವಾಗಿವೆ.

1893

ಕೆ. ಎ. ೧೪೯	**ಸಾನಂದ ಗಣೇಶ್ವರ ಸಾಂಗೆತ್ಯ**	ಸಾಂಗತ್ಯ
೧೨.೧" × ೮.೧"	ಓದುವ ಗಿರಿಯ	ಸು. ೧೫೨೫
೧-೩೨ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ: ಶುಭಮಸ್ತು x x x ಸಾನಂದಗಣೇಶ್ವರ ಸಂಗೀತ ಬರೆಯುವದಕ್ಕೆ
ನಿರ್ವಿಘ್ನಮಸ್ತು

ಶ್ರೀಮದಮರಗಣ ಸುರಂಜಿತ
ಕಾಮರಸಾಂಘ್ರಿಯುಗಳಕೆ
ಪ್ರೇಮದಿ ನಾನೆರಗುವೆ ಗಿರಿಜಾವರ
ಸ್ವಾಮಿ ಸಲಹು ಶಶಿಧರನೆ ॥ ೧ ॥

X X X X

ಕೃತಿನಾಮವೆಂತೆನೆ ಪೇಳ್ವೆನು ನಿಶಿಯಾಧಿ
ಪತಿಯು ಪಟ್ಟಣವ ಕೊಳ್ಕೊಂಡು
ಸಿತಕೇಶನಿಪ್ಪ ಕೈಲಾಸಕ್ಕೆ ಕೊಂಡೊಯ್ದ
ಯತಿ ಸಾನಂದ ಚರಿತೆಯಾ ॥ ೧೦ ॥

ಅಂತ್ಯ : ಧರೆಯೊಳಪ್ರತಿಮ ಶ್ರೀ ಗಿರಿಯ ಮಲ್ಲೇಶನ
ಚರಣ ಕಮಲ ಮಧುಕರನೂ
ವರಕವಿ ಶರಧಿ ಚಂದ್ರಮ ನೆರೆ ವೋದುವ
ಗಿರಿಯು ಪೇಳಿದನೀ ಕೃತಿಯಾ ॥ ೭೨ ॥

X X X X

ಇಂದ್ರನ ಭೋಗ ಮುಕುಂದನ ಸೊಬಗರ
ವಿಂದ ಗರ್ಭನ ಐಶ್ವರ್ಯ
ಚಂದ್ರನ ಕಾಂತಿಯಹುದು ಕೇಳಿದವರಿಗೆ
ಸಂಧಿಯಾರಾಯಿತೀ ಕೃತಿಗೇ ॥ ೭೫ ॥

ಅಂತು ಸಂಧಿ ೬ ಕ್ಕಂ ಪದನು ೪೭೮ ಕ್ಕಂ ಮಂಗಳಮಹಾ ಶ್ರೀ
ಯಿಾ ಶಿವಕೃತಿಯ ಲಾಲಿಸಿ ಕೇಳ್ದರ ಪಾಪ
ನಾಶವಹುದು ನಿಮಿಷದಲೀ
ಲೇಸ ಕೊಡುವ ಶ್ರೀ ಗಿರಿಜೆಯ ರಮಣ ಕೈ
ಲಾಸದ ಸಂಧಿ ಪೂರಾಯಾ ॥

ವಿಷಯ : ಸಾನಂದಯತಿಯ ಚರಿತ್ರೆ.

ವಿಶೇಷ : ಸಮಗ್ರಪ್ರತಿ ಮತ್ತು ಶಿಥಿಲ.

1894

ಕ. ಎ. ೧೭೩|೧	**ಸಾನಂದ ಗಣೇಶ್ವರ ಸಾಂಗತ್ಯ**	ಸಾಂಗತ್ಯ
೧೧.೧" × ೭.೪"	ಓದುವ ಗಿರಿಯ	ಸು. ೧೫೨೫
೧-೧೫ ಪತ್ರ	೩೪ ಪಂಕ್ತಿ	೨೫ ಅಕ್ಷರ

ಆದಿ: ಸಾನಂದ ಗಣೇಶ್ವರನ ಸಂಗತ್ಯ ಬರೆಯುವದಕ್ಕೆ ನಿರ್ವಿಗ್ನಮಸ್ತು ||
ಶ್ರೀ ಉಮೆರಮಣ ಮಕುಟ ಸುರರಂಜಿತಾ
ಕಾಮರಸಾಂಗ್ರಿಯುಗಳಕೆ
ಪ್ರೇಮದೊಳೆರಗುವೆ ಶ್ರೀ ಗಿರಿಜಾವರ
ಸ್ವಾಮಿ ಸಲಹೋ ಮಲ್ಲೇಶಾ || ೧ ||

x x x x

ನರರೊಳಗಾವನಾಗಲಿ ಅರಿತರಿಂಯದೆ
ವರಶಿ ಕರವ ಕಾಣಲೊಡನೆ
ಧುರಿತ ದಾರಿದ್ರಾವ ಕೆಡಿಸುವ ಶ್ರೀ
ಗಿರಿಯರೆಯ ಮಲ್ಲೇಶಗೆ ಶರಣಾ || ೪ ||

x x x x

ಮಲುಹಣ ಮಯೂರಾನು ಉದ್ಭಾಟದೇವನೂ
ಹಲಯುದ ಕರಿಕಾಳಾ ದಾಸಾ
ಸುಲಭ ಹಂಪೆಯ ಹರಿ ವಿರುಪಾಕ್ಷದೆ ವನಾ
ಬಲಗೊಂಡು ಪೇಳ್ವೆನೀಕೃತಿಯ || ೯ ||

ಕೃತಿನಾಮವೆಂತ್ತೆನೆ ಪೇಳ್ವೆನಾನಿರೆಯಾದಿ
ಪತಿಯ ಪಟ್ಟಣವ ಕೋಳ್ಗೊಂಡಾ
ಶಿತಿಕಂಟನಿಷ್ಮ ಕೈಲಾಸಕ್ಕೆ ಕೊಂಡೊಯಿದಾ
ಯತಿ ಸಾನಂದೇಶನ ಚರಿತೆ || ೧೦ ||

ಅಂತ್ಯ: ಕರದು ದಾನವ ಕೊಟ್ಟು ಫಲ ಪುಣ್ಯ ತೀರ್ಥಾವ
ಚರಿಸಾದ ಪಲಪಂಚಾಕ್ಷರಿಯಾ
ಸ್ಮರಿಸಾದೆ ಪಲಸಿವ ಪೂಜೆಯ ಪಲವಿದು
ಧರೆಯೊಳಗಾರು ಪೂಜಿಸಲೂ || ೭೩ ||

ಯಿಂದ್ರಾನ ಭೋಗ ಮುಕುಂದನ ಸೊಬಗೂ ಅರ
ವಿಂದನಾಭನ ಚಾತುರ್ಯವನೂ
ಚೆಂದ್ರಾನ ಕಾಂತಿಯಹುದು ಕೇಳಿದವರಿಗೆ
ಸಂದಿ ಆರಾಯಿತೀ ಕೃತಿಗೆ

ಅಂತು ಸಂಧಿ ೬ ಕಾಂ ಪದನು ೪೩೨ ಕಾಂ ಜಯಮಂಗಳ ಮಹಾ ಶ್ರೀಶ್ರೀಶ್ರೀ

ವಿಷಯ: ಸಾನಂದ ಯತಿಯ ಚರಿತ್ರೆ.

ವಿಶೇಷ: ಈ ಪುಸ್ತಕದಲ್ಲಿ ಪ್ರಹ್ಲಾದ ಚರಿತ್ರೆ, ಶಾರದಾಂಬಾಷ್ಟಕಾದಿಗಳು, ಪಂಚ ತಂತ್ರ ಕಥೆ, ಕಪೋತವಾಕ್ಯ, ಪಾರ್ವತೀ ಕೊರವಂಜಿ ಎಂಬ ಕೃತಿಗಳಿವೆ. ಪುಸ್ತಕದ ಕೊನೆಯಲ್ಲಿ ವಾಲಿಸುಗ್ರೀವರ ಕಾಳಗ (ಯಕ್ಷಗಾನ) ಮತ್ತು ಗದುಗಿನ ಭಾರತದಲ್ಲಿರುವ ದ್ರೋಣಪರ್ವದ ಕೆಲವು ಪದ್ಯಗಳಿವೆ.

1895

ಕೆ. ೩೬೧/೨	**ಸಾನಂದ ಚರಿತ್ರೆ**	ಷಟ್ಪದಿ
೧೩ ೮″ × ೧.೮″	ಕುಮಾರ ಪದ್ಮರಸ	ಸು. ೧೩೦೦
೮೭-೧೮೩ ಪತ್ರ	೧೦ ಪಂಕ್ತಿ	೬೫ ಅಕ್ಷರ

ಆದಿ: ಶ್ರೀಗುರುಭೋ ಮಲ್ಲಿಕಾರ್ಜುನ ಲಿಂಗಾಯ ನಮಃ ॥ ಸತತ ಶುಭಮಸ್ತು ॥ ಸಾನಂದ ಪುರಾಣ ॥ ವ ॥ ಸಕಲ ವಿದ್ವಾಂಸರ ಹೇಳಿಕೆ ॥

ವೃ॥ ದೋರಸಮುದ್ರವೆಂಬ ಪೆಸರಿಂ ಕರಮೊಪ್ಪ ರಾಜದಾನಿಯೊ
ಳ್ದೀರ ನೃಸಿಂಹ್ಯ....ರನಹೋ ಮಹಿಮಂ ಪ್ರತಿಪಾಲಿಸುತ್ತಿರ
ಲ್ಯಾರಸೆಯಾಳ್ಮನೋಲಗಕೆ ಬಂದನಗುರ್ವ್ವಿಸುತಂದ್ರ ದೇಶದಿಂ
ಶೌರಿಯ ಭೃತ್ಯನೋವೋ ಭುವನತ್ರಯ ತಾತನೆನಿಪ್ಪನೊರ್ವ್ವರಂ ॥

X X X X

ಶರಣಕವಿಯ ಪ್ರಯೋಗಂ ॥
ಕಂ॥ ವೊಳ್ಳಿಗಳಂ ಗರಳದ ಕರಿ
ಕೊ ಳ್ಳಿಗಳುಂ ಕೈಪೆಸೋರೆ ಬಳ್ಳಿಗಳುಂ ಚಿಃ
ಟೊಳ್ಳಿಗಳುಂ ದೈವಾಖ್ಯಕೆ
ಕಳ್ಳರ್ ಗುರುರೂಪ ವಿಶ್ವನಾಥಂಗೆಣೆಯೆ ॥ ೨೩ ॥

ಶ್ರೀ ಶಿವಾದ್ವೈತ ಸಾಕಾರ ಸಿದ್ಧಾಂತ ಸಾನಂದ ಚರಿತ್ರ ಕಥಾಗರ್ಬ್ಭ ವೃತ್ತಾಂತವೆಂತೆಂ‌ದೊಡೆ ॥ ವಚನ ॥ ಶ್ರೀಮತ್ಸರ್ವ್ವ ಬ್ರಹ್ಮಾಂಡ ಸಾರ್ವ್ವ ಭೌಮಂಗೆ ಸ್ಕಂದನಂದಿ ಭೃಂಗಿ ವೀರಭದ್ರಾದಿ ಪ್ರಮಥ ಗಣನಾಥ ಯೂಥ ಪರಿವೃತಂಗೆ ಸಾಂಬಂಗೆ ಮದ್ಗುರು ರೂಪ ವಿಶ್ವನಾಥಂಗೆ ಸಮುಚುವಱಿ ದೊಂದು ಬಾರಿ ಸರ್ವಜ್ಞನುಚಿತಜ್ಞಂ ದ್ವಿತೀಯ್ಯ ಶಂಕರನಪ್ಪ ನಂದೀಶ್ವರಂ X X X X (೯೦ನೇ ಪತ್ರ). ಶ್ರೀ ಸದ್ಗುರುವಪ್ಪ ಶ್ರೀ

ನಂದಿಕೇಶ್ವರಂ ತಂನ ಶಿಷ್ಯನಪ್ಪಾ ಸನತ್ಕುಮಾರಂಗೆ ಶ್ರೀ ಪಂಚಾಕ್ಷರಿಯ್ಯ ಘನಮಂ ಮಾಹೇಶ್ವರಾದಿಕ್ಯಮಂ ಪೇಳ್ದ ಶ್ರೀ ಸಾನಂದ ಚರಿತ್ರದ ಕಥಾಗರ್ಬ್ಬ ವಾಕ್ಯಾರ್ತ್ಥ ಸೂಚನಂ ಸಮಾಪ್ತಂ ಮಂಗಲಮಹಾಶ್ರೀ. ಶ್ರೀಗು ು ರೂಪ ವಿಶ್ವೇಶ್ವರಾಯ ನಮಃ ॥ ಶ್ರೀ ಶಿವೆಯೇ ನಮಃ ॥ ಶ್ರೀ ಶಿವಾಡ್ವೈ್ತ ಸಾಕಾರ ಸಿದ್ಧಾಂತ ಸಾನಂದಚರಿತೆಯ ಮೊದಲ ಸಂಧಿ॥ ರಾಗ ರಾಮಾಕ್ರಿ ಪಲ್ಲವ ॥

ಪರಮ ಪಂಚಾಕ್ಷರೀ ವರಸಿದ್ಧ ಸಾನಂದ
ಚರಿತೆಯಂ ನಂದಿ ಶರೊರೆದರೊಲ್ಲು ॥

ಪದ ॥ ಅಂದು ನಿಜಸುತಂಗೆ ॥

ಶ್ರೀನಗಜೆಯಧಿಪ ಪಂಚಾನನ ಷಡಾಕ್ಷರಿ
ದಾನಿ ಮದ್ಗುರುರೂಪ ವಿಶ್ವನಾಥಂ ॥ ಕರುಣಂ ॥
ಸಾನಂದ ಚರಿತೆ ಜಗದಾನಂದಭರಿತವಿದ
ನಾರೊಲ್ಲು ಕೀರ್ತಿಪುದು ನೀವುದೆಂದೂ ॥ ೧ ॥

ಅಂತ್ಯ : ಯಿದು ಪ ಮನಂ.... ರೊತಿಯಿಂ ಪು
ದಿದ ಸಾನಂದೇಶ ಚರಿತದೋ
ಳಿದು ಮಹೇಶಾಸ್ಥಾನದುತ್ತಮವ ್ಣನದ ಸಂಧಿ
ಯಿದು ಶರಣಕವಿ ಪದುಮಿದೇವಂ
ಪದೆದು ಕಂನಡದಿಂದೆ ಮುದ್ರಿಸಿ
ದೊದ ...ದೊಂಭತ್ತನೆಯ ಸಂಧಿ ಸಮಾಪ್ತ ಶಿ ...ಸ್ತೂ ॥೧೩॥

ಶ್ರೀ ಶಿವಾಡ್ವೈತಸಾಕಾರ ಸಿದ್ಧಾಂತಂ ಸಮುದಿತಂ ಸಾನಂದ ಚರಿತಂ ಶಾಸ್ತ್ರಂ ಪದ್ಮರಾಜಮ ಪುರಾಣದೊಳು ॥ ಷಟ್ಪದಿ ೭೯೧ ರಗಳೆ ೨ ಯಿದಕ್ಕೆ ಗ್ರಂಥ ೪೦೦೦ ಶುಭಮಸ್ತು ಸಾನಂದಪುರಾಣ ಸಮಾಪ್ತಂ ಮಂಗಲ ಮಹಾಶ್ರೀ ಪ್ರತಿ ಬರೆದ ಕಾಲವಿರುವ ಭಾಗ ತ್ರುಟಿತವಾಗಿದೆ.

ವಿಷಯ : ಸಾನಂದ ಶಿವಯೋಗಿಯ ಚರಿತ್ರೆ.

ವಿಶೇಷ : ಸಮಗ್ರ. ೮೬ ರಿಂದ ೧೭೩೮ರವರೆಗೆ ಪತ್ರ ಸಂಖ್ಯೆ ಸರಿಯಾಗಿದೆ. ಮುಂದಿನ ೮ ಪತ್ರಗಳ ಸಂಖೆ ಸರಿಯಾಗಿಲ್ಲವಾದರೂ ವಿಷಯಾನುಸಾರಿ ಈಗ ಕಟ್ಟಿನಲ್ಲಿ ಜೋಡಿಸಿರುವಂತೆ ಸರಿಯಾಗಿರುತ್ತವೆ. ಅಂತೂ ಈ ಗ್ರಂಥ ಭಾಗ ಒಟ್ಟು ೯೭ ಪತ್ರಗಳಲ್ಲಿದೆ. ಶಕಟರೇಫವಿದೆ. ಇದರೊಂದಿಗೆ ಪದ್ಮರಾಜ ಪುರಾಣವೂ ಇದೆ.

1896

ಕೆ. ಬಿ. ೧೪೬ ಸಾನಂದ ಚರಿತ್ರೆ ಷಟ್ಪದಿ

೭.೩"X೫.೮" ಕುಮಾರ ಪದ್ಮರಸ ಸು. ೧೩೦೦

೧–೨೬೭ ಪತ್ರ ೧೨ ಪಂಕ್ತಿ ೨೦ ಅಕ್ಷರ

ಆದಿ : ಪದುಮಣ್ಣ ವಿರಚಿತ x x ಸಾನಂದ ಪುರಾಣವು ವಚನ || ಸಕಲ ವಿದ್ವಾಂಸರ ಹೇಳಿಕೆ.

ವೃತ್ತ || ದೋರ ಸಮುದ್ರವೆಂಬ ಪೆಸರಿಂ ಕ೦ವೊಪ್ಪುವ ರಾಜಧಾನಿಯೊ
ಳ್ವೀರ ನೃಸಿಂಹಭೂವರನಹೋ ಮಹಿಯಂ ಪ್ರತಿಪಾಲಿಸುತ್ತಿರ
ಲ್ಕಾಸೆಯೊಣ್ಮನೋಲಗಕೆ ಬಂದನಗುರ್ವಿಸುತಾಂಧ್ರದೇಶದಿಂ
ಶೌರಿಬು ಭೃತ್ಯನೋವೊ ಭುವನತ್ರಯ ತಾತನೆನಿಪ್ಪನೋರ್ವವಂ || ೧ ||

x x (೧೨ನೆಯ ಪತ್ರ) ಶ್ರೀ ಶಿವಾದ್ವೈತ ಸಾಕಾರ ಸಿದ್ಧಾಂತ ಸಾನಂದ ಚರಿತೆಯ ಮೊದಲ ಸಂಧಿ|' ಶ್ರೀ ರೇಣುಕಾಚಾರ್ಯಾಯ ನಮಃ || ರಾಗ || ರಾಮಕ್ರಿಯಾ || ಪಲ್ಲವ ||

ಪರಮು ಪಂಚಾಕ್ಷರೀವರಂ ಸಿದ್ಧ ಸಾನಂದ ಚರಿತೆಯಂ ನಂದೀಶ
ರೊರೆದರೊಲ್ದೂ ಅಂದು ನಿಜಸುತಂಗೆ ||

ಪದ|| ಶ್ರಿ ನಗಜೆಯಧಿಪ ಪಂಚಾ
ನನ ಷಡಕ್ಷರಿ ದಾನಿ ಮದ್ಗುರು ರೂಪ ವಿಶ್ವನಾಥಂ||

ಸಾನಂದಚರಿತೆ ಜಗದಾನಂದಭರಿತವಿದ ನಾನೊಲ್ದು ಕೀರ್ತಿಪುದ
ನೀವುದಿಂದೂ || ೧ ||

ಅಂತ್ಯ : ಇದು ಪರಮು ನಂದೀಶರೊರೆಯಿಂ
ಪುದಿದ ಸಾನಂದೇಶ ಚರಿತದೊ
ಳಿದು ಮಹೇಶಾಸ್ಥಾನದುತ್ತಮ ವರ್ನದ ಸಂಧಿ
ಇದು ಶರಣರ ಕವಿ ಪದುಮಿದೇವಂ
ಪದೆದು ಕನ್ನಡದಿಂದೆ ಮುದ್ರಿಸಿ
ದೊದವಿದೊಂಭತನೆಯ ಸಂಧಿ ಸಮಾಪ್ತ ಶಿವಮಸ್ತು || ೧೩೩ ||

ಶ್ರೀ ಶಿವಾದ್ವೈತ ಸಾಕಾರ ಸಿದ್ಧಾಂತಂ ಸಮುದೀರಿತಂ |
ಸಾನಂದ ಚರಿತಂ ಶಾಸ್ತ್ರ ಪದ್ಮರಾಜ ಮಹತ್ಮನಾ ||

ಅಂತು ಷಟ್ಪದಿ ೭೯೨ ಕ್ಕಂ ರಗಳೆ ೨ಕ್ಕೆ ೨೬೩ ಕ್ಕಂ ಇದಕ್ಕೆ ಗ್ರಂಥ ೪೦೦೦ ಕ್ಕಂ ಶುಭಮಸ್ತು ಸಾನಂದ ಪುರಾಣಂ ಸಮಾಪ್ತ ಮಂಗಲ ಮಹಾಶ್ರೀ.

ವಿಷಯ : ಸಾನಂದ ಶಿವಯೋಗಿಯ ಚರಿತ್ರೆ.

ವಿಶೇಷ : ಪ್ರತಿ ಸಮಗ್ರವಾಗಿದೆ. ಮೊದಲಲ್ಲಿ ಗ್ರಂಥದಿಂದ ಬೇರೆಯಾದ ಹೊಗಳಿಕೆಯ ಪದ್ಯಗಳು ಇವೆ.

1897

ಕೆ. ೩೮೨/೪	**ಸಾಮುದ್ರಿಕ ಲಕ್ಷಣ**	ಶ್ಲೋಕ, ಟೀಕು
೯.೩" × ೧.೩"	?	?
೪೮-೫೯ ಪತ್ರ	೫ ಪಂಕ್ತಿ	೩೭ ಅಕ್ಷರ

ಆದಿ: ಸಾಮುದ್ರಿಕಾ ಶ್ಯಾಸ್ತ್ರಲಕ್ಷಣಾ ಮೊದಲು ಆಯುಷ್ಯ ಲಕ್ಷಣಮಂ ಪೇಳ್ವೆ ಗ್ರಂಥಾ॥ ಪೂರ್ವಮು................ತಃ ಪಕ್ಷಮೆ ಲಕ್ಷಣ ಮೇವ ಚಃ । ಅಹಿರ್ಯ್ಯನವರಣಾಚಃ ಲಕ್ಷಣಂತ್ರಿ ಪ್ರಯೋಜನಂ ॥

ಸಾಮುದ್ರಿಕೆ ಲಕ್ಷಣ ನೋಡುವಾತ ಮೊದಲಲ್ಲಿ ಆಯುಷ್ಯ ಲಕ್ಷಣ ನೋಡಬೇಕು । ಬಳಿಕ ಭಾಗ್ಯದ ಲಕ್ಷಣ ನೋಡಬೇಕು । ಆಯುಷ್ಯ ವಿಲ್ಲದವಗೆ ಭಾಗ್ಯ ಲಕ್ಷಣ ಪ್ರಯೋಜನವಿಲ್ಲಾ ॥

ಅಂತ್ಯ : ಹೆಣ್ಣಿಗೆ ಸುಳಿ ಪುಟ್ಟಿದ ಲಕ್ಷಣಾ ॥ ಹುಬ್ಬಿನ ಮೇಲೆ ಯಿರಲು ದನಲಾಬ । ಬುಜದ ಮೇಲೆಯಿರಲು ಗಂಡನ ಮೇಲೆ ಸ್ನೇಹ ಉಳ್ಳವಳೂ । ಮೊಲೆ ಮೇಲೆಯಿರೆ ಜಾರೆ । ನಡುದಲೆ ಮೇಲೆಯಿದ್ದರೆ ಹುಟ್ಟಿದ ಮನೆ ಹೊಕ್ಕ ಮ... ದರಿದ್ರವಹುದೂ । ಮುಂದಲೆ ಮೇಲೆ ಯಿರೆ ಶುಭ । ನಡುನೆತ್ತಿಯ ಮೇಲೆಯಿರೆ ದನ ಹೆಚ್ಚುವದೂ । ಯಡದಲೆ ಮೇಲೆಯಿರೆ ಕಷ್ಟ । ಹಣೆ ಮೇಲೆಯಿರೆ ಸಂಪ್ಪದ । ಕಿವಿ ಮೇಲೆಯಿರೆ ಸಂಪದ । ಬೆಂನ್ನಮೇಲೆ ಯಿರೆ ಸಂತೋಷ । ಹೊಕ್ಕಳ ಮೇಲೆ ಯಿರೆ ಪತಿವ್ರತೆ । ಬಲಗಲ್ಲದ ಮೇಲೆ ಯಿರೆ ಜಗಳಗಂಟ್ಟಿಯಕ್ಕು ಯಿಂತ್ರೀ ಫಲಸಮಾಪ್ತಂ

ವಿಷಯ : ಸಾಮುದ್ರಿಕ ಲಕ್ಷಣ ಮತ್ತು ಫಲವಿವರ.

ವಿಶೇಷ : ಶಿಥಿಲಪ್ರತಿ. ಇದೇ ಕಟ್ಟಿನಲ್ಲಿ ಸ್ವರಚಿಂತಾಮಣಿ, ಬಾಲಗ್ರಹ ಚಿಕಿತ್ಸೆ, ನರಪಿಂಗಲಿ, ಜೋತಿಷ ಸಂಗ್ರಹ ಎಂಬ ಗ್ರಂಥಗಳಿವೆ.

1898

ಕೆ.ಎ. ೨೦೩ **ಸಾಮುದ್ರಿಕ ಲಕ್ಷಣ** ಟೀಕು

೧೩" × ೮" ? :

೧-೧೬೫ ಪತ್ರ ೨೧ ಪಂಕ್ತಿ ೨೦ ಅಕ್ಷರ

ಆದಿ : ಸಾಮುದ್ರಿಕ ಲಕ್ಷಣ ಬರೆಯುವದಕ್ಕೆ ನಿರ್ವಿಘ್ನಮಸ್ತು ।
ಆದಿದೇವಂ ನಮಸ್ಕೃತ್ಯ ಸರ್ವಜ್ಞಂ ಸರ್ವದರ್ಶನಂ !
ಸಾಮುದ್ರಿಕ ಂ ಪ್ರವಕ್ಷ್ಯಾಮಿ ಶುಭಾಂಗಂ ಪುರುಷಸ್ತ್ರಿಯೋಃ ॥

ಟೀ॥ ಮೊದಲು ಸರ್ವಜ್ಞನಾದ ಸಕಲರಹಸ್ಯಗಳ ತಿಳಿದಂಥಾ ಪರಮೇಶ್ವರಂಗೆ ನಮಸ್ಕರಿಸಿ ಸ್ತ್ರೀಪುರುಷರ ಸಾಮುದ್ರಿಕ ಲಕ್ಷಣವನು ಪೇಳುತ್ತಯಿದ್ದೆನು ॥ ೧ ॥

ಪುರುಷಲಕ್ಷಣ

ಪೂರ್ವಮಾಯಃ ಪರೀಕ್ಷ್ಯೇತ ಪಶ್ಚಾಲ್ಲಕ್ಷಣ ಮಾದೃಶೇತ್ ।
ಆಯುರ್ಹೀನನರಾಣಾಂ ಚ ಲಕ್ಷಣಂ ಕಿಂ ಪ್ರಯೋಜನಂ ॥

ಟೀ ॥ ಮೊದಲು ಆಯುಷ್ಯ ಪ್ರಮಾಣವನು ತಿಳಿದು ಆ ಮೇಲೆ ಲಕ್ಷಣವನು ವಿಚಾರಿಸುವದು । ಆಯುಷ್ಯವಿಲ್ಲದ ಮನುಷ್ಯರುಗಳಿಗೆ ಲಕ್ಷಣಗಳು ಪ್ರಯೋಜನವಿಲ್ಲಾ ॥ ೨ ॥

ಅಂತ್ಯ: (೧೪೬ ನೆ ಪತ್ರ, ಲಕ್ಷಣಾನಿ ಮಯೋಕ್ತಾನಿ ಸುಖ ಯ ಗೃಹಮೇಧಿನಾಂ ।
ವಿವಾಹಾನ್ ಪರಿವಕ್ಷ್ಯಾಮಿ ತಾಂ ನಿಬೋಧ ಘಟೋದ್ಭವ ॥
ಕೇಳೈ ಅಗಸ್ತ್ಯನೆ ಗೃಹಸ್ಥರಿಗೆ ಸುಖಕ್ಕೋಸ್ಕರವಾಗಿ ಸ್ತ್ರೀ ಲಕ್ಷಣವನ್ನು। ಹೇಳಿದೆವು । ಉತ್ತರಾಧ್ಯಾಯದಲ್ಲಿ ವಿವಾಹ ಲಕ್ಷಣವನ್ನು ಹೇಳೇವು । ಅದನ್ನು ಕೇಳೈಯಾಯೆಂದು ಕುಮಾರಸ್ವಾಮಿಯು ಅಗಸ್ತ್ಯರನ್ನು ಕುರಿತು ಹೇಳಿದರು ಯೆಂಬಲ್ಲಿಗೆ -ಧ್ಯಾಯ ಸಮಾಪ್ತಃ ॥ ಶ್ರೀಃ ॥

ಮೊದಲು ಬೇರೆ ಎರಡು ಪತ್ರಗಳಲ್ಲಿ ವಿಷಯ ಸೂಚಿಯಿದೆ. x x x x

(೧೬೫ ನೆಯ ಪತ್ರ) ತುಂಬಿ ಪುಷ್ಪ ಸಮೇ ಗಂಧಾ ಮಧುಲಾಕ್ಷಾಚ ಗಂಧಿಕಾ।ತಸ್ಯಾನ್ನ ಜಾಯತೇ ಗರ್ಭೋ ದರ್ಭಗಾವಿಧವಾ ಭವೇತ್॥೮೨॥ ಇತಿ ಶ್ರೀ ಭದ್ರಬಾಹು ಶಾಸ್ತ್ರೇ ಸಾರೋದ್ಧಾರೇ ಸಾಮುದ್ರಿಕೇ ಸ್ತ್ರೀಃ ಪುರುಷ ಲಕ್ಷಣಂ ಸಮಾಪ್ತಃ x x x x ಆವ ಸ್ತ್ರಿಯ ಅಂಗೈಯಲ್ಲಿ ನೆಯ್ದಿಲಾಕಾರವಾಗಿ ಸಿಂಹಾಕಾರವಾಗಿ ರೇಷೆಯ ಎಳ್ಳಡೆ ರಾಜಸ್ತ್ರೀಯಾಗಿ ಸತ್ಪುತ್ರರ ಹಡದು ಕೊಂಡು ಸುಖಿಯಹಳು. ಶಾಲಿ

ವಾಹನ ಶಕ ವರ್ಷ ೧೭೭೨ ನೆ ಸಾಧಾರಣ ಸಂವತ್ಸರರದ ಶ್ರಾವಣ ಶುದ್ಧ ೧೧ ಭಾನುವಾರ ಸೂರ್‍ಯೋದಯವಾದ ಘಳಿಗೆ ೨೮ ಕ್ಕೆ ತ್ಯರಕಣಾಂಬೆ ಚೆಲುವಯ್ಯ ಉಪಾಧ್ಯಾಯರ ಕನಿಷ್ಠಪುತ್ರ ವೋದುಕೊಳ್ಳು ನಿಮಿತ್ಯ ಬರೆದುಕೊಂಡ ಸಾಮುದ್ರಿಕಾಲಕ್ಷಣಶಾಸ್ತ್ರಕ್ಕೆ ಭದ್ರಂ ಶುಭ ಮಂಗಳಂ.

ವಿಷಯ : ಸಾಮುದ್ರಿಕಾಲಕ್ಷಣ ಮತ್ತು ಫಲವಿವರ.

ವಿಶೇಷ : ಪತ್ರಗಳ ಒಂದೇ ಪುಟದಲ್ಲಿ ಬರೆದಿದೆ. ಇದರೊಂದಿಗೆ ‘ ಭದ್ರಬಾಹು ಪೋಕ್ತ ಸಾಮುದ್ರಿಕಾ ಲಕ್ಷಣಂ ’ ಎಂಬ ಸಂಸ್ಕೃತ ಗ್ರಂಥವಿದೆ. ಶಾಲೀವಾಹನ ಶಕ ೧೭೭೨ ನೇ ಸಾಧಾರಣ ಸಂ॥ ಶ್ರಾವಣ ಶು ೧೧ ಭಾನುವಾರದಲ್ಲಿ ಇದನ್ನು ಬರೆದಿರುವುದಾಗಿ ಕೊನೆಯಲ್ಲಿ ತಿಳಿಸಿದೆ. ೬೩ ನೆಯ ಪತ್ರ ಮತ್ತು ೯೪ ನೆಯ ಪತ್ರಗಳ ಮಧ್ಯದಲ್ಲಿ ಕ್ರಮಸಂಖ್ಯೆ ಗಳು ಬಿಟ್ಟುಹೋಗಿವೆ. ಗ್ರಂಥಕ್ಕೆ ಮೊದಲು ಬೇರೆ ಎರಡು ಪತ್ರಗಳಲ್ಲಿ ವಿಷಯ ಸೂಚಿಯಿದೆ.

1899

ಕೆ. ೪೪೬	**ಸಾಮುದ್ರಿಕಶಾಸ್ತ್ರ ಸಾರಸಂಗ್ರಹ**	ಶ್ಲೋಕ-ಟೀಕು
೧೦.೪" × ೧.೭"	ರಾಮುಸೂರಿ ?	?
೧೧೬-೧೯೧ ಪತ್ರ	೬ ಪಂಕ್ತಿ	೫೦ ಅಕ್ಷರ

ಆದಿ : ಶುಭಮಸ್ತು x x ಸಾಮುದ್ರಿಕಾ ಬರವುದಕ್ಕೆ ನಿರ್ವಿಘ್ನೆ ಮಸ್ತು x x x

ಲಕ್ಷಣಾನಿ ಪ್ರವಕ್ಷ್ಯಾಮಿ ಸ್ತ್ರೀಣಾಂಪುಂಸಾಂ ಯಥಾಕ್ರಮಂ ।
ವಾಮಭಾಗೇ ತು ನಾರೀಣಾಂ ದಕ್ಷಿಣೇ ಪುರುಷಸ್ಯ ಚ ॥ ೧ ॥

ಅನಂತರದಲ್ಲಿ ಯಥಾಕ್ರಮವಾಗಿ ಪ್ರಥಮದಲ್ಲಿ ಸ್ತ್ರಿ ಸಾಮುದ್ರಿಕಾಶಾಸ್ತ್ರ ರೀತಿಯಲ್ಲಿ ಸ್ತ್ರೀಯರ ಲಕ್ಷಣ ದುರ್ಲಕ್ಷಣಸ್ವರೂಪವನ್ನು ನಿರ್ನಯಿಶಿ ಹಾಗೆ ಪುರುಷ ಸ್ವಾಮುದ್ರಿಕಾಶಾಸ್ತ್ರ ಪ್ರಕಾರದಲ್ಲಿ ಪುರುಷ ಲಕ್ಷಣವ ವಿಚಾರವ ಮಾಡುವ ಪ್ರಕಾರವನ್ನು ಯಥಾಶಾಸ್ತ್ರದ ಲಕ್ಷಣ ಪ್ರಕಾರದಿಂದಾ ಪಾದ ಮೊದಲಾಗಿ ಸಕಲಾವಯವಂಗಳನ್ನು ಫಲಗಳನ್ನು ಹೇಳಲು ಉಪಕ್ರಮಿಶಿ ಯಡದು ಭಾಗದಲ್ಲಿ ಸ್ತ್ರೀ ರಗಳ ಲಕ್ಷಣಗಳ ನೋಡುವ ಕ್ರಮ ಬಲದ ಭಾಗದಲ್ಲಿ ಪುರುಷ ಲಕ್ಷಣಗಳ ನೋಡುವ ಪ್ರಕಾರವನ್ನು ಯೀ ಶಾಸ್ತ್ರ ರೀತಿಯಿಂದಾ ಹೇಳುತ್ತಂ ಯಿದ್ಧಾನು ॥

ಅಂತ್ಯ : ಪ್ರಥಮಾದಲ್ಲಿ ಲಕ್ಷಣಗಳ ವಿಚಾರಿಶಿ ದುರ್ಲಕ್ಷಣವುಳ್ಳವರ ಬಿಟ್ಟು ಲಕ್ಷಣವತಿಯರ ಪಾಣಿಗ್ರಹಣವ ಮಾಡುವರು- ಕೇಳ್ಳಿ ಅಗಸ್ತ್ಯನೆ ಗೃಹಸ್ಥಾಶ್ರಮಗಳಿಗೆ ಸುಖಾರ್ಥವಾಗಿ ಸ್ತ್ರೀ ಲಕ್ಷಣಗಳ ಹೇಳಿದವು ಮುಂದೆ ಅಧ್ಯಾಯದಲ್ಲಿ ವಿವಾಹ ಸ್ವರೂಪಂ ಹೇಳುತ್ತಂಮಿಥೇವೆಯಂದು ಕುಮಾರಸ್ವಾಮಿ ಅಗಸ್ತ್ಯ ರೃಷೀಶ್ವರರ ಕುರಿತು ಹೇಳಿದರು ಯೆಂಬಲ್ಲಿಗೆ ಸ್ತ್ರೀಲಕ್ಷಣಾಧ್ಯಾಯಃ ಸಮಾಪ್ತಃ ಮಂಗಳಮಹಾ ಶ್ರೀ.

ವಿಷಯ : ಸಾಮುದ್ರಿಕಾಲಕ್ಷಣ.

ವಿಶೇಷ : ಪ್ರತಿಯ ಕೊನೆಯಲ್ಲಿ 'ಶ್ರೀ ವಿಶ್ವನಾಥಸಂಭೂತ ರಾಮನಾಮಾಕೃತಾ ಸ್ಫುಟಂ। ಯೋಷಿಲ್ಲಕ್ಷಣ ಟೀಕೈಷಾಸೂರಿಣಾ ಶಕ್ತಿತಃ ಸ್ವತಃ' ಎಂಬ ಶ್ಲೋಕ ಇದೆ.

1900

ಕೆ. ೨೦೧/೨	**ಸಾರಂಗಧರನ ಕಥೆ**	ಯಕ್ಷಗಾನ
೬.೪"X೧.೭"	ಮಾಂಬಯ್ಯ	?
೧–೧೧೦ ಪತ್ರ	೯ ಪಂಕ್ತಿ	೩೦ ಅಕ್ಷರ

ಆದಿ : ಸಾರಂಗಧರನ ಕಥೆ ಬರೆವುದಕ್ಕೆ ಶುಭಮಸ್ತು X X X
ರಾಗಾಧ್ವಿಪದೆ ॥ ಶ್ರೀ ಗೌರಿಗರ್ಧಾಂಗಮಂ ಭಾಗೀರಥಿಗೆ ಮೌಳಿಯನಿತ್ತು
ಸಂತೋಷದಿಂದೆಸವ ಸಾರ್ವಭೌಮಾ
ಕೊರಳಲ್ಲಿ ಗರಳಮಂ ಶಿರದಲ್ಲಿ ಚಂದ್ರನಂ
ಯಿಟ್ಟು ಕೊಂಡಿರುವ ಸರ್ವೇಶಯೀಶಾ
X X X
ಯನಗೆ ಕರುಣದಿಂದಲಿ ಬೇಡಿದ ವರವನೀವನೂ ॥

ಅಂತ್ಯ : ಕೋವಿದರು ಲಾಲಿಪುದು ಕೃಪೆಯಿಂದ ಕೃತಿಯಾ
ಬರೆದವಗೆ ಭಾಗ್ಯ ಅರ್ಥೈಸಿದವಗೆ ಐಶ್ವರ್ಯ
ಸ್ವರದಿಂವ ವೋದಿದವಗೆ ಪರಮಪದಮಂ
ಪ್ರಿಯದಿಂದ ಕೃತಿಯ ಪಿರಿದಾಗಿ ಕೇಳಿದವರ್ಗೈ
ಸಾಯೋಜ್ಯಪದವೀವ ಸರ್ವೇಶನೊಲಿದು
ಭೂಚಕ್ರಾದಿ ವಾಕ್ಯಬುಧರು ಲಾಲಿಪಡೆ ಆಚಂದ್ರಾರ್ಕವಾಗಿ ರಂಜಿಪರೂ ॥

ಸಾರಂಗಧರನ ಕಥೆ ಸಂಪೂರ್ಣಂ || ಪರಿಧಾವೀ ಸಂವತ್ಸರದ ವೈಸಾಖ ಬ ೧೩ ಲು ಸಮಾಪ್ತಂ

ವಿಷಯ ; ಸಾರಂಗಧರನ ಕಥೆ.

ವಿಶೇಷ : ಈ ಪ್ರತಿಯೊಂದಿಗೆ ಕುಶಲವರ ಕಾಳಗವೂ ಇದೆ.

1901

ಕೆ. ಬಿ. ೨೯೮	**ಸಾರಂಗಧರನ ಚರಿತ್ರೆ**	ಯಕ್ಷಗಾನ
೮″ × ೬.೫″	ನಂಜುಂಡ	?
೧–೧೨ ಪತ್ರ	೩೩ ಪಂಕ್ತಿ	೩೨ ಅಕ್ಷರ

ಆದಿ : ಸಾರಂಗಧರನ ಕಥೆ ಯಕ್ಷಗಾಯನ | ಶ್ರೀಸಿದ್ಧಿವಿನಾಯಕಸ್ವಾಮಿ ಪಾದಾರ ವಿಂದವೆ ಗತಿ | x x

ರಾಗ || ನಾಂದಿ || ಶ್ರೀಧರಣೀಧರಜಾಧರ
ಮಾಧೂರ್ಯಸ್ವಾದ ಜನಿತ ಸರ್ವೋತ್ಕರ್ಷಂ
ಸ್ವಾದೀನ ಭುವನ ತಂತ್ರಂ
ಬೋಧಮನೆಮಗೀಗೆ ಭದ್ರಕಾಳೀರಮಣಂ || ೧ ||

ರಾಗ || ಮೋಹನ | ಆದಿತಾಳ || ಸಲಹೂ ಶ್ರೀಮಂಜುನಾಥೇಶ್ವರನೆ
ಕಲಭದನುಜ ಹರನೇ || ಪಲ್ಲ ||

ಕುಡಮ ಪುರಿಯ ನೆಲದೊಡೆಯನೆಂನಲಿ
ಛಲದೊಡುವರೆ ತೆಗೆ ಜಲವಿ ಡ ನೀ ಬೆಂಬಲಾ || ೨ ||

x x x x

ಕಂದಪದ್ಯ || ಲಿಂಗ ನರೇಶನ ಪದಪ
ದ್ಮಂಗಳಿಗಭಿನಮಿಸಿ ಭಜಿಸಿ ಕುಲದೈವವ ಸಾ
ರಂಗಧರನ ಚರಿತೆಯ
ಹಿಂಗದೆ ಪೇಳುವೆನು ಯಕ್ಷಗಾಯನ ಕ್ರಮದಿಂ ||

ಅಂತ್ಯ : ವಾರ್ಧಿಕ || ಧರಣಿಪತಿಗಂದು ದಿವ್ಯಗ್ಞಾನವಂ ಕೊಟ್ಟು
ತರಳ ಸಾರಂಗಧರನಂ ಸಂತವಿಟ್ಟು ಮುನಿ
ವರನು ಪುರವನು ಹೊರಟು ತಂನಾಶ್ರಮಕೆ ನಡೆತರಲ್ ಬಳಿಕಿತ್ತಲೂ

ಪುರಜನರ ಪೊರೆಯುತ್ತ ...
ಪರಮ ಧಾರ್ಮಿಕನಾಗಿ ರಾಜ್ಯಮಂ ಪಾಲಿಸುತ
ಲರಸುರಾಜನರೇಂದ್ರನಿರುತಿರ್ದನೆಂದು ಶಂಕರನು ಗಿರಿಸುತೆಗೆ ಪೇಳ್ದಂ ||

ಮಂಗಳಾರತಿ || ರಾಗ ಸುರಟಿ ಆದಿತಾಳ ||

x x x x

ಗಂಗೋತ್ತಮಾಂಗಗೆ ಪುಂಗವ ತುರಗಗೆ
ಅಂಗಜಹರಗೆ ಮಹಲಿಂಗ ಮಹಿಮಾಂನ್ವಿತಗೆ ||
|| ಮಂಗಳಂ ಮಂಗಳಂ || ೮೦೫ ||

ಅಂತು ಸಾರಂಗಧರ ಚರಿತ್ರೆ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : ಸಾರಂಗಧರನೃಪನ ಚರಿತ್ರೆ

ವಿಶೇಷ ; ಮೋಡಿ ಬರಹ ಕವಿಯ ಹೆಸರನ್ನು ತಿಳಿಸುವ ಮಂಗಳ ಪದ್ಯವು ಅಸಮಗ್ರವಾಗಿದೆ. ಕೆ. ಬಿ. ೩೦೯ ನೆಯ ಇದೇ ಗ್ರಂಥದಲ್ಲಿ ಕವಿಯ ಹೆಸರು ನಂಜುಂಡನೆಂದು ತಿಳಿದುಬರುತ್ತದೆ. ಆದಿ, ಅಂತ್ಯದ ಕೆಲವು ಪತ್ರಗಳನ್ನು ಅಲ್ಲಲ್ಲಿ ಹುಳು ಕೊರೆದಿದೆ.

1902

ಕೆ. ೫೨೨	**ಸಾರಂಗಧರನ ಕಥೆ**	**ಯಕ್ಷಗಾನ**
೧೩.೪″ × ೧ ೬″	**ಮಾಂಬಯ್ಯ**	**?**
೧-೭೭ ಪತ್ರ	**೬ ಪಂಕ್ತಿ**	**೪೪ ಅಕ್ಷರ**

ಆದಿ: ಶ್ರೀ x x x ಸಾರಂಗ್ಗಧಾರನ ಕಥೆ ಯಕ್ಷಗಾನ ಭರೆಯುದಕ್ಕೆ ಶುಭಮಸ್ತು ||

ದ್ವಿಪತೆ || ಶ್ರೀಗಉರಿಗಾರ್ಧಾಂಗ್ಗಮಂ ಭಾಗೀರತಿಗೆ ಮೌಳಿಯನಿತ್ತು
ಸಂತೋಷದಿಂದೆಸೆವ ಸಾರ್ವಭೌಮಾ
ಕೊರಳಲ್ಲಿ ಗರಳಮಂ ಶಿರದಲ್ಲಿ ಚಂದ್ರನಂ
ಯಿಟ್ಟುಕೊಂಡಿರುವಂತ್ತಾ ಸರ್ವ್ವೇಶಯಿಾಶಾ
ಕರದಲ್ಲಿ ತಲೆಯೋಡು ಉರದಲ್ಲಿ ಶಿರಮಾಲೆ
ಸಲೆ ಅಲಂಕರಿಸಿದ ಸಾರ್ವಭೌಮಾ
ಸಕಲಸುರಮುನಿಶೇವಿತಾ ಚೆರಣಾ ಯುಗಳಾ

ಪ್ರಮತಗಣವಂದ್ಯ ಪುರಹರಾಪಾಲನೇತ್ರಾ
ಅಂಗಜನ ಭಸಿತಾಂಗ ಶ್ರೀ ಶೆಂಭುಲಿಂಗ್ಗ ಯನಗೆ
ಕರುಣದಿಂದಲ್ಲಿ ಬೇಡಿದ ವರವ ಪಾಲಿಪೂಮೂ ||

x x x x

ದೇವರಾಯಿಚ್ಛೆಯಿಂ ಪೊಗಳೀ
ಶ್ಯಾರದಾ ವೀವಿ | ಶ್ರಾಷ್ಟಾಂಗವೆರಗೀ
ಕವಿಗಳಂ ಪೊಗಳಿ ದುಃಖ್ಖವಿಗಳಂ ಜರೆಥೂ
ಸವಿಮಾತನಿಂದಲೆ ಶೆಂಭುಲಿಂಗನಿಗೆ
ಅಂಕಿತಾವಾಗಿ ರತ್ನಾಂಗ್ಗಿಯಾ ಕುವರಾ
ಶೆಂಕ್ಕರನವರಉಳ್ಳ ಸಾರಂಗ್ಗಧರನ ಕತೆಯನ್ನು
ಯಕ್ಷಗಾನವಂ ಮಾಡಿಪೇಳ್ವೆನೀ ಕೃತಿಯಾ ||

ಅಂತ್ಯ : ಯಿಂದ್ದು ಶೇಖರಾ ಸಲುಕ್ಯದಿಂದ ವಪ್ಪಿದನೂ ||
ಸೂಕ್ಷ್ಮ ದೊಳೀ ಕಾವ್ಯ ಸುಲಬವಾಗಿಹುದೂ
ಯಕ್ಷಗಾನವ ಮಾಡಿದಾತನಾರೆನಲೂ
ಸಲುಭಾಗ್ಯಸಕಲಗುಣಸಂಪ್ಪಂನ್ನನಾದಾ
ಶೇಖರನ ವರಭಕ್ತ ಶೆರಣಶೇವಿಕನೂ
ಬೊಂಬೆಯಾಟದ ಸಿದ್ದೈಯ್ಯನಾತ್ಮಜನೂ
ಯಲ್ಲಂಮ್ಮನಾ ಪುತ್ರ ಗಂಬೀರಯುತನೂ
ಕವಿಗಳ ಪ್ರೇಮವನು ಮಾಂಬೈಯ್ಯಪೇಳೆ
ಕೋವಿದರು ಲಾಲಿಪುದು ಕೃಪೆಯಿಂದ ಕೃತಿಯಾ
ಬರದವಗೆ ಭಾಗ್ಯ ಅತ್ರೈಸಿದವಗೆ ಐಶ್ವರ್ಯ
ಸ್ವರದಿಂದವೋದಿದಗೆ ಪರಮುಪದವಿಯಂ
ಪ್ವಿರಿದಾಗಿ ಪೇಳಿದರ್ಗ್ಗೀ ಸಾಯೋಜ್ಯಪದವೀವ
ಸರ್ವೇಶನೊಲಿದೂ ಭೂ ಚೆಕ್ರಾದಿಕಾವ್ಯ
ಬುದರು ಲಾಲಿಪುದೂ ಆಚೆಂದ್ರಾರ್ಕವಾಗಿ ರಂಜಿಸಲಿ
ಉಭೆಯಂ ಪದನು ೧೨೨೦ ಕಾಂ ಮಂಗಳ ಮಹಾಶ್ರೀ|| ಶ್ರೀ ಸಾರಂಗಧಾರನ
ಕತೆ ಸಂಪೂರ್ನ ಮಂಗಳಮಹಾಶ್ರೀ ||

ವಿಷಯ : ಸಾರಂಗಧರನ ಕಥೆ.

ವಿಶೇಷ : ೪೪ ನೇ ಪತ್ರ ಮುರಿದಿದೆ. ೪೬, ೪೭ ನೇ ಪತ್ರಗಳಿಲ್ಲ, ಕೆಲವು ಗರಿಗಳ
ಅಂಚು ಮುರಿದಿದೆ.

1903

ಕೆ. ಬಿ. ೩೦೯ | ಸಾರಂಗಧರನ ಚರಿತ್ರೆ | ಯಕ್ಷಗಾನ
೭.೭" × ೬.೪" | ನಂಜುಂಡ | ?
೧-೩೩ ಪತ್ರ | ೧೬ ಪಂಕ್ತಿ | ೨೨ ಅಕ್ಷರ

ಆದಿ : ಸಾರಂಗಧರನ ಕಥೆ ಬರೆವುದಕ್ಕೆ ಶುಭಮಸ್ತು । ಶಾರ್ದೂಲವಿಕ್ರೀಡಿತವೃತ್ತ॥
ಗಂಗಾಭಂಗುರಭಂಗಸಂಗತ ಸಕಾಭೂಷಾಯಿತೇಂದೂಂ ಶಿವಂ
ತುಂಗೋರೋರುಹಸಂಭೃತಾದ್ರ್ರ ಘುಸೃಣಮೋದಾಂಕಿತೋರಸ್ಥಲಂ
ಸಂಗತಪ್ರಿಯಾವಿಷಮಾನತಜನ ವ್ರಾತ್ಯೈಕಚಿಂತಾಮಣಿಂ
ಭೃಂಗೀಶಾರ್ಚಿತಪಾದಮಂಗಚರಿಪುಂ ಸಾರಂಗಪಾಣಿಂ ಭಜೇ ॥ ೧ ॥
ರಾಗ ॥ ಮೋಹನ ॥ ಆದಿ ॥
ಸಲಹೋ ಶ್ರೀ ಮಂಜುನಾಥೇಶ್ವರನೆ
ಕಲಭದಜನುಹರನೆ ॥ ಪಲ್ಲ ॥

ಅಂತ್ಯ : ಪಿಂಜರಿಬೆಟ್ಟದಿ ರಂಜಿಸುತಿರುವಗೆ
ಕುಂಜರಾಸುರ ಹರಗೇ
ಕಂಜಾಪ್ತನೇತ ಗೆ ಭಂಜಿತದೋಷಗೆ
ಮಂಜುನಾಥೇಶಗೆ ನಂಜುಂಡಪೋಷಗೆ ॥ ೪೦೫ ॥
ಸಾರಂಗಧರನ ಕಥೆ ಸಂಪೂರ್ಣ ಮಂಗಳ ಮಹಾ ಶ್ರೀ ಶ್ರೀ ಶ್ರೀ

ವಿಷಯ : ಸಾರಂಗಧರನ ಕಥೆ.

ವಿಶೇಷ : ಅಕ್ಷರಗಳು ಮೋಡಿ. ಸಮಗ್ರ.

1904

ಕೆ. ಬಿ. ೧೨೫ | ಸಾವಿತ್ರೀ ಚರಿತ್ರೆ | ಯಕ್ಷಗಾನ
೭ ೮" × ೬.೩" | ? | ?
೧-೨೮ ಪತ್ರ | ೧೮ ಪಂಕ್ತಿ | ೨೦ ಅಕ್ಷರ

ಆದಿ : ಸಾವಿತ್ರಿಚರಿತ್ರೆ
ನಮಸ್ತೆಯೇಕದಂತನೆ ಅನೇಕ ಮಹಿಮನೆ ಯಿಾಶತನಯನೆ
ಶೇಷಭೂಷಣೆ ದೋಷದೂರನೆ
ವಿಘ್ನನಾಶನೆ ವಿಘ್ನದಾತನೆ

X X X X

ರಾಗಾ। ತಾಳಾ॥ ಕೇಳಲೀ ಕಥೆಯ ಸಜ್ಜನರು ಪರನಾರಿ
ಜಾರರಿಗ್ಯಾಕೀ ಪುಣ್ಯಕಥೆಗಳು
ನಿಂದಿಸುವರಿಗೆ ಮನ್ಸ್ಹೊಳಲು ಇದ
ನೊಂದಿಸುವರಿಗೆ ವಾಸವನ ಮಂದಿರವು
ಅಂಗನೆಯರಿಗಲಂಕಾರವು ಇದು
ಕುಂಭಿಣಿಯೊಳು ಮಿತ್ರಪುತ್ರ ಸಂಪದವೂ ॥ ೬ ॥

ಅಂತ್ಯ : ನಿನ್ನ ನಾನೆಂದೆ ಚಿನ್ಮಯಮೂರುತಿ
ಪನ್ನಗಶಯನ ಪಾಲ್ಗಡಲೊಡೆಯನೆ ಕೃಷ್ಣ
ನಿನ್ನ ನಾನೇನೆಂದೆನೊ ಲಕ್ಷ್ಮೀ ನಿನ್ನ ॥ ೨೮೬ ॥

ವಿಷಯ : ಸಾವಿತ್ರೀ ಕಥೆ.

ವಿಶೇಷ : ಅಕ್ಷರ ಸ್ವಲ್ಪ ಮೋಡಿ.

1905

ಕೆ. ಎ. ೬೯	**ಸಾಳ್ವಭಾರತ**	ಭಾಮಿನೀಷಟ್ಪದಿ
೧೨.೫" × ೭.೭"	ಸಾಳ್ವ	ಸು. ೧೫೫೦
೧-೫೫೨ ಪತ್ರ	೨೬ ಪಂಕ್ತಿ	೨೫ ಅಕ್ಷರ

ಆದಿ : ಭಾಮಿನೀ ಷಟ್ಪದಿ
ಶ್ರೀಮದಮರಾಧೀಶ ವಂದಿತ
ನೇಮಿನಾಥ ಚರಿತ್ರವನು ಪು
ಣ್ಯಾಮ್ರುತವನಾಲಿಪರ ಕರ್ನ್ನರಸಾಯನವನುಸುರ್ವೆ ॥
ಪ॥ ಶ್ರೀದಿವಿಜನರನಾಗಪತಿ ನುತ
ಪಾದಯುಗ ನಪ ....
....
....ಯಾಂಬುಧಿ ಸಮವಶ್ರುತಿ ವಿ
ಬೋದಯಂ ಕಲ್ಯಾಣ ಪಂಚಕ
ನಾದ ನೇಮಿಜಿನೇಂದ್ರನೀಗೆಮಗಮ್ರುತ ಸಂಪದವಾ ॥ ೧ ॥

X X X X

ರಾಜಸಭೆಯೊಳು ಮಾನ್ಯ ಸತ್ಕವಿ
ರಾಜಿಯೊಳು ಮಿಗೆ ಪೂಜ್ಯನುರುಜಿನ
ರಾಜಪದನಿಧಿ ದೀಪವರ್ತಿವಿನೆಯ ವಾತ್ಸಲ್ಯಾ
ಸಾಜಕವಿ ಕರ್ಣಾಟಲಕ್ಷಣ
ದೋಜೆಗನು ಕವಿ ಸಾಳ್ವನಿಂ ಜಿನ
ರಾಜಚರಿತೆಯ ಭಾಮಿನಿಷಟ್ಪದಿಯಲುಸುರೆಂದೂ || ೩೪ ||

ಅಂತ್ಯ : ಯೆಸೆವ ಸುರತರು ಜನಿತಮಾಲಾ
...... ಸ....... ನ ಮುಖ್ಯಮಂಗಲ
ವಿಸರ ವಸ್ತೂತ್ಕರದಿ ದೇವಾನಕವು ಘೂರ್ನಿಸಲೂ
ಅಸವಸದ ನಿರ್ವ್ವಾಣ ಪೂಜೆಯ
....
.... ||
...... ದರ ಶಿಷ್ಯರು ಮಾಣಿಕಂಣಗಳ ಜಿಯನವರಿಗೆ ಬಿದಿರುನಾಡಗೊಳಿಗೊಡ ತಿಂಮಯ್ಯಸೇನಬೋವರ ಮಗ ಮಹಬಲ ಲಿಂಗ ಬರದುಕೊಟ್ಟ ಸಾಳುವ ಕವಿಯ ಹರಿವಂಶದ ಭಾರತಕ್ಕೆ ಮಂಗಲ ಮಹಾಶ್ರೀ.

ವಿಷಯ : ಹರಿವಂಶ, ಕುರುವಂಶದ ಚರಿತ್ರೆ.

ವಿಶೇಷ : ಪತ್ರದ ಒಂದುಕಡೆ ಮಾತ್ರ ಬರೆದಿದೆ. ೪೦೦ ಕ್ರಮಸಂಖ್ಯೆಯ ಮೂರು ಪತ್ರಗಳಿವೆ. ಗ್ರಂಥದ ಆದಿಯ ಬೇರೆ ಎರಡು ಪತ್ರಗಳಲ್ಲಿ ವಿಷಯಸೂಚಿಯಿದೆ. ಅಕ್ಷರಗಳು ಬಹು ಸುಂದರ ಮತ್ತು ಸ್ಫುಟ.

1906

ಕೆ ೪೬೨	ಸಾಳ್ವ ಸಾಂಗತ್ಯ	ಸಾಂಗತ್ಯ, ಗದ್ಯ
೬.೧″ × ೨.೨″	ಸಾಳ್ವ	ಸು. ೧೫೫೦
೧-೩೮ ಪತ್ರ	೧೨ ಪಂಕ್ತಿ	೨೫ ಅಕ್ಷರ

ಆದಿ : ಸಾಳ್ವನ ಸಾಂಗತ್ಯ
ಶ್ರೀ ದಿವಿಜೇಂದ್ರ ವಂದಿತ ಪಾದಪದ್ಮಗೆ
ಆದಿ ಮದ್ಯಾಂತರಹಿತಗೆ
ಮೇದಿಸಿಗಧಿಕ ಬೆಳ್ಳುಗುಳ್ಳ ಗುಂಮ್ಮಟಜಿನ
ಗಾಥಾರದಿಂದೆರಗುವೆನೂ || ೧ ||

X X X X

ವರ ದಾರ ಮುನಿಯುದಾರಿಣಿ ಸ್ನಾಯುನಸೆಯು
ವುರುತರ ತಂತ್ತು ಜೀವಿತಗ್ಯ
ವುರುವ ಹಿಂಸೆಗಳಿಂದು ಪರಿಯಾಯ ನಾಡಿಗೆ
ಗರುವ ಸಾಳ್ವನ ಮತದಿಂದಾ ॥ ೩ ॥

ಅಂತ್ಯ : ಹದಿನಾಲ್ಕು ಗುಳಿಗೆ ಕಟ್ಟಿ ಯೋಳು ದಿನ ದಿವಾ ರಾತ್ರೆ ಸೇವಿಸಲು, ಕಾಲು ಬಾಯಿ ಸೊಲ್ಪ ಕಟೂದು ಯಿದಕ್ಕೆ ಬೆಣತಕ್ಕಿ ತವುಡ ಹುರಿದು ಶಾಕವ ಕೊಡಲು ಬಿಡೂದೂ, ಪತ್ಯ ಸಪ್ಪೆ ಹಾಲು ಅಂನ್ನಾ, ಯೋಳು ದಿನ ಮರು ಪತ್ಯ ಯೋಳು ದಿನ ಯಿರಲೂ, ಪುರುಷ ಮೋಹ ಮಾಣೂದೂ ॥

ವಿಷಯ : ವೈದ್ಯ.

ವಿಶೇಷ : ಇದರ ಜೊತೆಯಲ್ಲಿ ವೈದ್ಯ ಮತ್ತು ಸ್ವರ ಚಿಂತಾಮಣಿಗೆ ಸಂಬಂಧಿಸಿದ ಬೇರೆ ೫ ಪತ್ರಗಳಿವೆ.

1907

ಕೆ. ೫೦೧	**ಸಿಂಗಿರಾಜಪುರಾಣ**	ವಾರ್ಧಕಷಟ್ಪದಿ
೧೨.೬″ × ೨″	ಸಿಂಗಿರಾಜ	೧೫೦೦
೧–೧೫೮ ಪತ್ರ	೧೦ ಪಂಕ್ತಿ	೭೬ ಅಕ್ಷರ

ಆದಿ : ಶ್ರೀ X X ಬಸವೈಯ್ಯನು ಶಿಂಗಿರಾಜ ಪುರಾಣ ಬರೆಯುವದಕ್ಕೆ ನಿರ್ವಿಘ್ನ ಮಸ್ತು X X

ವಾರ್ಧಿಕಷಟ್ಪದಿ ॥ ಶ್ರೀ ಷಡ್ಗುಣೈಶ್ವರ್ಯ ಸಂಪಂನ ಬಸವ ಗುರು
ವೇಷಮಂ ಧರಿಸಿ ಮರ್ತ್ಯದಿ ಭಕ್ತರುಗಳನುರೆ
ಪೋಷಿಸಿದ ಕಾರಣವ ಕೃತಿಮಾಳ್ಪೆ
ಸದುಭಕ್ತ ಜನರರಿವ ಮಾಳ್ಕೆಯಿಂದಾ ॥
ಪದನೂ॥ ಶ್ರೀಮದಮರೇಂದ್ರಾರ್ಚಿತಂ ಪರಾತ್ಪರಮ ನಿ
ಸ್ಸೀಮನದ್ವಯನತುಳನನಘ ನಿಗಮಾಗಮ
ಸ್ತೋಮ ಸಂಸ್ತುತ್ಯಗೋಚರ ನಿರಾಲಂಬ ನಿಶ್ಚಿಂತ ನಿಜನಿತ್ಯಮೂರ್ತಿ
ಪ್ರೇಮದಿಂ ಜನಾರ್ದನಜ ಮನುಮುನಿಪ ಯಕ್ಷ ಖಚ
ರಾಮರ ಮುನೀಶ್ವರರ್ಗಖಿಳ ಸಂಪದವಿತ್ತು
ಸ್ವಾಮಿಕಾಶೀಪುರಾಧಿಪ ವಿಶ್ವಪತಿ ಕರ್ತುನೆಲಸೆಂಮ
ಹೃದಯದೊಳಗೆ ॥ ೧ ॥

X X X X

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲ ವಚನ ರಚ
ನಾಮಹಾ ವಸ್ತು-ವಿಸ್ತೀರ್ಣಮಂ ಸ್ಥಲವಿಟ್ಟನಾಮಂತ್ರ ರಹಸ್ಯಾದಿಯಾ
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಂಮೃತಾ ಕೃತಿಯ ವಿಶ್ವೇಶನಮಲಪದ
ತಾಮರಸ ಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ ॥ ೧೧ ॥

ಅಂತ್ಯ : ರಾಜಸೇಖರ ವಿಶ್ವನಾಥ ಪದಪಂಕೇಜ
ರಾಜಿತಾನಂದ ಷಟ್ಚರಣ ಶಿವಕವಿಶಿಂಗಿ
ರಾಜ ವಿರಚಿತ ಹರಕಥಾ ಶರಧಿಗೆಸವ ದ್ವಿಜರಾಜನೆನಿಪಮಲಬಸವ
ರಾಜ ಚಾರಿತ್ರದೊಳು ಸದ್ಭಕ್ತಿಯುಂನತ ವಿ
ರಾಜಿಪ ಪವಾಡದರುವತ್ತು ನಾಲ್ಕರೊಳು ವಿ
ಭ್ರಾಜಿತಂ ಶ್ರೀ ಭಾವವಾದ ಮುಕ್ತಕಪಾದತೀರ್ಥಮಂ ಮೆರದ ಸಂಧಿ
॥ ೪೯ ॥

ಅಂತು ಅಧ್ಯಾಯ ೪೮ ಕ್ಕಂ ಪದವಚನಸಹ ೧೪೦೭ ಕಂ ಜಯಮಂಗಳಂ ಮಹಾಶ್ರೀ

ಶ್ರೀ ಗುರು ಸಚಿದಾನಂವ ನಿತ್ಯಪರಿಪೂರ್ಣ ಅವಿರಳ ಪರಂಜೋತಿ ಜ್ಞಾನಾನಂದ ಮಯಾಸುಧಾರ್ನವ ಪೇನಪ್ರಭಾರತ್ನ ಪ್ರಕೀರ್ಣ ಮಂಜರಿತಮಹಂತ ಚಕ್ರೇಶ್ವರರಾದ ವಿರಕ್ತ ದೇವದೇಶಿಖಶಿಖಾಮಣಿಗಳವರ ಪಾದಕಮಲ ಪರಂಗದ್ವಿರೇಭನಾದ ಬಸವಪೌರಾಣಿಕ ಬರದುವಪ್ಪಿಸಿದ ಶಿಂಗಿರಾಜ ಪೌರಾಣ ಬಸವಲೀಲೆ ಬಸವಲಿಂಗಾಯ ನಮಃ

ವಿಷಯ : ಬಸವೇಶ್ವರನು ಮೆರೆದ ಪವಾಡಗಳು

ವಿಶೇಷ : ಗ್ರಂಥದ ಕೊನೆಯಲ್ಲಿ 'ಶಾಲಿವಾಹ ಶಖಾಬ್ದ ವರುಷಗಳು ಶುಕ್ಲ ಸಂವತ್ಸರದ ಮಾರ್ಗಿಶಿರ ಕೃಷ್ಣಪಕ್ಷ ೧೧ ಸೌಮ್ಯವಾರಕ್ಕೆ ಸಂಪೂರ್ಣ ಜಯಮಂಗಳಾನಿ ಭವಂತು ಪುತ್ರಾಭಿವೃದ್ಧಿರಸ್ತು ಎಂದಿದೆ. ೨ ನೆಯ ಪತ್ರ ಅರ್ಧಕ್ಕೆ ಮುರಿದಿದೆ. ೭೮, ೧೨೫, ೧೨೬ ನೆಯ ಪತ್ರಗಳು ಲುಪ್ತ. ಗ್ರಂಥಾಂತ್ಯದಲ್ಲಿ ಈಶ್ವರಪೀಠದ ಚಿಹ್ನೆಯೂ ಅದರ ಮುಂದೆ ಒಂದು ಪ್ರಾಣಿಯ ಚಿತ್ರವೂ ಇವೆ. ಅಕ್ಷರಗಳು ಸಣ್ಣಗಿದ್ದರೂ ಸ್ಫುಟವಾಗಿವೆ.

1908

ಕೆ. ಬಿ. ೧೬೨ ಸಿಂಗಿರಾಜ ಪುರಾಣ ವಾರ್ಧಕಷಟ್ಪದಿ
೭.೮"×೬.೪" ಸಿಂಗಿರಾಜ ೧೫೦೦
೧—೨೮೩ ಪತ್ರ ೨೦ ಪಂಕ್ತಿ ೨೦ ಅಕ್ಷರ

ಆದಿ : ಸಿಂಗಿರಾಜ ಪುರಾಣ ಬರಿಯುವುದಕ್ಕೆ ಶುಭಮಸ್ತು X X X
ವಾರ್ಧಕಷಟ್ಪದಿ ॥ ಶ್ರೀ ಷಡ್ಗುಣೈಶ್ವಯ ಸಂಪಂನ ಬಸವಗುರು
ವೇಷಮಂ ಧರಿಸಿ ಮರ್ತ್ಯದಿ ಭಕ್ತರುಗಳನುರೆ
ಪೋಷಿಸಿದ ಕಾರಣವಾಕೃತಿಯ ಮಾಳ್ಪ ಸದುಭಕ್ತಜನರರಿವ ಮಾಳಿ
ಯಿಂದ
ಪದನು ॥ ಶ್ರೀಮದಮರೇಂದ್ರಾರ್ಚಿತಂ ಪರಾತ್ಪರಮ ನಿ
ಸ್ಸೀಮನದ್ವಯನತುಳನನಘ ನಿಗಮಾಗಮ
ಸ್ತೋಮ ಸಂಸ್ತುತ್ಯಗೋಚರ ನಿರಾಲಂಬ ನಿಶ್ಚಿಂತ ನಿಜನಿತ್ಯಮೂರ್ತಿ
ಪ್ರೇಮದಿ ಜನಾರ್ದನಜ ಮನುಮುನಿಪ ಯಕ್ಷಖಚ
ರಾಮರ ಮುನೀಶ್ವರರ್ಗಖಿಳ ಸಂಪದವಿತ್ತ
ಸ್ವಾಮಿ ಕಾಶೀಪುರಾಧಿಪ ವಿಶ್ವಪತಿಕರ್ತು ನೆಲಸೆಂನ ಹೃದಯದೊಳಗೆ
॥ ೧ ॥

X X X X

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲ ವಚನ ರಚ
ನಾಮಹಾವಸ್ತು ವಿಸ್ತೀರ್ಣಮಂ ಸ್ಥಲವಿಟ್ಟನಾಮಂತ್ರ ರಹಸ್ಯಾದಿಯ
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ರಾಮರಸ ಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ
॥ ೧೧ ॥

ಅಂತ್ಯ : ರಾಜಶೇಖರ ವಿಶ್ವನಾಥ ಪದಪಂಕೇಜ
ರಾಜಿತಾನಂದ ಷಟ್ಚರಣ ಶಿವಕವಿ ಸಿರಗಿ
ರಾಜ ವಿರಚಿತ ಹರಕಥಾ ಶರಧಿಗೆಸವದ್ವಿಜರಾಜನೆನಿಪಮಲಬಸವ
ರಾಜ ಚಾರಿತ್ರದೊಳು ಸದ್ಭಕ್ತಿಯುಂನತ ವಿ
ರಾಜಿಪ ಪವಾಡದರುವತ್ತು ನಾಲ್ಕರೊಳು ವಿ
ಭ್ರಾಜಿತಂ ಕ್ರೀಮಿಾವ ವಾದ ಮುಕ್ತಕ ಪಾದತೀರ್ಥಮಂ ಮೆರದ ಸಂಧಿ
॥ ೫೧ ॥

ಅಂತು ಅಧ್ಯಾಯ ೪೮ಕ್ಕಂ ಪದ ೧೮೫೧ಕ್ಕಂ ಮಂಗಳಮಹಾಶ್ರೀ

ವಿಷಯ : ಬಸವೇಶ್ವರನು ಮೆರೆದ ಪವಾಡಗಳು.

ವಿಶೇಷ : ಪ್ರತಿಯೊಂದು ಪುಟದಲ್ಲಿಯೂ ಬಣ್ಣದ ಚೌಕಟ್ಟುಗಳಿವೆ. ೧೭೨ ರಿಂದ ೨೪೨ರವರೆಗಿನ ಪತ್ರಗಳು ಅಲ್ಲಲ್ಲಿ ಹರಿದಿವೆ; ಶಿಥಿಲವಾಗಿವೆ. ೨೦೧ ಪತ್ರಸಂಖ್ಯೆ ಬಿಟ್ಟುಹೋಗಿದ್ದರೂ ವಿಷಯಲೋಪವಿಲ್ಲ. ಗ್ರಂಥದ ಕೊನೆಯಲ್ಲಿ ಹಲವು ಶುದ್ಧ ಪತ್ರಗಳಿವೆ.

1909

ಕೆ. ೪೪೨/೨	**ಸಿದ್ಧನೀತಿ**	ಕಂದ
೮″ × ೧.೨	ರೇವಣಸಿದ್ಧಪ್ಪ	?
೧–೨೦ ಪತ್ರ	೫ ಪಂಕ್ತಿ	೪೦ ಅಕ್ಷರ

ಆದಿ : ಸಿದ್ಧನೀತಿ ಬರವುದಕ್ಕೆ ಶುಭಮಸ್ತು
ಗುರುವೆಂಬುದು ಯರಡಕ್ಷರ ಮಂ
ಅನುವರಿತಂ ನೆನವೂತಿರಲೂ
ಧುರಿತಂ ಕೆಡುಗೂಂ ಹರಚರಣಂ
ದೊರಕೊಂಭುದು ಶ್ರೀಗುರುವಿನ ಪಾದಾರದಿಂದಾ ಸದ್ಗುರುವಂ ನೆನೆಯ್ಯೆ ॥ ೧ ॥

ಶ್ರೀಗುರುಲಿಂಗಕ್ಕೆ ಶರಣೆಂಬೆ
ಗಂಗೆ ಗೌರಿ ವೀರಭದ್ರ ಬಸವ ವಿನಾಯಕಾ
ಭೋಗದಲಿ ಅಜಹರಿ ರುದ್ರರು
ಯಾಗ್ಯೆದು ವರವ ನೀವಾ ಸಿದ್ಧಗೆ ಮತಿಯಂ ॥ ೨ ॥

ಅಂತ್ಯ : ಕೇಳುವದು ಸಿಧನೀತಿಯ
ತಾಳಿಂನದೆ ನಿಮ್ಮ ಕರುಣಾವೂಳ್ಲಾವದೆಲ್ಲಂ
ಬಾಳಾಕ್ಷ ಕೊಟ್ಟ ಮತಿಯೊಳೂ
ಹೇಳಿದ ತೈಲೂರ ಲಕ್ಕರೇವಣ ಸಿದ್ಧಾ ॥ ೧೧೪ ॥

ಕಳುಲೆ ನಾಡೊಳು ಪುಟ್ಟಿದಾ
ವುಳಿದೊಂದಕ್ಷರಕೆ ನೀತಿವಂತರಿಗೆಲಂ
ತಿಳಿಯಲು ಭುಧ್ಧಿಯನು ಪೇಳಿದಾ
ಯಿಳೆಯೊಳು ತೈಲೂರ ಲಕ್ಕಪ್ಪನ ಮಗ ಸಿದ್ಧಪ್ಪಂ ॥ ೧೧೫ ॥

ಸಿದ್ಧನೀತಿ ಸಂಪೂರ್ನಂ ಮಂಗಳ ಮಹಾಶ್ರೀ

ವಿಷಯ : ನೀತಿ ಪದ್ಯಗಳು.

ವಿಶೇಷ : ಗ್ರಂಥಕರ್ತೃವಿನ ತಂದೆ ಹೆಸರು ತೈಲ್ರ ಲಕ್ಕಪ್ಪ. ಸ್ಥಳ ಕಳಲೆ. ಅಶುದ್ಧ ಪ್ರತಿ. ಇದೇ ಕಟ್ಟಿನಲ್ಲಿ ಗುರುಭಕ್ತಾಂಡಾರಿಯ ಚರಿತ್ರೆ ಎಂಬ ಕೃತಿ ಇದೆ.

1910

ಕೆ. ಬಿ. ೨೭೩	**ಸಿದ್ಧರಾಮು ಕಥೆ**	ಸಾಂಗತ್ಯ
೮.೩″ × ೬.೬″	ಮಲ್ಲಿಕಾರ್ಜುನ	?
೧-೧೫ ಪತ್ರ	೨೫ ಪಂಕ್ತಿ	೩೩ ಅಕ್ಷರ

ಆದಿ : ಸಿದ್ಧರಾಮನ ಕಥೆ ಸಾಂಗತ್ಯ ಕಂದಪದ್ಯ || ಪಶುಪತಿ ಪರಮಾನಂದ ಪರಮ ಕಲ್ಯಾಣ ಕಾಸೀಕೇತಾರ ಪೊಂಪಾಕ್ಷೇತ್ರ ಪರಮುತನಂಜುಂಡ ಸಿವಗಂಗಾಧರನಮಃ ಶಿವಾಯಃ ||

ರಾಗ ಸಾಂಗತ್ಯ || ಆದಿಗಣೇಶನ ಪಾದಪೂಜೆಯ ಮಾಳ್ಪ
ಸಾಧಕದೇಶಿಕ ಗಣನು
ವಾದಿಸಿ ರುದ್ರಮುನಿಯು ಶಾಪವನಿತ್ತ
ಮೂದೇವನೆಂದ ಚಿತ್ರಗುಪ್ತಾ || ೧ ||

ಹಿಂದಳ ನಾಮವು ದೇಶಿಕ ಗಣನಾಥ
ವ ಎಂದೆ ಹುಚ್ಚ ಹಾಲನೆನಿಸಿ
ಬಂದು ಮರ್ತ್ಯದಿ ಹುಟ್ಟಿ ನಿಮ್ಮ ಕಂದನೈದಾನೆ ಸ್ವಾಮಿ
ಯಂದು ಹೇಳಿದ ಚಿತ್ರ ಗುಪ್ತಾ ||

ಅಂತ್ಯ : ಕಲಿಗಳು ತಾವು ಬಲ್ಲಲಿ ಕೇಲಿಮಾಡಿದ
ಸೊಲ್ಲಲ್ಲ ಪರಮಾತ್ಮದೊಡಲೂ
ಮಲ್ಲಿಕಾರ್ಜುನ ಶರಣರು ಲಾಲಿಪುದೆನೆ
ಯಿಲ್ಲಿಗೆ ಯರಡನೆ ಸಂಧೀ ||

ಹಾಲ ಸಿದ್ಧೇಶರ ಜಗದ್ಭರಿತ ಜಗನ್ಮಾತೆ ಗಂಗೆ ಗೋದಾವರಿ ತುಂಗಭದ್ರೆ ಹಿಮಕೆ ವೇಣಕ ಗೋಕರ್ನ ಕುಂಭಕೋಣ ಕಾಮೇಶ್ವರ ರಘುತಾದ್ರಿ ನಮಃ ಶಿವಾಯಃ ಅಂತು ಸರಧಿ ೨ ಕಾಂ ಪದ ೪೪೬ ಕಾಂ ಮಂಗಳ ಮಹಾ ರಾಂಪುರದ ಸಿದ್ಧರಾಮನ ಕಥೆ ಸಂಪೂರ್ನ ಮಂಗಳ ಮಹಾ

ವಿಷಯ : ರಾಮಪುರದ ಹಾಲಸ್ವಾಮಿಯ ಕಥೆ.

ವಿಶೇಷ: ಹೊರಗಿನ ಬೈಂಡನ್ನು ಅಲ್ಲಲ್ಲಿ ಹುಳುತಿಂದಿದೆ. ಅಕ್ಷರಗಳು ಬಹು ಸಣ್ಣಗಿವೆ.

1911

ಕೆ.ಎ. ೨೯೮	ಸಿದ್ಧರಾಮಚಾರಿತ್ರ	ವಾರ್ಧಕಷಟ್ಪದಿ
೧೩.೪" × ೮.೨"	ರಾಘವಾಂಕ	ಸು. ೧೨೫೦
೧–೧೪೨ ಪುಟ	೨೪ ಪಂಕ್ತಿ	೧೮ ಅಕ್ಷರ

ಆದಿ: ರಾಘವಾಂಕ ವಿರಚಿತಂ ಸಿದ್ಧರಾಮೇಶ್ವರ ಪುರಾಣಂ ||
ಸೂಚನೆ || ಭೂವಳಯದೊಳಗುಳ್ಳ ಸರ್ವಜೀವಾಳಿಗಳ
ಪಾವನವ ಮಾಡಲೆಂದನುಗೆಯ್ದು ಶಿವಸಿದ್ಧ
ಜಾವಳನೆ ದೇವಕುಲಕರ್ತ ಮರ್ತ್ಯದೊಳು ಜನಿಸಿದನು ಸುರರುಘೆ ಯೆನುತಿರೆ ||
ಶ್ರೀಮದುರತರ ಬಳೋದಗ್ರ ವಿಗ್ರಹನಚಳ
ಸೋಮ ರಾಮಾಮೃತ ಜಟಾಪಟಲ ವೇಷನ
ನಾಮಯ ಭಯಾತೀತ ನೂತನಾಂಗಂ ಮಂಗಳೋದಯ ದಯಾಭರಿತನು
ಪ್ರೇಮದಿಂದೆಮಗೆ ಭಕ್ತಿಯನೀಗೆ ಶಿವಶಿದ್ಧ
ರಾಮನಭಿರಾಮ ವಿಶ್ರಾಮನುದ್ಧಾಮ ಜಿತ
ಕಾಮನರಿಭೀಮ ನುತದಾಮ ಸುಖಧಾಮ ಮಾಯಾಮಥನ ಸಂಗ್ರಾಮನೂ ||೧||

X X X X

ಕೃತಿವೆಸರು ಶ್ರೀ ಸಿದ್ಧರಾಮಚಾರಿತ್ರವೀ
ಕೃತಿಗೊಡೆಯನಾ ಜಗದ್ಗುರು ಸಿದ್ಧರಾಮನೀ
ಕೃತಿಯ ಪಾಲಕರು ಗುರುಭಕ್ತರೆನಿಪೆಕ್ಕೆವಿಂಡುಗಳೀಗ ಪೇಳ್ದಾತನು
ಚತುರ ಕವಿರಾಯ ಹಂಪೆಯ ಹರೀಶ್ವನ ವರ
ಸುತನುಭಯಕವಿ ಕಮಳರವಿ ರಾಘವಾಂಕ ಪಂ
ಡಿತನಂದಡಧಿಕತರ ರಸದ ಲಹರಿಯನು ಬಣ್ಣಿಸುವರಾರೀ ಧರೆಯೊಳು || ೧೨ ||

ಅಂತ್ಯ: ಗುರುಭಕ್ತರೆಲ್ಲ ಪುಳುಕಿಸಿ ಕೇಳ್ದರಾರವರು
ಪರಮ ಸುಖವಟ್ಟು ದುರ್ನೀತಿಯಂ ಬಿಟ್ಟು ಶಂ
ಕರ ಭಕ್ತಿಯಂಳವಟ್ಟು ಧನ್ಯರಪ್ಪಂತು ಈ ಕಾವ್ಯಮಂ ಪೇಳ್ದದೆಸೆಯಿಂ
ಧರೆಯೊಳು ಸುವೃಷ್ಟಿ ಸುಫಲಂ ಕ್ಷೇಮ ಧಾನ್ಯಮಂ
ಕರುಣಿಸುಗೆ ಸರ್ವಭೂಪಾಲರವನೀತಳವ
ಸ್ಥಿರವಾಗಿ ಪಾಲಿಸುಗೆ ಶ್ರೀಗುರು ವಿರೂಪಾಕ್ಷನೊಲಿದು ಭಕ್ತರ ಸಲಹಲು ||೬೩||

ಇಂತೀ ಶ್ರೀಮಚ್ಚತುರ ಕವಿರಾಯ ಹಂಪೆಯ ಹರೀಶ್ವರನ ವರಸುತನಪ್ಪ ಉಭಯ ಕವಿ ಕಮಲರವಿ ರಾಘವಾಂಕಪಂಡಿತನಿಂ ವಿರಚಿತಮಪ್ಪ ಸಿದ್ಧ ರಾಮೇಶ್ವರ ಪುರಾಣದೊಳ್ ನವಮ ಸಂಧಿ ಸಮಾಪ್ತಂ.

ವಿಷಯ : ಸಿದ್ಧರಾಮನ ಚರಿತ್ರೆ.

ವಿಶೇಷ : ಪದ್ಯಗಳಲ್ಲಿ ಪಾದವಿಭಾಗವಿದೆ. ಅಕ್ಷರಗಳು ಸ್ಫುಟವಾಗಿವೆ.

1912

ಕೆ. ಎ. ೨೫೫	**ಸಿದ್ಧಲಿಂಗ ಕಾವ್ಯ**	**ವಾರ್ಧಕ ಷಟ್ಪದಿ**
೧೩" × ೮"	**ಬಸವಕವಿ**	**೧೮೮೭**
೧-೨೮೧ ಪತ್ರ	**೧೧ ಪಂಕ್ತಿ**	**೧೯ ಅಕ್ಷರ**

ಆದಿ : ಸಿದ್ಧಲಿಂಗಕಾವ್ಯ ಸರ್ವಜಿನ್ನಾಮ ಸಂವತ್ಸರದ ಆಷಾಢ ಬ ೫ ಲ್ಲು
ಸಿದ್ಧಲಿಂಗ ಕಾವ್ಯಮಂ ಬರಿಯುವದಕ್ಕೆ ಶುಭಮಸ್ತು ವಾರ್ಧಿಕ ||
ಶ್ರೀಪರಮ ಪರಶಿವಂ ಪಾರ್ವತೀವಲ್ಲಭಂ
ಶ್ರೀಪತಿ ಮುಖ ಸುರನಿಕರಮಂ ಕೂಡಿ ಕೈಲಾಸ
ದಾಪಟ್ಟಣದೊಳಭನೊಪ್ಪಿರ್ದನೊ ಲಗದೊಳತಿ ವಿಭವದಿಂ ಸುಖದೊಳು
ಕಂಥೆ ಸಿದ್ಧೇಶ್ವರಂ ಭೂತಳಕ್ಕೈತಂದು
ಶಾಂತವ್ವೆಯಂ ಮದುವೆಯಾಗಿ ಮಾಕೆರೆಯನುರೆ
ಸಂತೋಷದಿಂ ಕಟ್ಟಿಸಿದ ಕಥೆಯಿದನಿಶಮುಂ ಕೇಳ್ವದೆಲ್ಲಾ ಸುಜನರೂ ||
ಶ್ರೀ ಮದಗಜಾರಮಣನುರಗಪತಿ ಭೂಷಣಂ
ತಾಮರಸ ನೇತ್ರಾರ್ಚಿತಾಘ್ರಿನತಪೋಷಣಂ
ವ್ಯೋಮ ಕುಂತಲನಮರರಾಜನುತಪಾದಾರವಿಂದನಭವಂ ಸಜ್ಜನ
ಸ್ತೋಮ ಪರಿಪಾಲಕಂ ಪಾವನಂ ಪಂಚಮುಖ
ನಾಮೋದನಮಳತರನಜಶಿರಚ್ಛೇದನಂ
ಪ್ರೇಮದಿಂ ಪೊರೆಗೆಮ್ಮನಂ ಸತತಮಿಾಶ್ವರಂ ವೇಶ್ಯಾತಟಾಕೇಶ್ವರಂ ||೧||

ಅಂತ್ಯ : ಗುರುವರೇಣ್ಯಂ ಪರಮಲಿಂಗ ನಿಷ್ಠಾಪರಂ
ಹರಚರಣ ಸರಸಿರುಹಷಟ್ಪದಂ ಸನ್ಮಾರ್ಗ
ನುರುಮತ್ತಿ ಮಠದೀಶನಾರ್ಯಾಬ್ಧಿಚಂದ್ರಮಂ ಗುರು ಚನ್ನಬಸವೇಶನ

ವರಪಾಣಿ ಸರಸಿರುಹ ಸಂಭವಂ ಬಸವಕವಿ
ವಿರಚಿಸಿದನೀ ಸಿದ್ಧಲಿಂಗೇಂದ್ರ ಕಾವ್ಯಮಂ
ಹರುಷದಿಂ ಸದ್ಭಕ್ತರೊಲವಿನಿಂ ಕೇಳ್ದದಂ ಶಿವನ ಕೃಪೆಯಂ ಪಡೆವುದು
|| ೨೧ ||

ಅಂತು ಸಂಧಿ ೧೫೫ಕ್ಕಂ ಪದನು ೪೩೮೮ಕ್ಕಂ ಮಂಗಳಮಹಾಶ್ರೀ ಸಂಪೂರ್ಣಂ

ವಿಷಯ : ವಿಕ್ರಮಭೂಪನ ಕಾಲದಲ್ಲಿ ಪರಮೇಶ್ವರನು ಕಂಥೆ ಸಿದ್ಧೇಶ್ವರನಾಮ ದಿಂದ ಅವತರಿಸಿ ಮೆರೆದ ಕಥೆ.

ವಿಶೇಷ : ಪ್ರತಿಯೊಂದು ಪತ್ರದಲ್ಲಿಯೂ ಒಂದೇಕಡೆ ಬರವಣಿಗೆಯಿದೆ. ಗ್ರಂಥದ ಆದಿಯ ಬೇರೆ ೮ ಪತ್ರಗಳಲ್ಲಿ ಈ ಕೃತಿಗೆ ಸಂಬಂಧಿಸಿದ ವಿಷಯಾನು ಕ್ರಮಣಿಕೆಯಿದೆ ಮತ್ತು ಕೊನೆಯಲ್ಲಿ ೨೭೫–೨೮೧ ನೆಯ ಪತ್ರಗಳಲ್ಲಿ ಎರಡು ಮಂಗಳಾರತಿಗಳೂ, ಕಥಾಸಾರವಚನವೂ ಇವೆ.

1913

ಕೆ. ೭ ೧೮೨	**ಸಿದ್ಧಲಿಂಗ ಚಾರಿತ್ರ**	ಸಾಂಗತ್ಯ
೧೨ ೬″×೭.೭″	ಹೇರಂಬ	?
೧-೨೦೮ ಪುಟ	೨೦ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ಸಿದ್ಧಲಿಂಗ ಚರಿತ್ರೆಯನ್ನು ಬರೆಯುವದಕ್ಕೆ ನಿರ್ವಿಘ್ನಮಸ್ತು x x
ಶ್ರೀಮದ್ಗೌರಿಯ ಭಾಗ್ಯ ಪುಣ್ಯೋದಯ
ಕಾಮಿತ ಫಲ ಸುಪ್ರದಾಯಾ
ಸಾಮಜ ಮುಖನೆ ಬ್ರಹ್ಮಾಂಡೋದರ ಜೀಯ
ಸ್ವಾಮಿ ಶರಣು ಕೊಡು ಮತಿಯಾ || ೧ ||

ವೇದ ವೇದಾಂತವೇದ್ಯಾನಂದ ಮೂರ್ತಿ
ಯಾದಿಮಧ್ಯಾಂತರಹಿತನೇ
ನಾದ ಬಿಂದು ಸಕಳಾತೀತ ನಿರ್ವಿಘ್ನೆ
ಸಾಧಕ ಕರಿಮುಖ ಸಲಹೊ || ೨ ||

ಅಂತ್ಯ : ರಸಿಕ ಹೃತ್ಕುಮುದ ಚಂದ್ರೋದಯ ಕಾವ್ಯವ
ಕುಶಲರು ಕೇಳಿ ಲಾಲಿಸಲು
ವಸದು ಪಾಲಿಸುವ ನಿರಂಜನಗಣಪ ಸಂ
ತಸವೀವ ಘನಪುರಿವಾಸಾ || ೧೦೧ ||

ಅಂತು ಸಂಧಿ ೨೫ ಕ್ಕಂ ಪದನು ೧೯೫೫ ಕ್ಕಂ ಮಂಗಳ ಮಹಾಶ್ರೀ ಸಂಪೂರ್ಣವು

ವಿಷಯ : ಎಡೆಯೂರ ಸಿದ್ಧಲಿಂಗೇಶ್ವರನ ಚರಿತ್ರೆ.

ವಿಶೇಷ : ಮಧ್ಯೆಮಧ್ಯೆ ಕೆಲವು ಪದ್ಯಗಳ ಚರಣಗಳ ಲುಪ್ತವಾಗಿವೆ. ಅಲ್ಲಲ್ಲೆ ಹುಳುತಿಂದಿರುವುದರಿಂದ ಪತ್ರಗಳಲ್ಲಿ ಸಣ್ಣ ಸಣ್ಣ ರಂಧ್ರಗಳು ಕಾಣುತ್ತಿವೆ.

1914

ಕೆ. ೭೫/೧೧	**ಸಿದ್ದಲಿಂಗದೇವರ ವಚನಗಳು**	ವಚನ
೧೦.೭″ × ೨.೨″	ಗುಂಮಳಾಪುರದ ಸಿದ್ಧಲಿಂಗದೇವರು	ಸು ೧೪೮೦
೨೪೮–೨೫೨ ಪತ್ರ	೧೭ ಪಂಕ್ತಿ	೭೫ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ಗುಂಮಳಾಪುರದ ಸಿದ್ಧಲಿಂಗದೇವರು ನಿರೂಪಿಸಿದ ಷಟ್‌ಸ್ಥಲದ ಲಿಂಗಾಂಗ ಸಂಬಂಧದ ನಿರ್ವ್ವಚನ ॥ ಪ್ರಥಮದಲ್ಲಿ ನಾಮರೂಪುಕ್ರಿಯೇನೂ ಯೇನೂಯಿಲ್ಲದ ಮಹಾಘನಶೂನ್ಯ ಬ್ರಹ್ಮವು ಆ ಶೂನ್ಯಬ್ರಹ್ಮದಿಂದ ಶುದ್ಧ ಪ್ರಣವು ಆ ಶುದ್ಧ ಪ್ರಣವುದಿಂದ ಚಿತ್ತುಭಾವದಕ್ಷರ ಆ ಚಿತ್ತುಭಾವದಕ್ಷರದಿಂದ ಪರಶಕ್ತಿ ಆ ಪರಶಕ್ತಿಯಿಂದ ಅಕ್ಷರ ತ್ರಯಂಗಳು ಆಕ್ಷರ ತ್ರಯಂಗಳಿಂದ ಓಂಕಾರ x x x ಭೃಂಗನಾಗಿರ್ದ್ದೆನಯ್ಯಾ ಬೋಳಬಸವೇಶ್ವರಾ ನಿಂಮ ಧರ್ಮ್ಮ ನಿಂಮ ಧರ್ಮ್ಮ ॥೧॥

ಅಂತ್ಯ : ಯೆಂನ ಯಿಪ್ಪತ್ತೈದಕ್ಷರ ಸ್ವರೂಪನೊಳಕೊಂಡು ಯೆಂನ ಗ್ನಾತೃವಿನಲ್ಲಿ ಸಂಗವಾದನಯ್ಯ ಬಸವಂಣ । ಯೆಂನ ದಶಾಕ್ಷರ ಸ್ವರೂಪನೊಳಕೊಂಡು ಯೆಂನ ಗ್ನಾನದಲ್ಲಿ ಸಂಗವಾದನಯ್ಯಾ ಚೆಂನಬಸವಂಣ । ಯೆಂನ ಯೇಕಾಕ್ಷರಸ್ವರೂಪನೆ ಳಕೊಂಡು ಯೆಂನ ಗ್ನಾಯದಲ್ಲಿ ಸಂಗವಾದನಯ್ಯಾ ಪ್ರಭುದೇವರು । ಯಿಂತೀ ತ್ರಿವಿಧವನು ಸಿದ್ಧೇಶ್ವರನು ಯಿಷ್ಟಲಿಂಗದಲ್ಲಿ ಸಂಮಂಧಿಸಿಕೊಟ್ಟಕಾರಣ ಗ್ನಾತೃಗ್ನಾನಗ್ನಾಯ ತ್ರಿವಿಧವಜಿತು ಪರಂಜ್ಯೋತಿ ಮಹಾಲಿಂಗ ಗುರುಸಿದ್ಧಲಿಂಗ ಪ್ರಭುವಿನಲ್ಲಿ ಮೇರೆದಪ್ಪದ ಸಮುದ್ರದಲ್ಲಿ ಅದ್ದಿದಂತಾದೆನಯ್ಯಾ ಬೋಳಬಸವೇಶ್ವರಾ ನಿಂಮ ಧರ್ಮ ನಿಂಮ ಧರ್ಮ ॥ ೧೫ ॥ ಗುಂಮಳಾಪುರದ ದೇವರ ವಚನ ಸಮಾಪ್ತಂ ಮಂಗಳಮಹಾಶ್ರೀ

ವಿಷಯ : ಲಿಂಗಾಂಗ ಸಂಬಂಧ.

ವಿಶೇಷ : ಸಮಗ್ರ. ಶಕಟರೇಫದ ಬಳಕೆಯಿದೆ. ಒಟ್ಟು ಹದಿನೈದು ವಚನಗಳಿವೆ. ಕೊನೆಯಲ್ಲಿ 'ಗುಂಮಳಾಪುರದ ದೇವಂ ವಚನ'ವೆಂದೂ ಬರೆದಿರುತ್ತದೆ. ಇದರೊಂದಿಗೆ ಅಂಬಿಗರ ಚೌಡಯ್ಯನ ವಚನ ಮೊದಲಾದ ಇತರ ೧೨ ಗ್ರಂಥಗಳಿವೆ.

1915

ಕೆ. ೪೯೮/೨	**ಸಿದ್ಧಲಿಂಗದೇವರ ವಚನಗಳು**	ವಚನ
೧೩.೮" × ೧.೮"	ಸಿದ್ಧಲಿಂಗದೇವರು	ಸು. ೧೪೮೦
೧೭೯-೧೭೬ ಪತ್ರ	೧೧ ಪಂಕ್ತಿ	೭೦ ಅಕ್ಷರ

ಆದಿ : ಗುಂಮಳಾಪುರದ ಸಿದ್ಧಲಿಂಗದೇವರು ನಿರೂಪಿಸಿದ ಷಟ್‌ಸ್ಥಲದ ಲಿಂಗಾಂಗ ಸಂಬಂಧ ನಿರ್ವಚನ ಪ್ರಥಮದಲ್ಲಿ ನಾಮ ರೂಪು ಕ್ರಿಯೆನೂ ಯೇನೂಯಿಲ್ಲದ ಮಹಾಘನ ಶೂನ್ಯ ಬ್ರಹ್ಮವು ಆ ಶೂನ್ಯ ಬ್ರಹ್ಮದಿಂದ ಶುದ್ಧ ಪ್ರಣಮ ಆ ಶುದ್ಧ ಪ್ರಣಮದಿಂದ ಚಿತ್ತು ಭಾವದಕ್ಷರ ಆ ಚಿತ್ತು ಭಾವದಕ್ಷರದಿಂದ ಪರಶಕ್ತಿಯಿಂದ ಅಕ್ಷರತ್ರಯಂಗಳು

ಅಂತ್ಯ : ಯಿಂತೀ ತ್ರಿವಿಧವನು ಸಿದ್ಧೇಶ್ವರನು ಯಿಷ್ಟಲಿಂಗದಲ್ಲಿ ಸಂಬಂಧಿಸಿ ಕೊಟ್ಟ ಕಾರಣ ಜ್ಞಾತ್ರು ಗ್ಞಾನ ಜ್ಞೇಯ ತ್ರಿವಿಧವಜಿತು ಪರಂಜ್ಯೋತಿ ಮಹಾ ಲಿಂಗ ಗುರುಸಿದ್ಧಲಿಂಗ ಪ್ರಭುವಿನಲ್ಲಿ ಮೇರೆದಪ್ಪಿದ ಸಮುದ್ರದಲ್ಲಿ ಅದ್ದಿದಂ ತಾದೆನಯ್ಯಾ ಬೋಳಬಸವೇಶ್ವರಾ ನಿಂಮ ಧರ್ಮ ನಿಂಮ ಧರ್ಮ ॥ ೧೫ ॥ ಗುಮಳಪುರದ ಸಿದ್ಧಲಿಂಗ ದೇವರು ನಿರೂಪಿದ ವಚನ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಲಿಂಗಾಂಗ ಸಂಬಂಧ.

ವಿಶೇಷ : ಈ ಗ್ರಂಥದ ಮೊದಲ ಪತ್ರ ಎಂದರೆ ೧೬೯ ನೆಯ ಪತ್ರವನ್ನು ಬಿಟ್ಟರೆ ಉಳಿದವುಗಳೆಲ್ಲಾ ಚೆನ್ನಾಗಿವೆ. ಶಕಟರೇಫ ಪ್ರಯೋಗವಿದೆ. ೧೭೦ ನೆಯ ಪತ್ರ ಲುಪ್ತ. ಈ ಗ್ರಂಥದೊಡನೆ ಮತ್ತೊಂದು ಗ್ರಂಥವಾದ ಮರುಳ ದೇವರ ಹಾಡುಗಳಿವೆ.

1916

ಕೆ. ಬಿ. ೩೨೯	**ಸಿದ್ಧಲಿಂಗ ಸೂತ್ರ**	ಗದ್ಯ
೮.೧" × ೬.೫"	?	?
೧—೧೫ ಪತ್ರ	೧೮ ಪಂಕ್ತಿ	೧೭ ಅಕ್ಷರ

ಆದಿ : ಗುಂಹ್ಯೇಶ್ವರ ನಿರೂಪಿಸಿದ ವಚನ ಬರಿಯ ವದಕ್ಕೆ ಶುಭಮಸ್ತು ಯಿಷ್ಟಲಿಂಗ ದಲ್ಲಿ ಪರೀಕ್ಷೆ ನೋಡುವ ಕ್ರಮವೆಂತೆಂದಡೆ। ಮೂರಂಗುಲಿ ಪ್ರಮಾಣಿನಲ್ಲಿ ಕಿರಿಧ್ರಿಷ್ಟಿಯಲ್ಲಿ ನೋಡಲು ಚಿತ್ಕಳೆ ಪ್ರಕಾಶ ಕಾಣುವದು, ಯಿದಕ್ಕೆ ಮಂತ್ರ। ಮಾಂ। ಜಪ ॥೯॥ ತಕ್ಕು ॥೧॥ ಯಡಂಗಲಿ ಪ್ರಮಾಣಿನಲ್ಲಿ ನೋಡಲು। ಬಹುಪ್ರಕಾಶ ಲಿಂಗಮಯವಾಗಿ ತೋರುವದು.

ಅಂತ್ಯ : ಪ್ರಕೃತಿಯೋಗವ ಮಾಡುವಾ ಸುರಾಸುರರು। ಮೂಲಪ್ರಕೃತಿ ಯೋಗವ ಮಾಡುವ। ಮನು ಮಾಂದಾತರುಗಳು। ತೃಣಮಾತ್ರವು ನಿತ್ಯನಿಜಪದ ಶಾಂಭವ ಯೋಗಿಗಳಿಗೆ, ಗುಂಹ್ಯೇಶ್ವರ ಪ್ರಭುಸ್ವಾಮಿಗಳು ಯರಡೆಂಬತ್ತು ಕೋಟಿ ವಚನವನ್ನು। ಅಡಗಿಸಿದಾ। ಸಿದ್ಧಲಿಂಗಸೂತ್ರ ಸಮಾಪ್ತಿಃ ॥೯॥ ಸಂಪೂಣ-ಮಸ್ತು.

ವಿಷಯ : ವೀರಶೈವ ತತ್ತ್ವ.

ವಿಶೇಷ : ನೀಲಿ ಕಾಗದದಲ್ಲಿ ಬರೆದಿದೆ.

1917

ಕೆ. ಎ. ೨೧೫/೧	**ಸಿದ್ಧಸ್ತೋತ್ರ**	ಶ್ಲೋಕ, ಟೀಕು
೧೨.೯" × ೮"	ಆಶಾಧರಸೂರಿ	?
೧—೩೦ ಪತ್ರ	೨೦ ಪಂಕ್ತಿ	೧೮ ಅಕ್ಷರ

ಆದಿ : ಸಿದ್ಧರ ಸ್ತೋತ್ರ ಆಶಾಧರರು ಸಿದ್ಧಪರಮೇಷ್ಠಿಗಳ ಅಷ್ಟಗುಣಂಗಳಂ ಸ್ತುತಿ ಯಿಸುತ್ತಂ ಮೊದಲೊಳು ಸಮ್ಯಕ್ತ್ವ ಗುಣಮುಂ ಸ್ತುತಿಯಿಸಿದಪರು.

ಶ್ಲೋ॥ ಯಸ್ಯಾನುಗ್ರಹತೋ ದುರಾಗ್ರಹ ಪರಿತ್ಯಕ್ತಾತ್ಮ ರೂಪಾತ್ಮನಃ
ಸದ್ದ್ರವ್ಯಂ ಚಿದಚಿತ್ರಿಕಾಲ ವಿಷಯಂ ಸ್ವೈಸ್ವೈರಭೀಕ್ಷ್ಣಂ ಗುಣೈಃ
ಸಾರ್ಥವ್ಯಂ ಜನಪರ್ಯಯೈಸ್ಸಮವಯ ಜ್ಞಾನಾತಿ ಬೋಧಸ್ಸಮಂ
ತತ್ಸಮ್ಯಕ್ತ್ವಮಶೇಷ ಕರ್ಮಭಿದುರಂ ಸಿದ್ಧಾಃ ಪರಂ ನೌಮಿ ವಃ ॥೧॥

ಮೊದಲೊಳು ಪದಾರ್ಥಂ ಪೇಳಲ್ಪಡುಗುಂ । ಯಸ್ಯ । ಆಉದೊಂದು ಸಮ್ಯಕ್ತ್ವದ ಅನುಗ್ರಹತಃ –ಆಲಾದಾನದತ್ತಣಿಂದ । x x x x ಅರ್ಥ ಪರ್ಯಾಯಂಗಳಿಗೆ ಲಕ್ಷಣವಾವುವೆಂದಡೆ.

ಅಂತ್ಯ : ಪ್ರತಿಕ್ಷಣದಲ್ಲಿ ಸಾಕ್ಷಾತ್ಕರಿಸುಉದು ಪರಮಾನಂದಾನುಭವನಲೂ ಘಟಿಯಿಸದೆಂಬುದಭಿಪ್ರಾಯಂ । ಅಂತೆ ಮಹಾ ಪುರಾಣದೊಳು ಜಿನಸೇನಾಚಾರ್ಯರಿಂ ಸರ್ವಜ್ಞರ ಸ್ತೋತ್ರದಲ್ಲಿ ನಿರೂಪಿಸಲ್ಪಟ್ಟುತ್ತು । ಸಂಜೀವನ ಶತಕದೊಳು ಹಸ್ತಿಮಲ್ಲರಿಂದ ಮುಂನಂ ನಿರೂಪಿಸಲ್ಪಟ್ಟುತ್ತು ಅಸ್ತಿಚ್ಛ್ರಮುಕ್ಲಮು ಇತಿದ್ವಿತ್ರಯಿ.

ವಿಷಯ : ಜೈನಸ್ತೋತ್ರ.

ವಿಶೇಷ : ಅಸಮಗ್ರ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಮೊದಲ ಎರಡು ಪ್ರತ್ಯೇಕ ಪತ್ರಗಳಲ್ಲಿ ವಿಷಯಾನುಕ್ರಮಣಿಕೆಯಿದೆ. ಇದೇ ಪುಸ್ತಕದಲ್ಲಿ ಪಂಚಕಲ್ಯಾಣ ಸ್ತೋತ್ರವೆಂಬ ಕೃತಿ ಇದೆ.

1918

ಕೆ. ೪೭೨	**ಸಿದ್ಧಾಂತ ಶಿಖಾಮಣಿ ಟೀಕು**	ಶ್ಲೋಕ, ಟೀಕು
೧೬.೨" × ೧.೩"	ಸೋಸಲೆ ರೇವಣಾರ್ಯ	೧೬೨೩
೧೭೬ ಪತ್ರ	೬ ಪಂಕ್ತಿ	೯೦ ಅಕ್ಷರ

ಆದಿ : ಸಿದ್ಧಾಂತಶಿಖಾಮಣಿಯ ಟೀಕೂ

ಯಃ ಸೋಮೇಶ್ವರಲಿಂಗ ಭೂಸ್ತ್ರಿಜಗತಾಂ ಯಂ ದೇಶಿಕೇಂದ್ರಂ ವಿದುರ್ಯೇನಾಬೋಧಿ ಸಕುಂಭಸಂಭವ ಮುನೀಂದ್ರ್ಯ ಸ್ಸೈನಮಸ್ತುದ್ರ್ವತೆ

x x x x

ಅಥ ಕಲಿಕಾಲ ಪ್ರವೇಶಾನಂತರದಲ್ಲಿ ರೇಣುಕ ಗಣೇಶ್ವರನೆಂದು ಪ್ರಸಿದ್ಧವಾದ ರೇವಣಾ ಸಿದ್ಧೇಶ್ವರನು ಕುಂಭಸಂಭವನಿಗೆ ಬೋಧಿಸಿದ ಯಿಾ ವೀರಶೈವ ಶಾಸ್ತ್ರದ ಬೋಧಾನಂತರದಲ್ಲಿ ಆ ರೇವಣ ಸಿದ್ಧೇಶ್ವರನ ದೃಷ್ಟಿ:ಗರ್ಭ ಸಂಭವನಾದ ಸಿದ್ಧರಾಮೇಶ್ವರನ ಸಾಂಪ್ರದಾಯ ಪ್ರಸಿದ್ಧವಾದ ಸಕಲ ನಿಗಮಾಗಮ ಪಾರಂಗತನಾದ ಶಿವಯೋಗೀಶ್ವರನೆಂಬಾಚಾರ್ಯನು

ಅಂತ್ಯ: ನಿರ್ಮ್ಮಲವಾದ ಭೋಗವನು। ಪರಾಂ ಮುಕ್ತಿಂ ಚ। ಪರ ಮುಕ್ತಿಯನು। ಯಾತಿ। ಯೆಯ್ದುತ್ತಿರ್ದ್ದಪನೂ ॥೫೫॥ ಶ್ರೀಮನ್ರೇಣುಕ ವಂಶವಾರಿಧಿ ವಿಧುಃ ಶ್ರೀ ವೀರಣಾರಾಧ್ಯರಾಟಪೌತ್ರಾ ರೇವಣಸಿದ್ಧ ದೇಶಿಕಸುತಃ ಶ್ರೀ ರೇವಣಾ x x x ಸಂಬೋಧಿನಿಂ॥ ಇತಿ ಶ್ರೀಮದ್ವೇದ ವೇದಶಿರಃ ಶಿವಾಗಮ ಪುರಾಣಪ್ರಭೃತಿ x x x ಶ್ರೀ ರೇವಣಾರಾಧ್ಯಾ ನಾಮಾಚಾರ್ಯ್ಯ ವಿರಚಿತಾಯಾಂ ಶ್ರೀ ವೀರಶೈವ ಧರ್ಮ್ಮ ನಿರ್ನ್ನಯ ಸಿದ್ಧಾಂತ x x x ಏಕವಿಂಶತಿಪರಿಚ್ಛೇದಃ x x x ಸಿದ್ಧಾಂತ ಶಿಖಾಮಣಿ ಟೀಕಾ ಸಿದ್ಧಾರ್ತ್ಥ ಸಂಬೋಧಿವ್ಯಾಖ್ಯಾ ಸಮಾಪ್ತ। ಶ್ರೀ ಶಿವಾರ್ಪಣಮಸ್ತು ॥

ವಿಷಯ: ವೀರಶೈವ ಸಿದ್ಧಾಂತ.

ವಿಶೇಷ: ೯೯ನೆಯ ಪತ್ರಕ್ಕೆ ಎರಡು ಪತ್ರಗಳು ಸೇರಿವೆ. ಒಂದೊಂದು ಮುಖದಲ್ಲಿ ಮಾತ್ರ ಬರವಣಿಗೆಯಿದೆ. ಕೊನೆಯ ಪತ್ರ ಮುರಿದಿದೆ. ೪೦ ನೆಯ ಪತ್ರ ಲುಪ್ತ.

1919

ಕೆ.ಎ. ೧೮೬	**ಸಿದ್ಧೇಶ್ವರಪುರಾಣ–ಭಾಗ ೧**	ಭಾಮಿನೀಷಟ್ಪದಿ
೧೨.೭″ × ೭.೮″	ಶಾಂತೇಶ	೧೫೬೧
೧-೪೦ ಪತ್ರ	೨೦ ಪಂಕ್ತಿ	೨೨ ಅಕ್ಷರ

ಆದಿ: ತೋಂಟದ ಸಿದ್ಧೇಶ್ವರನ ಪುರಾಣವು
ಹರುಷದಿಂ ಶಿವನಾಜ್ಞೆಯ ತಳೆದು
ದುರುತರ ರಜತಗಿರಿಯಿಂದ ಮರ್ತ್ಯಕೆ
ಪರಮ ತೋಂಟದ ಸಿದ್ಧಲಿಂಗಂ ಬಂದನತಿಶಯದಿಂ ॥ ಪಲ್ಲವಿ ॥

ಶ್ರೀ ವಿಮಲ ಕಾತ್ಯಾಯನೀಶ್ವರ
ದೇವಿಯಾನನ ಪದ್ಮಮಧುಕರ
ಪಾವನಾತ್ಮ ಗಿರೀಶ ಶಂಕರ ಕರುಣಫೇನವಾಸಾ
ದೇವ ದೇವನ ನಿರ್ಮಲ
ಜೀವಿತೇಶ್ವರ ಕೈರವಾರಣ
ಭೂವಳೆಯಮಂ ಪಾಲಿಪುದು ಸಿದ್ಧೇಶ ಚಿತ್ಕೋಶಾ ॥ ೧ ॥

x x x x

ಧರಣಿಯೊಳ್ಸಂಸ್ಕೃತ ಮಹಾ ಬಂ
ಧುರದ ಕರ್ನಾಟಂಗಳಾದಿ
ಸರಸ ಶಾಸ್ತ್ರಂಗಳು ಮುಖೋದ್ಗತವಾಗಿ ರಾಜಿಸುತ
ವರ ಬಸವಪುರಾಣದತಿಶಯ
ದುರುತರದ ಘನ ಮಲ್ಲಣಾರ್ಯನ
ಪರಮಪುತ್ರ ಶಾಂತದೇಶಿಕನೊರೆದನೀ ಕೃತಿಯಂ || ೧೬||

ಅಂತ್ಯ : ಸುಗುಣಿ ಕ್ಷಿತಿಭೃತ್ಸರ್ವತೋಮುಖ
ವಗಣಿತದೆಯುಗ್ರಾಸನಂ ನಂ
ಬುಗೆಯ ಧೈರ್ಯಂ ಬಳಿಕ ವೃಷದ್ರುದ್ರೃಷಸುಪಾತಾಳಾ
ಜಗದಧಿಪತಿ ವರವೀರಭದ್ರಂ
ಮಿಗೆ ಸುಪಾಲಕರೆಂಬ ರುದ್ರರು
ಮಗನೆ ಕೇಳೀ ಹತ್ತು ಹೊರಗಣಜಾಂಡದಡಿಯೆಲ್ಲಿ || ೫೬ ||

ವಿಷಯ : ತೋಂಟದ ಸಿದ್ಧಲಿಂಗಯತಿಯ ಚರಿತ್ರೆ.

ವಿಶೇಷ : ಇದರ ಮುಂದಿನ ಭಾಗ ಇದೆ: ಪುಸ್ತಕದಲ್ಲಿ ಕೆ. ಎ. ೧೪೯ನೆಯ ನಂಬರಿನಲ್ಲಿದೆ.

1920

ಕೆ. ಎ. ೧೪೯	**ಸಿದ್ಧೇಶ್ವರಪುರಾಣ–ಭಾಗ ೨**	ಭಾಮಿನೀಷಟ್ಪದಿ
೧೨.೭″ × ೭.೮″	ಶಾಂತೇಶ	೧೫೬೧
೪೧-೪೯ ಪತ್ರ	೨೦ ಪಂಕ್ತಿ	೨೨ ಅಕ್ಷರ

ಆದಿ : ಅರರೆಯಿರ್ದಚ್ಯುತನ ರಕ್ಷಿಪ
ರುರುತರದ ತ್ರಿದಶೆ ಬಂ
ಧುರ ಪಿನಾಕಿಯು ಶಾಸ್ತ್ರವವ್ಯಯಭೂತಿಮರ್ದಕರು
ಕರಮೆಸೆವ ವಜ್ರಾವಯಂ ಸು
ಸ್ಥಿರದ ಬದ್ಧಂ ನಾಕಪಾಲಿಗ
ಳಿರದೆ ಈ ದಶರುದ್ರರಿಂದ್ರನ ರಕ್ಷಿಸುತ್ತಿಹರು || ೫೭ ||

ಅಂತ್ಯ : ಇದು ವಿಮಲ ಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರಾ

ಪದುಳದಿಂ ಶಾಂತೇಶನೊರದೀ
ವಿದಿತ ಸಿದ್ಧೇಶನ ಪುರಾಣಮು
ನೊದವಿ ಕೇಳಿದ ಭಕ್ತ ತತಿಗಿಷ್ಟಾರ್ಥವೊಂದುವದು ॥ ೭೮ ॥

ಅಂತು ಸಂಧಿ ೧೭ ಕ್ಕಂ ಪದನು ೯೯೯ ಕ್ಕಂ ಸಮಾಪ್ತ ಮಂಗಳ ಮಹಾ ಶ್ರೀ ಸ್ವಸ್ತಿ ಶ್ರೀಮತು ರುಧಿರೋದ್ಗಾರಿ ಸಂವತ್ಸರ ಆಶ್ವಯುಜ ಶುದ್ಧ ಪಾಡ್ಯ ಬುಧವಾರದಲ್ಲು ಸಿದ್ಧೇಶ್ವರ ಸ್ವಾಮಿಪುರಾಣ ಸಮಾಪ್ತಾ ಪರ ವತಯ್ಯನ ಬರಹ.

ವಿಷಯ : ತೋಂಟದ ಸಿದ್ಧಲಿಂಗಯತಿಯ ಚರಿತ್ರೆ.

ವಿಶೇಷ : ಇದರ ಪೂರ್ವಭಾಗ ಇದೇ ಪುಸ್ತಕದಲ್ಲಿ ಕೆ. ಎ. ೧೮೬ ನೆಯ ನಂಬರಿನಲ್ಲಿದೆ.

1921

ಕೆ. ಬಿ. ೯೯	**ಸಿದ್ಧೇಶ್ವರ ಪುರಾಣ**	ಭಾಮಿನೀಷಟ್ಪದಿ
೨.೯″ × ೬.೩″	ಶಾಂತೇಶ	೧೫೬೧
೧-೧೯೮ ಪತ್ರ	೧೨ ಪಂಕ್ತಿ	೧೮ ಅಕ್ಷರ

ಆದಿ : ಶ್ರೀರಸ್ತು ತೋಂಟದಾರ್ಯರ ಪುರಾಣವು

ಸೂಚನೆ ॥ ಹರುಷದಿಂ ಶಿವನಾಜ್ಞೆಯಂ ತಳೆ
ದುರುತರ ರಜತಗಿರಿಯಿಂದ ಮರ್ತ್ಯಕೆ
ಪರಮ ತೋಂಟಪ ಸಿದ್ಧಲಿಂಗಂ ಬಂದನತಿಶಯದಿಂ ॥

ಪದನೂ ॥ ಶ್ರೀವಿಮಲ ಕಾತ್ಯಾಯನೀಶ್ವರ
ದೇವಿಯಾನನ ಪದ್ಮ ಮಧುಕರ
ಪಾವನಾತ್ಮಗಿರೀಶ ಶಂಕರ ಕರುಣ ಫೇನವಾಸಾ
ದೇವದೇವ ನವೀನ ನಿರ್ಮಲ
ಜಿ ವಿತೇಶ್ವರ ಕೈರವಾರುಣ
ಭೂವಳಿಯುಮಂ ಪಾಲಿಪುದು ಸಿದ್ಧೇಶ ಚಿತ್ಕೋಶಾ ॥ ೧ ॥

X X X X

ಧರಣಿಯೊಳ್ಸಂಸ್ಕೃತ ಮಹಾ ಬಂ
ಧುರದ ಕರ್ನಾಟಂಗಳಾದಿಯ
ಸರಸ ಶಾಸ್ತ್ರಂಗಳು ಮುಖೋದ್ಗತವಾಗಿ ರಾಜಿಸುವಾ

ವರಬಸವಪೌರಾಣದತಿಶಯ
ದುರುತರದ ಘನ ಮಲ್ಲಣಾರ್ಯನ
ಪರಮಪುತ್ರ ಶಾಂತದೇಶಿಕನೊರೆದನೀ ಕೃತಿಯಂ ॥ ೧೭ ॥

ಅಂತ್ಯ : ಹುತವಹಂ ವಸುವಾರ್ಧಿ ವಿಧು ಸಂ
ಮತದೊಳಂ ಸಲೆ ಶಾಲಿವಾಹನ
ನುತ ವರುಷ ರೌದ್ರಿಯಯು ಮಹಾಘನ ಮಾಘಮಾಸದೊಳೂ
ಅತಿಶಯದ ನವಶುದ್ಧ ಪಂಚಮಿ
ಯತುಳ ಸಸಿವಾರದೊಳು ಮತ್ತು
ನ್ನತದ ಸಿದ್ಧೇಶ ಪುರಾಣ ಸಮಾಪ್ತಿಯಾಯಿತ್ತೂ ॥ ೫೬ ॥

X X X X

ಇದು ವಿಮಲ ಗುರು ತೋಂಟದಾರ್ಯನ
ಪದಕಮಲಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರಾ
ಪದುಳದಿಂ ಶಾಂತೇಶನೊರದೀ
ವಿದಿತ ಸಿದ್ಧೇಶನ ಪುರಾಣವ
ನೋದ್ವವಿ ಕೇಳಿದ ಭಕ್ತತತಿಗಿಷ್ಟಾರ್ಥಮೊಂದುವದೂ ॥ ೫೮ ॥

ಅಂತು ಸಂಧಿ ೧೭ ಕ್ಕಂ ಪದನು ೧೦೦೦ ಕ್ಕಂ ಸಮಾಪ್ತಂ ಮಂಗಳಮಸ್ತು
X X ಸಿದ್ಧೇಶ್ವರ ಪುರಾಣವು ಸಂಪೂರ್ಣವು.

ವಿಷಯ : ತೋಂಟದ ಸಿದ್ಧಲಿಂಗಯತಿಯ ಚರಿತ್ರೆ.

ವಿಶೇಷ : ಸುಂದರಾಕ್ಷರ. ಕೆಲವುಕಡೆ ಮೊದಲು ಬರೆದಿರುರುವುದನ್ನು ಅಳಿಸಿ ಮತ್ತೆ ಬರೆದಿದೆ.

1922

ಕೆ. ೧೬೯/೩	ಸಿದ್ಧೇಶ್ವರ ಪುರಾಣದ ನಾಂಧ್ಯ	ಭಾಮಿನೀಷಟ್ಪದಿ
೯.೬" × ೨"	ಶಾಂತೇಶ	೧೫೬೧
೨೫–೨೭ ಪತ್ರ	೧೦ ಪಂಕ್ತಿ	೫೪ ಅಕ್ಷರ

ಆದಿ : ಸಿದ್ದೇಶ್ವರನ ಪುರಾಣದ ನಾದ್ಯ
ಭಾವಿನಿ ॥ ಶ್ರೀವಿಮಲ ಕಾತ್ಯಾಯನೀಸ್ವರ
ದೇವಿಯಾನನ ಪದ್ಮ ಮಧುಕರ
ಪಾವನಾತ್ಮಗಿರೀಶ ಶಂಕರ ಕರುಣ ಘನವಾಸಾ

ದೇವದೇವಾ ನಮಿತ ನಿರ್ಮಲ
ಜೀವಿತೇಶ್ವರ ಕೈರವಾರುಣ
ಭೂವಳೆಮಂ ಪಾಲಿಪುದು ಶಿದ್ಧೇಶ ಚಿತ್ಕೋಶಾ ॥ ೧ ॥

ಅಂತ್ಯ : ಯಿದು ವಿಮಲ ಗುರು ತೋಂಟದಾರ್ಯ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಯಣಾರ್ಯ್ಯನ ಕುಲಶರಧಿ ಚಂದ್ರಾ
ಪದುಳದಿಂ ಶಾಂತೇಶನೊರೆದ
ವಿದಿತ ಸಿದ್ಧೇಶ್ವರನ ಪೌರಾಣವು
ನೊದವಿ ಕೇಳುವ ಭಕ್ತತತಿಗಿಷ್ಟಾರ್ತ್ಥಮೊಂದುವದು ॥ ೩೫ ॥
ಸಿದ್ದೇಶ್ವರ ಪುರಾಣದ ನಾದ್ಯ ಸಂಪೂರ್ನ ಮಂಗಳ ಮಹಾ ಶ್ರೀ.

ವಿಷಯ : ಸಿದ್ಧಲಿಂಗಯತಿಯ ಸ್ತುತಿ.

ವಿಶೇಷ : ಇದೇ ಕಟ್ಟಿನಲ್ಲಿ ಮಹಂತಯ್ಯನವರು ನಿರೂಪಿಸಿದ ನಾಂದ್ಯ, ಮುರಿಗಾ ಸ್ವಾಮಿಗಳು ನಿರೂಪಿಸಿದ ನಾಂದ್ಯ ಮುಂತಾದ ಇತರ ೨೩ ಗ್ರಂಥಗಳಿವೆ.

1923

ಕೆ. ೩೨೫/೪	**ಸಿದ್ಧೇಶ್ವರ ಪುರಾಣದ ನಾಂದ್ಯ**	ಭಾಮಿನೀಷಟ್ಪದಿ
೯.೫″ × ೨″	ಶಾಂತೇಶ	೧೫೬೧
೭-೯ ಪತ್ರ	೧೧ ಪಂಕ್ತಿ	೫೬ ಅಕ್ಷರ

ಆದಿ : ಸಿದ್ಧೇಶ್ವರನ ಭಾವಿನಿ ಪುರಾಣ ನಾದ್ಯ
ಶ್ರೀವಿಮಲ ಕಾ ನ್ಯಾಯನೀಶ್ವರ
ದೇವಿಯಾನನ ಪದ್ಮ ಮಧುಕರ
ಪಾವನಾತ್ಮಗಿರೀಶ ಶಂಕರ ಕರುಣ ಘನವಾಸ
ದೇವದೇವನವೀನ ನಿರ್ಮಲ
ಜೀವಿತೇಶ್ವರ ಕೈರವಾರಣ
ಭೂವಳೆಯಮಂ ಪಾಲಿಪುದು ಸಿದ್ಧೇಶ ಚಿತ್ಕೋಶಾ ॥ ೧ ॥

ಅಂತ್ಯ : ಯಿದು ವಿಮಲಗುರು ತೋಂಟದಾರ್ಯ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣರ್ಯ್ಯನ ಕುಲಶರಧಿಚಂದ್ರಾ

ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶ್ವರನ ಪೌರಾಣವ
ನೊದವಿ ಕೇಳುವ ಭಕ್ತತತಿಗಿಷ್ಟಾರ್ತ್ಥವೊಂದುವದೂ ॥ ೩೫ ॥

ಸಿದ್ಧೇಶ್ವರನ ಪುರಾಣದ ನಾದ್ಯ ಸಮಾಪ್ತ ಮಂಗಳಮಹಾಶ್ರೀ.

ವಿಷಯ: ಸಿದ್ಧಲಿಂಗಯತಿಯ ಸ್ತುತಿ.

ವಿಶೇಷ: ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಸೌಂದರಪುರಾಣದ ನಾಂದ್ಯ, ಚೇರಮನ ಕಾವ್ಯದ ನಾಂದ್ಯಗಳೆಂಬ ಇತರ ೨ ಗ್ರಂಥಗಳಿವೆ.

1924

ಕೆ. ೧೬೯।೭ **ಸಿದ್ಧೇಶ್ವರಪುರಾಣದ ನಾಂದ್ಯ** ವಾರ್ಧಕಷಟ್ಪದಿ

೯.೬"×೨" ವಿರಕ್ತತೋಂಟದಾರ್ಯ ಸು. ೧೫೭೦

೩೬-೩೯ ಪತ್ರ ೧೦ ಪಂಕ್ತಿ ೪೬ ಅಕ್ಷರ

ಆದಿ: ಸಿದ್ಧೇಶ್ವರನ ವಾರ್ಧಿಕೆ.

ಶ್ರೀರಮಣ ವಿಧಿವಾಸವಪ್ರಮುಖ ವಿಬುಧ ಕೋ
ಟೀರ ಮಾಣಿಕ್ಯಪ್ರಭಾರಂಜಿತಾಂಘ್ರಿಪಂ
ಕೇರುಹಯುಗಂ ವಿಯತ್ಕೇಶನಹಿಭೂಷನಾನಂದಸಂದೋಹಯುಕ್ತಂ
ತಾರಕಾಚಲಮಂದಿರಂ ಸಕಲಲೋಕ ವಿ
ಸ್ತಾ೦ಕನೆನಿಪ್ಪ ಶ್ರೀಗುರು ನಿರಂಜನಲಿಂಗ
ನೋರಂತೆ ಶರಣ ಮಂದಾರನಗಣಿತತ್ವ ಪಾಪೂರನೆಂಮಂ ಸಲಹುಗೆ ॥೧॥

ಅಂತ್ಯ: ಜಯಜನಾರ್ದ್ದನಘೇನ ಪ್ರೀತಶರಣವ್ರಾತ
ಜಯಜಿ.................
........ಜಾತಿಸೂತಕವಿಕಾರ ಹರನಮಿತಜನದಾನಂಧಕರಶುಭಕರ
ಜಯಜಂಗಮ........ ....
........ಟಾಂಕ ನಿರ್ಮ್ಮಲ ನಿರಾತಂಕ
ಜಯ ಪರಂಜ್ಯೋತಿ ಪ್ರಕಾಶ ಗುರುಸಿದ್ಧಲಿಂಗೇಶ ಸು........
........ರ್ನ್ನಂ ಮಂಗಳಮಹಾಶ್ರೀ

ವಿಷಯ : ಗುರುಸಿದ್ಧಲಿಂಗಯತಿಯ ಸ್ತುತಿ.

ವಿಶೇಷ : ಇದೇ ಕಟ್ಟಿನಲ್ಲಿ ಸೋಮನಾಥನ ನಾಂದ್ಯ, ಶಿವಲಿಂಗ ನಾಂದ್ಯಗಳೆಂಬ ಇನ್ನೂ ೨೩ ಗ್ರಂಥಗಳಿವೆ. ೩೯ನೆಯ ಗರಿಯು ಮುರಿದುಹೋಗಿದೆ.

1925

ಕೆ. ೩೨೫/೧೩	**ಸಿದ್ಧೇಶ್ವರಪುರಾಣದ ನಾಂದ್ಯ**	ವಾರ್ಧಕಷಟ್ಪದಿ
೯.೫"×೨"	ವಿರಕ್ತ ತೋಂಟದಾರ್ಯ	ಸು. ೧೫೭೦
೩೨–೩೪ ಪತ್ರ	೧೨ ಪಂಕ್ತಿ	೫೫ ಅಕ್ಷರ

ಆದಿ : ಸಿದ್ಧೇಶ್ವರನ ವಾರ್ಧಿಕ ಪುರಾಣದ ನಾಂದ್ಯ
ಶ್ರೀರಮಣವಿಧಿವಾಸ ಪ್ರಮುಖ ವಿಬುಧಕೋ
ಟೀರಮಾಣಿಕ್ಯ ಮಹಾಪ್ರಭಾರಂಜಿತಾಂಘ್ರಿಪಂ
ಕೇರುಹಯುಗಂ ವಿಯತ್ಕೇಶನಹಿ ಭೂಷಣನಂದ ಸಂದೋಹಯುಕ್ತಂ
ಆರಕಾಚಲಮಂದಿರಂ ಸಕಲಲೋಕ ವಿ
ಸ್ತಾರಕನೆನಿಪ್ಪ ಶ್ರೀಗುರು ನಿರಂಜನಲಿಂಗ
ನೋರಂತೆ ಶರಣಮಂದಾರನಗಣಿತ ಕೃಪಾಹರನೆಂಮಂ ಸಲಹುಗೆ ||' ೧ ||

ಅಂತ್ಯ : ಜಯ ಜನಾರ್ಧನ ಘನಪ್ರೀತಶರಣವ್ರಾತ
ಜಯಜಿತ ಕುಸುಮಚಾಪ ಜನನಮರಣ ವಿರೋಪ
ಜಯ ಜಾತಿ ಸೂತಕ ವಿಕಾರಹರನಮಿತ ಜನದಾನಂದಕರ ಶುಭಕರಾ
ಜಯ ಜಂಗಮಾಕಾರ ಸಕಲ ಜಗಧಾಧಾರ
ಜಯ ಜಟಾಮುಕುಟಾಂಕ ನಿರ್ಮ್ಮಲ ನಿರಾತಂಕ
ಜಯ ಪರಂಜ್ಯೋತಿಪ್ರಕಾಶ ಗುರುಸಿದ್ಧಲಿಂಗೇಶ ಸುಜ್ಞಾನಕೋಶಾ ||೨೭||
ಸಿದ್ಧೇಶ್ವರ ಪುರಾಣದ ನಾದ್ಯ ಸಮಾಪ್ತ ಮಂಗಳಮಹಾಶ್ರೀ.

ವಿಷಯ : ಗುರುಸಿದ್ಧಲಿಂಗಯತಿಯ ಸ್ತುತಿ.

ವಿಶೇಷ : ಇದೇ ಕಟ್ಟಿನಲ್ಲಿ ಸೋಮನಾಥಪುರಾಣದ ನಾಂದ್ಯ, ಮಲ್ಲೇಶ್ವರಪುರಾಣದ ನಾಂದ್ಯಗಳೇ ಮೊದಲಾದ ಇತರ ೨೪ ಗ್ರಂಥಗಳಿವೆ.

1926

ಕೆ.ಬಿ. ೨೬೫|೧	**ಸಿದ್ಧೇಶ್ವರ ವಚನ**	ತ್ರಿವಿಧಿ
೮.೧″ × ೬.೫″	?	?
೧-೫ ಪತ್ರ	೨೫ ಪಂಕ್ತಿ	೩೫ ಅಕ್ಷರ

ಆದಿ : ಶ್ರೀ ಸಿದ್ಧೇಶ್ವರ ವಚನ

ಜಯಜಯ ಜಗದೀಶ ಜಯಜಯ ಅಘನಾಶ
ಜಯಜಯ ನಿಗಮಾಗಮ ಸಂತತಿಗಳಿಗೆ ದುರ್ಲಭ
ಜಯತು ಸಿದ್ಧೇಶ ದಯವಾಗೂ
ಆದಿನಿರಂಜನಾ ಮೇಧಿನಿಯೊಳು ಬಂದು
ಬೋದಿಸಿ ಶರಣಸಂತತಿಗಳಿಗೆ ಗುರುವಾದ
ನಾದ ಮೈಸಿದ್ಧ ದಯವಾಗು ॥ ೨ ॥

ಅಂತ್ಯ : ಕೆರೆಯೂರಮೇಲೆ ಸಲ್ಲದು
ಸೆರೆಯಲ್ಲಿ ಬಿದ್ದವಗೆ ಚಾಡಿ ತಾನುರೆಸಲ್ಲದು
ದೊರೆಯು ದೀರಸವಿಗೆ ಸಲ್ಲದು
ಬರಿಕೈಯು ಬೆಹಾರಸಲ್ಲ ಶ್ರೀ ವಿಶ್ವಪತಿ
ಕಂಡದನಾಡಲಿ ಸಲ್ಲದು
ದಿಂಡೆಯರ ಮನೆಯೊಳಿರಿಸಿಕೊಂಡಿರಸಲ್ಲದೂ
ಮುಂಡೆಯ ಕೂಡಲು ಸಲ್ಲದೂ
ಬಂಡಾಟದ ಬದುಕು ಸಲ್ಲ ಶ್ರೀ ವಿಶ್ವಪತಿ
ಸಿದ್ದೇಶ್ವರ ನೀತಿ ಸಂಪೂರ್ನ

ವಿಷಯ : ಸ್ತುತಿ, ನೀತಿ.

ವಿಶೇಷ : ನೋಡಿ ಅಕ್ಷರ. ಇದೇ ಪುಸ್ತಕದಲ್ಲಿ ನಿಜಲಿಂಗಶತಕವೆಂಬ ಗ್ರಂಥವಿದೆ.

1927

ಕೆ.ಎ. ೨೪೬|೧	**ಸೀತಾಕಲ್ಯಾಣ**	ಹಾಡು
೧೨.೯″ × ೮″	ಹೆಳವನಕಟ್ಟೆ ಗಿರಿಯಮ್ಮ (?)	ಸು. ೧೬೫೦
೧-೧೯ ಪತ್ರ	೧೪ ಪಂಕ್ತಿ	೨೦ ಅಕ್ಷರ

ಆದಿ: ಸೀತಾಕಲ್ಯಾಣ
ಪಾಕಶೇಷಾದ್ರಿ ಬ್ರಹ್ಮನೆ ಶರಣೂ
ಲೋಕನಾಯಕ ಹೈಳವನಕಟ್ಟೆ ವೆಂಕಟ
ನೀ ಕರುಣಿಸಿ ಸಲುಹುವದೈನಗೇ ಜಯಜಯಾ ॥

ಪಲ್ಲ ॥ ಮದುವೆಯ ನಾಲ್ಕು ದಿವಸದಲ್ಲಿ
ಮದವಣಿಗನು ರಾಮ ಜಾನಕಿಗೆ
ಮುದದಿಂದ ಆರಿಸಿನೆಂಣೆಯು ಮಾಡೋ ಸಂಭ್ರಮಾ
ಪದನ ಹೇಳುವೆ ಸೂಜನರು ಕೇಳೀ ಜಯಜಯಾ ॥ ೧ ॥

ಅಂತ್ಯ: ತುಂಗವಿಕ್ರಮರಾಮು ಜಾನಕಿಯಾ
ಮಂಗಳುತ್ಸವರುಟ್ಟಣೆಪದನಾ
ಸಂಗೀತದಿ ಹೇಳಿಕೇಳಿದ ಜನಂಗಳಿಂ
ಹೆಳವನಕಟ್ಟೆ ರಂಗಯ್ಯನೊಲಿದಹನೂ ಜಯ ಜಯಾ ॥ ೮೭ ॥
॥ ಮಂಗಳ ಮಹಾ ಶ್ರೀ ॥

ವಿಷಯ: ಸೀತೆಯ ವಿವಾಹ.

ವಿಶೇಷ: ಪತ್ರಗಳ ಒಂದೇ ಕಡೆ ಬರೆದಿದೆ. ಇದರೊಂದಿಗೆ ಚಂದ್ರಹಾಸನ ಕಥೆ, ಕೃಷ್ಣಪಾರಿಜಾತ, ವಿನಾಯಕಾಷ್ಟಕ, ಹಾಡುಗಳು, ಶಂಕರವಿಜಯ ಸಂಗ್ರಹ I, II, III ಭಾಗಗಳೂ ಇವೆ.

1928

ಕೆ. ೯. ೪೯೪	**ಸೀತಾಪಹಾರದ ಕಥೆ**	ಯಕ್ಷಗಾನ
೮″ × ೬.೩″	ಲಿಂಗರಾಜ	೧೮೫೦
೧-೫೩ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ: ಸೀತಾಪಹರದ ಕಥೆ ॥ ನಾಂದೀ ॥
ಶ್ರೀಮತ್ತಾಮರಸೋತ್ಪಲಶ್ವಶನ ಮೈತ್ರೀ ಫಾತ್ರನೇತ್ರತ್ರಯಂ
ಭೀಮ ಭ್ರೂಕುಟ ಭಂಗಲೇಶ ಭಟ ಕಲ್ಪಾನಲ್ಪನಾಕಾಲಯಂ
ವಾಂಮಾಂಕಸ್ಥಿತ ಶೈಲರಾಜತನಯಾ ಸಲ್ಲಾಪ ಲೋಲಾಶಯಂ
ಪ್ರೇಮಂಬೆತ್ತ್ರಮಗೀಗೆ ಭದ್ರತತಿಯಂ ಶ್ರೀ ಭದ್ರಕಾಳೀಪ್ರಿಯಂ ॥ ೧ ॥

x x x x

ಕಂದಾ ॥ ವರವಾಲ್ಮೀಕಿ ತಪೋಧನ
ವಿರಚಿತ ರಾಮಾಯಣಾಬ್ಧಿ ಮಥನೋದ್ಗತಬಂ
ಧುರರಾಮುಕಥಾಂಮೃತವಂ
ನೆರೆವೆನು ವಿಭುದರ್ಗೆ ಯಕ್ಷಗಾನದೊಳಲೆಯಿಂ ॥ ೧ ॥

ಅಂತ್ಯ : ವಾರ್ಧಕಾ॥ ವರವದೇಂ ಬೇಡುವೆನು ನಿಂನ ಭಕ್ತಿಯೆ ಸಕಲ
ವರವಲೇ ರಾಮು ದೂರ್ವಾದಳ ಶ್ಯಾಮು ಕೇ
ಳ್ವರರುಶ್ಯಮೂಕದೊಳಗಿರುವ ಸುಗ್ರೀವನೊಳು ಹೋಗಿ ಸಖ್ಯವ
ಬೆಳಸಲೂ ॥
ಅರಸಿಯಳ ತೆರನರಿದು ಸುಖಿಯ ಹಿರಿಯಂದಜನ
ಪುರಿಗೆ ತೆರಳಲ್ಮಬರಿ ಹುಡುಕುತ್ತ ಹಂಪೆಗೈ
ತರುತಿರ್ದನಾ ರಾಮನೆಂದು ಕುಶಲವರಿಗಾ ವಾಲ್ಮೀಕಿಮುನಿ ಪೇಳಿದಂ
॥ ೪೨೮ ॥

ಪುಂಗವತುರಂಗನಿಗೆ ಗಂಗಜಾನಿಗೆ
ಲಿಂಗರಾಜ ಸೇವ್ಯನಿಗೆ
ತುಂಗಮುಹಲಿಂಗನಿಗೆ ॥ ೪೩೧ ॥ ಶ್ರೀ
ಸೀತಾಪಹಾರದ ಕಥೆ ಸಂಪೂರ್ಣಂ ॥ ಶ್ರೀ ॥

ವಿಷಯ : ಶ್ರೀಮದ್ರಾಮಾಯಣದಲ್ಲಿ ಆದಿಯಿಂದ ರಾಮನು ಋಷ್ಯಮೂಕಕ್ಕೆ
ಬರುವ ವರೆಗಿನ ಕಥಾ ಭಾಗ.
ವಿಶೇಷ : ಸುದೃಢ ಪ್ರತಿ, ಸುಂದರಾಕ್ಷರ.

1929

ಕೆ. ಬಿ. ೧೧೦	**ಸೀತಾಸ್ವಯಂವರ**	ಯಕ್ಷಗಾನ
೭.೯"×೬.೩"	ಲಿಂಗರಾಜ	೧೮೫೦
೧-೩೬ಪತ್ರ	೧೫ ಪಂಕ್ತಿ	೧೯ ಅಕ್ಷರ

ಆದಿ : ಶೀತಾಸ್ವಯಂವರ ಯಕ್ಷಗಾನ ಕಥೆ ಬರೆದಿಥೆ ॥ ವೃತ್ತಾ ನಾಂದೀ ॥
ಶ್ರೀಮತ್ತಾಮರಸೋತ್ಪಲ ಶ್ವಸನ ಮೈತ್ರಿಪಾತ್ರನೇತ್ರತ್ರಯಂ
ಭೀಮಭ್ರುಕುಟಿ ಭಂಗಲೇಶ ಭಟಕಲ್ಪಾನಲ್ಪನಾಕಾಲಯ
ವಾಮಾಂಕಸ್ಥಿತಶೈಲರಾಜ ತನಯಾಸಲ್ಲಾಪ ಲೋಲಾಶ್ರಯಂ
ಪ್ರೇಮಂಬೆತ್ತೆಮಗೀಗೆ ಭದ್ರತತಿಯಂ ಶ್ರೀ ಭದ್ರಕಾಳೀಪ್ರಿಯಂ ॥ ೧ ॥

ರಾಗ ನಾಟಿ ಝಂಪೆ ತಾಳ ||

ಜಯದಶರಥ ಕುಮಾರ ಜಂಯುಗಾಧಿಜಾಧಾರ
ಜಯತಾಟಕಾಕಾರ ಕಾನನ ಕುಠಾರ
ಜಯತು ಮಾರಿಚ ಸುಬಾಹು ಖಳ ಜಲಧೀರ
ಜಯಗೌತಾಮಾದಾರ ದಾನವಮಂದಾರ || ೨ ||

ಕಂದ || ವರವಾಲ್ಮೀಕಿ ತಪೋಧನ
ವಿರಚಿತ ರಾಮಾಯಣಾಬ್ಧಿ ಮಥನೋದ್ಗತ ಬಂ
ಧುರ ರಾಮಕಥಾಮೃತವಂ
ನೊರೆವೆನು ವಿಬುಧರ್ಗೆ ಯಕ್ಷಗಾನದೊಲೊಲವಿಂ || ೧೮ ||

ಅಂತ್ಯ : ವಾರ್ಧಕ || ಮೆರವ ಮಂಗಳ ವಾದ್ಯರವರಿಂದ ಜವದಿಂದ
ಪರಿವಾರವಮಂ ಕೂಡಿ ನಡೆತರುತ ನಲಿದಾಡಿ
ಪರಮ ಸಂತೋಷದಿಂ ಬಿರಿದಿನುದ್ಘೋಷದಿಂ ಜನಕನಂ ಪೊಂದುತಾ
ಧರಣಿಜೆಯನೊಡೆವೆರಸ ದೊರೆದಭಯವುಂರಸು
ತಿರದೆ ಪೂಮಳೆಗರೆಯ ಸುರರುಸಂತಸದಳೆಯೆ
ಪುರವ ಪೊಕ್ಕಂ ವಿಭವದಿಂ ರಾಮನೆಂದು ವಾಲ್ಮೀಕಿ ಕುಶಲವರಿಗೆಂದಾ
|| ೩೮೯ ||

ರಾಗ ಸವುರಾಷ್ಟ್ರ ಆದಿತಾಳ
ಮಂಗಳ ಮಂಗಳಂ | ಮಹಲಿಂಗನಿಗೆ | ಶುಭಮಂಗಳಂ ||
ಪುಂಗವ ತುರಂಗನಿಗೆ ಗಂಗಜಾಲಿಂಗನಿಗೆ
ಲಿಂಗರಾಜ ಸೇವ್ಯನಿಗೆ ತುಂಗ ಮಹಲಿಂಗನಿಗೆ || ೩೯೨ ||

ಶ್ರೀರಾಮಸಿತಾಕಲ್ಯಾಣ ಯಕ್ಷಗಾನ ನಾಟಕಂ ಸಂಪೂರ್ಣಂ ಶ್ರೀ ||

ವಿಷಯ : ಸೀತಾ ವಿವಾಹ.

ವಿಶೇಷ : ಅಕ್ಷರಗಳು ವಿರಳವಾಗಿಯೂ ಸ್ಫುಟವಾಗಿಯೂ ಇವೆ.

1930

ಕೆ. ಬಿ. ೧೭೬	**ಸೀತಾಸ್ವಯಂವರ**	ಯಕ್ಷಗಾನ
೭.೩″ × ೫.೩″	?	?
೩-೬೮ ಪುಟ	೧೯ ಪಂಕ್ತಿ	೨೫ ಅಕ್ಷರ

ಆದಿ : ಸೀತಾಸ್ವಯಂವರವು । ವೃತ್ತ ಶಾರ್ದೂಲಾ ॥

ಶ್ರೀರಾಮಂ ದಿವಿಜೌಘನಸನ್ನುತಪದಂ ಸೀತಾ ಮನೋಹ್ಲಾದಕಂ
ಕಾರುಣ್ಯಾಂ ಬುಧಿ ಭಕ್ತವತ್ಸಲಹರಿಂ ಕೌಸಲ್ಯಗರ್ಭೋದ್ಭವಂ
ಮಾರೀಚಾದಿಸಮಸ್ತದೈತ್ಯ ಮಥನಂ ಮಹತ್ಪ್ರತಾಪಾನ್ವಿತಂ
ವೀರಂ ಪಾವನಪುಣ್ಯನಾಮ ಚರಿತಂ ವಂದೇ ಸದಾ ರಾಘವಂ ॥ ೧ ॥

॥ ರಾಗ ನಾಟಿ ಮಟ್ಟೆತಾಳ ॥

ಜಯಜಯ ಸಿದ್ಧಿವಿನಾಯಕ ಜಯಜಯ ಬ ಧ್ಧಿ ಪ್ರದಾಯಕ
ಜಯಜಯ ಸುಂದರ ಮಹಾಕಾಯಾ ಜಯಮೋದಕಪ್ರೀಯಾ
ಜಯಜಯ ಮೂಶಿಕವಾಹನ ಜಯಜಯ ಕರಿಮುಖಮೋಹನ
ಜಯ ಧೃತಮಂಕುಶಪಾಶಾ ಜಯ ವಿಘ್ನವಿನಾಶಾ ಜಯಜಯ ॥ ೧ ॥

ಅಂತ್ಯ : ಕಾಮಿನಿ ಸೀತೆಯವರಿಸಿದಗೆ ಭೃಗು
ರಾಮನ ಗರ್ವವನಿಲಿಸಿದಗೆ
ಪ್ರೇಮದಿ ಭಕ್ತರ ಸಲಹುವಗೆ ವರ
ಕ್ಷೇಮಪುರೇಶಗೆ
ರಘುಪತಿಗೆ ಮಂಗಳಂ ಜಯಮಂಗಳಂ ॥ ೩ ॥

ಭಾಮಿನಿ ॥ ಇಂತು ಧರಣಿಯ ಮೇಲಕಮಲಾ
ಕಾಂತತಾಮನುಜಾವತಾರವ
ನಾಂತು ರಾಮಾಖ್ಯದೊಳು ನಟಿಸಿದ ಚರಿತವನು ಬಿಡದೆ
ಪಿಂತೆ ವಿಡಿದಾನಿಲ್ಲಿಗೀಪರಿ
ಯಂತವಿಸ್ತರಿಸಿದೆನು ಲಾಲಿಸಿ
ಸಂತಸವ ಬಡುವರಿಗೆ ಕ್ಷೇಮಪುರೇಶ ಸಲಹುವನೂ ॥

ಅಂತು ಸಂಧಿ ೧ ಕ್ಕೆ ಪದ ೩೯೫ ಕ್ಕಂ ಮಂಗಳಮಸ್ತು
ಇತಿ ಸೀತಾಸ್ವಯಂವರ ಸಮಾಪ್ತ.

ವಿಷಯ : ಸೀತೆಯ ವಿವಾಹ.

ವಿಶೇಷ : ಇದು ಕಲ್ಲಚ್ಚಿನ ಪುಸ್ತಕ. ೬೮ನೆಯ ಪುಟದಲ್ಲಿ ಪ್ರಸಿದ್ಧಿ ಪತ್ರವಿದೆ. ಅದರಲ್ಲಿ ಕ್ರೋಧನ ಸಂ॥ ಫಾಲ್ಗುಣ ಶು ೫ ಯು ಭೌಮವಾರದಲ್ಲಿ ಅಚ್ಚು ಹಾಕಿರುವದಾಗಿ ಹೇಳಿದೆ.

1931

ಕೆ. ಎ. ೨೫೩	**ಸುಕುಮಾರ ಚರಿತ್ರೆ**	ಚಂಪು
೧೩.೨″ × ೮.೧″	ಶಾಂತಿನಾಥ	೧೦೬೮
೧-೨೭೬ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ : .... ಸ್ವದ್ರವ್ಯಾದಿರೂಪೇಣಾಸ್ತಿ ಪರದ್ರವ್ಯಾದಿವಿರೂಪೇಣ ಕಾಸ್ತಿ ಸ್ವಪರದ್ರವ್ಯಾದಿ ರೂಪೇಣಾಸ್ತಿನ........ಹಾನುತ್ತೇರವಾಚ್ಯಂ । ಸ್ವದ್ರವ್ಯಾದಿಸಹಾನುಕ್ತರಸ್ಯ್ಯವಾಚ್ಚ .... ಪ್ರಯೇಯತ್ವಾದಿ ಬಹುಭೇದ ವಿಭಿನ್ನದಿನೇಕೇನ ಜೀವಾಪೇಕ್ಷೆ ನಾನಾ ಜೀವಾಪೇಕ್ಷೆಯಿಂ ಯೋಚಿಸಿ ನಾನಾ ಪ್ರಕಾರ ಹೇತು ದೃಷ್ಟಾಂತಂಗಳಿಂ । x x x x ಪಿಂಗಿದ ನಿರ್ಮಲಮಪ್ಪ ಸಮ್ಯಕ್ತ್ವರತ್ನಮಂ ಕೈ ಕೊಂಡೂ ॥

ವೃತ್ತ ॥ ಇದುಜೀವಾಜೀವ ಭೇದಕ್ರಮಮುದು ಸಕಷಾಯಾಕಷಾ
ಯೋವಯಂತಾ
ನಿದು ಧರ್ಮಾಧರ್ಮತತ್ವಾಗಮಮಿದು ನಿಖಿಲ ಧ್ಯಾನ ಸಜ್ಞಾನಮಿಂತೆಂ
ಬುದನಾಗಳು ಸೂರ್ಯಮಿತ್ರಂ ಬಗೆದು ಬಗೆದಿದೇಂಳರ್ಮಮೋಘೋರಸಂಸಾ
ರ ದುರಂತಾಭೀಳದಾವಾನಲ ನಳುರ್ವಿನಮಾನಿಂನೆಗಂ ಬರ್ದುಕಿರ್ದೆಂ ॥

ಅಂತ್ಯ : ಕಂದಂ ॥ ಮಿಗೆ ಮೂಲ ಸಂಘದೊಳುದೇ
ಶಿ ಗಣದೊಳು ಸಂದ ಕೊಂಡ ಕುಂದಾನ್ವಯೆಮಂ
ಜಗತೀತಳದೊಳು ನೆಗಳಲು
ನೆಗಳ್ದಿರ್ದರ್ನೆಗಳ್ದವರ್ಧಮಾನ ಮುನೀಂದ್ರರು ॥

ವೃತ್ತಂ ॥ ಶರದಭ್ರಕ್ಕೆ ದಿಶಾಗಜಕ್ಕೆ ಹಿಮವತ್ಕುತ್ಕೀಲ ಕೂಟಕ್ಕೆ ಭಾ
ಸುರಕೈಲಾಸನಗಕ್ಕೆ ಸಂದ ದುಗ್ಧಾಂಭೋರಾಶಿ ಶುಂಭತ್ಸುಧಾ
ಕರ ಬಿಂಬಕ್ಕೆಣೆಯಾದ ಸುಂದರತೆಯಿಂದಂ ವರ್ಧಮಾ ....

ವಿಷಯ : ಸುಕುಮಾರನ ಕಥೆ.

ವಿಶೇಷ : ಆದಿ ಅಂತ್ಯಗಳಲ್ಲಿ ಗ್ರಂಥ ಲುಪ್ತವಾಗಿದೆ. ಮಧ್ಯದಲ್ಲೂ ಕೆಲವು ಕಡೆ ಗ್ರಂಥಪಾತವಿದೆ. ಅಕ್ಷರಗಳು ವಿರಳವಾಗಿವೆ. ಆರಂಭದಲ್ಲಿ ಬೇರೆ ಮೂರು ಪತ್ರಗಳಲ್ಲಿ ಕಥಾಸಾರಾಂಶ ಮತ್ತು ವಿಷಯ ಸೂಚಿ ಇದೆ. ೫೨, ೫೩, ೫೪, ೧೪೮–೧೫೯, ೧೭೪–೧೭೫ ೨೨೭–೨೩೯, ೨೪೩–೨೫೧–೨೫೫, ೨೬೦–೨೬೮, ೨೪೫ ಪತ್ರಗಳಲ್ಲಿ ಬರವಣಿಗೆಯಿಲ್ಲ.

1932

ಕೆ. ಎ. ೨೬೭ **ಸುಕುಮಾರ ಚರಿತ್ರೆ** ಸಾಂಗತ್ಯ

೧೨.೮″×೮″ ? ?

೧–೨೨೪ ಪುಟ ೨೦ ಪಂಕ್ತಿ ೧೩ ಅಕ್ಷರ

ಆದಿ : ಅದರಿಂದಭವ್ಯತುನು ಪೋಷಣಕಾಗಿ
ಕುದಿವುದನೊಂದು ಕ್ಷಣದಲ್ಲಿ
ಪಥೊಳಿಸಿಸ್ವರೂಪರ ಕಥೆಗಳನು
ಹೃದಯಶುದ್ದಿಲ್ಲಿ ಕೇಳುವುದು ॥ ೧೧ ॥

ಪುಣ್ಯಪುರಾಣಶ್ರವಣದಿಂದ ಭವ್ಯಗೆ
ಹುಣ್ಣಿಮೆಯಿಂದುವಿನಂತೆ
ತಿಣ್ಣವಹುದು ಸರ್ವ ಕಲೆಯೊಳು ಪರಿಣತ
ಪುಣ್ಯಶ್ರವವಾಗುತ್ತಿಹುದು ॥ ೧೨ ॥

ಅಂತ್ಯ : ಶ್ರೀಮದುಭಯ ಲಕ್ಷ್ಮೀವರ ರಮಣನೂ
ಕಾಮಮಹಾರಿ ಮರ್ದನನು
ಸ್ವಾಮಿ ತ್ರಿಲೋಕಕಾದಿ ಬ್ರಹ್ಮ ಜಿನಪತಿ
ಕ್ಷೇಮಪದವನೀಗೆ ನಮಗೆ ॥ ೧೯೫ ॥

ಅಮರೇಂದ್ರವಂದಿತ ಶ್ರೀಸುಕುಮಾರನ
ಚಾರುಚರಿತದ ಪ್ರತಿಯನೂ
ಜಿನಚಂದ್ರನು ತನ್ನ ಪುತ್ರಿತ್ರಯಗಳ
ನೋದಿಸಲೆಂದು ಬರದನು ॥ ೧೯೬ ॥

ಸ್ವಸ್ತಿ ಶ್ರೀ ಶಕವರ್ಷ ೧೪೬೮ ನೆಯ ಪರಾಭವ ಸಂವತ್ಸರದ ವೈಶಾಖ ಸುದ ೧೬ ಶುಕ್ರವಾರದಲ್ಲಿ ಯೆದಲಾಪುರದ ಚೆನ್ನಪಾರ್ಶ್ವನಾಥನ ಶ್ರೀ ಪಾದ ಸನ್ನಿಧಾನದಲ್ಲಿ ಅಕ್ಕನೂರ ಸಿರಗಪನು ಮಂಡಿಗೆಯ ಪಾಯಣನ ಮಗಳು ಪದುಮಾಯಿಗಾಗೆ ಬರದುಕೊಟ್ಟ ಸುಕುಮಾರ ಚರಿತ್ರೆಯು ಪುಸ್ತಕಕ್ಕೆ ಮಂಗಳ ಮಹಾಶ್ರೀ ॥ ಸುಕುಮಾರ ಚರಿತ್ರೆ ಸಂಪೂರ್ಣ

ವಿಷಯ : ಸುಕುಮಾರನ ಕಥೆ.

ವಿಶೇಷ : ಆರಂಭದ ೧೧ ಪದ್ಯಗಳಿಲ್ಲ. ಅಕ್ಷರಗಳು ವಿರಳವಾಗಿವೆ. ೬೪–೭೧ ಪತ್ರಗಳಲ್ಲಿ ಬರವಣಿಗೆಯಿಲ್ಲ.

1933

ಕೆ. ೪೮೯ | ಸುಜ್ಞಾನಬೋಧೆ | ಪದ, ಕಂದ
೧೫.೭" × ೧.೨" | ಸಂಪಾದನೆಯ ಸಿದ್ಧವೀರ | ಸು. ೧೬೦೦
೧–೯೨ ಪತ್ರ | ೫ ಪಂಕ್ತಿ | ೬೫ ಅಕ್ಷರ

ಆದಿ : ಶ್ರೀ x x x ಸುಜ್ಞಾನಬೋಧೆಯ ಪುಸ್ತಕವ ಬರವುದಕ್ಕೆ ಶುಭಮಸ್ತು

ಕಂದ || ಶ್ರೀಮದ್ಗುರು ಶಿದ್ಧೇಶನಾ
ಆ ಮಹಾ ಚರಣಾಂಬುಜಕ್ಕೆ ನಾ ಮುದದಿಂದಂ
ಪ್ರೇಮದೊಳೊಂದಿಸಿ ಪೇಳ್ದಪೆ
ನೀಮಹ ಸುಗ್ನ್ಯಾನ ಬೋಧೆಯಾಲಿಸಿ ಶರಣರೂ || ೧ ||

x x x x

ವಿಶೇಷ : ಮೋಡಿ ಅಕ್ಷರ. ಪ್ರತಿಸಂಧಿಯ ಕೊನೆಯಲ್ಲೂ
ವೀರವಿಚಾರಕರ್ತರು ವೀರಸೌಂದರ್ಯ
ವೀರಶಿರಿಯು ವೀರ ಶೌರ್ಯ
ವೀರನಾರಾಯಣನೊರದ ಶ್ರೀಕರದಿಂದ
ಶಾರದೆ ಪೇಳ್ದಳೀ ಕೃತಿಯಾ ‖

ಹರಿಯೆ ನಿಂಮೊರದ ಸಂಗರದ ಸೌಂದರ ಕಥೆಯ
ಬರದೋದಿ ಕೇಳಿದವರಿಗೆ ‖

ಧರಣಿ ಚಂದ್ರಮರುಳ್ಳನಕ ಶ್ರೀ ಕರವಿತ್ತು
ಪೊರೆವ ಪಶ್ಚಿಮರಂಗ ಬಿಡದೆ ॥

ಈ ಎರಡು ಪದ್ಯಗಳಿವೆ. ಪ್ರತಿಯಕಾಲ 1902.

1979

ಕೆ. ೬೪	**ಸೌಂದರಪುರಾಣ**	ವಾರ್ಧಕಷಟ್ಪದಿ
೧೧.೪″ × ೧.೮″	ಬೊಮ್ಮರಸ	೧೪೫೦
೧–೧೨೫ ಪತ್ರ	೧೦ ಪಂಕ್ತಿ	೫೫ ಅಕ್ಷರ

ಆದಿ: ಶ್ರೀ x x ಸವುಂಥರ ಪುರಾಣದ ಪುಸ್ತಕವ ಬರವುದಕ್ಕೆ ಶುಭಮಸ್ತು
ಪಲ್ಲವಾ ॥ ಶ್ರೀವರಸುನುಪಮ ಪುಣ್ಯನಿಧಿ ಪುಷ್ಪದಂತಾಗಿ
ಭೂಮಿಯೊಳು ಜನಿಸುವಡೆ ಪಡೆದನು ಸದಾಶಿವನಾ
ನೇಮುವನು ಕನಕಲತೆ ಕಾಂತಿಮತಿ ಎನುಸುತಿಹಾ ರುದ್ರಕಂನೆಯರು
ಸಹಿತಾ ॥

ಪದ ॥ ಶ್ರೀವರ ಸರೋಜಭವ ದೇವೇಂದ್ರಮುಖ್ಯ ನಾ
ನಾ ವಿಭುದ ಮುಕುಟ ರತ್ನಾವಳಿವಿಮಳಾ ಪ್ರ
ಭಾ ವಿರಾಜಿತ ಚರಣನಮ್ರುತಕರಶೇಖರ ಶಂಖರಂ ಸಉಖ್ಯಕರನೂ
ಪಾವನಚರಿತ್ರನಂ ಜ್ವಳಭಾಳನೇತ್ರನಗ
ಜಾವಲ್ಲಭಂ ನಿಘಮ ದುರ್ಲ್ಲಭಂ ರಕ್ಷಿಸುಗೆ
ಭೂವಳಿಯುವನು ನೀಲಕಂಟಲಿಂಗನು ಸುಜನಹೃದಯ ಸರಸಿಜಭ್ರುಂಗನೂ
॥ ೧ ॥

ಅಂತ್ಯ : ಸೌಂದರಪುರಾಣದೀ ಕೃತಿಯನವನಿಯೊಳಂದ
ಛಂದಮಂ ಪಡವಂತೆ ಸಂಪೂರ್ನಮಾಗಿ ರಚಿ
ಸೆಂದು ಚೊಕದೇವಪಾರ್ಯ್ಯನ ಗರ್ಭಜಾತ ಚಿಕವೀರಣಯ್ಯನು ಬೆಸಸಲು
ವೊಂದೇಗುಲಕ್ಕನರ್ಘ್ಯ ರತ್ನ ಕಳಸಮಂ
ತಂದು ಸೇರಿಸುವಂತೆ ನೆಱತೆವಡದೊಪ್ಪಿ
ಪೇಳ್ದಂ ಶಿವಕವೀಂದ್ರರ ಭೃತ್ಯನೆನಿಪ ಕರ್ನಾಟಕವಿ ಬೊಂಮರಸನೂ
॥ ೩೪ ॥

x x x x

ಪರಶಿವನ ಗನಗರ್ಭಕುಹರ ಪರಮೇಷ್ಠಿ ಪಂ
ಕರುಹದಳನಯನ ರುದ್ರೇಶ್ವರ ಸದಾಶಿವಾ
ದ್ಯರಿಗಾಶ್ರಯಸ್ಥಾನವಾದುದೆಂತಂತೆ ನಾನಾಶಿವಪುರಾಣ ಕಥೆಗೆ
ನಿರುತವಾಶ್ರಯವಾಯಿತು ಸಲುಂಥರ ಪುರಾಣವೀ
ಪರಮ ಪ್ರಸಂನ ಕೃತಿಕೇಳ್ದರಿಗೆ ನೀಲ ಕಂ
ಧರನೊಲಿದು ಧರ್ಮಾರ್ಥಮೋಕ್ಷಂಗಳಂ ಕರುಣಿಸುವನಿದು ನಿಶ್ಚಯಾ
|| ೩೬ ||

ಅಂತು ಸಂದಿ ೧೯ಕ್ಕಂ ಪದನು ೧೧೭೧ಕ್ಕಂ ಸಲುಂಥರಪುರಾಣ ಸಮಾಪ್ತಂ
ಮಂಗಳಮಹಾಶ್ರೀ

ವಿಷಯ : ತ್ರಿಷಷ್ಟಿ ಪುರಾತನರಲ್ಲಿ ಒಬ್ಬನಾದ ಸೌಂದರನಂಬಿಯ ಕಥೆ.

ವಿಶೇಷ : ಪ್ರತಿಯ ಕೊನೆಯಲ್ಲಿ "ಪ್ರಮಾಜಿತು ಸಂವತ್ಸರದ ಭಾದ್ರಪದ ಶುದ್ಧ ೧೦ ಸೋಮವಾರದಲ್ಲೂ ಕೋಹಳ್ಳಿಚಿಕ್ಕವೀರ್‍ಯ್ಯ ಬರೆದ ಸಲುಂಥರ ಪುರಾಣದ ಪುಸ್ತಕಕ್ಕೆ ಶುಭಮಸ್ತು...." ಎಂದಿದೆ. ಶಕಟರೇಫದ ಬಳಕೆಯಿದೆ. ೭೨–೮೧ ಮತ್ತು ೮೩ನೆಯ ಪತ್ರಗಳ ಕೊನೆ ಅಲ್ಲಲ್ಲಿ ಮುರಿದು ಶಿಥಿಲವಾಗಿವೆ. ೧೬ನೆಯ ಪತ್ರ ಒಡೆದಿದೆ. ೮೨, ೮೪, ೮೫, ೮೭ ಈ ಪತ್ರಗಳು ಲುಪ್ತ. ೨೭ನೆಯ ಕ್ರಮಸಂಖ್ಯೆಗೆ ಎರಡು ಪತ್ರಗಳಿವೆ. ಅವುಗಳಲ್ಲಿ ಒಂದು ಮುರಿದು ಶಿಥಿಲವಾಗಿದೆ.

19೮0

ಕೆ. ಬಿ. ೪೭	**ಸೌಂದರಪುರಾಣ**	ವಾರ್ಧಕಷಟ್ಪದಿ
೭.೭″ × ೬.೩″	ಬೊಮ್ಮರಸ	೧೪೫೦
೧-೨೭೮ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ : ಸೌಂದರ್ಯ ಪುರಾಣ ಬಗಯುವದಕ್ಕೆ ನಿರ್ವಿಘ್ನಮಸ್ತು x x
ವಾರ್ಧಿಕಪದ || ಶ್ರೀಮದನುಪಮಪುಣ್ಯಾನಿಧಿ ಪುಷ್ಪದತ್ತನೀ
ಭೂಮಿಯೊಳು ಜನಿಸುವೊಡೆ ಪಡೆದನು ಸದಾಶಿವನನಿ
ನುಮಂ ಕನಕಲತೆ ಕಾಂತಿಮತಿಯೆನಿಸುತ್ತಿಹ ರುದ್ರಕಂನಿಯರು ಸಹಿತಾ ||
ಪ|| ಶ್ರೀವರ ಸರೋಜಭವ ದೇವೇಂದ್ರ ಮುಖ್ಯನಾ
ನಾವಿಬುಧ ಮಕುಟರತ್ನಾವಳಿ ವಿಮಳ ಪ್ರ
ಭಾವಿರಾಜಿತನಮೃತಕರ ಶೇಖರನು ಶಂಕರನು ಸೌಖ್ಯಕರನೂ

ಪಾವನ ಚರಿತ್ರನುಜ್ವಲಭಾಳಸಿತ್ರನಗ
ಜಾವಲ್ಲಭನು ನಿಗಮ ದುರ್ಲಭನೂ ರಕ್ಷಿಸುಗೆ
ಭೂವಳಿಯನು ನೀಲಕಂಠಲಿಂಗನು ಸಜ್ಜನರ ಹೃದಯ ಸರಸಿಜಭೃಂಗನೂ
॥ ೧ ॥

ಅಂತ್ಯ : ಸೌಂದರ ಪುರಾಣವೀ ಕೃತಿಯನವನಿಯೊಳಂದ
ಚಂದಮಂ ಪಡೆವಂತೆ ಸಂಪೂರ್ಣವಾಗಿ ರಸಿ
ಸೆಂದು ಚಿಕ್ಕದೇವಾರ್ಯನ ಗರ್ಭಜಾಜಿಕ ವೀರಣ್ಣಾರ್ಯನು ಬೆಸಸಲೂ
ಪೊಂದೇಗುಲಕನರ್ಘ್ಯದ ದಿವ್ಯರತ್ನಮಂ
ತಂದು ಸೇರಿಸುವಂತೆ ನೆರತೆವೊಡೆದೊಪ್ಪಿ ಪೇ
ಳ್ದಂ ದಿವ್ಯ ಶಿವಕವೀಂದ್ರರ ಭೃತ್ಯನೆನಿಪ ಕರ್ಣಾಟಕವಿ ಬೊಂಮರಸನೂ
॥ ೩೪ ॥

ಅಂತು ಸಂಧಿ ೨೦ಕ್ಕಂ ಪದನು ೧೧೮೭ಕ್ಕಂ ಮಂಗಳಮಹಾ ಸಂಪೂರ್ಣ

ವಿಷಯ : ತ್ರಿಷಷ್ಟಿ ಪುರಾತನರಲ್ಲಿ ಒಬ್ಬನಾದ ಸೌಂದರನಂಬಿಯ ಚರಿತ್ರೆ.

ವಿಶೇಷ : ೭೭, ೭೮, ೭೯, ೮೦ ಮೊದಲಾದ ಪತ್ರಗಳಲ್ಲಿ ಅಲ್ಲಲ್ಲಿ ಕೆಲವು ಪದ್ಯಗಳ ಚರಣಗಳು ಲುಪ್ತವಾಗಿವೆ, ಪ್ರತಿ ಚೆನ್ನಾಗಿದೆ.

1981

ಕೆ. ಬಿ. ೨೬೫	ಸೌಂದರ ಪುರಾಣ	ವಾರ್ಧಕಷಟ್ಪದಿ
೮"×೬.೫"	ಬೊಮ್ಮರಸ	೧೪೫೦
೧–೭೯ ಪತ್ರ	೨೫ ಪಂಕ್ತಿ	೩೨ ಅಕ್ಷರ

ಆದಿ : ಸವುಂದರ ಪುರಾಣ ಶೈವಗ್ರಂಥಾ ಷಟ್ಪದಿ x x
ಪಲ್ಲವ ॥ ಶ್ರೀಮದನುಪಮ ಪುಣ್ಯನಿಧಿ ಪುಷ್ಪದಂತನೀ
ಭೂಮಿಯೊಳು ಜನಿಸುವೊಡೆ ಪಡೆದನು ಸದಾಶಿವನ
ನೇಮವನು ಕನಕಲತೆ ಕಾಂತಿಮತಿಯನಿಸುತಿಹ ರುದ್ರಕಂನೆಯರು ಸಹಿತಾ॥
ಪದನು ॥ ಶ್ರೀಮದ ಸರೋಜಭವ ದೇವೇಂದ್ರ ಮುಖ್ಯ ನಾ
ನಾ ವಿಭುದ ಮುಕುಟರತ್ನಾವಳಿ ವಿಮಳ ಪ್ರ
ಭಾವಿರಾಜಿತಚರಣನಮೃತಕರ ಶೇಖರನು ಶಂಕರನು ಸೌಖ್ಯಕರನು

ಪಾವನ ಚರಿತ್ರನುಜ್ವಲ ಬಾಳನೇತ್ರನಗ
ಜಾವಲ್ಲಭನು ನಿಗಮದುರ್ಲಭನು ರಕ್ಷಿಸುಗೆ
ಭೂವಳಯವನು ನೀಲಕಂಠಲಿಂಗನು ಸುಜನಹೃದಯ ಸರಶಿಜಭೃಂಗನು
॥ ೧ ॥

ಅಂತ್ಯ: ವರಗುಂಡ ಬೊಂಮ ಬಿರುದಾಂಕ ಶಿವೇಂದ್ರ ಬೊಂ
ಮರಸನಿಂ ವಿರಚಿಸಿದ ಸವುಂದರ ಪುರಾಣದ

X X X X

ವರವಿತ್ತು ಮುಂನಿನೊಲು ಮಾಳ್ಪುದೆನೆ
ಲೆರಡು ಕೃತಿ ಸಮನಾಗಿ ವಿರಚಿಸಿದೆ ವಿಶ್ವನಾಥನ ಆಗ್ನೆಗೆ ನಾನು
ತಪ್ಪದಂತೆ ॥ ೩೧ ॥

ಪರಶಿವ ಮಹಾ X X X X

X X X X

ವರಗೆ ಸ್ವಪ್ನದಲೀ ಪುರಾಣವನರುಹಿಸೆಂದ ಪರಶಿವ ಬಂದು ಪೇಳೆ ಕೃತಿಯ
ಗೈಸಿದಾ ॥ ೩೨ ॥

ಜಯ ಜಯ ಗಿರೀಂದ್ರ ಕಂನ್ಯಾಮುಖಾಂಬುಜ ಭಾನು
ಜಯ ಜಯ ನಿಜಾರ್ಚಕ ಪ್ರಪಂಚ ನಿರ್ಜರದೇನು
ಜಯಜಯ ಭವಾರಣ್ಯ ನಿರ್ದೂಮ ನಿರಾಮಯ ಕೃಪಾರತ್ನ ಸಾನೂ
ಜಯ ದುರಿತ ವಿಧ್ವಂಸ ದಿವ್ಯ ಪ್ರಸಂನ ಜಯ
ಜಯ ಸುದಾಂಶು ಕಲಾವತಂಸ ಶಿವಯೋಗಿಸಂ
ಚಯ ಹೃದಾಂಬೋಜನೀ ಹಂಸ ಪಾಲಿಸು ಜಗವನನವರತ
ಸೋಮನಾಥಾ ॥ ೩೩ ॥

ಅಂತು ಸಂಧಿ ೧೯ ಕ್ಕಂ ಪದ ೧೨೨೩ ಕ್ಕಂ ಮಂಗಳ ಮಹಾ
ಸವುಂದರ ಪುರಾಣ ಸಂಪೂರ್ನ ಮಂಗಳಾ ಮಹಾಶ್ರೀ

ವಿಷಯ: ತ್ರಿಷಷ್ಟಿ ಪುರಾತನರಲ್ಲಿ ಒಬ್ಬನಾದ ಸೌಂದರನಂಬಿಯ ಚರಿತ್ರೆ.

ವಿಶೇಷ: ಆದ್ಯಂತ ಕೆಲವು ಪತ್ರಗಳನ್ನು ಅಲ್ಲಲ್ಲಿ ಹುಳು ತಿಂದಿರುವುದರಿಂದ ರಂಧ್ರ
ಗಳಿವೆ. ಬರವಣಿಗೆ ಬಹು ಸಣ್ಣ.

1982

ಕೆ. ೧೬೯/೨೧	**ಸೌಂದರಪುರಾಣದ ನಾಂದ್ಯ**	ವಾರ್ಧಕ, ವೃತ್ತ
೯.೬" × ೨"	ಬೊಮ್ಮರಸ	೧೪೫೦
೧೧೨–೧೧೫ ಪತ್ರ	೧೦ ಪಂಕ್ತಿ	೫೦ ಅಕ್ಷರ

ಆದಿ : ಸೌಂದರ ಪುರಾಣದ ನಾಂದ್ಯದ । ವಾರ್ಧಿಕ ।
ಶ್ರೀವರಸರೋಜಭವ ದೇವೇಂದ್ರ ಮುಖ್ಯನಾ
ನಾವಿಭುದ ಮಕುಟಮಣಿ ರತ್ನಗಣ ವಿಮಳ ಪ್ರ
ಭಾವಿರಾಜಿತಚರಣನಮೃತಕರ ಶೇಖರನು ಶಂಕರನು ಸೌಖ್ಯಾಕರನೂ
ಪಾವನ ಚರಿತ್ರನುಜ್ವಳ ಬಾಳನೇತ್ರನಗ
ಜಾವಲ್ಲಭಂ ನಿಗಮದುರ್ಲ್ಲಭಂ ರಕ್ಷಿಸುಗೆ
ಭೂವಳಿಯವನು ನೀಲಕಂಠ ಲಿಂಗಂ ಸುಜನಹೃದಯ ಸರಸಿಜ
ಭೃಂಗನೂ ॥ ೧ ॥

ಅಂತ್ಯ ; ವೃತ್ತ॥ ದಾರಿದ್ರೋದ್ರೇಕಭದ್ರದ್ವಿಭವಿದಳನಕಂಠಿರವಂ ಸರ್ವ ವಿದ್ಯಾ
ಧಾರಶ್ರೀ ನೀಲಕಂಠೇಶ್ವರನ ಕರುಣಸತ್ಸಾರದುಗ್ಧಾಬ್ಧಿ ಸಮ್ಯ
ಕ್ಸಾರಾಧೀಶ ಪ್ರಭಸಂಚಯ ವಿನುದುವಿದಿತಂ ಸೌಂದರಾಧೀಶನೆಂದೆಂ
ಭೀರಮ್ಯಂ ಚಿತ್ತಪಂಚಾಕ್ಷರವನನವರತಂ ಭಾವಿಸಲ್ ಶ್ರೀನಿವಾಸಂ ॥ ೩೦ ॥
ಸೌಂದರ ಪುರಾಣದ ನಾಂದ್ಯದ ಪದಂಗಳ ಸಂಪೂರ್ನ್ನಮಂಗಳ ಮಹಾಶ್ರೀ.

ವಿಷಯ : ಸೌಂದರ ಪುರಾಣದ ಮಂಗಳ ಪದ್ಯಗಳು.

ವಿಶೇಷ : ಶಕಟರೇಫವಿದೆ. ಪತ್ರಸಂಖ್ಯೆ ೧೧೨ರಿಂದ ೧೧೫ ಎಂದಿರುವುದಕ್ಕೆ ಬದಲಾಗಿ ೧೦೧೨, ೧೦೧೫ ಎಂದಿದೆ. ಇದೇ ಕಟ್ಟಿನಲ್ಲಿ ಕಾರಣಾಗಮ, ಷಟ್ಸ್ಥಲ ತಿಲಕದ ನಾಂದ್ಯಗಳೆಂಬ ಇನ್ನೂ ೨೩ ಗ್ರಂಥಗಳಿವೆ.

1983

ಕೆ. ೩೨೫/೫	**ಸೌಂದರಪುರಾಣದ ನಾಂದ್ಯ**	ವಾರ್ಧಕ ಷಟ್ಪದಿ
೯.೫" × ೨"	ಬೊಮ್ಮರಸ	೧೪೫೦
೯–೧೨ ಪತ್ರ	೧೧ ಪಂಕ್ತಿ	೫೬ ಅಕ್ಷರ

ಆದಿ : ಶ್ರೀವರ ಸರೋಜಭವ ದೇವೇಂದ್ರಮುಖ್ಯಾನಾ
ನಾವಿಬುಧ ಮಕುಟಮಣಿರತ್ನಗಣ ವಿಮಳ ಪ್ರ
ಭಾವಿರಾಜಿತಚರಣನಮೃತಕರಶೇಖರನು ಸೌಖ್ಯಕರನೂ

ಪಾವನ ಚರಿತ್ರಸುಜ್ವಳ ಭಾಳನೇತ್ರನಗ
ಜಾವಲ್ಲಭಂ ನಿಗಮ ದುರ್ಲ್ಲಭಂ ರಕ್ಷಿಸುಗೆ
ಭೂವಳೆಯವನು ನೀಲಕಂಠಲಿಂಗಂ ಸುಜನ ಹೃದಯ ಸರಸಿಜ ಭೃಂಗನೂ
|| ೧ ||

ಅಂತ್ಯ : ಸೌಂದರ ಪುರಾಣವೀ ಕೃತಿಯನವನಿಯೊಳಂದ
ಛಂದಮಂ ಪಡೆವಂತೆ ಸಂಪೂರ್ನ್ನವಾಗಿ ರಚಿ
ಸೆಂದು ಚೊಕ್ಕದೇವಾಪ್ಪಾಯನ ಗರ್ಭ್ಭಜಾತ ಚಿಕ್ಕವೀರಣಯ್ಯಂ ಬೆಸಸಲೂ
ಪೊಂದೇಗುಲಕ್ಕನರ್ಘ್ಯದ ರತ್ನ ಕಳಸಮಂ
ತಂದು ಸೇರಿಸುವಂತೆ ನೆಱದಡೆದೊಪ್ಪಿ ಪೇ
ಳ್ದಂ ದಿವ್ಯ ಶಿವಕವೀಂದ್ರರ ಭೃತ್ಯನೆನಿಪ ಕರ್ನ್ನಾಟಕವಿ
ಬೊಂಮರಸನೂ || ೨೬ ||

ವೃ|| ದ್ರಾರಿದ್ರೋಪ್ರೇಕ ಭದ್ರದ್ವಿಭವಿದಳನ ಕಂಠೀರವಂ ಸರ್ವ್ವವಿದ್ಯಾ
ಧಾರಂ ಶ್ರೀ ನೀಲಕಂಠೇಶ್ವರನ ಕರುಣಸತ್ಕಾರ ದುಗ್ಧಾಬ್ಧಿ ಸಮ್ಯ
ಕ್ಸಾರಾದೀಶ ಪ್ರಭಾಸಂಚಯವಿದು ವಿದಿತಂ ಸೌಂದರಾಧೀಶನೆಂದೆಂ
ಬೀ ರಮ್ಯಂಬೆತ್ತ ಪಂಚಾಕ್ಷರವನನವರತಂ ಭಾವಿಸಲ್ ಶ್ರೀನಿವಾಸಂ ||೩೦||

ಸೌಂದರಪುರಾಣದ ನಾಂದ್ಯ ಸಮಾಪ್ತ ಶ್ರೀ.

ವಿಷಯ : ಸೌಂದರ ಪುರಾಣದ ಮಂಗಳ ಪದ್ಯಗಳು.

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಚೇರಮ ಕಾವ್ಯದ ನಾಂದ್ಯ, ಪ್ರಭು ದೇವರ ನಾಂದ್ಯಗಳೆಂಬ ಇನ್ನೂ ಇತರ ೨೪ ಗ್ರಂಥಗಳಿವೆ.

1984

ಕೆ.ಬಿ. ೯೭	**ಸೌಂದರ ವಿಳಾಸ**	ವಾರ್ಧಕಷಟ್ಪದಿ
೮″ × ೬.೫″	ಅಣ್ಣಾಜಿ	೧೭ನೆಯ ಶತಕ
೧೭೩ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ ; ಶ್ರೀ x x ಸೌಂದರ ವಿಳಾಸ ವಾರ್ಧಿಕಷಟ್ಪದಿ ನಿರ್ವಿಘ್ನಮಸ್ತು x x
ಶ್ರೀಕರ ಜಟಾಜೂಟ ಜಾಹ್ನವೀ ಧರ ಸಕಲ
ಲೋಕೇಶ ಸಾಮವೇದ ಸ್ತೋತ್ರಪಾತ್ರ ಕರು
ಣಾಕಾರ ಕಮಲಭವ ವಿಷ್ಣು ಮನುಮುನಿನಮಿತ ವರದಿವ್ಯ ಪಾದಪದ್ಮಾ

ಮಾಕಾಳಿಯೋಪ ಪಾವನಚರಿತ ತರುಣಶಶಿ
ಲೇಖಾ ವಿಭೂಷ ಷಣ್ಮುಖ ಜನಕನಗಚಾಪ
ಪಾಕಶಾಸನ ವಂದ್ಯಾಪಶುಪ ಪರಮಾನಂದ ರಕ್ಷಿಸೈ ಗಂಗಾಧರ ||

x x x x

೪ನೆಯ ಪತ್ರ

ಆದಿಕವಿಗಳು ನಡೆದ ಮಾರ್ಗವಲ್ಲದೆ ಬೇರೆ
ಹಾದಿಯುಂಟೆಂಬನಾತನೆ ಗಾಂಪನೆಂಬೆ ರಸ
ವಾದಿ ಲೋಹವ ಕರಗಿ ಇಕ್ಕಲು ಕಳಂಕನದು ಮಿಸುನಿಯಹುದೆಂದು ತಿಳಿದೂ
ಸಾದಿಸುವೆ ಚತುರ ಕವಿತಾರಚನೆ ಯನ್ನ ಕೃತಿ
ಗಾದಾರವೆಂದು ತೆಗದಿಡಲು ನನೆಯೊಳೆ ಕಂಪು
ವೇದಿಸಿದ ತೆರದಿ ಮಗಮಗಿಸುತ್ತು ಸೌಂದರವಿಳಾಸವನದೇವೇಳ್ವನೂ
ಧೀರನತ್ಯಧಿಕ ವಿತರಣ ಗುಣದಿ ಮೆರವೆ ಮಂ
ದಾರ ಮದವತಿಯರ ಮುಖೇಂದು ಮಂಡಲದಮೃತ
ಸಾರಕಿರಣದ ರುಚಿಯ ಸೇವಿಪ ಚಕೋರ ಲಲನಾಜನ ಕಪೋಲಯುಗದಿ
ಸಾರತವಮಾದ ಮೃಗಮದದ ಮಕರಿಕ ಚಿತ್ರ
ಪಾರಣದ ಕುಂಭದಂತಿಡಿಕಿರಿದ ಕುಚದ ಮಣಿ
ಹಾರ ಪೊಸಜವ್ವನೆಯ ನೊಸಲೊಳೊಪ್ಪುವ ತಿಲಕನಣ್ಣಾಜಿ ನೀನೆಂಬರೂ ||

ಅಂತ್ಯ : ಇದು ಪಶ್ಚಿಮಾಂಗನೆಯಲಂಕಾರಗೈದು ಸ
ಮ್ಮುದದಿಂದೆ ನೋಳ್ಪ ಮನೋಮುಕುರವೊ ಮೇಣು ಮ
ತ್ತಿದು ಸುರಪನೈರಾವತದ ಮಸ್ತಕಾಗ್ರದೊಳು ಪೊರವ ಚೂಡಾರತ್ನವೋ
ಯಿದು ಪೂರ್ವವನಿತೆಯೊಳನಿಟಲ ಸಮಭಾಗದೊಳ
ಗಂದಿಸಿ ಥಳಥಳಿಸಿ ರಾಜಿಪ ನೊಸಾಲಕಣ್ಣೋಯೆನೆ
ಪದಪಿನಿಂದರ್ಕನೈತಂದು ನಿಂದನೋ ಪೂರ್ವಶೈಲದೊಳೆ ಜಗವ ಬೆಳಗಿ
|| ಶ್ರೀ ಶ್ರೀ ||

ವಿಷಯ : ಸೌಂದರನಂಬಿಯ ಕಥೆ.

ವಿಶೇಷ : ಪದ್ಯಗಳ ಸಂಖ್ಯೆಯನ್ನು ಕೊಟ್ಟಿಲ್ಲ. ೫೭, ೮೯, ೧೪೫ ನೆಯ ಪತ್ರಗಳ ಒಂದುಕಡೆ ಮಾತ್ರ ಬರವಣಿಗೆಯಿದೆ. ೫೭ನೆಯ ಪತ್ರದ ಮುಂಭಾಗದಲ್ಲಿ ಬರವಣಿಗೆ ಇಲ್ಲ. ೧೪೯ನೆಯ ಕ್ರಮಸಂಖ್ಯೆ ಬಿಟ್ಟುಹೋಗಿದೆ. ಆದರೆ ವಿಷಯಲೋಪವಿಲ್ಲ.

1985

ಕೆ.ಬಿ. ೯೨	ಸೌಂದರ್ಯಲಹರಿಯ ಟೀಕೆ	ಶ್ಲೋಕ, ಟೀಕು
೮"×೬.೫"	ಜಕ್ಕಣಾಮಾತ್ಯ	೧೮ನೆಯ ಶತಕ
೧-೨೮೪ ಪುಟ	೧೨ ಪಂಕ್ತಿ	೨೨ ಅಕ್ಷರ

ಆದಿ : ಸೌಂದರ್ಯಲಹರಿ

ಕಂದ ‖ ಸೌಂದರ್ಯಲಹರಿಯೆನಿಸುವ
ಸೌಂದರ ವರಸೌಂದಸಪ್ತದಂತರದೆಡೆಗುಂ
ಯೆಯ್ದುವ ದಾರಿಯ ತೋರುವ
ಯ್ಯೆದೊಂದರ ಚಕ್ರದೀಪವಿದು ಬುಧಜನರ್ಗಂ ‖

ವೃತ್ತ ‖ ಶ್ರೀ ಚಕ್ರಾಂಬುಜಭೃಂಗ ಪುಂಗವ ಸದಾಷಟ್ಚಕ್ರಸೌಧಾಂತದೊಳ್
ಸಂಚಾರೀವರಪಾರಿವಪ್ರಕಟಿತ ಶ್ರೀರಾಜ್ಯವಿದ್ಯಾಸರೋ
ವೀಚೀಖೇಲನಹಂಸ ಕಂನಡಕವಿ ಶ್ರೀವಿಟ್ಠಲಾಖ್ಯಾಸುಧೀ
ಪ್ರಾಚೀಪರ್ವತ ಭಾನು ಜಕ್ಕಣಮಹಾಮಾತ್ಯಪ್ರಣೀತಂ ಶುಭಂ ‖

X X X X

ಟೀಕು ‖ ಹೇ ಭಗವತಿಯೇ ಯ ಏಕೋ ದೇವಃ ಶಿವಃ ಶಕ್ತ್ಯಾ ಯುಕ್ತೋ ಭವತಿ ಯದಿ ಆವದರಿಂದ ಸದಾಶಿವನು ಶಕ್ತಿಯೊಡನೆ ಕೂಡಿದವನಾದದುಂಟಾದರೆ ತದಾಪ್ರಭವಿತುಂ ಶಕ್ತಃ। ಆಗ ಪ್ರಪಂಚವನು ಸೃಷ್ಟಿ ಮಾಡುವದಕ್ಕೆ ಸಮರ್ಥನು ‖

ಅಂತ್ಯ : ನನ್ನ ಸಮ್ಮಂಧವಾದ ವಾಕ್ಕುಗಳಿಂದ ವಾಕ್ಸಮೂಹದ ನಿನ್ನ ಈ ಸ್ತುತಿ। ಶ್ರೀ ಶಂಕರಭಗವತ್ಪಾದರು ಸೌಂದರ್ಯಲಹರಿಯ ಸ್ತೋತ್ರವ ಮುಗಿಸಿ ಬ್ರಹ್ಮ ಮೊದಲಾದ ದೇವತೆಗಳು ಸ್ತೋತ್ರವ ಮಾಡಲರಿಯದಂಥಾ ಸರ್ವೇಶ್ವರಿಯ ಸ್ತೋತ್ರವ ಮಾಡಬಲ್ಲೆನೆ। ಆದರೂ ಜ್ಯೋತಿರ್ಮಯವಾದ ಸೂರ್ಯನಿಗೆ ದೀಪದಿಂದ ಆರತಿಯ ಮಾಡುವ ಹಾಗೆ ಭಕ್ತಿಇಂದ ನೀನು ಕೊಟ್ಟ ವಾಕ್ಕಿನಲ್ಲಿ ನಿನ್ನ ಸ್ತೋತ್ರವ ಮಾಡಿದವೆಂದರು ‖ ಶ್ಲೋಃ ‖ ೧೦೦ ‖ ಷಟ್ಚಕ್ರದೀಪಿಕೆ ವೆಂಬ ಕನ್ನಡ ಟೀಕು ಸಂಪೂರ್ಣ ‖

ವಿಷಯ : ಮಂತ್ರ ತಂತ್ರ ಶಾಸ್ತ್ರ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ.

1986

ಕೆ. ೧೫/೨ **ಸ್ತೋತ್ರಗಳ ಸಂಗ್ರಹ** ವೃತ್ತ, ಕಂದ

೧೦.೯" × ೧.೮" ಬೇರೆಬೇರೆ ಕವಿಗಳು ?

೧೮೫-೨೦೪ ಪತ್ರ ೭ ಪಂಕ್ತಿ ೪೦ ಅಕ್ಷರ

ಆದಿ : ಶ್ರೀಪಂಚ ಗುರುಭ್ಯೋ ನಮಃ
ಶ್ರೀದೇವೇಂದ್ರ ಮುನೀಂದ್ರ ವಂದಿತ ಗುಣವ್ರಾತಂ ಜಗತ್ಸ್ವಾಮಿಸಂ
ದಾದಿಬ್ರಹ್ಮನಗಾಥಬೋದನಿಳಯುಂ ದುರ್ವಾರ ಸಂಸಾರ ವಿ
ಚ್ಛೇದೋಪಾಯನಿಯುಕ್ತ ಸೂಕ್ತಿವೃಷ ಮಾರ್ಗಾಗ್ರೇಸರಂ ಪಾಪಹೃ
ತ್ಪಾದಾಬ್ಜಂ ದಯುಗೆಯ್ವನಕ್ಕೆಮಗೆ ಮುಕ್ತಿಶ್ರೀ ಸುಖಾವಾಪ್ತಿಯಂ ॥೧॥

ಅಂತ್ಯ : ನಿತ್ಯಸುಖಮಾತ್ಮರೂಪಮ
ನಿತ್ಯ ಸುಖ ಮೋಹರೂಪಮೆಂಬ ವಿವೇಕಂ
ಸತ್ಯಸ್ವರೂಪಮುವಱೊಳ
ಗತ್ಯಂ ತಾನು ಭವವಿಭ್ರಮಮಕ್ಕೆಮಗಹರ್ಾ ॥ ೮ ॥
ಜಯಮಂಗಲಮಹಾಶ್ರೀ

ವಿಷಯ : ಕೆಲವು ಕಾವ್ಯಗಳ ಪೀಠಿಕಾಸಂಧಿಯ ಆದಿಯಲ್ಲಿರುವ ಸ್ತುತಿಯ ಪದ್ಯಗಳು.

ವಿಶೇಷ : ಬರಹವು ಸುಂದರ, ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಮಲ್ಲಿನಾಥ ಪುರಾಣ ವೆಂಬ ಮತ್ತೊಂದು ಕೃತಿ ಇದೆ.

1987

ಕೆ. ೨೦೭/೯ **ಸ್ತೋತ್ರಗಳು** ಹಾಡು

೬.೬" × ೧" ? ?

೧೦೪-೧೧೦ ಪತ್ರ ೬ ಪಂಕ್ತಿ ೩೦ ಅಕ್ಷರ

ಆದಿ : ಕಂಜಸಂಭವಾದಿ ದಿವಿಜವೃಂದ ಸರ್ವಸೇವಿತಂ
ಮಂಜುಜಾರಿವೈರಿ ವೈರಿವಾಹನಂ ಕೃಪಾಕರಂ
ಕುಂಜರೇಂದ್ರಪಾಲ ಸನಕ ನಾರದಾದಿ ಪೂಜಿತಂ
ಭಕ್ತಪಾರಿಜಾತ ಶ್ರೀಪ್ರಸಂನ್ನ ಕೃಷ್ಣಮಾಶ್ರಯೇ ॥೧॥
ನಳಿನಮಂಗನ ಶಿರವನ್ಮೊದ ವರದ ಕುವರ ಸೇವಿತಂ
ಪೊಳೆವ ವಜ್ರ ನೀಲಮುತ್ತಿನ ಹಾರ ಕೇಯೂರನಂ ॥

ಅಂತ್ಯ : ಅಷ್ಟಸಿದ್ಧಿದಾಯಕಂ ಅಖಿಲಲೋಕ ನಾಯಕಂ
ಸ್ರಿಷ್ಟಿಪಾಲ ಲಕ್ಷ್ಮಿಲೋಲ ಭಕ್ತ ಪಾರಿಜಾತಕಂ
ಕರ್ತುಯೋಗ ನಾರಶಿಂಹ್ಮ ಮಾಧವಾ ಕೃಪಾಕರಂ
ಪೃಥ್ವಿಪಾಲ ಯಾದವಾದ್ರಿ ನಾರಶಿಂಹ್ಮಮಾಶ್ರಯೇ ॥ ೮ ॥

ವಿಷಯ : ವಿವಿಧ ಸ್ತೋತ್ರಗಳು.

ವಿಶೇಷ : ಈ ಗ್ರಂಥದೊಂದಿಗೆ ಮಾನೌಮಿಯ ಪದಗಳು, ರಾತ್ರಿ ನಲ್ಲನ ಪದಗಳು ಮೊದಲಾದ ಇತರ ೮ ಗ್ರಂಥಗಳಿವೆ.

1988

ಕೆ. ಬಿ. ೧೧೭	**ಸ್ಯಮಂತಕೋಪಾಖ್ಯಾನ**	ಯಕ್ಷಗಾನ
೭.೭" × ೬.೩"	ಲಿಂಗರಾಜ	೧೮೫೦
೧-೩೩ ಪತ್ರ	೧೭ ಪಂಕ್ತಿ	೨೦ ಅಕ್ಷರ

ಆದಿ : ಸ್ಯಮಂತಕೋಪಾಖ್ಯಾನ
ನಾಂದೀಪದ್ಯ—
ಶ್ರೀಧರಣೀಧರತನಯಾ
ಮಾಧುರ್ಯಾಸ್ವಾದ ಜನಿತ ಹರ್ಷೋತ್ಕರ್ಷಂ
ಸ್ವಾಧೀನ ಭುವನತಂತ್ರಂ
ಬೋಧಮನೆಮಗೀಗೆ ಭದ್ರಕಾಳೀರಮಣಂ ॥ ೧ ॥
ರಾಗ–ನಾಟಿರೂಪಕ—
ಜಯ ರಕ್ಷಾಧ್ವರ ನಾಯಕ ಜಯ ರಕ್ಷಿತ ಮುನಿಬಾಲಕ
ಜಯ ಮೋಕ್ಷ ಫಲ ವಿಧಾಯಕ। ಜಯ ಕುಕ್ಷಿತಲೋಕ
ಜಯ ನಗಜಾನಾಯಕ। ಜಯ ಖಗವಾಹನ ಸಾಯಕ
ಜಯಮೃಗಧರ ಶಶಿಮಸ್ತಕ ಜಯಸದಯಾಲೋಕ ॥ ೨ ॥

X X X X

ಕಂದ ॥ ವನಮಾಲಿ ಭಕ್ತಿರಸ ಪಾ
ವನ ಭಾಗವತಾಬ್ಧಿಜ ಸ್ಯಮಂತರತ್ನಾ
ಭಿನವೋಪಾಖ್ಯಾನಮನಾಂ
ಸನುಮತಮಪ್ಪಂತೆ ಯಕ್ಷಗಾನದೊಳಗೆ ಪೇಳ್ವೆಂ ॥ ೧೨ ॥

ಅಂತ್ಯ : ವಾರ್ಧಿಕ ||
ವರಭಾದ್ರಪತಮಾಸ ಸಿತಚತುರ್ಥೀ ತುಹಿನ
ಕಿರಣಾವಲೋಕನದಿ ಮಣಿಗಳ್ಳನೆಂದುನುತ
ಲಿರದೆ ಬಂದಪವಾದವೀ ಸ್ಯಮಂತಕದಿಂದ ಕಳೆದನಾ ನಳಿನನೇತ್ರಂ
ಧರೆಯೊಳದರಿಂದಲಾರಾಗೆ ತರತರದೊಳಂ
ದೊರಕಿದಪವಾದಗಳ ಕಳಿಯಲೀ ಕಥೆಯನ್ನು
ಬರೆದೋದೆ ಕೇಳಿ ಪರಿಹರವೆಂದು ಶುಕಯೋಗಿ ವರ ಪರೀಕ್ಷಿತಗೆಂದನು
|| ೩೭೭ ||

ಕಂದ || ಶರ ಕರಿ ಭೂಧರ ಶಶಧರ
ಪರಿಮಿತ ಸಂವತ್ಸರಂಗಳಳಿಯೋಳ್ ಕಳಿಯಲ್
ವರಲಿಂಗರಾಜನುಸುರ್ದಂ
ಪರಮಾಖ್ಯಾನ ಮಹಾಸ್ಯಮಂತಕ ಮಣಿಯಂ || ೩೮೧ ||

ಸಂಪೂರ್ಣ ಮಂಗಳಂ.

ವಿಷಯ : ಸ್ಯಮಂತಕಮಣಿಯ ಕಥೆ.

ವಿಶೇಷ : ಅಕ್ಷರ ವಿರಳವಾಗಿವೆ.

1989

ಕೆ. ಬಿ. ೪೯೨	ಸ್ಯಮಂತಕೋಪಾಖ್ಯಾನ	ಯಕ್ಷಗಾನ
೮" × ೬.೩"	ಲಿಂಗರಾಜ	೧೮೫೦
೧-೪೨ ಪತ್ರ	೧೬ ಪಂಕ್ತಿ	೧೭ ಅಕ್ಷರ

ಆದಿ : ಶ್ಯಮಂತಕೋಪಾಖ್ಯಾನದ ಕಥೆ ಬರಿಯುವುವಕ್ಕೆ ನಿರ್ವಿಘ್ನಮಸ್ತು ||
ನಾಂದಿ || ಕಂದಾ || ಶ್ರೀಧರಣೀಧರಜಾಧರ
ಮಾಧುರ್ಯ ಸ್ವಾದಜನಿತ ಹರ್ಷೋತ್ಕರ್ಷಂ
ಸ್ವಾಧೀನ ಭುವನತಂತ್ರಂ
ಭೋದಮನೆಮಗೀಗೆ ಭದ್ರಕಾಳೀರಮಣಂ || ೧ ||

X X X X

ಕಂದಾ || ವನಮಾಲಿ ಭಕ್ತಿರಸ ಪಾ
ವನ ಭಾಗವತಾಬ್ಧಿಜ ಸ್ಯಮಂತಕ ರತ್ನಾ
ಭಿನವೋಪಾಖ್ಯಾನವನಾಂ
ಸನುಮತವಪ್ಪಂತೆ ಯಕ್ಷಗಾನದಿ ಪೇಳ್ವೆಂ || ೧೨ ||

ಅಂತ್ಯ : ವಾರ್ಧಕಾ ॥ ವರ ಭಾದ್ರಪದ ಮಾಸ ಸಿತ ಚತುರ್ಥೀ ತುಹಿನ
ಕಿರಣಾವಲೋಕನದಿ ಮಣಿಗಳ್ವನೆಂದೆನುತ
ಲಿರದೆ ಬಂದಪವಾದವ ಸ್ಯಮಂತಕದಿಂದ ಕಳಿದನಾ ನಳಿನನೇತ್ರಂ
ಧರೆಯೊಳದರಿಂದಲಾರಾಗೆ ತರತರದೊಳಂ
ದೊರಕಿದೀದಪವಾದವಿಂದಲೀ ಕಥೆಯಂನು
ಬರದೋದೆ ಕೇಳಿ ಪರಿಹರವೆಂದು ಶುಕಯೋಗಿ
ವರ ಪರೀಕ್ಷಿತಗುಸುರ್ದನೂ ॥ ೩೭೮ ॥

X X X X

ಅಂಗಸಂಗಿ ಭುಜಂಗವರಗೆ ಷ
ಡಂಗವೇದನುತೆಗೆ ಲಿಂಗರಾಜ ಕಾರಾಬ್ಜ ಭೃಂಗಗೆ
ಮಂಗಳಾತ್ಮಕ ಮಹಲಿಂಗಗೆ ಶುಭ । ಮಂಗಳಂ ॥ ೩೮೧ ॥

ಕಂದಾ ॥ ಶರತತಿ ಭೂಧರ ಶಶಧರ
ಪರಿಮಿತ ಸಂವತ್ಸರಂಗಳಿಳೆಯೋಳ್ಕಳಿಯೆ
ವರಲಿಂಗರಾಜನುಸುರ್ದಂ
ಪರಮಾಖ್ಯಾನಮು ಸ್ಯಮಂತಕ ಮಣಿಯಂ ॥ ೩೮೨ ॥
ಶ್ರೀ॥ ಶ್ಯಮಂತಕೋಪಾಖ್ಯಾನದ ಕಥಾ ಸಂಪೂರ್ಣಂ ಮಂಗಳಮಹಾಶ್ರೀ.

ವಿಷಯ : ಸ್ಯಮಂತಕಮಣಿಯ ಕಥೆ.

ವಿಶೇಷ : ಸುದೃಢ ಪ್ರತಿ, ಸುಂದರ ಬರಹ, ಮೊದಲು ಮತ್ತು ಕೊನೆಯಲ್ಲಿ ಎರಡೆರಡು ಶುದ್ಧ ಪತ್ರಗಳಿವೆ.

1990

ಕೆ. ೭೫।೧೦	**ಸ್ವತಂತ್ರ ಸಿದ್ಧಲಿಂಗೇಶ್ವರ ವಚನ**	ವಚನ
೧೦.೭" × ೨.೨"	ಸ್ವತಂತ್ರ ಸಿದ್ಧಲಿಂಗೇಶ್ವರ	೧೪೮೦
೨೨೪-೨೪೭ ಪತ್ರ	೧೬ ಪಂಕ್ತಿ	೮೦ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ಸ್ವತಂತ್ರ ಸಿದ್ಧಲಿಂಗೇಶ್ವರನ ವಚನ ॥ ಶೂನ್ಯ ಮಹಾಶೂನ್ಯವಿಲ್ಲದಲ್ಲಿಂದತ್ತತ್ತ । ನಾದ ಬಿಂದುಕಳೆಗಳಿಲ್ಲದಲ್ಲಿಂದ ತ್ರತ್ತ । ಸದಾಶಿವ ಯೀಶ್ವರ ವಿದ್ಯೇಶ್ವರರೆಂಬ ಗಣೇಶ್ವರರಿಲ್ಲದಲ್ಲಿಂದತ್ತತ್ತ । ಗಂಗೆವಾಳುಕ ಸಮಾರುದ್ರರುಗಳಿಲ್ಲದಲ್ಲಿಂದತ್ತತ್ತ। ಬ್ರಹ್ಮವಿಷ್ಣು ಯಿಂದ್ರಾದಿ

ದಿಕ್ಪಾಲಕರಿಲ್ಲದಲ್ಲಿಂದತ್ತತ್ತ। ಕಾಲಕರ್ಮ್ಮ ಪ್ರಳೆಯಂಗಳಿಲ್ಲದಲ್ಲಿಂದತ್ತತ್ತ ಅತ್ತತ್ತ ಮುಂನ ನಿಂಮ ನಿಜದಲ್ಲಿ ನೀವೇ ಯಿದ್ದಿರಯ್ಯಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ॥ ೧॥

ಅಂತ್ಯ: ನೀರು ನೀರ ಕೂಡಿ ಕ್ಷೀರ ಕ್ಷೀರವಕೂಡಿ ಅಗ್ನಿ ಅಗ್ನಿಯಕೂಡಿದಂತೆ ತಂನೊಳಗೆ ಶಿವನು ಶಿವನೊಳಗೆ ತಾನಡಗಿ ಯೇಕವಾದ ಮತ್ತೆ ತಾ ಶಿವನಾದೆನೆಂಬ ಅಹಂಭಾವವಿಲ್ಲ ನೋಡಯ್ಯಾ। ಸರ್ವಾತ್ಮನೆಂಬ ಪರತತ್ವ ತಾನಾದ ಮತ್ತೆ ಭೇದಾಭೇದ ಸಂಖೆಯೆಂಬುದು ಯೇನೂಯಿಲ್ಲ ನೋಡಯ್ಯಾ। ನಿತ್ಯ ನಿರ್ವ್ವಿಕಾರ ನಿಸ್ಸೀಮ ಯೋಮಾತೀತ ನಿರ್ವಿಕಲ್ಪ ನಿಜ ತಾನಾದ ಮತ್ತೆ ಭೂಮ್ಯಾದಿ ಭೂತ ಗ್ರಹ ನಕ್ಷತ್ರ ದೇವ ಮನುಷ್ಯ ತಿರ್ಯಗ್ಜಾತಿಗಳೆಂಬ ವೇನೂಯಿಲ್ಲ ನೋಡಾ ಸತ್ತು ಚಿತ್ತು ಆನಂದಲಕ್ಷಣವಿದೆಂಬ ಗ್ನಾನಶೂನ್ಯವಾಗಿ ಶಬ್ದಮುಗ್ದವಾದ ಮತ್ತೆ ಪರಬ್ರಹ್ಮ ಅಪರಬ್ರಹ್ಮವೆಂಬ ನಾಮವು ಯಿಲ್ಲ ತಾನಲ್ಲದೆ ಮತ್ತೇನೂಯಿಲ್ಲ ನೋಡಾ ॥

ಜಲೇಜಲಮಿಲಿತಂ ನ್ಯಸ್ತಂ ವಹ್ನಾವಹ್ನಿರಿವಾರ್ಪ್ಪಿತಂ।
ಪರಬ್ರಹ್ಮಣಿ ಲೀನಾತ್ಮ ನ ವಿಭಾಗೇನ ದೃಶ್ಯತೇ॥

ಯಿಂತೆಂದುದಾಗಿ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ವೊಂದಾದ ಲಿಂಗೈಕ್ಯನಯಿರವು ॥ ೪೩೦ ॥ ಸ್ವತಂತ್ರ ಸಿದ್ಧಲಿಂಗೇಶ್ವರ ದೇವರು ನಿರೂಪಿಸಿದ ವಚನ ಸಮಾಪ್ತ ಮಂಗಳಮಹಾಶ್ರೀ ॥

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಸಮಗ್ರ. ಒಟ್ಟು ೪೩೦ ವಚನಗಳು. ಶಕಟರೇಫದ ಬಳಕೆಯಿದೆ. ಇದರೊಂದಿಗೆ ಷಟ್ಸ್ಥಲದ ಲಿಂಗಾಂಗ ಸಂಬಂಧದ ನಿರ್ವಚನ, ಅಂಬಿಗರ ಚೌಡಯ್ಯನ ವಚನ ವೊದಲಾದ ಇತರ ೧೨ ಗ್ರಂಥಗಳಿವೆ.

1991

ಕೆ. ೨೫೯।೫	**ಸ್ವತಂತ್ರ ಸಿದ್ಧಲಿಂಗೇಶ್ವರ ವಚನ**	ವಚನ
೯.೫″ × ೧.೭″	ಸ್ವತಂತ್ರ ಸಿದ್ಧಲಿಂಗೇಶ್ವರ.	೧೪೮೦
೨೫-೪೧ ಪತ್ರ	೧೨ ಪಂಕ್ತಿ	៦೨ ಅಕ್ಷರ

ಆದಿ : ಸ್ವಯವಚನಾ॥ ಪಿಂಡಪಿಂಡವೆಂದೆನೂ । ತನು ಪಿಂಡವೆ । ಮನ ಪಿಂಡವೆ । ವಾಯುಪಿಂಡವೆ ಅಲ್ಲಾ। ಆದಿಪಿಂಡವಿಡಿದು ಬಂದ ಜ್ಞಾನಪಿಂಡವೆ ಪಿಂಡಾ। ಅಥನರ್ರಿಯಲಿಲ್ಲಾ । ಅಥ ಕ್ಷೀರದೊಳಗಣ ಆಜ್ಯದಂತೆ । ಪಾಷಾಣದೊಳ

ಪಾವಕನಂತೆ। ಅಡಗಿಪ್ಪುದಾಗಿ। ಅಂತಪ್ಪ ನಿರ್ಮ್ಮಲಪಿಂಡ ನಿಂಮ್ಮ ಶರಣಂಗಾಯಿತ್ತೂ ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರಾ ॥ ೧ ॥

ಅಂತ್ಯ: ಪೃಥ್ವಿಯಬೀಜ ಅಪ್ಪುವಕೂಡಿ ಅಗ್ನಿಯಲ್ಲಿ ಮೊಳೆದೋರಿತು ವಾಯುವಿನಲ್ಲಿ ಶಾಖೆದೋ....... ಕಾಶದಲ್ಲಿ ಫಲ್ಲವಿಸಿತು। ಮಹದಾಕಾಶದಲ್ಲಿ ಫಲದೋರಿ ಶೂಂನ್ಯದಲ್ಲಿ ಹಂಣಾಯಿತು। ಅದು ನಿರಾಳದಲ್ಲಿ ರಸತುಂಬಿ ನಿರ್ವ್ವಯಲಲ್ಲಿ ತೊಟ್ಟ ಬಿಟ್ಟಿತು। ಆ ಹಂಣ ಪ್ರಭುದೇವರು ಆರೋಗಿಸಿದರಾಗಿ ನಿರ್ವಯು ಲಾದರೂ ಆ ಪ್ರಭುದೇವರಾರೋಗಿಸಿ ಮಿಕ್ಕ ಪ್ರಸಾದವ ಬಸವಂಣ ಮೊದಲಾದ ಅಸಂಖ್ಯಾತ ಮಹಾಗಣಂಗಳು ಸ್ವೀಕರಿಸಿದರಾಗಿ ಶಿವನೊಳ ಗಾದರು ನಾನು ಮಹಾಗಣಂಗಳ ಪ್ರಸಾದವನಾರೋಗಿಸಿದನಾಗಿ ನಿಜ ಗುರು ಸ್ವತಂತ್ರಸಿದ್ಧಲಿಂಗೇಶ್ವರನು ತಂನೊಳಗೆನ್ನನಿಂಬಿಟ್ಟುಕೊಂಡನೂ ॥ ೧೪೨ ॥ ಶ್ರೀ ಅರ್‍ರಿವೆ ಸಿಕ್ಕಿತು ನಿಜದರುವೆ ಬಾಳಮರವೆದ್ದು ಕುಲವೆಲ್ಲ ಹರ್‍ರಿದುಹೋಗಲಿಕಾಗಿ ॥ಪಲ್ಲಾ॥ ಹಸುರು ಹಳದಿ ಕೆಂಮು ಕರ್‍ರಿದಲ್ಲ ಅರುವೆ। ವಸದು ನೋಡಲು ನೋಟದತ್ತತ್ತಲರುವೆ। ಕುಶಲತನಗಳಿಗಾಸಾಧ್ಯವೀ ಯರುವೆ। ಅಸಮ ಶ್ರೀಗುರುಕೃಪೆವಡದವರರುವೆ ॥೧॥ ಕೇಳಲು ನಾಥವಿಲ್ಲ ದ ಬರ್‍ರಿಯರ್‍ರಿವೆ। ಹೇಳಲು ಅಂನ್ಯೋಂನ್ಯ ಸುಕಮಯದರ್‍ರಿವೆವ್ಯಾಳ್ಯ ವ್ಯಾಳ್ಯೆಗೆ ಸಾದಿಸುವದಲ್ಲದರ್‍ರಿವೆ। ಬಾಳಲೋಚನರೂಪನಾದವರರ್‍ರಿವೆ ॥೨॥ ಚಾರುಚತುರ್ವ್ವಿದದೊಳಗಿಲ್ಲದರ್‍ರಿವೇ ಮೂರು ಲೋಕಂಗಳ ಮೀರ್‍ರಿಥ ಅರ್‍ರಿವೆ। ತೊರುವ ಚಿದ್ವ್ಯೋಮದೊಳು ತುಂಬಿದರುವೆ। ಮಾರ। ಸಹಾರ ಮರುಳುಸಿದ್ಧನೆಂದರ್‍ರಿವೆಂ ॥ ೩ ॥ ಶ್ರೀ ನಿಜಗುರು ಸ್ವತಂತ್ರ ಸಿದ್ಧೇಶ್ವರ....ವಚನ ೧೪೫ಕ್ಕಂ ಮಂಗಳಮಹಾಶ್ರೀ

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ: ಪತ್ರಗಳು ೧೭ ಇದ್ದು ೨೫ರಿಂದ ೩೬ರವರೆಗೆ ಒಬ್ಬನೇ ಬರೆದ ಪತ್ರಗಳಾ ಗಿವೆ. ಅಲ್ಲದೆ ಪತ್ರಗಳ ಬಣ್ಣ ಆಕಾರವೂ ಭಿನ್ನವಾಗಿದ್ದರೂ ವಿಷಯ ಮಾತ್ರ ವಚನ ಸಂಖ್ಯಾನುಗುಣವಾಗಿ ಮುಂದುವರಿದಿದೆ. ಸುಮಾರು ಲುಪ್ತ ಪತ್ರ ಸ್ಥಾನಗಳಲ್ಲಿ ಬೇರೆಯವನು ಆ ಭಾಗ ಪ್ರತಿಮಾಡಿ ಸೇರಿಸಿದ್ದಾನೆ. ೪೦ನೆಯ ಪತ್ರಾನಂತರ ೩೪ನೆಯ ಸಂಖ್ಯೆಯ ಆದಿಯ ಪ್ರತಿಕಾರನ ಪತ್ರ ವಿದ್ದು ಈ ಪತ್ರದಲ್ಲಿ ಗ್ರಂಥ ಮುಕ್ತಾಯವಾಗಿದೆ. ೩೬–೩೪ರ ಮಧ್ಯೆ ಸಣ್ಣಕ್ಷರದ ಒಂದು ಪತ್ರ ಲುಪ್ತವಾದ್ದರಿಂದ ಆ ಭಾಗವನ್ನು ದಪ್ಪಕ್ಷರದಲ್ಲಿ ೪ ಪತ್ರಗಳಲ್ಲಿ ಬರೆದಿದೆ.

ವಚನಗಳು ೧೪೨ ಮಾತ್ರವೇ ಇದ್ದು ಕೊನೆಯಲ್ಲಿ ಮೂರು ಚರಣದ ಮರುಳುಸಿದ್ಧಾಂಕಿತ ಪದವಿದ್ದು ಆ ಪದದ ಮೂರು ಚರಣಗಳಿಗೂ ಮೂರು ಸಂಖ್ಯೆಗಳಿವೆ. ಈ ಸಂಖ್ಯೆಗಳನ್ನು ಕೂಡಿಕೊಂಡೇ ವಚನ ೧೪೫ ಕ್ಕಂ ಮಂಗಳಮಹಾ ಎಂದಿರುವುದು. 'ಸ್ವಯವಚನ' ವೆಂದು ಆರಂಭದಲ್ಲಿದೆ. ಈ ಕಟ್ಟಿನಲ್ಲಿರುವ ಕೆ ೨೫೯|೧ ಇದು ಒಂದು ಸೈಜಿನ ಓಲೆಯಾಗಿದೆ. ಡಿಟೋ ನಂಬರಿನ ೨, ೩, ೪, ೫ ಈ ಗ್ರಂಥಗಳು ಭಿನ್ನ ಸೈಜಿನ (ಒಂದು ಕಟ್ಟಿನ) ವಾಗಿರುತ್ತವೆ. ಅಂತೂ ಎರಡು ಸೈಜಿನ ಓಲೆಗಳ ಕಟ್ಟು ಈ ನಂಬರಿನಲ್ಲಿದೆ. ನಿಜಗುರು ಸ್ವತಂತ್ರ ಸಿದ್ಧಲಿಂದೇಶ್ವರಾಂಕಿತ ವಚನಗಳಾಗಿದ್ದರೂ ಮುಕ್ತಾಯದಲ್ಲಿ 'ನಿಜಗುರು ಸ್ವತಂತ್ರ ಸಿದ್ಧೇಶ್ವರ ವಚನ ೧೪೫ಕ್ಕಂ' ಎಂದು ಪ್ರತಿಮಾಡಿರುವುದು ವಿಚಾರಣೀಯ.

ಈ ಕಟ್ಟಿನಲ್ಲಿ ಗುರುಭಕ್ತನ ಕಾವ್ಯ, ಅಕ್ಕಗಳಸೃಷ್ಟಿ, ಪ್ರಾಣಲಿಂಗ ಜ್ಞಾನ ದರ್ಪಣ, ಸರ್ವಾಂಗಲಿಂಗಸ್ಥಲದ ವಚನಗಳು ಇವೆ.

1992

ಕೆ.ಎ. ೨೬೧	**ಸ್ವಪ್ನಾಧ್ಯಾಯದ ಟೀಕು**	ಶ್ಲೋಕ, ಟೀಕು
೧೩″ × ೮″	ರಂಗಾಶಾಸ್ತ್ರಿ	೧೮೧೫
೧–೧೨ ಪತ್ರ	೨೨ ಪಂಕ್ತಿ	೧೬ ಅಕ್ಷರ

ಆದಿ: ಸ್ವಪ್ನಾಧ್ಯಾಯ ಟೀಕು ಪುಸ್ತುಕ ಸಹ ಬರಿಯುವದಕ್ಕೆ ಶುಭಮಸ್ತು
ಪ್ರಣಮ್ಯ ಶಿರಸಾ ದೇವಂ ಗೋವರ್ಧನಧರಂ ಹರಿಂ|
ಗೊಪಾಲಂ ಗೋಭಿರೀಡ್ಯಂ ತಂ ಸುರಾಸುರ ನಮಸ್ಕೃತಂ ||

ಟೀಕು|| ಗ್ರಂಥಾದಿಗಳಲ್ಲಿ ಮಂಗಳವಂ ಮಾಡಬೇಕೆಂಬ ಶಾಸ್ತ್ರದಿಂ ಪದ್ಯ ರೂಪಕವಾದ ಮಂಗಳವಂ ಮಾಡಿದರೆ ಗ್ರಂಥ ಪರಿಸಮಾಪ್ತಿ ಆಗತಲಿಧೆ ಯಂಬ ಶಾಸ್ತ್ರವಿರುವು ರಿಂದ ಗೋಪಾಲ ಪ್ರತಿಪಾದ್ಯವಾದ ಮಂಗಳವಂ ಗ್ರಂಥಾದಿಯಲ್ಲಿ ಬರೆಯಲ್ಪಡುತಲಿಧೆ.

ಅಂತ್ಯ: ಯತ್ಫಲಂ ಗೋಸಹಸ್ರಸ್ಯ ಸವರ್ಣಾಲಂಕೃತಸ್ಯ ಚ |
ತತ್ಫಲಂ ಶ್ರುತಮಾತ್ರೇಣ ಭವಿಷ್ಯತಿ ನ ಸಂಶಯಃ ||

ಇತಿ ಬೃಹಸ್ಪತಿ ಪ್ರೋಕ್ತ ಸ್ವಪ್ನಾಧ್ಯಾಯಃ ಸಮಾಪ್ತಿ x x x x

ಟೀಕು|| ಶಕವರ್ಷ ೧೬೭೮ನೆ ಧಾತು ಸಂ ಚೈತ್ರ ಶುದ್ಧ ೮ ಶುಕ್ರವಾರ ರಾತ್ರೆ ೮ ಘಳಿಗ್ಗೆ ವೃಶ್ಚಿಕಲಗ್ನದಲ್ಲಿ ಕರ್ನಾಟ ಭಾಷೆಯಲ್ಲಿ ಶ್ರೀರಂಗಪಟ್ಟಣದಲ್ಲಿ

ರಂಗ ಶಾಸ್ತ್ರಿಯಿಂದ ಮಾಡಿ ಬರದ ಸ್ವಪ್ನಾಧ್ಯಾಯ ಸಮಾಪ್ತಿಯಾಗಿ ಮುಗಿಯಿತು ಶ್ರೀ.

ವಿಷಯ : ಸ್ವಪ್ನ ಫಲಗಳು.

ವಿಶೇಷ : ಅಕ್ಷರಗಳು ಸ್ಫುಟ.

1993

ಕೆ. ಬಿ. ೨೪	**ಸ್ವಪ್ನಾಧ್ಯಾಯದ ಟೀಕು**	**ಶ್ಲೋಕ,ಟೀಕು**
೯.೩" × ೭.೩"	ರಂಗಾಶಾಸ್ತ್ರಿ	೧೮೧೫
೧೩ ಪತ್ರ	೧೯ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ಸ್ವಪ್ನಾಧ್ಯಾಯ ಟೀಕೂ ಪುಸ್ತುಕ ಸಹ ಬರೆಯುವದಕೆ ಶುಭಮಸ್ತು॥

ಪ್ರಣಂಮ್ಯ ಶಿರಸಾದೇವಂ ಗೋವರ್ಧನಧರಂ ಹರೀಂ ।
ಗೋಪಾಲಂ ಗೋಭಿ....ಡ್ಯಂ ತಂ ಸುರಾಸುರ ನಮುಸ್ಕೃತಂ ॥ ೧ ॥

x x x x

ಟೀಕೂ॥ ಗ್ರಂಥಾದಿಗಳಲ್ಲಿ ಮಂಗಳವಂ ಮಾಡಬೇಕೆಂಬ ಶಾಸ್ತ್ರಾದಿ .... ರೂಪಕವಾದ ಮಂಗಳವಂ ಮಾಡಿದರೆ ಗ್ರಂಥ ಪರಿಸಮಾಪ್ತಿ.

ಅಂತ್ಯ : ಟೀಕು॥ ಸ್ವರ್ಣಾಲಂಕಾರಮಾಡಿದ ಗೋಸಹಸ್ರ ...ನಾಮಾಡಿದರೆ ಯಾವ ಫಲವಾಗುವುದೋ ಆ ಫಲವೆಲ್ಲ ಯಿಾ ಅಧ್ಯಾಯ ಶ್ರವಣಮಾತ್ರದಿಂ ಬ-ುವದು ಯಂದ್ದು ಬೃಹಸ್ಪತಿ ಆ ಚಾರು ದೇವೇಂದ್ರು ಮೊದಲಾದ ತಂಮ್ಮ ಶಿಷ್ಯರಿಗೆ ಹೇಳಿದರು ಯಂಬಲ್ಲಿ........ಧ್ಯಾ....ಸಮಾಪ್ತಿ x x x ೧೭೩೮ನೆ ಧಾತುಸಂ ॥ ಚೈತ್ರ ಶುದ್ಧ ೮ ಶುಕ್ರವಾರ ...... ೮ ಘಳಿಗೆ ವೃಶ್ಚಿಕ ಲಗ್ನದಲ್ಲಿ ಕರ್ನಾಟಭಾಷೆಯ .... ಶ್ರೀರಂಗಪಟ್ಟದಲ್ಲಿ ರಂಗಶಾಸ್ತ್ರಿ ಯಿಂದ್ದಮಾಡಿ ಬರೆದ ಸ್ವಪ್ನಾಧ್ಯಾ ಸಮಾಪ್ತಿಯಾಗಿ ಮುಕ್ತಾಯ ಮಂಗಳಮಹಾಶ್ರೀ

ವಿಷಯ : ಸ್ವಪ್ನ ಫಲಗಳು.

ವಿಶೇಷ : ಶಿಥಿಲ. ಪತ್ರಗಳನ್ನು ಹುಳು ತಿಂದು ರಂಧ್ರಗಳು ಬಿದ್ದು ಅನೇಕ ಕಡೆ ಅಕ್ಷರಗಳು ಲುಪ್ತವಾಗಿವೆ.

1994

ಕೆ.ಬಿ. ೪೪೫ ಸ್ವಪ್ನಾಧ್ಯಾಯದ ಟೀಕು ಶ್ಲೋಕ, ಟೀಕು

೮.೪" × ೬.೬" ರಂಗಾಶಾಸ್ತ್ರಿ ೧೮೧೫

೧–೧೩ ಪತ್ರ ೧೮ ಪಂಕ್ತಿ ೧೮ ಅಕ್ಷರ

ಆದಿ : ಶ್ರೀ ॥ ಸ್ವಪ್ನಾಧ್ಯಾಯದ ಟೀಕು ಬರಿಯುವದಕ್ಕೆ ನಿರ್ವಿಘ್ನೆಮಸ್ತು ॥

ಪ್ರಣಮ್ಯ ಶಿರಸಾ ದೇವಂ ಗೋವರ್ಧನಧರಂ ಹರಿಂ ।
ಗೋಪಾಲಂ ಗೋಭಿರೀಡ್ಯಂ ತಂ ಸುರಾಸುರ ನಮಸ್ಕೃತಂ ॥
ಪುರಾ ವಾಚಸ್ಪತಿಪ್ರೋಕ್ತಾ ಸ್ವಪ್ನಾಧ್ಯಾಯಸ್ಯ ಭಾಷಯಾ ।
ಟೀಕಾಂ ಮನೋರಮಾಂ ಕುರ್ವೇ ಸರ್ವೇಷಾಮುಪಕಾರಿಕಾಂ ॥
ಕೌಂಡಿನ್ಯಗೋತ್ರಜೋತ್ಪನ್ನ ಶ್ರೀ ಶ್ರೀನಿವಾಸ ತನೂದ್ಭವಃ ।
ಶ್ರೀರಂಗಪುರ ವಾಸ್ತವ್ಯ ರಂಗನಾಥಾಭಿದಃ ಸುಧೀಃ ॥

ಟೀಕು ॥ ಗ್ರಂಥಾದಿಗಳಲ್ಲಿ ಮಂಗಳವಂ ಮಾಡಬೇಕೆಂಬ ಶಾಸ್ತ್ರದಿಂ ಪದ್ಯ ರೂಪಕವಾದ ಮಂಗಳವಂ ಮಾಡಿದರೆ ಗ್ರಂಥ ಪರಿಸಮಾಪ್ತಿ ಆಗತಲಿಧೆ ಯೆಂಬ ಶಾಸ್ತ್ರವಿರೂವದ್ದರಿಂದ ಗೋಪಾಲ ಪ್ರತಿಪಾದ್ಯವಾದ ಮಂಗಳವಂ ಗ್ರಂಥಾದಿಯಲ್ಲಿ ಬರೆಯಲ್ಪಡುತ್ತಲಿದೆ x x x x ಪೂರ್ವದಲಿ ಬೃಹಸ್ಪತ್ಯಾಚಾರ್ಯರಿಂದ ಪೇಳಲ್ಪಟ್ಟ ಸ್ವಪ್ನಾಧ್ಯಾಯಕ್ಕೆ ಕರ್ನಾಟಕ ಭಾಷಾರೂಪಕವಾದಂಥಾ ಮನೋಹರವಾದಂಥ ಸರ್ವೋಪಕಾರವಾದಂಥ ಟೀಕನ್ನು ಶ್ರೀರಂಗಪುರವಾಸಿಗಳಾದಂಥ ಕೌಂಡಿನ್ಯಗೋತ್ರೋತ್ಪನ್ನರಾದ ಶ್ರೀನಿವಾಸ ಶಾಸ್ತ್ರಿಗಳ ಪುತ್ರರಾದ ರಂಗಾಶಾಸ್ತ್ರಿಯೆಂಬ ಹೆಸರುಳ್ಳಂಥಾವ ನಾದ ನಾನು ಮಾಡುತ್ತಲ್ಲಿಧೇನೆ.

ಅಂತ್ಯ : ಶಾಕೇ ವಸ್ಸ್ವಗ್ನಿ ತುರಗಕಲಾನಾಥಮಿತೇ ಶುಭೇ
ಸಂವತ್ಸರೇ ಧಾತೃ ಸಂಜ್ಞೇ ಚೈತ್ರೇ ಶುಕ್ಲಾಷ್ಟಮಿತಿಥೌ ।
ಭೃಗುವಾರೇಣ ಸಂಯುಕ್ತೇ ರಾತ್ರೌ ಶ್ರೀರಂಗಪತ್ತನೇ
ಲಗ್ನೇ ವೃಶ್ಚಿಕ ಸಂಯುಕ್ತೇ ಸಮಾಪ್ತಿಮಗಮತ್ತ್ವಿಯಂ
ಟೀಕಾ ಭಾಷಾನ್ವಿತಾಜ್ಞಯಾ ಲಿಖಿತಾ ರಂಗಸೂರಿಣಾ

ಟೀಕು ॥ ಶಕವರ್ಷಗಳು ೧೭೩೮ನೇ ಧಾತು ಸಂವತ್ಸರದ ಚೈತ್ರಶುದ್ಧ ೮ ಶುಕ್ರವಾರ ೩೮ ಘಳಿಗೆಗೆ ವೃಶ್ಚಿಕದಲ್ಲಿ ಕರ್ನಾಟ ಭಾಷೆಯಲ್ಲಿ ಶ್ರೀರಂಗ ಪಟ್ಟದಲ್ಲಿ ರಂಗಶಾಸ್ತ್ರಿಯಿಂದ ಮಾಡಿ ಬರದ ಸ್ವಪ್ನಾಧ್ಯಾಯ ಸಮಾಪ್ತಿ ಯಾಗಿ ಮುಗೀತು ಮಂಗಳಮಹಾಶ್ರೀ ॥

ವಿಷಯ : ಸ್ವಪ್ನ ಫಲಗಳು.

ವಿಶೇಷ : ಸುಂದರಾಕ್ಷರ, ಇದು ಇದೇ ಸಂಸ್ಥೆಯಲ್ಲಿರುವ ಕೆ.ಬಿ. ೨೪ನೆಯ ನಂಬರಿನ ಪುಸ್ತಕದ ಪ್ರತ್ಯಂತರ.

1995

ಕೆ. ೧೧/೧	ಸ್ವರ ಚಿಂತಾಮಣಿ ಸಟೀಕು)	ಶ್ಲೋಕ, ಟೀಕು
೧೦.೫" × ೧.೪"	?	?
೧-೫ ಪತ್ರ	೧೧ ಪಂಕ್ತಿ	೩೭ ಅಕ್ಷರ

ಆದಿ : ಸ್ವರ ಚಿಂತಾಮಣಿಯು ಗ್ರಂಥ ||

ಪ್ರಣಂಮ್ಯಂ ದೇವ ದೇವೇಶಂ ಲೋಕನಾಥಂ ಜಗತ್ಪತಿ
ಪೃಚ್ಛಾಮಿ ತ್ವ ಮಹಾಭಕ್ತ್ಯ ಕಥಾಯಾಸ್ವ ಪ್ರಸಾದಕಾ || ೧ ||
ನತಿಥಿರ್ನ್ನಚ ವಾರಂ ಚ ನ ಬಾಹ್ಯಂ ನೈ ಧನಂ ಬಲಂ
ಸಿದ್ಧಿತಸ್ಯಕರಜ್ಞಾನಂ ಕಥಾ ಯಸ್ಯ ಮಹಾಪ್ರಭೋ ||

ಟೀಕು || ಶ್ರೀಪಾರ್ವತಾದೇವಿಯರು ಯಲೆ ಸ್ವಾಮಿ ತಿಥಿಬಲ ವಾರಬಲ ಚಂದ್ರಬಲ ಯಿವರಿಂದಧಿಕ ಬಲವಹಂಥಾ ಬಲವ ಕೃಪೆ ಮಾಡಿ ಯಂದು ಶ್ರೀ ಸದಾಸಿವಂಗೆ ಬಿನ್ನಹಂ ಮಾಡಿದಳು || ೨ ||

ಅಂತ್ಯ : ಮತ್ತೆ ಆ ನಾಸಿಕದಲ್ಲಿ ಯಡಭಾಗವ ಮುಟ್ಟಿ ನಡದರೂ ಬಲದ ಭಾಗವ ಮುಟ್ಟಿ ನಡದರೂ ಗಲ್ಲಗಳ ತಾಗಿ ಕರ್ನಕಾಗಿ ಅಡ್ಡ ಹಾರಿದರೂ ವಾಯು ತತ್ವವೆಂದರಿವುದು। ಮತ್ತೆ ನಾಸಿಕದಲ್ಲು ತುಂಬಿ ಯಲ್ಲಾ ಠಾವನೂ ಮುಟ್ಟಿ ವಾಯು ನಡದರ ಅಲ್ಲ ವಾಯು ನಡೆಯನೆ ನಾದ ಜೇಂಕಾರ ಹುಟ್ಟಿದರೆಯು ಆಕಾಶತತ್ವವೆಂದರಿವುದು। ನಾಸಿಕದಲ್ಲು ಯಿಾ ಮರಿಯಾದಿ ಯಲ್ಲು ತತ್ವವನರಿವುದು || ನಾಸಿಕ ಪ್ರಕರಣಂ ಸಮಾಪ್ತ || ಹೃದಯದಲ್ಲು ತತ್ವವನರಿವ ಕ್ರಮಾ ||

ಮದ್ಯೋ ಪೃಥ್ವಿರದಶ್ಚಾಪೆ ಯೊ ಊರ್ದ್ದೇವತಿಚಾನಲಃ
ತಿಯ್ಯಗ್ವಾಯು ಪ್ರವಾಹಸ್ಯಾ ನಭೋ ವಹತಿ ಸಂಕ್ರಮೇ || ೪ ||

ಟೀ|| ಹೃದೆಯದಲ್ಲು ಮೊಲೆಯು ತೇಜಸ್ಥಾನ। ಅಲ್ಲಿಂದ ಮೇಲೆ ನಾಲ್ವೆರಳು ಪೃಥ್ವಿ ಅಲ್ಲಿಂದಂ ಮೆಲ್ಕ ....

ವಿಷಯ : ಚಂದ್ರಸೂರ್ಯ ನಾಡಿಗಳಲ್ಲಿ ಉಸಿರುಬಿಡುವುದರಿಂದ ಶುಭಾಶುಭಫಲ ಗಳನ್ನು ತಿಳಿಯುವ ಕ್ರಮ.

ವಿಶೇಷ : "ನಾಸಿಕಪ್ರಕರಣ ಮುಗಿದು ತತ್ವಸ್ಥಾನಪ್ರಕರಣ ಹೃದಯತತ್ವವನರಿ ಪುದಕೆ" ಎಂದು ಪ್ರಾರಂಭವಾಗಿ ಕೇವಲ ಮೂರು ಸಾಲುಗಳಲ್ಲಿ ಅಂತ್ಯಗೊಂಡಿದೆ. ಈ ಕಟ್ಟಿನಲ್ಲಿ ಜಿನೇಂದ್ರಮಾಲೆ ಅಕ್ಷರಕೇವಲಿ ಎಂಬ ಇತರ ಎರಡು ಗ್ರಂಥಗಳಿವೆ.

1996

ಕೆ. ೩೮೨।೧	ಸ್ವರಚಿಂತಾಮಣಿ (ಸಟೀಕು)	ಶ್ಲೋಕ, ಟೀಕು
೯.೩" × ೧.೩"	?	?
೧-೨೬ ಪತ್ರ	೫ ಪಂಕ್ತಿ	೩೬ ಅಕ್ಷರ

ಆದಿ : ಸ್ವರಚಿಂತಾಮಣಿ ಬರೆಉದಕ್ಕೆ ಶುಭಮಸ್ತು॥ ಸಂವತ್ಸರಕ್ಕೆ ಫಲವ ನೋಡುವ ಕ್ರಮಾ ॥ ಗ್ರಂಥಾ ॥

ಸಂವತ್ಸರಂ ದಿನಂ ನಷ್ಟಂ ಮಾಸಾ ತ್ರೀಣಿ ದಿನಂ ತಥಾ
ಪಕ್ಷಮೇ ದಿನಾನ್ಯೆವಾ ಸಂವತ್ಸರಂ ದಿಭಾಗಕ್ರಮಾತ್ ॥
ಪ್ರಥಮೇರ್ಚ ಮಹಾಹಾಗ್ನಿ ದ್ವಿತೀಯಂ ದನನಾಶನಂ
ತೃತೀಯಂ ಭಯಸಂತ್ರಾಪಂ ಚತುರ್ಥಂ ಮಿತ್ರಬಂಧನಂ ।

x x x x ಸೋಧಿಕಾಗ್ನಿ ಮಹೀತಳೆ ॥

ಟೀಕು ॥ ವರುಷ ವರುಷಕ್ಕೆ ಆವ ಸಂವತ್ಸರ ಬಂದೀತು ಆ ಸಂವತ್ಸರದಿಂದ ಮುಂದಣ ಸಂವತ್ಸರ ಪರಿಯಂತ್ತರಾ ಶುಭಾಶುಭವನರಿವ ಕ್ರಮಾ ॥ ನಡವ ಸಂವತ್ಸರದ ಚೈಯಿತ್ರ ಶು ೧. ಬಿದಿಗೆ ೨ ತದಿಗೆ ೩ ಯಿವು ಮೂರು ದಿನ ಉದೆಯದಲ್ಲಿ ಯೇಳುವಾಗ ಚೆಂದ್ರಶ್ವರ ಯಿರಬೇಕೂ। ಅವಂ ವಂದು ದಿನಕ್ಕೆ ನಾಲ್ಕು ತಿಂಗಳ ಫಲವಹುದೂ। ಅಂತೂ ದಿನ ೩ಕ್ಕೆ ಹಂನೆರಡು ಫಲ । ಆ ಮೂ ು ದಿನದೊಳಗೆ ಆವದಿನ ಚೆಂದ್ರುನಿಲ್ಲದಿದ್ದಿತೊ ಆ ನಾಲ್ಕು ತಿಂಗಳೊಳಗೆ ತನಗೆ ರೋಗ । ಹಾನಿ । ಬಯುವಹುದೂ ।

ಅಂತ್ಯ : ವೈಶ್ಯದ ವಿಸ್ತಂಭನದಲ್ಲಿ ಪೃಥ್ವಿವಳ್ಳಿತೂ। ಶಾಂತ್ರಿಕ ಪೌಷ್ಟಿಕದಲ್ಲಿ ಉಚ್ಚಾಟನ ಕರ್ಮದಲ್ಲಿ ವಾಯುವಳ್ಳಿತೂ। ದುಷ್ಟಕರ್ಮ್ಮಂಗಳಿಗೆ ಆಕಾಶ ವಳ್ಳಿತೂ ॥ ಸ್ವರಚಿಂತಾಮಣಿ ಸಮಸ್ತ ಮಂಗಳ ಮಹಾಶ್ರೀ ॥

ವಿಷಯ : ಚಂದ್ರಸೂರ್ಯನಾಡಿಗಳಲ್ಲಿ ಉಸಿರು ಬಿಡುವುದರಿಂದ ಶುಭಾಶುಭ ಫಲಗಳನ್ನು ತಿಳಿಯುವ ಕ್ರಮ.

ವಿಶೇಷ : ಶಿಥಿಲ ಪ್ರತಿ. ಇದೇ ಕಟ್ಟಿನಲ್ಲಿ ನರಪಿಂಗಲಿ ಸಾಮುದ್ರಿಕಾ ಲಕ್ಷಣ ಬಾಲ ಗ್ರಹ ಚಿಕಿತ್ಸೆ ಮತ್ತು ಜ್ಯೋತಿಷ ಸಂಗ್ರಹವೆಂಬ ಗ್ರಂಥಗಳಿವೆ.

1997

ಕೆ. ೫೭೪	**ಸ್ವರಚಿಂತಾಮಣಿ (ಸಟೀಕು)**	ಶ್ಲೋಕ, ಟೀಕು
೧೪.೫" × ೧.೧"	?	?
೨-೭೨ ಪತ್ರ	೬ ಪಂಕ್ತಿ	೫೮ ಅಕ್ಷರ

ಆದಿ : ಬದುಕುವನೂ ॥ ೭ ॥ ಲೋಹದಂಡಧರಂ ಭೀಮಂಮ........ಪಿಂಗಳಂ । ಯಃ ಸ್ವಪ್ನೇ ಪಶ್ಯತೆ ಕ .... ಳಾಕ್ಷವುಳ್ಳವನಾಗಿ । ಕೋಪಿಸುತ್ತಾಯಿದ್ದಂಥಾ ಪುರುವ ...॥ ಆವನೊಬ್ಬನು ಕಾಬನು ಕನಸ್ಸಿನಲ್ಲಿ....ರಸ್ವಶಿಂ । ಜಲಸ್ಥಾನಾನಿ ಚಾಂನ್ಯಾನಿ ದೌಮಾಸೌ ಸೋಪಿ ಜೀವಿತಂ ॥ ಟೀಕು ॥ ಆವ ....ಧಿ ಗಂಗೆಯನಾಗಲಿ ಸರಸ್ವತಿ ನದಿಯಾಗಲಿ ಬತ್ತಿಯಿಾಹುದ ಕಾಬನೂ । ಅಲ........ಆತನು ಯರಡು ತಿಂಗಳು ಬದುಕುವನೂ ॥ ೯ ॥

ಅಂತ್ಯ : ನಸ್ಟಂ ಚ ವಾಯು ತತ್ವಸ್ಯ ಮುಸ್ಟಿಗ್ನಾಯ ವಸುಂಧರಾ ।
ಚಿಂತ್ರಾಮಾಕಾಶತತ್ವಗ್ಯ ಗ್ನಾತವ್ಯಂ ಚ ಸು ನಿಶ್ಚಯಂ ॥

ಟೀಕು ॥ ವಾಯುತತ್ವವಾದರೆ ನಷ್ಟಚಿಂತ್ರೆ । ಪೃಥ್ವಿ ತತ್ವವಾದರೆ ಮುಷ್ಟಿಚಿಂತೆ । ಆಕಾಶ ತತ್ವವಾದರೆ ಮನದ ಬಹಳ ಚಿಂತ್ರೆ । ಯಿಾ ಹೀಗೆಂದು ಲೇಸಾಗರಿಯಬೇಕು ॥ ೧೮ ॥ ಇತ್ಯುಮಾಮಹೇಶ್ವರ ಸಂವಾದೇ ಸ್ವರಚಿಂತ್ರಾಮಣೌ ಧಾತು ಮೂಲ ಜೀವ ಚಿಂತ್ರಾನಾಮ ಏಕಾದಶೋಧ್ಯಾಯಃ ॥

ವಸಂತ್ರೇ ಗ್ರೀಷ್ಮಕಾಲೇ ಚ ಮಧ್ಯಾಹ್ನೇ ಜಲಕೇಳಿಷು ।
ಚಂದ್ರಸೂರ್ಯ ವಿಚಾರೇಣ ಜಲಕ್ರೀಡಾ ಚ ಕಾ ಯೇತ್ ॥

ಟೀಕು ॥ ವಸಂತ್ರ ಗ್ರೀಷ್ಮರುತುಗಳಲ್ಲಿ ಮಧ್ಯಾಹ್ನದಲ್ಲು ಜಲಕ್ರೀಡೆಯ ಮಾಡುವದೂ । ಚಂದ್ರಸೂರ್ಯರ ವಿಚಾರದಿಂದಾ ॥ ೧ ॥

ಭಾನುನಾಡಿ ಪ್ರವಾಹೇನ ಪ್ರವಿಷ್ಟೋ ಜಲಮಧ್ಯಕಂ ।
ನಾಶಯೇತ್ಪಿಥದೋಷಂ ಚ ಮಹಾತಾಪ ವಿನಾಶನಂ ॥ ಟೀಕು

ವಿಷಯ : ಚಂದ್ರಸೂರ್ಯರ ನಾಡಿಯಿಂದ ಶುಭಾಶುಭಫಲವನ್ನು ತಿಳಿಯುವ ಕ್ರಮ.

ವಿಶೇಷ : ಅಸಮಗ್ರ ಮತ್ತು ಶಿಥಿಲಪ್ರತಿ. ಒಟ್ಟು ೨೫ ಅಧ್ಯಾಯವಿರುವ ಈ ಕೃತಿಯಲ್ಲಿ ೭೨ನೇ ಪತ್ರದಲ್ಲಿ ೧೩ನೇ ಅಧ್ಯಾಯದ ಮೊದಲನೆಯ ಶ್ಲೋಕವಿದೆ. ಅಲ್ಲಿಂದ ಮುಂದಿನ ಗ್ರಂಥವಿಲ್ಲ. ೧೧ನೇ ಓಲೆಯಲ್ಲಿ ಗ್ರಂಥ ಪ್ರಾರಂಭವಾಗಿದೆ. ಒಂದನೇ ಕ್ರಮಾಂಕದ ಓಲೆ ಇಲ್ಲ. ಎರಡನೆಯ ಓಲೆ ಅರ್ಧವಿದೆ. ಮೊದಲಿನ ೧೧ ಓಲೆಗಳಲ್ಲಿ ಇದೇ ಗ್ರಂಥದ ೨೪ ಮತ್ತು ೨೫ನೇ ಅಧ್ಯಾಯಗಳಿವೆ. ಗರಿಗಳ ಅಂಚು ಮುರಿದಿವೆ.

1998

ಕೆ ೨೮೩/೫	**ಸ್ವರಚಿಂತಾಮಣಿ**	ಗದ್ಯ
೧೫" × ೧.೫"	?	?
೨೧-೨೭ ಪತ್ರ	೭ ಪಂಕ್ತಿ	೬೮ ಅಕ್ಷರ

ಆದಿ : ಸ್ವರ ಚಿಂತಾಮಣಿ ॥ ಟೀಕೂ ॥

ಕೃತ ಯುಗದಲ್ಲಿ ಪಾರ್ವ್ವತಾದೇವಿ ಪರಮೇಶ್ವರಗೆ ಅಡ್ಡಬಿದ್ದು ನಮಸ್ಕಾರಂಗಳಂ ಮಾಡಿ ಬೆಸಗೊಳ್ಳುತಿರ್ದಾಳೂ ಸಕಲ ಪ್ರಾಣಿಗಳಿಗೆ ಲೇಸಾಗಬೇಕೆಂದೂ ದೇಹಸ್ತಾನವನೂ ಬೆಸಗೊಳುತಿದ್ದಾಳೂ ॥ ೧ ॥ ತಿಥಿ ವಾರ ನಕ್ಷತ್ರ ಚೆಂದ್ರ ಸೂರ್ಯ್ಯ ಯಿಷ್ಟು ಬಲದಿಂದಾ ಅದಿಕವಾದಂತಾ ಬಲವಂನು ಕೃಪೇ ಮಾಡೆನುತ್ತ ಪಾರ್ವ್ವತಾದೇವಿ ಸದಾಶಿವಂಗೆ ಬಿಂನ್ನಹಂ ಮಾಡಿದಳೂ ॥ ೨ ॥

ಅಂತ್ಯ : ಸೂರ್ಯ್ಯ ಶ್ವರ ನಡೆವರೆ ಆ ಕಾರ್ಯ್ಯಂಗಳೆಲಾ ಕೆಡುವುವು । ಆ ಕಾರ್ಯ್ಯಂಗಳಾ ಮಾಡುವಾಗಾ ಅಪ್ಪುತತ್ವಾ ಪೃತಿತತ್ವಾ ಯಿವು ಯರಡು ತತ್ವ ನಡೆವಾಗ ಪಟ ಕಟ್ಟಲೂ ಆಯುಷ್ಯ ಪುನವಾಗಿ ಸುಖದಿಂದಾ ರಾಜ್ಯವನಾಳುವನೂ। ಯರಡು ಶ್ವರ ವಂಮ್ಮೆ ನಡವುತಿರಲೂ ರಾಜಕಾಯಿಯವಾಗಿ ಪಟ್ಟ ಕೆಡುವುವೂ ಪಟ್ಟಾಭಿಷೇಕ ಸಮಾಪ್ತ..

ವಿಷಯ : ಚಂದ್ರ, ಸೂರ್ಯ ನಾಡಿಗಳಿಂದ ಫಲವನ್ನರಿಯುವ ಕ್ರಮ.

ವಿಶೇಷ : ಇದೇ ಕಟ್ಟಿನಲ್ಲಿ ನೀತಿ ಸಂಗ್ರಹ, ಜಲಶಿಲ್ಪಿ, ನಕ್ಷತ್ರ ಚೂಡಾಮಣಿ, ಸರಪಿಂಗಲಿ, ರಾಮಧ್ಯಾನಗಳೆಂಬ ಇತರ ಕೃತಿಗಳಿವೆ.

1999

ಕೆ. ೪೩೯।೨	**ಸ್ವರಲಕ್ಷಣಚಿಂತಾಮಣಿ**	ಗದ್ಯ
೬.೧"×೧.೩"	?	?
೨೪–೩೭ ಪತ್ರ	೬ ಪಂಕ್ತಿ	೩೭ ಅಕ್ಷರ

ಆದಿ : ಸ್ವರಲಕ್ಷಣ ಚಿಂತಾಮಣಿ ||
ಯಿಾಶ್ವರನು ಪಾರ್ವತಿಗೆ ನಿರೂಪಿಸಿದ್ದು|| ತಂನ ಪ್ರಾಣಸ್ವರವ ನೋಡುವಂತಾ ದಕ್ಕೆ ಡುವದು| ರಾತ್ರಿಯಲ್ಲಿ....ವಾಗ| ಉದಯದಲ್ಲಿ ಯೇಳುವಾಗ ನೋಡುವದು || ಬಲದ ನಾಸಿಕದಲ್ಲಿ ಬರುವುದು ಸೂರ್ಯ ಸ್ವರ | ಯಡದ ನಾಸಿದಲ್ಲ ಬರ.ವದು ಚಂದ್ರಸ್ವರಾ| ಆದಿತ್ಯಮಂಗಳಾ ಗುರು............... ಮುಂದಣ ಅಮಾವಾಶ್ಯೆ ಪರಿಯಂತ್ರಕ್ಕು ಜಯವು ಲಾಭವು ಅಹುದು| ಯಿಾ ಮೂರು ದಿನದಲ್ಲಿ ಸೂರ್ಯ ಸ್ವರ ನಡೆದರೆ ಆಗ ಸೂರ್ಯನ ದಿಕ್ಕಿಗೆ ಯದು ರಾಗಿ ಬಲದ ಕಾಲ ಮುಂದಿಟ್ಟು ಮೂಹಜೆಯ ನಡೆಯಲು ಆ ದೋಷ ಪರಿಹರವು ಸೂರ್ಯ ಬಲಸಾಗಿ ಯಿಹನೂ| ಯಿಂತು ಅದಿನೈದು ದಿನದ ಫಲವು ||

ಅಂತ್ಯ : ಚಂದ್ರಸೂರ್ಯರ ದಿಕ್ಕ ಬೆಂನ ಮಾಡಿಕೊಂಡು ಕೈಮಾಡಲು ಗೆಲುವನು| ಯಿಾ ಮೇರೆಯಲ್ಲು ಕಾರ್ಯ ಮಾಡಲು ಸರದಾಕಾದಿಗಳು ಬಂಟರ ಕಾದಿಸಿ ಗೆಲಿಸುವರೂ || ಸ್ವರಚಿಂತಾಮಣಿ ಸಂಪೂರ್ನಂ ಜಯ ಮಂಗಳಂ ಮಹಾಹಾಶ್ರೀ ಶ್ರೀ||

ವಿಷಯ : ಸೂರ್ಯ ಚಂದ್ರರ ನಾಡಿಯಿಂದ ಶುಭಾಶುಭ ಫಲಗಳನ್ನು ತಿಳಿಯುವ ಕ್ರಮ. |

ವಿಶೇಷ : ಅಸಮಗ್ರ ಪ್ರತಿ. ಶಕಟರೇಫದ ಬಳಕೆ ತಪ್ಪು ತಪ್ಪಾಗಿದೆ. ೨೫, ೨೬ ೩೫ನೇ ಪತ್ರಗಳಿಲ್ಲ. ಇದೇ ಕಟ್ಟನಲ್ಲಿ ವಿಷಚಿಕಿತ್ಸಾ ಎಂಬ ಕೃತಿ ಮೊದಲಿ ನಲ್ಲಿದೆ.

2000

ಕೆ. ೩೬।೪	**ಸ್ವರೂಪಾಮೃತ**	ಭಾಮಿನೀ ಷಟ್ಪದಿ
೧೪.೭"×೨.೩"	ಗುರುಬಸವೇಶ	೧೪೩೦
೫೧–೫೪ ಪತ್ರ	೧೨ ಪಂಕ್ತಿ	೮೫ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯ ನಮಃ ‖ ಸ್ವರೂಪಾವೃತ ‖ ರಾಗವೊಡ್ಡಿ ಧನ್ಯಾಸಿ ‖ ಪಲ್ಲವ ‖ ಅಮುಮ ಮನಸಿನ ಗಾಹುಲ ಗಮಕ

ಭ್ರಮಣ ಬಂಥವ ಬಿಡಿಸಿ ಶಿಷ್ಯೋ
ತ್ತಮನ ಮುಕ್ತಿ ಕಲತ್ರನಂ ಮಾಡಿದನು ದೇಶಿಕನೂ

ಪದನೂ ‖ ಶ್ರೀ ಸಕಲಬೋಧಕನು ವಿಶುದ್ಧನ
ಶೇಷನಖಿಳ ಜಗನ್ನಟನ ನಿಃ
ಶೇಷನೇಕನಪಾರ ಮಹಿಮಾಂಬೋಧಿ ರೂಪಕನೂ
ವಾಸನಕ್ಷಯನಖಿಳ ವಿಶ್ವಾ
ವಾಸನಕ್ಷಯನೆನಿಪ ಗುರುಬಸ
ವೇಶನಿರಲಿ ಮದೀಯ ಸುಮನಃ ಕಮಲಮಧ್ಯದೊಳೂ ‖ ೧ ‖

ಅಂತ್ಯ : ಯೇಕಸಪ್ತತ್ರಿಪದ ಸೂತ್ರಗ
ಳೈಕ್ಯದಿಂ ನಿರ್ಮಿಸಿದ ಕಂಪಿ
ಶಾಖೆ ಪರಿಯಂತರದೊಳಿಹ ಚಿದಚಿತ್ಸ್ವರೂಪ ಸುಧಾ
ಸೌಖ್ಯಮಂಚಪ್ಪಿಱದ ವಿದ್ಯಾ
ಭೀಕರದ ಬಲುಗುತ್ತಮಂ ನೆಱೆ
ನೂಕಿ ಮೋಕ್ಷಾರ್ತ್ಥಿಗಳು ಗುರುಬಸವನೊಳು ಸುಖವಿಹರು ‖ ೨೬ ‖
ಇತಿ ಶ್ರೀಮತ್ಸ್ವರೂಪಾಮೃತೇ ತೃತೀಯ ಪರಿಚ್ಛೇದಃ ‖

ಅಂತು ಸಂಧಿ ३ಕ್ಕಂ ಪದನು ८८ಕ್ಕಂ ಸ್ವರೂಪಾಮೃತ ಸಂಪೂರ್ನ್ನಂ ಮಂಗಳ ಮಹಾಶ್ರೀ ಶ್ರೀ ಚತುರ್ತ್ಥಕಾವ್ಯಕ್ಕಂ ೬೮೬ಕ್ಕೆ ಶ್ರೀ

ವಿಷಯ : ಆತ್ಮವಿಚಾರ (ವೇದಾಂತ).

ವಿಶೇಷ : ಶಕಟರೇಫದ ಬಳಕೆಯಿದೆ. ಸುಸ್ಥಿತಿ, ಇದರೊಂದಿಗೆ ವೃಷಭಗೀತೆ, ಅವಧೂತಗೀತೆ ಮೊದಲಾದ ಇತರ ೬ ಗ್ರಂಥಗಳಿವೆ.

2001

ಕೆ.ಬಿ. ೩೩೩/೪	**ಸ್ವರೂಪಾಮೃತ**	ಭಾಮಿನೀಷಟ್ಪದಿ
೮.೨" × ೬.೪"	ಗುರುಬಸವೇಶ	೧೪೩೦
೭೯–೮೩ ಪತ್ರ	೨೧ ಪಂಕ್ತಿ	೨೫ ಅಕ್ಷರ

ಆದಿ : ಶ್ರೀಗುರು ನಿಜಲಿಂಗಾಯ ಪರಬ್ರಂಹ್ಮಣೇ ನಮಃ ॥ ಸ್ವರೂಪಾಮೃತ ೭ ರೆಯುವದಕ್ಕೆ ನಿರ್ವಿಘ್ನಮಸ್ತು ॥ ಭಾವನಿ ॥ ರಾಗ ವೊಡ್ಡಿದನ್ವಾಸೀ ॥ ಪಲ್ಲ॥

ಅಮಮ ಮನಸಿನ ಗಾಹುಗಮಕ
ಭ್ರಮಣ ಬಂಧವ ಬಿಡಿಸಿ ಶಿಷ್ಯೋ
ತ್ತಮನ ಮುಕ್ತಿ ಕಲತ್ರನಂ ಮಾಡಿದನು ದೇಶಿಕನೂ ॥ ಪ ॥

ಶ್ರೀ ಸಕಲಬೋಧನು ವಿಶುದ್ಧ
ನಶೇಷನಖಿಳ ಜಗನ್ನಟನ
ನಿಶೇಷನೇಕನಪಾರ ಮಹಿಮಾಂಬೋಧಿರೂಪಕನೂ
ದಾಸನಕ್ಷಯನಖಿಳ ವಿಶ್ವಾ
ವಾಸನಕ್ಷಯನೆನಿಪ ಗುರು
ಬಸವೇಶನಿರಲಿ ಮದೀಯ ಸುಮನಃ ಕಮಲ ಮಧ್ಯದೊಳೂ ॥ ೧ ॥

ಅಂತ್ಯ : ಅರಸಿನೆಪ್ಪತ್ತೆರಡು ಲೆಕ್ಕದ
ಪರಿಪರಿಯ ಸೇವಕರುಗಳು ನಿಂ
ದಿರೆ ಚತುರ್ದಶ ಭುವನವಿಟ್ಟಡೆಯೆ ನಲಿಕಿನ್ನವನಾ
ಸಿರಿಯನವನುನ್ನತಿಯ ಶಾಶ್ವತ
ದಿರವ ಬಲ್ಲರ ಕಾಣೆನಿದರಿಂ
ದುರುಳಿದವು ವೇದಾಂತಕೋಟಿ ಸಹಸ್ರವಿಧದಿಂದೆ ॥ ೧೮ ॥

ವಿಷಯ : ಆತ್ಮವಿಚಾರ (ವೇದಾಂತ).

ವಿಶೇಷ : ದ್ವಿತೀಯ ಪರಿಚ್ಛೇದದಲ್ಲಿ ೧೮ ಪದ್ಯದವರೆಗೂ ಮಾತ್ರವಿದ್ದು ಮುಂದೆ ಬರೆಯಲು ಖಾಲಿಪತ್ರ ಬಿಟ್ಟು ಅಪೂರ್ಣವಾಗಿದೆ. ಇದರೊಂದಿಗೆ ಇದೇ ಕವಿಯ ಶಿವಯೋಗಾಂಗವಿಭೂಷಣ, ಸದ್ಗುರುರಹಸ್ಯ, ಕಲ್ಯಾಣೇಶ್ವರ ಗ್ರಂಥಗಳೂ ಇವೆ.

2002

ಕೆ.ಬಿ. ೪೭೦	**ಹಠಯೋಗ ಪ್ರದೀಪಿಕೆಯ ಟೀಕು**	ಶ್ಲೋಕ, ಟೀಕು
೮.೩″ × ೬.೬″	ಶಾಂತನಾಥದೇವರು	?
೧-೨೨೮ ಪುಟ	೧೨ ಪಂಕ್ತಿ	೧೬ ಅಕ್ಷರ

ಆದಿ : ಬೆಂಗಳೂರು ಸೆಂಟ್ರಲ್ ಶ್ರೀ ಕಾಲೇಜ್ ಬಿ.ಎಸ್.ಸಿ. ಕ್ಲಾಸ್ ವಿದ್ಯಾರ್ಥಿ ಮ||ರಾ|| ರಾ||ಬಸವಣ್ಣಪ್ಪನವರಿಂದಾ ಬಂದ ಪ್ರತಿಯಿಂದ ಕಾಪಿ .
ಹಠಯೋಗ ಪ್ರದೀಪಿಕೆಯ ಟೀಕು
. . ..
ಭವೇದ್ವೀರ್ಯವತೀ ಗುಪ್ತಾ ನಿರ್ವೀರ್ಯಾ ತು ಪ್ರಕಾಶಿತಾ || ೧೧ ||

ಟೀಕು || ಯೋಗಾಭ್ಯಾಸ ಬಲದಿಂದೆ ಹುಟ್ಟುವಂಥಾ ಸಿದ್ಧಿಗಳ ನಿಶ್ಚೈಸುವಂಥ ಯೋಗಿಗಳು ಹಠಯೋಗವನು ಲೇಸಾಗಿ ಗೋಪ್ಯವನು ಮಾಡುವುದು. ಗೋಪ್ಯವನು ಮಾಡಿದರೆ ಸಕಲಸಿದ್ಧಿಗಳನು ಕೊಡುವುದು. ತನಗೆ ಸಿದ್ಧಿಯಾಗದ ಮುನ್ನವೆ ಹಲಬರುಗಳಿಗೆ ಹೇಳಿದರೆ ಆ ಯೋಗಸತ್ತ್ವಂ ನಿಲ್ಲದೆ ಹೋಹುದು. ಹಠಯೋಗವನು ಸಾಧಿಸುವಂಥ ಸ್ಥಾನ ವಿಶೇಷಂಗಳ ಹೇಳಿಹೆನು.

ಶ್ಲೋ|| ಸುರಾಜ್ಯೇ ಧಾರ್ಮಿಕೇ ದೇಶೇ ಸುಭಿಕ್ಷೇ ನಿರುಪದ್ರವೇ |
ಏಕಾಂತೇ ಮಠಿಕಾಮಧ್ಯೇ ಸ್ಥಾತವ್ಯಂ ಹಸಯೋಗಿನಾ || ೧೨ ||

ಅಂತ್ಯ : || ಗದ್ಯ || ಶ್ರೀಮತ್ಸಮಸ್ತ ಗಣಾಲಂಕೃಕ ಯೋಗಿಶ್ವರ ಪರಮ ರತ ಪರಮಾತ್ಮ ಸಂಭೂತ ಜ್ಞಾನ ನಿರುಹರಣ ಸುಜ್ಞಾನ ದೀಪ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೋಗನಿರುತಾ ಪಶ್ಚಿಮಮಾ. . . . . ಷ್ಟಾಚಾರ್ಯಾಕಾಶ ಮಂಡಲ ಮಧ್ಯಸ್ಥಾನಂದ ಸ್ವರೂಪ ಜ್ಯೋತಿರ್ಲಿಂಗಾನುಸಂಧಾನ ಪರಮವ್ಯೋಮ ಶರೀರ ಧಾರಿತ್ರಿಮಾರ್ಗ ಚಕ್ರವರ್ತಿ ಪ್ರಭುದೇವರು ಶ್ರೀಗೋರಕ್ಷನಾಥ ದೇವರು, ಅವರ ಪುತ್ರರು ಅಮರನಾಥದೇವರು, ಅವರ ಪುತ್ರರು ಶಾಂತ ನಾಥದೇವರು ಹಠಪ್ರದೀಪಿಕೆಗೆ ಕನ್ನಡ ಭಾಷೆಯಿಂದ ಮಾಡಿದ ಟೀಕು ಸಮಾಪ್ತ ಮಂಗಳ ಮಹಾಶ್ರೀ ಶ್ರೀ ಶ್ರೀ ಪೌರಾಣದ ಗುರುಬಸವೇಶ್ವರಾಯ ನಮಃ.

ವಿಷಯ : ಯೋಗ ವಿಚಾರ.

ವಿಶೇಷ : ಶ್ಲೋಕ ೧೧ ರಿಂದ ೯೧ನೆಯ ಶ್ಲೋಕ ಪೂರ್ತಿ ಇದ್ದು ಕನ್ನಡ ವ್ಯಾಖ್ಯಾನದಿಂದ ಕೂಡಿದೆ. ೨೪ ನೇ ಪುಟದಲ್ಲಿ ‘ ಅತ್ರ ೪೭–೪೮ ಪತ್ರಲೋಪಃ ’ ಎಂದು ಬರೆದಿದ್ದು ೭೪ನೇ ಶ್ಲೋಕಾರಭ್ಯ ೮೮ ಪೂರ್ತಿ ಲುಪ್ತವಾಗಿದೆ. ಅಂತ್ಯದಲ್ಲಿ ಪಾಠಾಂತರ ಗಳನ್ನು ತೆಲುಗು ಲಿಪಿಯಲ್ಲಿ ಅಚ್ಚಾಗಿರುವ ಹಠ ಯೋಗ ಪ್ರದೀಪಿಕೆಯಿಂದ ಕೊಟ್ಟಿರುತ್ತೆ ಎಂದು ಬರೆದಿದೆ.

2003

ಕೆ. ೧೩೦ | **ಹದಿಬದೆಯ ಧರ್ಮ** | ಸಾಂಗತ್ಯ
೧೬.೭ × ೧.೩" | ಸಂಚಿ ಹೊನ್ನಮ್ಮ | ೧೬೮೦
೭೫-೧೨೪ ಪತ್ರ | ೪ ಪಂಕ್ತಿ | ೬೮ ಅಕ್ಷರ

ಆದಿ : ಶ್ರೀ ಶಿಙ್ಗರಾರ್ಯ ಗುರವೇ ನಮಃ ॥ ಸ್ತ್ರೀಧರ್ಮ್ಮ ಸಙ್ಗತ್ಯಂ ॥
ಶ್ರೀಮದಮಲಗುಣನಿಧಿಗೆ ನಿತ್ಯನಿಗೆ ನಿ
ಸ್ಸೀಮ ಕೃಪಾವಾರಿಧಿಗೆ
ರಾಮಣೀಯಕ ರಾಶಿಗೆ ಪಶ್ಚಿಮರಂಗ
ಧಾಮನಿಗಾನೆರಗುವೆನು ॥ ೧ ॥

ರಂಗಧಾಮನ ದಿವ್ಯಾಙ್ಗ ಸಙ್ಗತಿಯಿನ್ದ
ಮಙ್ಗಲ ದೇವತೆಯೆನಿಪಾ
ರಙ್ಗಮನ್ದಿರ ಮಙ್ಗಲ ವೈಜಯನ್ತಿಗೆ
ರಙ್ಗನಾಯಕಿಗೆರಗುವೆನು ॥ ೨ ॥

ಅಂತ್ಯ : ಚೆಂನಿಗ ಚಿಕದೇವರಾಯನ ಸಂಚಿಯ
ಹೊಂನಮ್ಮನುಸುರ್ದ ಕಬ್ಬದೊಳು
ಮನ್ನಣೆ ವಡೆದೊ . . . ದುದೊಂಭತ್ತನೆಯ ಸಂಧಿ
ಸಂನುತ ಗುಣ ಸಂಬಂಧಿ

ಅಂತು ಸಂಧಿ ೯ ಕ್ಕಂ ಪವ . . .ಕ್ಕೆ ಶುಭಮಸ್ತು ॥

ವಿಷಯ : ಪತಿವ್ರತಾಸ್ತ್ರೀಯರ ಧರ್ಮ.

ವಿಶೇಷ : ಪ್ರತಿಯ ಕೊನೆಯಲ್ಲಿ "ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾ " ಎಂದಿದೆ. ೭೭ ರಿಂದ ೮೦ ಪತ್ರಗಳನ್ನೂ ಅಲ್ಲಲ್ಲಿ ಹುಳು ತಿಂದಿದೆ. ಶಕಟರೇಫದ ಬಳಕೆಯಿದೆ. ಅಕ್ಷರ ಸುಂದರ.

2004

ಕೆ. ಎ. ೧೯ | **ಹದಿಬದೆಯ ಧರ್ಮ** | ಸಾಂಗತ್ಯ
೧೩" × ೮" | ಸಂಚಿ ಹೊನ್ನಮ್ಮ | ೧೬೮೦
೬+೧–೪೫ ಪತ್ರ | ೨೪ ಪಂಕ್ತಿ | ೨೩ ಅಕ್ಷರ

ಆದಿ : ಸ್ತ್ರೀಧರ್ಮ ಸಂಗತ್ಯಂ.
ಶ್ರೀಮದಮಲ ಗುಣನಿಧಿಗೆ ನಿತ್ಯನಿಗೆ ನಿ
ಸ್ಸೀಮ ಕೃಪಾವಾರಿಧಿಗೆ
ರಾಮಣೀಯಕ'ರಾಶಿಗೆ ಪಶ್ಚಿಮರಂಗ
ಧಾಮನಿಗಾನೆರಗುವೆನು ॥ ೧ ॥

ರಂಙ್ಗಧಾಮನ ದಿವ್ಯಾಙ್ಗ ಸಂಙ್ಗತಿಯಿನ್ದ
ಮಂಙ್ಗಲದೇವತೆಯೆನಿಪಾ
ರಂಗಮಂದಿರ ಮಙ್ಗಲ ವೈಜಯನ್ತಿಗೆ
ರಙ್ಗನಾಯಕಿಗೆರಗುವೆನು ॥ ೨ ॥

ಅಂತ್ಯ : ಚೆಂನ್ನಿಗ ಚಿಕ್ಕದೇವರಾಯನ ಸಂಚಿಯ
ಹೊಂನ್ನಂಮ್ಮನು ಸುರ್ದ ಕಬ್ಬದೊಳು
ಮಂನ್ನಣೆ ವಡೆಳೂಪ್ಪಿದುಳೊಂದ್ಭತ್ತನೆಯ ಸಂಧಿ
ಸಂನ್ನುತ ಗುಣ ಸಂಬಂಧೀ ॥ ೬೧ ॥

ಇಂತು ವಂಭತ್ತನೆಯ ಸಂಧಿ ಮುಗಿದುದು ॥
ಅಂತು ಸಂಧಿ ವಂಭತ್ತಕೆ ಪದ ೪೮೦ ಕ್ಕೆ ಶುಭಮಸ್ತು ಶ್ರೀ ಶ್ರೀ

ವಿಷಯ : ಪತಿವ್ರತಾಸ್ತ್ರೀಯರ ಧರ್ಮ.

ವಿಶೇಷ : ಪ್ರತಿ ಪತ್ರದ ಒಂದೇಕಡೆ ಬರವಣಿಗೆಯಿದೆ. ಆದಿಯ ಬೇರೆ ೬ ಪತ್ರಗಳಲ್ಲಿ ವಿಷಯಾನುಕ್ರಮಣಿಕೆಯಿದೆ.

2005

ಕೆ. ೩೪	**ಹನುಮಂತವಿಜಯ**	**ಯಕ್ಷಗಾನ**
೧೩.೯" × ೧.೫"	?	?
೧-೪೨ ಪತ್ರ	೭ ಪಂಕ್ತಿ	೫೫ ಅಕ್ಷರ

ಆದಿ : ಶ್ರೀ x x ಹನುಮಂತ ವಿಜೆಯ ಯಕ್ಷಗಾನ ಬರೆಯುದಕ್ಕೆ x x
ದ್ವಿಪದೆ ॥ ಶ್ರೀರುಕ್ಮಿಣಿನಾಥಾ ಚಿತ್ತದೈತ್ಯನಾಥಾ
ವಾರಿಜದಳನೇತ್ರ ವಾಸವ್ಯ ಸ್ತೋತ್ರ

ದಶರಥಾತ್ಮಿಜರಾಮಾ ದಾನವ ಧ್ವಂಸಿ
ಪಶುಪತಿಯು ಸನ್ನುತ ಪಂಚಾಲ ವಿನುತಾ
ಕಾಳಿಂಗಮ . . . . ಕರುಣಾಂತ . . .
. . . ನಿರತಕೇಳಾ ನಿಖಳ ಪ್ರಕಾಶಾ
ವಿಕಟಿತ ಭವಚಾಪ ವಿಕ್ರಮಾಟೋಪಾ
ಸಕಲ ಸನ್ಮುನಿ ಮುಖ್ಯಾಸಜ್ಜನ ಸವುಖ್ಯಾ
ವಾಸುಕಿ ವಿನುತಾ ಪದವಾಕ್ಯ ಪ್ರಮೋದಾ

x x x x

ವಿಹಗಾರಿ ವರಶಯನಾ ವಿಜಯಾರಿದಮನಾ
ಪರಮಪುರುಷನ ಶರದಿ ಬಂಧನಹರಿಯೇ
ಕರುಣದಿಂದ ಸಲಹೆನ್ನಾ ॥ ೧ ॥ ವಚನಾ ॥
ಯಿಂತೆಂದು ತನ್ನಾಯುಷ ದೇವತಾ ಸವುಕ್ಯವಂ ಮಾಡಿ

ಅಂತ್ಯ : ತಂ . . . .ದೆಂದವಳಗಾ
ಸಪ್ಪಳಿಲ್ಲದೆ . . . ಧ್ಧಿ
ಯಪ್ಪಸುತನೆಡೆಗಳು ತಾ
ಯಿಂತು ತಾ ಪೋಗೀ ॥ ೮ ॥

ವಚನಾ ॥ ಯಿಂತು ಸತ್ತಾಕುಮಾರನ ಶಿರದೆಡೆಗೆ ಪೋಗಿ ಅದಿಕ ಸೊಬವಿತ್ತು ಮಂಡೋಧರೀ ಕನ್ನರಾಜಸ್ತನಕೆ x x x ದಶಕಂಧರನು ಕೋಪರೂಡನಾಗಿ ಚಂದ್ರಾಯುದವಂ ಪಿಡಿದುಯಿಂದ್ರ ಬ್ರಹ್ಮಾದಿಗಳು ಬಂದರು ಜಯ್ಯಸಂವೆನೆ .... ಅಟ್ಟಹಾಸಂಗಳಂ ಮಾಡಿ ಅರುಣ....ದಿಂದಾ ಗದ್ದುಗೆಯನ್ನಿಳಿದು ಗಮನಿಸುವ ದಶಕಂಧರನಂ ನೋಡಿ ಯಿಂದ್ರಜೀತು ಜನರಂಗೆ ವಂದಿಸಿ ಶೌರ್ಯಾಟೋಪದಿಂದಾ . . . . ನೆನುತಿರ್ದಾನೂ ॥

ವಿಷಯ : ಹನುಮಂತನ ಪ್ರಭಾವ.

ವಿಶೇಷ : ಪುಸ್ತಕ ಶಿಥಿಲ. ೪೧ ಮತ್ತು ೪೨ನೆಯ ಪತ್ರಗಳು ಮುರಿದುಹೋಗಿವೆ.

2006

ಕೆ. ೨೯೮	**ಹನುಮಂತವಿಜಯ**	ಯಕ್ಷಗಾನ
೧೦" × ೧.೯"	?	?
೪೫ ಪತ್ರ	೮ ಪಂಕ್ತಿ	೫೪ ಅಕ್ಷರ

ಆದಿ : ಹನುಮಂತ ವಿಜಯಾ ಯಕ್ಷಗಾನ ಬರವುದಕ್ಕೆ ಶೋ . . .

ದ್ವಿಪದೆ ॥ ಶ್ರೀ ರುಕ್ಮಿಣೀನಾಥ ಜಿತದೈತ್ಯನಾಥ
ವಾರಿಜದಳನೇತ್ರ ವಾಸವ ಸ್ತೋತ್ರ
ದಶರಥಾತ್ಮಜ ರಾಮು ದಾನವ ಧ್ವಂಸಿ
ಪಶು ....
ಕಾಳಿಂಗ ಮದಭಂಗ ಕರುಣಾಂತರಂಗಾ

ಅಂತ್ಯ : ನಿಡಗದದಿ ರಘುಪತಿಯ ತೊಡೆಯಲಿ
ಮಡದಿ ನೀ ಕುಳಿತಿರಲು ಕಂಡೆನು
ಯಡೆಬಿಡದೆ ಯೀ ಶೈಲ ಶಿಖ .... ಯನವದನುಜಾ ॥ ೫ ॥
ಪತಿ ವಿಭೀಷಣ ಪರಮು ಹರುಷದಿ
ಪಟ್ಟ ಭದ್ರತನುಗೆ ಮೆರವುದ
ಅತಿಶಯವನದನೊಂದು ಕಂಡೆನು ಕ್ಷಿತಿಯ ತನುಜೆ ॥ ೬ ॥
ಕಂಡಕನಂ ....

ವಿಷಯ : ಹನುಮಂತನ ಪ್ರಭಾವ.

ವಿಶೇಷ : ಪುಸ್ತಕ ಅತಿ ಶಿಥಿಲ. ಪ್ರತ್ಯೇಕವಾಗಿ ೫ ಪತ್ರಗಳಲ್ಲಿ ಕೆಲವು ಚಿಕಿತ್ಸೆಯ ಕ್ರಮ ಬರೆದಿದೆ.

2007

ಕೆ. ೩೮೭।೧	**ಹನುಮಂತವಿಜಯ**	ಯಕ್ಷಗಾನ
೧೯.೨" × ೨"	?	?
೧–೩೦ ಪತ್ರ	೧೦ ಪಂಕ್ತಿ	೯೫ ಅಕ್ಷರ

ಆದಿ ; x x x x
ಶ್ರೀ ರುಕ್ಮಿಣಿನಾಥ ಜಿತದೈತ್ಯನಾಥ
ವಾರಿಜ ದಳನೇತ್ರ ವಾಸವ ಸ್ತೋತ್ರ
ದಶರಥಾತ್ಮಜ ರಾಮುದಾನವ ಧ್ವಂಸ್ಸಿ
ಪಶುಪತಿ ಸಂನ್ನುತ ಪಾಂಚಾಲೀ ವಿನುತ
ಕಾಳಿಂಗ್ಗ ಮದಭಂಗ್ಗ ಕರುಣಾಂತರಂಗ್ಗ
x x x x (೨ನೆಯ ಪತ್ರ) ॥ ೭ ॥

ವಚನಾ । ಯಿಂತೆಂದು ಸದ್ಭಕ್ತಿ ಪೂರ್ವಕದಿಂದಾ । ಪೇಳ್ದ ಹನುಮಂತ ವಿಜಯವೆಂಬ್ಬ ಯಕ್ಷಗಾನಕ್ಕೆ ಕಥಾಪ್ರಾರಂಭವದೆಂತೆನೆ ॥

ದ್ವಿಪದೆ ॥ ಅಂದು ವಾಲ್ಮಿಕಿಯು ಅತಿ ಪ್ರೇಮದಿಂದಾ
ಮಂದಹಾಸದಿ ತನ್ನ ಮನಹರುಷದಲಿ ॥
ರಾಮಾಯಣವ ಪೇಳೆ ರಾಘವಾತ್ಮಜರು
ಆ ಮಹಾ...............ವರಗೆ ಅತಿ ಪ್ರೇಮದಿಂದ ॥

ಅಂತ್ಯ: ದಂಡ ಕಾಟ ವಿವಾಸ ದಶರಥಾ ತನಯುನಿಗೆ
ಚಂಡ ವಿಕ್ರಮ ಶತ್ರು ಖಂಡನನಿಗೆ
ಹಿಂಡು ಕಪಿ ಬಲದ ಮಾರ್ತಾಂಡ ತನಯುನ ಪೊರೆವ
ಪುಂಡರಿಕಾಕ್ಷನಿಗೆ ಪುಣ್ಯವ್ರತಗೆ ॥ ೩ ॥

ಶರಧಿ ಬಂಧನ........ರಿಗೆ ಶಂಕರನ ಮಿತ್ರನಿಗೆ
ವರ ವಿಭೀಷಣ ರಕ್ಷ ವೈಭವನಿಗೆ
ಸುರಮುನಿಗಳಗಡೆಯನಿಗೆ ಸುಜನಮಂದಾರನಿಗೆ
ಉರಗೇಂದ್ರಶಯನನಿಗೆ ಉಂನತನಿಗೆ ಜಯ ಮಂಗಳಂ ॥ ೪ ॥

ಸನಕಾದಿ ವಂದ್ಯನಿಗೆ ಸಾಧು ಜನ ಪೋಷನಿಗೆ
ದಿನಕರನ ಶತಕೋಟ ಘನಮಹಿಮಗೆ
ಅನುದಿನವು ಭಕ್ತರನು ಆಧರಿಸುವಚ್ಯುತಗೆ
ಘನಮಹಿಮ ರಡಿಹಳಿ ಹರಿ ಕ್ರಿಷ್ಣಗೆ
ಜಯ ಮಂಗಳಂ ನಿತ್ಯ ಶುಭ ಮಂಗಳಂ ॥

ಅಂತು ಸಂಧಿ ೫ ಕ್ಕೆ ಪದನು ೧೧೨೦ ಕ್ಕೆ ಮಂಗಳಮಹಾಶ್ರೀ

ವಿಷಯ : ಹನುಮಂತನು ಸೀತಾನ್ವೇಷಣ ಕಾರ್ಯದಲ್ಲಿ ಜಯಶೀಲನಾದುದು ಮತ್ತು ರಾಮಪಟ್ಟಾಭಿಷೇಕ.

ವಿಶೇಷ : ಇದೇ ಕಟ್ಟಿನಲ್ಲಿ ಸೋಮಶೇಖರ ಚಿತ್ರಶೇಖರರ ಕಥೆ, ಶೃಂಗಾರ ಕಟ್ಟೆ (ತೆಲುಗು), ಅನಂತರ ರಾಮಾಯಣ, ಸೋಮಶೇಖರ ಚಿತ್ರಶೇಖರರ ಯಕ್ಷಗಾನಗಳಿಗೆ ಸಾಬಂಧಿಸಿದ ಒಂದೊಂದು (೪ ಮತ್ತು ೬) ಪತ್ರಗಳೂ, ಕುಮಟಿರಾಮನ ಸಾಂಗತ್ಯವೂ ಇವೆ. ಗ್ರಂಥದ ಅಂತ್ಯದಲ್ಲಿ " ರಕ್ತಾಕ್ಷಿ ಸಂವತ್ಸರದ ಪುಷ್ಯ ಬ ೫ ನಿರುದಕ್ಕೆ ನಾಗಮಂಗಲದ ಉಪಾದ್ರು

ಪುರುಷೋತ್ತಮಯ್ಯನವರು ಪಟ್ಣದ ಬಂಡಿಕಾರ ಬಾಲೈಯ್ಯನ ಮಗ ಮರಿಯನಿಗೆ ಹರಸಿ ಬರದುಕೊಟ್ಟ ಚೋರಕಥೆ. ಹನುಮಂತ ವಿಜಯಕಥೆ ೨ ಕ್ಕೆ ಪದನು ೨೩೩೦ ಕ್ಕೆ ಮಂಗಳಮಹಾಶ್ರೀ" ಎಂದಿದೆ.

2008

ಕೆ. ೬೨೪	**ಹಯಶಾಸ್ತ್ರ**	ಕಂದ, ವೃತ್ತ
೧೫ ೮"×೧.೮"	ಪದ್ಮಣ್ಣಪಂಡಿತ	೧೬೨೭
೧-೧೭೦ ಪತ್ರ	೧೦ ಪಂಕ್ತಿ	೮೦ ಅಕ್ಷರ

ಆದಿ : ಶ್ರೀಮದ್ಗೀರ್ವಾಣ.......ಮಕುಟತಟ ಪ್ರೋಲ್ಲಸತ್ಪದ್ಮರಾಗೋ
ದ್ದಾಮ....ಚರಣ ಸರೋಜಂ ಸುನಾಶಿರವೈರಿ
ಸ್ತೋಮಾಬ್ದ ಕ್ರೂರ ಜಂಝಾನಿಲನಗಣಿತ ಸದ್ಭಕ್ತವಾರಾಶಿಚಂದ್ರಂ
ಶಾಮಾಂಗಂ ಜ್ಯೋತಿ ಲಕ್ಷ್ಮೀರಮಣನೆಮಗೆ ಸಂಸಿದ್ಧಿಯಂ ಮಾಳ್ಕೆ ದೇವಂ ॥ ೧ ॥

ಕರ್ನಾಟ ಭಾಷೆಯಿಂದಂ
ನಿರ್ನೇತಸುಕಂದ ವೃತ್ತ ವಚನಗಳಿಂದಂ
ವರ್ನಿ....ಗುರುಲಘು
ವರ್ನಾಹುತಿಯಿಲ್ಲದಂತೆ ಸುಲಲಿತಪದದಿದಿಂ ॥ ೧೦ ॥

ಅಂತ್ಯ : ವುದರಶೂಲೆಯುಂ ಭಗಂದರಮುಂ ಕೆಟ್ಟು ತುರಗಂ ಸುಖಿಯಪ್ಪುದು ಯಿದು ಶ್ರೀಮದ್ರಾಜಾಧಿರಾಜ ರಾಜಕುಲತಿಕ ರಾಜಶಿಖಾಮಣಿ ಶ್ರೀಮಚ್ಚಾಮ ರಾಜಭೂಪಾಲಕಾರಿತ ಹಯಸಾರಸಮುಚ್ಚಯಾಭಿಧಾನ ಚಾಮ ರಾಜೀಯ ಗ್ರಂಥಮೆಂಬ ಹಯಶಾಸ್ತ್ರದೊಳ್ x x x ಶ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷ ೧೫೪೯ ನೆಯ ಪ್ರಭವಸಂವ ತ್ಸರದ ಚೈತ್ರಮಾಸ ಶುಕ್ಲಪಕ್ಷ ಪ್ರತಿಪತ್ತಿಥಿಯೊಳ್ ತುರಗಶಾಸ್ತ್ರಂ ಪದ್ಮಣ ಪಂಡಿತನಿಂ ಪೂರ್ನ್ನಮಾದುದು ಯಿಾ ತುರಗಶಾಸ್ತ್ರಂ x x x 'ಬರೆದಾತಂ ಪದ್ಮಣಪಂಡಿತಾರ್ಯನಳಿಯ ಪದ್ಮರಸಂ' ಎಂದಿದೆ.

ವಿಷಯ : ಹಯಶಾಸ್ತ್ರ, ಚಿಕಿತ್ಸಾಕ್ರಮ.

ವಿಶೇಷ: ೨ ಮತ್ತು ೨೦ನೆಯ ಪತ್ರ ಲುಪ್ತ. ೧೯ ನೆಯ ಕ್ರಮಸಂಖ್ಯೆಯ ೨ ಪತ್ರ ಗಳಿದ್ದು ಒಂದು ಮತ್ತೊಂದರ ಪ್ರತಿಯಾಗಿದೆ. ಗರಿಗಳು ತ್ರುಟಿತ, ಶಿಥಿಲ.

ಶಕಟರೇಫವಿದೆ. ಆರಂಭವನ್ನು ದ್ವಿತೀಯಾಧ್ಯಾಯದಲ್ಲಿ ಕೊಟ್ಟಿದೆ. ಏಕೆಂದರೆ, ಮೊದಲ ಗರಿಗಳು ತುಂಬ ಶಿಥಿಲ. ಓದುವುದಕ್ಕೆ ತುಂಬ ಕಷ್ಟ. ೧೭೦ ನೆಯ ಗರಿಯಿಂದ ಮುಂದಕ್ಕಿರುವ ೪೬ ಪತ್ರಗಳಲ್ಲಿ ಜ್ಯೋತಿಷ, ಮಂತ್ರ, ವೈದ್ಯವಿಷಯಗಳು ಸಂಕಲನವಾಗಿವೆ.

2009

ಕೆ. ೪೬೮।೩	**ಹರಗಣಮಾಲೆ**	ಹಾಡು
೧೫.೩" × ೧"	?	?
೮-೧೦ ಪತ್ರ	೫ ಪಂಕ್ತಿ	೮೦ ಅಕ್ಷರ

ಆದಿ : ಶ್ರೀಮದಾಘೆಜವಾರ ಲಿಂಗವ
ಪ್ರೇಮದಿಂ ತನುತ್ರಾಯಧಿ
ಸಾಮಭೇದವ ನೆಲೆಗೊಳಿಸಿ
ಶಾಮಸಂಗಳನಳಿದೂ ॥

ಅಂತ್ಯ : ಕಾಲಕ . . ಲಿದು ನಿರಾಣದಲಿ ನಿಂದವರ
ಸಾಲೋಕ್ಯ ಪದಗಳ ಮಿೂರಿ ನಿತ್ಯ
ಲೋಲರೆಂದೆನಿಶುವರಾ । ಲೀಲೆಯಿಂದ ನೂರೆಂಟು ಹರಗಣ
ಮಾಲೆಯನೂ । ಜೆಪಿಶುವರ ಶೂಲಿ ಶಾಂತವೀರೇಶ
....ಯ ಲೀಲೆಯಿಂ ವರವೀವನೂ ॥

ಸ-ರತರುವಂ ಸುರದೇನುವಂ
ವರಚಿಂತಾಮಣಿಗಳೆಂದು । ಪೆಸರಂ ಪೇಳ್ವರು
ಹರಗಣಮಾಲೆಯ ಜಪಿಸಲೂ ಬರದಿಂದ
ಸಿಧಿಯ....ಬಸವೇಶಾ ॥ ೧೪ ॥

ಹರಗಣ ಮಾಲೆ ಸಂಪೂರ್ಣ

ವಿಷಯ : ಶಿವಶರಣರ ನಾಮಾವಳಿ.

ವಿಶೇಷ : ಈ ಕಟ್ಟಿನಲ್ಲಿ ಅಕ್ಕಗಳ ಸೃಷ್ಟಿ, ಪ್ರಭುದೇವರ ಸೃಷ್ಟಿ ಮೊದಲಾದ ಇತರ ಗ್ರಂಥಗಳಿವೆ.

2010

ಕೆ. ೧೮೫ **ಹರದತ್ತಾಚಾರ್ಯರ ಚರಿತ್ರೆ** ಗದ್ಯ

೧೦.೨" × ೧.೭" ಕಳಲೆ ನಂಜರಾಜ ೧೮ನೆಯ ಶತಕ

೧–೭೪ ಪತ್ರ ೯ ಪಂಕ್ತಿ ೪೦ ಅಕ್ಷರ

ಆದಿ : ಶ್ರೀ x x ಹರದತ್ತಾಚಾರ್ಯರ ಮಹಾತ್ಮ್ಯೆಯಿಂ ಕೃತಿಯಲ್ಲಿ
ಶಿವಸ್ತುತಿ ಪದ್ಯವೊಂದೂ x x x
ಮಂಗಳವನೆಮಗೀವುದಿಂದು ತ
ರಂಗಿಣೀಧರ ವೃಷಭತು
ರಂಗಜಿತ ಸಾರಂಗ ದಾನವ ಸರ್ವಮಂಗಳೆಯಾ
ತುಂಗಕುಚ ತಟ ಕುಂಕುಮಾಂಕಿತ
ಮಂಗಳಾಂಗ ಮಹೇಶಪರಶುತ
ರಂಗವರದಾಭಯಕರಾಬ್ಜ ಸುಮೇರು ಕೋದಂಡಾ ॥ ೧ ॥

x x x x

ಪಾಶುಪತಶಾಸ್ತ್ರಾರ್ಥ ತತ್ವವ
ದೇಶಿಕೋತ್ತಮರಂಘ್ರಿಸೇವೆಯ
ಲೇಶಿನಿಂದಲೇ ತಿಳಿದು ನಂಜನರೇಂದ್ರನಾನೀಗಾ
ವ್ಯಾಸಕೃತ ಪುರಾಣ ಸೂಕ್ತಿ ಗ
ಳಾಶಯವನರಿದಚ್ಚ ಕನ್ನಡ
ಭಾಷೆಯಿಂದುಸುರುವೆನು ಹರದತ್ತಾರ್ಯ ಮಹಿಮೆಗಳಾ ।' ೧೫ ॥

ವಾಕ್ಯಂಗಳು । ಪೂರ್ವದಲ್ಲಿ ಪುಣ್ಯಕ್ಷೇತ್ರವಾದ ನೈಮಿಶಾರಣ್ಯದಲ್ಲಿ ಶೌನಕಾದಿ ಋಷೀಶ್ವರರು ದೀರ್ಘಾಯು ಸತ್ರವೆಂಬಾ ಯಾಗದಲ್ಲಿ

ಅಂತ್ಯ : ನೀವು ಶಿವಭಕ್ತರಾಗಿ ಶಿವಸಾಯುಜ್ಯವನ್ನೈದೀಯೆಂದು ನೈಮಿಶಾರಣ್ಯ ಕ್ಷೇತ್ರವಾಶಿಗಳಾದ ರುಷಿಗಳಿಗೆ ಸೂತಪುರಾಣೀಕರು ನಿರೂಪಿಸ್ತರು ಯೀ ಹರದತ್ತಾಚಾರ್ಯೋಪಾಖ್ಯಾನವನ್ನು ಯಾರು ವೋದಿ ಹೇಳುವರೋ x x ಕೈಲಾಸವಂ ಪಡೆದು ಶಿವಸಾಯುಜ್ಯವಂ ಪಡೆವರು ॥ ಯಿಂತು ಚಂದ್ರ ವಂಶೋದ್ಭವರಾದ ಭಾರದ್ವಾಜಗೋತ್ರರಾದ x x x x ವೀರ ರಾಜಯ್ಯನವರ ಪುತ್ರರಾದ ನಂಜರಾಜಯ್ಯನವರು ಭವಿಷ್ಯೋತ್ತರ ಪುರಾಣೋಕ್ತಮಾದ ಹರದತ್ತಾಚಾರ್ಯ ಚರಿತ್ರೆಯಂ ಸಕಲರರಿವಂತೆ ಅಚ್ಚ

ಕನ್ನಡ ಭಾಷೆಯಿಂ ಟೀಕಿಸಿ ನಂಜರಾಜವಾಣೀವಿಲಾಸವೆಂಬ ಪೆಸರಿಟ್ಟು ಪೇಳ್ದೀ ಕೃತಿ ಸಮಾಪ್ತಂ ಮಂಗಳಮಹಾ ಶ್ರೀ ||

ವಿಷಯ : ಹರದತ್ತಾಚಾರ್ಯರ ಚರಿತ್ರೆ.

ವಿಶೇಷ: ೧ನೆಯ ಪತ್ರದ ೬ನೆಯ ಪಂಕ್ತಿಯಲ್ಲಿ ಗ್ರಂಥ ಪ್ರಾರಂಭವಾಗುತ್ತದೆ. ಭವಿಷ್ಯೋತ್ತರ ಪುರಾಣ ಭಾಗದ ಗದ್ಯಾನುವಾದವಿದು. ೨೨ನೆಯ ಕ್ರಮ ಸಂಖ್ಯೆಯ ಎರಡು ಪತ್ರಗಳಿವೆ.

2011

ಕೆ. ೪೩೪	ಹರದತ್ತಾಚಾರ್ಯ ಚರಿತ್ರೆ	ಗದ್ಯ
೧೦.೨" × ೧.೮"	ಕಳಲೆ ನಂಜರಾಜ	೧೮ನೆಯ ಶತಕ
೧-೫೯ ಪತ್ರ	೮ ಪಂಕ್ತಿ	೪೨ ಅಕ್ಷರ

ಆದಿ: ಶ್ರೀ x x x

ಮಂಗಳವನೆಮಗೀವುದೆಂದು ತ
ರಂಗಿಣೀಧರ ವೃಷಭರಾಜ ತು
ರಂಗ ಜಿತ ಸಾರಂಗ ....ಗಳಯಾ
ತುಂಗ ಕುಚತಟ ಕುಂಕುಮಾಂಕಿತ
ಮಂಗಳಾಂಗ ಮಹೇಶ ಪರಶು ಕು
ರಂಗವರದಾಭಯ ಕರಾಬ್ಜ ಸುಮೇರು ಕೋದಂಡಾ || ೧ ||

x x x x

ಪಾಶುಪತಶಾಸ್ತ್ರಾರ್ಥ ತತ್ವವ
ದೇಶಿಕೋತ್ತಮರಂಘ್ರಿಸೇವೆಯು
ೀಶಿಸಿಂದಲೆ ತಿಳಿದು ನಂಜರಾಜೇಂದ್ರ ನಾನೀಗ
ವ್ಯಾಸಕೃತ ಪೌರಾಣ ಸೂಕ್ತಿಗ
ಳಾಶಯವನರಿದಚ್ಚ ಕನ್ನಡ
ಭಾಷೆಯಿಂದುಸುರುವೆವು ಹರದತ್ತಾಚಾರ್ಯ ಮಹಿಮೆಗಳಾ ||

ಪಾಕ್ಯಂಗಳು ಪೂರ್ವದಲ್ಲಿ ಪುಣ್ಯಕ್ಷೇತ್ರವಾದ ನೈಮಿಶಾರಣ್ಯದಲ್ಲಿ ಶೌನಕಾದಿ ಋಷೀಶ್ವರರು

ಅಂತ್ಯ : ಶಿವಾನುಗ್ರಹಕ್ಕೆ ಪಾತ್ರನಾಗಿ ಪರಮೇಶ್ವರಸ್ವಾಮಿಯ ವರಸನ್ನಿಧಿಯಲ್ಲಿ ಸಕಲಭೋಗಗಳನು ಅನುಭವಿಸುತ ಶಿವಸಮಾನನಾಗಿ ಸುಖವಾಗಿರುವನು. ಕೇಳಿರೈ ಋಷಿಗಳಿರಾ ಯೀ ಪ್ರಕಾರದಿಂದ ನೀವು ಪರಮೇಶ್ವರರಲ್ಲಿ ಭಕ್ತಿ ಉಳ್ಳವರಾಗಿ ಪರಮೇಶ್ವರರ ಪೂಜಿಸ್ತರೆ ಮುಕ್ತರಾಗುತ್ತಲಿದ್ದಿರಿ ಲೋಕದಲ್ಲಿ ಈ ಪುರಾಣವನ್ನು ವೋದಿದಂಥಾವರು ಕೇಳಿದಂಥಾವರು ಈ ಪುಸ್ತಕವನ್ನು ಬರೆಯಿ....

ವಿಷಯ : ಹರದತ್ತಾಚಾರ್ಯರ ಚರಿತ್ರೆ.

ವಿಶೇಷ : ಕೊನೆಯ ಪತ್ರ ಶಿಥಿಲ.

2012

ಕೆ.ಬಿ. ೨೪೭	**ಹರದತ್ತಾಚಾರ್ಯ ಚರಿತ್ರೆ**	ಗದ್ಯ
೮.೨″ × ೬.೪″	ಕೃಷ್ಣರಾಜ ವಡೆಯರು ?	೧೮೪೦
೧-೪೦ ಪತ್ರ	೧೭ ಪಂಕ್ತಿ	೧೮ ಅಕ್ಷರ

ಆದಿ : ಬೆಟ್ಟದರಸಿನ ಕುವರಿಗಿರಿಶನ
ಪಟ್ಟದರಸಿ ಚರಾಚರಂಗಳ
ಸೃಷ್ಟಿಯನು ನಿಜದೃಷ್ಟಿ ಲೀಲಾಮಾತ್ರದಿಂದೆಸಗಿ
ಕಷ್ಟಮಂ ಪರಿಹರಿಸಿ ಬೇಡಿದ
ಭೀಷ್ಟವರಗಳನೀವ ನಿಪುಣೆವ
ದಿಷ್ಟ ಸಿದ್ಧಿಯನಿತ್ತು ಸಲಹು ಗಣೇಶಗುಹಜನನೀ ॥ ೧ ॥

x x x x

ಶ್ರೀಮತ್ಸಮಸ್ತಭೂಮಂಡಲಮಂಡನಾಯಮಾನ

x x x x

ಶ್ರೀ ಚಾಮರಾಜಮಹೀಪಾಲಧರ್ಮಪತ್ನೀ ಕೆಂಪನಂಜಮಾಂಬಾಗರ್ಭ ಸುಧಾಂಬುಧಿರಾಕಾಸುಧಾಕರರಾಯಮಾನ ಶ್ರೀ ಚಾಮುಂಡಾಂಬಿಕಾ ವರಪ್ರಸಾದೊದ್ಭವರಾದ ಮಹೀಶೂರ ಪುರವರಾಧೀಶ ರಾಜಾಧಿರಾಜ ಮಹಾರಾಜ ಶ್ರೀ ಕೃಷ್ಣರಾಜ ವಡೆಯರವರು ವ್ಯಾಸಕೃತ ಭವಿಷ್ಯೋತ್ತರ ಪುರಾಣೋಕ್ತವಾದ ಹರದತ್ತಾಚಾರ್ಯರ ಚರಿತ್ರೆಯಂನು ಲೋಕೋಪಕಾರ್ಥವಾಗಿ ಕರ್ನಾಟಕ ಭಾಷೆಯಿಂದ ವಿರಚಿಸುವ ಪರಿಯೇನೆಂದರೆ– ಶ್ರೀ ಪೂರ್ವದಲ್ಲಿ ಪುಣ್ಯಕ್ಷೇತ್ರವಾದ ನೈಮಿಷಾರಣ್ಯದಲ್ಲಿ ಶೌನಕಾದಿ

ರೃಷೀಶ್ವರರು । ದೀರ್ಘಸತ್ರವೆಂಬ ಯಾಗದಲ್ಲಿ ನಿತ್ಯಕರ್ಾನುಷ್ಠಾನದ । ಶ್ರಮ ಪರಿಹಾರಕ್ಕೋಸ್ಕರ । ಕೆಲವು ಪುಣ್ಯಕಥೆ । ಗಳಂನು ಹೇಳುತ್ತಾ ಕೇಳುತ್ತಿರಲು ।

ಅಂತ್ಯ : ಬ್ರಾಹ್ಮಣನ ಕರದು । ನೀನು ಶಿವನಾಮಸಂಕೀರ್ತನವಂ ಮಾಡಿಕ್ಕೊಂಡು ಬ್ರಾಹ್ಮರ ಸಭೆಗೆ ಹೋಗಿ ನಂನ ಪಾಪ ಶಿವನಾಮುಸ್ಮರಣೆಯಿಂದ ಹೋಯಿತೆಂದು । ಚಾ ಆಚಾರ್ಯರು ಹೇಳಿದರು । ನಂನ ಪಾಪವು ಹೋಯಿತೆಂದುಕೊಳ್ಳಿ । ಸುಖವಾಗಿ ಯಿರು ಎಂದು ಹೇಳಿ ಆಚಾರ್ಯರು ಬ್ರಾಹ್ಮಣ ಪ್ರಕಾರವಾಗಿ । ಶಿವನಾಮ ಸ್ಮರಣೆ

ವಿಷಯ : ಭವಿಷ್ಯೋತ್ತರ ಪುರಾಣದಲ್ಲಿ ಬರುವ ಹರದತ್ತಾಚಾರ್ಯರ ಚರಿತ್ರೆ.

ವಿಶೇಷ : ಅಸಮಗ್ರ, ಭವಿಷ್ಯೋತ್ತರ ಪುರಾಣದ ೫೮-೬೧ ಅಧ್ಯಾಯದ ಅರ್ಥ ಪೂರ್ತಿ ಇದೆ. ೬೨ನೆಯ ಅಧ್ಯಾಯ ಅಸಂಪೂರ್ಣ.

2013

ಕೆ.ಬಿ. ೨೪೯/೨	**ಹರದ ನೀತಿ**	ಕಂದ
೮" × ೬.೬"	?	?
೧೦-೧೩ ಪತ್ರ	೨೫ ಪಂಕ್ತಿ	೩೦ ಅಕ್ಷರ

ಆದಿ: ಶ್ರೀ x x x

ಕಂದ॥ ಶ್ರೀ ದಿವಿಜರಾಜ ವಂದ್ಯಂ
ಪಾದಾನೂತ ಜನನಿಕಾಯ ಚಿಂತಾರತ್ನಂ
ಮೇದಿನಿಯೊಳು ಭವ್ಯ ನಿಕರಂ
ತಾದರದಿ ಕೊಡಿಗೆ ವರವಲಾದಿ ಜಿನೇಂದ್ರಂ ॥ ೧ ॥

ಜಂಬೂದ್ವೀಪದ ಭರತದೊ
ಳಂಬುಜವನರಾಜಿತಾಂಗ ವಿಷಯದೊಳಿಕ್ಕುಂ
ತುಂಬಿದ ಹರ್ಮ್ಯಾವಳಿಯಂ
ಡಂಬುತವಡೆ ರಂವ್ಯವಾಗಿ ಚಂಪಾನಕರಂ ॥ ೨ ॥

ಅಂತ್ಯ: ಅಲ್ಲದ ಸತಿ ವಡನಾಟಂ
ತಲ್ಲಣಿಸುವ ಭಯದ ಬಟ್ಟೆಕಳ್ಳರ ಸಂಗಂ
ಬಲ್ಲಿದರೊಡನೆ ವಿರೋದಂ
ಕೊಲ್ಲದೆ ಮಾಣ್ದಪುದೆ ಜಿನಮುನಿ ತನೆಯಾ ॥ ೧೦೦ ।

ಶ್ರೀಮಃ ಪರಮ ಜಿನೇಂದ್ರನ ಕಾರುಣ್ಯದಿ ಪೇಳ್ದಿ ಹರದ ನೀತಿಯ ಸುಜನರು ಮೋದದಿ ಲಾಲಿಸೆ ಭವ್ಯೋತ್ತಮರಾಳುವರು ಇಹದಿ ಪದವಿಯಂ ಅನವರತಂ ॥ ೧೦೧ ॥

ಅಂತು ಹರದ ನೀತಿ ಸಂಪೂರ್ನ್ನ ಮಂಗಳಮಹಾ ಶ್ರೀ

ವಿಷಯ : ಜೈನ ನೀತಿ ಗ್ರಂಥ.

ವಿಶೇಷ: ಪತ್ರಗಳು ಹುಳುಗಳಿಂದ ಕೆಲವು ಕಡೆಗಳಲ್ಲಿ ಕೊರೆಯಲ್ಪಟ್ಟವೆ. ಇದೇ ಪುಸ್ತಕದಲ್ಲಿ ಚಿಕ್ಕಲಾಲಿಂಗವಚನಾಮೃತಸಾರವೆಂಬ ಮತ್ತೊಂದು ಗ್ರಂಥವಿದೆ.

2014

ಕೆ. ಎ. ೧೪	**ಹರಿಕಥಾಮೃತ ಸಾರ**	ಭಾಮಿನೀಷಟ್ಪದಿ
೧೨.೬" × ೮"	ಜಗನ್ನಾಥ ವಿಠಲ	ಸು. ೧೭೭೫
೧-೧೫೦ ಪುಟ	೨೬ ಪಂಕ್ತಿ	೨೫ ಅಕ್ಷರ

ಆದಿ : ಹರಿಕಥಾಮೃತಸಾರ ಪ್ರಾರಂಭ—ಮೊದಲನೆ ಸಂಧಿ

ಶ್ರೀ ರಮಣಿಕರಕಮಲ ಪೂಜಿತ
ಚಾರು ಚರಣ ಸರೋಜ ಬ್ರಹ್ಮ ಸ
ಮೀರವಾಣಿ ಫಣೀಂದ್ರಪೀಂದ್ರ ಭವೇಂದ್ರ ಮುಖವಿನುತಾ
ನೀರಜ ಭವಾಂಡೋದಯ ಸ್ಥಿತಿ
ಕಾರಣನೆ ಕೈವಲ್ಯದಾಯಕ
ನಾರಸಿಹ್ಮನೆ ನಮಿಪೆ ಕರುಣಿಪೊದೆಮಗೆ ಮಂಗಳವಾ ॥ ೧ ॥

X X X X

ಪರಿಮಳವು ಸುಮನದೊಳಗನಳನು
ಅರಿಣಿಯೊಳಗಿಪ್ಪಂತೆ ದಾಮೋ
ದರನು ಬ್ರಂಹ್ಮಾದಿಗಳ ಮನದಲಿ ತೋರಿ ತೋರದಲೆ
ಇರುತ್ತಿಹ ಜಗನ್ನಾಥ ವಿಠಲನ
ಕರುಣ ಪಡವಾ ಮೋಕ್ಷ ಜೀವರ
ಪರಮ ಭಾಗವತರನ ಕೊಂಡಾಡುವದು ಪ್ರತಿದಿವವೂ ॥ ೧೩ ॥

ಪ್ರಥಮಾಚರಣ ಸಂಧಿ ಸಂಪೂರ್ಣ

ಅಂತ್ಯ: ಇನಿತು ವಿಷ್ಣು ರಹಸ್ಯವನು ಭೃಗು
ಮುನಿಪ ಇಂದ್ರದ್ಯುಮ್ನಗರುಪಿದ
ದನನು ಕೇಳ್ವದು ನಿತ್ಯ ಬುಧಜನ ಮತ್ಸರವ ಬಿಟ್ಟು
ಅನುಚಿತೋಚಿ ಕಳಾದರೆಯು ಸರಿ
ಸರಿಗಣನೆ ಮಾಡದಿರೆಂದು ವಿದ್ವ
ಜ್ಜನಕೆ ವಿಜ್ಞಾಪನವ ಮಾಡುವೆ ವಿನಯ ಪೂರ್ವಕದಿ ॥ ೧೪ ॥

ವೀತಭಯ ವಿಶ್ವಾಸನಿಧಿ ಪಿತ
ಮಾತುಳಾಂತಕ ಮಧ್ವವಲ್ಲಭ
ಭೂತ ಭಾವನ ತನ್ನ ಭಾಸ್ಕರ ತೇಜ ಮಹರಾಜ
ಗೌತಮನ ಮಡದಿಯನು ಕಾಯಿದ ಅ
ನಾಥ ರಕ್ಷಕ ಗುರುತಮ ಜಗ
ನ್ನಾಥ ವಿಠ್ಠಲ ತನ್ನ ನಂಬಿದ ಭಕ್ತರನ ಪೊರೆವಾ ॥

ಹರಿಕಥಾಮೃತಸಾರ ಸಮಾಪ್ತವಾದದು. ಸಂಧಿ ೩೨ಕ್ಕೆ, ಪದ್ಯಗಳು ೯೮೮ಕ್ಕೆ ಮಂಗಳಂ ಶ್ರೀ.

ವಿಷಯ: ಭಗವಂತನ ಮಹಿಮೆ.

ವಿಶೇಷ: ಗ್ರಂಥದಾದಿಯ ೨ ಪ್ರತ್ಯೇಕ ಪತ್ರಗಳಲ್ಲಿ ವಿಷಯಾನುಕ್ರಮಣಿಕೆ ಇದೆ.

2015

ಕೆ. ಬಿ. ೧೭೪	**ಹರಿಗೋಲು ಕಥೆ**	ಯಕ್ಷಗಾನ
೭.೭" × ೯.೧"	?	?
೧-೨೪ ಪತ್ರ	೧೧ ಪಂಕ್ತಿ	೧೬ ಅಕ್ಷರ

ಆದಿ: ಭಾಗವತದೊಳಗಣ ಹರಿಗೋಲು ಕಥೆ ಬರೆವರೆ ಶುಭಮಸ್ತು ॥ ನಿರ್ವಿಘ್ನಮಸ್ತು ॥

ಭಾಮಿನಿ॥ ಸಿರಿಯರಸ ತಾನೊಲಿದು ಧರೆಯೊಳು
ಮೆರೆವ ಶೇಷಾಚಲದಿ ಭಕ್ತರ
ಪೊರೆಯಲೋಸುಗ ಶ್ರೀನಿವಾಸನುಯನುವ ನಾಮದಲೀ॥

ವೆ ರೆವದೇವನ ಪದಕೆ ವಂದಿಸಿ
ನಿ ̄ ಂತಮನದಲಿ ನಿನ್ನ ಧ್ಯಾನವ
ಕರುಣಿಪುದು ನೀನೊಲಿದು ವರವನು ದೇವದಯದೋರಿ ॥ ೧ ॥

॥ ರಾಗ ॥ ನಾಟಿ ॥ ಝಂಪೆ ॥
ಜಯತು ಶಂಕರಪುತ್ರ
ಜಯತು ನಿರ್ಜರಸ್ತೋತ್ರಾ
ಜಯತು ಮುರಹರಮಿತ್ರ
ಜಯತು ಭವಹೋತ್ರಾ ॥ ಜಯ ಜಯಾ ॥ ೧ ॥

ಅಂತ್ಯ : ಧರೆಯೊಳಧಿಕ ಮೈಸೂರೊಳಗೆ
ಕರುಣದಿಯಿರುತ ಪೊರೆವ ಭ
ಕ್ತರಿಗೆ ಅನುದಿನ ಸಲಹುವ ಶ್ರೀವೆಂಕಟೇಶಗೆ
ವರಧೆ ರಮಾಪತಿ ಶ್ರೀಹರಿಗೆ ಮಂಗಳಂ ಜಯ ಮಂಗಳಂ ॥ ೩ ॥
ಹರಿಗೋಲಕಥೆ ಸಮಾಪ್ತ ಮಂಗಳಮಹಾ ಶ್ರೀ

ವಿಷಯ : ಭಾಗವತದೊಳಗಣ ಹರಿಗೋಲ ಕಥೆ

ವಿಶೇಷ : ಸಮಗ್ರ.

2016

ಕೆ. ೧೦೭।೨	**ಹರಿಭಕ್ತಿಸಾರ**	ಭಾಮಿನೀಷಟ್ಪದಿ
೯" × ೧.೩"	ಕನಕದಾಸ	ಸು. ೧೫೫೦
೧-೩೧ ಪತ್ರ	೫ ಪಂಕ್ತಿ	೩೫ ಅಕ್ಷರ

ಆದಿ : ಶುಭವಸ್ತು. ಹರಿಭಕ್ತಿಸಾರ ಬರೆಯುವದಕ್ಕೆ ನಿರ್ವಿಘ್ನಮಸ್ತು
ಶ್ರೀಯರಸ ಗಾಂಗೇಯನುತ ಕಾಂ
ತೇಯ ವಂದಿತ ಚರಣ ಕಮಲದ
ಳಾಯತಾಂಬಕರೂಪ ಚಿನುಮಯ ದೇವಕೀತನಯಾ
ರಾಯ ರಘುಕುಲವರ್ಯ ಭೂಸುರ
ಪ್ರೀಯ ವರಪುರನಿಲಯ ಚೆನ್ನಿಗ
ರಾಯ ಚತುರೋಪಾಯ ರಕ್ಷಿಸು ನಮ್ಮನನವರತಾ ॥ ೧ ॥

ದೇವದೇವ ಜಗದ್ಭರಿತ ವಸು
ದೇವ ಸುತ ಜಗದೇಕನಾಥ ರ
ಮಾವಿನೋದಿತ ಸುಜನ ಸಂನ್ನುಗ....ನಿ....
ಭಾವ ಜಾರಿಪ್ರಿಯ ನಿರಾಮಯ
ರಾವಣಾಂತಕ ರಘುಕುಲಾನ್ವಯ
ಪಾವನಾಸುರ ಮಥನ ರಕ್ಷಿಸು ನಮ್ಮ್ರನನವರತಾ ॥ ೨ ॥

ಅಂತ್ಯ : ನೂರು ಕನ್ಯಾದಾನವನು ಭಾ
ಗೀರಥೀಸ್ನಾನವನು ಗೋಗಳ
ನೂರುಸಾವಿರ ಲಕ್ಷ ಧನವನು ಭೂಸುರರ್ಗೋಲಿದೂ
ಊರುಗಳ ನೂರಗ್ರಹಾರವ
ಧಾರೆಯೆರೆದಾ ಫಲವು ನೆರೆ ಕೈ
ಸೇರುವುದು ಹರಿಭಕ್ತಿಸಾರದ ಕಥೆಯ ಕೇಳ್ದರಿಗೇ ॥ ೧೦೯ ॥

ವಿಷಯ : ತತ್ವ, ಭಕ್ತಿಪದ್ಯಗಳು,

ವಿಶೇಷ : ಪುಸ್ತಕ ಸ್ವಲ್ಪ ಶಿಥಿಲ. ಇದರೊಂದಿಗೆ ಸಂಕ್ಷೇಪ ಭಾರತವೂ ಇದೆ.

2017

ಕೆ. ೨೧೬।೩	**ಹರಿಭಕ್ತಿಸಾರ**	ಭಾಮಿನೀಷಟ್ಪದಿ
೧೪.೫" × ೧.೪"	ಕನಕದಾಸ	ಸು. ೧೫೫೦
೪೬-೬೮ ಪತ್ರ	೫ ಪಂಕ್ತಿ	೪೪ ಅಕ್ಷರ

ಆದಿ : ಶುಭಮಸ್ತು । ಭಕ್ತಿಸಾರ ಚರಿತ್ರೆ ॥
ಶ್ರೀಯರಸ ಗಾಂಗೇಯನುತ ಕಾಂ
ತೇ....ವಂದಿತ ಚರಣಕಮಲದ
ಳಾಯತಾಂಬಕ ರೂಪ ಚಿನುಮಯ ದೇವಕೀತನಯಾ ॥
ರಾಯರಘುಕುಲವರ್ಯ ಭೂಸುರ
ಪ್ರೀಯ ವರಪುರ ನಿಲಯ ಚಂನ್ನಿಗ
ರಾಯ ಚತುರೋಪಾಯ ರಕ್ಷಿಸು ನಮ್ಮನನವರತಾ ॥ ೧ ॥

ಅಂತ್ಯ : ....
....ಮಧ್ಯದಲವನಿಯನು
ನಾರಿಯರಗಾಯು ಶ್ರೀ ಹಯಗಳನಿತ್ತ ಫಲವಹುದೂ ।

ಧಾರುಣಿ........ ...ಭಕ್ತಿಸಾರವ
ನಾರುವೋದಿದ ನರರಿಗನುದಿನ
ಚಾರುತರದೊಳಗಿತ್ತು ರಕ್ಷಿಪನಾದಿ ಕೇ.... .... ॥ ೧೧೧ ॥
ಮಂಗಳಮಹಾ ಶ್ರೀ

ವಿಷಯ : ಹರಿಮಹಿಮೆ, ಭಕ್ತಿ, ನೀತಿ ಪದ್ಯಗಳು.

ವಿಶೇಷ : ಈ ಗ್ರಂಥದ ಆದಿ, ಅಂತ್ಯದ ಪತ್ರಗಳು ತ್ರುಟಿತವಾಗಿವೆ. ಇದೇ ಕಟ್ಟಿನಲ್ಲಿ ಮುಗ್ಗಿಕೋಷ್ಟಕಗಳು, ಭಾರತದಲ್ಲಿನ ಸಭಾಪರ್ವದ ಮೊದಲ ಸಂಧಿ ಇವೂ ಇವೆ.

2018

ಕೆ. ೨೨೫।೨	ಹರಿಭಕ್ತಿಸಾರ	ಭಾಮಿನೀಷಟ್ಪದಿ
೧೩"×೧.೫"	ಕನಕದಾಸ	ಸು. ೧೫೫೦
೨೩–೬೨ ಪತ್ರ	೪ ಪಂಕ್ತಿ	೪೮ ಅಕ್ಷರ

ಆದಿ : ಶ್ರೀ x x ಹರಿಭಕ್ತಿಸಾರ ಬರೆಯುದಕ್ಕೆ ನಿರ್ವಿಘ್ನಮಸ್ತು
ಶ್ರೀಯರಸ ಗಾಂಗೇಯನುತ ಕೌಂ
ತೇಯ ವಂದಿತ ಚರಣಕಮಲ ದ
ಳಾಯತಾಂಬಕ ರೂಪ ಚಿನ್ಮಯ ದೇವಕೀತನಯಾ
ರಾಯ ರಘೊಕುಲವರ್ಯ ಭೂಸುರ
ಪ್ರೀಯ ವರ ಪುರನಿಲಯ ಚಂನಿಗ
ರಾಯ ಚತುರೋಪಾಯ ರಕ್ಷಿಸು ನಂಮನನವರತಾ ॥ ೧ ॥

ಅಂತ್ಯ : ಕುಲಗಿರಿಗಳಾಮ್ನಾಯ ಧಾರುಣಿ
ಸಲಿಲಪಾವಕ ಮಾರುತಾಂಬರ
ಜಲಜಮಿತ್ರ ಹಿಮಾಂಸು ತಾರೆಗಳುಳ್ಳ ಪರಿಯಂತಾ
ಚಲನವಿಲ್ಲದೆ ನಿಂನ ಚರಿತೆಯ
ನೊಲಿದ ಉಚ್ಚರಿಸುವವರೊಳು ಮನ
ಒಲಿದು ಹರುಷದೊಳಿದ್ದು ರಕ್ಷಿಸು ನಂಮನನವರತಾ ॥ ೧೧೦ ॥
ಹರಿಭಕ್ತಿಸಾರ ಸಂಪೂರ್ಣಂ ಮಂಗಳಮಹಾ ಶ್ರೀ

ವಿಷಯ : ಹರಿಭಕ್ತಿ.

ವಿಶೇಷ ಃ ಈ ಕಟ್ಟಿನಲ್ಲಿರುವ ಇತರ ಗ್ರಂಥಗಳೆಂದರೆಶಿ : ವಭಕ್ತಿಸಾರ, ಸೋಮೇಶ್ವರ ಶತಕ ಮೊದಲಾದುವು.

2019

ಕೆ. ೩೮೯|೧	**ಹರಿಭಕ್ತಿಸಾರ**	ಭಾಮಿನೀಷಟ್ಪದಿ
೮.೮" × ೧.೨"	ಕನಕದಾಸ	ಸು. ೧೫೫೦
೧–೨೯ ಪತ್ರ	೫ ಪಂಕ್ತಿ	೩೪ ಅಕ್ಷರ

ಆದಿ : ಶುಭಮಸ್ತು ॥ ಭಕ್ತಿಸರ ಬರೆಯುಧಕೆ ನಿರ್ವಿಗ್ನನಮಸ್ತು ॥

ಶ್ರೀಯರಸ ಗಾಂಗೇಯನುತ ಕೌಂ
ತ್ರೇಯ ವಂಧಿತ ಚರಣಕಮಲನಾ
ಳಾಯತಂಬಕ ರೂಪೂ ಚಿಂನ್ಮಯ ದೇವಕಿತಾನೆಯ
ರಾಯ ರಘುಕುಲವರ್ಯ್ಯ ಭುಸುರ
ಪ್ರೀಯ ವರಪುರ ನಿಲಯ ಚೆಂನಿಗ
ರಾಯ ರಕ್ಷಿಸು ನಂಮುನನವರತಾ ॥ ೧ ॥

ದೇವದೇವ ಜಗದ್ಭರಿತಾ ವಸು
ದೇವಸುತ್ತಾ ಜಗದೇಕನಾಥ ರ
ಮಾವಿನೋದಿತ ಸಜ್ಜನನಕಿಳಗುಣಭರಿತಾ
ಬಾವಜಾರಿಪ್ರಿಯ ನಿರಾಮಾಯ
ರಾವಣಾಂತಂಕ್ಕಾ ರಘುಕುಲನ್ವಯ
ಪಾವನದ ಸಂನ್ಮೂರ್ತಿರಕ್ಷಿಸೂ ನಂಮ್ಮನನವರತಾ ॥ ೨ ॥

ಅಂತ್ಯ : ಕುಲಗಿರಿಗಳೊಳಾನಕ ಧಾರುಣಿ
ಜಲಧಿ ಪಾವಕನು ಮಾರುತ್ತ
ಜಲಜಮಿತ್ರ ಹೀಮಾಂಶು ತಾರೆಗಳುಳ್ಳಾ ಪರಿಯಂತಾ
ಚಲನವಿಲ್ಲಾದೆ ನಿಂನ್ನಾ ಚರಿತೆಯ
ವೊಲಿದುದರಗಿದು ವೊಪ್ಪುವಂದದಿ
ಚೆಲ್ಲುವ ಚೆಂನ್ನಿಗರಾಯ ರಕ್ಷಿಸೂ ನಂಮ್ಮನನವರತಾ ॥ ೧೦೫ ॥

ಹರಿಭಕ್ತಿಸಾರ ಕಾಳಿದಾಸರೂ ಹೇಳಿದೂ ॥ ಭಕ್ತಿಸಾರ ಸಂಪೂರ್ಣ ಮಂಗಳ ಮಹಾಶ್ರೀ ॥.

ವಿಷಯ : ಭಕ್ತಿಯ ಪದ್ಯಗಳು.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ೨೮ನೆಯ ಪತ್ರ ಲುಪ್ತವಾಗಿದೆ. ಇದೇ ಕಟ್ಟಿನಲ್ಲಿ ‘ ಧರ್ಮನೀತಿ ’ ಎಂಬ ಕೃತಿಯೂ ಇದೆ. ಪ್ರತಿಪದ್ಯವೂ ‘ರಕ್ಷಿಸು ನಮ್ಮನನವರತ’ ಎಂದು ಮುಗಿದಿದೆ.

2020

ಕೆ. ಎ. ೮೭|೭	**ಹರಿಲೀಲಾ ವಿಲಾಸ**	ಯಕ್ಷಗಾನ
೧೫.೨" × ೯.೫"	ಶ್ರೀನಿವಾಸ (?)	೧೮೮೧
೧೨೩–೧೨೯ ಪತ್ರ	೩೧ ಪಂಕ್ತಿ	೨೫ ಅಕ್ಷರ

ಆದಿ : ಹರಿಲೀಲಾವಿಲಾಸಕಥಾ ಪ್ರಾರಂಭಃ

ಶ್ಲೋ || ಶ್ರೀಕಲ್ಯಾಣಗುಣಾಕರಂ ನತಜನಾನಂದಾಬ್ಧಿರಾಕೇಂದು ನಾ
ಳೀಕೋದ್ಭೂತ ಸಮರ್ಚಿತಾಂಘ್ರಿಯುಗಳಂ ದುಃಖಾಂಧಕಾರಾಪಹಂ
ನಾಕೇಶಾದಿ ಸಮೂಹಗರ್ವ ನಿಧನಂ ಪದ್ಮಾಲಯಾಕಾಂತನ
ಸ್ತೋಕಾನಂದವನಿತ್ತು ಕಾವುದಿಳೆಯಂ ಶ್ರೀ ಶ್ರೀನಿವಾಸಂ ಸದಾ || ೧ ||

ರಾಗ ಕಮಾಚ್ || ಆದಿ—

ಕರುಣದಿ ಪೊರೆನಿರತ ಹರಿಯೆ ನೀಂ || ಪ ||
ಪಾಲಿತ ಮುನಿಜನ ಕಾಲಕಾಲಾರ್ಚಿತ
ನೀಲಮೇಘಾಭ ಶ್ರೀಲೋಲನೆ ನೀಂ || ೧ ||

X X X X

ಗುರುಹಿರಿಯರಡಿಗೆ ವಂದಿಸು
ತುರೆ ರಂಜಿಪ ನಾರದೀಯಪೌರಾಣದೊಳಂ
ಬುರುಹಾಕ್ಷನಜತನೂಜನ
ಧರಣಿಗೆನಗೆೈದ ಕಥೆಯ ಪೇಳುವನೀಗಳ್ ||

ಅಂತ್ಯ : ರಾಗ ||

ಮಂಗಳ ಮಹಿಗಿರಿನಿಲಯಗೆ ನೆರೆಜೆಯ ಮಂಗಳಮನವರತ || ಪ ||
ಭಂಗಿತಾಸುರ ಪದ್ಮಾಲಿಂಗಿತಾಂಗಗೆ ಫಣಿ
ಪುಂಗವಶಯಗೆ ವಿಹಂಗವಾಹನನಿನಿಗೆ

X X X X

ಮೀನಾದ್ಯನಂತಾವತಾರವ ಧರಿಸುತ
ದೀನರ ಮೊರೆಯುತಲಿ
ಮಾನುಷನಾದಹಿವರ್ಯ ಸೇವಿತನಾದ
ಶ್ರೀನಿವಾಸಗೆ ಸರ್ವಂ ಲೋಕೈಕನಾಥಗೆ ‖ ೩ ‖

ಶ್ಲೋಕಂ ‖ ಕಾಯೇನ ವಾಚಾ ಮನಸೇಂದ್ರಿಯೈರ್ವಾ ಸಮರ್ಪಯಾಮಿ ‖ ೧ ‖
ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ ಸುಖಿನೋ ಭವಂತು ‖ ೨ ‖
ಹರಿಲೀಲಾವಿಲಾಸಕಥನಂ ಸಂಪೂರ್ಣಂ ‖

ವಿಷಯ : ವಿಷ್ಣುವಿನ ಮಹಿಮೆ.

ವಿಶೇಷ : ಇದರೊಂದಿಗೆ ಸಮುದ್ರ ಮಥನ, ಪ್ರಹ್ಲಾದ ಚರಿತ್ರೆ, ಗಿರಿಜಾ ಪರಿಣಯ, ಕಿರಾತಾರ್ಜುನೀಯ, ಹರಿಶ್ಚಂದ್ರವಿಳಾಸ, ನಳೋಪಾಖ್ಯಾನ ಎಂಬ ಗ್ರಂಥಗಳೂ ಇರುತ್ತವೆ.

2021

ಕೆ. ೪।೨	**ಹರಿವಂಶಾಭ್ಯುದಯ**	**ಚಂಪು**
೨೨.೧″ × ೨.೧″	**ಬಂಧುವರ್ಮ**	**ಸು. ೧೨೦೦**
೧–೭೮ ಪತ್ರ	**೧೩ ಪಂಕ್ತಿ**	**೧೧೦ ಅಕ್ಷರ**

ಆದಿ : ಶ್ರೀಯಂ ಭವ್ಯ ಜನಾಂದಯ ಪ್ರಣುತೆಯಂ ಸರ್ವ್ವೋಪಕೃದ್ದಿವ್ಯವಾಕ್
ಶ್ರೀಯಂ ಜೀವದಯಾದಮ ಪ್ರಸಮಯಂ ವಿಶ್ವ....ಭಾಸ್ವದ್ಯಶ
ಶ್ರೀಯಂ ಕರ್ಮ್ಮಾರಿಪುಕ್ಷಯ ಪ್ರಭವಮಂ ತಾಳ್ದಿರ್ದ್ದ ನಿವೃತಿ
ಶ್ರೀಯಂ ಪ್ರಾರ್ತ್ಥಿಸಿ ವಂದಿಪೆಂ ತ್ರಿಭುವನೈಕ ಸ್ವಾಮಿಯಂ ನೇಮಿಯಂ ‖

X X X X

ಕಾಮಕಳಾ ನಿತಂಬಿನಿಯ ಪಾದಪಯೋದರಯುಗ್ಮ ನಾಟ್ಯವಿ
ದ್ಯಾಮುಖಿ ರಾಜನೀತಿ ಪದಲಕ್ಷಣಲೋಚನೆ ನಾರಹಸ್ತಿ ಧ
ರ್ಮಾಮೃತ ವಾಕ್ಯೆ ಕಾವ್ಯರಸಭಾವೆ ಸರಸ್ವತೀ ಬಂದುವರ್ಮ್ಮ ವ
ಕ್ತ್ರಾಮಳ ಕೋಮಳಾಂಬುರುಹದೊಳ್ನೆಲಸಿರ್ಕ್ಕೆ ಮನೋನುರಾಗದಿಂ ‖

ಅಂತ್ಯ : ಯೋಗ ನಿರೋಧದಿಂದುಳಿದ ನಾಲ್ಕುಮಘಾತಿ....
....ಂಗಳಂ ಬೆದಿಸಿಕ್ಕಿ ಗೆಲ್ದು ಭುವನತ್ರಯದಗ್ಗದ ಭೂತಳ

ಕ್ಕಾಗಳೆ ಪೋಗಿ ಸಿದ್ಧಗುಣಮೆಂಬುವರೊಳು ನೆಲಸಿರ್ದ ನಿವೃತ್ತಿ
ಶ್ರೀಗದಿನಾಥನಾಗಿ ನೆಲಸಿರ್ದನನಂತಚತುಷ್ಟಿಯೋದಯಂ ||

ಗದ್ಯ || ಯಿದರ್ಹತ್ಸರ್ವಜ್ಞ ಪಾದ ಪದ್ಮವಿರಾಜಿತೋತಮಾಂಗ ಶ್ರೀಬಂಧು
ವರ್ಮ್ಮ ನಿರ್ಮ್ಮಿತಮಪ್ಪ ಹರಿವಂಶಾಭ್ಯುದಯದೊಳು ಚತುರ್ದಶಾಶ್ವಾಸಂ
|| ೧೪ ||

ವಿಷಯ : ನೇಮಿನಾಥನ ಚರಿತೆ.

ವಿಶೇಷ : ಶಕಟರೇಫ ಪ್ರಯೋಗವಿದೆ. ಇದೇ ಕಟ್ಟಿನಲ್ಲಿ ನೇಮಿನಾಥ ಪುರಾಣವೆಂಬ ಮತ್ತೊಂದು ಕೃತಿ ಇದೆ.

2022

ಕೆ. ಎ. ೪೬	**ಹರಿವಂಶಾಭ್ಯುದಯ**	ಚಂಪು
೧೨.೧" × ೭ ೯"	ಬಂಧುವರ್ಮ	ಸು. ೧೨೦೦
೧–೩೫೬ ಪುಟ	೨೪ ಪಂಕ್ತಿ	೨೨ ಅಕ್ಷರ

ಆದಿ: ಹರಿವಂಶಾಭ್ಯುದಯ । ಶ್ರೀ ಗಣಾಧಿ X X

ವೃ || ಶ್ರೀಯಂಭವ್ಯ ಜನಾಂದಯ ಪ್ರಣಿತೆಯಂ ಸರ್ವೋಪಕೃದ್ದಿವ್ಯವಾಕ್
ಶ್ರೀಯಂ ಜೀವದಯಾದನು ಪ್ರಸಮಯಂ ವಿಶ್ವಪ್ರಭಾಸ್ಪದ್ಯಶ
ಶ್ರೀಯಾಕರ್ಮರಿಪುಕ್ಷಯ ಪ್ರಭವಮಂ ತಾಳ್ದಿರ್ದ ನಿವೃತಿ
ಶ್ರೀಯಂ ಪ್ರಾರ್ಥಿಸಿ ನಂದಿಪೆಂ ತ್ರಿಭುವನೈಕ ಸ್ವಾಮಿಯುಂ ನೇಮಿಯುಂ

X X X X

ವೃ || ಕಾಮುಕಳಾ ನಿತಂಬಿನಿಯ ಪಾದ ಪಯೋಧರಯುಗ್ಮೆ ನಾಟ್ಯವಿ
ದ್ಯಾಮುಖಿ ರಾಜನೀತಿ ಪದಲಕ್ಷ್ಮಣಲೋಚನೆ ನಾರಹಸ್ತೆ ಧ
ರ್ಮಾಮೃತವಾಕ್ಯೆ ಕಾವ್ಯ ರಸಭಾವೆ ಸರಸ್ವತಿ ಬಂಧುವರ್ಮನ
ಕ್ರಾಮುಳಕೋಮಳಾಂಬುರುಳದೊಳ್ನೆಲಸಿರ್ಕೆ ಮನೋನುರಾಗದಿಂ || ೮ ||

X X X X

ಕ || ದುರಿತಕುಳವಿಜಯ ಸಮುದಿತ
ನಿರಪಮುಗುಣನಿಳಯ ಭಗವದಭಿಮತವಿಳಾಸ
ಚ್ಚರಸುಖರ್ಕಮೆಂಬುವಱಿದಂ
ಹ ವಂಶಾಭ್ಯುದಯ ಕೃತಿಯನಾಂ ವಿರಚಿಸುವೆಂ || ೧೭ ||

ಅಂತ್ಯ : ವ॥ ಮತ್ತೀತ ನಿರ್ವ್ರತಮೀತನಲ್ಲಂ। ನಮ್ಮಂ ನಿಗ್ರಹಿಸುವಂತಾ ಯೆಂದಿನಿಸು ತಳೆಗೆದ ಬಗೆಯಂ ಮುಡಿಪಿ ಸರ್ವಾರ್ಥಸಿದ್ಧಿಯ ನೇಮಿಭಟ್ಟಾರಕ ಸಮವ ಶರಣಂ ವಿಹಾರಿಸುತ್ತಂ ಭುವನತ್ರಯದಗ್ಗದ ಭೂತಳಕ್ಕಾಗಳೆ ಪೋಗಿ ಸಿದ್ಧ ಗುಣಮೆಂಬಿವರೊಳು ನೆಲಸಿರ್ದ ನಿರ್ವೃತಿ ಶ್ರೀಗಧಿನಾಥನಾಗಿ ನೆಲಸಿರ್ದನ ನಂತಚತುಷ್ಟಯೋದಯಂ ॥ ೧೯೦ ॥

ಗದ್ಯ॥ ಇದರ್ಹತ್ಸರ್ವಜ್ಞ ಪಾದಪದ್ಮವಿರಾಜಿತೋತ್ತಮಾಂಗ ಶ್ರೀ ಬಂಧು ವರ್ಮ ವಿನಿರ್ಮಿತಮಪ್ಪ ಹರಿವಂಶಾಭ್ಯುದಯದೊಳು ಚತುರ್ದಶಾಶ್ವಾಸಂ॥ ಹರಿವಂಶಾಭ್ಯುದಯ ಸಮಾಪ್ತಮಾದುದು ॥

ವಿಷಯ : ನೇಮಿನಾಥರ ಚರಿತ್ರೆ.

ವಿಶೇಷ : ಶಕಟರೇಫ ಪ್ರಯೋಗವಿದೆ. ೨೨೨ನೆಯ ಪುಟಸಂಖ್ಯೆ ಬಿಟ್ಟುಹೋಗಿದೆ. ಗ್ರಂಥದಾದಿಯ ಜೇರೆ ೨ ಪತ್ರಗಳಲ್ಲಿ ವಿಷಯಾನುಕ್ರಮಣಿಕೆಯಿದೆ.

2023

ಕೆ. ೩೯೩	ಹರಿಶ್ಚಂದ್ರ ಕಾವ್ಯ	ವಾರ್ಧಕಷಟ್ಪದಿ
೯.೩"×೧.೬"	ರಾಘವಾಂಕ	ಸು ೧೨೫೦
೧-೧೦೭ ಪತ್ರ	೧೧ ಪಂಕ್ತಿ	೪೦ ಅಕ್ಷರ

ಆದಿ : ಶ್ರೀ x x ಶ್ರೀ ಕಡಲೇ ಗುದ್ದಿನ ಆಂಜನೇಯಂ ನಮೋ ನಮಃ ಹರಿಶ್ಚಂದ್ರ ಕಾವ್ಯ ಬರವುದಕ್ಕೆ ಶುಭಮಸ್ತು ॥

ಪಲ್ಲವಿ ॥ ದೆ ಶಾಧಿಪದೆ ಹರಿಶ್ಚಂದ್ರರಾಯನ ಸತ್ಯ
ವಾಸವನ ಸಭೆಯೊಳಗೆ ನೆಗಳ್ದ ಪ್ರಸಂಗದಿಂ
ಕೌಶಿಕ ವಸಿಷ್ಠರಿಗೆ ಘನತರದ ಸಂವಾದಮಂನೇಂ ಪೊಗಳ್ವೆನೂ ॥

ಪದನೂ ॥ ಶ್ರೀಪತಿಗೆ ಸೊಬಗನುಡುಪತಿಗೆ ಶಾಂತಿಯನು ವಾ
ಣೀಪತಿಗೆ ಚಾತೂರ್ಯಮಂ ದಿವಸ್ಪತಿಗೆ
ಭೋಗಮಂ ಸುರಪತಿಗೆ ಸೌಖ್ಯಮಂ ರತಿಪತಿಗೆ ಮೂಲೋಕವಾವರಿಸುವ
ರೂಪಂ ಸರಸ್ವತಿಗೆ ಗಾಂಭೀರ್ಯತೆಯನು ಸ್ವಾ
ಹಾಪತಿಗೆ ತೇಜಮಂ ಕೊಟ್ಟ ಗುರುಮೂರ್ತಿ ಪೊಂ
ಪಾಪುರ ವಿರೂಪಾಕ್ಷ ನಮಗಿಷ್ಟಸಿದ್ಧಿಯಂ ಮಾಳ್ಕೆ ಸಂತೋಷದಿಂದಾ ॥೧॥

x x x x

ಕೃತಿಗೆ ನಾಮಂ ಹರಿಶ್ಚಂದ್ರ ಚಾರಿತ್ರವಿಾ
ಕೃತಿಗೊಡೆಯನಮಲ ಪಂಪಾಪುರಾಧೀಶನೀ
ಕೃತಿಗೆ ಪಾಲಕರು ಲೋದ ಭಕ್ತಜನಮಿದಂ ಪೇಳ್ದ ಕವಿ ಯಾರಂದೊಡೆ
ಚತುರ ಕವಿರಾಯ ಹಂಪೆಯ ಹರೀಶ್ವರನ ವರ
ಸುತನುಭಯಕವಿ ಕಮಲರವಿ ರಾಘವಾಂಕ ಪಂ
ಡಿತನೆಂದಡೀ ಕಥಾರಸದ ವಾಣಿಯನು ಬಂಣಿಸದವರಾರೀ
ಧರೆಯೊಳೂ ॥ ೧೨ ॥

ಅಂತ್ಯ : ಅನೃತಮಯದವ ಹೊಲೆಯನಂ ನೆನೆಯ ಪುಣ್ಯವೆಂ
ದೆನೆ ಸೂರ್ಯಕುಲನು ಕಲಿ ದಾನಿ ಸತ್ಯವಸಿ
ಷ್ಠನ ಸಿಷ್ಯನದಿ..............ಯೊಳು ಮೆರೆದ ವೇದಪ್ರಮಾಣ ಪುರ.ಷ
ಜನಪತಿ ಹರಿಶ್ಚಂದ್ರನೆಂದಡಾ........ಳ್ದ
ಜನ ಬದುಕಬೇಕೆಂದು ಕಾವ್ಯಮುಖದಿಂದೊರದೆ
ನನಪೇಕ್ಷೆಯಿಂದ ಸಿವಕವಿರಾಘವಾಂಕನೀಶ್ವರನಭಕ್ತರ .. ತ್ಯನೂ ॥ ೨೪ ॥

ಯಿತಿ ಶ್ರೀ ಪಂಪಾಪುರದರಸ ವಿರೂಪಾಕ್ಷಲಿಂಗದ ಚರಣಸರಸಿರುಹ ಮತ್ತ ಮಧುಕರನೀರ ...ಥ ಸಿಂಧೂರ ಪಾವನ ಭ್ರಮರನೆನಿಪ ಅಘಟಕವಿನಿಕರ ಚಪ್ಪದಂತ ಹಂಪೆಯ ರ.ಘವಾಂಕ ವಿರಚಿತಮಪ್ಪ .... ಶ್ಚಿಂದ್ರಚಾರಿತ್ರ ದೊಳು ಹರಿಶ್ಚಂದ್ರ ರಾಜ್ಯವನಾಳಿದ ಪ್ರಕರಣಂ ಪಂಚದಶಾಧಿಕಾರಂ ಸಮಾಪ್ತಾ॥ . . . . ಸಂಧಿ ೧೫ಕಂ ಪದ ೭೧೦ಕಂ ಮಂಗಳಮಹಾಶ್ರೀ.

ವಿಷಯ : ಸತ್ಯಹರಿಶ್ಚಂದ್ರನ ಕಥೆ.

ವಿಶೇಷ : ೧೦,೨೦ನೆಯ ಪತ್ರಗಳ ಅರ್ಧಭಾಗಗಳು ಲುಪ್ತವಾಗಿವೆ. ೫೭ನೆಯ ಪತ್ರದ ಕೊನೆಯ ಭಾಗ ಮುರಿದು ಲೋಪವಾಗಿದೆ. ಮತ್ತೆ ಕೆಲವು ಪತ್ರಗಳ ಮಧ್ಯಭಾಗ ಸ್ವಲ್ಪ ಸ್ವಲ್ಪ ಮುರಿದಿವೆ. ಪ್ರತಿ ಶಿಥಿಲವಾಗಿದೆ.

2024

ಕೆ.ಬಿ. ೩೭೪	ಹರಿಶ್ಚಂದ್ರ ಚರಿತ್ರೆ	ಗದ್ಯ
೭.೭" × ៦.೩"	?	?
೧—೬೨ ಪತ್ರ	೧೫ ಪಂಕ್ತಿ	೨೦ ಅಕ್ಷರ

ಆದಿ : ಹರಿಶ್ಚಂದ್ರ ಮಹಾರಾಯನ ಕತೆ ಬರೆಯುವದಕ್ಕೆ ಶುಭಮಸ್ತು ||

ಪೂರ್ವದಲ್ಲಿ ಜನಮೇಜಯರಾಯನು | ವೈಶಂಪಾಯನಚಾರ್ಯರ ಮುಖದಿಂದ | ಸಮಸ್ತ ಾದ | ವುಪಾಖ್ಯಾಯದಂಗಳಂ ಕೇಳಿ ಅನಂತ್ತರದಲ್ಲಿ ಹರಿಶ್ಚಂದ್ರ ಮಹಾರಾಯನ ಚಿರಿತ್ರೆಯಂ ಕೇಳಲಿಚಿಯುಳ್ಳವನಾಗಿ | ವೈಶಂಪಾಯನಾಚಾರ್ಯರಂ ಕುರಿತು—

ಅಂತ್ಯ : ವುಪಕ್ಯನವಂ ಭಕ್ತ್ರಿಯಿಂದ ಕೇಳುವಾ ಪುರುಷನು ಸತ್ಯ ಧರ್ಮಂಗಳುಳವನಾಗೀ | ಯಿಹಲೆ ೇಕದಲಿ ಬಹು ಕೀರ್ತ್ತಿಯಂ ಪಡದು ಅನಂತ್ತರದಲಿ ವೈಶಂಪಾಯನಾಚಾರ್ಯ ಜನಮೇಜಯರಾಯನಂ ಕುರಿತು ನಿರುಪಿಸಿದ ನೆಂಬಲ್ಲಿಗೆ ಹರಿಶ್ಚಂದ್ರೋಪಾಖ್ಯಾನದಲ್ಲಿ | ಯಿಪ್ಪತ್ತೊಂದನೆಯ ಆಧ್ಯಾಯ ಸಮಾಪ್ತ ಮಂಗಳ ಮಹಾಶ್ರೀ ಶ್ರೀ ಶ್ರೀ

ವಿಷಯ : ಸತ್ಯಹರಿಶ್ಚಂದ್ರನ ಕಥೆ.

ವಿಶೇಷ : ಪತ್ರಗಳ ಕ್ರಮಸಂಖ್ಯೆಯಿಲ್ಲ. ಪ್ರತಿಯ ಮೊದಲಿನ ಹತ್ತು ಪತ್ರಗಳನ್ನು ಅಲ್ಲಲ್ಲಿ ಹುಳು ತಿಂದಿದೆ. ಪತ್ರಗಳು ಬಹು ತೆಳುವಾಗಿವೆ. ಕೊನೆಯ ಎರಡು ಪತ್ರಗಳು ಅಲ್ಲಲ್ಲಿ ಹುಳು ತಿಂದು ಶಿಥಿಲವಾಗಿವೆ.

2025

ಕೆ. ಬಿ. ೨೬೮	**ಹರಿಶ್ಚಂದ್ರನ ಕಥೆ**	ಸಾಂಗತ್ಯ
೮″ × ೬.೫″	ಹಲಗ	?
೧—೩೦ ಪತ್ರ	೨೫ ಪಂಕ್ತಿ	೩೧ ಅಕ್ಷರ

ಆದಿ : ಹರಿಶ್ಚಂದ್ರನ ಕಥೆ ಶೈವಗ್ರಂಥಾ ಸಾಂಗತ್ಯ.

ರಾಗ ಸಾಂಗತ್ಯ || ದೇವರ ದೇವನೆ ದೇವ ಪಂಚಾಕರಿ
ದೇವ ತ್ರೈಲೋಕ್ಯ ವಂದಿತನೆ
ದೇವತೆಗಳ ನಿಂಮ ಕೃಪೆಯಿಂದ ರಕ್ಷಿಪ
ದೇವ ಸಲಹು ವಿರುಪಾಕ್ಷ ||

X X X X

ಚಪಂನ್ನದೇಶಕ್ಕೆ ಭುಕೈಲಾಸವೆನಿ
ಸಿರ್ಪ ಗುಂಮಳಪುರ
ಯಿಪ್ಪನು ತೋಪಿನ ವೀರಗಣಾಚಾರಿ
ಗೊಪ್ಪುವ ಸುತಕವಿ ಹಲಗಾ ||

ಅಂತ್ಯ : ಸತ್ಯವೆ ಜಯವು ಅಸತ್ಯವೆ ಲಯವೆಂದು
ನಿತ್ಯವ ತಾನಂದು ಪಡದಾ
ವುತ್ತುಮ ಹರಿಶ್ಚಂದ್ರನ ಕಥೆ ಸಂಪೂರ್ನ
ಮತ್ತಿಲ್ಲಿಗೇಳನೆ ಸಂಧಿ ॥

ಅಂತು ಸಂಧಿ ೭ ಕ್ಕಂ ಪದ ೧೦೦೧ ಕ್ಕಾಂ ಮಂಗಳ ಮಹಾಶ್ರೀ

॥ ಹರಿಶ್ಚಂದ್ರನ ಕಥೆ ಸಂಪೂರ್ನಃ ॥

ವಿಷಯ : ಸತ್ಯಹರಿಶ್ಚಂದ್ರನ ಕಥೆ.

ವಿಶೇಷ : ಅಕ್ಷರ ಬಹು ಸಣ್ಣದಾಗಿರುವುದಲ್ಲದೆ ಕೆಲವೆಡೆ ಒಂದಕ್ಕೊಂದು ಹೆಣೆದು ಕೊಂಡಿವೆ. ಪತ್ರಗಳನ್ನು ಹುಳು ತಿನ್ನಲು ಆರಂಭಿಸಿದೆ. ಹಲವೆಡೆ ಪದ್ಯ ಗಳ ಸಂಖ್ಯೆಯನ್ನು ಸೂಚಿಸಿಲ್ಲ.

2026

ಕೆ. ಎ. ೮೭/೫	**ಹರಿಶ್ಚಂದ್ರ ವಿಳಾಸ**	ಯಕ್ಷಗಾನ
೧೫.೨" × ೯.೫"	ಶ್ರೀನಿವಾಸ (?)	೧೮೮೧
೭೩-೯೫ ಪತ್ರ	೨೫ ಪಂಕ್ತಿ	೨೮ ಅಕ್ಷರ

ಆದಿ : ಹರಿಶ್ಚಂದ್ರರಾಜನ ಕಥೆ ಬರಿಯುವುದಕ್ಕೆ ಶುಭಮಸ್ತು ॥ ಪಾರಂಭಃ ।
ಶ್ರೀಪದ್ಮಾಕುಚಕುಂಭ ಕುಂಕುಮವಿಲಿಪ್ತೋರಸ್ಥಲಂ ಲೋಕ ಸಂ
ತಾಪಧ್ವಾಂತ ವಿನಾಶಶೀತಕರಣಂ ಬ್ರಂಹ್ಮೇಶಸಂಪೂಜಿತ
ಶ್ರೀಪಾದಂ ಮುನಿಮಾನಸಾಂಬುಜ ಮರಾಳಂ ಶೇಷಶೈಲಾಧಿಪಂ
ಪಾಪಘ್ನಂ ಪೊರಗೀ ಜಗತ್ರಯವನುಂ ಶ್ರೀ ಶ್ರೀನಿವಾಸಂ ಸದಾ ॥೧॥

ರಾಗ ಕಲ್ಯಾಣಿ॥ ತಾಳ ಅಟ ಚಾಪು ॥

ಮರೆಯಹೊಕ್ಕರ ಕಾವುದು ಬಿರಿದಲ್ಲವೇನೋ ಶಿರಿಯರಸನೆ ನಿನ್ನದು ॥ಪಲ್ಲ
ಪರಮಪೂರುಷ ಪಂಕಜೋಪಮ ಚರಣ ಯದುಗಿರಿ ನಿಲಯ ಚಿನ್ಮಯ
ಗರುಡವಾಹನ ಗೋಮತೀಧವ ನರಕಮರ್ದನ ರಮ್ಯಗೇಂದ್ರನೆ ॥ಅನು॥

ತರಳ ಪ್ರಹ್ಲಾದನಂದು ನಿನ್ನಾಡಿಗಳ್ಗೆ ಸುರಿದನೆ ಪೊನ್ನ ತಂದು
ಭರದಿ ನೀ ಧ್ರುವನಿಗಂದು ನಿಶ್ಚಲವಾದ ವರಪದವಿತ್ತೆ ಬಂದು

ತರುಣಿಯನು ಖಳನಂದು ಶೆಳೆಯಲು ನೆರೆ ಧಣಿಯೆ ವಸನಗಳ ಪೊದಿಶಿದೆ
ಕರಿಯ ಕಾಲನು ಮಕರಿ ಪಿಡಿಯಲು ಪೊರೆದೆ ನೀ ಕ್ಷಣದಲಿ
ಮುರಹರ ॥ ೧ ॥

ರಾಗ॥ ವಸಂತ॥ ಅಟ್ಟತಾಳ॥

ಅಂತ್ಯ : ಮಂಗಳಂ ಮಹದಾದಿದೇವಗೆ ಜಯ ಮಂಗಳಂ ಮಧುಹರಗೆ ॥ಪಲ್ಲ॥
ತರಳನಿಗೊಲಿಯುತ ನರಹರಿ ರೂಪದಿ ದುರುಳ ದಾನವನ ಸಂಹರಿಸುತಲಿ
ಸರಸಿಜಾಸನ ಮುಖ್ಯಸುರರನು ಸಲಹಿದ ಪರಮಪೂರುಷ ನಿನ್ನ
ಚರಣಸಾರಸಕೆ ॥೧॥

x x x x

ಶೇಷನಾಗುತೆ ಶಿಪುಜಾತನಾಗುತೆ ದಾಸನಾಗುತೆ ರಘುರಾಮನಿಗೆ
ಶ್ರೀಶಜಗಗ್ರಜನಾಗಿ ಗುರುವ್ಯನಾಗುತೆ ಕೀಶಿಕಗೋತ್ರನಿಂದ
ಶೇಷಗೋತ್ರನಿಗೆ ॥

॥ ಹರಿಶ್ಚಂದ್ರಕಥಾ ಸಂಪೂರ್ಣಂ ॥ ಮಂಗಳಮಸ್ತು ॥ ಅಂತು ಪದಗಳು

ವಿಷಯ: ಹರಿಶ್ಚಂದ್ರನ ಕಥೆ.

ವಿಶೇಷ : ಛಳನೆಯ ಪತ್ರದಲ್ಲಿ ಬಿಟ್ಟು ಹೋದ ಗ್ರಂಥಭಾಗವನ್ನು ಬೇರೆ ಕಾಗದದಲ್ಲಿ ಬರೆದು ಇಲ್ಲಿ ಅಂಟಿಸಲಾಗಿದೆ. ಇದರೊಂದಿಗೆ ಸಮುದ್ರ ಮಥನ, ಪ್ರಹ್ಲಾದ ಚರಿತ್ರೆ, ಗಿರಿಜಾ ಪರಿಣಯ, ಕಿರಾತಾರ್ಜುನೀಯ, ನಳೋಪಾಖ್ಯಾನ, ಹರಿಲೀಲಾ ವಿಲಾಸವೆಂಬ ಗ್ರಂಥಗಳೂ ಇವೆ.

2027

ಕೆ. ೧೯೨	**ಹರಿಶ್ಚಂದ್ರ ಸಾಂಗತ್ಯ**	ಸಾಂಗತ್ಯ
೧೯.೯" × ೧.೬"	ಬೊಂಬೆಯಲಕ್ಕ	೧೫೩೮
೧-೩೩ ಪತ್ರ	೭ ಪಂಕ್ತಿ	೭೫ ಅಕ್ಷರ

ಆದಿ : ಸಂಗತ್ಯ ವರ್ನದ ಹರಿಶ್ಚಂದ್ರನ ಕಾವ್ಯ ಬರಿಯುವದಕ್ಕೆ ಶುಭಮಸ್ತು x x
ಶ್ರೀಮಹಾ ಗಂಗಾ ತುಂಗಾ ಮಕುಟಾಮಣಿ
ಸೋಮಾಗ್ನಿ ದ್ಯುಮಣಿ ತ್ರಿಣೇತ್ರಾ

ಶ್ಯಾಮಕಂದರ ನಾಗಸುರ ಚರ್ಮಾಂಬರ
ಪ್ರೇಮದಿಂದೊಲಿದು ರಕ್ಷಿಪುದೂ ॥ ೧ ॥

x x x x

ಸತ್ಯದಿ ಗುರು ಯಗ್ನವಾ ಪರಿಹರಿಸಲು
ಮುಕ್ತಿಯ ಕಡೆಯಲಿ ಕಂಡೂ
ವುತ್ತಮವಾದ ಕುಲದಿ ಹರಿಶ್ಚಂದ್ರಾನಾ
ಭಕ್ತಿಯ ಕಥೆಯಾ ಪೇಳುವೆನೂ ॥ ೭ ॥

ಅಂತ್ಯ : ಸತ್ಯಾದ ನೆಲೆ ಮುಕ್ತಿಯ ಬೇಡು ಪುಣ್ಯದ
ಕೀರ್ತಿಯ ನೆಲೆವನೆಯನಿಶೀ
ಭಕ್ತಿಯ ಕಥೆ ವೋದಿ ಕೇಳಿದ ಜನರಿಗೆ
ಸತ್ಯಾವಹುದು ಶುಭದಿಂದಾ ॥ ೩೭೩ ॥

ಅಂತು ಸಂಧಿ ೩ಕ್ಕಂ ಪದನು ೬೨೩ ಕ್ಕ ಮಂಗಳ ಮಹಾಶ್ರೀ। ಅಕ್ಷಯ ಸಂವತ್ಸರದ ಭಾದ್ರಪದ ಶ್ಧ ೭ ಲ್ಲು ಹಿರೆಗುಬ್ಬಿ ಹೊಸಹಳ್ಳಿ ಹಿರೆಮಠದ....ಶಸ್ತರಾದ ಹೊಸಕೋಟಿ ತಾಲ್ಲುಕ್ಕ ಸ್ಬಾ ಗುಬ್ಬಿ ಶಾಂತ ವೀರದೇವರ ಮಂಮ್ಮಗನಾದ ಶಿದ್ದಬಸವೇಶ್ವರ ಕೊಮಾರ ಶಿದ್ವೀರದೇವರು ಕಾಟಮನಲ್ಲೂರು ಗೌಳಿಗರಪರಂಡಕಾರ ಮಲ್ಲಪ್ಪನ; ಮಂಮ್ಮಗನಾದ ನಂಜಪ್ಪನ ಕೊಮಾರ ಕಪ್ಪಂಣಗೆ ಧನಕನಕ ವಸ್ತುವಾಹನ ಪುತ್ರಪೌತ್ರಾಭಿವೃದ್ಧಿರಸ್ತೂ ಯಂದು ಹರಶಿ ಬರದುಕೊಟ್ಟ ಹರಿಶ್ಚಂದ್ರನ ಕಾವ್ಯ ಯಿದರಲ್ಲಿ. ಯಾದೃಶೀ ಪುಸ್ತುಕಂ x x x x ನ ವಿದ್ಯತೇ ॥

ವಿಷಯ : ಸತ್ಯಹರಿಶ್ಚಂದ್ರನ ಕಥೆ.

ವಿಶೇಷ : ಕೊನೆಯ ಪತ್ರ ಸ್ವಲ್ಪ ಮುರಿದು ಲುಪ್ತವಾಗಿದೆ. ಅಲ್ಲಲ್ಲಿ ಕೆಲವು ಪತ್ರಗಳನ್ನು ಹುಳು ತಿಂದಿದೆ.

2028

ಕೆ. ೪೨೧।೨	**ಹರಿಶ್ಚಂದ್ರ ಸಾಂಗತ್ಯ**	ಸಾಂಗತ್ಯ
೧೭" × ೧.೪"	ಬೊಂಬೆಯಲಕ್ಕ	೧೫೩೮
೧-೨೪ ಪತ್ರ	೭ ಪಂಕ್ತಿ	೮೦ ಅಕ್ಷರ

ಆದಿ : ಗಣೇಶ ಶಾರದಾ ಗುರುಭ್ಯೋಂ ನಮಃ ||ಶುಭಮಸ್ತು || ಕಂದಿಕೆರೆಯ ಕೊಳಲ ಗೋಪಾಲಕೃಷ್ಣಸ್ವಾಮಿಯ ವರ ದಿವ್ಯಶ್ರೀ ಚರಣಾರವಿಂದವೆ ಗತಿ || ಹರಿಶ್ಚಂದ್ರನ ಕಥೆಯ ಬರಉದಕೆ ಆಚೆಂದ್ರಾರ್ಕಮಸ್ತು || ಸಚ್ಚಿದಾನಂದ ಮೂರ್ತಿಯೇ ನಮಃ ||

ಶ್ರೀಮದ್ಗಂಗಾ ತುಂಗ ಮುಕುಟಮಣಿ
ಸೋಮಾಂಘ್ರಿಯ ದುಮಣಿ ನೇತ್ರಾ
ಸೋಮಕಂದರ ನಾಗ ಚರ್ಮಾಂಬರನೆ
ಪ್ರೇಮದಿಂದೊಲಿದು ರಕ್ಷಿಪುದೂ || ೧

ದೇವರ ದೇವನೆ ದೇವ ಪಂಚಾಕ್ಷರಿ
ದೇವ ತ್ರೈಲೋಕ್ಯ ವಂದಿತನೆ
ದೇವತೆಗಳು ನಿಂಮ್ಮ ಕ್ರುಪೆ ಇಂದ ಸಲಹುವ
ದೇವ ಸಲಹು ವಿರುಪಾಕ್ಷಾ || ೨ ||

ಅಂತ್ಯ : ಯಿದು ಹರಿಶ್ಚಂದ್ರನ ದುರಿತ ಕಳದ ಕಥೆ
ಯಿದು ಶಿವನೊಲಿದ ಕಥೆಯನೂ
ವಿಧವರಿದೆಲ್ಲರು ಕೇಳಲು ಧರೆಯೊಳು
ಬುಧರರಾಗಿ ಬಾಳುವರೂ || ೨೮೮ ||

ಅಂತೂ ಸಂಧಿ ೩ ಕ್ಕಂ ಪದನೂ ೫೦೦ ಕಂ ಮಂಗಳ ಮಹಶ್ರೀ || ರಕ್ತಾಕ್ಷಿ ನಾಮ ಸಂವತ್ಸರದ ಮಾರ್ಗಶಿರ ಬ ೧೧ ಮಂಗಳವಾರವರ್‍ರಿಗೆ। ವೆಂಕಟೇಶೈಯನು ಭಿಕ್ಷಾವತಿ ಗುರುವಂಣಗೆ ಬರೆದುಕೊಟ್ಟ ಹರಿಶ್ಚಂದ್ರನ ಸಂಗತ್ಯಕ್ಕೆ ಅಚಂದ್ರಾರ್ಕಮಸ್ತು ಶ್ರೀ ಗುರುಬಸವಲಿಂಗಾಯ ನಮಃ || ಹರಿಶ್ಚಂದ್ರ ರಾಯನ ಸಂಗತ್ಯ ಸಮಾಪ್ತಾ ಮಂಗಳ ಮಹಾಶ್ರೀ ||

ವಿಷಯ: ಸತ್ಯಹರಿಶ್ಚಂದ್ರನ ಕಥೆ.

ವಿಶೇಷ : ಇದರಲ್ಲಿ ೨ ನೆಯ ಮತ್ತು ೧೨ನೆಯ ಪತ್ರ ಲುಪ್ತವಾಗಿವೆ. ೧೬ನೆಯ ಪತ್ರ ಕಾಲುಭಾಗ ಲುಪ್ತ. ಇದರೊಂದಿಗೆ ಮಧುರಮಂದಾರ ಮತ್ತು ಬಸವ ಚಾರಿತ್ರಗಳೂ ಇರುತ್ತವೆ,

2029

ಕೆ.ಎ. ೯೬ **ಹರಿಶ್ಚಂದ್ರ ಸಾಂಗತ್ಯ** ಸಾಂಗತ್ಯ

೧೨.೩" × ೭.೮" ಬೊಂಬೆಯ ಲಕ್ಕ ೧೫೩೮

೧–೫೨ ಪತ್ರ ೨೨ ಪಂಕ್ತಿ ೨೫ ಅಕ್ಷರ

ಆದಿ : ಹಗಿಶ್ಚಂದ್ರ ಸಾಂಗತ್ಯ

ಶ್ರೀ ಮದ್ಗಂಗಾಮರಂಗ ಜಟಾಮುಕುಟನೆ
ಸೋಮಾರ್ಕದಿನಮಣಿ ನೇತ್ರಾ
ಸಾಮುಕಂದರ ನಾಗಸುರ ಚರ್ಮಾಂಬರ
ಪ್ರೇಮದಿಂದೊಲಿದು ರಕ್ಷಿಪುದೂ ||೧||

ದೇವರದೇವನೆ ದೇವ ಪಂಚಾಕ್ಷರಿ
ದೇವತ್ರೈಲೋಕ್ಯ ವಂದಿತನೆ
ದೇವತೆಗಳು ನಿಮ್ಮ ಕೃಪೆಯಿಂದ ಪೆಯಿಂದ ಪೊಗಳುವೆ
ದೇವ ಸಲಹು ವಿರೂಪಾಕ್ಷ ||೨||

X X X X

ಆದಿಯ ಕಥೆ ವೇದದ ದಿವ್ಯಶಾಸ್ತ್ರದ
ಸಾರವಮೃತ ಪುಣ್ಯಕೃತಿಯಾ
ಮೇದಿನಿಗೊರೆದ ಬೊಂಬೆಯ ಲಕ್ಕ ಧರ್ಮರ
ಪಾದವೇ ಗತಿಯೆಂದು ನೆನದೂ ||೯||

ಅಂತ್ಯ : ಚಂದ್ರಾಮತಿ ಲೋಹಿತಾಕ್ಷನು ಹರಿಶ್ಚಂದ್ರ
ಯಿಂದುಧರನ ಕರುಣದಲಿ
ಚಂದದಿ ಮಂತ್ರಿರಾಯನು ರಾಜ್ಯವಾಳಿದ
ನೆಂದಲ್ಲಿ ಸಂಧಿ ಸಂಪೂರ್ಣ ||೮೦||

ಅಂತು ಸ್ಥಲ ೫ಕ್ಕಂ ಪದನು ೫೭೦ಕ್ಕಂ ವ಼ಂಗಳ ಮಹಾಶ್ರೀ
ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದ ೧೭೧೧ಕ್ಕೆ ಸಲ್ಲುವ ವರ್ತಮಾನವಾದ ಸೌಮ್ಯ ಸಂವತ್ಸರದ ವೈಶಾಖ ಶುದ್ಧ ೧೫ ಚಂದ್ರವಾರ ಸೂರ್ಯೋದಯಾತ್ಪರ ೫ ಘಳಿಗೆಯಲ್ಲಿ ಈ ಕೃತಿ ಪೂರ್ನವಾಯಿತು.

ಆಂಗೀರಸ ಬಾರ್ಹಸ್ಪತ್ಯಮಾನ ಭಾರದ್ವಾಜ ತ್ರಿಯಾಋಷಿಯ ಪ್ರವರಾನ್ವಿತ ಭಾರದ್ವಾಜ ಗೋತ್ರ ಆಶ್ವಲಾಯನ ಸೂತ್ರ ಋಕ್ಶಾಖಾಧ್ಯಾಯಿಗಳಾದ

ಚಂದ್ರವಂಶೋದ್ಭವರಾದ ಕಳಲೆ ನಗರಾಧಿಪರಾದ ತಿಮ್ಮರಾಜ ವಡೆಯರವರ ಪೌತ್ರರಾದ ಲಕ್ಷ್ಮೀಕಾಂತರಾಜಯ್ಯನವರ ಕುಮಾರ ಕಾಂತರಾಜಯ್ಯನವರ ಸ್ವಹಸ್ತಾಕ್ಷರ ಲಿಖಿತದ್ದು.

ವಿಷಯ: ಸತ್ಯಹರಿಶ್ಚಂದ್ರನ ಕಥೆ.

ವಿಶೇಷ: ಮೊದಲಿನ ಮೂರು ನಾಲ್ಕು ಪತ್ರಗಳು ಅಲ್ಲಲ್ಲಿ ಸ್ವಲ್ಪ ಹರಿದಿವೆ. ಪದ್ಯಗಳ ಪಾದಗಳನ್ನು ವಿಭಾಗಿಸಿ ಬರೆದಿದ್ದಾರೆ. ಪ್ರತಿ ಪತ್ರದ ಒಂದೇ ಕಡೆ ಬರವಣಿಗೆಯಿದೆ. ೨೯ನೆಯ ಕ್ರಮಸಂಖ್ಯೆಯ ಎರಡು ಪತ್ರಗಳಿವೆ

2030

ಕೆ.ಎ. ೭೨	**ಹರಿಶ್ಚಂದ್ರೋಪಾಖ್ಯಾನ**	**ವಾರ್ಧಕ ಷಟ್ಪದಿ**
೧೨.೭″ × ೮″	**ರಾಘವಾಂಕ**	**ಸು. ೧೨೫೦**
೧-೧೦೫ ಪತ್ರ	**೨೮ ಪಂಕ್ತಿ**	**೨೦ ಅಕ್ಷರ**

ಆದಿ: ಹರಿಶ್ಚಂದ್ರೋಪಾಖ್ಯಾನ ॥ಗದ್ಯ॥ ಇದು ಸಮಸ್ತ ಕಳಾಧರ ಕ್ರಮನಿಷ್ಠ ಸಂಕ್ರಂದನಾದಿ ಸುರನಿಕರ ಮಣಿಮುಕುಟ ಮಯೂಖಮಾಲಾ ಪುಂಜ ರಂಜಿತ ಚರಣ ಕಿಂಜಲ್ಕ X X X X ಉಭಯ ಕವಿ ಶರಭ ಭೇರುಂಡಂ ವರ್ತಮಾನ ಕವಿ ವೇಶ್ಯಾಭುಜಂಗಂ ಕರ್ಣಾಟಕಾವ್ಯ ಲಕ್ಷಣಾ ದೀಕ್ಷಾಚಾರ್ಯ ಶಿವಯೋಗ ಚಕ್ರೇಶ್ವರ ಲೋಕಾರಾಧ್ಯ ಸಾಕಾರಾ ಸುಧರ್ಮ ಮರ್ತ್ಯಲೋಕದ ಮಹಾದೇವನೆನಿಪ ಹಂಪಯ್ಯ ಹರಿಹರ ದೇವರ ಕುಮಾರನೆನಿಪ ಉಭಯಕವಿ ಕಮಲಾದಿತ್ಯ ಹಂಪೆಯ ರಾಘವಾಂಕ ವರ್ಣನಮಪ್ಪ ಹರಿಶ್ಚಂದ್ರ ಪ್ರಬಂಧಂ—॥ವಾರ್ಧಿಕ ಷಟ್ಪದಿ॥

ಸೂಚನೆ॥ ದೇಶಾಧಿಪತಿ ಹರಿಶ್ಚಂದ್ರಭೂಪನ ಸತ್ಯ
ವಾಸವನ ಸಭೆಯೊಳಗೆ ನೆಗಳ್ದ ಪ್ರಸಂಗದಿಂ
ಕೌಶಿಕವಶಿಷ್ಠಮುನಿಗಳ್ಗೆ ಸಂವಾದ ಪ್ರತಿಜ್ಞೆಯಂ ಮಾಡಿದುದ ವರ್ಣಿಸುವೆನು

ಶ್ರೀಪತಿಗೆ ಸೊಬಗನುಡುಪತಿಗೆ ಶಾಂತಿಯನು ವಾ
ಣೀಪತಿಗೆ ಚಾತರ್ಯಮಂ ದಿವಸ್ಪತಿಗೆ ಪ್ರ
ತಾಪಮಂ ಸುರಪತಿಗೆ ಭೋಗಮಂ ರತಿಪತಿಗೆ ಮೂಲೋಕವಾವರಿಸುವ
ರೂಪಮಂ ಸರಸತಿಗೆ ಗಾಂಭೀರ್ಯತೆಯ ಸ್ವಾ
ಹಾಪತಿಗೆ ತೇಜಮಂ ಕೊಟ್ಟ ಗುರುಮೂರ್ತಿ ಪಂ
ಪಾಪತಿ ವಿರೂಪಾಕ್ಷನೆಮಗಿಷ್ಟ ಸಿದ್ಧಿಯಂ ಮಾಳ್ಕೆ ಸಂತೋಷದಿಂದಂ ॥೧॥

X X X X

ಕೃತಿಗೆ ನಾಮಂ ಹರಿಶ್ಚಂದ್ರ ಚಾರಿತ್ರವೀ
ಕೃತಿಗೊಡೆಯನಾ ಜಗದ್ಗುರು ವಿರೂಪಕ್ಷನೀ
ಕೃತಿಗೆ ಪಾಲಕರು ಶಿವಭಕ್ತರ್ಗಳಿಂತಿದಂ ಪೇಳ್ದಾತನಾರೆಂದೊಡೆ
ಚತುರ ಕವಿರಾಯ ಹಂಪೆಯ ಹರಿಶ್ವರನ ವರ
ಸುತನುಭಯಕವಿ ಕಮಳರವಿ ರಾಘವಾಂಕ ಪಂ
ಡಿತನೆಂದೊಡೆ ಕಥಾರಸದ ಲಹರಿಯನು ಬಣ್ಣಿಸಿದರಾರೀ ಧರೆಯೊಳು||೧೫||

ಅಂತ್ಯ : ಮುದದಿಂದ ಹರಿಶ್ಚಂದ್ರನಂ ನೆನೆವ ಜನರುಗಳ
ವಿದಘಹರವಾತನ ಸುಚರಿತ ವೃತ್ತಾಂತ ಸಂ
ಪದದೊಳಗೆ ಒಂದು ಪಾದವ ಕೇಳ್ಡವರ್ಗೆ ಅನಿಮಿಷಲೋಕದ
ಪದವಿಯಹುದರ್ಥವುಂ ಕೇಳ್ದು ವೋದಿದವರ್ಗೆ
ಮದನಹರ ಕರುಣದಿಂ ಬಾಳ್ವರು ಮಹಾರುದ್ರ
ಪದವಿಯಂ ಕೊಡುವನೆಂಬುದು ವೇದವಾಕ್ಯವವಧರಿಸುವುದು
ಸಾತ್ವೀಕರುಂ || ೨೪ ||

ಅಂತು ಸ್ಥಲ ೧೬ಕ್ಕಂ ಪದ ೭೭೫ ರಗಳೆ ೩೦ಕ್ಕಂ ಮಂಗಳ ಮಹಾಶ್ರೀ ಹರಿಶ್ಚಂದ್ರಕಾವ್ಯಂ ಸಂಪೂರ್ಣಂ.

ವಿಷಯ : ಸತ್ಯ ಹರಿಶ್ಚಂದ್ರನ ಕಥೆ.

ವಿಶೇಷ : ಪದ್ಯಗಳಲ್ಲಿ ಪಾದವಿಭಾಗವಿದೆ, ಅಲ್ಲಲ್ಲಿ ಕೆಂಪುಶಾಯಿಯಿಂದ ತಿದ್ದಿದೆ. ಅಕ್ಷರಗಳು ಸ್ಫುಟವಾಗಿವೆ. ಪ್ರತಿ ಚೆನ್ನಾಗಿದೆ.

2031

ಕೆ. ಎ. ೧೯೦/೧೦	**ಹರಿಶ್ಚಂದ್ರೋಪಾಖ್ಯಾನ**	ಗದ್ಯ
೧೨.೬″ × ೮″	?	?
೫೧-೭೯ ಪತ್ರ	೨೬ ಪಂಕ್ತಿ	೩೬ ಅಕ್ಷರ

ಆದಿ : ಹರಿಶ್ಚಂದ್ರ ಮಹರಾಯನ ಚರಿತ್ರೆಯಂ ಬರೆವುದಕ್ಕೆ ಶುಭಮಸ್ತು ||

ಪೂರ್ವದಲ್ಲಿ ಜನಮೇಜಯರಾಯನು ವೈಶಂಪಾಯನಚಾರ್ಯರ ಮುಖದಿಂದ ಸಮಸ್ತವಾದ ವುಪಾಖ್ಯಾಯನವಂ ಕೇಳಿ ನಂತರದಲ್ಲಿ ಹರಿಶ್ಚಂದ್ರ ಮಹರಾಯನ ಚರಿತ್ರೆಯಂ ಕೇಳಲಿಚ್ಛೆವುಳ್ಳವನಾಗಿ ವೈಶಂಪಾಯನ ಚಾರ್ಯರಂ ಕುರಿತು ಪ್ರಸ್ನೆಯಂ ಗೈದನದೆಂತೆನೆ ಯಲೈ ವೈಶಾಂಪಾಯನ

ಮಹಾಮುನಿಯೆ ಯಿಕ್ಷ್ವಾಕುಲವಂಶೋತ್ಪಂನನಾದ ಹರಿಶ್ಚಂಧ್ರನೆಂಬುವ ಮಹಾರಾಯನು ಮಹತ್ಮನಾದವನು ಸತ್ಯವಾದಿಯಾದವನು ದೃಡವ್ರತ ನಿಯಮಂಗಳುಳ್ಳವನು ರಾಜಾದಿರಾಜನಾದವನು ಪುರಾಣದಲ್ಲಿ ಬಹವಿದ ವಾಗಿ ವರ್ನಿಸುವದಾಗುತ್ತೆಂದು ನಾನು ಬಹುತರವಾಗಿ ಕೇಳಿಯಿದ್ದೇನೆ ॥

ಅಂತ್ಯ : ಭಕ್ತಿಯಿಂದ ಕೇಳ್ದ ಪುರುಷಂಗೆ ಸತ್ಯಧರ್ಮದಲ್ಲಿ ಯಿಚ್ಚೆವುಳ್ಳವನಾಗಿ ಯಿಹ ಲೋಕದಲ್ಲಿ ಬಹಳವಾದ ಕೀರ್ತಿಯಂ ಪಡದು ಅನಂತರದಲ್ಲಿ ವಿಷ್ಣು ಸಾರೋಪ್ಯವಂ ಪಡೆಯ ುವನು ಯೆಂಬುವ ಪ್ರಸ್ನೆಯಂನು ವೈಶಂಪಾಯನ ಚಾರ್ಯರು ಜನಮೇಜಯರಾಯನಂ ಕುರಿತು ನಿರೂಪಿಸಿದಸಂಬಲ್ಲಿಗೆ ಹರಿಶ್ಚಂದ್ರವುಪಾಖ್ಯಾಯನದಲ್ಲಿ ಯೇಕವಿಂಶೋದ್ಯಾಯ ಸಂಪೂರ್ನ ಜಯ ಮಂಗಳಮಹಾಶ್ರೀ ॥

ವಿಷಯ : ಸತ್ಯ ಹರಿಶ್ಚಂದ್ರನ ಕಥೆ.

ವಿಶೇಷ : ಈ ಪುಸ್ತಕದಲ್ಲಿ ಸೋಮೇಶ್ವರಶತಕ, ಸಂಕ್ಷೇಪರಾಮಾಯಣ, ಸಂಕ್ಷೇಪ ಭಾರತ, ಧರ್ಮನೀತಿ, ವಿಭೀಷಣನ ಬುದ್ಧಿ, ಗೋವಿನ ಹಾಡು, ವಿಷ್ಣು ಭಕ್ತಿಸಾರ, ಸುಭಾಷಿತ ಗ್ರಂಥ, ನಳಚರಿತ್ರೆ, ರುದ್ರಭಾ ತ ಈ ಕೃತಿಗಳಿವೆ.

2032

ಕೆ.ಬಿ. ೧೬೭	**ಹರಿಶ್ಚಂದ್ರೋಪಾಖ್ಯಾನ**	ಯಕ್ಷಗಾನ
೭.೭″ × ೬.೨″	ನಂಜಣ್ಣಭಾಗವತ	೧೮೫೦
೧-೫೧ ಪತ್ರ	೧೧ ಪಂಕ್ತಿ	೧೬ ಅಕ್ಷರ

ಆದಿ : ಹರಿಶ್ಚಂದ್ರೋಪಾಖ್ಯಾನ ಬರೆವರೆ ಶುಭಮಸ್ತು ॥ ಶಾರ್ದೂಲವೃತ್ತ ॥
ಶ್ರೀ ವಿಶ್ವೇಶಪರಾತ್ಪರ ು ಶುಭಕರಂ ಕಾರುಂಣ್ಯ ರತ್ನಾಕರಂ
ಭಾವಾತೀತ ನಿ ಂಜನಂ ಮ ನಿಜನೋಹೃತ್ಪದ್ಮ ಸೌರಂಜನಂ
ಜೀವಾಧೀಶ ಜಗದ್ಗುರುಂ ಭವವ ಹರಂ ಮಾಯಾಮಾಹಾರಂ ಹರಂ
ಕಾವಂತೀಕ್ಷಿಸಲೆಂಮ್ಮ ಸಂಪದಪದಂ ಶ್ರೀ ಮಂಜುನಾಥಂ ಸದಾ ॥ ೧ ॥

ದ್ವಿಪದೆ ॥ ಶ್ರೀರಮಣನಂಘ್ರಿಗಳ ಚಿತ್ತದಲಿ ಸ್ಮರಿಸೀ
ಮಾರಹರನನು ಭಜಿಸಿ ಶಾರದೆಗೆ ನಮಿಸೀ ॥ ೨ ॥

X X X X

ಬ್ರಹ್ಮಾಂಡ ಪೌರಾಣದೊಳು ನಾರದನಿಗೆ
ಬ್ರಂಹ್ಮ ಹೇಳ್ದುದ ಸೂತನೆನೆ ಶೌನಕರಿಗೆ ॥೫ ॥
ಆ ಹರಿಶ್ಚಂದ್ರನ ಸತ್ಯಾತ್ಮನ ಚರಿತೆಯ
ರೂಹಿಸದೆ ಯಕ್ಷಗಾಯನದಿ ನೆನದು ಹಂಯಾ ॥

ಅಂತ್ಯ : ತ್ರಿಗುಣಸ್ಥಾಪಿಗೆ ತ್ರಿಜಗಂನಾಥಗೆ
ನಿಗಮಕಗೋಚರಗೆ ಸಗುಣ ನಿರ್ಗುಣಕೆ ಸಾಕ್ಷಿಯಾದವಗೆ
ನಗಧ ಸಖ ನಂಜುಂಡ ವರದಗೆ ಮಂಗಳಂ
ಶ್ರೀ ಮಂಜುನಾಥಗೆ ಮಂಗಳಂ ವೃಷಧರಗೇ ॥ ೩೬೩ ॥

ಹರಿಶ್ಚಂದ್ರೋಪಾಖ್ಯಾನ ನಂಜಂಣ ಬಾಗವತಂಯಿದ ತಯಾರಾದುದಕ್ಕೆ
ಸಂಪೂರ್ನ ಮಂಗಳಮಹಾ ಶ್ರೀ ॥

ವಿಷಯ : ಸತ್ಯ ಹರಿಶ್ಚಂದ್ರನ ಕಥೆ.

ವಿಶೇಷ : ಮೋಡಿ ಅಕ್ಷರ.

2033

ಕೆ. ೩೫೮	**ಹರಿಹರನ ರಗಳೆಗಳು**	**ರಗಳೆ**
೧೨.೪" × ೧.೮"	**ಹರಿಹರದೇವ**	**ಸು. ೧೨೦೦**
೧-೨೩೧ ಪತ್ರ	**೧೩ ಪಂಕ್ತಿ**	**೯೪ ಅಕ್ಷರ**

ಆದಿ : ಪಿಂಡೋತ್ಪತ್ಯದ ರಗಳೆ ॥
ದೇವಾ ಹುಟ್ಟುವ ಜೀವಿಪ
ಸಾವ .... ಳಿರಾಜಿನಾರೆಂ ಗುರುವೇ
ಕಾವುದು ಕರುಣಿಸಿ ನಿಜಪದ
ವೀವುದು ಮದನಾರಿ ಹಂಪೆಯ ವಿರೂಪಾಕ್ಷಾ ॥

ರಗಳೆ ॥ ಶ್ರೀ ವಿರೂಪಾಕ್ಷ ಲಿಂಗಪ್ರಮುವೆನಿವುವಿಂತು
ವಾವಿಸುತ ನೀವು ಕಟ್ಟುಪೂರ್ವ ಕಲ್ಪಿಸಿರೆ
ತಿರುಗುತಿರ್ದಪೆನಖಿಳಘೋರ ಸಂಸಾರದೊಳು
ಪುರಹರನೆ ನಿಮ್ಮನಱಿಯದೆ ಜನ್ಮ ಸರಧಿಯೊಳು

ಯೆಂತೆಂತು ನೀವು ಕಟ್ಟಿದ ಪೂರ್ವ ಕಲ್ಪನೆಗೆ
ಆಂತಂತು ವ್ಯೆಯೊಡ್ಡಿಕೊಂಡಿರ್ದು ಯಾತನೆಗೆ
ಕಲ್ಲಾಗಿ ಮಣ್ಣಾಗಿ ಕುಳಿಯಾಗಿ ತೆವರಾಗಿ
ಹುಲ್ಲಾಗಿ ಗಿಡುವಾಗಿ ಲತೆಯಾಗಿ ಮರನಾಗಿ

ಅಂತ್ಯ : ಕೈಲಾಸವಮಂ ಪೊಕ್ಕು ಗಣಪದವಿಯಂ ಪಡದು
ಶೈಲಜಾಪತಿಯ ಪದಕಮಲಮಂ ಬಲ್ಪಿಡಿದು
ಯಿರುತಿರ್ದನಿಂತು ಹಾವಿನ ಹಾಳಕಲ್ಲಯ್ಯ
ವುರುತರ ಶಿವಾನಂದ ಸುಖಿಯಾಗಬಲ್ಲಯ್ಯ
ಇಂತು ಕಲ್ಲಯ್ಯನಂ ಗಣಪದವಿಯೊಳಗಿರಿಸಿ
ಸಂತತಂ ದೇವಗಣದೊಳಗಿರಿಸುತಾದರಿಸಿ
ಶರಣಕುಲಗಗನ ಮಾರ್ತಂಡ ನಿಂತೊಪ್ಪಿದಂ
ಶರಣಕುಲಕುಮುದ ಪೂರ್ನೇಂದುವಿಂತೊಪ್ಪಿದಂ
ಮಜರೆ ಮಹಾಗುರು ಮಹಾಮಹಿಮನೊಪ್ಪಿದಂ
ಮಝುಬಾಪು ಬಾಪು ಹಂಪೆಯ ವಿರುಪನೊಪ್ಪಿದಂ

ಕಂದ || ಮನವೊಸೆದೆನಗತ್ಯಂತಂ
ಘನಮಹಿಮಂ ಮೆರದನೆಂಮ ಹಾವಿನ ಹಾಳೊಳು
ವಿನಯದಿ ಕಲಿದೇವನಸುತ
ನೆನೆ ಹೊಗಳ್ದಿಂ ದೇವ ಹಂಪೆಯ ವಿರೂಪಾಕ್ಷಂ ||

ಹಾವಿನ ಹಾಳಕಲ್ಲಯ್ಯನ ರಗಳೆ ಸಮಾಪ್ತಃ ಮಂಗಳಮಹಾ ಶ್ರೀ ||

ವಿಷಯ : ಶಿವಶರಣರ ಕಥೆ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಶಕಟರೇಫದ ಬಳಕೆ ಇದೆ. ೨೦೦, ೨೦೮, ೨೧೧ ಈ ಪತ್ರಗಳು ಶಿಥಿಲವಾಗಿವೆ. ಕೊನೆಯಲ್ಲಿ ಕ್ರಮಾಂಕವಿಲ್ಲದ ವಿಷಯ ಸೂಚಿಯ ಎರಡು ಓಲೆಗಳಿವೆ.

2034

ಕೆ. ೧೭೬|೫	**ಹಲಾಯೊುಧ ಸ್ತೋತ್ರ**	ಶ್ಲೋಕ, ಟೀಕು
೧೦.೧″ × ೨″	?	?
೫೩–೮೨ ಪತ್ರ	೧೦ ಪಂಕ್ತಿ	೮೫ ಅಕ್ಷರ

ಆದಿ : ಗ್ರಂ ॥ ಕಂದರ್ಪ್ಪದರ್ಪಾದ್ರಿ ವಿಭೇದಶಂಬಂ
ಕುಂದೇಂದುನೀಹಾರ ವಿರಾಜಿತಾಂಗಂ
ವೃಂದಾರ ಕೈರರ್ಚಿತ ಪಾದಪದ್ಮಂ
ವಂದೇ ನಿಶಂ ಶಂಕರಮವ್ಯಯಂ ಶಿವಂ ॥

ವೃ॥ ವಿಘ್ನಂ ನಿರ್ಘ್ನನ್ದ್ವಿರದವದನಃ ಪ್ರೀತಏವೋಸ್ತು ನಿತ್ಯಂ
ವಾಮೆ ಕುಂಠತ್ಪ್ರಕಟಿತ ಬೃಹದ್ದಕ್ಷಿಣೆ ಸ್ಥೂಲದಂತಃ
ಯಃ ಶ್ರೀಕಂಠಂ ಪಿತರಮುಮಯಾಶ್ಲಿಷ್ಟವಾಮಾರ್ಧದೇಹಂ-
ದೃಷ್ಟ್ವಾ ನೂನಂ ಸ್ವಯಮುಪಿದಧಾವರ್ಧನಾರೀಶ್ವರತ್ವಂ ॥

ಟೀಕು ॥ ವಾಮೆಕುಂಠತ್ । ವಾಮೆ । ವಾಮಭಾಗದಲ್ಲಿ । ಕುಂಠತ್ ।
ರಾಹಿತ್ಯದಂತವನುಳ್ಳ

ಅಂತ್ಯ : ಪಾಠ್ಯಃ । ಪಠಿಸಲು ಯೋಗ್ಯವು । ಅನ್ಯೈಃ । ವುಳಿದಾದ ಗ್ರಂಥವಿಸ್ತರೈಃ ।
ಗ್ರಂಥವಿಸ್ತರಂಗಳಿಂದ । ಕಿಂ । ಯೇನು ಪ್ರಯೋಜನವು ॥ ೬೭ ॥ ಹಲಾ
ಯುಧ ಸ್ತೋತ್ರದ ಟೀಕು ಸಂಪೂರ್ಣ x x x ಇತಿ ಶ್ರೀಮದ್ವೇದಾಗ
ಮೋಪನಿಷತ್ ಕೇಂದ್ರ ಪ್ರತಿ ಪುರಾಣೋತ್ತಮಾರ್ಗ ಪ್ರವರ್ತನ ಪ್ರವೀಣ
ಪಂಡಿತಾರಾಧ್ಯ ದೇವನಾಮಾಚಾರ್ಯ್ಯವರ್ಯ್ಯ ತನೂಭವ ಗುರುಲಿಂಗ
ದೇವಾಹ್ವಯ ದೇಶಿಕೇಂದ್ರ ಪ್ರತಿಕೋದ್ಭವ ಗುರುದೇವಾಭ್ಯೇನ ಕರ್ನ್ನಾಟ
ಭಾಷಾಕೃತಾ ಪಂಚಸ್ತವ ಟೀಕಾ ಪರಿಸಮಾಪ್ತಾ.

ವಿಷಯ : ಹಲಾಯುಧನ ಸ್ತೋತ್ರ.

ವಿಶೇಷ : ಇದೇ ಕಟ್ಟಿನಲ್ಲಿ ದೀಕ್ಷಾಬೋಧೆ. ಅನಾಮಯ ಸ್ತೋತ್ರ ಮೊದಲಾದ ಇತರ ಗ್ರಂಥಗಳಿವೆ.

2035

ಕೆ.ಬಿ.೬೧	**ಹಸ್ತಿಗಿರಿ ಮಾಹಾತ್ಮ್ಯೆ**	ಚಂಪು
೭.೭"×೬.೩"	ಚಿಕ್ಕುಪಾಧ್ಯಾಯ	೧೬೮೦
೧-೧೪೯ ಪತ್ರ	೧೧ ಪಂಕ್ತಿ	೩೨ ಅಕ್ಷರ

ಆದಿ : ಹಸ್ತಿಗಿರಿ ಮಾಹಾತ್ಮ್ಯೆ ಬರೆಯುವುದಕ್ಕೆ ಶುಭಮಸ್ತು ॥

ವೃ॥ ಶ್ರೀರಾಜದ್ರಾಜಮೌಳಿಶ್ರಿತ ಪದಕಮಲಂ ಸೇಮುಷೀಬಂಧುರ ಸ್ವಾಂ
ತಾರೂಢ ಸ್ತೋತ್ರಜಾಲಂ ಸರಸಿಜವದನಂ ಸರ್ವಲೋಕೈಕವೀರಂ

ಕಾರುಣ್ಯಸ್ಮೇರ ನೇತ್ರಂ ಘನರುಚಿ ವಿಲಸದ್ಗಾತ್ರನುರ್ವೀ ಕಳತ್ರಂ
ಚಾರುಪ್ರೇಂಖಚ್ಚರಿತ್ರಂ ಸಲಹುಗೆ ನಿರತಂ ಹಸ್ತಿಶೈಲೇಶನೆಂಮಂ ||೧||

x x x x

ಅಳಿಮುಸುಕದ ಸುಮಲತೆಯಂ
ತೆಳಿವರೆಯದ ಕನ್ನೆಯಂತಿರಿನಿವಾಲಂತು
ಜ್ವಳಿಪ ತಿಳಿಜೊನ್ನದಂತೆರ್ದ್ದೆ
ಗೊಳೆ ಪೇಳ್ವೆಂ ಹಸ್ತಿಗಿರಿಯ ಮಾಹಾತ್ಮ್ಯಯನಾಂ ||೧೮||

ಅಂತ್ಯ : ಯಿದನಾ ಶ್ರೀ ಚಿಕದೇವರಾಜ ಕರುಣಾಂಭೋರಾಶಿ ಹಂಸಂಶ್ರಿತ
ತ್ರಿದಶೋರ್ವೀರುಹನಾರ್ಯ ಸನ್ನುತನುದಾರಂ ಸಾಹಿತೀ ಸಾರಕೋ
ವಿದನುದ್ಯತ್ಕವಿಕಾರ ಸಜ್ಜನಮಳಂ ಪೇಳ್ದಂ ಮಹಾ ಹಸ್ತಿಶೈ
ಲದ ಮಾಹಾತ್ಮ್ಯಯನೊಳ್ಪಿನಿಂದೆ ಚಿಕುಪಾಧ್ಯಾಯಾಖ್ಯ
ಮಂತ್ರೀಶ್ವರಂ ||೬೭||

x x x x

ಸಂಗಡಿಸಿ ಸಂತತಂ ಸುರ
ಪುಂಗವನುತ ವರದರಾಜ ಮಾಹಾತ್ಮ್ಯಯನಾ
ಪ್ಪೊಂಗುತೆ ಪೇಳ್ವ ಕೇಳ್ವ
ರ್ಮಂಗಳಮಭಿವರ್ಧಿಪವರ್ಗೆ ವಿಷ್ಣುವಿನೊಲವಿಂ ||೭೧||

ಗದ್ಯ|| ಇದು ಕಮಲಭವಭಾವ ಪುರಂದರ ಪ್ರಮುಖ ಸುರಸಮುದಯ ಮಣಿ ಮಕುಟೋಪಲಾಲಿತ ಪಾದಾರವಿಂದನಾದ ಕರಿಧರಣೀಧರ ಶಿಖರಮಂದಿರ ವರದರಾಜ ಚರಣ ರಾಜೀವ ಮಕರಂದ ಬೃಂದಾಸ್ವಾದನ ಮುದಿತ ದ್ವಿರೇಫಾಯಮಾನ ಬಿರುದೆಂತೆಂಬರಗಂಡ ರಾಜಾಧಿರಾಜ ರಾಜ ಪರಮೇಶ್ವರಾ ಪ್ರತಿಮ ಪ್ರೌಢಪ್ರತಾಪ ಶ್ರೀಮದ್ವೀರನರಪತಿ ಚಿಕ್ಕದೇವ ಮಹಾರಾಜೇಂದ್ರ ಸಾಂದ್ರಕೃಪಾಪಾಲಿತ ಸರ್ವತಂತ್ರ ಸ್ವತಂತ್ರ ಶ್ರೀ ಚಿಕ್ಕುಪಾಧ್ಯಾಯ ವಿರಚಿತಮಪ್ಪ ಹಸ್ತಿಗಿರಿ ಮಾಹಾತ್ಮ್ಯಯೊಳ್ ಯೋಗ ವರ್ನ್ನನಮಷ್ಟಾದಶಾಶ್ವಾಸಂ ಸಂಪೂರ್ಣಂ|| ಅ ತು ಆಶ್ವಾಸ ೧೮ಕ್ಕಂ ಪದನೂ ೧೧೭೩ಕ್ಕಾಂ ಮಂಗಳಮಹಾ ಶ್ರೀ||

ವಿಷಯ : ಕಂಚಿ ಕ್ಷೇತ್ರ ಮಾಹಾತ್ಮ್ಯೆ.

ವಿಶೇಷ : ಸುಂದರಾಕ್ಷರ. ಪ್ರತಿಯ ಕಾಲ ೧೯೦೦.

2036

ಕೆ ೩೧ ಹಾಡುಗಳು ಹಾಡು
೧೯.೫″ × ೨.೩″ ? ?
೩-೧೬ ಪತ್ರ ೭ ಪಂಕ್ತಿ ೫೦ ಅಕ್ಷರ

ಆದಿ : ....ರಂಜಿಸಿ ಹರಿಯಲು
ಕತ್ತುತ್ರಿಭುನ ದರಶಿಯನಿಸುವ ವಸ್ತು ಪಾರ್ವತಿದೇವಿಗೆ
ನಿತ್ಯನಿರುತಾನಂದಸುರತದಿ ಚಿತ್ತದೊಲ್ಲಭ ಹರುಷವಾ
ಯಿತ್ತು ಅನುದಿನ ಅಗದಿನ ಅಗದಿರು ಅಗಸ್ತ್ಯೇಶಲಿಂಗ್ಗದಯಾಧಿ ॥೮॥

ಅಂತ್ಯ : ಸತ್ಯಾವಾರಾದಿನೇಹಿಸಿದಾನಾ
ದೇವಾಮುಪ್ಪೂರಾವಾನುಗೆದಮುನಿ ವಂದಿತನಾ।
ಸರ್ಪ್ಪಭೂಷಣಾನಾದಾ ಸಿವನಾ
ದೇವಾ ಕಪುಗೊರಳ ವಿಶ್ವೇಶ್ವ ವಿಗ್ರಹದಾ ॥೫॥
x x x x ಅಂದು ಮರ್ಕಂಡೇಯ ವಲಿದು ವಾರಗನಿತಪುದು ॥

ವಿಷಯ : ಪಾರ್ವತಿದೇವಿಗೆ ಆರತಿಯೆತ್ತುವುದು ಇತ್ಯಾದಿ.

ವಿಶೇಷ : ಪ್ರತಿ ಅಸಮಗ್ರ. ೧, ೨ನೆಯ ಪತ್ರಗಳಿಲ್ಲ.

2037

ಕೆ. ೨೦೭/೪ ಹಾಡುಗಳು ಹಾಡು
೬.೬″×೧″ ? ?
೩೯–೬೫ ಪತ್ರ ೫ ಪಂಕ್ತಿ ೩೨ ಅಕ್ಷರ

ಆದಿ : ಹಗಲಿರಾಳು ನಿಂನ ವ್ಯಾಲಣಾಸೆಯೊ ಹಂಬಲಿಸಿ ಬಡವಾದಳೋ
ಆಗಿವು ಕುಂಕುಮ ಗಂಥ ಕಸ್ತುರಿ ಅನುಲೇಪನವ ಮಾಡಲೊಲ್ಲಳೋ
ಸೊಗಸುಮಲ್ಲಿಗೆ ಜಾಜಿ ಸಂಪಿಗೆ ಸುದತಿ ಮುಡಿಹೂವ ಮುಡಿಯಳೋ
ತ್ಯಗಸು ಮದನನ ಬಲವು ಬಂದಿದೆ ತ್ಯಾರಮಲ್ಲ ದಯಾನಿಥೇ ॥೧॥

ಅಂತ್ಯ : ಹುಣುಮೆಯಾ ನೆರೆತೆ....ಯ ಮುಖದೊಳು ಹೊಗರೊಗುವ ಸಂಪಿಗೆಯನು
ಬಂಣವಳಿದಳೆ....ಬಟ್ಟಜಪ್ಪನೆ ಬಾರೊ ನಿನಗಿದೂ ನ್ಯಾಯವೇ ॥

ಹೆಂಣು ಜಲ್ಕ್ರದ ಕೂಡೆ ಮುನಿವರೆ ಹಿಡಿದ ಶಾಪವ ಬಿಡಿಸುತಾ
ಕಂಣಿನಿಂದಾರ್ನೈದು ಕೊಳ್ಳಿ ಕಾಗಿನೆಲೆಯಾದಿಕೇಶವಾ ॥ ೮ ॥

ವಿಷಯ : ವಿವಿಧ ವಿಷಯಗಳ ಹಾಡುಗಳು.

ವಿಶೇಷ : ಗ್ರಂಥದ ಸ್ಥಿತಿಯು ಬಹುಮಟ್ಟಿಗೆ ಉತ್ತಮವಾಗಿದ್ದರೂ ೬೪ನೆಯ ಪತ್ರದ ಅಂಚು ಮುರಿದುಹೋಗಿದೆ. ಇದರೊಂದಿಗೆ ವೀರಸಂಗನ ಚೌಪದ, ಗಂಗೆ ಗೌರೀವಾದ ಮೊದಲಾದ ಇತರ ೮ ಗ್ರಂಥಗಳಿವೆ.

2038

ಕೆ. ೨೦೭/೭	**ಹಾಡುಗಳು**	ಹಾಡು
೬.೬" × ೧"	?	?
೮೯-೯೫ ಪತ್ರ	೫ ಪಂಕ್ತಿ	೨೭ ಅಕ್ಷರ

ಆದಿ : ಸಂಗ್ರಾಮಧೀರ ಸಮರ ಕೋಲಾಹಲ
ರಿಪುಕುಮುದ ಮಾರ್ತಾಂಡ ಕುಮಾರ ಕಂಠೀರವಾ
ಚಾಪವಿದ್ಯಾ ಧನಂಜಯ ಹರಿಕಟಕ ಸಮರ ಭೇರುಂಡ
ವೈಯಾಲಿ ಕೋಲಾಹಲಾ ಕದನ ಪ್ರಚಂಡ
ಕದನ ವಿಜಯ ಮಾರ್ತಾಂಡ ನಕುಲ ರೇವಂತ

ಅಂತ್ಯ : ಆದಿ ಪರಂಜ್ಯೋತಿ ನೀನೇ ಆದಿ ಮಧ್ಯಾಂತರಹಿತನೆ
ವೇದವೇದಾಂತಕಾದಿವೇದ್ಯನೆ ವೇಣುನಾವಿನೋದನೆ
ಆಧರಿಸಿದೆಯೊ ನೀನು ಕೃಪೆಯಲಿ
ಆದಿಮೂ ...ಣಾ ನಾದ ವಿನೋದನಹುದೊ ಕದಿರಿನರಶಿಂಹ ದಯಾನಿಧೇ ॥ ೮ ॥

ವಿಷಯ : ಹಾಡುಗಳು.

ವಿಶೇಷ : ಈ ಗ್ರಂಥದೊಂದಿಗೆ ಐರಾವತ ಚೌಪದ, ಸ್ತೋತ್ರಗಳು ಮೊದಲಾದ ಇತರ ೮ ಗ್ರಂಥಗಳಿವೆ.

2039

ಕೆ. ೨೯೨೨	ಹಾಡುಗಳು	ಹಾಡು
೧೨.೨″ × ೧.೨″	?	?
೧೨೦ ಪತ್ರ	೪ ಪಂಕ್ತಿ	೩೫ ಅಕ್ಷರ

ಆದಿ: ಆನಂದ ಬೈರವೀ ॥ ಅಷ್ಟತಾಳಾ॥

ನಂನ್ನುವಿಡಚೀ ಕದಲಕುರಾ ಕದಲಕುರಾ
ನಿಂನೇಡಬಾಸೀ । ಅರನಿಮುಷ ಪೊರ್ವನು ರಾ । ರಾವ್ಯೆಯ ರಾವಾ
ನನ್ನು ವಿಡಚೀ ಕವಲಕುರಾ । ಕದಲಕುರಾ ॥ ಪಲ್ಲ ॥

ಅದ್ರೀಲೊ ಮುಣುಗೀ ಸ್ವಾಸಮುನಾ । ಶ್ವಾಸಮುನಾ । ಮುಂಚ್ಚೀ ಆಣಿ ಮುತ್ಯಮು ಗಂನ್ನಟ್ಲಾಯ ಶ್ರೀ ರಮಣಾ । ನಂನ್ನು ವಿಡಚೀ ಕದಲ ಕುರಾ ॥ ೧ ॥

ಅಂತ್ಯ: ರಾಗ । ಉದೆರಾಗಾ ।

ಯೆತ್ತಿಕೊಳ್ಳೋ ಗೋಪಿ ಕೃಷ್ಣನಾ । ಆ
ನಿತ್ಯಾತ್ಮನಾಪ ಪುರಂದ್ದರ ವಿಠಲನಾ
ಯೆತ್ತಿಕೊಳ್ಳೊ ಗೋಪಿಕೃಷ್ಣನಾ ॥ ಪಲ್ಲಾ ॥

ಅಂಬೆಗಾಲಿಕ್ಕುತ್ತಾ ಮುಂಡಿಯನೂಡುತ್ತಾ
ಮುಂದಣಾ ಅರಳೆಲೇ ನಲಿಯುತ್ತಾ
ಬಿಂದಿಗೆ ಅರಳಿಂದದಿ ಬಾಯ ಬಿಡುತಾ
ಗೋವಿಂದಾ ವೋಹನ ಮಾಲೆಯುಂ ಬರೆದು ಬಂದಾ ॥ ೧ ॥

x x x x ಚಿಕ್ಕವೊಗು ಯಂದು ಬಗೆಯದಿರಿ
ಅಚ್ಚುತಾನಂತಾ ಶ್ರೀ ಪುರಂಧಾರ ವಿಠಲನಾ
ಹೆಚ್ಚಿ ಹಾರೈಸುತ್ತಾ ಯೆತ್ತಿದಳ್ಳರಿಯಾ ॥ ೬ ॥

ಶ್ರೀ॥ ರಾಗ॥ ಬೇವು ಬೆಲ್ಲದೊಳು ಯಿಡಲೇನು ಫಲಾ
ಹಾವಿಗೆ ಹಾಲೆರೆದೇನು ಫಲಾ ಕೃಷ್ಣಾ ॥ ಪಲಾ ॥

ಕುಟಿಲವನು ಬಿಡದೇ ಕುಜನರು x x x x
ಗಾತಕತನವನು ಬಿಡದೇ ನಿರಂತರ
ನೀತಿಯ ಹೇಳಿದರೇ

ವಿಷಯ : ಭಕ್ತಿ ಮತ್ತು ನೀತಿಯ ಹಾಡುಗಳು

ವಿಶೇಷ : ಕೆಲವು ಓಲೆಗಳು ಹುಳು ತಿಂದು ಶಿಥಿಲವಾಗಿವೆ. ಇದೇ ಕಟ್ಟಿನ ಆದಿಯ ೪೭ ಪತ್ರಗಳಲ್ಲಿ ರಾಮಧಾನ್ಯ ರಾಮಾಯಣದ ಚರಿತೆ ಎಂಬ ಕೃತಿಯೂ, ಮಧ್ಯದಲ್ಲಿ ಸಂಕ್ಷೇಪರಾಮಾಯಣ ಮತ್ತು ಸಂಕ್ಷೇಪಭಾರತ ಎಂಬ ಕೃತಿಗಳೂ ಇವೆ. ೧೧೧ ನೆಯ ಪತ್ರ ಲುಪ್ತ. ೪೭ ರಿಂದ ೧೧೦, ೧೨೦ ರಿಂದ ೧೪೦ ಮತ್ತು ಕ್ರಮಸಂಖ್ಯೆಯಿಲ್ಲದ ೩೫ ಪತ್ರಗಳಲ್ಲಿ ಈ ಹಾಡುಗಳಿವೆ.

2040

ಕೆ. ೨೯೫।೨	**ಹಾಡುಗಳು**	ಹಾಡು
೧೬.೮″ × ೧ ೭″	?	?
೬೯–೯೩ ಪತ್ರ	೫ ಪಂಕ್ತಿ	೪೫ ಅಕ್ಷರ

ಆದಿ: ಪದ್ಯಾ ॥ ಆನಂದ ಭೈರವಿ ॥

ವಿರಹಾಗ್ನಿ ಸೊಕ್ಕೆನೋ । ವೆಲದಿರೇ ಚಲ್ಲಗಾ ಕರ್ಪೂರಮುನಮೇನು ಸ.... ಂಮ್ಮ್ರ ॥ ಕರ್ಪೂರ ಮುನಮೇನು । ಕಾಡದೀವೆಂಚನೋ ಚಲ್ಲಗಾ ಪಂನ್ನೀರು। ಚಲ್ಲರಂಮ್ರ । ಪನೀಟ ದೇಹಂಬು ಪರಿತಾಪಮೆಂದೇನೋ । ಪುಲ್ಬುಲ್ರ ರಾಶಿಗಾ । ಬೊಯರಮ್ರ ॥ x x x ಯಿತ ಪ್ರಸಬೆಗೆ ಬಂದವರು ನಿಂಮ್ಮ್ರ ಹೆಸರು ಹೇಳಿಕೊಂಡು ಬಂನ್ನಿರೇ ಅಂಮ್ಮೈಯಾ । ನಾವು ಹಸ್ತಿನಾಪುರಿ ಪಟ್ಟಣದಲ್ಲಿ ಯಿರುವ ನಾಟ್ಯಕಾ ಸ್ತ್ರೀಯರು ಕಾಣಿರೋ ಅಂಣ್ಣೈಯಾ ।

ಅಂತ್ಯ : ಅಭೀಕೆಂಮುಚುಟುಪೋಲಗೆ ಗೈಮಿಟುವೋ ಆ.... .. ... . ತ ತೆರೆ ಚಟು ಚುಟು ! ದೋಣೀ ಅಲಕ್ನಾ । ಮಿಕ್ಕ ಜಣೀ । ಸಾಣಿಕೆ ಮೆರ್ರೋಟೂ । ಸಾಡಿ ಕುಂದಡಿ ಚಲ್ಲು । ಉಟುಉಟು । ಅಚೀ.

ವಿಷಯ : ತೆಲಗು, ಕನ್ನಡ ಹಾಡುಗಳು ಮತ್ತು ಸಂಸ್ಕೃತ ಶ್ಲೋಕಗಳು.

ವಿಶೇಷ : ಶಿಥಿಲ ಪ್ರತಿ. ಮಧ್ಯೆ ಕೆಲವು ಪತ್ರಗಳನ್ನು ಹುಳು ತಿನ್ನಲುಪಕ್ರಮಿಸಿದೆ. ಅಸಮಗ್ರ ಪ್ರತಿ : ಈ ಕಟ್ಟಿನ ಆದಿಯಲ್ಲಿ ಐರಾವತವೆಂಬ ಮತ್ತೊಂದು ಗ್ರಂಥವಿದೆ.

2041

ಕೆ. ೩೭೯	**ಹಾಡುಗಳು**	ಹಾಡು
೭.೮″ × ೧.೭″	?	?
೨೨-೯೭ ಪತ್ರ	೮ ಪಂಕ್ತಿ	೩೯ ಅಕ್ಷರ

ಆದಿ : ಶ್ಚಂದ್ರುರಾಯನು ವೊಂಡೆಯ ಕಾಯೂದ ಹೊಲೆಯನಾಳಾಗೀ ॥ ೨ ॥
ಉಂಟಾದ ಕಾಲಕ್ಕೆ ನಂಟರೆಲ್ಲರು ಬಂದು
ಭಂಟರಾಗಿ ಬಾಗಿಲ ಕಾಯ್ವರು
ಉಂಟಾದತನತಪ್ಪಿ ಬಡತನ ಬಂದರೆ
ವೊಂಟೆ ಹಾಗೇ ಗೋಣ ಮೇಲಕೆತ್ತುವರೂ ॥ ೩ ॥

X X X X

ಯೇರುವ ದಂತಿಗೆ ನೂರಾಳು ಮುಂದಕ್ಕೆ
ಮೂರಾಂರಿಂದದೀ ಭಾಗ್ಯದಿ ಮುಂದುಗಾಣರು
ನೂರಾರು ಸಾವಿರ ದಂಡವ ತೆಗೆವಾಗ
ಪುರಂಥರವಿಟಲಂನ್ನ ನೆನೆ ಕಂಡ್ಯ ಮನವೇ ॥ ೫ ॥

ಅಂತ್ಯ : ಯಿಂನ್ನಾದರು ನಿಂನ್ನಾದಾಸರ ಸಂಗವಿತ್ತು
ಮಂನ್ನಿಸಿ ದಯಮಾಡೊ ಮದನಜನಕ ನೀನೆ
ಅಂನ್ಯರೊಬ್ಬರ ಕಾಣೆ ಆದರಿಸುವವಿಲ್ಲ
ಪಂನ್ನಗಶಯನನೆ ಪುರಂದರವಿಟ್ಠಲಾ ॥ ೩ ॥

ಮುಂಡರೋಗಗಳ ಕೊಂದು
ಪುಂಡರೀಕಾಕ್ಷ ಸಲಹೆಂನ್ನ
ಶ್ರೀಹರಿ ಅಖಂಡ ಗುರುರಾರೂ ಬ್ರಂಹ್ಮಂ ॥ ೭ ॥

ವಿಷಯ : ಭಕ್ತಿ ಮತ್ತು ನೀತಿಬೋಧಕ ಹಾಡುಗಳು.

ವಿಶೇಷ : ೯೬ನೆಯ ಪತ್ರ ಲುಪ್ತವಾಗಿದೆ. ೮೯ನೆಯ ಪತ್ರದ ಒಂದು ಕಡೆ ಖಾಲಿ ಯಾಗಿದೆ. ಗ್ರಂಥ ಸ್ವಲ್ಪ ಶಿಥಿಲ.

2042

ಕೆ. ೪೬೮/೨	**ಹಾಡುಗಳು**	ಹಾಡು
೧೫.೩″ × ೧″	?	?
೭-೮ ಪತ್ರ	೫ ಪಂಕ್ತಿ	೫೦ ಅಕ್ಷರ

ಆದಿ : ಆನೆ ಬಂತ್ತು ಮದ್ದಾನೆ ತಂನ್ನ
ತಾನೆ ತಿಳಿದು ನೋಡಿ ನಿಂಥ ಶರಣನೆಂಬ್ಬ
ಆನೆ ಬಂತ್ತು ಮದ್ದಾನೆ ॥ ಪಲ್ಲ ॥

ಅಂತ್ಯ : ಶ್ವರ್ಗದಿಂದ ಬಂಧವು ಪುಷ್ಪ ಟಂಕಣವೈಶ್ಯಥವರ್ಾ
ಚೆಲೊಚಿತ್ರಯೇಕಿ ಸಾ ಬಾವ ಜೊಮೊ ಚಿತ್ರ ಸರಸಾ
ನಾಲ್ಲಕು ಬಾಸೇಲಿ ಪದನ ಹೇಳಿದ ಕವ್ವಿ ಕಾಳಿದಾಸಾ
ಅವರಿಗಾಯಿತೊ ಶ್ರೀ ಪರ್ವತ್ತ ಕಾಯದಿಂಥ ಕೈಲಾಸ ॥ ೬ ॥

ವಿಷಯ : ವೀರಶೈವ ವೇದಾಂತ.

ವಿಶೇಷ : "ಆನೆ ಬಂತು ಆನೆ ಮದ್ದಾನೆ" ಮತ್ತು "ಶಿವನ ನೋಡಿರೊ ಇವಾತನ ಮಾಯವ" ಎಂಬ ಎರಡು ಹಾಡುಗಳಿವೆ. ಈ ಕಟ್ಟಿನಲ್ಲಿ ಹರಗಣಮಾಲೆ, ಅಕ್ಕಗಳ ಸೃಷ್ಟಿ ಇತ್ಯಾದಿ ಗ್ರಂಥಗಳಿವೆ.

2043

ಕೆ, ೪೬೮/೧೦	**ಹಾಡುಗಳು**	ಹಾಡು
೧೫.೨″ × ೧″	?	?
೨೨–೨೫ ಪತ್ರ	೪ ಪಂಕ್ತಿ	೫೦ ಅಕ್ಷರ

ಆದಿ : ಪೂರ್ನೇಂದ್ದು ವದನ ತ್ರಿಪುರ ಭಯಕ್ಕರಿಸಥಾ
ಪೂರ್ನ ಕಾರುಂಣ್ಯವಾರಿ ಸ್ವರ್ನ್ನಮಣಿ ತಟಾಕ
ವರ್ನಿತ ಕಪೋಲಯೋಗ ಶರ್ವಾಣಿ ಮ್ರುದುಮಾಥು್ ಗೌರಿ ॥ ೧ ॥

ಅಂತ್ಯ ; ಕರಣೇಂದ್ರಿಯಂಗಳ ಕಾಲಾಟದವಲ್ಲ
ಪರಿದಾಡುತಿಹ ದಶವಾಯಿ ರೂಪಕನಲ್ಲ
ಮೆರವಷ್ಟ ಮದಗಳ ಹಂಮಿನವನೆ ಅಲ್ಲ
ಪೊರೆಯಾಗಿ ತೋರುವ ಸಪ್ತಧಾತಕನಲ್ಲ
ಅರಿಷಡುವರ್ಗನಲ್ಲ ತಾಪತ್ರಯದ ರೂಹಿನ ಮೋರ್ತಿಯಲ್ಲ
ಪೀಟತ್ರಯಂಗಳೊಳು ನೆರೆವೇಕವಾಗಿಹ ಗಂಗೇಶ ನೀನೆ ಅಲ್ಲ ॥ ೨ ॥

ವಿಷಯ : ಗೌರಿಯ ಸ್ತುತಿ, ಶರಣರು ಮತ್ತು ಶಿವನ ಮಹಿಮೆ ಇತ್ಯಾದಿ.

ವಿಶೇಷ : ಹಾಡು ೧ ರಲ್ಲಿ " ಭದ್ರಗಿರಿ ಚೂಡೇಶ್ವರುನಿ " ಎಂದೂ, ೩ರಲ್ಲಿ " ಷಡಕ್ಷರ ಲಿಂಗ " ಎಂದೂ, ೪ರಲ್ಲಿ " ಗಂಗೇಶಾ " ಎಂದೂ ಅಂಕಿತಗಳಿವೆ. ಈ ಕಟ್ಟಿನಲ್ಲಿ ಬಸವೇಶ್ವರನ ನೂರೆಂಟು ನಾಮ, ಶರಣೆಯರ ನಾಮ ಮೊದಲಾದ ಗ್ರಂಥಗಳಿವೆ.

2044

ಕೆ. ೫೬೫/೧	**ಹಾಡುಗಳು**	ಹಾಡು
೫.೧"×೨.೨"	?	?
೨.೯ ಪತ್ರ	೧೧ ಪಂಕ್ತಿ	೨೩ ಅಕ್ಷರ

ಆದಿ : ದ್ದುವಂನಕಾ ॥ ೩ ॥

ಅಂಮ್ನ ಬಾರೆಂನಾ ಅಗಲಬ್ಯೇಡವೆ
ಗುಂಮು ಬರುತಿದೇ ಗುದುಗುದೆನುತಲೀ
ಉಂಮು ಕೊಡುತಿದೇ ವಲ್ಲೆನೆಂದರೇ
ತಿಂಬೆನೆನುತಿದೇ ತಾಳಲಾರೆನೂ ॥ ೪ ॥

ಶ್ರೀಥವಿಠಲನಾ ಸುಲಲಿತೋಕ್ತಿಗೆ
ಮೋದವಿಡುತಲೀ ಮಾನಿನೀ ಮಣೀ
ವೇದಗೋಚರಾ । ನೀ ಯೇಳಬ್ಯಾಡವೋ
ಪಾದಕೆರಗುವೆ ಪವಡಿಸೆಂದಳೂ ॥ ೫ ॥

ಅಂತ್ಯ : ಗರುಡ ಗಂಥರ್ವ ಸಿದ್ಧವಿದ್ಯಾಧರರು।ಪಾಟಕರು ಸಲೆ ಮಿತ್ರ ಜಟಿಯರು ಬಂದಿಹರೆ ಹರಿರುದ್ರ ಬ್ರಹ್ಮಾದಿಗಳೆಲ್ಲಾ ಸುರರೊಗ್ಗಿಂದ ನಿಂಮೋಲಗಕೆ ತುಂಬುರ ನಾರದ ಮುನೀಶ್ವರರೂ ಯೇಳ್ಳೆಯ್ಯ ಸ್ವಾಮಿಾ ಬೆಳಗಾಯಿತೂ ॥ ೩ ॥ ಶ್ರೀ ಉದಯರಾಗಾ ೫೦

ವಿಷಯ : ಹಾಡು.

ವಿಶೇಷ : ೧, ೩ ಮತ್ತು ೨೩ನೆಯ ಪತ್ರಗಳಿಲ್ಲ. ಈ ಕಟ್ಟಿನಲ್ಲಿ ಕಿಂಚಿತ್ ರಾಮಾಯಣ, ಕಿಂಚಿತ್ ಭಾರತ, ಸುಭಾಷಿತ ಗ್ರಂಥ, ಸರ್ವಜ್ಞ ಪದಗಳು ಎಂಬ ಇತರ ಗ್ರಂಥಗಳಿವೆ.

2045

ಕೆ. ಎ. ೨೪೭೪/೫	**ಹಾಡುಗಳು**	ಹಾಡು
೧೨.೯" × ೮"	?	?
೧–೮೯ ಪತ್ರ	೧೪ ಪಂಕ್ತಿ	೨೦ ಅಕ್ಷರ

ಆದಿ : ಅಂಮನವರ ಸ್ತುತಿ । ಉದಯರಾಗ ॥

ಯೇಳಂಮ ಬೆಳಗಾಯಿತೇಳು ನಗರಾಜಸುತೆ
ಯೇಳು ಮೂಜಗನ್ಮಾತೆ
ಯೇಳು ಅಘನಾಶಿನಿಯೆ
ಯೆ ೕಳು ಮಹಂಕಾಳಿಯೆ
ಯೇಳು ಮೃಡಾಣಿಯೆ
ತಾಯೇ ಯೇಳಂಮ ಬೆಳಗಾಯಿತೂ ॥ ಪ ॥

ಅಂತ್ಯ : ಮದಗಜಾವ್ಯೆಯ್ಯಾ ಮರದು ಮುದುಗಾಣದೆ ಹುದುವಿನೊಳಗೆ ಬಿದ್ದಂತಾದೆನೂ ಹೃದಯ ಕಮಲದೊಳು ನಿಂದು ರಕ್ಷಿಸು ಯಂನಾ ಪಾದುಮಾಕ್ಷ ಹ್ಯೆಳವನ ಕಟ್ಟೆ ರಂಗಯ್ಯ ಮನವೆಂನಾ ಮಾತ ಕೇಳಾದು ಮಂದಜ್ಞಾನಾದಿ ತನುವಿನಶಿಯಾ ಬಿಡಲೊಲ್ಲಾದು ॥ ೩ ॥

ವಿಷಯ : ಭಕ್ತಿಯ ಹಾಡುಗಳು.

ವಿಶೇಷ : ಗ್ರಂಥದ ಮೊದಲಲ್ಲಿರುವ ಬೇರೊಂದು ಪತ್ರದಲ್ಲಿ ವಿಷಯಸೂಚಿಯಿದೆ. ಪತ್ರಗಳ ಒಂದೇ ಕಡೆಯಲ್ಲಿ ಬರೆದಿದೆ. ಇದರೊಂದಿಗೆ ಸೀತಾಕಲ್ಯಾಣ, ಚಂದ್ರಹಾಸನ ಕಥೆ, ಕೃಷ್ಣಪಾರಿಜಾತ, ವಿನಾಯಕಾಷ್ಟಕ, ಶಂಕರ ವಿಜಯ ಸಂಗ್ರಹ I, II, III ಭಾಗಗಳೂ ಇವೆ.

2046

ಕೆ. ಬಿ. ೨೪೩	**ಹಾಡುಗಳು**	ಹಾಡು
೭.೯" × ೬.೧"	?	?
೧-೧೨ ಪತ್ರ	೨೦ ಪಂಕ್ತಿ	೧೮ ಅಕ್ಷರ

ಆದಿ : ರಾಗ ॥ ಕಾಂಭೋಜಿ. ರೂಪಕತಾಳ.

ಬಾರೆಂದು ಹಸೆಗೆ ಕರದರು । ಸೋ ॥

ನೀರೇಜನಿಭನೇತ್ರ ನಿಖಿಳ ಸದ್ಗುಣಗಾತ್ರ
ಮಾರಸುಂದರಮೂರ್ತಿ ಮಂಜುಳ ಸುಕೀರ್ತಿ
ವಾರಿನಿಧಿ ಸಂಭೂತೆ ಸೌಭಾಗ್ಯ ಸಂದಾತೆ
ನೀರಾಜಿಸುವ ಪಸೆಯೊಳಿಂದು ಕುಳ್ಳಿರಲು
ಬಾರೆಂದು ॥ ಪಲ್ಲ ॥

ದಾರಕನ ಮೊರೆಗೇಳಿ ದೈತ್ಯನನು ಪರಿಹರಿಸ
ಲಾರುಭಟಿಯಿಂದೈದು ತುರುವ ನಖಮುಖದಿ
ಕೀರಿ ಸುರರನು ಪೊರೆದು ಭೂಭಾರವನು ಕಳೆದ
ನಾರಸಿಮ್ಮನನಮರ ಸತಿಯರೊಲಿದು ॥ ೧ ॥

ಅಂತ್ಯ : ರಾಗ ॥ ಶಂಕರಾಭರಣ. ಆದಿತಾಳ

ಗರುಡ ಗಮನ ಪಾಲಿಸೊ
ಮೊರೆಯ ನೀ ಲಾಲಿಸೊ ॥ ಪ ॥

ಹುರುಳಗೆ ವರಗಳ ಕರುಣಿಸಿ ಶಂಕರ
ಗಿರಿಜೆಯನುಳಿಯುತ ಸರಿದಳು ಕಾಣದೆ ॥ ೧ ॥

ಅಟ್ಟುತ ಬರುತಿಹ ದುಷ್ಟನು ಯಮ್ಮನು
ಕೆಟ್ಟೆವು ಮುರಹರ ಬಿಟ್ಟುದು ಹರಣವು ॥ ೨ ॥

ದೀನರ ಸಲಹುತ ಭೂನುತ ಸತ್ವನೆ
ಶ್ರೀನಿವಾಸನೆ ಮುನಿಮಾನಸ ವಿಹರಣ ॥ ೩ ॥

ಭಕ್ತಾಪಾಯ ಭುಜಂಗ ಗಾರುಡಮಣಿ x x x x ಶ್ರೀಯೋ ದೇವ
ಶಿಖಾವ-ಣಿರ್ದಿಶತುಳಂ ಗೋಪಾಲ ಚೂಡಾಮಣಿ :

ವಿಷಯ : ಹಸೆಗೆ ಕರೆಯುವುದು, ಮುಕುಂದಮಾಲಸ್ತೋತ್ರ ಇತ್ಯಾದಿ.

ವಿಶೇಷ : ಆದಿಯ ಪತ್ರ ಹರಿದಿದೆ.

2047

ಕೆ.ಬಿ. ೨೫೧	**ಹಾಡುಗಳು**	ಹಾಡು
೭.೯″ × ೬.೨″	?	?
೧–೧೦೩ ಪತ್ರ	೧೫ ಪಂಕ್ತಿ	೨೨ ಅಕ್ಷರ

ಆದಿ : ಮೊಸರು ಕಡಿಯುವಾಗ ಹೇಳತಕ್ಕ ಹಾಡು

ದಿನಮಣಿ ಮೈದೋರೆ ಕೃಷ್ಣನ ಜನನಿ ಮಂಚವನಿಳಿದಳು
ಕನಕ ಕಲಶದಿ ಮುಖವ ತೊಳೆದಳು ತನುವು ಶೃಂಗರವಾದಳು ॥ ೧ ॥

ಮುಂಗುರುಳು ತಿದ್ದುತ ಮುಡಿಯನು ಮುಂಗೈಲಿವಾಸರಿಸುತ
ಮಂಗಳಾಂಗಿಣಿ ಮಡಿಯನುಟ್ಟಳು ಮತ್ತೆ ತಿಲುಕವ ತಿದ್ದುತ ॥ ೨ ॥

ಅಂತ್ಯ : ಶಂಖಚಕ್ರಧರನಿಗೆ ಶರಧಿ ಗಂಭೀರನಿಗೆ
ಪಂಕಜಾಕ್ಷನಿಗೆ ಪಾವನ ಚರಿತಗೆ
ಶಂಖೆಯಿಲ್ಲದಲೇಳು ಪುರದಲ್ಲಿ ನೆಲಶಿದ್ದ
ಶಾಂತ ಮೂರುತಿ ರಾಜಗೋಪಾಲಗೆ ॥ ೩ ॥

ಧ್ರುವನ ಹುಟು ಸಂಪೂರ್ಣವಾದುದು.

ವಿಷಯ : ಮೊಸರು ಕಡೆಯುವ ಹಾಡು, ಅನಂತಪದ್ಮನಾಭವ್ರತ, ಧ್ರುವನ ಹುಟ್ಟು ಇತ್ಯಾದಿ

ವಿಶೇಷ : ಇದರಲ್ಲಿ ಮೊಸರು ಕಡೆಯುವ ಹಾಡು, ಬ್ರಹ್ಮಗೊಂಡನ ಹಾಡು, ಮನ ವಾರ್ತೆ ಹಾಡು, ಅನಂತಪದ್ಮನಾಭನ ಕಥೆ, ಗೌರೀಕಲ್ಯಾಣದ ಕಥೆ, ವರಮಹಾಲಕ್ಷ್ಮೀಕಥೆ, ಕಾವೇರಿ ಹುಟ್ಟು, ವಾಮನ ಹುಟ್ಟು, ಶುಕ್ರವಾರದ ಕಥೆ, ಸತ್ಯಭಾಮೆ ಕೃಷ್ಣನನ್ನು ದಾನಕೊಟ್ಟದ್ದು, ತುಳಸೀಲಕ್ಷ್ಮೀವಾದ, ರಾಸಕ್ರೀಡೆ, ಜಲಕ್ರೀಡೆ, ಸುಧಾಮನ ಚರಿತ್ರೆ, ಮೊಸರು ಕಡೆಯುವ ಹಾಡು, ಧ್ರುವನ ಹುಟ್ಟು ಹಾಡುಗಳಿವೆ. ೪೫–೪೮ರವರೆಗೆ ಪತ್ರಗಳು ಖಾಲಿ ಇವೆ. ಕೊನೆಯಲ್ಲಿ ವಿಷಯಾನುಕ್ರಮಣಿಕೆ ಇದೆ.

2048

ಕೆ.ಬಿ. ೩೦೪	**ಹಾಡುಗಳು**	ಹಾಡು
೮"×೬.೫"	?	?
೧–೮ ಪತ್ರ	೧೧ ಪಂಕ್ತಿ	೪೮ ಅಕ್ಷರ

ಆದಿ : ಶ್ರೀ ಅರುಂಧತಿ ಹಾಡು ಪ್ರಾರಂಭವು x x

ದೇವದೇವೇಶನಿಗೆ ಶ್ರೀವನಿತೆಯರಸನಿಗೆ
ಶ್ರೀ ವೆಂಕಟಾದ್ರಿಪತಿಗೆ ವಂದಿಸಿ ಪರಮ
ಪಾವನ ಚರಿತೆಯನು ಪೇಳ್ವೆ ॥ ೧ ॥

ನಾ ಪೇಳಿಯಂದದಲಿ ಲೋಕದೋಳ್ಪೇಳ್ವರೇ
ಕೌತುಕವ ಬಿಟ್ಟು ಧನ್ಯರಾದಾರೆಂದು
ಸೂತ ಶೌನಕರೆನುತಿರ್ದರು ॥ ೨ ॥

ಅಂತ್ಯ : ಮಂಗಳಂ ಮುರಹರಗೆ ಮುಂಗಳಂ ಶಿರಿಧರಗೆ
ಮಂಗಳಂ ಕರಣಾಕರ ಕಾರುಣ್ಯನಿಧಿಗೆ
ಮಂಗಳಂ ಪುರಂಧರಾ ವಿಠಲನಿಗೆ ಜಯ
ಮಂಗಳಂ ನಿತ್ಯ ಶುಭಮಂಗಳಂ ॥

ಹರಿಯೆ ವಾಸುದೇವಾಯಂ ನಮೋ
ವಾಸುದೇವಾಯನ್ನಮೊ ವಾಸುಕೀಶಯನಾಯನ್ನಮೊ
ವಾಸವಾರ್ಚಿತ ಅಖಿಲಾಂಡಶರಣಾಂಬುಜೆ
ಭಾಸುರಾ ಪ್ರತಿಪದಿತ ಶೋಕರಕ್ಷಕ
ಕೇಶವ ಮುಕುಂದ ಜಯತು ॥ ೧೫ ॥

ವಿಷಯ : ಅರುಂಧತಿ, ದ್ರೌಪದಿ ವಸ್ತ್ರಾಪಹಾರ.

ವಿಶೇಷ : ಅಕ್ಷರ ಸ್ಫುಟ.

2049

ಕೆ.ಬಿ. ೩೩೨	**ಹಾಡುಗಳು**	ಹಾಡು
೭" × ೫.೨"	?	?
೧-೩೭ ಪತ್ರ	೧೨ ಪಂಕ್ತಿ	೧೨ ಅಕ್ಷರ

ಆದಿ : ರಾಗಾ ॥ ಆನಂದಭೈರವಿ
ಮಂಗಳ ಶ್ರೀಗೌರಿಗೆ ಶೃಂಗಾರ ವೈಯ್ಯಾರಿಗೆ
ಅಂಗಜ ರಿಪುನಾರಿಗೆ ಗಂಗಾಧರನರ್ಧಾಂಗಿಗೆ ॥ ೧ ॥

ಕಮಲದಳನೇತ್ರೆಗೆ ಕಮಲ ಸೂಗಾತ್ರೆಗೆ
ಅಮರೇಂದ್ರನುತಪಾತ್ರೆಗೆ ಅಮಿತಗುಣ ವಿಚಿತ್ರೆಗೆ ಮಂಗಾಳಂ ॥ ೨ ॥

X X X X

(೧ನೆಯ ಪತ್ರ) ಜಾವಡಿ ॥ ಮುನಿಶ್ಯಾತಕೆ ಬೇಗ ನೀ ಬಾರೆ
ಮುನಿಶ್ಯಾತಕೆ ಬೇಗ ನೀ ಬಾರೆ ಮುನಿಶ್ಯಾತಕೇ॥

ಅಂತ್ಯ : ಬೇಡಿದುದೇನೊ ನಾನಿಂನ್ನ ಮಾತನಾಡಬಾರದೆ ನೀಯಂನ್ನಾ
ಬೇಡಿದ ಭಿಕ್ಷವ ವೋಡಿನೋಳ್ ತಿರಿದುಂಡ
ಗಾಡಿಕಾರ ಲಿಂಗೈಯ ಮಾತಾಡೋ
ಬೇಡಿದುದೇನೊ ನಾ ನಿಂನ್ನ ಮಾತನಾಡಬಾರದೆ ನೀ ಯೆಂನಾ ॥ ೫ ॥

ವಿಷಯ : ಮಂಗಳ ಇತ್ಯಾದಿ.

ವಿಶೇಷ : ೨೪ ಮತ್ತು ೩೩ನೆಯ ಪತ್ರಗಳಿಲ್ಲ. ೩೧ ಮತ್ತು ೩೨ನೆಯ ಪತ್ರಗಳು ಖಾಲಿಯಾಗಿವೆ. ಗ್ರಂಥದ ಆದಿಯಲ್ಲಿ ಕ್ರಮಸಂಖ್ಯೆಯಿಲ್ಲದ ಬೇರೆ ಎರಡು ಪತ್ರಗಳಲ್ಲಿ ಕೆಲವು ಹಾಡುಗಳಿವೆ.

2050

ಕೆ. ಬಿ. ೨೪೧।೧	**ಹಾಡುಗಳು**	ಹಾಡು
೮.೨" × ೬.೧"	?	?
೧–೭ ಪತ್ರ	২০ ಪಂಕ್ತಿ	೧೬ ಅಕ್ಷರ

ಆದಿ : ಮಗನ ಮಹಲಿಂಗನ ಬಿಟು ಹ್ಯೇಗಿರ ವೆ.... ವ್ಯೆಂಗ್
ದುಗುಡ ಬೇನೆಯ ಕಂಡು .. ದಿವಡದೆ ನಂವ್ಯೆಯ ॥ ಪಲ್ಲ ॥

ಹರಿಯ ಮೋಹದ ಮಗನಶುಟ್ಟ ಕಾರಣದಿಂದಾ
ಹರಿಯು ಬಿಟ್ಟಾನುಭುತಪೀಡೆ ವ್ಯಾಧಿಗಳಿಂದ
ಜ್ವರ ತಾಪದಿಂದಾಲಿ ಬಳಲಿಯೊ ಯನ ಕಂದಾ
ಧರೆಯು ಮುಲ್ಲೋಕಕ್ಕೆ ಮಗಾನು ಇದ್ದರೆ ಚಂದಾ ॥ ೨ ॥

ಅಂತ್ಯ : ರಾಮುಸ್ವಾಮಿ ವುಂನ್ನಡಂಟಾ ಯಿಂಟಕಿ ನೇನು ಪೋತಿ
ಪಟ್ಟಮಂಚದ ಮ್ಯಾಲೆ ಆವನು ಪವ್ವಳಿಂಚಿ ವುಂನಾಡವ್ಮಾ ॥ ೩ ॥
ಚಾಲಡೇರಿಲಟ್ಸಟತಿವರಿ ಝುಲ್ಪುಜೋಡಿ ನಾಜ್ಕು
ಗಲ್ಲೆ ಬೀಚಿ ಮೋಹಂಗ್ಮಾಲಾ ಸುರತಹೈ ಮಹತಾಪಕ ॥ ೪ ॥
ಲಾಹಿ ಲಾಹಿ ಹಿಲ್ಲಿಲ್ಲಾ ಮಹಮ್ಮಂದು ರಸೂಲಿಲ್ಲಾ
ಮಹಮದುನಿ ದಯವುಂಟೆ ಮಾಕುಯೂಲ ಚಿಂತ್ತ ರಾ
ನಾದಾದ ೯ನಿ ಸೂದರ್ದ ॥ ೫ ॥

ವಿಷಯ : ಹಾಡುಗಳು

ವಿಶೇಷ : ಶಿಥಿಲ ಪ್ರತಿ, ಹುಳು ಹಿಡಿದಿದೆ. ಒಂದನೆಯ ಪತ್ರದ ಮತ್ತು ಎರಡನೆಯ ಪತ್ರದ ಒಂದು ಪಾರ್ಶ್ವದಲ್ಲಿ ಮಾತ್ರ ಬರವಣಿಗೆಯಿದೆ. ಮೋಡಿ ಅಕ್ಷರ. ಇದೇ ಪುಸ್ತಕದಲ್ಲಿ ಮಧ್ಯೆ ಮಧ್ಯೆ ಕೆಲವು ಹಾಡುಗಳಿವೆ. ಅಲ್ಲದೆ (ಪ್ರಭು ಚರಿತ್ರೆಯ ಪೀಠಿಕೆ) ಪ್ರಭುಚರಿತ್ರೆ, ತೆಲಗು ತತ್ತ್ವ, ಕಾಮನಪದ್ಯ, ಕನ್ನಡ ತತ್ವ ಕಾಮನಾ ವಚನ, ಮಹಾಂತ ಸ್ವಾಮಿಗಳು ನಿರೂಪಿಸಿದ ಪ್ರಸಾದ ವಾಕ್ಯೂ, ಕೆಲವು ಸ್ತುತಿಗಳೂ ಇವೆ.

2051

ಕೆ. ೯. ೩೫೦।೫	**ಹಾಡುಗಳು**	ಹಾಡು
೮″ × ೬″	?	?
೧೦೯-೧೩೧ ಪತ್ರ	೧೫ ಪಂಕ್ತಿ	೮೦ ಅಕ್ಷರ

ಆದಿ : ರಾಗ ॥ ನಾದನಾಮಕ್ರಿಯೆ.
ಶ್ರೀಗುರುವಚನೋಪದೇಶವನಾಲಿಸಿ
ದಾಗಳಹುದು ನರರಿಗೆ ಮುಕ್ತಿ ॥ ಪ ॥

ದುರಿತಕರ್ಮವನೊಲ್ಲದಿರು ಪುಣ್ಯವನೆ ಮಾಡು
ಹರನಡಿವಿಡಿ ಶಾಂತರೊಡನಾಡು
ಕರುಣವಿರಲಿ ಜೀವರೊಳು ನೀತಿವಿದನಾಗು
ಪೊರ ಪೊರ್ದಿದರನೆಂದು ಬೆಸಸುವ ॥ ೧ ॥

ಅಂತ್ಯ : ಸತ್ಯಂಜಯಂ ಸರ್ವ ಶತ್ಯಂಜಯ ಪಾಲ
ನೇತ್ರಂ ಜಯಂ ಕಾಮ್ಯಾರ್ಥಂ ನಮೋ ॥ ೧೫ ॥
ನಿತ್ಯಂ ಶಿವನಾಮ ಸ್ತುತ್ಯಂ ಹರಸರ್ವ
ಮೃತ್ಯುಂ ದೈವಾಕೃಪಸ್ತಂ ನಮೋ ॥ ೧೬ ॥

ವಿಷಯ : ಈಶ್ವರ, ಗಣಪತಿ, ಪಾರ್ವತಿ ಇವರನ್ನು ಕುರಿತ ತತ್ತ್ವಮಿಶ್ರವಾದ ಹಾಡುಗಳು.

ವಿಶೇಷ : ಈ ಗ್ರಂಥದೊಡನೆ ಗುಂಡುಬ್ರಹ್ಮಯ್ಯಗಳ ಸುವ್ವಿ, ಜೋಗುಳ ಪದ ಬಸವಾಷ್ಟಕ, ಬಸವೇಶ್ವರ ರಗಳೆ, ಬಸವಪವಾಡ, ನುಲಿಯ ಚಂದಯ್ಯ ಗಳ ವಚನ, ಪುರಾತನ ದೇವಿಯರ ತ್ರಿವಿದಿ, ಪುಷ್ಪಾಂಜಲಿ ಸ್ತೋತ್ರಗಳಿವೆ. ಆದರೆ ಗ್ರಂಥದ ಕೊನೆಯ ಪತ್ರಗಳು ಮಿಶ್ರ ವಿಷಯಗಳಿಗೆ ಸಂಬಂಧಿಸಿವೆ. ಹಾಳೆಗಳು ತೆಳುವಾಗಿವೆ.

2052

ಕೆ. ಬಿ. ೩೫೨ ಹಾಡುಗಳು ಹಾಡು

೭.೩" × ೪.೫" ? ?

೭೯ ಪತ್ರ ೧೪ ಪಂಕ್ತಿ ೧೦ ಅಕ್ಷರ

ಆದಿ : ತಿ ಶುಭ್ರ ಜಟಾಧರ ಶಂಕರನೀಗೆ
ಭೂಕೈಲಾಸದಿ ನೆಲಶಿಹ ಯಿಾಶ ನಂಜುಂಡೇಶನಿಗೆ
ಸಿಂಹ್ಮಾಸನೆಯರೆಲ್ಲಾ ಬಂದು ಸೂಸೂಕ
ದಾರತಿಯ ಯಿಾಶ್ವರಗೆ ತಂದು ಬೆಳಗಿದರು ॥ ೨ ॥

ಅಂತ್ಯ : ಸೇವಾ ಸಮಯದಲ್ಲು ಸುಖವೂ ಗೋಪಾಲಾ
ಹಾಗೆ ಸೇವಿಸಿದ ಮೇಲೂ ಸುಖವೂ ಗೋಪಾಲಾ
ಭಾವಿಫಲವು ಭದ್ರಸುಖವು ಗೋಪಾಲಾ ॥

ವಿಷಯ : ಆರತಿ ಮತ್ತು ಶೋಬಾನೆ ಹಾಡುಗಳು.

ವಿಶೇಷ : ಅತ್ಯಂತ ಶಿಥಿಲ ಮತ್ತು ಅಸಮಗ್ರಪ್ರತಿ. ಮಧ್ಯೆ ಕೆಲವು ಪತ್ರಗಳನ್ನು ಹುಳುವು ಪುಡಿ ಮಾಡಿದೆ. ಈ ಪುಸ್ತಕದಲ್ಲಿ ಆರಂಭದ ೧೨ ಪತ್ರಗಳಿಲ್ಲ. ಪತ್ರಸಂಖ್ಯೆ ಸರಿಯಾಗಿಲ್ಲ. ೧೭, ೨೦, ೨೧ ಪತ್ರಗಳು ಹರಿದುಹೋಗಿವೆ. ಮೇಲೆ ಒಟ್ಟು ಪತ್ರಸಂಖ್ಯೆಯನ್ನು ಕೊಟ್ಟದೆ.

2053

ಕೆ. ೧೭೯ ಹಾಲಾಸ್ಯಮಾಹಾತ್ಮ್ಯೆ ಗದ್ಯ

೧೩.೨" × ೨.೨" ಕಳಲೆ ನಂಜರಾಜ ೧೭೪೦

೧-೨೨೩ ಪತ್ರ ೧೨ ಪಂಕ್ತಿ ೫೦ ಅಕ್ಷರ

ಆದಿ : ಶ್ರೀಮದ್ಧಾಲಾಸ್ಯಕ್ಷೇತ್ರ ಮಹಿಮೆಯನ್ನು ಕಂನಡಿಶಿದ್ದ ಬರೆವದಕ್ಕೆ ಶುಭ ಮಸ್ತು ॥

ಶ್ಲೋಕಾ ॥ ಮಾತಾಮಹ ಮಹಾಶೈಲಂ ಮಹತ್ತದ ಪಿತಾಮಹ
ಕಾರಣಂ ಜಗತಾಂ ವಂದೇ ಕಂಠಾದುಪರಿವಾರಣಂ

ಟೀಕು ॥ ಗಿರಿರಾಜನಾದ ಹಿಮವತ್ಪರ್ವತನೆ ಮಾತಾಮಹನಾಗಿಯುಳ್ಳ

ಪಿತಾಮಹನಿಲ್ಲದ ಕಂಠದಿಂದು ಪರಿಭಾಗದಲ್ಲಿ ಗಜಸ್ವರೂಪನಾದ ಜಗತ್ತ್ರಿಗೆ ಕಾರಣನಾದ ತೇಜಸ್ಸನೂ ವಂದಿಸುವೆ। ಯಿಾ ರೀತಿಯಲ್ಲಿ ವಿಘ್ನೇಶ್ವರಗೆ ನಮಸ್ಕಾರವೆಂಬುದರ್ಥ ||

ಅಂತ್ಯ : ಆದಿಯಲ್ಲಿ ನಿಮ್ಮಿಂದಾ ಶ್ರೇಷ್ಠವಾದ ಲಿಂಗವು ಅದ್ಭುತವಾದ ತೀರ್ಥವು ವುತ್ತಮುವಾದ ಶಿವಕ್ಷೆತವು ಹೇಳಲ್ಪಟ್ಟಿತು। ಅದು ಯಂನಿಂದಾ ಹೇಳಲ್ಪಟ್ಟಿತು | ಸಕಲರು ಕಷ್ಟಂಗಳ ದಾಂಟಲಿ। ಸಕಲರು ಭದ್ರಂಗಳ ಪಡೆಯಲಿ ಸಕಲರು ಸದ್ಗತಿಯನ್ನೈದಲಿ | ಸಕಲರಿಗು ಶುಭವಾಗಲಿ। ಯಿಾ ಪ್ರಕಾರ ಸರ್ವಜ್ಞನಾದ ಸೂತಪುರಾಣೀಕನು ಪ್ರಾರ್ಥಿಶಿ ಸಕಲಮುನಿಗಳನು ಕೃಪಾದೃಷ್ಟಿಯಿಂದಾ ಅನಗ್ರಹಿಶಿ ಶಿವಧ್ಯಾನ ಪರನಾದನೂ। ಚಂದ್ರವಂಶೋದ್ಭವರಾದ ಭಾರದ್ವಾಜಗೋತ್ರದ ಆಶ್ವಲಾಯನಸೂತ್ರದ ಋಗ್ವೇದಿಗಳಾದ ಮೈಹಿಶೂರ ದಳವಾಯಿದೊಡ್ಡೈಯನವರ ಪೌತ್ರರಾದ ಕಳಲೆ ವೀರರಾಜೈಯನವರ ಪೌತ್ರರಾದ ನಂಜರಾಜಯ್ಯನವರು ಸ್ಕಾಂದ್ಧಪುರಾಣದೊಳು ಪೇಳಿರ್ದ ಹಾಲಾಸ್ಯ ಪತಿಯಾದ ಸೌಂದರೇಶನ ಅರುವತ್ತು ನಾಲ್ಕು ಲೀಲೆಗಳಂ ಕರ್ನಾಟಕೋಕ್ತಿಯಿಂದಖಿಲರರಿವಂತೆ ಪೇಳಿದ ನಂಜರಾಜ ವಾಣೀವಿಲಾಸವೆಂಬೀ ಕೃತಿಯು ಸಮಾಪ್ತವಾದಲ್ಲಿಗೆ ಮಂಗಳ ಮಹಾ ಶ್ರಿ ||

ವಿಷಯ : ಹಾಲಾಸ್ಯಪತಿ ಸೌಂದರೇಶನ ಅರವತ್ತುನಾಲ್ಕು ಲೀಲೆಗಳು.

ವಿಶೇಷ : ಅಕ್ಷರಗಳು ಸ್ಫುಟವಾಗಿಯೂ ವಿರಳವಾಗಿಯೂ ಇವೆ.

2054

ಕೆ. ೨೬೬	**ಹಾಲಾಸ್ಯಮಾಹಾತ್ಮ್ಯೆ**	ಗದ್ಯ
೨೪" × ೨.೧"	ಕಳಲೆ ನಂಜರಾಜ	೧೬೪೦
೧-೩೨ ಪತ್ರ	೮ ಪಂಕ್ತಿ	೧೦೨ ಅಕ್ಷರ

ಆದಿ : ಶ್ರೀಮದಾಲಾಸ್ಯಕ್ಷೇತ್ರ ಮಹಿಮೆಯುಂನು ಕರ್ನಾಟಕ ಭಾಷೆಯಿಂದ ವಿರಚಿತಮಾದ್ದು ಬರೆಯುವದಕ್ಕೆ ಶುಭಮಸ್ತು ||

ಶ್ಲೋ || ಮಾತಾ ಮಹಾ ಮಹಾಶೈಲಂ ಮಹಸ್ತದ ಪಿತಾಮಹಂಕಾರಣಂ ಜ |
....ಪರಿವಾರಣಂ ||

ಟೀ || ಗಿರಿರಾಜನಾದ ಹಿಮವತ್ಪರ್ವತನೆ ಮಾತಾ ಮಹನಾಗಿಯುಳ್ಳ ಪಿತಾಮಹನಿಲ್ಲದ ಕಂಠದಿಂದುಪರಿಭಾಗದಲ್ಲಿ ಗಜಸ್ವರೂಪನಾದ ಜಗತ್ತಿಗೆ ಕಾರಣನಾದ ತೇಜಸ್ಸನು ವಂದಿಸುವೆ || ಯಿಾ ರೀತಿಯಲ್ಲಿರುವ ವಿಘ್ನೇಶ್ವರಗೆ ನಮಸ್ಕಾರವೆಂಬುದರ್ಥಾ || X X X X ಪೀಠಿಕಾ ವರ್ಣನಂ ಸಮಾಪ್ತಂ ಜಯ ಮಂಗಳಮಹಾ ಶ್ರೀ |

ಮಂಗಳವನೆಮಗೀವುದಿಂದು ತ
ರಂಗಿಧರ ವೃಷಭರಾಜ ತು
ರಂಗ ಜಿತಸಾರಂಗ ದಾನವ ಸರ್ವ ಮಂಗಳೆಯೂ
ತುಂಗಕುಚ ತಟಿ ಕುಂಕುಮಾಂಕಿತ
ಮಂಗಳಾಂಗ ಮಹೀಶ ಪರಶು ಕು
ರಂಗ ವರದಾಭಯ ಕರಾಬ್ಜ ಸುಮೇರು ಕೋದಂಡಾ || ೧ ||

X X X X

ಪಾಶುಪತ ಶಾಸ್ತ್ರಾರ್ಥ ತತ್ವವ
ದೇಕೋತ್ತಮರಂಘ್ರಿ ಸೇವೆಯ
ಲೇಸಿನಿಂದಲಿ ತಿಳಿದು ನಂಜನರೇಂದ್ರನಾಗೀಗಾ
ವ್ಯಾಸಕೃತ ಪೌರಾಣಸೂಕ್ತಿಗ
ಳಾಶಯುವನರಿದಚ್ಚಕಂನಡ
ಭಾಷೆಯಿಂದುಸುರುವೆನು ಹಾಲಾಶ್ಯೈಷಲೀಲೆಗಳಾ || ೧೫ || ಶ್ರೀ

ಶ್ರೀ ಸಾಂಬಾಯ ನಮಃ || ಶ್ರೀಕೈಲಾಸವೆಂದು ಮಹಾಗಿರಿಗಳಲ್ಲಿ ವೃತ್ತಮ ಪರ್ವತವಿರುವುದು. ಅದು ಶ್ರೀಪತಿಯಾದ ನಾರಾಯಣ ಮೊದಲಾದ ದೇವತೆಗಳಿಂದ ಭೋಗಮೋಕ್ಷಂಗಳಿಗೋಸ್ಕರ ಸೇವಿಸಲ್ಪಟ್ಟಿಹದೂ ||

ಅಂತ್ಯ : ಅಲ್ಲಿ ನಾನು ಸೌಂದರೇಶನೆಂಬ ಹೆಸರು ಉಳ್ಳವನಾಗಿ ಸಕಲ ಜನಾನುಗ್ರಹ ತತ್ಪರನಾಗಿಹೆನು | ಆ ಸಕಲ ಶಿವಸ್ಥಾನಗಳಿಗೆ ಆದಿಯಾದ್ದರಿಂದ ಶ್ರೇಷ್ಠವಾದ ಅದ್ಭುತವಾದ ಜೀವನ್ಮುಕ್ತಿಪುರಉ ಯಿಾ ದ್ವಾದಶಾಂತ ಸ್ಥಾನದಲ್ಲಿ ಯಿದ್ದುದಾಗಿ ಪರಮಶಿ ನಾನು ಜಗತ್ತಿಗೆ ಹ್ಯಾಗೆ ಮೂಲಕಾರಣನೊ | ಹಾಗೆ ನಂನ ಕ್ಷೇತ್ರಗಳಿಗೆ ಹಾಲಾಸ್ಯ ಕ್ಷೇತ್ರವು ಮೂಲಕಾರಣವಾಗಿ

ವಿಷಯ : ಹಾಲಾಸ್ಯಕ್ಷೇತ್ರದ ಮಹಿಮೆ.

ವಿಶೇಷ : ಗ್ರಂಥಾರಂಭದಲ್ಲಿ ಶ್ಲೋಕ ಮತ್ತು ಅದಕ್ಕೆ ಟೀಕೂ, ಅನಂತರ ೧೫ ಭಾಮಿನೀಷಟ್ಪದಿಗಳಲ್ಲಿ ಕವಿಯ ವಿಚಾರವನ್ನು ಬರೆದಿದ್ದು ಮುಂದೆ ಗದ್ಯದಲ್ಲಿ ಕಥಾರಂಭವಾಗುತ್ತದೆ. ಬರಹ ಸುಂದರವಾಗಿದೆ. ಅಸಮಗ್ರಪ್ರತಿ.

2055

ಕೆ. ೩೭೭ **ಹಾಲಾಸ್ಯಮಾಹಾತ್ಮ್ಯ** ಗದ್ಯ

೧೯.೧″ × ೨″ ಕಳಲೆ ನಂಜರಾಜ ೧೭೪೦

೧೨೯ ಪತ್ರ ೧೧ ಪಂಕ್ತಿ ೧೦೦ ಅಕ್ಷರ

ಆದಿ : ಶ್ರೀಮದ್ಧಾಲಾಸ್ಯ ಕ್ಷೇತ್ರಮಹಿಮೆಯನ್ನು ಕಂನಡಿಸಿದ್ದ ಬರವುದಕ್ಕೆ ಶುಭಮಸ್ತು

ಮಾತಾಮಹ ಮಹಾಶೈಲಂ ಮಸ್ತದಪಿತಾಮಹಂ
ಕಾರಣಂ ಜಗತಾಂ ವಂದೇ ಕಂಠಾದುಪರಿವಾರಣಂ ॥ ೧ ॥

x x x x

(೨ನೆಯ ಪತ್ರ) ಶ್ರೀಕೈಲಾಸವೆಂದು ವೊಂದು ಮಹಾಗಿರಿಗಳಲ್ಲಿ ವುತ್ತಮವಾದ ಪರ್ವತವಿರುವದು । ಅದು ಶ್ರೀಪತಿಯಾದ ನಾರಾಯಣ ಮೊದಲಾದ ದೇವತೆಗಳಿಂದ ಭೋಗ ಮೋಕ್ಷಂಗಳಿಗೋಸ್ಕರ ಸೇವಿಸಲ್ಪಟ್ಟಹುದು । ಲಕ್ಷ್ಮಿಯ ನಿಮಿತ್ತವಾಗಿ ಕ್ಷೀರಸಮುದ್ರವಂ ಜೈತಿ ಫುಂನತವಾಗಿಹುದು ।

ಅಂತ್ಯ : ಸಕಲರು ಕಷ್ಟಂಗಳ ದಾಂಟಲಿ
ಸಕಲರು ಭದ್ರಂಗಳ ಪಡೆಯಲಿ
ಸಕಲರು ಸದ್ಗತಿಯನೈದಲಿ
ಸಕಲರಿಗೂ ಶುಭವಾಗಲಿ ॥

ಯೀ ಪ್ರಕಾರ ಸರ್ವಜ್ಞನಾದ ಸೂತ ಪೌರಾಣಿಕನು ಪ್ರಾರ್ಥಿಸಿ ಸಕಲ ಮುನಿಗಳನು ಕೃಪಾದೃಷ್ಟಿಯಿಂದನುಗ್ರಹಿಸಿ ಶಿವಧ್ಯಾನಪರನಾದನು ॥ x x

ಕದಂಬವನ ಪ್ರವೇಶವೆಂದು ಪೇಳ್ದಲ್ಲಿಗೆ ಅಧ್ಯಾಯ ೭೧ಕ್ಕಂ ಮಂಗಳ ಮಹಾ ಶ್ರೀ. ಚಂದ್ರವಂಶೋದ್ಭವರಾದ ಭಾರಧ್ವಾಜ ಸಗೋತ್ರದಾಶ್ವಲಾಯನ ಸೂತ್ರದ ರುಗ್ವೇದಿಗಳಾದ ಮಹಿಶೂರ ದಳವಾಯಿ ದೊಡ್ಡೈಯನವರ ಪುತ್ರರಾದ ಕಳಿಲೆ ವೀರರಾಜೈಯನವರ ಪುತ್ರರಾದ ನಂಜರಾಜೈಯ್ಯನವರು

ಸ್ಕಂದಪುರಾಣದೊಳ್ಪೇಳಿದ ಹಾಲಾಸ್ಯ ಪತಿಯಾದ ಸೌಂದರೇಶನ ಆರವತ್ತು ನಾಲ್ಕು ಲೀಲೆಗಳಂ ಕರ್ನಾಟಕೋಕ್ತಿಯಿಂದಖಿಲರರಿವಂತ್ತೆ ಪೇಳಿದ ನಂಜರಾಜ ವಾಣಿವಿಲಾಸವೆಂಬೀ ಕೃತಿಗೆ ಮಂಗಳಮಹಾ ಶ್ರೀ ।

ವಿಷಯ : ಹಾಲಾಸ್ಯ ಕ್ಷೇತ್ರದ ಅಧಿಪತಿಯಾದ ಸೌಂದರೇಶನ ಅರುವತ್ತುನಾಲ್ಕು ಲೀಲೆಗಳ ವರ್ಣನೆ.

ವಿಶೇಷ : ಗ್ರಂಥದ ಆದಿಯಲ್ಲಿ ಸಂಸ್ಕೃತಶ್ಲೋಕಗಳು ಕನ್ನಡಟೀಕೆಯೊಂದಿಗೆ ಇವೆ. ಆಮೇಲೆ ಭಾಮಿನೀಷಟ್ಪದಿಯ ೧೫ ಪದ್ಯಗಳು ಗ್ರಂಥಕರ್ತನ ವಂಶಾವಳಿಯನ್ನು ವಿವರಿಸುತ್ತವೆ. ತರುವಾಯ ಪ್ರಕೃತಗ್ರಂಥ ಗದ್ಯದಲ್ಲಿ ಆರಂಭವಾಗುತ್ತದೆ. ಗ್ರಂಥದ ಕೊನೆಯಲ್ಲಿ ಭಾಗವತಕ್ಕೆ ಸಂಬಂಧಿಸಿದ ಎರಡು ಪತ್ರಗಳು ಕೂಡಿಕೊಂಡಿವೆ. ಗ್ರಂಥದ ಆದಿಯ ಮೊದಲನೆಯ ಪತ್ರದ ಒಂದು ಪಕ್ಕದಲ್ಲಿ ಸ್ವಲ್ಪ ಮುರಿದು ಲುಪ್ತವಾಗಿದೆ.

2056

ಕೆ. ಎ. ೧೦೮	**ಹಾಲಾಸ್ಯಮಾಹಾತ್ಮ್ಯೆ**	ಗದ್ಯ
೧೨.೬"×೭.೭"	ಕಳಲೆ ನಂಜರಾಜ	೧೭೪೦
೧-೨೫೬ ಪತ್ರ	೧೬ ಪಂಕ್ತಿ	೩೪ ಅಕ್ಷರ

ಆದಿ : ಹಾಲಾಸ್ಯಮಹಾತ್ಮ್ಯೆ ॥ ಪೀಠಿಕಾ ಸಂಧಿ ॥

ಗುರುಬ್ರಹ್ಮ ಗುರುರ್ವಿಷ್ಣು ಗುರುದೇವೊ ಮಹೇಶ್ವರ ।
ಗುರುಸಾಕ್ಷಾತ್ಪರಬ್ರಂಹ್ಮ ತಸ್ಮೈ ಶ್ರೀ ಗುರುವೇ ನಮಃ ॥
ವಿಘ್ನಧ್ವಾಂತ ನಿವಾರಣೈಕ X X X X

(೨ನೆಯ ಪತ್ರ) ಶ್ರೀ ಶಿವಪರೇಕ್ಷಣ ಗುಹ ಗಣಪತಿ ಪ್ರಣಾಮಸ್ತುತಿ ಧ್ಯಾನಾದಿಗಳಂ ಮಾಡಿ । ಹಾಲಾಸ್ಯ ಕ್ಷೇತ್ರ ಮಹಿಮೆಯಂ ಪೇಳಲು । ಪೀಠಿಕಾ ರಚನೆಯುಮೀ ಪ್ರಕಾರದಿಂ ಪೇಳಿಹನು ಯಿಂತಿಯಾದಿ ॥ ಪುರಾಣವಾದ ಸ್ಕಾಂದದಲ್ಲಿ ಅಗಸ್ತ್ಯ ಸಂಹಿತೆಯಲ್ಲಿಹ ಹಾಲಾಸ್ಯಮಹಾತ್ಮೆಯಂ । ಕರ್ನಾಟಕ ಭಾಷೆಯಿಂದ ವಿರಚಿಸಲ್ಪಟ್ಟ ಮಹಿಶೂರ ಸೇನಾಧಿಪತಿ ದೊಡ್ಡರಾಜ ಗರ್ಭಾಬ್ಧಿ ಚಂದ್ರ ವೀರರಾಜ ತನೂಭವ ನಂಜರಾಜ ವಾಣಿವಿಲಾಸವೆಂಬೀ ಟೀಕಿನಲ್ಲಿ ಪೀಠಿಕಾವರ್ನನಂ । ಸಮಸ್ತ ಮಂಗಳಮಹಾ ಶ್ರೀ.

X X X X

(೩ನೆಯ ಪತ್ರ) ಮೂರನೆ ಅಧ್ಯಾಯ ॥ ಕೈಲಾಸಗಿರಿ ವರ್ನನೆ ವಿಶ್ವೇಶ್ವರ ಪ್ರಭಾವ ॥ ಶ್ರೀಕೈಲಾಸವೆಂದು । ವಂದು ಮಹಾಗಿರಿಗಳಲ್ಲಿ ವುತ್ತುಮ

ಪರ್ವತವಿರುವದು। ಅದು ಶ್ರೀಪತಿಯಾದ ನಾರಾಯಣ ವೊದಲಾದ ದೇವತೆಗಳಿಂದ।

ಅಂತ್ಯ: ಅಗಸ್ತ್ಯನೆ ಈ ಸಕಲ ಮುನೀಶ್ವರರೊಡಗೂಡಿ ಸರ್ವಸಿದ್ಧಿಗಳಿಗೋಸ್ಕರ ಶ್ರೀ ಹಾಲಾಸ್ಯಕ್ಷೇತ್ರದಲ್ಲಿ ಸರ್ವದಾ ವಾಸವಾಗಿರು ದೇವತೆಗಳಿಗ್ಯು ದುರ್ಲಭವಾದ ವಿವಿಧವಾದ ಭೋಗಸಿಧಿಯಂ ಪಡೆವಿರಿ ಯಂದು ನುಡಿದು X X X X ವೀರರಾಜ ತನೂಭವ ನಂಜರಾಜ ವಾಣೀವಿಲಾಸ ವೆಂಬ ಟೀಕಿನಲ್ಲಿ ವಸಿಷ್ಠಾದಿ ರುಷಿಗಳು ಹಾಲಾಸ್ಯಕ್ಷೇತ್ರಕ್ಕೆ ಬಂದು ಮಹಾತಮನು ಪ್ರತ್ಯಕ್ಷನಾಗಿ ದರುಶನ ಕೊಟ್ಟು ಅದೃಶ್ಯನಾಗಲು ಅಲ್ಲಿ ಮುನಿಗಳು ತಂಮ ತಂಮ ಹೆಸರಿನಿಂದ ಲಿಂಗ ಪ್ರತಿಷ್ಠೆಯಂ ಮಾಡಿ ಸರ್ವದಾ ಯಿರುವರೆಂಬಲ್ಲಿಗೆ ಹಾಲಾಸ್ಯಮಹಾತ್ಮೆ ಸಂಪೂರ್ನ ಮಂಗಳ ಮಹಾ ಶ್ರೀ.

ವಿಷಯ: ಹಾಲಾಸ್ಯ ಕ್ಷೇತ್ರದ ಅಧಿಪತಿಯಾದ ಸೌಂದರೇಶನ ಅರುವತ್ತುನಾಲ್ಕು ಲೀಲೆಗಳ ವರ್ಣನೆ.

ವಿಶೇಷ: ೧೮೨, ೧೮೩ ಕ್ರಮಸಂಖ್ಯೆಯ ಪತ್ರಗಳಿಲ್ಲದಿದ್ದರೂ ವಿಷಯಲೋಪವಿಲ್ಲ.

2057

ಕೆ. ಎ. ೧೯೯	**ಹಾಲಾಸ್ಯಮಾಹಾತ್ಮ್ಯೆ**	ಗದ್ಯ
೧೨.೯" × ೭.೮"	ಕಳಲೆ ನಂಜರಾಜ	೧೭೪೦
೧—೫೧೨ ಪತ್ರ	೨೨ ಪಂಕ್ತಿ	೨೫ ಅಕ್ಷರ

ಆದಿ: ಶ್ರೀಮದ್ಧಾಲಾಸ್ಯಕ್ಷೇತ್ರ ಮಹಿಮೆಯನ್ನು ಕನ್ನಡಿಸಿದ್ದ ಬರಿಯುವುದಕ್ಕೆ ಶುಭಮಸ್ತು ॥

ಶ್ಲೋ॥ ಮಾತಾಮಹ ಮಹಾಶೈಲಂ ಮಹನ್ತದಪಿತಾಮಹಂ ।
ಕಾರಣಂ ಜಗತಾಂ ವಂದೇ ಕಂಠಾದುಪರಿವಾರಣಂ ॥ ೧ ॥

ಟೀಕು ॥ ಗಿರಿರಾಜನಾದ ಹಿಮುವತ್ಪರ್ವತನ ಮಾತಾಮಹನಾಗಿಯುಳ್ಳ ಪಿತಾ ಮಹನಿಲ್ಲದ ಕಂಠದಿಂದುಪರಿಭಾಗದಲ್ಲಿ ಗಜಸ್ವರೂಪನಾದ ಜಗತ್ತಿಗೆ ಕಾರಣನಾದ ತೇಜಸ್ಸನು ವಂದಿಸುವೆ. ಯಾರೀತಿಯುಳ್ಳವನ ವಿಘ್ನೇಶ್ವರಗೆ ನಮುಸ್ಕಾರವೆಂಬುದರ್ಥಾ ॥ ೧ ॥

X X X X

(೮ನೆಯ ಪತ್ರ) ಶ್ರೀ ಕೈಲಾಸವೆಂದು ವಂದು ಮಹಾಗಿರಿಗಳಲ್ಲಿ ವುತ್ತಮ ಪರ್ವತವಿರುವದು। ಅದು ಶ್ರೀಪತಿಯಾದ ನಾರಾಯಣ ಮೊದಲಾದ ದೇವತೆಗಳಿಂದ ಭೋಗಮೋಕ್ಷಂಗಳಿಗೋಸ್ಕರ ಸೇವಿಸಲ್ಪಟ್ಟಿಹುದು।

ಅಂತ್ಯ: ಸಕಲರು ಕಷ್ಟಂಗಳ ದಾಂಟಲಿ
ಸಕಲರು ಭದ್ರಂಗಳ ಪಡೆಯಲಿ
ಸಕಲರು ಸದ್ಗತಿಯನೈದಲೀ ಸಕಲರಿಗು ಶುಭವಾಗಲಿ ॥

ಯಿಾ ಪ್ರಕಾರ ಸರ್ವಜ್ಞನಾದ ಸೂತಪುರಾಣೀಕನು ಪ್ರಾರ್ಥಿಸಿ ಸಕಲಮುನಿಗಳನು ಕೃಪಾದೃಷ್ಟಿಯಿಂದ.... .. ಶಿವಧ್ಯಾನಪರನಾದನು। ಶ್ರೀ ಶ್ರೀ

ಚಂದ್ರವಂಶೋದ್ಭವರಾದ ಭಾರದ್ವಾಜ ಸಗೋತ್ರದಾಶ್ವಲಾಯನಸೂತ್ರರುಗ್ವೇದಿಗಳಾದ ಮಹಿಸೂರ ದಳವಾಯ ದೊಡ್ಡೈನವರ ಪವುತ್ರರಾದ ಕಳಲೆ ವೀರರಾಜೈಯನವರ ಪುತ್ರರಾದ ನಂಜರಾಜೈಯ್ಯನವರು ಸ್ಕಂದಪುರಾಣದೊಳ್ಪೇಳಿರ್ದ್ದ ಹಾಲಾಸ್ಯಪತಿಯಾದ ಸವುಂದರೇಶನ ಅರುವತ್ತುನಾಲ್ಕು ಲೀಲೆಗಳಂ ಕರ್ನಾಟಕೋಕ್ತಿಯಿಂದಖಿಲರರಿವಂತೆ ಪೇಳಿದ ನಂಜರಾಜವಾಣೀವಿಲಾಸವೆಂಬೀ ಟೀಕಿನಲ್ಲಿ ಆಗಸ್ತ್ಯವಶಿಷ್ಠಾದ್ಯನಂತ ಮುನಿಗಳಿಗೆ ಆನಂದ ಕಾನನದಿಂದ ಕದಂಬವನ ಪ್ರವೇಶವೆಂದು ಪೇಳ್ದಲ್ಲಿಗೆ ಅಧ್ಯಾಯ ೭೧ಕ್ಕಂ ಮಂಗಳಮಹಾ ಶ್ರೀ ॥

ವಿಷಯ: ಹಾಲಾಸ್ಯಕ್ಷೇತ್ರದ ಅಧಿಪತಿಯಾದ ಸೌಂದರೇಶನ ಅರುವತ್ತುನಾಲ್ಕು ಲೀಲೆಗಳ ವರ್ಣನೆ.

ವಿಶೇಷ: ಗ್ರಂಥದ ಆದಿಯ ಬೇರೆ ಎರಡು ಪತ್ರಗಳಲ್ಲಿ ವಿಷಯಾನುಕ್ರಮಣಿಕೆಯಿದೆ. ತರುವಾಯ ಪತ್ರ ೧–೪ರಲ್ಲು ೧೧ ಸಂಸ್ಕೃತಶ್ಲೋಕಗಳು ಕನ್ನಡ ಟೀಕೆಯಿಂದ ಕೂಡಿರುವುದಲ್ಲದೆ, ಕೊನೆಯಲ್ಲಿ ಒಂದು ವಚನವೂ ಇದ್ದು, ಬರೆದ ಕವಿಯ ಹೆಸರು ಸೂಚಿತವಾಗಿದೆ. ಆಮೇಲೆ ಪತ್ರ ೫–೭ರಲ್ಲಿ ಎಂದರೆ ಭಾಮಿನೀಷಟ್ಪದಿರೂಪವಾದ ೧೫ಪದ್ಯಗಳಲ್ಲಿ ಗ್ರಂಥಕರ್ತನ ವಿಚಾರ ಮತ್ತು ವಂಶವೃಕ್ಷ ಹೇಳಿದೆ. ಬಳಿಕ ಗದ್ಯರೂಪವಾಗಿ ಗ್ರಂಥ ಆರಂಭವಾಗುತ್ತದೆ. ಗ್ರಂಥದ ಆದಿಯಲ್ಲಿ ವಿಷಯಾನುಕ್ರಮಣಿಕೆಯಿಂದ ಕೂಡಿದ ಎರಡು ಪತ್ರಗಳು ಹೊರತು, ಉಳಿದುವೆಲ್ಲವೂ ಒಂದೇ ಕಡೆ ಬರೆಯಲ್ಪಟ್ಟಿವೆ. ಗ್ರಂಥದ ಆದಿಯ ಎರಡುಮೂರು ಪತ್ರಗಳೂ, ಕೊನೆಯ ಎರಡು ಪತ್ರಗಳೂ ಸ್ವಲ್ಪ ಸ್ವಲ್ಪ ಹರಿದು ಶಿಥಿಲವಾಗಿವೆ.

2058

ಕೆ. ೩೩೪ ಹಿತೋಪದೇಶಟೀಕು ಶ್ಲೋಕ, ಟೀಕು

೧೪.೧" × ೧.೩" ? ?

೩೨-೨೭೮ ಪತ್ರ ೬ ಪಂಕ್ತಿ ೬೦ ಅಕ್ಷರ

ಆದಿ : ತ್ಥಾಸ್ತ್ರೀ ಸ್ತ್ರೀಯು ಸುಸೇವಿತಃ ಸು ಚೆನ್ನಾಗಿ ಸೇವಿತಃ ಸೇವಿಸಲುಪಟ್ಟಂಥಾ ನೃಪತಿಃ ಅರಸು ಸುಚಿಂತ್ಯ ಸು ಚೆನ್ನಾಗಿ ಚಿಂತ್ಯ ಚಿಂತಿಸಿ ಉಕ್ತಂ ಚ ಹೇಳಲ್ಪಟ್ಟದ್ದನ್ನು ಸುವಿಚಾರ್ಯ ಚೆನ್ನಾಗಿ ವಿಚಾರಿಸಿ ಯತ್ ಯಾವ ಕಾರ್ಯವೂ ಕೃತಂ ಮಾಡಲ್ಪಡುತಿದಿಯೋ ತತ್ ಆ ಕಾರ್ಯವು ಸುದೀರ್ಘೆ ಕಾಲೇ ಬಹು ಕಾಲದಲ್ಲಿಯೂ ವಿಕ್ರಿಯಾಂ ವಿಕಾರವನ್ನು ನಯಾತಿ ಹೊಂದದೂ ॥ವ॥ ಎತದ್ವಚನಂ ಶ್ರುತ್ವಾ ಕಶ್ಚಿತ್ಕಪೋತಃ ಸದರ್ಪಮಾಹ ॥ ಟೀ॥ ಕಶ್ಚಿತ್ ವಂದಾನೊಂದು ಕಪೋತ ಕಪೋತ ಪಕ್ಷಿಯು ಏತತ್ ಈ ವಾಕ್ಯ ವನ್ನು ಶ್ರುತ್ವಾ ಕೇಳಿ ಸದರ್ಪಂ ಗರ್ವದಿಂದ ಕೂಡೋಣ ಹ್ಯಾಣಿ ಹ್ಯಾಗೆ ಆಹ ನುಡಿತು ॥

ಅಂತ್ಯ : ಚಕ್ರವಾಕೋ ಬ್ರೂತೆ ಚಕ್ರವಾಕನು ಬ್ರೂತೆ ನುಡಿದನು

ಶ್ಲೋ॥ ಯೋ ಕಾರ್ಯಂ ಕಾರ್ಯವಚ್ಛಾಸ್ತಿ ಸ ಕಿಂ ಮಂತ್ರೀ ನೃಪೇಚ್ಛಯಾ
ವರಂ ಸ್ವಾಮಿ ಮನೋದುಃಖಂ ತೇನ ಶಾಸೇದಕಾರ್ಯತಃ ॥

ಟೀ॥ ಯಃ ಯಾವ ಮಂತ್ರಿಯು ನೃಪೇಚ್ಛಯಾ ನೃಪ ಅರಸಿನ ಯಿಚ್ಛಯಾ ಯಿಚ್ಛೆಯಿಂದ ಕಾರ್ಯಂ ಕಾ೯ರ್ಯವು ಕಾರ್ಯವತ ಕಾರ್ಯದೋಪಾದಿಯಲ್ಲಿ ಶಾಸ್ತಿ ರಕ್ಷಿಸುತ್ತಾನೋ x x x x ದುಃಖಂ ದುಃಖವನ್ನು ನ ಶಾಸೇತ್ ರಕ್ಷಿಸದೇ ಹೋಗುತಾನೋ ತತ್ ಅದು ವರಂ ಶ್ರೇಷ್ಠವೂ ॥

ಶ್ಲೋ॥ ವೈದ್ಯೋ ಗುರುಶ್ಚ ಮಂತ್ರೀ ಚ ಯಸ್ಯರಾಜ್ಞಃ ಪ್ರಿಯಂವದಾಃ
ಶರೀರ ಧರ್ಮಕೋಶೇಭಃ ಕ್ಷಿಪ್ರಂ ಸ ಪರಿಹೀಯತೆ ॥

ಟೀ॥ ವೈದ್ಯಃ ವೈದ್ಯನು ಗುರುಶ್ಚ ಗುರುವನ್ನು ಮಂತ್ರೀ ಚ ಮಂತ್ರಿಯನ್ನು ಯಸ್ಯ ರಾಜ್ಞಃ ಯಾವ ಅರಸಿಗೆ ಪ್ರಿಯಂವದಾಃ ಪ್ರಿಯವನ್ನು ಹೇಳು ತ್ತಾರೊ .. ....

ವಿಷಯ : ನೀತಿ.

ವಿಶೇಷ : ಗ್ರಂಥ ಸ್ವಲ್ಪ ಶಿಥಿಲ. ೩೨ನೆಯ ಪತ್ರದಿಂದ ೨೭೮ನೆಯ ಪತ್ರದವರೆಗೆ ಇದೆ. ೪೮, ೬೫, ೧೧೬-೧೧೮, ೧೭೭ನೆಯ ಪತ್ರಗಳು ಲುಪ್ತ. ೪೫, ೧೧೪ ಕ್ರಮಸಂಖ್ಯೆಯ ಎರಡೆರಡು ಪತ್ರಗಳಿವೆ.

2059

ಕೆ. ೭೫|೨ ಹಿರಿಯಮಂತ್ರ ಗೋಪ್ಯ (ಸವಾಚ್ಯ) ಗೀತ, ಪದ್ಯ
೧೧.೭″ × ೨.೨″ ಚನ್ನಬಸವೇಶ್ವರದೇವರು ೧೧೬೦
೪೦-೪೨ ಪತ್ರ ೧೭ ಪಂಕ್ತಿ ೭೫ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ‖ ಚೆಂನಬಸವೇಶ್ವರದೇವರು ನಿರೂಪಿಸಿದ ಹಿರಿಯಮಂತ್ರ ಗೋಪ್ಯ ‖
ಪಲ್ಲವ‖ ನೋಡಲಿಲ್ಲ | ನುಡಿಯಃಲಿಲ್ಲ ಮಾಡಲಿಲ್ಲದ ಪ್ರತಿಮಂಗೊಡಲುಯಿಲ್ಲ ‖
ಸೂತ್ರ‖ ಯೀಪಲ್ಲವ ಪದನೆಂದು ಸೂತ್ರ ಸೂತ್ರವೆಂದು । ಮುಂದೆ ಹೇಳುವ ಯೆಲ್ಲಾ ಪದಂಗಳರ್ತ್ಥವನು ಸಂಕೋಚವಾಗಿ ಗರ್ಭ್ಭೀಕರಿಸಿಕೊಂಡಿಹುದೆಂದಱುವುದು| ಅದೆಂತೆಂದೊಡೆ । ಯಲ್ಲಾ ಪದಂಗಳರ್ತ್ಥವು । ಯೀ ಪಲ್ಲವ ಪದನೆನಿಸುವ ಮೂಲಸೂತ್ರದಲ್ಲಿಯೆ ಗರ್ಭ್ಭೀಕೃತವಾಗಿ ಬೀಜದೊಳಗಡಗಿದ ವೃಕ್ಷದಂತೆ । ತೋಱಕೆಯಿಲ್ಲದೆ ತೋಱಲುಳ್ಳದೆಂದಱುವುದು । ಅದೆಂತೆಂದೊಡೆ । ಶಿವಜೀವರುಗಳೇಕಾರ್ತ್ಥವೆಂಬುದು । ಯಿತರ ಮಾರ್ಗ್ಗಗಂಗಳಲ್ಲಿ ಶಬ್ದಾಡಂಬರದಿಂದುಲಿದು । ತತ್ವಮಶ್ಯಾದಿ ವಾಕ್ಯಾರ್ತ್ಥಂಗಳಲ್ಲಿ ಸಂಬಂಧಿಸಿ.

ಅಂತ್ಯ : ಯಿಂತೀ ನಿರ್ಭಾವ ಪ್ರಸಾದ ಪ್ರಸಂನ ಮಹಾಘನಲಿಂಗ ಕೂಡಲ ಚೆಂನ ಸಂಗೈಯ್ಯನಲ್ಲಿ । ಯೇಕಾರ್ತ್ಥವಾದ ಭೇದವು ಸಾಧಕತ್ವವು । ಅನುಭಾವ ಮೂರ್ತ್ತಿ ಪರಮಜಂಗಮ ಪ್ರಭುದೇವರ ಕರುಣ ಬಸವಂಣಂಗಾಯಿತ್ತೆಂದು ಚೆಂನಬಸವೇಶ್ವರದೇವರು ನಿರೂಪಮಂ ಕೊಡುತ್ತಂವಿದ್ದಾರೂ ‖ ೨೭ ‖ ಮಂತ್ರಗೋಪ್ಯ ಸಮಾಪ್ತ ಮಂಗಳಮಹಾ ಶ್ರೀ ‖

ವಿಷಯ : ವೀರಶೈವ ರಹಸ್ಯ.

ವಿಶೇಷ : ಸಮಗ್ರ. ಶಕಟರೇಫವಿದೆ. ಇದರೊಂದಿಗೆ ಪದಮಂತ್ರಗೋಪ್ಯ, ಮಂತ್ರ ಗೋಪ್ಯ ಮೊದಲಾದ ಇತರ ೧೨ ಗ್ರಂಥಗಳಿವೆ.

2060

ಕೆ ಎ. ೬೭|೨ ಹೊಯ್ಸಳರಾಜರ ಚರಿತ್ರೆ ಚಂಪು
೧೨.೯″ × ೭.೯″ ? ೧೬ನೆಯ ಶತಕ
೪೬೦-೪೭೭ ಪತ್ರ ೨೬ ಪಂಕ್ತಿ ೨೪ ಅಕ್ಷರ

ಆದಿ : ಜಯತು ಜಗತು ನಿತ್ಯಂ ಜೈನ ಸಂಘೋ ದಯಾಖ್ಯಃ
ಪ್ರಭವತು ಜಿನಯೋಗಿವ್ರಾತ ಪದ್ಮಾಕರ ಶ್ರೀ.

ಸಮುದಯತುಜಸಮ್ಯಗ್ದರ್ಶನ ಜ್ಞಾನವೃತ್ತಿ
ಪ್ರಕಟಿತ ಗುಣಭಾಸ್ವದ್ಭವ್ಯ ಚಕ್ರಾನುರಾಗಃ ॥ ೧ ॥

X X X X

ವೃ ॥ ನೆರೆದುರಿ ಭೂರ್ಭುಗಿಲ್ಬುಗಿಲೆನುತಂಮುಗೂರ್ವ್ವಿಸಿ ಪರ್ವ್ವೆ ನೀಳ್ದ ನಾ
ಲಗೆಗಳ ತಕ್ಕೆ ತಕ್ಕಿಸೆ ನಭಸ್ಥಲವಂ ಬಿರುಘಾಳಿಯೇಳ್ಗೆಯಿಂ ಮಿಗೆ
ಪುರಮ ಮುಸುಂಕೆ ಕಿಡಿ ಕಂಣಿದೆ ಶಾಲೆಗೆ ದೇಹಿ ಸಂಕುಲಂ
ನಗರದೊಳೊಂದನೊಂದೆಡೆ ಮದ-ಬಿಡೆ ಬಿಳ್ತರೆ ಬೀದಿಬೀದಿಯೊಳ್ ॥ ೪ ॥

ವ॥ ಆಗಳು ದಕ್ಷಿಣ ಮಧುರೆಯೊಳು ತೂನ ಪಾಂಡ್ಯಮಹೀಪತಿಯು ಲಿಂಗ ಧಾರಣೆಯಂ ಮಾಡುತ್ತಿರೆ ಜಿನಮುನಿಗಳು ಹೇಳೆ ಕೇಳದಿರೆ ಶಶಕಪುರಕಂ ಬಂದು.

ಅಂತ್ಯ : ಆತನ ಮಗ ಟೇಪುಸುಲತಾನ ಹೊಂನಳಿಯಿಂದ ಬಂದ ಬಲವನೆಲ್ಲಾ ಸ್ವಾಧೀನಮಾಡಿಕೊಂಡು ನಗರ ತೊಡೆಯಾಲ ಸಾಧಿಸಿಕೊಂಡು ಶ್ರೀರಂಗ ಪಟ್ಟಣಕ್ಕೆ ಬಂದು X X X X ಚಾಮರಾಜ ಭೂಪರ್ಗುದಿಸಿದ ೫ ವರುಷದ ಮಗುವಿಗೆ ಪಟ್ಟಾ ಕಟ್ಟಿ ಹಿಂಡಕ್ಕೆ ದೊರೆಗಳ ದಿವಸದ ಪ್ರಕಾರಕೆ ದೇವಸ್ಥಾನ ಮೊದಲಾದವನೆಲ್ಲ ವುದ್ಧಾರ ಮಾಡಿಸಿ ಯೆಂದು ಶಕವರುಷ ೧೭೨೧ನೆಯ ಸಿದ್ಧಾರ್ಥಿ ಸಂವತ್ಸರದ

ವಿಷಯ : ಹೊಯ್ಸಳವಂಶದ ರಾಜರ ಚರಿತ್ರೆ.

ವಿಶೇಷ : ವಿವರವು ಅಸಮಗ್ರವಾಗಿದೆ. ಇದೇ ಪುಸ್ತಕದಲ್ಲಿ ನೇಮಿನಾಥಪುರಾಣ ವೆಂಬ ಕೃತಿ ಇದೆ. ೪೭೩ನೆಯ ಪತ್ರದಿಂದ ಮುಂದಕ್ಕೆ ಈ ಕೃತಿಯ ವಿವರವು ಗದ್ಯದಲ್ಲಿದೆ.

2061

ಕೆ.ಎ. ೧೦೩	**ಹೊಸಗನ್ನಡ ನುಡಿಗನ್ನಡಿ**	ಗದ್ಯ
೧೧.೫"×೮.೮"	ಕೃಷ್ಣಾಚಾರ್ಯ	೧೯೦೦
೧–೨೧೬ ಪುಟ	೨೬ ಪಂಕ್ತಿ	೨೫ ಅಕ್ಷರ

ಆದಿ : ಶ್ರೀರಮಣನ ಪದಕಮಲವ ಶಿರದಿಂ ಸಾಷ್ಟಾಂಗಮೆರಗಿ ಕೃಷ್ಣಾಚಾರ್ಯಂ ಶ್ರೀರಂಗಪುರನಿಕೇತಂ ಬರೆದನು ಹೊಸಗನ್ನಡ ನುಡಿಗನ್ನಡಿಯೊಲವಾ

X X X X

ಶ್ರೀ ಹೊಸಗಂನಡ ನುಡಿಗಂನಡಿ ಸಂಜ್ಞಾಪ್ರಕರಣ

ಪ್ರಶ್ನೆ	ಉತ್ತರ
೧. ಕನ್ನಡ ಮಾತೆಷ್ಟು ವಿಧ ವಾಗಿರುವುದು	ಹೊಸಗನ್ನಡವೆಂತಲೂ ಹಳಗನ್ನಡವೆಂತಲೂ ಎರಡುವಿಧವಾಗಿರುವುದು.
೨. ಹೊಸಗನ್ನಡವು ಯಾವುದು.	ಕರ್ಣಾಟಕ ದೇಶದಲ್ಲೀಗಿನ ಹಿರಿಯವರು ಮಾತನಾಡಿಕೊಳ್ಳುವ ಮಾತು.

ಅಂತ್ಯ :

ಪ್ರಶ್ನೆ	ಉತ್ತರ
೧೧೨. ಕನ್ನಡ ವ್ಯಾಕರಣ ವಿಷಯ ಗಿನ್ನೂ ಹೇಳಬೇಕಾದ ವಿಷಯ ವುಂಟೊ.	ಬಹಳವುಂಟು. ಅವುಗಳನ್ನು ಹಳಗನ್ನಡ ವ್ಯಾಕರಣದಲ್ಲಿ ವಿಸ್ತಾರವಾಗಿ ಹೇಳು ವದ್ದರಿಂದಲ್ಲಿ ನೋಡಿಕೊಳ್ಳುವದು.

ಇಂತು ೧೧ನೆ ಪ್ರಯೋಗ ಪ್ರಕರಣ ಮುಗಿಯಿತು. ಇಂತು ಹೊಸಗನ್ನಡ ನುಡಿಗನ್ನಡಿಯೆಂಬ ವ್ಯಾಕರಣವು ಮುಗಿಯಿತು.

ವಿಷಯ : ವ್ಯಾಕರಣ.

ವಿಶೇಷ : ಇದು ಕಲ್ಲಚ್ಚಿನ ಪ್ರತಿ. ಅಚ್ಚಾದ ಕಾಲ ಇಲ್ಲ. ಗ್ರಂಥದ ಆದಿಯಲ್ಲಿ ಮುನ್ನುಡಿ, ವಿಷಯ ಸೂಚಿ ಮೊದಲಾದುವನ್ನೊಳಗೊಂಡ ಬೇರೆ ಏಳು ಪತ್ರಗಳಿವೆ. ಈ ಗ್ರಂಥದಲ್ಲಿರುವ ವ್ಯಾಕರಣವು ಪ್ರಶ್ನೋತ್ತರ ರೂಪ ದಲ್ಲಿದೆ.

2062

ಕೆ. ಎ. ೨೭೪/೨	**ಹೊಳೇಹೊನ್ನೂರು ಕೈಫಿಯತ್ತು**	ಗದ್ಯ
೧೨.೯"×೮.೧"	?	೧೮ನೆಯ ಶತಕ
೧-೧೧ ಪುಟ	೨೪ ಪಂಕ್ತಿ	೨೪ ಅಕ್ಷರ

ಆದಿ : ಹೊಳೇಹೊನ್ನೂರು ಕೈಫಿಯತ್ತು.

ಕಲಿಯುಗದಲ್ಲಿ ಶ್ಯಾಲಿವಾಹನಶಕ ೧೯೯೧ನೇ ಶತಕದಲ್ಲಿ ದೋರಸಮುದ್ರದಲ್ಲಿ ಬಳ್ಳಾಳರಾಯರು ರಾಜ್ಯವನಾಳು ... .. ಯಿಾ ಸ್ತಳ ಅರಣ್ಯವಾಗಿರುವ ಬಳ್ಳರರಾಯನ ಪುತ್ರನಾದ ವಿನಯಾದಿತ್ಯ ಬಳ್ಳಾಳರ ವಂಶದಲ್ಲಿ ಪ್ರಾಥಮಿಕ ಸುಮಾದಿ ರಾಜ್ಯಭಾರ ಮಾಡುವ ಕಾಲದಲ್ಲಿ ಯಿರ್ತಗೆತಾರಿ ರೋಂಗಯಿಪ್ಪದಲ್ಲಿದ್ದ ಹರಿಹಾರಾರ್ಥ ವಾದಿ ಸಮಸ್ತ ನದಿಗಳಲ್ಲಿ ಸ್ನಾನ ವಂನ್ನು ಮಾಡುವ ಬಗೆ। ಯಿಾ ಸ್ತಳಕ್ಕೆ ಬಂದುಯಿದ್ದಲ್ಲಿ ಯಿಾ ಕುಷ್ಟ ರೋಗ ಪೂರ್ವಜನ್ಮದ ಪರಿಪಾಕದಿಂದ। ಯಿಾ ಸ್ತಳಕ್ಕೆ ತಂನ್ನ ದಂಡು ಸಹವಾಗಿ। ಬಂದು ಮೂರುದಿನ ತಾಮು ದೂಡಿ ಮೂರಾವರ್ತಿ ಮೂರು ಸ್ನಾನವಂನ್ನು ಮಾಡಿದರಿಂದಾ ಆತಗೆ ಮೂರುದಿವಸದ ಮೇಲೆ ಬಹಳ ಗುಣ ಕಂಡದರಿಂದಾ ಯಿಾ ಸ್ತಳ ಮಹಾಸ್ತಳವೆಂಬುದಾಗಿ ತ್ರಿಸ್ತಳವೆಂದ್ಯು ಅಲ್ಲಿಗೆ ಶಕವರ್ಷ ೯೯೧ನೆಯ ಸಾಧಾರಣ ಸಂವತ್ಸರದಲ್ಲಿ ಸಂಣದಾಗಿ.

ಅಂತ್ಯ : ಸೋಮಸೇಕರ ನಾಯಕದ ಕಾಲಕ್ಕೆ ಮೇಲೆ ಬರದ ಪಾರಪತ್ಯಗಾರ ಕಿಲ್ಲೇದಾರಸಯಿದ್ದರು। ಯಿವರ ಪ್ರಭುತ್ವದಲ್ಲಿ ಬೆಂಕಿಪುರ ನಾಡು ೫೪ ಗ್ರಾಮಗಳು ಹೊಳೆಹೊಂನ್ನೂರು ಶೀಮೆಯಿಂದ ತೆಗದ್ದು ಬೇರೆ ತೆಗದು ತಲೋಕುಮಾಡ್ತಿ ಆ ತಲೂಕಿಗೆ ವಬ್ಬ ಪಾರುಪರ್ತ್ಯಗಾರ ಮುಕರಾಸು ಮಾಡಿದ್ದು ಬಸವಪ್ಪನಾಯಕನ ಕಾಲದಲ್ಲಿ ಲಿಂಗಪ್ಪನಾಯಕನಿಗೆ ಕಿಲ್ಲೇದಾಸ ಕೊಟ್ಟು ಹೊನ್ನಪ್ಪಯ್ಯಗೆ ಪಾರುಪತ್ತ್ಯರ್ತನವನ್ನು ಕೊಟ್ಟನು. ಯಿವರು ವರುಷ ೧೫ ಪರ್ಯಂತ್ರ ಆಳಿದರು. ವೀರಮ್ಮಾಜಿ ಕಾಲಕೆ ಸೋಮ ಸೇಕರನಾಯಕ ಅಂಡಿಗೆ ಲಿಂಗಪ್ಪ.

ವಿಷಯ : ಹೊಳೆಹೊನ್ನೂರಿನ ಚರಿತ್ರೆ.

ವಿಶೇಷ : ಇದೇ ಪುಸ್ತಕದಲ್ಲಿ ಬೆಟ್ಟದಪುರಸ್ಥಲ ಮಾಹಾತ್ಮ್ಯೆ ಸಂಸ್ಕೃತವೆಂಬ ಸ್ಕಾಂದಪುರಾಣಾಂತರ್ಗತ ಮಾಹಾತ್ಮ್ಯವಿದೆ.

2063

ಕೆ. ೨೨೫/೬	**ಹೋಳಿನ ಹಂಪಯ್ಯನ ಸ್ತುತಿ**	ಹಾಡು
೧೩″ × ೧.೫″	?	?
೧೦೮-೧೧೨ ಪತ್ರ	೫ ಪಂಕ್ತಿ	೪೦ ಅಕ್ಷರ

ಆದಿ :

ರಾಗ ॥ ವರದ ಬಸವ ಸಲಯೆಂನ್ನ ಬೇಡಿದ
ವರವೀನ ದೊರೆಯೆಂದು ನಂಬಿದೆ ನಿಂನ್ನಾ ॥ ಪ ॥

ದುರುಳತನದಿ ನಾನಾ ಹಿಂದೆ
ನಿಂನಾ ಮರೆದ ಕಾರಣದಿಂದ ಭವದೊಳು ಬಂದೆ
ಅರಿವರ್ಗದೊಳು ಬಹುನ್ನೊಂದೆ ನಿಂನ
ಕರುಣ ಕಟಕ್ಷದಿ ನೋಡೆಂನ ತಂದೆಲವ ॥ ೧ ॥

ಅಂತ್ಯ : ನಾನಾ ಬಗೆ ಪುಷ್ಪದಲ್ಲಿ ಸ್ವಾಮಿಯ ಪೂಜೆಯ ಮಾಡಿ
ನಾನ ಜನ್ಮದಿ ತೊಳಲಿ ಬಳಲೀ ಬಿಡದೆ ಆವಾಗ
ನಿಮ್ಮೈಯ್ಯ ಪಾದಸೇವೆಯೊಳಗಿರಿಸೆಂಥ ಜಾಣನವುದೊ
ಹುರದ ಲಿಂಗಪಾದವಾರೊ ॥ ೫ ॥

ವಿಷಯ : ಸ್ತುತಿ.

ವಿಶೇಷ : ಪ್ರತಿ ಅಸಮಗ್ರವಾಗಿದೆ. ಈ ಕಟ್ಟಿನಲ್ಲಿ ಷಟ್ಸ್ಥಲ, ಶಿವಭಕ್ತಿಸಾರ ಮೊದಲಾದ ಇತರ ಗ್ರಂಥಗಳಿವೆ.

ಪರಿಶಿಷ್ಟ

ಕನ್ನಡ ಹಸ್ತಪ್ರತಿಗಳಲ್ಲಿ ಸೇರಿರುವ ಸಂಸ್ಕೃತ ಗ್ರಂಥಗಳು

	ಗ್ರಂಥಾಂಕ	ಗ್ರಂಥದ ಹೆಸರು	ಪತ್ರಸಂಖ್ಯೆ	ಸಮಗ್ರವೇ
1	ಕೆ. ೩೨೩–೮	ಅಕ್ಷರಮಾಲಿಕಾಗದ್ಯ	೮೬–೮೭	ಅಸಮಗ್ರ
2	ಕೆ. ೩೬೯–೨೧	ಅನಾಮಯಸ್ತೋತ್ರ	೧೮೫–೧೮೯	ಸಮಗ್ರ
3	ಕೆ. ೨೨೨–೧	ಅನ್ನಪೂರ್ಣಸ್ತೋತ್ರ ಇತ್ಯಾದಿ	೩–೧೩	ಅಸಮಗ್ರ
4	ಕೆ. ೪೬೮–೯	ಅನ್ನಪೂರ್ಣಾಷ್ಟಕ	೩೨–೩೩	,,
5	ಕೆ. ಎ. ೨೫೦–೯	,,	೧–೧೧	ಸಮಗ್ರ
6	ಕೆ. ೩೭೦–೩	ಅಮರಸಿಂಹದಾದಿ ಗ್ರಂಥ	೫–೧೧	,,
7	ಕೆ. ಎ. ೧೭೪	ಅಷ್ಟಾವರಣದ ಗ್ರಂಥ	೧–೧೦	,,
8	ಕೆ. ೩೨೩–೧೧	ಅಷ್ಟೋತ್ತರ ಶತನಾಮಗದ್ಯ	೯೪–೯೭	,,
9	ಕೆ. ಬಿ. ೩೨೫–೨	ಆಗಮವಿಸ್ತಾರ ನಿರ್ಣಯ	೨೦೩–೨೦೭	ಅಸಮಗ್ರ
10	ಕೆ. ೩೨೩–೧೩	ಉದಾಹರಣ ಗದ್ಯ	೧೦೦–೧೦೫	ಸಮಗ್ರ
11	ಕೆ.ಎ. ೨೫೦–೧೦	ಉಮಾಷ್ಟೋತ್ತರ	೧–೫	,,
12	ಕೆ. ಬಿ. ೨೯೦–೩	ಏಕಾಕ್ಷರ ನಿಘಂಟು	೭–೧೦	,,
13	ಕೆ. ೧೬೮–೨	ಕಾರಕ ಲಕ್ಷಣಂ	೧೦೯–೧೧೪	ಅಸಮಗ್ರ
14	ಕೆ. ೩೫೫–೧೭	ಗುರುಸ್ತೋತ್ರ	೧೮೭–೧೮೮	ಸಮಗ್ರ
15	ಕೆ.ಎ. ೨೬೦–೧	ಚಾಟುಗ್ರಂಥ	೧೫	,,
16	ಕೆ.ಎ. ೩೪೦–೬	,,	೮೦–೧೦೨	,,
17	ಕೆ.ಬಿ. ೩೪೦–೧	,,	೨೯	,,
18	ಕೆ.ಬಿ. ೩೪೦–೬	,,	೮೦–೧೦೨	ಅಸಮಗ್ರ
19	ಕೆ.ಬಿ. ೨೬೦–೩	ಜಿನಸಹಸ್ರನಾಮ	೧೩–೧೫	ಸಮಗ್ರ
20	ಕೆ. ೩೫೫–೧೫	ಜ್ಞಾನದೀಪಿಕಾ	೧೮೪–೧೮೬	,,
21	ಕೆ. ಎ. ೨೫೦–೮	ತಾಂಡವ ಸ್ತೋತ್ರ	೧–೧೦	,,
22	ಕೆ ಎ. ೧೫೮–೩	ಧಾತುರೂಪ ಮತ್ತು ಧಾತುಪಾಠ	೧೬	,,
23	ಕೆ. ಎ. ೧೮೩–೩	ನಕ್ಷತ್ರಮಾಲಿಕಾ	೬೮–೬೯	,,
24	ಕೆ. ೩೨೩–೧೦	ನಮಸ್ಕಾರ ಗದ್ಯ	೯೦–೯೪	,,
25	ಕೆ. ೩೫೫–೬	ನಾಗಾನಂದೀ ಸೂತ್ರ	೭೯–೮೦	,,
26	ಕೆ. ೩೩೨–೩	ನಾನಾರ್ಥ ರತ್ನಮಾಲಾ	೯ನೇ ಪತ್ರ	,,

	ಗ್ರಂಥಾಂಕ	ಗ್ರಂಥದ ಹೆಸರು	ಪತ್ರಸಂಖ್ಯೆ	ಸಮಗ್ರವೇ
27	ಕೆ. ೩೮೪–೩	ನಾರದೀಯ ಸಂಹಿತಾ	೧೭–೧೨೨	ಅಸಮಗ್ರ
28	ಕೆ. ೩೫೫–೨	ಪಂಚಾಶಿಖಾಗಮ	೧೪–೧೭	ಸಮಗ್ರ
29	ಕೆ. ೧೧೮	ಪುರಾಣ ಪ್ರಶ್ನ ಲಕ್ಷಣ	೨೬೩ನೇ ಪತ್ರ	,,
30	ಕೆ.ಎ. ೨೬೦–೫	ಪ್ರಸ್ತಾಪದ ಗ್ರಂಥ	೬೩–೬೫	,,
31	ಕೆ. ಬಿ. ೩೪೦–೫	,,	೭೫–೭೯	,,
32	ಕೆ. ೨೨೨-೬	ಬಾಲಕೃಷ್ಣಾಷ್ಟಕ	೫೪–೫೫	,,
33	ಕೆ. ೬೦೨-೩	ಬಿಂದುಲಕ್ಷಣ	೧	,,
34	ಕೆ. ೩೮೩–೨	ಬೃಹಜ್ಜಾತಕ ಮತ್ತು ಶ್ರೀಪತಿ ಪದ್ಧತಿಯ ಶ್ಲೋಕಗಳು	೨೪	ಅಸಮಗ್ರ
35	ಕೆ. ೬೩೯–೪	ಭದ್ರಕಾಳೀ ಅಷ್ಟಕಂ	೩೭–೩೮	ಸಮಗ್ರ
36	ಕೆ. ೧೧೮	ಮಂಗಳಾಷ್ಟಕ	೨೫೯ ನೇ ಪತ್ರ	,,
37	ಕೆ. ೩೬೯–೨೦	ಮಲಯರಾಜಸ್ತೋತ್ರ	೧೭೯–೧೮೫	,,
38	ಕೆ. ಎ. ೧೭೩–೫	ಮಲ್ಲಿಕಾರ್ಜುನ ಅಷ್ಟಕ (ಭಾಗ. ೧)	೬೩ನೇ ಪತ್ರ	,,
39	ಕೆ. ಎ. ೧೭೩–೬	,, (ಭಾಗ ೨)	೬೪ನೇ ಪತ್ರ	,,
40	ಕೆ. ೩೬೯–೧೮	ಮಲ್ಹಣಸ್ತೋತ್ರ	೧೭೨–೧೭೫	,,
41	ಕೆ. ಎ. ೨೫೦–೬	,,	೧–೧೭	,,
42	ಕೆ. ೬೩೯–೫	ಮಹಾನಾಟಕ ವೃತ್ತಂ	೩೮–೪೧	,,
43	ಕೆ. ೩೬೯–೧೯	ಮಹಿಮ್ನ ಸ್ತೋತ್ರ	೧೭೬–೧೭೯	,,
44	ಕೆ. ೧೮೪–೮	ಮಾನಸಪೂಜೆ	೨೧೪–೨೧೬	,,
45	ಕೆ. ೨೮೩–೧೦	ರಾಮಧ್ಯಾನ	೧–೪	—
46	ಕೆ. ೨೨೨–೫	ರಾಮಾಷ್ಟಕ	೫೩–೫೪	ಸಮಗ್ರ
47	ಕೆ. ೩೫೫–೧	ಲಿಂಗಾಂಗ ಸಂಬಂಧ	೬–೧೩	,,
48	ಕೆ. ೩೫೫–೫	ಲಿಂಗಾಚಾರ ರಚನಾಗಮ	೬೭–೭೮	,,
49	ಕೆ. ೩೨೨–೬	ವಜ್ರಸೂಚ್ಯಾದ್ಯುಪನಿಷದಃ	೫–೧೨	,,
50	ಕೆ. ಎ. ೧೭೩–೪	ವಿನಾಯಕಾಷ್ಟಕ	೬೩ನೇ ಪತ್ರ	ಅಸಮಗ್ರ
51	ಕೆ. ೨೮೩–೭	ವಿಭೂತಿ ಮಂತ್ರ	೪೭–೪೮	ಸಮಗ್ರ
52	ಕೆ. ೩೫೫–೪	ವಿಶೇಷಾರ್ಥ ಪ್ರಕಾಶಿಕೆ	೫೦–೬೬	,,
53	ಕೆ. ೩೪೫–೨	ವೀರಶೈವ ಮತದ ಅಪರ ಕರ್ಮ ವಿಧಿಃ	೯	,,

	ಗ್ರಂಥಾಂಕ	ಗ್ರಂಥದ ಹೆಸರು	ಪತ್ರಸಂಖ್ಯೆ	ಸಮಗ್ರವೇ
54	ಕೆ. ಎ. ೧೮೩-೨	ವೇದಾಂತ ಡಿಂಡಿಮ	೬೫-೬೮	ಸಮಗ್ರ
55	ಕೆ. ಎ. ೨೬೦-೪	ಶತಕತ್ರಯ	೩೮-೬೩	,,
56	ಕೆ. ಬಿ. ೩೪೦-೪	,,	೪೮-೭೫	,,
57	ಕೆ. ಎ. ೧೭೩-೩	ಶಾರದಾಂಬಾಷ್ಟಕ	೬೨ನೇ ಪತ್ರ	,,
58	ಕೆ. ೩೨೨-೭	ಶಿವಕವಚ, ಇತ್ಯಾದಿ	೧೨-೨೨	,,
59	ಕೆ. ಬಿ. ೪೫೯-೨	ಶಿವಪೂಜಾ ವಿಧಾನ	೨೭೦-೨೭೬	,,
60	ಕೆ. ೩೫೫-೩	ಶಿವಯೋಗ ಪ್ರದೀಪಿಕೆ	೧೮-೩೨	,,
61	ಕೆ. ೩೫೫-೭	ಶಿವಸೂತ್ರಂ	೮೧-೮೫	ಅಸಮಗ್ರ
62	ಕೆ.ಬಿ. ೩೩೧-೧	ಶಿವಾನುಭವಸೂತ್ರ	೧-೩೯	ಸಮಗ್ರ
63	ಕೆ.ಬಿ. ೩೪೧-೩	ಶಿವಾಷ್ಟೋತ್ತರ ಶತನಾಮ	೧೬-೧೭	,,
64	ಕೆ. ಎ. ೨೨೮-೨	ಶುಕಸಪ್ತತಿ ಕಥೆ	೧-೫೯	ಅಸಮಗ್ರ
65	ಕೆ. ೩೫೫-೧೪	ಶ್ರೀರುದ್ರಪಾದಸ್ತೋತ್ರ	೧೮೩-೧೮೪	ಸಮಗ್ರ
66	ಕೆ. ೩೪೬-೨	ಶ್ರೀರುದ್ರಸೂಕ್ತ	೧-೧೨	,,
67	ಕೆ. ೧೬೯-೧೭	ಷಡ್ವಕ್ತ್ರದ ನಾಂದ್ಯ	೭೬-೭೭	,,
68	ಕೆ. ೧೧೮	ಸಮವಸರಣಸ್ತುತಿ	೨೬೦-೨೬೩	,,
69	ಕೆ. ಎ. ೨೨೧-೨	ಸಿದ್ಧಾಂತದೀಪಿಕೆ	೧೦೨-೧೧೨	,,
70	ಕೆ. ೧೮೪-೩	ಸುಭಾಷಿತ	೧೭೦-೧೭೫	,,
71	ಕೆ. ೨೨೩-೨	,,	೩೦-೩೫	,,
72	ಕೆ. ಎ. ೨೫೦-೭	ಹರಿಹರಾಷ್ಟಕ	೧-೩	,,
73	ಕೆ. ೩೬೯-೨೨	ಹಲಾಯುಧಸ್ತೋತ್ರ	೧೯೦-೨೦೭	,,

ತೆಲುಗು ಗ್ರಂಥಗಳು

74	ಕೆ. ೫೧೪-೧	ಅತಿಕಾಯುನಿಯುದ್ಧಮು	೧-೫	,,
75	ಕೆ. ೫೧೬	ಅಭಿಮನ್ಯುಪರಿಣಯ	೧-೪೭	ಅಸಮಗ್ರ
76	ಕೆ. ೬೧೩	ಅಷ್ಟಾಧಿಕಾರ ಗಣಿತಮು	೭೧-೮೫	ಸಮಗ್ರ
77	ಕೆ. ೬೦೭	ಆಂಧ್ರಭಾಗವತಮು	೧-೩೯	,,
78	ಕೆ.ಎ. ೨೬೦-೩	ಆತ್ಮೈಕ್ಯಬೋಧೆ	೨೮-೩೭	,,
79	ಕೆ.ಬಿ. ೩೪೦-೩	,,	೩೩-೪೭	,,
80	ಕೆ. ೩೮೮-೨	ಆಶ್ರಮವಾಸಪರ್ವಂ	೧-೧೨	ಅಸಮಗ್ರ

	ಗ್ರಂಥಾಂಕ	ಗ್ರಂಥದ ಹೆಸರು	ಪತ್ರಸಂಖ್ಯೆ	ಸಮುಗ್ರವೇ
81	ಕೆ. ೨೨೧–೨	ಉತ್ತರಗೀತಾವ್ಯಾಖ್ಯಾನ	೧–೩೫	ಅಸಮುಗ್ರ
82	ಕೆ. ೫೧೪–೨	ಕುಂಭಕರ್ನನಿಯುದ್ಧವು	೬–೨೪	,,
83	ಕೆ. ೩೮೮–೧	ಕಾಳಿಂಗಮರ್ದನ	೧–೧೧	ಸಮುಗ್ರ
84	ಕೆ. ೧೮೩–೨	ಗೀತಾಸಾರ	೧–೨೦	,,
85	ಕೆ.ಬಿ. ೩೪೧–೫	ತತ್ತ್ವಕಾಮುಪದ್ಯಗಳು	೧೧೪–೧೨೧	,,
86	ಕೆ.ಬಿ. ೩೭೫	ನಾರಾಯಣಸ್ತವರಾಜ	೧–೧೩	,,
87	ಕೆ. ೩೯೦	ಪಾರಿಜಾತಾಪಹರಣ	೪೯–೮೮	ಅಸಮುಗ್ರ
88	ಕೆ.ಬಿ. ೪೬೯	ಮಾಯವಾದ ತಿರಸ್ಕರಂ	೧–೮೬ ಪುಟ	ಸಮುಗ್ರ
89	ಕೆ. ೪೦೮–೨	ವೇಮನಪದ್ಯಮುಲು	೧೯–೨೨	ಅಸಮುಗ್ರ
90	ಕೆ. ೩೨೦–೨	ವೈಶ್ಯಪುರಾಣಂ	೧–೨೨	ಸಮುಗ್ರ
91	ಕೆ. ೩೮೭–೩	ಶೃಂಗಾರಕಟ್ಲೆ	೧–೩	,,
92	ಕೆ. ಬಿ. ೩೮೧–೧	ಸಾಂಖ್ಯಸೂತ್ರತಾತ್ಪರ್ಯ	೭–೮	ಅಸಮುಗ್ರ